ಇಮ್ಮಡಿ ಮುರಿಗಾಗುರುಸಿದ್ಧರು : ಜೀವನ ಮತ್ತು ಸಾಹಿತ್ಯ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಎ. ಚನ್ನಪ್ಪ

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ

114



ಹಸ್ತಪ್ರತಿಶಾಸ್ತ್ರ ವಿಭಾಗ


ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಮಾರ್ಚ್ ೨೦೦೨

ಪರಾಮರ್ಶೆಗೆ ಮಾತ್ರ



'ಸಿರಿಗನ್ನಡ' ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬.

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

SHREE MAHANTESH
XEROX & BOOK BINDING
Near S.B.I., K.C.D. Road, DWD
Tel.: 0836 - 447880

1

114

'ಬಂಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

114

ಇಮ್ಮಡಿ ಮುರಿಗಾಗುರುಸಿದ್ಧರು : ಜೀವನ ಮತ್ತು ಸಾಹಿತ್ಯ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಎ. ಚನ್ನಪ್ಪ

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ




ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ


ವಿದ್ಯಾರಣ್ಯ ೫೮೩ ೨೭೬

ಮಾರ್ಚ್ ೨೦೦೨


AKSHARA GRANTHALAYA

ACC.NO. 045601

045601



92B

IMM



114

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಎ. ಚನ್ನಪ್ಪ ಇವರು ಇಮ್ಮಡಿ ಮುರಿಗಾಗುರುಸಿದ್ಧರು : ಜೀವನ ಮತ್ತು ಸಾಹಿತ್ಯ ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಾ. ಎಫ್.ಟಿ.ಹಳ್ಳಿಕೇರಿ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 20-2-07
ಸ್ಥಳ : ವಿದ್ಯಾರಣ್ಯ

ಸಂಶೋಧಕನ ಪ್ರಮಾಣ ಪತ್ರ

ಇಮ್ಮಡಿ ಮುರಿಗಾಗುರುಸಿದ್ಧರು : ಜೀವನ ಮತ್ತು ಸಾಹಿತ್ಯ ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ. ಎಫ್.ಟಿ. ಹಳ್ಳಿಕೇರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ.ಪದವಿಗಾಗಿ ಭಾಷಾನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೧-೦೨-೨೦೦೨
ಸ್ಥಳ : ವಿದ್ಯಾರಣ್ಯ

ಎ. ಚನ್ನಪ್ಪ
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕೃತಜ್ಞತೆಗಳು

ಇಮ್ಮಡಿ ಮುರಿಗಾಗುರುಸಿದ್ಧರು : ಜೀವನ ಮತ್ತು ಸಾಹಿತ್ಯ ಎಂಬ ಪ್ರೌಢ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ಒಪ್ಪಿಸಲು ಹರ್ಷವೆನಿಸುತ್ತದೆ. ಈ ಸಂದರ್ಭದಲ್ಲಿ ನನ್ನ ಅಧ್ಯಯನಕ್ಕೆ ಅವಕಾಶಕಲ್ಪಿಸಿಕೊಟ್ಟ ಅಂದಿನ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಎಂ.ಎಂ. ಕಲಬುರ್ಗಿ ಹಾಗೂ ಇಂದಿನ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಇವರುಗಳಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುವೆ.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಸಲಹೆ, ಸಹಕಾರ ನೀಡಿದ ಹಿಂದಿನ ಕುಲಚಿವರಾಗಿದ್ದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, ಇಂದಿನ ಕುಲಸಚಿವರಾದ ಡಾ.ಕೆ.ವಿ.ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ ಹಾಗೂ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎ.ವಿ. ನಾವಡ ಇವರುಗಳಿಗೂ ಅನಂತ ಧನ್ಯವಾದಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯವೆಂದೇ ಭಾವಿಸುತ್ತೇನೆ.

ನನಗೆ ಪ್ರಬಂಧದ ವಿಷಯ ಸೂಚಿಸಿ, ಅಧ್ಯಯನದುದಕ್ಕೂ ತಾಳ್ಮೆಯ ಮಾರ್ಗದರ್ಶನ ನೀಡಿದ ಡಾ. ಎಫ್.ಟಿ. ಹಳ್ಳಿಕೇರಿಯವರಿಗೂ, ವಿಷಯ ಸಂಗ್ರಹಕ್ಕಾಗಿ ಕ್ಷೇತ್ರಕಾರ್ಯ ಕೈಕೊಂಡಾಗ ಸಕಲ ಮಾಹಿತಿಗಳನ್ನು ನೀಡುವುದರ ಮುಖಾಂತರ ನನ್ನನ್ನು ಆಶೀರ್ವದಿಸಿದ ಚಿತ್ರದುರ್ಗ ಬೃಹನ್ಮಠದ ಪೀಠಾಧ್ಯಕ್ಷರಾದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರಸ್ವಾಮಿಗಳು, ಆನಂದಪುರಂ ಮಠದ ಪೀಠಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರಸ್ವಾಮಿಗಳು ಹಾಗೂ ಧರ್ಮಸ್ಥಳದ ಕ್ಷೇತ್ರಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಅನಂತ ಪ್ರಣಾಮಗಳನ್ನು ಸಲ್ಲಿಸುವೆ.

ಕವಿಯ ಜೀವನ ಕೃತಿಗಳಿಗೆ ಸಂಬಂಧಪಟ್ಟ ಅನೇಕ ಮಾಹಿತಿಗಳನ್ನು ನೀಡಿದ ಗೌ.ಮ.ಉಮಾಪತಿ ಶಾಸ್ತ್ರಿಗಳು, ಎಸ್.ಶಿವಣ್ಣ, ಡಾ.ಎಸ್.ವಿದ್ಯಾಶಂಕರ್, ಎಂ.ಎಸ್.ಬಸವರಾಜಯ್ಯ, ಜಿ.ಎ.ಶಿವಲಿಂಗಯ್ಯ, ಡಾ.ವೀರಣ್ಣರಾಜೂರ, ಡಾ.ಬಿ.ಆರ್.ಹಿರೇಮಠ, ಬಿ.ರಾಜಶೇಖರಪ್ಪ ಇವರುಗಳಿಗೆ ನನ್ನ ವಿಶೇಷ ನಮನಗಳು. ಸ್ನಾತಕೋತ್ತರ ಪದವಿ ಜೀವನದಲ್ಲಿ ಸಂಶೋಧನಾ ಆಸಕ್ತಿಯನ್ನು ಹೆಚ್ಚಿಸಿದ ಡಾ.ಮೃತ್ಯುಂಜಯ ಹೊರಕೇರಿ, ಡಾ.ಶಾಂತಿನಾಥ ದಿಬ್ಬದ ಅವರಿಗೆ ಕೃತಜ್ಞತೆಗಳನ್ನು ಹೇಳಲು ಹರ್ಷವೆನಿಸುತ್ತದೆ.

ಅಧ್ಯಯನದ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಪ್ರಬಂಧ ಸಿದ್ಧಗೊಳಿಸುವಲ್ಲಿ ಮುಕ್ತ ಮನದ ಸಲಹೆಗಳನ್ನು ನೀಡಿದ ಡಾ. ಕೆ. ರವೀಂದ್ರನಾಥ್, ಡಾ. ಪರಮಶಿವಮೂರ್ತಿ, ಡಾ. ಎಸ್.ಎಸ್. ಅಂಗಡಿ, ಡಾ. ವಿ.ಎಸ್. ಬಡಿಗೇರ, ಡಾ. ಕೆ.ಎಂ. ಮೈತ್ರಿ, ಶಿವಾನಂದ ವಿರಕ್ತಮಠ, ಎಸ್.ಆರ್. ಚನ್ನವೀರಪ್ಪ ಇವರುಗಳಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುವೆ.

ಮಗನ ಓದಿನ ಹೆಗ್ಗಳಿಕೆಯನ್ನು ಸಾರುತ್ತ, ಅನೇಕ ಕನಸುಗಳನ್ನು ಕಟ್ಟಿಕೊಂಡು ಅವು ಕೈಗೂಡುವ ಮುನ್ನವೇ ಮಡಿದ ತಾಯಿಗೆ, ನನ್ನ ಏಳ್ಗೆಯನ್ನೆ ಬಯಸುತ್ತಾ ಸದಾ ಮೂಕ ಪ್ರೇಕ್ಷಕನಂತೆ ಎದುರು ನೋಡುತ್ತಿರುವ ತಂದೆಗೆ, ನನ್ನ ದೀರ್ಘಕಾಲದ ವ್ಯಾಸಂಗವನ್ನು ತಾಳ್ಮೆಯಿಂದ ಸಹಿಸಿಕೊಂಡ ಒಡ ಹುಟ್ಟಿದವರಿಗೆ, ಅಧ್ಯಯನಕ್ಕೆ ಸಹಕಾರ ನೀಡಿದ ಅತ್ತಿಗೆಯವರಿಗೆ ಮತ್ತು ಸಂಗಾತಿಯಾಗಲಿರುವ ಶಾರದ ಅವಳಿಗೂ ಕೃತಜ್ಞತೆಗಳನ್ನು ಅರ್ಪಿಸುವೆ.

ಪುಸ್ತಕ ಸೌಲಭ್ಯವನ್ನು ಒದಗಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಗಳಾದ ಜೆ.ಆರ್. ರಾಮಮೂರ್ತಿ, ಶ್ರೀಮತಿ ಎಚ್. ನಾಗವೇಣಿ, ಯು.ಮಲ್ಲಿಕಾರ್ಜುನ ಮತ್ತು ಇತರ ಸಿಬ್ಬಂದಿ ವರ್ಗದವರ ಸಹಕಾರವನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಸ್ನೇಹಿತರಾಗಿ, ಹಿತೈಷಿಗಳಾಗಿ ಯಾವತ್ತೂ ನನ್ನ ಏಳ್ಗೆಯನ್ನು ಬಯಸುತ್ತಿರುವ ಸಂಶೋಧನಾ ಮಿತ್ರರಾದ ಡಾ. ಜೆ. ಕೃಷ್ಣ, ಡಾ. ಆರ್.ಬಿ. ಕುಮಾರ, ಡಾ. ಎಸ್.ಎಂ. ಗಂಗಾಧರಯ್ಯ, ಡಾ. ಎಂ. ನಾಗರಾಜ, ಡಾ. ಗೋವಿಂದ, ಡಾ. ಮಂಜುನಾಥ ತೆಲಗಿ, ಡಾ. ರೇವಯ್ಯ ಒಡೆಯರ್, ಡಾ. ಎಚ್.ಎಂ. ಬಸವರಾಜಪ್ಪ, ಶ್ರೀಮತಿ ಸುಚೇತ ನವರತ್ನ, ವಿ.ಸಿ. ಮಾರುತಿ, ಎಂ. ಯರ್ರಿಸ್ವಾಮಿ, ಕರಿಸಿದ್ಧನಗೌಡ ಮಾಲಿಪಾಟೀಲ, ಆರ್.ಜೆ. ರಾಜಕುಮಾರ, ಉಮೇಶ, ಪಿ.ಕೆ. ಶ್ರೀನಿವಾಸ, ನಾಗಭೂಷಣಗೌಡ ಪಾಟೀಲ, ಸುಭಾಷ ದೊಡ್ಡಮನಿ ಹಾಗೂ ನನ್ನ ಅಧ್ಯಯನಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರೇರಣೆ ನೀಡಿದ ಎಲ್ಲಾ ಗೆಳೆಯರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ವಿಭಾಗದ ಬೋಧಕೇತರ ಸಿಬ್ಬಂದಿಯವರಾದ ಬಿ.ಎ. ರಾಜಕುಮಾರ ಅವರಿಗೆ, ಹಲವಾರು ಕೆಲಸ ಕಾರ್ಯಗಳ ನಡುವೆಯೂ ನನ್ನ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುತ್ತ ಸಹಾಯ ಸಹಕಾರ ನೀಡಿದ ವೀರಪ್ಪ ಮೆಟ್ಟಿ ಇವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅಕ್ಕರೆಯಿಂದ ಅಕ್ಷರ ಸಂಯೋಜಿಸಿಕೊಟ್ಟ ಎ.ಎಂ. ಕೃಪಾಶಂಕರ್ ಮತ್ತು ಶ್ರೀಮತಿ ಬಿ. ರಶ್ಮಿ ಕೃಪಾಶಂಕರ್ ಅವರಿಗೆ ಕೃತಜ್ಞತೆಗಳು.

ಎ. ಚನ್ನಪ್ಪ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಸಾವಿರಾರು ವರ್ಷಗಳ ಚರಿತ್ರೆಯನ್ನು ಒಳಗೊಂಡ ಕನ್ನಡ ಸಾಹಿತ್ಯವು ವಸ್ತು, ಪ್ರಕಾರ, ಛಂದಸ್ಸು, ನಿರೂಪಣಾ ಶೈಲಿಗಳಲ್ಲಿ ಹಲವಾರು ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡು ಅತ್ಯಂತ ವಿಸ್ತಾರವಾಗಿ ಬೆಳೆದ ಕ್ಷೇತ್ರವಾಗಿದೆ. ಹಳಗನ್ನಡ, ನಡುಗನ್ನಡ ಕಾಲಘಟ್ಟಗಳಲ್ಲಿ ಚಂಪು, ವಚನ, ಷಟ್ಪದಿ, ರಗಳೆ, ತ್ರಿಪದಿ, ಸಾಂಗತ್ಯಗಳಂತಹ ಮಾರ್ಗ-ದೇಶಿ ಎಂಬ ಕಾವ್ಯ ಪ್ರಕಾರಗಳಲ್ಲಿ ರೂಪ ತಳೆದು, ಹೊಸಗನ್ನಡ ಕಾಲ ಘಟ್ಟದಲ್ಲಿ ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಸಣ್ಣಕಥೆ ಮುಂತಾದ ಪ್ರಕಾರಗಳಲ್ಲಿ ಬೆಳೆದು ನಿಂತಿದೆ. ಕನ್ನಡ ಕವಿಗಳ ವಿಶೇಷವೇನೆಂದರೆ ತಮ್ಮ ಕಾವ್ಯಗಳನ್ನು ರಚಿಸಲು ಆಯಾ ಕಾಲದ ಧರ್ಮ, ರಾಜಕೀಯ, ಸಮಾಜ, ಸಂಸ್ಕೃತಿಯನ್ನು ಕಾವ್ಯ ವಸ್ತುವನ್ನಾಗಿ ಆಯ್ದುಕೊಂಡದ್ದು. ಹೀಗಾಗಿ ಅಂದಿನ ಸಾಹಿತ್ಯವು ಜನ ಜೀವನದ ಮೇಲೆ ಬೀರಿದ ಪ್ರೇರಣೆ ಪ್ರಭಾವಗಳು ಹಾಗೂ ಜನಜೀವನವು ಸಾಹಿತ್ಯ ರಚನೆಗೆ ನೀಡಿದ ಪ್ರಚೋದನೆಯನ್ನು ಗುರುತಿಸಿ ಕವಿ-ಕೃತಿಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಹಲವಾರು ವಿದ್ವಾಂಸರು, ಸಂಶೋಧಕರು ಚುರುಕಿನಿಂದ ಕೈಗೊಂಡಿದ್ದಾರೆ. ಆದರೂ 'ಕನ್ನಡ ಭಾಷೆ ಮತ್ತು ಸಾಹಿತ್ಯದ ವಿದ್ಯಾರ್ಥಿಗಳು ಎಡವಿದರೆ ಒಂದು ಸಮಸ್ಯೆಯ ಮೇಲೆ ಬೀಳುತ್ತಾರೆ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯ ಕ್ಷೇತ್ರವು ಸಂಶೋಧಕರ ಸ್ವರ್ಗವೇ ಸರಿ' ಎಂಬ ಡಾ.ಚಿದಾನಂದ ಮೂರ್ತಿಯವರ ಮಾತು ಇನ್ನು ನಡೆಯಬೇಕಾದ ಸಂಶೋಧನೆಯ ವ್ಯಾಪಕತೆಯನ್ನು ಸೂಚಿಸುತ್ತದೆ.

ವೈಚಾರಿಕ, ವೈಜ್ಞಾನಿಕ ಹಾಗೂ ಶಾಸ್ತ್ರೀಯ ವಿಧಾನಗಳನ್ನು ಅಳವಡಿಸಿಕೊಂಡ ಕನ್ನಡ ಸಂಶೋಧನೆಯು ಇಂದು ಹೊಸ ಹೊಸ ಜ್ಞಾನಶಾಖೆಗಳಡಿಯಲ್ಲಿ, ಹಲವಾರು ನೂತನ ಪರಿಕಲ್ಪನೆ ಹಾಗೂ ವ್ಯಾಖ್ಯಾನಗಳೊಂದಿಗೆ ದಾಪುಗಾಲು ಹಾಕುತ್ತಿದೆ. ಮಾಹಿತಿ ತಂತ್ರಜ್ಞಾನದಂತಹ ಶೀಘ್ರಗತಿಯ ಬದಲಾವಣೆಯ ಗಾಳಿಯು ಎಲ್ಲಾ ಕ್ಷೇತ್ರಗಳಲ್ಲಿ ಹರಡಿದಂತೆ, ಸಂಶೋಧನಾ ಕ್ಷೇತ್ರವನ್ನು ಆವರಿಸಿಕೊಂಡು ಈ ರೀತಿಯ ಕವಿ-ಕೃತಿಗಳ ಅಧ್ಯಯನಗಳು ಹಳೆಯ ಮಾದರಿಗಳೆನಿಸಿ ಕೆಲವರಿಂದ ಕಡೆಗಣಿಸಲ್ಪಟ್ಟಿವೆ. ಆದರೆ ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಎತ್ತಿ ತೋರಿಸಲು, ಗತಕಾಲದ ಜನ ಜೀವನದ ಚಾರಿತ್ರಿಕ ಸತ್ಯಾಂಶಗಳನ್ನು ತಿಳಿದುಕೊಳ್ಳಲು, ಚರಿತ್ರೆಯಲ್ಲಿ ಕಳಚಿಹೋದ ಕೊಂಡಿಗಳನ್ನು ಜೋಡಿಸಲು, ಭೂತ ವರ್ತಮಾನಗಳಿಂದ ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಇಂತಹ ಅಧ್ಯಯನಗಳು ಎಂದೆಂದಿಗೂ ಅವಶ್ಯವೆನಿಸುತ್ತವೆ.

ಕವಿಯ ಬದುಕು-ಬರಹದಂಥ ಮಾದರಿಯ ಹಲವಾರು ಅಧ್ಯಯನಗಳು ಈವರೆಗೆ ನಡೆದಿದ್ದರೂ ಕೂಡ ಇನ್ನು ಅನೇಕ ಅಜ್ಞಾತ ಕವಿಗಳ ಜೀವನ ಹಾಗೂ ಕೃತಿಗಳ ಬಗೆಗೆ ವಸ್ತುನಿಷ್ಠವಾದ, ಸಂಶೋಧನಾತ್ಮಕವಾದ ಅಧ್ಯಯನದ ಅವಶ್ಯಕತೆಯಿದೆ. ಎಲೆ ಮರೆಯ ಕಾಯಿಯಂತೆ ಬೆಳಕಿಗೆ ಬರದ, ವಿಶಿಷ್ಟ ಪ್ರತಿಭೆಗಳನ್ನು ಮೈಗೂಡಿಸಿಕೊಂಡಿರುವವರನ್ನು ಗುರುತಿಸಿ ಅವರ ಬಗೆಗೆ ಅಧ್ಯಯನ ಕೈಗೊಂಡು, ಸಾಹಿತ್ಯ ಕ್ಷೇತ್ರದಲ್ಲಿ ಅವರ ಸ್ಥಾನಮಾನವನ್ನು ಗುರುತಿಸುವುದು ಮುಖ್ಯ ಎಂಬುದು ನನ್ನ ಭಾವನೆ. ಅದಕ್ಕಾಗಿ ಧರ್ಮ, ಸಮಾಜ, ಸಾಹಿತ್ಯಗಳ ತ್ರಿಕೂಟದಂತಿರುವ, ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಹೋರಾಡಿ, ಸಂಘರ್ಷದಲ್ಲಿಯೂ ಸಾಹಿತ್ಯ ಸೃಷ್ಟಿಸಿದ, ವಿಶಿಷ್ಟವಾದ 'ವ್ಯಕ್ತಿತ್ವ'ವನ್ನು ಗಳಿಸಿಕೊಂಡು ಮಹಾಕವಿಯ ಸ್ಥಾನದಲ್ಲಿ ನಿಲ್ಲಬಲ್ಲ ವ್ಯಕ್ತಿಯಾಗಿದ್ದರೂ ಓದುಗರ, ವಿಮರ್ಶಕರ, ಸಾಹಿತ್ಯ ಚರಿತ್ರೆಕಾರರ ಹೀಗೆ ಎಲ್ಲರಿಂದಲೂ ಉಪೇಕ್ಷೆಗೊಳಗಾಗಿರುವ 'ಇಮ್ಮಡಿ ಮುರಿಗಾ ಗುರುಸಿದ್ಧರ ಜೀವನ ಮತ್ತು ಸಾಹಿತ್ಯ' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದೇನೆ.

ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಪರಂಪರೆಯಲ್ಲಿ ಬರುವ ಇಮ್ಮಡಿ ಮುರಿಗಾಗುರುಸಿದ್ಧರು ಪ್ರತಿಭಾನ್ವಿತ ಕವಿಗಳೂ, ಅನುಭಾವಿಗಳೂ ಆಗಿದ್ದಾರೆ. ಅಪಾರ ಪಾಂಡಿತ್ಯ ಪ್ರತಿಭೆಗಳಿಂದ ಕೂಡಿರುವ ಇವರ ಕೃತಿಗಳು ಕನ್ನಡ ಸಾಹಿತ್ಯದ ಫಲವತ್ತತೆಯನ್ನು ಹೆಚ್ಚಿಸಲು ಕಾರಣವಾಗಿವೆ. ಒಂದು ಕಡೆ ಆಧ್ಯಾತ್ಮದ ಉನ್ನತ ಶಿಖರವನ್ನೇರಿ ಶಿವಯೋಗಿಗಳೆನಿಸಿದರೆ, ಇನ್ನೊಂದು ಕಡೆ ವಿದ್ವತ್ ಕೃತಿಗಳ ರಚನೆಯಿಂದ ಮಹಾಕವಿಗಳ ಸ್ಥಾನದಲ್ಲಿ ನಿಲ್ಲುತ್ತಾರೆ. ಎರಡೂ ಕ್ಷೇತ್ರಗಳಲ್ಲೂ ಸಮಾನವಾದ ಸಿದ್ಧಿ-ಪ್ರಸಿದ್ಧಿಯನ್ನು ಹೊಂದಿ ಅಜರಾಮರವಾಗಿ ಉಳಿಯುವಂತಹ ವ್ಯಕ್ತಿತ್ವ ಗಳಿಸಿಕೊಂಡವರಾಗಿದ್ದಾರೆ. ಪಂಪಯುಗದ ಮಾರ್ಗ ಸಾಹಿತ್ಯ, ಬಸವಯುಗದ ಮಾರ್ಗ-ದೇಶಿ ಸಾಹಿತ್ಯವು, ಕುಮಾರವ್ಯಾಸ

ಯುಗದಲ್ಲಿ ಶುದ್ಧ ದೇಶೀಯ ರೂಪವನ್ನು ಪಡೆಯಿತು ಎನ್ನುವಷ್ಟರಲ್ಲಿಯೇ ಷಡಕ್ಷರದೇವ, ಇಮ್ಮಡಿ ಮುರಿಗಾ ಗುರುಸಿದ್ಧರು ಸಂಪ್ರದಾಯವನ್ನು ಮುರಿದು ಮತ್ತೆ ಮಾರ್ಗಶೈಲಿಯ ಉತ್ಕೃಷ್ಟ ಕೃತಿಗಳನ್ನು ಚಂಪು ಪ್ರಕಾರದಲ್ಲಿ ರಚಿಸಿ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಈ ಕಾಲದಲ್ಲಿ ಚಂಪುವಿನ ಹರಿಕಾರರಾದ ಜೈನರು ದೇಶೀಯ ಶೈಲಿಗೆ ಮರಳಿದರೆ, ದೇಶೀ ಶೈಲಿಗೆ ಆದ್ಯರೆನಿಸಿದ ವೀರಶೈವರು ಚಂಪೂ ಶೈಲಿಯ ಕಡೆಗೆ ಧಾವಿಸಿರುವುದು ಕಾಕತಾಳೀಯವೇ ಸರಿ. ಅಂತೆಯೇ ಷಡಕ್ಷರ ಕವಿಯ 'ರಾಜಶೇಖರ ವಿಳಾಸ'ವೇ ಚಂಪು ಸಂಪ್ರದಾಯದಲ್ಲಿ ಕೊನೆಯದು, ಸರ್ವಶ್ರೇಷ್ಠವಾದುದು ಎಂಬ ವಿದ್ವಾಂಸರ ಅಭಿಪ್ರಾಯದ ಜೊತೆಗೆ ಕ್ಷೇತ್ರಮಹಿಮೆ, ಮಂತ್ರಮಹತ್ವದಂತಹ ಸಾಮಾನ್ಯ ಸಂಗತಿಗಳನ್ನು ಆಯ್ದುಕೊಂಡು 'ಹಾಲಾಸ್ಯ ಪುರಾಣ'ವೆಂಬ ಬೃಹತ್ ಕಾವ್ಯವನ್ನು ಚಂಪೂ ಶೈಲಿಯಲ್ಲಿ ರಚಿಸಿ ೧೬೫ಕ್ಕೂ ಹೆಚ್ಚು ಛಂದಸ್ಸುಗಳನ್ನು ಬಳಸಿರುವ ಈ ಕಾವ್ಯವನ್ನು ಸೇರಿಸಿಕೊಳ್ಳುವುದು ಉಚಿತವೆನಿಸುತ್ತದೆ.

ಚಾಮರಸನ ಷಟ್ಪದಿ ಕೃತಿ 'ಪ್ರಭುಲಿಂಗಲೀಲೆ'ಯ ವಸ್ತುವನ್ನು ಬಳಸಿಕೊಂಡು ಸಂಸ್ಕೃತ ಭಾಷೆ ಮತ್ತು ವೃತ್ತ ಛಂದಸ್ಸಿನಲ್ಲಿ 'ಪ್ರಭುಲೀಲೆ'ಯನ್ನು ರಚಿಸಿರುವ ರೀತಿ, 'ಪಂಚಾಶಿಕೆ', 'ಶಿವಲಿಂಗ ಷಟ್ಪದಿ' ಎಂಬ ಕೃತಿಗಳಲ್ಲಿ ಬಳಸಿರುವ ನಿರೋಷ್ಠ ಪದ, ಗುಣಿತಾಕ್ಷರ ಪದ, ಸರ್ವಲಘು ತಲೆಕಟ್ಟಿನ ಪದ, ಅಚಲಜಿಹ್ವಾ ಪದ, ಮಾತ್ರಿಕಾಮಾಲ ಈ ಬಗೆಯ ಪದ್ಯಗಳು ಸಂಸ್ಕೃತ ಭಾಷೆಯ ಮೇಲಿರುವ ಕವಿಯ ವ್ಯಾಮೋಹ ಹಾಗೂ ಪ್ರಭುತ್ವವನ್ನು ಸೂಚಿಸುತ್ತವೆ. ಒಂದೇ ಪರಿಸರದಲ್ಲಿ ಬೆಳೆದ, ಸಮಾನ ಪಾಂಡಿತ್ಯಗಳಿಸಿಕೊಂಡಿದ್ದ, ವ್ಯಕ್ತಿ-ಅಭಿವ್ಯಕ್ತಿಗಳಲ್ಲಿ ಸರಿಸಮರಾಗಿ ನಿಲ್ಲಬಲ್ಲ ಷಡಕ್ಷರಿದೇವ ಹಾಗೂ ಇಮ್ಮಡಿ ಮುರಿಗಾಗುರುಸಿದ್ಧರು ಚಿಕ್ಕದೇವರಾಜ ಯುಗದ ಸಾಹಿತ್ಯದ ತಲೆ ಮಣಿಗಳಂತಿದ್ದಾರೆ. ಆದರೆ ಸಾಹಿತ್ಯ ಚರಿತ್ರೆಯಲ್ಲಿ ಷಡಕ್ಷರದೇವನಿಗೆ ಸಂದ ಗೌರವ, ಸ್ಥಾನ-ಮಾನಗಳು ಪ್ರಸ್ತುತ ಕವಿಗೆ ದೊರೆಯಲಿಲ್ಲ ಎಂಬ ಅಂಶದ ಮೇಲೆ ಬೆಳಕು ಚೆಲ್ಲುವುದೂ ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಶೂನ್ಯ ಪೀಠಾಧೀಶ್ವರರಾದ ಇವರು ಧಾರ್ಮಿಕ, ರಾಜಕೀಯ, ಸಾಮಾಜಿಕ ಅಸಮತೋಲನ, ವಿರಸ -ವೈಮನಸ್ಸುಗಳ ಮಧ್ಯೆಯೂ ತಮ್ಮ ಗ್ರಂಥ ರಚನಾ ಪ್ರಜ್ಞೆಯ ಬಲವನ್ನು ಕಾಪಾಡಿಕೊಂಡು ಬಂದುದು ಅಪೂರ್ವವೆನಿಸಿದೆ. ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಇವರ ಕುರಿತಾಗಿ ಇದುವರೆಗೆ ನಡೆದಿರುವ ಕೆಲಸಗಳು ಈ ಕೆಳಗಿನಂತಿವೆ.

ಎಸ್.ಎಮ್. ಬಸವರಾಜಯ್ಯನವರು 'ಮುರಿಗಾತಾರಾವಳಿ', ಡಾ.ಜಿ.ಮರುಳಸಿದ್ಧಯ್ಯನವರು 'ಪ್ರಭುಲೀಲೆ', ಜಿ.ಜಿ.ಮಂಜುನಾಥ್‌ರವರು 'ಹಾಲಾಸ್ಯಪುರಾಣ', ಜಿ.ಎ.ಶಿವಲಿಂಗಯ್ಯನವರು 'ಕೈವಲ್ಯ ಸೋಪಾನ ನಾಮೈಕೋತ್ತರಶತಸ್ಥಲ', ಎಸ್.ಶಿವಣ್ಣನವರು 'ಸ್ವರವಚನ'ಗಳು, ಡಾ. ವಿದ್ಯಾಶಂಕರ ಅವರು ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಗಳ ಕೃತಿಗಳು ಎಂಬ ಸಂಪಾದನಾ ಗ್ರಂಥದಲ್ಲಿ

‘ಶಿವಲಿಂಗನಾಂದ್ಯ’, ‘ಶಿವಲಿಂಗಷಟ್ಪದಿ’, ‘ಮಿಶ್ರಾರ್ಪಣ’, ‘ಶೂನ್ಯಮಂತ್ರಗೋಪ್ಯ’, ‘ಪಂಚಾಶಿಕೆ’ ಎಂಬ ಐದು ಕೃತಿಗಳನ್ನು ಡಾ. ಬಿ.ಆರ್. ಹಿರೇಮಠರು ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಗಳ ಐದು ಕೃತಿಗಳು ಎಂಬ ಸಂಪಾದನಾ ಗ್ರಂಥದಲ್ಲಿ ‘ಯೋಗಕಲಾಪಸಾರ’, ‘ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ’, ‘ಶಬ್ದರತ್ನಾಕರ’, ‘ಕೊರವಂಜಿ ಕಟ್ಟಳೆ’, ‘ಹಾಡುಗಳು’ ಸಮಾವೇಶಗೊಂಡಿವೆ. ಶ್ರೀಮತಿ ಪುಷ್ಪಾಬಸವನಗೌಡ ಇವರು ‘ಇಮ್ಮಡಿ ಮುರಿಗಾಗುರುಸಿದ್ಧ: ಜೀವನ-ಸಾಹಿತ್ಯ’ ಎಂಬ ಕಿರುಪ್ರಬಂಧವನ್ನು ರಚಿಸಿದ್ದಾರೆ. ಶ್ರೀ ಎಸ್. ಶಿವಣ್ಣನವರು ಬಸವಪಥ ಸಂಚಿಕೆಯಲ್ಲಿ ‘ಇಮ್ಮಡಿ ಗುರುಸಿದ್ಧ ಸ್ವಾಮಿಗಳ ಸ್ಕಂದಕಲ್ಯಾಣದೊಳಗಣ ಶಿವಸ್ತೋತ್ರ’, ‘ಶಿವರಹಸ್ಯ’ದ ಕೆಲವು ಭಾಗವನ್ನು, ಸಾಧನೆ ಸಂಚಿಕೆಯಲ್ಲಿ ಇಮ್ಮಡಿ ಮುರಿಗಾಗುರುಸಿದ್ಧಸ್ವಾಮಿಗಳ ‘ಪಾದಸ್ತೋತ್ರ’, ಸ್ಕಂದಕಲ್ಯಾಣಾಂತರ್ಗತ ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ’, ಚಿನ್ಮೂಲಾದ್ರಿ ಚೇತನ ರಜತ ಮಹೋತ್ಸವ ಸ್ಮರಣ ಸಂಚಿಕೆಯಲ್ಲಿ ‘ಇಮ್ಮಡಿ ಮುರಿಗಾಗುರುಸಿದ್ಧರ ಅಪ್ರಕಟಿತ ಸ್ವರವಚನ’ಗಳನ್ನು ಹಾಗೂ ‘ಸ್ಕಂದ ಕಲ್ಯಾಣದೊಳಗಿನ ಚೌಪದಿ ವರ್ಣದ ಶಿವಸ್ತೋತ್ರ’ ಎಂಬ ಅಪ್ರಕಟಿತ ಕೃತಿಗಳ ಕೆಲವು ಭಾಗಗಳನ್ನು ದೊರತ ಹಸ್ತಪ್ರತಿಗಳಿಂದ ಸಂಗ್ರಹಿಸಿದ್ದಾರೆ. ಗೌ.ಮ.ಉಮಾಪತಿಶಾಸ್ತ್ರಿಗಳು ‘ಜಲಂಧರಕಾಳಗ’ದ ಬಗ್ಗೆ ಪರಿಚಯಾತ್ಮಕ ವಿವರವನ್ನು ‘ಯಕ್ಷಗಾನ-ಹಸ್ತಪ್ರತಿ ಸೂಚಿ’ಯಲ್ಲಿ ನೀಡಿದ್ದಾರೆ. ಅಲ್ಲದೆ ‘ಲಿಂಗರಚನಾಗಮ ಟೀಕು’ ಎಂಬ ಕೃತಿಯನ್ನು ಸಂಪಾದನೆ ಮಾಡಿದ್ದು ಅದು ಈಗ ಅಚ್ಚಿನಲ್ಲಿದೆ. ಎಸ್. ವಿದ್ಯಾಶಂಕರ, ಧನುಗೂರಿನ ಮ.ಮಲ್ಲಪ್ಪ, ಜಿ.ಎ.ಶಿವಲಿಂಗಯ್ಯ ಇವರುಗಳು ಇಮ್ಮಡಿ ಮುರಿಗಾಗುರುಸಿದ್ಧರ ಕವಿ-ಕೃತಿಗಳ ಬಗೆಗೆ ಪರಿಚಯಾತ್ಮಕವಾದ ಲೇಖನಗಳನ್ನು ಬರೆದಿದ್ದಾರೆ.

ಹೀಗೆ ಇಮ್ಮಡಿ ಮುರಿಗಾಗುರುಸಿದ್ಧರ ಸಾಹಿತ್ಯ ಕುರಿತು ಈವರೆಗೆ ಕೃತಿಗಳ ಸಂಪಾದನೆಯ ರೂಪದಲ್ಲಿ ಮಾತ್ರ ಕಾರ್ಯ ನಡೆದಿದೆ. ಉಪಲಬ್ಧವಿರುವ ಎಲ್ಲಾ ಕೃತಿಗಳೂ ಪ್ರಕಟವಾಗಿಲ್ಲ. ಪ್ರಕಟವಾದ ಕೃತಿಗಳ ಬಗೆಗೆ ಆಳವಾದ ವಿಮರ್ಶೆ, ಚರ್ಚೆ, ವಿಶ್ಲೇಷಣಾ ರೀತಿಯ ಅಧ್ಯಯನ ನಡೆಯದೇ ಕೇವಲ ಪ್ರಸ್ತಾವನೆಗೆ ಸೀಮಿತವಾದ ಪರಿಚಯ ಮಾತ್ರ ದೊರೆಯುತ್ತದೆ. ಇನ್ನು ಕವಿಯ ಮನೆತನ, ಜನನ, ಊರು, ತಂದೆ, ತಾಯಿ, ವಿದ್ಯಾಭ್ಯಾಸ ಮುಂತಾದ ಪೂರ್ವಾಶ್ರಮದ ವಿಷಯಗಳ ಕುರಿತಾದ ಚರ್ಚೆಗಳು ಸಾಹಿತ್ಯ ಕ್ಷೇತ್ರದಲ್ಲಿ ಇದುವರೆಗೂ ನಡೆದಿರುವುದಿಲ್ಲ. ಆದರೆ ಅವರು ಶೂನ್ಯಪೀಠದ ಅಧಿಕಾರಿಗಳಾದ ತರುವಾಯದ ಕೆಲವು ಪ್ರಸಂಗಗಳನ್ನು ಮಹದೇವ ಕವಿಯ ‘ಮಹಾಲಿಂಗೇಂದ್ರ ವಿಜಯ’, ಆನಂದಪುರದ ಮಠದಲ್ಲಿರುವ ‘ತಾಮ್ರಶಾಸನ’, ಮಡ್ಲೇರಿ ಶಿವಲಿಂಗನ ‘ಸ್ವರವಚನಗಳು’ ತಿಳಿಸಿಕೊಡುತ್ತವೆ. ಹೀಗಾಗಿ ಇವರ ಜೀವನ ಚರಿತ್ರೆ, ಸಾಹಿತ್ಯಸತ್ವ, ಪ್ರತಿಭೆ-ಪಾಂಡಿತ್ಯ, ಹೃದಯ ಶ್ರೀಮಂತಿಕೆಗಳು ಕನ್ನಡ ಸಾರಸ್ವತ ಲೋಕಕ್ಕೆ ಅಷ್ಟಾಗಿ ಪರಿಚಿತವಾಗಿಲ್ಲ.

ಮಹಾತತ್ವಜ್ಞಾನಿಗಳು, ಷಟ್‌ಸ್ಥಲಶಾಸ್ತ್ರವಿಶಾರದರೂ, ಬಹುಮುಖ ಪ್ರತಿಭಾಶಾಲಿಗಳೂ, ಭಾಷಾದ್ವಯ ಪಂಡಿತರಾದ ಇವರ ವ್ಯಕ್ತಿ ಅಭಿವ್ಯಕ್ತಿಗಳ ಸಮಗ್ರ ಪರಿಚಯ ಮಾಡಿಕೊಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಗೋಸಲ ಪೀಠ ಪರಂಪರೆಯಲ್ಲಿ ಬರುವ ಇಮ್ಮಡಿ ಮುರಿಗಾಗುರುಸಿದ್ಧರ ಜನ್ಮಸ್ಥಳ, ಮನೆತನದ ವಿವರ, ಗುರುಪರಂಪರೆ, ಕಾಲನಿರ್ಣಯ, ಸಾಹಿತ್ಯ ಕೃತಿಗಳ ಮಹತ್ವ, ಅರಮನೆ-ಗುರುಮನೆಯನಂಟು, ಕವಿ-ಮಠಾಧಿಪತಿಗಳಾಗಿ ಕಾರ್ಯನಿರ್ವಹಿಸಿದ ರೀತಿ ಮುಂತಾದ ವಿಶೇಷ ಸಂಗತಿಗಳ ಮೇಲೆ ಬೆಳಕು ಚೆಲ್ಲುವ, ಆ ಮೂಲಕ ಸಾಹಿತ್ಯ ಚರಿತ್ರೆಯಲ್ಲಿ ದಾಖಲಿಸುವ ಮಹತ್ವದ ಕಾರ್ಯವನ್ನಿಲ್ಲಿ ಕೈಗೊಳ್ಳಲಾಗಿದೆ. ಸೋಜಿಗದ ಸಂಗತಿಯೆಂದರೆ ವಿದ್ಯೆ, ವಿದ್ವತ್ ಎರಡರಲ್ಲೂ ಸಮಾನ ಪ್ರತಿಭೆಯುಳ್ಳ ಷಡಕ್ಷರದೇವ ಹಾಗೂ ಇಮ್ಮಡಿ ಮುರಿಗಾಗುರುಸಿದ್ಧರ ಮನೆತನ, ಊರು ಒಂದೇ ಆಗಿವೆ. ಇಬ್ಬರ ವಿದ್ಯಾಗುರು ಸೋಮಶೇಖರ ಶಿವಯೋಗಿಗಳು. ಅಲ್ಲದೆ ಕಾವ್ಯದ ಅಂಕಿತ ಮತ್ತು ಶೈಲಿಗಳೆರಡರಲ್ಲೂ ಏಕತೆ ಸಾಧಿಸಿದ್ದಾರೆ. ಆದರೆ ಇವರಲ್ಲಿ ಷಡಕ್ಷರದೇವನು ಸಾಹಿತ್ಯಚರಿತ್ರೆಯಲ್ಲಿ ಕವಿ-ಕಾವ್ಯಪುರಸ್ಕಾರಗಳಿಂದ ವಿಜೃಂಭಿಸಿದಂತೆ, ಪ್ರಸ್ತುತ ಕವಿಯು ವಿಜೃಂಭಿಸಲಿಲ್ಲ, ಕವಿ ಪಟ್ಟವೂ ಪ್ರಾಪ್ತವಾಗಲಿಲ್ಲ. ಎಲ್ಲಾ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಸಿದರೂ ಅವು ವಿಮರ್ಶೆಯ ಪರಿಧಿಗೆ ಸೇರ್ಪಡೆಯಾಗಲಿಲ್ಲವೆಂಬುದನ್ನು ಒತ್ತಿ ಹೇಳುವುದರ ಮುಖಾಂತರ ಕವಿಯ ಜೀವನ ಹಾಗೂ ಕೃತಿಗಳ ಸ್ಥಾನ-ಮಾನವನ್ನು ಗುರುತಿಸುವುದು ಸಹ ಅಧ್ಯಯನದ ಆಶಯಗಳಲ್ಲಿ ಒಂದಾಗಿದೆ.

ಕವಿಯ ಜೀವನ ವಿವರವನ್ನು ತಿಳಿಸುವ ತಾಮ್ರಪಟ, ಕಾವ್ಯ, ಶಾಸನಾದಿಗಳನ್ನು ಪ್ರಮುಖ ಆಕರಗಳನ್ನಾಗಿ ಮತ್ತು ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಆನುಷಂಗಿಕ ಆಕರಗಳನ್ನಾಗಿ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಸಾಹಿತ್ಯ ಸಾಧನೆಯಲ್ಲಿ ಅವರ ಪ್ರಕಟಿತ ಕೃತಿಗಳಲ್ಲದೆ, ಕೆಲವು ಅಪ್ರಕಟಿತ ಕೃತಿಗಳ ಕುರಿತಾದ ವಿವರಗಳನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ವಿಶ್ಲೇಷಣಾತ್ಮಕ ಮಾದರಿಯದೆನಿಸಿದರೂ ಅಧ್ಯಯನ ಕ್ರಮದಲ್ಲಿ ಈಗಿನ ವೈಜ್ಞಾನಿಕ ವಿಧಾನವಾದ ಪಟ್ಟಿಕಾ ವಿಧಾನವನ್ನು ಅನುಸರಿಸಿದೆ. ಹಳದಿ, ಕೆಂಪು, ಬಿಳಿ ಮೂರು ಬಣ್ಣದ ಕಾರ್ಡುಗಳನ್ನು ತೆಗೆದುಕೊಂಡು ಅದರಲ್ಲಿ ಅಧ್ಯಾಯಗಳಿಗನುಗುಣವಾಗಿ ವಿಷಯ ಸಂಗ್ರಹ, ಟಿಪ್ಪಣಿ ಮಾಡಿಕೊಂಡು ಬರವಣಿಗೆಯಲ್ಲಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನದ ಸ್ವರೂಪವು ಒಟ್ಟು ಆರು ಅಧ್ಯಾಯಗಳಲ್ಲಿ ವಿಸ್ತರಿಸಿಕೊಂಡಿದ್ದು, ಕವಿಯ ಜೀವನ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರ ಕೃತಿಗಳು, ವೀರಶೈವ ಸಾಹಿತ್ಯಕ್ಕೆ ಅವರ ಮಹತ್ವದ ಕೊಡುಗೆ, ವ್ಯಕ್ತಿತ್ವ ಇವೇ ಮೊದಲಾದ ವಿಷಯಗಳು ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಮೊದಲನೆ ಅಧ್ಯಾಯವು ಅಧ್ಯಯನದ ಉದ್ದೇಶ ಮತ್ತು ಸ್ವರೂಪವನ್ನು ಕುರಿತದ್ದಾಗಿದೆ.

ಎರಡನೇ ಅಧ್ಯಾಯವು 'ಸಮಕಾಲೀನ ಪರಿಸರ'ವನ್ನು ತಿಳಿಸುತ್ತದೆ. ಪರಿಸರವು ಕವಿಯ ಬದುಕು ಮತ್ತು ಕೃತಿಗಳ ಮೇಲೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಪರಿಣಾಮವನ್ನುಂಟು ಮಾಡಿರುತ್ತದೆ. ಕಾರಣ ಕವಿಯೋರ್ವರ ವ್ಯಕ್ತಿ-ಅಭಿವ್ಯಕ್ತಿಗಳನ್ನು ಮೌಲ್ಯಮಾಪನ ಮಾಡುವ ಮೊದಲು ಆ ಕವಿಯನ್ನು ರೂಪಿಸಿದ ವಾತಾವರಣದ ಹಿನ್ನೆಲೆಯನ್ನು ಗಮನಿಸುವುದು ಸೂಕ್ತವೆನಿಸುತ್ತದೆ. ಪ್ರಸ್ತುತ ಕವಿಯು ೧೭ನೇ ಶತಮಾನದ ಅಂತ್ಯ ಮತ್ತು ೧೮ನೇ ಶತಮಾನದ ಆದಿ ಭಾಗದಲ್ಲಿ ಜೀವಿಸಿದ್ದರು. ಈ ಕಾಲವು ಕರ್ನಾಟಕದ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ರಂಗದಲ್ಲಿ ಹಲವಾರು ರೀತಿಯ ಸ್ಥಿತ್ಯಂತರಗಳಿಗೆ ಒಳಗಾಗಿದೆ. ವಿಜಯನಗರ ಸಾಮ್ರಾಜ್ಯ ಪತನದ ನಂತರ ಹುಟ್ಟಿಕೊಂಡ ಸಣ್ಣ ಸಣ್ಣ ಪಾಳೆಯ ಪಟ್ಟುಗಳ ಅತೃಪ್ತಿ ಹಾಗೂ ಒಳ ಜಗಳಗಳಿಂದ ಉಂಟಾದ ರಾಜಕೀಯ ಅಸ್ಥಿರತೆಯ ಪರಿಣಾಮವಾಗಿ ಮರಾಠರು, ಬ್ರಿಟಿಷರು ಕರ್ನಾಟಕದಲ್ಲಿ ಪ್ರಬಲ ರಾಜಕೀಯ ಶಕ್ತಿಗಳಾಗಿ ಬೆಳೆದ ಬಗೆ, ಧಾರ್ಮಿಕವಾಗಿ ಜೈನ, ವೈಷ್ಣವ ಮತ್ತು ವೀರಶೈವರ ಮಧ್ಯೆ ನಡೆಯುತ್ತಿದ್ದ ಮತಸಂಘರ್ಷಗಳು, ಈ ಕಾರಣಗಳಿಂದಾಗಿ ಕನ್ನಡ ಸಾಹಿತ್ಯದ ಬೆಳವಣಿಗೆಯು ಕುಂಠಿತಗೊಂಡಿರುವುದನ್ನು ಕುರಿತು ವಿವರಿಸಲಾಗಿದೆ. ರಾಜಕೀಯ ಅಸ್ಥಿರತೆ, ಧಾರ್ಮಿಕವಾಗಿ ನಿಷ್ಕ್ರಿಯತೆ, ಸಾಹಿತ್ಯಿಕವಾಗಿ ಉದಾಸೀನತೆ ಮನೋಭಾವದಿಂದ ಕೂಡಿದ ಆವರಣ, ವಾತಾವರಣದಲ್ಲಿಯೂ ಸಹ, ಹಲ ಕೆಲ ಅರಸರ ಆಶ್ರಯದಲ್ಲಿ ಧರ್ಮ-ಸಾಹಿತ್ಯ ಪೋಷಿತವಾದಂತೆ, ಧರ್ಮಾಧಿಕಾರಿಗಳ ಪರಿಸರದಲ್ಲಿಯೂ ಸಾಹಿತ್ಯ, ಸಂಸ್ಕೃತಿಗಳು ಪರಿಚಲನಗೊಂಡ ವೆಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಬಸವಣ್ಣನವರಿಂದ ಆರಂಭವಾದ 'ಶೂನ್ಯಪೀಠ'ದ ಸುದೀರ್ಘ ಪರಂಪರೆಯ ಐತಿಹಾಸಿಕತೆಯನ್ನು ಮೂರನೇ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ. ಶರಣರು 'ಶೂನ್ಯತತ್ವ'ಕ್ಕೆ ನೀಡಿದ ಅರ್ಥ, ಪ್ರಾಮುಖ್ಯತೆ, ಶೂನ್ಯಸಿಂಹಾಸನದ ಕಲ್ಪನೆ, ಸ್ವರೂಪಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ೧೨ನೆಯ ಶತಮಾನದಿಂದ ೨೧ನೆಯ ಶತಮಾನದವರೆಗೆ 'ಶೂನ್ಯಪೀಠ'ದ ಅಧಿಕಾರವು ಯಾರಿಂದ ಎಲ್ಲಿಂದ ಹೇಗೆ ಮುಂದುವರಿಯಿತು. ಇಲ್ಲವೆ ಹಸ್ತಾಂತರಗೊಳ್ಳುತ್ತ ಹೋಯಿತೆಂಬುದನ್ನು ಮೂರು ಘಟ್ಟಗಳಲ್ಲಿ ವಿವರಿಸಲಾಗಿದೆ. ಪ್ರಥಮ ಘಟ್ಟ ಅಲ್ಲಮಪ್ರಭುವಿನಿಂದ ತೋಂಟದ ಸಿದ್ಧಲಿಂಗಯತಿಗಳ (ಕ್ರಿ.ಶ.೧೧೯೧-೧೫೦೦)ವರೆಗೆ, ದ್ವಿತೀಯ ಘಟ್ಟ ತೋಂಟದ ಸಿದ್ಧಲಿಂಗಯತಿಗಳಿಂದ ಕಟ್ಟಿಗೆಹಳ್ಳಿ ಸ್ವಾಮಿ (ಕ್ರಿ.ಶ.೧೫೦೦-೧೭೨೦)ಗಳವರೆಗೆ, ತೃತೀಯ ಘಟ್ಟವನ್ನು ಕಟ್ಟಿಗೆಹಳ್ಳಿ ಸ್ವಾಮಿಗಳ ತರುವಾಯ ಎಂದು ವಿಂಗಡಿಸಲಾಗಿದೆ. ಈ ವಿಂಗಡಣೆಗೆ ಯಾವುದೇ ತಾತ್ವಿಕ ನೆಲೆಗಟ್ಟು ಇರದಿದ್ದರೂ, ಆಯಾ ಸಂದರ್ಭದಲ್ಲಿ ಘಟಿಸಿದ ಘಟನೆಗಳ ಆಧಾರದ ಮೇಲೆ ಹಾಗೂ ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡದ್ದಾಗಿದೆ. ತದನಂತರ ಈ ಪರಂಪರೆಯಲ್ಲಿ ಕಾಣಿಸಿಕೊಂಡ ಸಂಪಾದನಸಮಯ, ಚೀಲಾಳ

ಸಮಯ, ಮುರುಗಾಸಮಯ, ಕೆಂಪಿನಸಮಯ ಮುಂತಾದ ಹದಿನಾರು ಸಮಯ ಭೇದಗಳಾಗಲು ಕಾರಣವಾದ ಸಂದರ್ಭಗಳನ್ನು ಕಾವ್ಯಾಧಾರಗಳ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಈ ಅಧ್ಯಾಯಕ್ಕೆ ಪೂರಕವಾಗಿ ಚಿತ್ರದುರ್ಗದ ನಾಯಕ ಅರಸುಗಳ ಆಶ್ರಯದಲ್ಲಿ ನೆಲೆಗೊಂಡ 'ಶೂನ್ಯಪೀಠ'ದ ಮಠಕ್ಕೆ 'ಮುರಿಗಾ', 'ಮುರುಗಾ' 'ಮುರುಘಾ' ಎಂಬ ವಿಶೇಷಣವು ಪ್ರಾಪ್ತವಾಗಲು ಕಾರಣವೇನು ಎಂಬುದನ್ನು ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿ ಸೂಕ್ತ ನಿರ್ಧಾರಕ್ಕೆ ಬರಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧರ ಜೀವನ ಚರಿತ್ರೆಯನ್ನು ದೊರೆತ ಕೆಲವು ಆಕರಗಳಿಂದ ಸಮಗ್ರವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಒಬ್ಬ ಕವಿಯ ಸಮಗ್ರ ಕೃತಿಗಳ ಅಧ್ಯಯನ ಮಾಡುವಾಗ ಆತನ ಜೀವನದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವೆನಿಸುತ್ತದೆ. ಏಕೆಂದರೆ ಒಬ್ಬ ವ್ಯಕ್ತಿಯ ಸಾಹಿತ್ಯ ಆತನ ಜೀವನಾನುಭವಗಳ ಸ್ತರದಲ್ಲಿಯೇ ಸೃಷ್ಟಿಯಾಗುವಂತಹದು. ಅಂತೆಯೇ ಕವಿಯ ಬದುಕು, ಆತನ ಪರಿಸರ, ಸಾಧನೆ ಸಿದ್ಧಿ ಮುಂತಾದವುಗಳು ಕವಿ-ಕಾವ್ಯ ಸೃಷ್ಟಿಯ ಪರಿಕರಗಳಾಗುತ್ತವೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸೂಕ್ತವಾದ ಸಂದರ್ಭಗಳಲ್ಲಿ ಆಧಾರಗಳ ಸಮೇತ ಕವಿಯ ಜೀವನ ಚಿತ್ರಣವನ್ನು ನಿರೂಪಿಸಲಾಗಿದೆ. ಸ್ವತಃ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಇವರು ತಮ್ಮ ಊರು, ಜನನ, ಬಾಲ್ಯ, ಶಿಕ್ಷಣ, ತಂದೆ, ತಾಯಿ, ಮನೆತನ ಮುಂತಾದ ವಿಷಯಗಳನ್ನು ಯಾವ ಕೃತಿಯಲ್ಲೂ ಹೇಳಿಕೊಂಡಿರುವುದಿಲ್ಲ. ಬದಲಾಗಿ ತದನಂತರದ ಇವರ ಶಿಷ್ಯರಾಗಲಿ, ಸಮಕಾಲೀನ ಕವಿಗಳಾಗಲಿ ಗುರುಸಿದ್ಧರ ಜೀವನದ ಪೂರ್ವಾಶ್ರಮದ ವಿವರಗಳನ್ನು ದಾಖಲಿಸಿರುವುದಿಲ್ಲ. ಹೀಗಾಗಿ ಅಲ್ಲಲ್ಲಿ ದೊರೆತ ಹೇಳಿಕೆಗಳು, ಚಾರಿತ್ರಿಕ ಘಟನೆಗಳು, ಕಾವ್ಯಗಳ ಉಲ್ಲೇಖಗಳು ಮತ್ತು ಶಾಸನಗಳಲ್ಲಿ ದೊರೆತ ಅಷ್ಟಿಷ್ಟು ಸಂಗತಿಗಳ ಜಾಡನ್ನೇ ಹಿಡಿದು ಕವಿಯ ಜೀವನ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

ಮನೆತನದ ವಿವರ, ಹೆಸರು, ಗುರುಪರಂಪರೆ, ಕಾಲ, ಅಂಕಿತ, ಶೂನ್ಯಪೀಠದ ಅಧಿಪತಿಸ್ಥಾನ, ದೇಶಪರ್ಯಟನೆ, ವ್ಯಕ್ತಿತ್ವ ಪರಿಚಯಗಳ ಬಗೆಗೆ ವಿವರವಾದ ಅಧ್ಯಯನ ಕೈಗೊಳ್ಳಲಾಗಿದೆ. ಮೈಸೂರು ಜಿಲ್ಲೆಯ ಧನುಗೂರಿನವರಾದ ಇವರು ಹುಲ್ಲಹಳ್ಳಿಯ ಮಠಾಧೀಶರಾಗಿದ್ದರು. ಆದರೆ ಶಿವಶರಣರ ಶೂನ್ಯ ಪೀಠ ಪರಂಪರೆಯ ಚಿತ್ರದುರ್ಗದ ಮಠಕ್ಕೆ ಪೀಠಾಧ್ಯಕ್ಷರಾಗಿ ಬರಲು ಕಾರಣ, ಆ ಸಂದರ್ಭದಲ್ಲಿ ಉದ್ಭವಿಸಿದ ಚೀಲಾಳ, ಕುಮಾರರೆಂಬ ವ್ಯಕ್ತಿಗಳ ಸಮಸ್ಯೆ ಹಾಗೂ ಚಿತ್ರದುರ್ಗದ ಪಾಳೇಗಾರರ ಸಮಕಾಲೀನರಾದ ಮೈಸೂರು, ಕೆಳದಿ, ಸೋದೆ, ಕೊಡಗು, ಹರಪನಹಳ್ಳಿ, ಹಾಗಲವಾಡಿ, ಮುಂತಾದ ಅರಸರು ಹಾಗೂ ಪ್ರಜೆಗಳೊಂದಿಗೆ ಹೊಂದಿದ್ದ ಗೌರವ ಇತ್ಯಾದಿ ವಿಷಯಗಳ ಕುರಿತು ವಸ್ತುನಿಷ್ಠ ವಿಮರ್ಶೆಯನ್ನು ಈ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ. ಇಮ್ಮಡಿ ಮುರಿಗಾಗುರುಸಿದ್ಧರು

ಷಡಕ್ಷರ ಕವಿಯ ಸಹೋದರ ಸಂಬಂಧಿ ಎಂಬ ವಿಚಾರವನ್ನು, ಕಟ್ಟಿಗೆಹಳ್ಳಿ ಸ್ವಾಮಿಗಳ ಶಿಷ್ಯರಾದ ಮುರಿಗಾ ಶಾಂತವೀರರು ಸಹ ಮೊದಲು ಹುಲ್ಲಹಳ್ಳಿಯ ಮಠಾಧೀಶರಾಗಿದ್ದು ನಂತರ ಚಿತ್ರದುರ್ಗಕ್ಕೆ ಆಗಮಿಸಿರಬೇಕೆಂಬ ಸಂಗತಿಯನ್ನು ಸಹ ಇಲ್ಲಿ ಚರ್ಚಿಸಲಾಗಿದೆ. ಹಳೇಬೀಡಿನ ಪಂಚದ್ರೋಹದ ನ್ಯಾಯ ನಿರ್ಣಯ, ಭರಮಣ್ಣ ನಾಯಕನ (ಕ್ರಿ.ಶ.೧೬೮೯-೧೭೨೧) ಮಗ ಮದಕರಿ ನಾಯಕನ ಮೇಲೆ ಸಿಟ್ಟಾಗಿ ಚಿತ್ರದುರ್ಗವನ್ನು ಬಿಟ್ಟು ದೇಶ ಸಂಚಾರ ಕೈಗೊಂಡು ಇವರು ಕೊನೆಗಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಆನಂದಪುರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಲ್ಲಿಯೇ ಲಿಂಗೈಕ್ಯರಾದದ್ದು, ಹೀಗೆ ಎಲ್ಲಾ ಸಂಗತಿಗಳನ್ನು ಸ್ಥಳ ಪರಿವೀಕ್ಷಣೆ, ಕ್ಷೇತ್ರ ಕಾರ್ಯದ ಹಿನ್ನೆಲೆಯಲ್ಲಿ ಸಂಗ್ರಹಿಸಿ ಕವಿಯ ಜೀವನ ಚರಿತ್ರೆಯ ಸ್ಪಷ್ಟ ಚಿತ್ರಣವನ್ನು ನೀಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಸಾಹಿತ್ಯಿಕ ಸಾಧನೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಉಭಯ ಭಾಷಾ ಪಂಡಿತರಾದ ಇವರು ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಬರೆದಿದ್ದಾರೆ. ಹಾಲಾಸ್ಯ ಪುರಾಣ, ಶಿವರಹಸ್ಯಗಳಂಥ ಮಾರ್ಗಶೈಲಿಯ ಪ್ರೌಢಕೃತಿಗಳು, ನಿಘಂಟು ಮಾದರಿಯ 'ಶಬ್ದರತ್ನಾಕರ', ಗದ್ಯ-ಪದ್ಯಗಳಿಂದ ಕೂಡಿದ 'ಕೊರವಂಜಿ ಕಟ್ಟಳೆ', ಐತಿಹಾಸಿಕ ವಿಚಾರಗಳನ್ನು ತಿಳಿಸುವ 'ಮುರಿಗಾತಾರಾವಳಿ', ಯಕ್ಷಗಾನ ಪ್ರಕಾರದ 'ಬಿಜ್ಜಮಹಾದೇವಿ ಚಾರಿತ್ರ', ಹಾಡಿನ ರೂಪದ 'ಸ್ವರವಚನಗಳು', ವೀರಶೈವ ತಾತ್ತ್ವಿಕ ವಿಷಯಗಳನ್ನು ತಿಳಿಸುವ 'ಪಂಚಾಶಿಕೆ', 'ಮಿಶ್ರಾರ್ಪಣ' ಮತ್ತು 'ಶೂನ್ಯಮಂತ್ರಗೋಪ್ಯ' ಮುಂತಾದ ಪಂಡಿತ ಪಾಮರರಿಗೂ ರುಚಿಸುವ ಕವಿಯ ಸಾಹಿತ್ಯ ರಾಶಿ ಅಪಾರವಾದುದಾಗಿದೆ. ಒಟ್ಟಾರೆ ಇವರ ಸಾಹಿತ್ಯವನ್ನು ಚಂಪೂ, ವಚನ, ಷಟ್ಪದಿ ಹಾಗೂ ಲಘು ಕೃತಿಗಳು ಎಂದು ಅಧ್ಯಯನದ ಅನುಕೂಲಕ್ಕಾಗಿ ವಿಭಾಗಿಸಿಕೊಂಡು ಅವುಗಳಲ್ಲಿರುವ ವಸ್ತು, ಪ್ರಕಾರ, ಭಾಷೆ, ಛಂದಸ್ಸು, ನಿರೂಪಣಾ ವೈವಿಧ್ಯತೆಗಳಂತಹ ಸಾಹಿತ್ಯಿಕ ವಿಷಯಗಳ ಜೊತೆಗೆ ಆಯಾ ಕೃತಿಗಳಲ್ಲಿ ನಿರೂಪಿತವಾಗಿರುವ ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮುಂತಾದ ಸಾಹಿತ್ಯೇತರ ವಿಷಯಗಳ ವಿಶ್ಲೇಷಣಾತ್ಮಕವಾದ ಅಧ್ಯಯನ ಕೈಗೊಳ್ಳುವ ಮೂಲಕ ಕವಿಯ ಮನೋಧರ್ಮವೆಂತಹುದು? ಅವರ ಕೃತಿಗಳಲ್ಲಿ ಎಷ್ಟರ ಮಟ್ಟಿಗೆ ಪ್ರತಿಬಿಂಬಿತವಾಗಿದೆ? ಎಂಬುದನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ ಮಾರ್ಗ ದೇಶಿ ಶೈಲಿಗಳಲ್ಲಿ ರಚಿತವಾದ ಸಮಗ್ರ ಕೃತಿಗಳ ವಿವರಣಾತ್ಮಕ ಅಧ್ಯಯನ ಕೈಗೊಂಡು ಕವಿಯ ಅನುಭವ, ಬಹುಶ್ರುತತ್ವ, ಭಾಷಾ ಪ್ರಭುತ್ವ, ಶಾಸ್ತ್ರ ಪರಿಣತಿ, ತಾತ್ತ್ವಿಕ ಚಿಂತನೆಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಸಮೀಕ್ಷಿಸುವ ಕಾರ್ಯವನ್ನು ಕೈಗೊಂಡು, ಕನ್ನಡ ಸಾಹಿತ್ಯದ ಸೃಷ್ಟಿ-ಪರಿಚಲನೆಯ ನೆಲೆಗೆ ರಾಜಾಶ್ರಯದ ಕೊಡುಗೆ ಇದ್ದಂತೆ, ಧರ್ಮ-ಧರ್ಮಾಧಿಕಾರಿಗಳು ಸಹ ಸಾಹಿತ್ಯ

ರಕ್ಷಣೆಯ ಪ್ರೇರಕರಾಗಿ, ಪೋಷಕರಾಗಿ, ಸೃಷ್ಟಿಕರ್ತರಾಗಿ ಮಾಡಿದ ಕಾರ್ಯ ಸ್ತುತ್ಯಾರ್ಹವಾದದ್ದು ಎಂಬುದನ್ನು ವಿವರಿಸುವುದರ ಮೂಲಕ, ಇವರ ಸಾಹಿತ್ಯ ಸಾಧನೆಯನ್ನು ವಿಮರ್ಶೆಗೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ವ್ಯಕ್ತಿ ನಿಷ್ಠವಾಗಿದ್ದ ಕವಿಯ ಬದುಕು ಸಮಾಜ ನಿಷ್ಠವಾಗಿ ಅನಾವರಣಗೊಂಡ ಬಗೆ, ಸಾಹಿತ್ಯ ಸೃಷ್ಟಿಗೆ ಒದಗಿ ಬಂದ ಪ್ರೇರಣೆ, ಧರ್ಮ ಹಾಗೂ ಕಾವ್ಯಧರ್ಮಗಳ ಸಮನ್ವಯತೆಗಳನ್ನು ಚರ್ಚಿಸಿ ಸಾಹಿತ್ಯ ಚರಿತ್ರೆಯಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಸ್ಥಾನ ನಿರ್ದೇಶನ ಮಾಡಲಾಗಿದೆ. ಒಟ್ಟಾರೆ ಅಧ್ಯಯನದ ಫಲಶೃತಿಯ ಸಾರವನ್ನು ಈ ಭಾಗವು ಒಳಗೊಂಡಿದೆ.

ಅಧ್ಯಾಯ ೨

ಸಮಕಾಲೀನ ಪರಿಸರ

೧. ರಾಜಕೀಯ

೨. ಧಾರ್ಮಿಕ

೩. ಸಾಹಿತ್ಯಿಕ

ಸಾಹಿತ್ಯ ಹೇಗೆ ಜೀವನದ ಪ್ರತಿಬಿಂಬವೋ ಹಾಗೆಯೇ ಜೀವನವೂ ಸಹ ಕಾಲದ ಕೈಗೂಸು. ಆದ್ದರಿಂದ ಮನುಷ್ಯನು ಬದಲಾಗುತ್ತಿರುವ ಕಾಲದ ಜೊತೆಗೆ ಅನಿವಾರ್ಯವಾಗಿ ಬದಲಾಗುತ್ತಿರುತ್ತಾನೆ. ಕವಿಗಳು, ದಾರ್ಶನಿಕರು, ಪುಣ್ಯಪುರುಷರು ಕೂಡ ಆಯಾ ಕಾಲದ ಜನ ಸಮೂಹದ ಪ್ರತಿನಿಧಿಗಳಾಗಿ ಆಚಾರ್ಯ, ಶಿವಶರಣ, ಶಿವಕವಿ, ದಂಡಾಧೀಶರಾಗಿ ಬಾಳಿ ಬದುಕಿದ್ದಾರೆ. ಅದೇ ರೀತಿ ಯಾವುದೇ ಸಾಹಿತ್ಯ ಕಲೆಗಳು ಅಂದಂದಿನ ಸಮಾಜ ಜೀವನಕ್ಕೆ ಅನುಗುಣವಾಗಿ ರೂಪಗೊಳ್ಳುತ್ತವೆ ಎಂಬುದನ್ನು ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ನಾವು ಕಾಣಬಹುದಾಗಿದೆ. ಹತ್ತನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಮತ, ವಸ್ತು, ಭಾಷೆ, ಛಂದಸ್ಸಿನ ದೃಷ್ಟಿಯಿಂದ ಕ್ರಮವಾಗಿ ಜೈನಯುಗ, ಕ್ಷಾತ್ರಯುಗ, ಹಳಗನ್ನಡಯುಗ, ಚಂಪೂಯುಗ ಎಂದು ಕರೆಯುವಂತೆ, ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯವನ್ನು ವೀರಶೈವಯುಗ, ಭಕ್ತಿಯುಗ, ನಡುಗನ್ನಡಯುಗ, ಷಟ್ಪದಿಯುಗ, ಎಂದು ಕರೆಯಲಾಗುತ್ತದೆ. ಹದಿನಾರನೆಯ ಶತಮಾನದ ಸಾಹಿತ್ಯವು ವೈಷ್ಣವಯುಗ, ಭಕ್ತಿಯುಗ, ತ್ರಿಪದಿ-ಸಾಂಗತ್ಯಗಳ ಯುಗವಾಗಿ ಕಾಣಿಸಿಕೊಳ್ಳುತ್ತದೆ. ಹೀಗೆ ಕನ್ನಡ ಸಾಹಿತ್ಯವು ಆಯಾ ಯುಗದ

ಅವಶ್ಯಕತೆಗನುಗುಣವಾಗಿ ಮಹಾಕವಿಗಳಿಂದ, ಪಂಡಿತಕವಿಗಳಿಂದ, ಭಕ್ತಕವಿಗಳಿಂದ, ಜನತೆಯ ಕವಿಗಳಿಂದ ಹುಟ್ಟಿಕೊಂಡ ಸಾವಿರಾರು ಕೃತಿಗಳು ಅಂದಂದಿನ ಪರಿಸರದ ದ್ಯೋತಕಗಳಾಗಿವೆ.

ಪ್ರತಿಯೊಬ್ಬ ಕವಿಯೂ ಒಂದು ನಿರ್ದಿಷ್ಟವಾದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಪರಿಸರದಲ್ಲಿ ಜೀವಿಸಿರುತ್ತಾನೆ. ಆ ಪರಿಸರ ಕವಿಯ ಬದುಕಿನ ಮೇಲೆ ಮತ್ತು ಆತನ ಕೃತಿಗಳ ಮೇಲೆ ನಿಚ್ಚಳ ಪ್ರಭಾವವನ್ನು ಉಂಟು ಮಾಡಿರುತ್ತದೆ. ಶ್ರೇಷ್ಠ ಕವಿಯು ತನ್ನ ಯುಗಧರ್ಮವನ್ನು ತನ್ನ ವಿಶಿಷ್ಟ ಮನೋಧರ್ಮದ ಹಿನ್ನೆಲೆಯಲ್ಲಿ ಅರಿತುಕೊಂಡು ಕಾವ್ಯಕ್ಕೆ ಇಳಿಸುವ ಪ್ರಯತ್ನ ಮಾಡುತ್ತಾನೆ. ಆದ್ದರಿಂದ ಘನಮನನಾದ ಕವಿಯು ತನ್ನ ಕಾಲದ-ಯುಗದ ಶಿಶುವೂ ಹೌದು, ಅದನ್ನು ಪ್ರತಿಭಟಿಸಿ ನಿಂತ ನವೀನ ಪಥದರ್ಶಕನೂ ಹೌದು[೧]. ಈ ಕಾರಣಕ್ಕಾಗಿ ನಾವು ಯಾವುದೇ ಕವಿಯೊಬ್ಬನ ಕೃತಿಗಳನ್ನು ಮೌಲ್ಯಮಾಪನ ಮಾಡುವ ಮೊದಲು, ಆ ಕವಿಯನ್ನು ರೂಪಿಸಿದ ಪರಿಸರದ ಹಿನ್ನೆಲೆಯನ್ನು ಗಮನಿಸುವುದು ಅವಶ್ಯವಾಗಿದೆ.

ಇಮ್ಮಡಿ ಮುರಿಗಾಗುರುಸಿದ್ಧರು ಹದಿನೇಳನೆಯ ಶತಮಾನದ ಅಂತ್ಯ ಮತ್ತು ಹದಿನೆಂಟನೆಯ ಶತಮಾದ ಆದಿ ಭಾಗದಲ್ಲಿ ಜೀವಿಸಿದ್ದು, ಆ ಕಾಲದಲ್ಲಿ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿ ಮಹತ್ತರವಾದ ಬದಲಾವಣೆಗಳು ಸಂಭವಿಸಿದವು. ಹಳೆಯ ಆದರ್ಶಗಳು ಸತ್ವಹೀನವಾಗಿ ಲೋಕ ಕಂಗೆಟ್ಟ ಸಮಯದಲ್ಲಿ, ಪರಿಸರ ಹೊಸತನ್ನು ಕುರಿತು ತಪವನ್ನು ಆಚರಿಸುತ್ತಿರುತ್ತದೆ ಕಾರಣ ಪುರುಷನನ್ನು ಕೈಮಾಡಿ ಕರೆಯುತ್ತದೆ. ಮಹಾತ್ಮರು ನವೀನ ಯುಗವನ್ನು ನಿರ್ಮಿಸಿದರೆ, ಅವರ ಉದಯಕ್ಕೆ ಯುಗಧರ್ಮವೂ ಕಾರಣವಾಗಿರುತ್ತದೆ.[೨] ಹೀಗಾಗಿ ಯುಗಧರ್ಮದ ಅಗತ್ಯಕ್ಕೆ ಅನುಗುಣವಾಗಿ ರೂಪ ತಾಳಿದ ಶೂನ್ಯಪೀಠ, ಅದರಡಿಯಲ್ಲಿ ಸಾಗಿ ಬಂದ ತೋಂಟದ ಸಿದ್ಧಲಿಂಗಯತಿಗಳ ಶಿಷ್ಯರಾದ ಇಮ್ಮಡಿ ಮುರಿಗಾಗುರುಸಿದ್ಧರು ಬದುಕಿ ಬಾಳಿದ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ವಾತಾವರಣವನ್ನು ಸ್ಥೂಲವಾಗಿ ಅವಲೋಕಿಸುವುದು ಇಲ್ಲಿ ಅನಿವಾರ್ಯ ಮತ್ತು ಅಗತ್ಯವೆನಿಸುತ್ತದೆ.

ರಾಜಕೀಯ ವಾತಾವರಣ

ಭಾರತದ ರಾಜಕೀಯ ಇತಿಹಾಸದಲ್ಲಿ ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳು ವಿಭಿನ್ನ ಸ್ಥಿತ್ಯಂತರಗಳಿಂದ ಒಡಗೂಡಿವೆ. ಉತ್ತರ ಭಾರತದಲ್ಲಿ ಮೊಗಲ್ ಸಾಮ್ರಾಜ್ಯವು ಪ್ರಗತಿ-ದುರ್ಗತಿಗಳನ್ನು ಕಂಡರೆ, ದಕ್ಷಿಣದಲ್ಲಿ ಹಿಂದೂ ಜನರ ಸಂರಕ್ಷಣೆಗೆಂದೇ ಪಂಥಬದ್ಧವಾಗಿ ಜನ್ಮ ತಾಳಿದ್ದ ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿತ್ತು. ಬಿಜಾಪುರ ಸುಲ್ತಾನರ ಹಾಗೂ ಮೊಗಲರ

ಪ್ರಾಬಲ್ಯವನ್ನು ತಡೆದು ಮರಾಠರು ಮತ್ತೊಮ್ಮೆ ಹಿಂದೂಗಳಲ್ಲಿ ನವಚೇತನ ಮೂಡಿಸಿದರೆ, ಇನ್ನೊಂದೆಡೆ ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ವ್ಯಾಪಾರಕ್ಕಾಗಿ ಆಗಮಿಸಿದ್ದ ವಸಾಹತುಶಾಹಿಗಳಲ್ಲಿ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಬ್ರಿಟೀಷರು ದೇಶೀಯ ರಾಜರುಗಳ ಬೆಂಬಲದೊಂದಿಗೆ ವ್ಯಾಪಾರದಲ್ಲಿ ಪ್ರತಿಸ್ಪರ್ಧಿಗಳಾಗಿದ್ದರು. ಅಲ್ಲದೆ ದೇಶೀಯ ರಾಜರ ಮತ್ತು ನವಾಬರ ಯುದ್ಧಗಳಲ್ಲಿ ಪಾಲ್ಗೊಂಡು ಪ್ರಮುಖ ಪಾತ್ರ ನಿರ್ವಹಿಸಿದ ಬ್ರಿಟೀಷರು ಭಾರತದ ಪ್ರಬಲ ರಾಜಕೀಯ ಶಕ್ತಿಯಾಗಿ ಆಡಳಿತದ ಚುಕ್ಕಾಣಿ ಹಿಡಿದರು.

ದಕ್ಷಿಣ ಭಾರತದಲ್ಲಿ ವಿಜಯನಗರ ಅರಸರ ಹೊಸ ಬಗೆಯ ಆಡಳಿತ ನೀತಿಯಿಂದ ಹುಟ್ಟಿಕೊಂಡಿದ್ದ ಮಾಂಡಲೀಕರು, ದೇಸಾಯಿಯರು, ನಾಯಕರು, ಪಾಳೆಯಗಾರರು ಪುನಃ ವಿಜಯನಗರ ಸಾಮ್ರಾಜ್ಯ ಕಟ್ಟುವ ಕನಸಿನಲ್ಲಿದ್ದ ಅರವೀಡು ವಂಶದ ಶ್ರೀರಂಗರಾಯ(ಕ್ರಿ.ಶ.೧೬೭೪)ನಿಗೆ ನಿಷ್ಠೆ, ಸಹಕಾರ, ಬೆಂಬಲ ತೋರಿಸದೆ ಸ್ವಾತಂತ್ರ ಹೊಂದಿ, ಸಣ್ಣ ಸಣ್ಣ ರಾಜ್ಯಗಳನ್ನು ಕಟ್ಟಿಕೊಂಡರು. ಕಾರಣ ಇಂದಿನ ಕರ್ನಾಟಕದ ಉತ್ತರ ಭಾಗಗಳಾದ ಬಿಜಾಪುರ ಮತ್ತು ಗೋಲ್ಕಂಡಗಳು ಸುಲ್ತಾನರ ವಶವಾದವು. ಉಳಿದ ಭಾಗಗಳು ದೇಸಾಯಿಯರ, ಸರನಾಯಕನ ವಶದಲ್ಲಿದ್ದವು. ದಕ್ಷಿಣ ಕರ್ನಾಟಕದಲ್ಲಿ ಮೈಸೂರಿನ ಒಡೆಯರು, ಕೆಳದಿಯ ನಾಯಕರು ಪ್ರಬಲರಾದರು. ಇವರಲ್ಲದೆ ಚಿತ್ರದುರ್ಗ, ಹರಪನಹಳ್ಳಿ, ಬಸವಾಪಟ್ಟಣ, ಬಿದನೂರು, ಹಾಗಲವಾಡಿ, ಯಲಹಂಕ ಮತ್ತು ಚಿಕ್ಕಬಳ್ಳಾಪುರದ ಗೌಡರು, ಸುಗಟೂರಿನ ಗೌಡರು, ಉಮ್ಮತ್ತೂರು, ಕಳಲೆ, ಯಳಂದೂರು ಒಡೆಯರು[೧] ಇನ್ನೂ ಮುಂತಾದ ಸಣ್ಣ ಸಣ್ಣ ರಾಜ್ಯಗಳು, ಪಾಳೆಯಪಟ್ಟುಗಳು ರಚನೆಗೊಂಡವು.

ಶಾಂತಿ ಸುಭೀಕ್ಷೆಯಿಂದ ಆಡಳಿತ ನಡೆಸಿದ ವಿಜಯನಗರ ಸಾಮ್ರಾಜ್ಯದ ಪತನದಿಂದಾಗಿ ಕರ್ನಾಟಕದಲ್ಲಿ ಕೇಂದ್ರ ರಾಜ್ಯ ವ್ಯವಸ್ಥೆ ಕುಸಿದು ಬಿದ್ದು, ಎಲ್ಲೆಲ್ಲೂ ರಾಜಕೀಯ ಅರಾಜಕತೆ ತಲೆದೋರಿತು. ಅಂದಿನ ರಾಜಕೀಯ ವ್ಯವಸ್ಥೆಯಿಂದ ಹೊರಬಂದ ಶಿಶುಗಳಂತಿದ್ದ ಹಲವಾರು ಸಣ್ಣ ಪುಟ್ಟ ಪಾಳೆಯಪಟ್ಟುಗಳು ಪರಸ್ಪರ ಕಾದಾಡುತ್ತಿದ್ದವು. ತಮ್ಮ ಶಕ್ತಿ ಕುಗ್ಗಿದಾಗ, ತಮ್ಮ ಶತ್ರುವನ್ನು ಸೋಲಿಸಲು ಬೇರೊಬ್ಬ ಪ್ರಬಲ ರಾಜನನ್ನೋ, ಸುಲ್ತಾನನನ್ನೊ ತಮ್ಮ ಬೆಂಬಲಕ್ಕಾಗಿ ಆಹ್ವಾನಿಸುತ್ತಿದ್ದರು. ಹೀಗಾಗಿ ಹದಿನೇಳನೇ ಶತಮಾನದಲ್ಲಿ ಕರ್ನಾಟಕವು ಮೊಗಲ್ ಮತ್ತು ಮರಾಠರ ದಾಳಿಗಳಿಗೆ ತುತ್ತಾಯಿತು. ಇನ್ನೊಂದು ಕಡೆ ಕರಾವಳಿ ಪ್ರದೇಶದಲ್ಲಿ ವ್ಯಾಪಾರಿಗಳಾಗಿದ್ದ ಪೋರ್ಚುಗೀಸರು, ಬ್ರಿಟಿಷರು ತಮ್ಮ ರಾಜಕೀಯ, ಆರ್ಥಿಕ ಶಕ್ತಿಗಳೆರಡನ್ನು ಪ್ರಬಲಗೊಳಿಸಿಕೊಳ್ಳಲು ಇದು ಕಾರಣವಾಯಿತು.

ಏಕೆಂದರೆ ಏಕರೂಪದ ರಾಜಕೀಯ ವ್ಯವಸ್ಥೆ ಬಿದ್ದು ಹೋಗಿ, ಕರ್ನಾಟಕದ ಎಲ್ಲಾ ಭಾಗಗಳು ಹರಿದು ಹಂಚಿ ಹೋಗುತ್ತಾ, ಬೇರೆ ಬೇರೆಯವರ ಆಕ್ರಮಣಗಳಿಗೆ ತುತ್ತಾಗಿದ್ದರಿಂದ ಸಮಗ್ರ ಕರ್ನಾಟಕದ ಬಗ್ಗೆ ಕಾಳಜಿಯಾಗಲಿ, ಜವಾಬ್ದಾರಿಯಾಗಲಿ ಯಾರಿಗೂ ಬೇಕಾಗಿರಲಿಲ್ಲ. ಅಂತೆಯೇ ವ್ಯಾಪಾರಿ ಮನೋಧರ್ಮದ ವಸಾಹತುಶಾಹಿಗಳು ಬಲಶಾಲಿಯಾದರು. ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ಅನುಸರಿಸುತ್ತಿದ್ದ ಮೈಸೂರು ಅರಸರು, ಕೆಳದಿ ನಾಯಕರು ಪರಸ್ಪರ ಕಚ್ಚಾಡುತ್ತಾ ತಮ್ಮ ಪ್ರದೇಶ ಗಳನ್ನು ಟಿಪ್ಪುಸುಲ್ತಾನನಿಗೆ ಒಪ್ಪಿಸಿದರು.

ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದ ಮೈಸೂರು ದೊರೆಗಳು ೧ನೆಯ ರಾಜ ಒಡೆಯರ (ಕ್ರಿ.ಶ.೧೬೧೦) ಕಾಲದಲ್ಲಿ ಸ್ವತಂತ್ರರಾದರು. ತದನಂತರ ಬಂದ ಕಂಠೀರವ ನರಸರಾಜ ಒಡೆಯರು (ಕ್ರಿ.ಶ.೧೬೩೮-೧೬೫೯) ರಾಜ್ಯದ ಗಡಿಗಳನ್ನು ವಿಸ್ತರಿಸುವ ನೀತಿಯನ್ನು ಅನುಸರಿಸಿದನು. ಈ ಕಾಲದಲ್ಲಿ ಬಿಜಾಪುರದ ಸುಲ್ತಾನನು ರಣದುಲ್ಲಾಖಾನ್ ಮತ್ತು ಷಹಜಿಯ ನೇತೃತ್ವದಲ್ಲಿ ಶಿರಾ, ತುಮಕೂರು, ಬೆಂಗಳೂರು ಪ್ರಾಂತಗಳನ್ನು ವಶಪಡಿಸಿಕೊಂಡನು. ಕ್ರಿ.ಶ.೧೬೪೯ರಲ್ಲಿ ರಣದುಲ್ಲಾಖಾನನು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದಾಗ ನರಸರಾಜ ಒಡೆಯರು ಕಪ್ಪಕಾಣಿಕೆಗಳನ್ನು ನೀಡುವುದರ ಮುಖಾಂತರ ಒಪ್ಪಂದ ಮಾಡಿಕೊಂಡರು. ಬೆಂಗಳೂರಿನ ಕೆಂಪೇಗೌಡನು ಒಪ್ಪಂದ ಮಾಡಿಕೊಂಡು ಮಾಗಡಿ ಪ್ರಾಂತ್ಯವನ್ನು ಪಡೆದನು. ತದನಂತರ ಷಹಜಿಯನ್ನು ಬೆಂಗಳೂರು ಪ್ರಾಂತದ ಆಡಳಿತ ನಿರ್ವಹಣೆಗೆ ನೇಮಕ ಮಾಡಲಾಯಿತು.[೪] ಕಾರಣ ಮರಾಠರನ್ನು ಕರ್ನಾಟಕದಿಂದ ಹೊರದೂಡಬೇಕೆಂಬ ನರಸರಾಜ ಒಡೆಯರ ಪ್ರಯತ್ನ ಕೊನೆಗೂ ಈಡೇರಲಿಲ್ಲ.

ಇವರ ನಂತರ ಅಧಿಕಾರಕ್ಕೆ ಬಂದ ದೊಡ್ಡದೇವರಾಜರ ಕಾಲದಲ್ಲಿ ಪ್ರಬಲನಾಗಿದ್ದ ಇಕ್ಕೇರಿಯ ಶಿವಪ್ಪನಾಯಕ (ಕ್ರಿ.ಶ.೧೬೪೫-೧೬೬೦)ನು ಬೀಳಗಿ, ತರಿಕೇರಿ ಮುಂತಾದ ಚಿಕ್ಕ ಚಿಕ್ಕ ಪಾಳೆಯಗಾರರ ನೆರವಿನಿಂದ ಮೈಸೂರಿನ ಮೇಲೆ ದಾಳಿ ನಡೆಸಿ ವಿಫಲನಾದನು. ಈ ಕಾಲದಲ್ಲಿ ಮೈಸೂರು ಮತ್ತು ಮಧುರೆಯ ಚೊಕ್ಕನಾಥ ನಾಯಕರ ನಡುವೆ ನಡೆದ ಯುದ್ಧದಲ್ಲಿ ವೇದೋಜಿ ಪಂಡಿತ, ಅನಂತೋಜಿ ಪಂಡಿತ ಮೊದಲಾದ ಮರಾಠವೀರರು ದಳವಾಯಿಕುಮಾರಯ್ಯನಿಂದ ಸೋಲನ್ನು ಅನುಭವಿಸಿದರು. ಧರ್ಮಾಪುರ, ವಾಮಲೂರು, ಕವಲೂರು, ಸಾಂಬಳ್ಳಿಪುರ ಮುಂತಾದ ಪ್ರದೇಶಗಳು ಮೈಸೂರಿಗೆ ಸೇರಿದವು. ಮುಂದೆ ದೊಡ್ಡ ದೇವರಾಜ ಒಡೆಯರು ಹುಲಿಯೂರುದುರ್ಗ, ಕುಣಿಗಲ್, ಮಾಗಡಿ ಮುಂತಾದ ಪ್ರದೇಶಗಳನ್ನು ಮುಮ್ಮಡಿ ಕೆಂಪೇಗೌಡನಿಂದ ವಶಪಡಿಸಿಕೊಂಡರು.

ಕ್ರಿ.ಶ.೧೬೭೩ ರಿಂದ ೧೭೦೪ರವರೆಗೆ ಆಳ್ವಿಕೆ ನಡೆಸಿದ ಚಿಕ್ಕದೇವರಾಜ ಒಡೆಯರ ಕಾಲವು ಧಾರ್ಮಿಕವಾಗಿ, ರಾಜಕೀಯವಾಗಿ, ಸಾಹಿತ್ಯಿಕವಾಗಿ ಹಲವಾರು ಘಟನಾವಳಿಗಳಿಂದ ಕೂಡಿದೆ. ಒಂದೆಡೆ ಮೊಗಲ್ ಸಾಮ್ರಾಜ್ಯದ ಕುಸಿತ, ಇನ್ನೊಂದು ಕಡೆ ಐರೋಪ್ಯರ ಅಧೀನದಲ್ಲಿದ್ದ ವಾಣಿಜ್ಯ ಕೇಂದ್ರಗಳ ಅಭಿವೃದ್ಧಿ, ಮಗದೊಂದು ಕಡೆ ದಿನೇ ದಿನೇ ಪ್ರಬಲರಾಗುತ್ತಿದ್ದ ಮರಾಠರು ಈ ಎಲ್ಲಾ ಶಕ್ತಿಗಳ ನಡುವೆಯೂ ಚಿಕ್ಕದೇವರಾಜರು ಮೈಸೂರಿನ ಘನತೆಯನ್ನು ಎತ್ತಿ ಹಿಡಿದರು. ಬಿಜಾಪುರ ಸುಲ್ತಾನನಿಂದ ಕೇತಸಮುದ್ರ, ಕಂದಿಕೆರೆ, ಹಂದಲಗೆರೆ, ಗೂಳೂರು, ತುಮಕೂರು, ಹೊನ್ನಾವಳಿ ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡರು. ಕ್ರಿ.ಶ.೧೬೭೭ರಲ್ಲಿ ಶ್ರೀರಂಗಪಟ್ಟಣದ ಮೇಲೆ ನಡೆದ ಶಿವಾಜಿಯ ದಾಳಿಯನ್ನು ಎದುರಿಸಿದನು. ಉತ್ತರ ದಿಕ್ಕಿನಲ್ಲಿ ಕಡೂರು, ಚನ್ನರಾಯದುರ್ಗ ಮುಂತಾದ ಪ್ರದೇಶಗಳನ್ನು, ಮಧುರೆಯ ಅಡಿಯೂರು, ಕಣ್ಣಾತ್ತೂರು ಕೋಟೆಗಳನ್ನು ವಶಪಡಿಸಿಕೊಂಡು, ಈರೋಡಿನ ಅಕ್ಕಾರೆಡ್ಡಿಯನ್ನು ಸೋಲಿಸಿದನು. ಮೊಗಲ್ ಚಕ್ರವರ್ತಿ ಔರಂಗಜೇಬನಿಗೆ ಕ್ರಿ.ಶ.೧೬೮೬ರಲ್ಲಿ ಬಿಜಾಪುರ ಕೋಟೆಯನ್ನು ಆಕ್ರಮಿಸಿಕೊಳ್ಳಲು ಸಹಾಯ ಮಾಡಿ ಮೊಗಲರೊಂದಿಗಿನ ಭಾಂದವ್ಯ ಹೆಚ್ಚಿಸಿಕೊಂಡನು. ನಂತರ ಆಳಿದ ಇಮ್ಮಡಿ ಕಂಠೀರವ ನರಸರಾಜ ಒಡೆಯರು(ಕ್ರಿ.ಶ.೧೭೦೪-೧೭೧೩), ದೊಡ್ಡ ಕೃಷ್ಣರಾಜ ಒಡೆಯರ ಕಾಲದಲ್ಲಿ(ಕ್ರಿ.ಶ.೧೭೧೩-೧೭೩೨) ರಾಜ್ಯದ ದುಃಸ್ಥಿತಿ ಆರಂಭವಾಗಿ ಮರಾಠರು ಆಗಾಗ್ಗೆ ಕರ್ನಾಟಕದ ಮೇಲೆ ದಾಳಿ ಮಾಡಿ ಸುಲಿಗೆ ಮಾಡುತ್ತಿದ್ದರು. ಚಾಮರಾಜ ಒಡೆಯರು, ಚಿಕ್ಕ ಕೃಷ್ಣರಾಜ ಒಡೆಯರ ಕಾಲದಲ್ಲಿ(ಕ್ರಿ.ಶ.೧೭೩೧-೧೭೬೬) ದೇವರಾಜ ಮತ್ತು ನಂಜರಾಜ ಎಂಬ ಇಬ್ಬರು ಕಳಲೆ ಮನೆತನದ ದಳವಾಯಿಗಳು ಪ್ರಾಬಲ್ಯಕ್ಕೆ ಬಂದು ಅಂದಿನ ಪರಿಸ್ಥಿತಿಯನ್ನು ನಿಯಂತ್ರಿಸಲು ಎಷ್ಟೇ ಶ್ರಮಪಟ್ಟರೂ ಕೂಡ ಹೈದರಾಲಿಯ ಉನ್ನತಿಕೆಯನ್ನು ತಡೆಯಲಾಗಲಿಲ್ಲ.[೫]

ಪಶ್ಚಿಮ ಕರಾವಳಿಯಲ್ಲಿ ರಾಜ್ಯ ಕಟ್ಟಿದ ಕೆಳದಿ ಅರಸರು ಮೈಸೂರು ಅರಸರಿಗೆ ಪ್ರತಿಸ್ಪರ್ಧಿಯಾಗಿ ಬೆಳೆಯುತ್ತಿದ್ದರು. ಇವರು ಪೋರ್ಚುಗೀಸರ ವ್ಯಾಪಾರ ವಿಸ್ತರಣಾ ನೀತಿಯನ್ನು, ಬಿಜಾಪುರ ಸುಲ್ತಾನರ ದಾಳಿಗಳನ್ನು ಎದುರಿಸುತ್ತ ಸುಮಾರು ೨೫೦ ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ವೆಂಕಟಪ್ಪ ನಾಯಕನ ತರುವಾಯ ಅಧಿಕಾರಕ್ಕೆ ಬಂದ ಶಿವಪ್ಪನಾಯಕ(ಕ್ರಿ.ಶ.೧೬೪೫-೧೬೬೧)ನು ವಿಜಯನಗರದ ಕೊನೆಯ ಅರಸ ಶ್ರೀರಂಗರಾಯನಿಗೆ ಆಶ್ರಯ ನೀಡಿದನು. ಅತ್ಯಂತ ಶಕ್ತಿಶಾಲಿಯಾಗಿದ್ದ ಈ ದೊರೆ ತುರುವೇಕೆರೆ, ಬೆಳಗುಟ್ಟಿ, ಸ್ವಾಸೆ, ಹೊಸೂರು, ಬೀಳಗಿ ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡು ಕೆಳದಿ ರಾಜ್ಯವನ್ನು ಮಂಗಳೂರಿನವರೆಗೆ ವಿಸ್ತರಿಸಿದನು. ಬಿಜಾಪುರ ಸುಲ್ತಾನನ ಮರಣಾನಂತರ

ಇಕ್ಕೇರಿ, ಉಡುಗಣ್ಣೆ, ಸೊರಬಕೋಟೆಗಳನ್ನು, ಮೈಸೂರು ಪ್ರಾಂತದಿಂದ ಅರಕಲಗೂಡು, ಬೇಲೂರು, ಹಬ್ಬೆ ಮುಂತಾದವುಗಳನ್ನು ಆಕ್ರಮಿಸಿಕೊಂಡು ತನ್ನ ರಾಜ್ಯವನ್ನು ಪಶ್ಚಿಮಕ್ಕೆ ಅರಬ್ಬೀಸಮುದ್ರ, ಪೂರ್ವಕ್ಕೆ ಚಿತ್ರದುರ್ಗ ಪಾಳೆಯ ಪಟ್ಟು, ದಕ್ಷಿಣಕ್ಕೆ ಶ್ರೀರಂಗಪಟ್ಟಣ, ಉತ್ತರಕ್ಕೆ ಬಿಜಾಪುರ ಮತ್ತು ಮರಾಠ ಪ್ರಾಂತ್ಯಗಳವರೆಗೂ ವಿಸ್ತರಿಸಿದನು.

ನಂತರ ಪಟ್ಟಕ್ಕೆ ಬಂದ ರಾಣಿ ಚೆನ್ನಮ್ಮಾಜಿ ಮರಾಠ ರಾಜಾರಾಮನಿಗೆ ಆಶ್ರಯ ನೀಡುವ ಮೂಲಕ ಔರಂಗಜೇಬನ ಸಿಟ್ಟಿಗೆ ಗುರಿಯಾದಳು. ಕ್ರಿ.ಶ. ೧೬೯೦ರಲ್ಲಿ ಸಂಭವಿಸಿದ ಯುದ್ಧದಲ್ಲಿ ಮೊಗಲ್ ಸೈನ್ಯವನ್ನು ಸೋಲಿಸಿದಳು. ಬ್ರಿಟೀಷರ ವಿರುದ್ಧ ಸಮರ ಸಾರಿ ದೇಶಾಭಿಮಾನವನ್ನು ಮೆರೆದ ಕನ್ನಡದ ಪ್ರಥಮ ಮಹಿಳೆ ಎಂದೆನಿಸಿಕೊಂಡಳು. ಆ ಮೇಲೆ ಪಟ್ಟಕ್ಕೆ ಬಂದ ಬಸಪ್ಪನಾಯಕನು ಪೋರ್ಚುಗೀಸರೊಡನೆ ನಿಕಟ ಸಂಬಂಧ ಹೊಂದಿದ್ದನು. ತದನಂತರ ಆಳಿದ ಸೋಮಶೇಖರನಾಯಕನ ಕಾಲದಲ್ಲಿ ಬ್ರಿಟೀಷರ ಪ್ರಾಬಲ್ಯದಿಂದಾಗಿ ಕರಾವಳಿ ಪ್ರದೇಶಗಳಲ್ಲಿ ಕೆಳದಿ ರಾಜ್ಯಕ್ಕೆ ವಿಶೇಷ ನಷ್ಟವುಂಟಾಯಿತು. ಮುಂದೆ ಆಳಿದ ಬಸವಪ್ಪನಾಯಕ(ಕ್ರಿ.ಶ.೧೭೩೯-೧೭೫೫), ಚನ್ನಬಸವಪ್ಪನಾಯಕ(ಕ್ರಿ.ಶ.೧೭೫೫-೧೭೫೭) ಇವರ ಕಾಲದಲ್ಲಿ ಮರಾಠರು ಕರ್ನಾಟಕದ ಮೇಲೆ ಸತತ ದಾಳಿ ಮಾಡಿ ಸುಲಿಗೆ ನಡೆಸಿದರು. ಕ್ರಿ.ಶ.೧೭೬೩ರಲ್ಲಿ ವೀರಮ್ಮಾಜಿಯು ರಾಜ್ಯವಾಳುತ್ತಿದ್ದಾಗ ಮೈಸೂರಿನ ಹೈದರಾಲಿಯು ಬಿದನೂರನ್ನು ಆಕ್ರಮಿಸಲಾಗಿ ಕೆಳದಿ ರಾಜ್ಯವು ಸಂಪೂರ್ಣವಾಗಿ ಮೈಸೂರು ರಾಜ್ಯದಲ್ಲಿ ಸೇರಿತು.

ವಿಜಯನಗರದ ಅರಸರಿಗೆ ಸಾಮಂತರಾಗಿದ್ದ ಚಿತ್ರದುರ್ಗದ ಪಾಳೆಯಗಾರರು ಓಬಣ್ಣನಾಯಕ (ಕ್ರಿ.ಶ.೧೫೧೦-೧೫೩೫)ನ ಕಾಲದಲ್ಲಿ ಸ್ವತಂತ್ರರಾದರು. ಈತನ ಮಗ ಕಸ್ತೂರಿರಂಗಪ್ಪನು ಯುದ್ಧಪ್ರಿಯನಾಗಿದ್ದು ಮಾಯಕೊಂಡ, ಸಂತೆಬೆನ್ನೂರು, ಹೊಳಲ್ಕೆರೆ, ಅಣಜಿ, ಜಗಳೂರು ಮೊದಲಾದ ಪ್ರಾಂತಗಳನ್ನು ವಶಪಡಿಸಿಕೊಂಡನು. ಅವನ ನಂತರ ಬಂದ ನಾಯಕರ ಕಾಲದಲ್ಲಿ ಇಕ್ಕೇರಿ, ಹರಪನಹಳ್ಳಿ ಪಾಳೇಗಾರರ ದಾಳಿಗಳಿಂದ ರಾಜ್ಯದಲ್ಲಿ ಶಾಂತಿ ನೆಮ್ಮದಿಗಳಿರಲಿಲ್ಲ. ಭರಮಪ್ಪನಾಯಕ (ಕ್ರಿ.ಶ.೧೬೮೯-೧೭೧೯)ನ ಕಾಲದಲ್ಲಿ ಮೊಗಲರು ಬಿಜಾಪುರದ ಕೆಲವು ಪ್ರಾಂತಗಳನ್ನು ಆಕ್ರಮಿಸಿಕೊಂಡರು, ಭರಮಪ್ಪ ನಾಯಕನು ಮೊಗಲರೊಡನೆ ಮೈತ್ರಿ ಮಾಡಿಕೊಂಡು ಬಿಜಾಪುರದ ಸೈನ್ಯದೊಡನೆ ಹೋರಾಡಿದನು. ಆದರೆ ಮೊಗಲರೊಡನೆ ಏರ್ಪಟ್ಟ ಈ ಮೈತ್ರಿಯು ಬಹುಕಾಲ ಮುಂದುವರಿಯಲಿಲ್ಲ.[೬]

ಭರಮಣ್ಣನಾಯಕನ ಸಮರ ವಿಜಯವನ್ನು ಸಾರುವ ಅನಾಮಧೇಯ ಕಾವ್ಯವೊಂದನ್ನು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಪತ್ತೆ ಹಚ್ಚಿದ್ದು, ಅದರಲ್ಲಿ ಭರಮಣ್ಣನಾಯಕನು ರಾಜ್ಯ ಸೂತ್ರವನ್ನು ವಹಿಸಿದ ಕೆಲವೇ ದಿನಗಳಲ್ಲಿ ಒಳಗಿನ ಶತ್ರುಗಳನ್ನು ಅಡಗಿಸಿ, ಆ ಪ್ರಾಂತ್ಯದಲ್ಲಿ

ಶಾಂತಿ, ಸುಭೀಕ್ಷೆಗಳು ನೆಲೆಸುವಂತೆ ಮಾಡಿದನು. ಇದನ್ನು ನೋಡಿ ಸಹಿಸದೆ ಯಾವುದೋ ನೆಪವೊಡ್ಡಿ ಆಗಾಗ ಯುದ್ಧಕ್ಕೆ ಬರುತ್ತಿದ್ದ ತರೀಕೆರೆ, ಬಿದನೂರು, ಹಾವನೂರು, ಹರಪನಹಳ್ಳಿ, ಗುಡೇಕೋಟೆ, ಜರಿಮಲೆ, ರಾಯದುರ್ಗ, ನಿಡುಗಲ್ಲು ಮತ್ತು ರತ್ನಗಿರಿ ಪಾಳೆಯಗಾರರೂ, ಸವಣೂರು ನವಾಬ, ಸೀರ್ಯದ ಸುಬೇದಾರರೂ ಈ ಸಂಸ್ಥಾನದ ಮೇಲೆ ದಾಳಿ ಮಾಡುತ್ತಿದ್ದರು. ಇವರಲ್ಲದೆ ಮರಾಠ ಸರದಾರರೂ ಆಗಾಗ ಭಾರಿ ಸೇನಾ ಸಮೇತರಾಗಿ 'ಚೌತಾಯ' ಎತ್ತಲು ಬರುತ್ತಿದ್ದರು. ಆದರೆ ಈ ಎಲ್ಲಾ ದಾಳಿಗಳನ್ನು ಭರಮಣ್ಣನಾಯಕನು ಸ್ವಂತ ಬಲದಿಂದ ಎದುರಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನು.[೭]

ಹಾಗಲವಾಡಿಯ ಇಮ್ಮಡಿ ಚನ್ನಬಸವಪ್ಪನಾಯಕ(ಕ್ರಿ.ಶ.೧೭೦೯-೧೭೨೫)ನು ಹರತಿ ಕೋಟೆಯ ಸಲುವಾಗಿ ಚಿತ್ರದುರ್ಗದ ಭರಮಪ್ಪನಾಯಕನೊಡನೆ ಹೋರಾಟ ಮಾಡಿದನು. ಮುಮ್ಮಡಿ ಹೊಟ್ಟಣ್ಣನಾಯಕನು ಆಳ್ವಿಕೆ ಮಾಡುತ್ತಿದ್ದ ಹರತಿ ಕೋಟೆಗೆ ಚಿತ್ರದುರ್ಗದ ನಾಯಕರು ಮುತ್ತಿಗೆ ಹಾಕಿದರು. ಆದರೆ ಅವರು ಕೋಟೆಯನ್ನು ವಶಪಡಿಸಿಕೊಳ್ಳಲಾಗದೆ ಹಿಂತಿರುಗಿದರು. ಈ ವಿಷಯ ಹಾಗಲವಾಡಿ ನಾಯಕನಿಗೆ ತಿಳಿದು ಭಾರೀ ಸೈನ್ಯದೊಂದಿಗೆ ಹರತಿ ಕೋಟೆಗೆ ಮುತ್ತಿಗೆ ಹಾಕಿ ಬಹಳ ಸಾಹಸದಿಂದ ವಶಪಡಿಸಿಕೊಂಡು, ಅಲ್ಲಿ ಆಡಳಿತ ನಡೆಸಲು ತನ್ನ ಕಡೆಯ ಅಧಿಕಾರಿಗಳನ್ನು ನೇಮಿಸಿದನು. ಈ ಸಂಗತಿ ಚಿತ್ರದುರ್ಗದ ನಾಯಕನಿಗೆ ಒಂದು ರೀತಿಯ ಅವಮಾನವನ್ನುಂಟು ಮಾಡಿತ್ತು. ಆದುದರಿಂದ ಭರಮಪ್ಪನಾಯಕನು ದೊಡ್ಡ ಸೈನ್ಯದೊಂದಿಗೆ ಪುನಃ ಹರತಿ ಕೋಟೆಗೆ ಮುತ್ತಿಗೆ ಹಾಕಿ ಅಲ್ಲಿದ್ದ ಹಾಗಲವಾಡಿಯ ಅಧಿಕಾರಿಗಳನ್ನು ಹೊಡೆದೋಡಿಸಿ ಅದನ್ನು ಪುನಃ ಸ್ವಾಧೀನ ಪಡಿಸಿಕೊಂಡನು[೮]. ಇವನ ನಂತರ ಪಟ್ಟಕ್ಕೆ ಬಂದ ಹಿರೇಮದಕರಿನಾಯಕ(ಕ್ರಿ.ಶ.೧೭೨೧-೧೭೪೮)ನು ಹರಪನಹಳ್ಳಿ, ಬಿದನೂರು ಮುಂತಾದ ಪ್ರಾಂತಗಳ ನಾಯಕರೊಡನೆ ಹೋರಾಡಬೇಕಾಯಿತು, ಈ ಯುದ್ಧಗಳಲ್ಲಿ ಹಿರೇಮದಕರಿಯು ಯಶಸ್ವಿಯಾದನು. ಇವನ ಮಗ ಕಸ್ತೂರಿರಂಗಪ್ಪನು ಪಟ್ಟಕ್ಕೆ ಬಂದು, ದಕ್ಷಿಣಾಭಿಮುಖವಾಗಿ ದಂಡಯಾತ್ರೆಗಳನ್ನು ಮಾಡಿ ಬೂದಿಹಾಳು ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡನು. ಕೊನೆಯ ಮದಕರಿನಾಯಕ(ಕ್ರಿ.ಶ.೧೭೫೪-೭೮)ನ ಆಳ್ವಿಕೆಯಲ್ಲಿ ಹೈದರಾಲಿಯು ಚಿತ್ರದುರ್ಗದ ಕೋಟೆಗೆ ಮುತ್ತಿಗೆ ಹಾಕಿ ಕ್ರಿ.ಶ.೧೭೭೯ರಲ್ಲಿ ಕುಟಿಲೋಪಾಯದಿಂದ ವಶಪಡಿಸಿಕೊಂಡನು.

ಬಸವಾಪಟ್ಟಣ ಸಂಸ್ಥಾನವು ಉತ್ತರದಲ್ಲಿ ತುಂಗಭದ್ರ ನದಿಯಿಂದ ದಕ್ಷಿಣಕ್ಕೆ ತರಿಕೇರಿಯವರೆಗೂ ವ್ಯಾಪಿಸಿದ್ದು, ಕ್ರಿ.ಶ.೧೬೩೯ರಲ್ಲಿ ಬಿಜಾಪುರ ಸುಲ್ತಾನನು ಈ ರಾಜ್ಯದ ಉತ್ತರ ಭಾಗವನ್ನೆಲ್ಲಾ ಆಕ್ರಮಿಸಿಕೊಂಡನು. ಉತ್ತರದ ಮರಾಠರ ದಾಳಿಗಳಿಂದ, ಹೈದರನ ಮುತ್ತಿಗೆಯಿಂದ, ಕೆಳದಿ ಮತ್ತು

ಚಿತ್ರದುರ್ಗ ಅರಸರಿಗೆ ನಡೆಯುತ್ತಿದ್ದ ಯುದ್ಧಗಳಿಂದಲೂ ರಾಜ್ಯದಲ್ಲಿ ಶಾಂತಿ ನೆಮ್ಮದಿಗಳಿರಲಿಲ್ಲ.' ನಂತರ ಬಸವಾಪಟ್ಟಣವು ಮೊಗಲರ ಕೈ ಸೇರಿತು. ಒಮ್ಮೆ ಮೊಗಲರು, ಮತ್ತೊಮ್ಮೆ ಮರಾಠರು ಹೀಗೆ ಬಸವಾಪಟ್ಟಣದ ಮೇಲೆ ಬೇರೆ ಬೇರೆ ರಾಜಕೀಯ ಶಕ್ತಿಗಳ ಅಧಿಕಾರ ಮುಂದುವರೆಯಿತು. ಸ್ವಲ್ಪಕಾಲ ಹೈದರಾಲಿಯ ಅಧೀನದಲ್ಲಿದ್ದ ಈ ಪ್ರದೇಶವು ಕ್ರಿ.ಶ. ೧೭೯೧ರಲ್ಲಿ ಮರಾಠರ ದಾಳಿಯಿಂದ ಸಂಪೂರ್ಣ ನಾಶವಾಯಿತು.

ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯ ಪತನದ ನಂತರ ಸಂಭವಿಸಿದ ರಾಜಕೀಯ ಅಸ್ಥಿರತೆ, ಅರಾಜಕತೆಯು ಕರ್ನಾಟಕದ ಧಾರ್ಮಿಕ, ಸಾಹಿತ್ಯಿಕ ರಂಗಗಳಲ್ಲಿ ಅವುಗಳ ಘನತೆ, ಗಾಂಭೀರ್ಯಕ್ಕೆ ತತ್ಕಾಲೀನವಾಗಿ ತಡೆಯುಂಟು ಮಾಡಿದ್ದು, ಈ ಅಭದ್ರತೆಯನ್ನು ಹೋಗಲಾಡಿಸಿ ದಕ್ಷಿಣದ ರಾಜ್ಯಗಳನ್ನೆಲ್ಲಾ ಒಂದುಗೂಡಿಸುವ ಸಾಮರ್ಥ್ಯ ಯಾವ ಸಾಮಂತ ಅರಸರಿಗೂ ಬರದೇ ಹೋದುದು ಕರ್ನಾಟಕದ ರಾಜಕೀಯ ಕ್ಷೇತ್ರದ ದುರ್ದೈವ. ಪ್ರಸ್ತುತ ಮೈಸೂರು, ಕೆಳದಿ, ಚಿತ್ರದುರ್ಗ, ಬಸವಾಪಟ್ಟಣಗಳ ರಾಜಕೀಯ ಕ್ಷೋಭೆಯನ್ನು ಮಾತ್ರ ಇಲ್ಲಿ ವಿವರವಾಗಿ ತೆಗೆದುಕೊಳ್ಳಲಾಗಿದೆ. ಉಳಿದಂತೆ ಹರಪನಹಳ್ಳಿ, ಹಾಗಲವಾಡಿ, ಮತ್ತೋಡು, ಬೂದಿಹಾಳು, ನಾಯಕನಹಟ್ಟಿ, ಸೋದೆ ಮುಂತಾದ ಪಾಳೆಯಪಟ್ಟುಗಳ ರಾಜಕೀಯ ಪರಿಸ್ಥಿತಿಯೂ ಕೂಡ ಇದೇ ರೀತಿಯಾಗಿತ್ತು. ಅಂತಃ ಕಲಹ, ಮರಾಠರ, ಮುಸಲ್ಮಾನರ ದಾಳಿಗಳು, ಸಾಮ್ರಾಜ್ಯ ವಿಸ್ತರಣೆಯ ಅಭೀಪ್ಸೆ ಇವುಗಳಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಶಾಂತಿ ನೆಮ್ಮದಿಗಳಿರಲಿಲ್ಲ. ಆದ್ದರಿಂದ ವ್ಯಾಪಾರದ ಉದ್ದೇಶಕ್ಕಾಗಿ ಭಾರತಕ್ಕೆ ಬಂದ ಬ್ರಿಟೀಷರು ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಉತ್ತರ ಭಾರತದಿಂದ ದಕ್ಷಿಣ ಭಾರತದವರೆಗೆ ತಮ್ಮ ಆಳ್ವಿಕೆಯನ್ನು ವಿಸ್ತರಿಸುವುದರ ಮೂಲಕ ಭಾರತದ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸಿದರು.

ಧಾರ್ಮಿಕ ವಾತಾವರಣ

ಧರ್ಮ ಮತ್ತು ರಾಜಕೀಯ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ವಿವಿಧ ಮತಧರ್ಮಗಳಿಗೆ ಆಶ್ರಯ ನೀಡಿದ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ ಮುಂತಾದ ಅರಸು ಮನೆತನಗಳು ಚರಿತ್ರೆಯಲ್ಲಿ ವಿಜೃಂಭಿಸುತ್ತಿವೆ. ಈ ಮನೆತನಗಳಲ್ಲಿ ಜೈನ, ವೈಷ್ಣವ, ವೀರಶೈವ ಮತಗಳು ಒಳಹೊಕ್ಕು ಹೊರಬಂದಂತೆ, ಚಿತ್ರದುರ್ಗ ಪಾಳೇಗಾರರ ಸಮಕಾಲೀನರಾದ ಕೆಳದಿ, ಬೀಳಗಿ, ಸೋದೆ, ಹರಪನಹಳ್ಳಿ, ಹಾಗಲವಾಡಿ, ಮತ್ತೋಡು ಮುಂತಾದ ಸಣ್ಣ ಪುಟ್ಟ ಪಾಳೆಯಪಟ್ಟುಗಳಲ್ಲಿಯೂ

ಈ ಧಾರ್ಮಿಕ ಆಶ್ರಯ ಮುಂದುವರಿಯಿತು. ಆಯಾ ಕಾಲಗಳಲ್ಲಿ ಯಾವ ಧರ್ಮ ರಾಜಾಶ್ರಯವನ್ನು ಪಡೆದಿತ್ತೋ, ಹಾಗೆಯೇ ಜನಾಶ್ರಯವನ್ನೂ ಪಡೆದಿತ್ತು. ಮತ ಧರ್ಮಗಳು ಸಮಾಜವನ್ನು ಪೋಷಿಸುತ್ತಾ ಮತ್ತು ಸಮಾಜದಿಂದ ಪೋಷಿಸಲ್ಪಡುತ್ತಾ ಬೆಳೆದು ಬಂದಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದು.

ವಿಜಯನಗರ ಸಾಮ್ರಾಜ್ಯದ ತಳಹದಿಯ ಮೇಲೆ ಹುಟ್ಟಿಕೊಂಡ ಅನೇಕ ಸಣ್ಣ ಪುಟ್ಟ ಪಾಳೆಯ ಪಟ್ಟುಗಳು ಧಾರ್ಮಿಕ ಕ್ಷೇತ್ರದಲ್ಲಿ ಯಾವ ಬದಲಾವಣೆಯನ್ನು ತರಬಯಸದೆ, ಅವರ ಹಾದಿಯನ್ನೇ ತುಳಿದು ಎಲ್ಲಾ ಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡಿದ್ದಾರೆ. ಉದಾಹರಣೆಗೆ ಚಿತ್ರದುರ್ಗ, ಹರಪನಹಳ್ಳಿ. ಮತ್ತೋಡು, ಬಸವಾಪಟ್ಟಣ, ನಾಯಕನಹಟ್ಟಿ ಮುಂತಾದ ಪಾಳೆಯಪಟ್ಟುಗಳ ಸಂಸ್ಥಾಪಕ ಅರಸರು ಮೂಲತಃ ನಾಯಕ(ಬೇಡ) ಜನಾಂಗದವರಾಗಿದ್ದಾರೆ. ಬೂದಿಹಾಳು ಪಾಳೆಯ ಪಟ್ಟಿನ ಸ್ಥಾಪಕ ಕಾಚನಾಯಕನು ಮೂಲತಃ ಗೊಲ್ಲಜನಾಂಗದವನು. ಸೋದೆ ಅರಸರು, ಕಳಲೆ ದಳವಾಯಿಗಳು, ಮೈಸೂರು ಒಡೆಯರು ವೈದಿಕ ಧರ್ಮದ ಅನುಯಾಯಿಗಳು. ಹೀಗಿದ್ದೂ ಇವರೆಲ್ಲರೂ ೧೭ ಮತ್ತು ೧೮ನೇ ಶತಮಾನದಲ್ಲಿ ವೀರಶೈವ ಧರ್ಮ-ಸಂಸ್ಕೃತಿ-ಸಾಹಿತ್ಯ ಪರಿಚಾರಕರಂತೆ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಕೆಲವರು ಸಂದರ್ಭಗಳ ಪ್ರಭಾವದಿಂದ ಆ ಧರ್ಮದ ಅನುಯಾಯಿಗಳಾದರೆ ಮತ್ತೆ ಕೆಲವರು ತಾತ್ಕಾಲಿಕವಾಗಿ ಬೇರೆ ಧರ್ಮವನ್ನು ಅವಲಂಬಿಸಿದರು. ಈ ರೀತಿಯ ಬದಲಾವಣೆಗಳಿಗೆ ಆಯಾ ಧರ್ಮದ ಬಗೆಗಿದ್ದ ನಂಬಿಕೆ ಒಲವುಗಳಷ್ಟೇ ಕಾರಣವಾಗಿರದೆ ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳು ಇದ್ದಿರಬೇಕು.[೧೦] ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ನಾಯಕ ಅರಸರ ಧಾರ್ಮಿಕ ಪರಿಸರವನ್ನು ಅಧ್ಯಯನ ಮಾಡುವಾಗ, ರಾಜಕೀಯವಾಗಿ ನಾಯಕ ಅರಸರೊಂದಿಗೆ, ಧಾರ್ಮಿಕವಾಗಿ ಶೂನ್ಯಪೀಠದೊಂದಿಗೆ, ಸಾಹಿತ್ಯಕವಾಗಿ ಷಡಕ್ಷರಕವಿಯೊಂದಿಗೆ ಗಾಢವಾದ ಸಂಬಂಧ ಹೊಂದಿರುವ ಮೈಸೂರು ಪ್ರದೇಶದ ಒಟ್ಟು ಧಾರ್ಮಿಕ ವಾತಾವರಣವನ್ನು ಅವಲೋಕಿಸುವುದು ಅನಿವಾರ್ಯವೆನಿಸುತ್ತದೆ.

ಧನಗೂರಿನವರಾದ ಇಮ್ಮಡಿ ಮುರಿಗಾಗುರುಸಿದ್ದ ಮತ್ತು ಮಹಾಕವಿ ಷಡಕ್ಷರಿದೇವ ಇಬ್ಬರೂ ಒಂದೇ ಗುರುಪರಂಪರೆಯ ಆಶ್ರಯದಲ್ಲಿ ಬೆಳೆದು ಬಂದವರು ಹಾಗೂ ಒಂದೇ ವಂಶದವರೆಂಬುದು ಗಮನಾರ್ಹ ಸಂಗತಿ. ಎಳಂದೂರಿನ ಮುದ್ದುರಾಜನ ಅಪೇಕ್ಷೆ ಮೇರೆಗೆ ಷಡಕ್ಷರದೇವ ಅಲ್ಲಿನ ಮಠದ ಪೀಠಾಧಿಪತಿಗಳಾಗುತ್ತಾರೆ. ಎಳಂದೂರು ಆಗ ಒಂದು ಪುಟ್ಟ ನಾಡು. ಮೈಸೂರು ಆಗಲೇ ದೊಡ್ಡದಾಗಿತ್ತು. ಈ ಎರಡು ಮನೆತನಗಳಲ್ಲಿ ಬಹಳ ಕಾಲದಿಂದ ರಕ್ತ ಸಂಬಂಧವೂ ಬೆಳೆದು

ಬಂದಿತ್ತು. ಎಳಂದೂರು(ಹದಿನಾಡು) ರಾಜರು ಮೊದಲು ಜೈನರಾಗಿದ್ದು ಮುದ್ದುರಾಜನಿಗಿಂತಲೂ ಸುಮಾರು ಒಂಬತ್ತು ವರ್ಷಗಳ ಹಿಂದೆ ವೀರಶೈವರಾಗಿದ್ದರು. ಮೈಸೂರು ಒಡೆಯರು ಸಹ ತಮ್ಮ ಮೂಲ ಪುರುಷ ಯದುರಾಯನ ಕಾಲದಿಂದಲೂ ವೀರಶೈವರೇ ಅಗಿದ್ದರು.[೧೧] ಆದರೆ ಚಿಕ್ಕದೇವರಾಜ ಒಡೆಯರ(ಕ್ರಿ.ಶ.೧೬೭೩-೧೭೦೪)ಕಾಲದಲ್ಲಿ ಈ ಮನೆತನದವರು ಶ್ರೀ ವೈಷ್ಣವ ಧರ್ಮವನ್ನು ಅವಲಂಬಿಸಿದರು.[೧೨] ಇದಕ್ಕೆ ಕಾರಣ ಅಂದಿನ ರಾಜಕೀಯ ಪರಿಸ್ಥಿತಿ. ಚಿಕ್ಕದೇವರಾಯನ ಬಾಲ್ಯ ಸ್ನೇಹಿತನೂ, ಸಹಪಾಠಿಯೂ, ಪರಮಾಪ್ತನೂ ಆಗಿದ್ದ ವಿಶಾಲಾಕ್ಷಪಂಡಿತನು ಆಸ್ಥಾನದ ಪ್ರಧಾನಮಂತ್ರಿಯಾದ ಮೇಲೆ ಅರಮನೆಯಲ್ಲಿ ವೀರಶೈವರ ಪ್ರಾಬಲ್ಯವನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದನು. ಆ ಸಮಯದಲ್ಲಿ ಅತ್ಯಂತ ಶ್ರೇಷ್ಠವಾದ ಕೃತಿ ಎಂದು ಮನ್ನಣೆ ಪಡೆದಿದ್ದ ನೇಮಿಚಂದ್ರನ 'ಲೀಲಾವತಿ' ಕಾವ್ಯದ ಮೆರವಣಿಗೆ ಎಳಂದೂರಿನಲ್ಲಿ ಅದ್ದೂರಿಯಿಂದ ನಡೆಸಲಾಗಿತ್ತು. ಆದಕ್ಕಿಂತಲೂ ಶ್ರೇಷ್ಠವಾದ, ರಸವತ್ತಾದ ಕಾವ್ಯ ಬರೆಯುತ್ತೇನೆಂದು ಸವಾಲನ್ನು ಸ್ವೀಕರಿಸಿ ಅದರಂತೆಯೇ 'ರಾಜಶೇಖರವಿಳಾಸ'ವೆಂಬ ಪಾಂಡಿತ್ಯಪೂರ್ಣ ಕೃತಿ ಷಡಕ್ಷರಕವಿಯಿಂದ ರಚನೆಗೊಂಡಾಗ ವಿಶಾಲಾಕ್ಷಪಂಡಿತನು ಮುಖಭಂಗಕ್ಕೀಡಾಗಿದ್ದನು. ಸೇಡು ತೀರಿಸಿಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಿದ್ದ ಈತನು ತೆರಿಗೆ ವಿಷಯದಲ್ಲಿ ದಂಗೆ ಎದ್ದ ಜಂಗಮರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅರಸನನ್ನು ಪ್ರೇರೇಪಿಸುತ್ತಾನೆ. ಚಿಕ್ಕದೇವರಾಜ ಒಡೆಯರು ರೈತರು ಕೊಡಬೇಕಾದ ಭೂ ಕಂದಾಯವನ್ನು ಹೆಚ್ಚಿಸುವುದರ ಜೊತೆಗೆ, ಅನೇಕ ಹೊಸ ತೆರಿಗೆಗಳನ್ನು ವಿಧಿಸುತ್ತಾನೆ. ಇದರಿಂದ ಪ್ರಜೆಗಳ ಮೇಲೆ ತೆರಿಗೆ ಭಾರ ಮಿತಿಮೀರಲು ಅದನ್ನು ವಿರೋಧಿಸಿ ಗಂಭೀರ ಸ್ವರೂಪದ ಕ್ರಾಂತಿಯನ್ನೇ ಮಾಡುತ್ತಾರೆ.[೧೩] ಈ ರೀತಿ ರೈತರು ದಂಗೆಯೇಳಲು ವೀರಶೈವ ಮಠಗಳ ಜಂಗಮರೇ ಕಾರಣರೆಂದು ಮೈಸೂರು ದರ್ಬಾರು ಭಾವಿಸಿ, ಇದಕ್ಕೆ ಪ್ರತೀಕಾರ ಮಾಡಲು ಆಲೋಚಿಸಿ ಷಡಕ್ಷರದೇವನನ್ನು ಸಲಹೆ ಕೇಳಲು ಪ್ರಜೆಗಳ ನ್ಯಾಯಯುತವಾದ ಬೇಡಿಕೆಗೆ ಆತಂಕವನ್ನುಂಟು ಮಾಡುವುದು ಯಾರಿಂದಲೂ ಸಾಧ್ಯವಿಲ್ಲ[೧೪] ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

ಚಿಕ್ಕದೇವರಾಜನ ಆಪ್ತರಾಗಿದ್ದ ತೆರಕಣಾಂಬಿಯ ಚಿಕ್ಕುಪಾಧ್ಯಾಯ, ತಿರುಮಲಾರ್ಯ ಮತ್ತು ಈತನ ಸಹೋದರ ಸಿಂಗರಾರ್ಯ ಇವರುಗಳು ಇದೇ ಸಂಧರ್ಭವನ್ನು ಉಪಯೋಗಿಸಿಕೊಂಡು, ಅನುವಂಶೀಕವಾಗಿ ವೀರಶೈವ ಧರ್ಮದ ಬಗ್ಗೆ ಇದ್ದ ಒಡೆಯರ ನಿಷ್ಠೆ, ಭಕ್ತಿ, ಶ್ರದ್ಧೆ, ವಿಶ್ವಾಸಗಳು ಕಡಿಮೆಯಾದೊಡನೆ, ಅರಸನ ಒಲವನ್ನು ವೈಷ್ಣವ ಧರ್ಮದ ಕಡೆಗೆ ಹೊರಳಿಸುವಲ್ಲಿ ಯಶಸ್ವಿಯಾದರು.[೧೫]

ಮೊದಲೇ ಪ್ರತೀಕಾರ ಮಾಡಲು ಆಲೋಚಿಸಿದ್ದ ಸರಕಾರ ನಂಜನಗೂಡಿನಲ್ಲಿ ಜಂಗಮರ ಅನ್ನಸಂತರ್ಪಣೆ ಇಟ್ಟುಕೊಂಡು ಒಬ್ಬೊಬ್ಬ ಜಂಗಮನಿಗೆ ದಕ್ಷಿಣೆ, ತಾಂಬೂಲವನ್ನು ಕೊಟ್ಟು, ಅತಿಥಿ ಬಿಡಾರದ ಹಿಂದುಗಡೆಯ ಬಾಗಿಲನ್ನು ದಾಟಿ ಹೋಗುವಂತೆ ಏರ್ಪಾಡು ಮಾಡಿದರು. ಹಿತ್ತಲಿನಲ್ಲಿ ದೊಡ್ಡದಾದ ಕಂದಕವನ್ನು ತೋಡಿಸಿ ಅಲ್ಲೇ ಕಟುಕರನ್ನಿಟ್ಟು ಜಂಗಮರ ರುಂಡಗಳನ್ನು ಕತ್ತರಿಸಿ, ದೇಹ ಸಹಿತ ಕಂದಕದಲ್ಲಿ ದೂಡಿದರು. ಹೀಗೆ ಆ ದಿನ ೪೦೦ ಜನ ಜಂಗಮರ ಭೀಕರ ಕೊಲೆಯಾಯಿತು.[೧೬] ಈ ಭೀಕರ ಘಟನೆಗೆ ವಿಶಾಲಾಕ್ಷಪಂಡಿತನೇ ಕಾರಣನೆಂದು ಅವನನ್ನು ಹತ್ಯೆಗೈಯ್ಯಲಾಯಿತು. ಹೀಗೆ ರಾಜಪ್ರಭುತ್ವದ ಕೆಲ ಉಪಕ್ರಮಗಳು ಮತಾಂತರಕ್ಕೆ ಕಾರಣವಾಗಿಯೂ ಪರಿಣಮಿಸಿದವು.

ಎಡೆಯೂರು ಸಿದ್ಧಲಿಂಗೇಶ್ವರರು ಅಧಿಪತಿಯಾಗಿದ್ದ ಚಾಮರಾಜನಗರ ತಾಲೂಕಿನ ಹರದನಹಳ್ಳಿಯಲ್ಲಿ ಅತ್ಯಂತ ಪ್ರಾಚೀನವಾದ ಶೂನ್ಯಸಿಂಹಾಸನ ಪರಂಪರೆಯ ವಿರಕ್ತಮಠವೊಂದು ಚಿಕ್ಕದೇವರಾಯನ ಕಾಲದಲ್ಲಿ ಅತ್ಯಂತ ಕೀರ್ತಿ ಪ್ರತಿಷ್ಠೆಗಳಿಂದ ಕೂಡಿದ್ದಿತು. ರಾಜನು ಕ್ರಿ.ಶ.೧೬೭೫ರಲ್ಲಿ ಈ ಮಠವನ್ನು ಹಾಳುಗೆಡವಿಸಿ, ಪಕ್ಕದಲ್ಲಿಯೇ ಗೋಪಾಲಕೃಷ್ಣಸ್ವಾಮಿಯ ದೇವಾಲಯವನ್ನು ಕಟ್ಟಿಸಿದನು. ವೀರಶೈವ ಧರ್ಮ ಸಂಕೇತಗಳಿಂದ ಕೂಡಿರುವ ಅಲ್ಲಿಯ ಮಠದ ಕಲ್ಲುಕಂಬಗಳೂ, ಗೋಡೆಯ ಕಂಬಗಳೂ ಈಗಲೂ ಈ ವೈಷ್ಣವ ದೇವಾಲಯದಲ್ಲಿ ಕಂಡುಬರುತ್ತವೆ. ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಸುಮಾರು ೭೦೦ ವೀರಶೈವ ಮಠಗಳನ್ನು ನೆಲಸಮಗೊಳಿಸಿದರು ಎಂಬುದು ಚರಿತ್ರೆಯಲ್ಲಿ ಉಲ್ಲೇಖವಾಗಿದೆ.[೧೭] ರಾಜನ ಇಂತಹ ಕ್ರೂರವಾದ ಕೃತ್ಯಗಳಿಂದ ಬೇಸತ್ತ ವೀರಶೈವ ಜನಾಂಗದವರು ಆಡಳಿತದಲ್ಲಿ ಅಸಹಕಾರ ತೋರಿಸಿದಾಗ, ಕವಿ ಷಡಕ್ಷರದೇವನನ್ನು ಅರಸ ಬಳಸಿಕೊಂಡ ಬಗೆಗೆ ದೇವಚಂದ್ರ ತನ್ನ 'ರಾಜಾವಳಿಕಥಾಸಾರ'ದಲ್ಲಿ ಪ್ರಸ್ತಾಪಿಸಿಸುತ್ತಾ "..........ಅಂತಃಪುರ ಜನ ಪ್ರೇರಣೆಯಿಂ ಷಡಕ್ಷರಿಯಂ ಪ್ರಶಂಸೆಗೆಯಿಸಿ, ವಿದ್ಯಾನಗರಿಯಿಂ ಮಹಿಸೂರಂ ಸೇರಿದಾರಭ್ಯ ಜನರು ಶಿವಭಕ್ತ ಜಂಗಮ ಶಿಷ್ಯರಾಗಿರ್ದರ್ ....." ಎಂದು ರಾಜನು ಹೇಳಿಕೊಂಡ ಬಗೆಗೆ ಬರೆದಿದ್ದಾನೆ. ಪ್ರಬಲವಾಗಿದ್ದ ವೀರಶೈವ ಸಮುದಾಯನ್ನು ಓಲೈಸುವ ಪ್ರಯತ್ನ ಚಿಕ್ಕದೇವರಾಜ ಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಅಲ್ಲಮಪ್ರಭುವಿನಿಂದ ಆರಂಭವಾದ ಶೂನ್ಯಪೀಠ ಪರಂಪರೆಯು, ತೋಂಟದ ಸಿದ್ದಲಿಂಗಯತಿಗಳ ಶಿಷ್ಯ-ಪ್ರಶಿಷ್ಯರಿಂದ ಕೇವಲ ಮೈಸೂರು ಪರಿಸರದಲ್ಲಿ ಸುತ್ತಾಡುತ್ತಾ ಚರಪಟ್ಟವಾಗಿದ್ದ ಈ ಪೀಠವು ಚಿತ್ರದುರ್ಗದಲ್ಲಿ ನೆಲೆ ನಿಂತು ಸ್ಥಿರಪಟ್ಟವಾಗಲು ಈ ಮೇಲಿನ ಘಟನೆಗಳು ಕಾರಣವಾಗಿರಬೇಕು.

ಏಕೆಂದರೆ ಮುರಿಗಾತಾರಾವಳಿಯಲ್ಲಿ ನಿರೂಪಿತವಾಗಿರುವ ಮುರಿಗಾಶಾಂತವೀರರ ಮತ್ತು ಚಿಕ್ಕದೇವರಾಜ ಒಡೆಯರ ಗುರು-ಶಿಷ್ಯ ಬಾಂಧವ್ಯ, ಅನಂತರ ರಾಜನ ಮತಾಂತರ, ಮೇಲೆ ನಿರೂಪಿಸಿದ ಧಾರ್ಮಿಕ ವಿಪ್ಲವಗಳು ಹಾಗೂ ನಾಯಕ ಅರಸರ ಗೌರವಾದರಗಳು ಚರಪಟ್ಟವಾಗಿದ್ದ ಶೂನ್ಯಪೀಠವನ್ನು ಸ್ಥಿರಪಟ್ಟವಾಗಿ ಮಾರ್ಪಡಿಸಿ ಚಿತ್ರದುರ್ಗದಲ್ಲಿ ನೆಲೆ ನಿಲ್ಲುವಂತೆ ಮಾಡಿರಬೇಕು.

ವಾಲ್ಮೀಕಿ ಮತ, ಕಾಮಗೇತಿ ವಂಶಸ್ಥರು ಆಗಿದ್ದ ಚಿತ್ರದುರ್ಗದ ಪಾಳೇಯಗಾರರ ಮೂಲ ಮನೆ ದೇವರು ಶ್ರೀವೈಷ್ಣವ ದೈವ ಅಹೋಬಳ ನರಸಿಂಹಸ್ವಾಮಿ ಮತ್ತು ಚಿತ್ರದೇವರು ಕಂಪಳದೇವರು. 'ಕಸ್ತೂರಿ' ಎಂಬ ಅಭಿದಾನವನ್ನು, 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಬಿರುದನ್ನು ಧರಿಸಿಕೊಂಡಿದ್ದ ಇವರು ಮೂಲದಿಂದಲೂ ವೈದಿಕ ಮತ ನಿಷ್ಠೆಯನ್ನು ಹೊಂದಿದ್ದರು ಎಂಬುದಕ್ಕೆ ಶಾಸನ, ಕಾವ್ಯಾದಿಗಳ ಉಲ್ಲೇಖಗಳು ದೊರೆಯುತ್ತವೆ.[೧೮] ಎರಡು ಶತಮಾನಗಳ ಸುದೀರ್ಘ ಆಳ್ವಿಕೆಯ ಅವಧಿಯಲ್ಲಿ ಕಸ್ತೂರಿ ಚಿಕ್ಕಣ್ಣನಾಯಕ (ಕ್ರಿ.ಶ.೧೬೭೫-೧೬೮೭) ಮತ್ತು ಅವನ ಕುಟುಂಬದವರೆಲ್ಲರೂ ವೀರಶೈವ ಧರ್ಮವನ್ನು ಸ್ವೀಕರಿಸಿ, ಸ್ವಲ್ಪಕಾಲ ಮಾತ್ರ ಆ ಧರ್ಮದಲ್ಲಿ ನಡೆದುಕೊಂಡು ಆ ಮೇಲೆ ಒಬ್ಬಳೇ ನಾಗತಿಯನ್ನು ಬಿಟ್ಟು ಉಳಿದ ಎಲ್ಲರೂ ಆ ಧರ್ಮವನ್ನು ತೊರೆದು ತಮ್ಮ ಮೂಲಕ್ಕೆ ಮರಳಿದುದಾಗಿ ತಿಳಿಯುತ್ತದೆ.[೧೯] ಚಿತ್ರದುರ್ಗ ಪ್ರದೇಶವು ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ (ಕ್ರಿ.ಶ.೧೬೮೯ -೧೭೨೧) ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಯಿತು. ಇದಕ್ಕೆ ಕಾರಣ ಶೂನ್ಯಪೀಠದ ಅಂದಿನ ಅಧಿಪತಿಗಳಾಗಿ ಮುರಿಗಾಶಾಂತವೀರರು ಮತ್ತು ಚಿತ್ರದುರ್ಗವನ್ನಾಳುತ್ತಿದ್ದ ಭರಮಣ್ಣನಾಯಕ ಇವರೀರ್ವರ ನಡುವೆ ಏರ್ಪಟ್ಟಿದ್ದ ಗುರು-ಶಿಷ್ಯ ಸಂಬಂಧ, ಈ ಸಂಬಂಧ ಕುರಿತಾಗಿ ಮಹದೇವ ಕವಿಯ 'ಮಹಾಲಿಂಗೇಂದ್ರವಿಜಯ' ಪ್ರಸ್ತುತ ಕವಿಯ 'ಮುರಿಗಾತಾರಾವಳಿ' ಗ್ರಂಥಗಳು ಈ ಕೆಳಗಿನಂತೆ ವಿಷಯವನ್ನು ನಿರೂಪಿಸುತ್ತವೆ.

ಮಹಾಲಿಂಗೇಂದ್ರ ವಿಜಯದ ಪ್ರಕಾರ: ಶಾಂತವೀರರು ತಮ್ಮ ಸಂಚಾರ ಕಾಲದಲ್ಲಿ ಒಮ್ಮೆ ಚಿತ್ರದುರ್ಗ ಪ್ರದೇಶಕ್ಕೆ ಬರಲು, ಅಲ್ಲಿ ದುರ್ಗವನ್ನು ಆಳುತ್ತಿದ್ದ ಚಂದ್ರಮೌಳೇಶ್ವರನು ಮಕ್ಕಳಿಲ್ಲದೆ ಕೊರಗುತ್ತಿದ್ದನು. ಶಾಂತವೀರರು ಆ ಕಾಡಿನಲ್ಲಿ ಸಂಚರಿಸುತ್ತಿರಲು ದನ ಕಾಯುವ ಹುಡುಗನೊಬ್ಬ ಮರದ ನೆರಳಲ್ಲಿ ನಿದ್ರಿಸುತ್ತಿದ್ದ, ಸ್ವಲ್ಪಹೊತ್ತಿನಲ್ಲಿಯೇ ಮರದ ನೆರಳು ಸರಿದಾಗ, ಬಾಲಕನ ಮುಖದ ಮೇಲೆ ಬಿಸಿಲು ಬೀಳದಂತೆ ದೂರದಲ್ಲಿದ್ದ ಸರ್ಪವೊಂದು ಮುಖದ ಮೇಲೆ ಹೆಡೆಯನ್ನು ಬಿಚ್ಚಿನಿಂತಿತು. ಈ ಘಟನೆಯನ್ನು ಕಣ್ಣಾರೆ ಕಂಡ ಶಾಂತವೀರರು ಆ ಬಾಲಕನನ್ನು ಎಚ್ಚರಿಸಿ ವಿಚಾರಿಸಿದಾಗ ಆತನು

ಬೇಡ ಕುಲದವನೆಂದು ತಿಳಿಯಿತು. ಅದೇ ಸಂದರ್ಭದಲ್ಲಿ ಮಕ್ಕಳಿಲ್ಲದೆ ಕೊರಗುತ್ತಿದ್ದ ಚಂದ್ರಮೌಳೇಶನಿಗೆ ಆ ಹುಡುಗನನ್ನು ಶಾಂತವೀರರು ಒಪ್ಪಿಸಿ, ಮುಂದೆ ಇವನಿಗೆ ದುರ್ಗದ ದೊರೆತನವು ಲಭಿಸುವುದು. ಈತನನ್ನು 'ಬಿಚ್ಚು ಗತ್ತಿ ಬ್ರಹ್ಮನಾಯಕ' ಎಂಬ ಹೆಸರಿನಿಂದ ಕರೆಯಿರಿ ಎಂದು ಆಜ್ಞಾಪಿಸಿದರು. ಅದೇ ರೀತಿ ಈತನೇ ಮುಂದೆ ಬಿಚ್ಚುಗತ್ತಿ ಭರಮಣ್ಣನಾಯಕನಾಗಿ ಪ್ರಸಿದ್ಧಿ ಪಡೆದ ಪಾಳೆಯಗಾರನಾದನು ಎಂದು ತಿಳಿದುಬರುತ್ತದೆ.

ಆದರೆ ಇಮ್ಮಡಿ ಮುರಿಗಾಗುರುಸಿದ್ಧರು ರಚಿಸಿರುವ 'ಮುರಿಗಾತಾರಾವಳಿ' ಯಲ್ಲಿ ಇವರಿಬ್ಬರ ನಡುವಿನ ಸಂಬಂಧವನ್ನು ಹೀಗೆ ವಿವರಿಸುತ್ತಾರೆ. ದೇಶಸಂಚಾರ ಕೈಗೊಂಡ ಮುರಿಗಾ ಶಾಂತವೀರರು ಒಂದು ವರುಷ ಕಾಲ ಸೋದೆಯ ಸದಾಶಿವರಾಯನ ಅರಮನೆಯಲ್ಲಿ ಬಿಡಾರ ಮಾಡಿದ್ದಾಗ, ಭರಮಣ್ಣನಾಯಕನು ಅಲ್ಲಿಗೆ ಉಡುಗೊರೆ ಸಹಿತ ಭಿನ್ನವತ್ತಳೆಯನ್ನು ಕಳುಹಿಸಿ ಚಿತ್ರದುರ್ಗಕ್ಕೆ ಆಗಮಿಸಬೇಕೆಂದು ಆಹ್ವಾನ ನೀಡಿದ್ದನು. ಅದನ್ನು ಅಂಗೀಕರಿಸಿದ ಶಾಂತವೀರರು ತನ್ನಲ್ಲೇ ಉಳಿಯಬೇಕೆಂದು ಅಂಗಲಾಚಿದ ಸದಾಶಿವರಾಯನನ್ನು ಸಂತೈಸಿ, ಸೋದೆಯಿಂದ ತೆರಳಿ ಗೊತ್ತಳಪುರ, ಹಾವನೂರು, ಹರಿಹರ, ಬೇತೂರುಗಳ ಮಾರ್ಗವಾಗಿ ಅಣಜಿಯನ್ನು ಸೇರಿ. ಅಲ್ಲಿ ವಿಶ್ರಾಂತಿ ಪಡೆಯುತ್ತಿರಲು ಆಗ ಭರಮಣ್ಣನಾಯಕನು ಮತ್ತೊಮ್ಮೆ ಸ್ವಾಗತ ಕೋರಿ ವಿಜ್ಞಾಪನಾ ಪತ್ರವನ್ನು ಕಳುಹಿಸಿದನು. ಅದನ್ನು ಒಪ್ಪಿಕೊಂಡು ಶಾಂತವೀರರು ಚಿತ್ರದುರ್ಗಕ್ಕೆ ತೆರಳುವ ಮಾರ್ಗದಲ್ಲಿ ಕಳ್ಳಹುಣಿಸೆ ಗ್ರಾಮದ ದೇವನಗೌಡನ ಮನೆಯಲ್ಲಿ ತಂಗಿದ್ದರು. ಇದನ್ನು ಅರಿತ ಭರಮಣ್ಣನಾಯಕ ತನ್ನ ಪರಿವಾರ ಸಮೇತ ಹೋಗಿ ಭಕ್ತಿಯಿಂದ ಗುರುಗಳನ್ನು ಪಾಲಕಿಯಲ್ಲಿ ಮೆರವಣಿಗೆ ಸಹಿತ ದುರ್ಗಕ್ಕೆ ಕರೆತಂದನು. ಈ ಸಂಬಂಧವು ಅನಿರೀಕ್ಷಿತವೇನಲ್ಲ. ಎಲ್ಲವೂ ಉದ್ದೇಶಪೂರ್ವಕವಾಗಿಯೇ ನಡೆದ ಸನ್ನಿವೇಶ, ಅಲ್ಲದೆ ಭರಮಣ್ಣನಾಯಕನು ವೀರಶೈವ ಧರ್ಮವನ್ನು ಸ್ವೀಕರಿಸಬೇಕೆಂಬ ಅಭೀಪ್ಸೆಯೂ ಸಹ ಶಾಂತವೀರರನ್ನು ದುರ್ಗಕ್ಕೆ ಕರೆತರಲು ಕಾರಣವಾಗಿರಬೇಕೆಂಬುದು ಈ ಕಾವ್ಯದಲ್ಲಿ ವ್ಯಕ್ತವಾಗುತ್ತದೆ.

ಟಿ.ಎಸ್. ಗಂಡುಗಲಿಯವರ ಪ್ರಕಾರ : ಚಿತ್ರದುರ್ಗವನ್ನಾಳಿದ ಚಿಕ್ಕಣ್ಣನಾಯಕರ ಸಹೋದರ ಚಿಕ್ಕಮದಕರಿನಾಯಕ ಈತನ ಪುತ್ರ ಬಿಚ್ಚುಗತ್ತಿ ಭರಮಣ್ಣನಾಯಕನು ನಿಜವಾದ ಉತ್ತರಾಧಿಕಾರಿ ಆಗಬೇಕಾಗಿದ್ದರೂ, ದಳವಾಯಿ ಮುದ್ದಣ್ಣನು ತನ್ನ ಕೈಗೊಂಬೆಯಾಗಿದ್ದ ಚಿಕ್ಕಮದಕರಿಯ ಸಹೋದರ ದೊಣ್ಣೆರಂಗಪ್ಪನಾಯಕನಿಗೆ ಪಟ್ಟ ಕಟ್ಟಿ, ಉಳಿದ ರಾಜವಂಶೀಕರನ್ನು, ದೇಶಭಕ್ತರನ್ನು, ರಾಜನಿಷ್ಠ ದಳವಾಯಿಗಳನ್ನು ಕುತಂತ್ರದಿಂದ ನಾಶಮಾಡಲು ಪ್ರಯತ್ನಿಸಿದನು. ಇದನ್ನರಿತ ಭರಮಣ್ಣನಾಯಕ

ವೇಷ ಮರೆಸಿಕೊಂಡು ಬಿಳಿಚೋಡು ಅರಣ್ಯ ಪ್ರದೇಶದಲ್ಲಿ ದನಗಾಹಿಯಂತೆ ತಿರುಗುತ್ತಿದ್ದಾಗ, ಒಂದು ದಿನ(ಶುಕ್ಲ ಸಂವತ್ಸರದ ಜೇಷ್ಠ ಶುದ್ಧ ಪ್ರಥಮ ಏಕಾದಶಿಯಂದು) ತಮಿಳುನಾಡಿನ ಕಡೆಯಿಂದ ಬಂದ ಶಿವಯೋಗಿಗಳೊಬ್ಬರ (ಶಾಂತವೀರರು) ಕಾಲಿಗೆ ನಮಸ್ಕರಿಸಿ, ತನ್ನ ದುರ್ವಿಧಿಯನ್ನು ಅರಿಕೆ ಮಾಡಿಕೊಂಡ. ಭಕ್ತನ ಸ್ಥಿತಿಯನ್ನು ಅರಿತುಕೊಂಡ ಶಾಂತವೀರರು ದುರ್ಗಕ್ಕೆ ಬಂದು, ದಳವಾಯಿ ಮುದ್ದಣ್ಣನ ಧರ್ಮಪತ್ನಿ ಸಾಧ್ವಿ ಮಲ್ಲಮ್ಮನ ಮೂಲಕ ಆ ಪರಿಸ್ಥಿತಿಯನ್ನು ವಿವರಿಸಿ ಹೇಳಿದರು. ಆದರೆ ಅದು ಫಲಕಾರಿಯಾಗಲಿಲ್ಲ. ಆಗ ಮುದ್ದಣ್ಣನ ಮುಖ್ಯ ವಿರೋಧಿಗಳಾಗಿದ್ದ ಅಗ್ನಿಕನ್ನೆ ಗಿರಿಜ, ದಳವಾಯಿ ಭರಮಣ್ಣನಾಯಕ ಮೊದಲಾದವರಿಗೆ ದಂಗೆ ಏಳಲು ಸೂಚನೆ ಕೊಡುತ್ತಾರೆ. ಆ ಪ್ರಕಾರ ಜರುಗಿದ ಕ್ರಾಂತಿಯಲ್ಲಿ ದಳವಾಯಿ ಮುದ್ದಣ್ಣನು ಹತನಾಗುತ್ತಾನೆ. ಆಗ ಕ್ರಿ.ಶ.೧೬೮೯ರಲ್ಲಿ ಭರಮಣ್ಣನಾಯಕನಿಗೆ ಪಟ್ಟಕಟ್ಟುತ್ತಾರೆ.[೨೦] ಈ ಮೂವರು ವಿವರಿಸುವ ಘಟನೆಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭರಮಣ್ಣನಾಯಕನಿಗೆ ಪಾಳೇಗಾರಿಕೆಯ ಪಟ್ಟ ದೊರಕುವಲ್ಲಿ ಶಾಂತವೀರ ಪಾತ್ರ ಬಹಳ ಪ್ರಮುಖವಾಗಿತ್ತು. ಮುಖ್ಯ ಕಾರಣರು ಎಂಬುದನ್ನು ತಿಳಿಸುತ್ತವೆ. ಹೀಗಾಗಿ ವೈಷ್ಣವ ಮತಾವಲಂಬಿಗಳಾಗಿದ್ದ ಚಿತ್ರದುರ್ಗದ ಪಾಳೆಯಗಾರರಲ್ಲಿ ಭರಮಣ್ಣನಾಯಕನು ವೀರಶೈವ ಮತಾವಲಂಬಿಯಾದನು. ಅಷ್ಟೇ ಅಲ್ಲದೆ ಇವನ ಸಮಕಾಲೀನ ಪಾಳೆಯಗಾರರಾಗಿದ್ದ ಹರಪನಹಳ್ಳಿಯ ಬಸವಂತನಾಯಕ(ಕ್ರಿ.ಶ.೧೬೬೦-೧೭೦೫)[೨೧], ಮತ್ತೋಡಿನ ಹಾಲಪ್ಪನಾಯಕ,[೨೨] ಹಾಗಲವಾಡಿಯ ಭೈರವನಾಯಕ(ಕ್ರಿ.ಶ.೧೫೪೯-೧೫೭೮)[೨೩] ಮೊದಲಾದ ಅನೇಕ ನಾಯಕ ಅರಸರು ವೀರಶೈವ ಧರ್ಮಾನುಯಾಯಿಗಳಾದರು. ಇವರ ಧರ್ಮಾಂತರ ಕುರಿತಂತೆ ಎಂ.ಎಂ.ಕಲಬುರ್ಗಿಯವರು ಹೀಗೆ ಹೇಳುತ್ತಾರೆ "ಮಧ್ಯಕಾಲೀನ ಪಾಳೆಯಗಾರರೆಲ್ಲ ತಮ್ಮ ಜಾತಿಯನ್ನು ಉದಾತ್ತೀಕರಿಸಿ ಕೊಳ್ಳುವುದಕ್ಕಾಗಿ ಸಾಮಾನ್ಯವಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿದ್ದಾರೆ. ಅಂದಿನ ಸಂದರ್ಭದಲ್ಲಿ ಪ್ರತಿಷ್ಠಿತ ಧರ್ಮಗಳಾದ ವೈಷ್ಣವ, ಜೈನರುಗಳಲ್ಲಿ ಈ ಅವಕಾಶವಿರಲಿಲ್ಲ, ಜಾತಿಯನ್ನು ಉದಾತ್ತೀಕರಿಸಿ ಕೊಳ್ಳಬೇಕೆನ್ನುವವರಿಗೆ ಏಕೈಕ ಮುಕ್ತದ್ವಾರ ವೀರಶೈವವೇ ಆಗಿದ್ದಿತು."[೨೪] ಈ ಹಿನ್ನೆಲೆಯಲ್ಲಿ ಭರಮಣ್ಣನಾಯಕನೂ ವೀರಶೈವ ಧರ್ಮವನ್ನು ಸ್ವೀಕರಿಸಿರಬೇಕು. ಆದರೂ ಈತ ಅನ್ಯಧರ್ಮಿಯರಿಗೂ ಸಮಾನ ಸ್ಥಾನಮಾನಗಳನ್ನು ನೀಡಿದ್ದನೆಂಬುದಕ್ಕೆ ಅನೇಕ ಆಧಾರಗಳಿವೆ.

ಕ್ರಿ.ಶ.೧೬೪೦ನೆಯ ವಿಳಂಬ ಸಂವತ್ಸರದಲ್ಲಿ ವಿಶ್ವಾಮಿತ್ರ ಗೋತ್ರದ ಸೂರಪ್ಪನಾಯಕ ರಾಮಣ್ಣ ನಾಯಕರಿಗೆ ಪುಣ್ಯವಾಗಲೆಂದು ನಾವು ಆಳುವ ಬೇತೂರು ಸೀಮೆಯೊಳಗಣ 'ಚಿಕ್ಕಬೂದಿಹಾಳು' ಎಂಬ ಗ್ರಾಮವನ್ನು ಕೃಷ್ಣಾರ್ಪಣವಾಗಿ ಕೊಟ್ಟಿದ್ದೇವೆಂದು ತಿಳಿಸಲಾಗಿದೆ.[೨೫] ಕ್ರಿ.ಶ.೧೬೯೪ನೆಯ

ವರ್ಷದಲ್ಲಿ ಬಿಚ್ಚುಗತ್ತಿಭರಮಣ್ಣನಾಯಕನು ಶ್ರೀರಂಗನಾಥಸ್ವಾಮಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಪುನಃ ವಿಗ್ರಹ ಪ್ರತಿಷ್ಠಾಪನೆ ಮಾಡಿಸಿ 'ಎಮ್ಮೆಹಳ್ಳಿ' ಗ್ರಾಮವನ್ನು ಉಂಬಳಿ ನೀಡಿದ ಬಗ್ಗೆ ವಿವರವಿದೆ.[೨೬] ಕ್ರಿ.ಶ.೧೭೧೬ರಲ್ಲಿ ವ್ಯಾಸರಾಯ ಮಠದ ರಘುನಾಥತೀರ್ಥಸ್ವಾಮಿಗಳಿಗೆ 'ದ್ಯಾಮೆನ' ಹಳ್ಳಿಯನ್ನು ಭರಮಣ್ಣನಾಯಕನು ಭೂ ಮಾನ್ಯವಾಗಿ ನೀಡಿದರೆಂದು ತಿಳಿದುಬರುತ್ತದೆ.[೨೭] ಶಾಲಿವಾಹನ ಶಕ ವರ್ಷ ೧೬೩೦ರಲ್ಲಿ ಭರಮಣ್ಣನಾಯಕನು ಸಿಂಗಣ್ಣ ಜೋಯಿಸರ ಪುತ್ರರಾದ ಕಾಸಿವಾಸಿ ನಾರಾಯಣಭಟ್ಟರು, ಶಿವಭಟ್ಟರು ಈ ಮೂರು ಜನಕ್ಕೂ ಬರೆಸಿಕೊಟ್ಟ ಗ್ರಾಮ ಶಾಸನ ಪತ್ರದ ಕ್ರಮವೆಂದರೆ ನಮ್ಮ ಹಿರಿಯರುಗಳಿಗೆ ಪುಣ್ಯವಾಗಲೆಂದು ಕೊಡನೂರು ಸೀಮೆಯೊಳಗಣ 'ಕೋಲುಕುಂಟೆ' ಎಂಬ ಗ್ರಾಮವನ್ನು ದಾನವಾಗಿ ನೀಡಿ ಇದರಲ್ಲಿ ಬರುವ ಕಾಡಾರಂಭ, ನೀರಾರಂಭ, ನಿಧಿ, ನಿಕ್ಷೇಪ ಎಲ್ಲವೂ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವುದೆಂದು ತಿಳಿಸಲಾಗಿದೆ.[೨೮]

ಚಿತ್ರದುರ್ಗ ನಗರ ಮತ್ತು ಜಿಲ್ಲೆಯ ಹಲವೆಡೆಯಲ್ಲಿ ಕಂಡುಬರುವ ಉಜ್ಜಿನಿಮಠ, ಐಯ್ಯಣ್ಣನವರ ಮಠ, ಮಧ್ವಾಚಾರ್ಯರ ಮಠ, ಸತ್ಯಬೋಧಾಚಾರ್ಯರಮಠ, ತಾತಾಚಾರ್ಯರ ಮಠ, ನೆಲಗವಿಮಠ, ಕುಣಕುಪ್ಪೆ ಮಠ, ಜಗಲೂರು ವಿರಕ್ತಮಠ[೨೯] ಇಂತಹ ಹಲವಾರು ಮಠಗಳು ಈ ಅರಸರ ಆಡಳಿತದ ಕಾಲದಲ್ಲಿ ನಿರ್ಮಾಣಗೊಂಡು, ಪೋಷಿಸಲ್ಪಟ್ಟಿರುವುದನ್ನು ಗಮನಿಸಿದರೆ ನಾಯಕ ಅರಸರ ಧಾರ್ಮಿಕ ಹಿನ್ನೆಲೆ ಏನೇ ಇದ್ದರೂ ವಿವಿಧ ಧರ್ಮೀಯರನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು ಎಂಬುದಕ್ಕೆ ಈ ಮೇಲ್ಕಾಣಿಸಿದ ಉದಾಹರಣೆಗಳು ನಿದರ್ಶನಗಳಾಗಿವೆ.

ಒಟ್ಟಾರೆಯಾಗಿ ಕರ್ನಾಟಕದಲ್ಲಿ ಹದಿನೆಂಟನೆಯ ಶತಮಾನದ ರಾಜಕೀಯ ಪರಿಸ್ಥಿತಿ ಹೇಗೆ ವಿಪ್ಲವತೆಯಿಂದ ಕೂಡಿತ್ತೋ, ಅದೇ ರೀತಿ ಧಾರ್ಮಿಕ ಪರಿಸ್ಥಿತಿಯೂ ಸಹ ಆತಂಕದ ಕ್ಷಣಗಳನ್ನು ಎದುರಿಸುತ್ತಿತ್ತು. ಒಂದೆಡೆ ಸಾಂಪ್ರದಾಯಿಕವಾಗಿ ಜೈನ, ವೈಷ್ಣವ, ವೀರಶೈವ ಎಂದು ಧರ್ಮ ಸಂಘರ್ಷಗಳು ಉಂಟಾಗುತ್ತಿದ್ದರೆ, ಮತ್ತೊಂದು ಕಡೆ ಮುಸಲ್ಮಾನರು, ಬ್ರಿಟೀಷರು ತಮ್ಮ ತಮ್ಮ ಧರ್ಮಗಳನ್ನು ಪ್ರಚಾರ ಮಾಡುತ್ತ ಮತಾಂತರಗೊಳಿಸುವ ಕೆಲಸ ಮಾಡುತ್ತಿದ್ದರು. ಕೆಳದಿಯ ಶಿವಪ್ಪನಾಯಕನು ತನ್ನ ರಾಜ್ಯದಲ್ಲಿ ಕ್ರೈಸ್ತರಿಗೆ ಉಪದೇಶ ನೀಡುವ ಮತ್ತು ಮತಾಂತರಗೊಳಿಸುವ ಅವಕಾಶ ನೀಡಿದ್ದರಿಂದ ೩೦,೦೦೦ ಜನ ಕ್ರೈಸ್ತರು ಆ ರಾಜ್ಯದಲ್ಲಿ ಇದ್ದರು.[೩೦] ಈ ಉಲ್ಲೇಖವು ಅಂದಿನ ಧಾರ್ಮಿಕ ಪಲ್ಲಟತೆಯನ್ನು ತಿಳಿಸುತ್ತದೆ. ಉತ್ತರಕರ್ನಾಟಕ ಭಾಗದಲ್ಲಿ ಬಿಜಾಪುರದ ಆದಿಲ್ ಷಾಹಿಗಳು, ಸುಲ್ತಾನರು, ಹೈದರಾಬಾದಿನ ನಿಜಾಂ ಅರಸರು, ಕರಾವಳಿಯ ಕಡೆ ಕ್ರೈಸ್ತ ಮಿಷನರಿಗಳು

ಇವರೆಲ್ಲರ ಒತ್ತಡದಲ್ಲಿ ಸಿಲುಕಿದ ಜನರಿಗೆ, ಸದಾ ಒಳ ಜಗಳಗಳಲ್ಲೇ ಕಾಲ ಕಳೆಯುತ್ತಿದ್ದ ದೇಶೀಯ ಅರಸರಿಗೆ ಯಾವ ಧರ್ಮವನ್ನೂ ಪುರಸ್ಕರಿಸಿ, ಪೋಷಿಸಿ ಬೆಳೆಸುವ ಸಮಾಧಾನವಾಗಲಿ, ಸಮಯವಾಗಲಿ ಅವರಿಗೆ ಇರಲಿಲ್ಲ. ಕಾರಣ ಈ ಶತಮಾನದಲ್ಲಿ ಯಾವ ಧರ್ಮವೂ ಉಜ್ವಲವಾಗಿ ಬೆಳಗಲಿಲ್ಲ.

ಸಾಹಿತ್ಯಿಕ ವಾತಾವರಣ

ಇಮ್ಮಡಿ ಮುರಿಗಾಗುರುಸಿದ್ಧರ ಸಾಹಿತ್ಯಿಕ ಪರಿಸರವು ೧೭ ಮತ್ತು ೧೮ನೇ ಶತಮಾನದ ಅಂತ್ಯ ಹಾಗೂ ಆದಿ ಭಾಗವನ್ನು ಒಳಗೊಂಡಿದೆ. ಹಾಗೆಂದು ಸಾಹಿತ್ಯ ಸೃಷ್ಟಿಯ ಒಲವು ನಿಲುವುಗಳನ್ನು ಅರಿಯಲು ಎರಡು ಶತಮಾನಗಳ ಎಲ್ಲಾ ಕವಿ-ಕೃತಿಗಳ ಬಗೆಗೆ ವಿವರವಾದ ವಿವೇಚನೆ ಇಲ್ಲಿ ಸಾಧ್ಯವಿಲ್ಲದಿದ್ದರೂ, ಕೆಲವೊಂದು ವೈಶಿಷ್ಟ್ಯಗಳ ಜೊತೆಗೆ ಪ್ರಮುಖ ಕವಿ-ಕೃತಿಗಳನ್ನು ಹೆಸರಿಸುವುದು ಸಮಂಜಸವೆನಿಸುತ್ತದೆ. ಮೇಲೆ ಅವಲೋಕಿಸಿದಂತೆ ಈ ಶತಮಾನಗಳಲ್ಲಿನ ಕರ್ನಾಟಕದ ಧಾರ್ಮಿಕ, ರಾಜಕೀಯ ಕ್ಷೇತ್ರದ ಅಸ್ಥಿರತೆಗಳು, ಸಾಹಿತ್ಯ ರಚನೆಯ ಮೇಲೆ ಅಲ್ಪಮಟ್ಟಿನ ಪ್ರಭಾವ ಬೀರಿದರೂ ಸಾಹಿತ್ಯ ಸೃಷ್ಟಿಯ ಪ್ರವಾಹವೇನೂ ನಿಂತಿರಲಿಲ್ಲ. ಯಥಾ ಪ್ರಕಾರ ಕೆಲವು ಕವಿಗಳು ಸ್ವತಂತ್ರವಾಗಿ ಜೀವಿಸಿ, ಮಠಮಾನ್ಯಗಳ ಧರ್ಮಾಧಿಕಾರಿಗಳಾಗಿ, ಸಿಂಹಾಸನಗಳಲ್ಲಿ ರಾಜರಾಗಿ, ಆಸ್ಥಾನಗಳಲ್ಲಿ ರಾಜ ಪೋಷಿತರಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ವಿಜಯನಗರ ಅರಸರ ನಂತರ ಕಲೆ-ಸಾಹಿತ್ಯಗಳನ್ನು ಪೋಷಿಸಿ, ಉಳಿಸಿ, ಬೆಳೆಸುವ ಜವಾಬ್ದಾರಿಯನ್ನು ಹೊತ್ತ ರಾಜ ಮನೆತನಗಳೆಂದರೆ ಮೈಸೂರಿನ ಒಡೆಯರು ಮತ್ತು ಕೆಳದಿ ಅರಸರು. ಇನ್ನುಳಿದ ಬಹುತೇಕ ಸಮಕಾಲೀನ ಅರಸರು ತಮ್ಮ ಶಕ್ತಿ ಸಾಮರ್ಥ್ಯಗಳೆಲ್ಲವನ್ನು ಯುದ್ಧಕ್ಕೆ ಮೀಸಲಿರಿಸಿದ್ದರು. ಈ ಕಾಲಕ್ಕಾಗಲೇ ಶಿವಶರಣರ ಹಾಗೂ ವೈಷ್ಣವ ದಾಸರ ಪ್ರಭಾವಕ್ಕೆ ಒಳಗಾಗಿದ್ದ ಕನ್ನಡ ಸಾಹಿತ್ಯಕ್ಕೆ ಯಾವುದೇ ರಾಜಾಶ್ರಯವನ್ನಾಗಲಿ ಅಥವಾ ಧರ್ಮಾಶ್ರಯವನ್ನಾಗಲೀ ಬೇಡುವ ಪರಿಸ್ಥಿತಿ ಇರಲಿಲ್ಲ. ಸಾಹಿತ್ಯ ಸೃಷ್ಟಿಯು ಸ್ವತಂತ್ರವಾಗಿ ನಡೆಯುತ್ತಿತ್ತು ಎಂಬುದಕ್ಕೆ ಕವಿಚರಿತೆಕಾರರು ಪತ್ತೆ ಹಚ್ಚಿರುವ ಹದಿನೇಳನೇ ಶತಮಾನದಲ್ಲಿ ೧೩೦ ಕವಿಗಳಿಂದ ರಚನೆಗೊಂಡ ೧೯೦ ಕೃತಿಗಳು[೩೧], ಹದಿನೆಂಟನೆಯ ಶತಮಾನದಲ್ಲಿ ೧೨೬ ಕವಿಗಳಿಂದ ರಚನೆಗೊಂಡ ೨೦೨ ಕೃತಿಗಳೇ[೩೨] ಸಾಕ್ಷಿಯಾಗಿವೆ. ಈ ಸಂಖ್ಯೆ ಯನ್ನು ಹೊರತು ಪಡಿಸಿ ಕವಿಚರಿತೆಕಾರರ ಗಮನಕ್ಕೆ ಇನ್ನೂ ಎಷ್ಟೋ ಕವಿ ಕೃತಿಗಳು ಇದ್ದಬಗ್ಗೆ ಇತ್ತೀಚಿನ ಅಧ್ಯಯನಗಳಿಂದ ತಿಳಿದುಬರುತ್ತದೆ.

ಎಳಂದೂರಿನ(ಹದಿನಾಡು) ಅರಸರಿಗೂ ಮತ್ತು ಮೈಸೂರಿನ ಅರಸರಿಗೂ ನಡುವೆ ನಡೆದಿದ್ದ ರಕ್ತ ಸಂಬಂಧಗಳು ಸೀಮಾಪುರುಷ ಷಡಕ್ಷರಿದೇವನನ್ನು ಮೈಸೂರು ಅರಮನೆಗೆ ಕರೆತರುತ್ತವೆ. ಚಿಕ್ಕದೇವರಾಜನ ತಾಯಿ ಅಮೃತಾಂಬೆಯ ತವರು ಮನೆ ಎಳಂದೂರು ಆಗಿತ್ತು. ಹೀಗಾಗಿ ಅಲ್ಲಿಯ ಮನೆತನದ ಗುರುವಾಗಿದ್ದ ಷಡಕ್ಷರಿದೇವ ಮತ್ತು ಅವರ ಸಹಪಾಠಿಗಳನ್ನು ಕುರಿತು ದೇವಚಂದ್ರನು "…..ಷಡಕ್ಷರಿಯು ತತ್ಪುರದ ಜೈನ ಬ್ರಾಹ್ಮಣನಪ್ಪ ಬೊಮ್ಮರಸನ ಪುತ್ರ ವಿಶಾಲಾಕ್ಷಪಂಡಿತನೂ ತಿರುಮಲಾರ್ಯನು ಮಿಂತು ಮೂವರುಂ ಸಹಾಧ್ಯಾಯಿಗಳಾಗಿ ನಿಘಂಟು ವ್ಯಾಕರಣ ಕಾವ್ಯ ನಾಟಕ ಛಂದೋಲಂಕಾರ ತರ್ಕ ಮೊದಲಾದ ವಿದ್ಯೆಯಲ್ಲಮಂ ಕಲಿತು ತಂತಮ್ಮ ಮತ ಪ್ರಮೇಯಂಗಳೊಳು ಶಿಖಾಮಣಿಗಳೆನಿಸಿ ಕವಿ ಗಮಕಿ ವಾದಿ ವಾಗ್ಮಿತ್ವದೊಳು ಅಗ್ರಗಣ್ಯರೆನಿಸಿದರ್ ಅವರೊಳು ಚಿಕ್ಕದೇವರಾಜರಸಂ ಕೋವಿದ ಶಿಖಾಮಣಿಯೆನಿಸಿದಂ ವಿಶಾಲಾಕ್ಷಂ ಸಾಹಿತ್ಯ ಭಾರತಿಯೆನಿಸಿದಂ ಷಡಕ್ಷರಿಯು ಕವಿಶೇಖರನೆನಿಸಿದಂ"[೩೩]. ಇಲ್ಲಿ ಜೈನ ವಿಶಾಲಾಕ್ಷಪಂಡಿತ, ಬ್ರಾಹ್ಮಣ ತಿರುಮಲಾರ್ಯ, ವೀರಶೈವನಾದ ಷಡಕ್ಷರಿದೇವ, ರಾಜನಾದ ಚಿಕ್ಕದೇವರಾಜ ಈ ನಾಲ್ಕೂ ಜನ ಸಹಪಾಠಿಗಳು ಎಂಬ ಅಂಶವನ್ನು ಗಮನಿಸಬೇಕಾಗಿದೆ. ಈ ನಾಲ್ವರು ೧೭ನೇ ಶತಮಾನದ ರಾಜಕೀಯ, ಧಾರ್ಮಿಕ, ಸಾಹಿತ್ಯಿಕರಂಗಗಳಲ್ಲಿ ಪ್ರಭಾವೀ ವ್ಯಕ್ತಿಗಳಾಗಿ ಕಂಡುಬರುತ್ತಾರೆ.

ಸಾಹಿತ್ಯ ಪೋಷಕರಾಗಿ ಸ್ವತಃ ಕವಿಗಳಾಗಿದ್ದ ಚಿಕ್ಕದೇವರಾಜ(ಕ್ರಿ.ಶ.೧೭೦೦)ರು 'ಚಿಕ್ಕದೇವರಾಜ ಭಿನ್ನಪ', 'ಗೀತಗೋಪಾಲ' ಕೃತಿಗಳನ್ನು ರಚಿಸಿದ್ದಾರೆ, ಅವನ ಆಸ್ಥಾನದ ಕವಿಯಾದ ತಿರುಮಲಾರ್ಯ (ಕ್ರಿ.ಶ.೧೭೦೦)ನು 'ಚಿಕ್ಕದೇವರಾಜವಿಜಯ', 'ಚಿಕ್ಕದೇವರಾಜವಂಶಾವಳಿ', 'ಅಪ್ರತಿಮವೀರಚರಿತೆ', ಇತ್ಯಾದಿ ಕೃತಿಗಳು. ಚಿಕ್ಕುಪಾದ್ಯಾಯನ 'ರುಕ್ಮಾಂಗದ ಚರಿತೆ', 'ದಿವ್ಯಸೂರಿ ಚರಿತೆ', 'ಶೇಷ ಧರ್ಮ' ಮುಂತಾದ ೩೦ಕ್ಕೂ ಹೆಚ್ಚು ಕೃತಿಗಳು. ಸಿಂಗರಾರ್ಯನ 'ಮಿತ್ರವಿಂದಾಗೋವಿಂದ' , ಸಂಚಿಹೊನ್ನಮ್ಮನ 'ಹದಿಬದೆಯಧರ್ಮ', ಶೃಂಗಾರಮ್ಮನ 'ಪದ್ಮಿನೀ ಕಲ್ಯಾಣ' ಮೊದಲಾದ ಸಾಂಗತ್ಯ ಕೃತಿಗಳು, ಇವರ ಲ್ಲದೆ ವೇಣುಗೋಪಾಲವರಪ್ರಸಾದ, ಮಲ್ಲಿಕಾರ್ಜುನ, ಚಿದಾನಂದಕವಿ, ತಿಮ್ಮಕವಿ, ಮಲ್ಲರಸ ಮುಂತಾದ ಕವಿಗಳು ಚಿಕ್ಕದೇವರಾಜನ ಆಸ್ಥಾನದಲ್ಲಿದ್ದು ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

ರಾಜಾಶ್ರಯದಿಂದ ಹೊರಗಿದ್ದು ಆರೋಗ್ಯ ಪೂರ್ಣವಾದ ಸ್ಪರ್ಧೆಯನ್ನು ನೀಡುತ್ತಾ ಕನ್ನಡ-ಸಂಸ್ಕೃತ ಭಾಷೆಗಳೆರಡರಲ್ಲಿ ಕೃತಿ ರಚಿಸಿದ ಷಡಕ್ಷರದೇವನು 'ರಾಜಶೇಖರ ವಿಳಾಸ', 'ಬಸವರಾಜ ವಿಜಯ', 'ಶಬರಶಂಕರ ವಿಳಾಸ' ಮುಂತಾದ ಕೃತಿಗಳನ್ನು ಚಂಪೂ ಶೈಲಿಯಲ್ಲಿ ರಚಿಸಿ 'ಉಭಯಕವಿತಾ

ವಿಶಾರದ', 'ಸರಸಜನ ಮಾನಿತ', 'ರಸತ್ಕಲಾನಿಧಿಜ್ಞ', 'ಕವಿಶೇಖರ' ಮೊದಲಾದ ಬಿರುದುಗಳನ್ನು ಪಡೆದನು. 'ಪ್ರಭುದೇವರ ಪುರಾಣ' ರಚಿಸಿದ ಯಳಂದೂರು ಹರೀಶ್ವರ(ಕ್ರಿ.ಶ.೧೬೦೬), ವಿರುಪಾಕ್ಷಕವಿ, ಶಾಂತಲಿಂಗದೇಶಿಕ(ಕ್ರಿ.ಶ.೧೬೫೦), ಸಂಪಾದನೆಯ ಸಿದ್ದಣಾರ್ಯ(ಕ್ರಿ.ಶ.೧೬೦೦), ಕೊಟ್ಟೂರು ಬಸವಲಿಂಗ ಮುಂತಾದವರು ಹದಿನೇಳನೇ ಶತಮಾನದ ಪ್ರಮುಖ ಕವಿಗಳಾಗಿದ್ದಾರೆ.

ಕೆಳದಿ ರಾಜ್ಯದಲ್ಲಿ ರಾಣಿ ಚನ್ನಮ್ಮಾಜಿಯ ದತ್ತು ಪುತ್ರನಾದ ಬಸವರಾಜನು(ಕ್ರಿ.ಶ.೧೬೯೬) ಸ್ವಯಂ ಕವಿಯಾಗಿ 'ಶಿವತತ್ವರತ್ನಾಕರ', 'ಸುಭಾಷಿತಸುರದ್ರುಮ' ಮತ್ತು 'ಸೂಕ್ತಿ ಸುಧಾರ್ಣವ' ಮೊದಲಾದ ಗ್ರಂಥಗಳನ್ನು ರಚಿಸಿದ್ದಾನೆ. ಇವನಿಗೆ ಹಿಂದಿನವನಾದ ವೆಂಕಟಪ್ಪ ನಾಯಕ(ಕ್ರಿ.ಶ.೧೬೨೬)ನು ತಿರುಮಲಭಟ್ಟರೆಂಬ ಕವಿಯಿಂದ 'ಕರ್ನಾಟಕ ಶಿವಗೀತೆ' ಮತ್ತು 'ಗೀತಗೌರೀವರ' ಮೊದಲಾದ ಗ್ರಂಥಗಳನ್ನು ಬರೆಸಿದ್ದಾನೆ. ಆಗ ರಂಗನಾಥ ದೀಕ್ಷಿತರು 'ಆಗಮವ್ಯಾಖ್ಯಾನ' ರಚನೆ ಮಾಡಿದರೆ, ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ 'ಮಾನಪಿಯ' ಎಂಬುದನ್ನು ಅಶ್ವಪಂಡಿತನು ರಚಿಸಿದ್ದಾನೆ. 'ತತ್ತ್ವ-ಕೌಸ್ತುಭ'ವನ್ನು ರಚಿಸಿದ ಭಟ್ಟೋಜಿದೀಕ್ಷಿತ, ಮಧ್ವಮತ ವಿದ್ವಾಂಸರಾದ ವಾದಿರಾಜತೀರ್ಥ, ವೇದವೇದೇಯತೀರ್ಥ ಮುಂತಾದವರು ಕೆಳದಿಯ ವೆಂಕಟಪ್ಪನಾಯಕನ ಆಶ್ರಯವನ್ನು ಪಡೆದಿದ್ದರು.[೩೪] ಬೂದಿಬಸವಪ್ಪನಾಯಕನು ಮರಿತೋಂಟದಾರ್ಯರಿಂದ 'ವೀರಶೈವಾನಂದ ಚಂದ್ರಿಕೆ', ಮೌನ ಪ್ರಪಂಡಿತರಿಂದ 'ವೀರಶೈವ ಆಚಾರ ಕೌಸ್ತುಭ', ಷಡಕ್ಷರ ಮಂತ್ರಿಯಿಂದ 'ಕ್ರಿಯಾಸಾರ ವ್ಯಾಖ್ಯಾನ' ಮೊದಲಾದ ಕೃತಿಗಳನ್ನು ಬರೆಸಿದ್ದಾನೆ. ಹೀಗೆ ರಾಜಾಶ್ರಯದಿಂದ ಸ್ಫೂರ್ತಿಗೊಂಡ ಕವಿಗಳು 'ಕೆಳದಿನೃಪವಿಜಯ', 'ಬೀಳಗಿ ರಾಜರ ಚರಿತ್ರೆ', 'ಕೊಡಗಿನ ರಾಜೇಂದ್ರನಾಮ' ಎಂಬ ಗ್ರಂಥಗಳನ್ನು ರಚಿಸಿ ಇತಿಹಾಸ ಸಂಶೋಧಕರಿಗೆ ನೆರವಾಗಿದ್ದಾರೆ.[೩೫]

ಹದಿನೆಂಟನೆಯ ಶತಮಾನದ ಆದ್ಯ ಕವಿಯೆನಿಸಿದ ಇಮ್ಮಡಿ ಮುರಿಗಾಗುರುಸಿದ್ಧರು(ಕ್ರಿ.ಶ.೧೭೦೨) 'ಹಾಲಾಸ್ಯ ಪುರಾಣ', 'ಶಿವರಹಸ್ಯ', 'ಪ್ರಭುಲೀಲೆ' ಮುಂತಾದ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ನಿರಾಲಂಬ ಶರಣರ (ಕ್ರಿ.ಶ.೧೭೦೦) 'ಅಖಂಡೇಶ್ವರವಚನ', ಚಿದಾನಂದವಧೂತರ 'ಜ್ಞಾನಸಿಂಧು', ಹೆಳವನ ಕಟ್ಟೆಗಿರಿಯಮ್ಮ(ಕ್ರಿ.ಶ.೧೭೫೦)ನ 'ಚಂದ್ರಹಾಸ ಕಥೆ', 'ಸೀತಾ ಕಲ್ಯಾಣ', 'ಬ್ರಹ್ಮಕೊರವಂಜಿ', ಹಾಡುಗಳು, ಚನ್ನಬಸವ ಶಿವಯೋಗಿಯ(ಕ್ರಿ.ಶ.೧೭೫೦) 'ಆಚರಣೆತ್ರಿವಿಧಿ', ಯೋಗಾನಂದ ಕವಿಯ 'ವಿರೂಪಾಕ್ಷ ಶತಕ' ಮತ್ತು 'ಬಸವ ಶತಕ', ತರಳಚರಪತಿ(ಕ್ರಿ.ಶ.೧೭೫೦)ಯ 'ಗಂಗೆಗೌರೀ ಸಂವಾದ ಕಾವ್ಯ', ಮೋದಿಯರುದ್ರ(ಕ್ರಿ.ಶ.೧೭೩೭)ನ 'ನೂರೊಂದು ವಿರತರ ಕಾವ್ಯ' ಹಾಗೂ ಇದೇ ಕಾಲದಲ್ಲಿ ಸ್ವಾದಿಯ ಅರಸನಾಗಿದ್ದ ಸದಾಶಿವರಾಜ(ಕ್ರಿ.ಶ.೧೭೪೫)ನ 'ಸದಾಶಿವನೀತಿಗಳು'

ಮತ್ತು 'ಹಾಲಾಸ್ಯ ಪುರಾಣ' ಮುಂತಾದ ಪ್ರಮುಖ ಕವಿಗಳಿಂದ ಸಾಹಿತ್ಯ ಸೃಷ್ಟಿಯಾಗಿದೆ. ಈ ಕಾಲದಲ್ಲಿ ರಚನೆಗೊಂಡ ಸಾಹಿತ್ಯದ ಒಟ್ಟಾರೆ ವೈಶಿಷ್ಟ್ಯಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಎಲ್ಲಾ ಮತದ ಕವಿಗಳು ವಿಷಯದ ಆಯ್ಕೆಯಲ್ಲಿ ಸಾಂಪ್ರದಾಯಿಕ ನಿಲುವನ್ನು ತಳೆದಿದ್ದರು. ಆದರೆ ನಿರೂಪಣಾ ಶೈಲಿಯಲ್ಲಿ ಭಿನ್ನತೆಯನ್ನು ಕಂಡು ಕೊಂಡಿದ್ದ ಜೈನ ಕವಿಗಳು ಚಂಪುವಿನಿಂದ ತ್ರಿಪದಿ, ಸಾಂಗತ್ಯಗಳಂಥ ದೇಶೀ ಮಟ್ಟುಗಳನ್ನು ಕೃತಿ ರಚನೆಗೆ ಆಯ್ದುಕೊಂಡರೆ, 'ಷಡಕ್ಷರ ದೇವ', 'ಇಮ್ಮಡಿ ಮುರಿಗಾಗುರುಸಿದ್ಧರು' ಚಂಪೂ ಶೈಲಿಯನ್ನು ಆಯ್ದುಕೊಂಡರು. ವೈಷ್ಣವರು ತ್ರಿಪದಿ, ಸಾಂಗತ್ಯ, ಸೋಬಾನೆಗಳಂತಹ ಸರಳವಾದ ಕಾವ್ಯ ಮಾರ್ಗಗಳನ್ನು ಅನುಸರಿಸಿದರು.

೨. ನಿಜಗುಣ ಶಿವಯೋಗಿಗಳಿಂದ ಆರಂಭವಾದ ತತ್ವಪದ ಸಾಹಿತ್ಯ ವಾಹಿನಿಯು ಈ ಕಾಲದಲ್ಲಿ ಮುಪ್ಪಿನ ಷಡಕ್ಷರಿ, ಮೈಲಾರದ ಬಸವಲಿಂಗ ಶರಣರು, ಬಾಲಲೀಲ ಮಹಾಂತ ಶಿವಯೋಗಿ(ಕ್ರಿ.ಶ. ೧೮೨೦), ಕಡಕೊಳದ ಮಡಿವಾಳಪ್ಪ(ಕ್ರಿ.ಶ.೧೮೨೦) ಮತ್ತು ಘನಮಠದಾರ್ಯ(ಕ್ರಿ.ಶ.೧೮೩೦) ಮುಂತಾದವರಲ್ಲಿ ವಿಶೇಷ ಸಾಹಿತ್ಯ ಪ್ರಕಾರವಾಗಿ ಹೊರಹೊಮ್ಮಿತು.

೩. ನಿಜಗುಣಾರ್ಯ(ಕ್ರಿ.ಶ.೧೬೫೦)ನೆಂಬ ಮಲೆನಾಡಿನ ವೀರಶೈವ ಕವಿಯೊಬ್ಬನು 'ಅದ್ವೈತ ರಾಮಾಯಣ' ವೆಂಬ ಶ್ರೀ ವೈಷ್ಣವ ವಿಷಯದ ಕೃತಿಯನ್ನು ಬರೆದದ್ದು ವಿಶಾಲ ಮನೋಭಾವದ ದ್ಯೋತಕವಾಗಿದೆ.

೪. ಚಿಕ್ಕದೇವರಾಜ, ಕೆಳದಿಯಬಸವರಾಜ, ಸೋದೆಯಸದಾಶಿವರಾಯ, ಹಾಗಲವಾಡಿಯ ಮುದಿಯಪ್ಪ ನಾಯಕ, ತೊರಗಲ್‌ಸೀಮೆಯ ಅರಸನಾದ ಲಿಂಗರಾಜನ ಮಗ ನಿಟ್ಟೂರು ನಂಜಯ್ಯ ಮೊದಲಾದ ಅರಸರು ಸಾಹಿತ್ಯ ಪೋಷಕರಾಗಿ, ಸ್ವತಃ ಕವಿಗಳಾಗಿ ಕೃತಿ ರಚಿಸಿದುದು ಈ ಕಾಲದ ವೈಶಿಷ್ಟ್ಯಗಳಲ್ಲಿ ಒಂದು.

೫. ಹನ್ನೆರಡನೆಯ ಶತಮಾನದ ಶಿವಶರಣೆಯರ ನಂತರ ಪುನಃ ಮಹಿಳೆಯರಿಂದ ಸಾಹಿತ್ಯ ರಚನೆಯಾಗಿರುವುದು ಈ ಕಾಲದಲ್ಲಿಯೇ ಎಂದು ಹೇಳಬಹುದು.

೬. ಹಳಗನ್ನಡ ಹಾಗೂ ನಡುಗನ್ನಡ ಸಾಹಿತ್ಯ ಲಕ್ಷಣಗಳ ಸಂಗಮವು ಈ ಕಾಲದಲ್ಲಾಗಿದೆ.

೭. ಕನ್ನಡದ ಮೊಟ್ಟ ಮೊದಲ ನಾಟಕ ಕೃತಿ 'ಮಿತ್ರಾವಿಂದಾಗೋವಿಂದ' ರಚನೆಗೊಂಡದ್ದು ಈ ಕಾಲದಲ್ಲಿಯೇ.

೮. ನಂದಿನಾಥ(ಕ್ರಿ.ಶ.೧೭೪೫)ನ 'ವಲ್ಲೀಕಂಠಾಭರಣ', ಚನ್ನಪ್ಪಕವಿಯ 'ಶಿವಶರಣ ಲೀಲಾಮೃತ', ಸಾಂಬಯ್ಯ(ಕ್ರಿ.ಶ.೧೭೫೦)ನ 'ಕರಿಭಂಟನ ಕಥೆ', ಎಂಬ ಯಕ್ಷಗಾನ ಕೃತಿಗಳು ಮೊಟ್ಟ ಮೊದಲು ರಚನೆಯಾದದ್ದು ಇದೇ ಸಮಯದಲ್ಲಿ.

ಹೀಗೆ ಈ ಅವಧಿಯಲ್ಲಿ ರಚನೆಯಾದ ಸಾಹಿತ್ಯದ ವೈಶಿಷ್ಟ್ಯಗಳನ್ನು ಹಲವು ರೀತಿಯಲ್ಲಿ ಗುರುತಿಸಬಹುದು. 'ಒಂದು ರಾಜ್ಯವು ಉರುಳಿ ಇನ್ನೊಂದು ರಾಜ್ಯಬಂದರೂ ಅದರಿಂದ ಆಂತರಿಕ ವ್ಯವಸ್ಥೆಯ ಮೇಲೆ, ಸಾಮಾನ್ಯ ಜನಜೀವನದ ಮೇಲೆ ಆದ ಪರಿಣಾಮ ಸ್ವಲ್ಪವೇ. ರಾಜರು ಬದಲಾದರೂ ರಾಜ ನೀತಿಯೊಂದೇ, ರಾಜ್ಯಾಡಳಿತ ಪದ್ಧತಿಯೊಂದೇ ಇದ್ದುದು ಇದಕ್ಕೆ ಕಾರಣ. ಆದ್ದರಿಂದ ಈ ಶತಮಾನಗಳುದ್ದಕ್ಕೂ ಧರ್ಮ-ಕಲೆ-ಸಾಹಿತ್ಯಗಳ ಬೆಳವಣಿಗೆಗೆ ಯಾವುದೇ ಆತಂಕ ಉಂಟಾಗಲಿಲ್ಲ.[೩೬] ಚಿತ್ರದುರ್ಗ ನಾಯಕ ಅರಸರು ಸಹ ಯಾವುದೇ ರೀತಿಯ ಸಾಹಿತ್ಯ ರಚನೆಗೆ ತೊಡಗಿದುದಾಗಲಿ, ಪೋಷಿಸಿ, ಪ್ರೋತ್ಸಾಹವಿತ್ತುದಾಗಲೀ ಕಂಡುಬರುವುದಿಲ್ಲ. ಇವರು ರಣಗೀತೆಗಳನ್ನು ಹಾಡಿದಂತೆ, ಕಾವ್ಯಗಾನ ಮಾಡಲಿಲ್ಲ. ಸಮರ ಕುತೂಹಲಿಗಳಾಗಿದ್ದಂತೆ ಸಾಹಿತ್ಯ ಪ್ರೇಮಿಗಳಾಗಿರಲಿಲ್ಲ.[೩೭] ಆದರೆ ಭರಮಣ್ಣನಾಯಕನ ಕಾಲದಲ್ಲಿ ಚಿತ್ರದುರ್ಗವು ಬರೀ ಪಾಳೆಯಗಾರರ ರಾಜಧಾನಿ ಮಾತ್ರವಾಗಿರಲಿಲ್ಲ, ಮುರಿಗಾಶಾಂತವೀರರ ಸ್ಪರ್ಶದಿಂದ ತಪೋ ಭೂಮಿಯಾಯಿತು. ಶೂನ್ಯ ಪೀಠವು ನೆಲೆ ನಿಂತ ತರುವಾಯ ಅದರ ಅಧಿಪತಿಗಳಾದ ಕೆಲವರು ಮಾತ್ರ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದರು. ಮುಖ್ಯವಾಗಿ ಇಮ್ಮಡಿ ಮುರಿಗಾಗುರುಸಿದ್ದರ ಕಾಲವು ಅಂದು ನಡೆದ ಕುಟಿಲ ವಿಪ್ಲವಗಳಿಂದ ನಿಷೇಧಾತ್ಮಕವಾಗಿಯೂ, ಧಾರ್ಮಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಿಂದ ವಿಧೇಯಾತ್ಮಕವಾಗಿಯೂ ಚಿರಸ್ಮರಣೀಯವಾಗಿತ್ತು[೩೮]. ಹೀಗೆ ರಾಜಕೀಯವಾಗಿ ಅಸ್ಥಿರತೆ, ಧಾರ್ಮಿಕವಾಗಿ ನಿಷ್ಕ್ರಿಯತೆ, ಸಾಹಿತ್ಯಿಕವಾಗಿ ಉದಾಸೀನತೆ ಮನೋಭಾವದಿಂದ ಕೂಡಿದ ವಾತಾವರಣದಲ್ಲಿಯೂ ಸಹ ಹಲಕೆಲ ಅರಸರ ಆಶ್ರಯದಲ್ಲಿ ಧರ್ಮ, ಸಾಹಿತ್ಯ ಪೋಷಿತವಾದಂತೆ; ಧರ್ಮಾಧಿಕಾರಿಗಳ ಪರಿಸರದಲ್ಲಿ ಸಾಹಿತ್ಯ ಸಂಸ್ಕೃತಿಗಳು ಪರಿಚಲನಗೊಂಡವೆಂಬುದನ್ನು ಇಲ್ಲಿಯವರೆಗಿನ ವಿವರಣೆಯಿಂದ ಗಮನಿಸಬಹುದಾಗಿದೆ. ಇಮ್ಮಡಿ ಮುರಿಗಾಗುರುಸಿದ್ಧರು ಸಹ ಇಂತಹ ಪರಿಸರದಲ್ಲಿಯೇ ಬಾಳಿ-ಬದುಕಿ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿಗೈದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವುದರ ಜೊತೆಗೆ ಸಾಮಾಜಿಕ ನೀತಿ ನಡಾವಳಿಗಳನ್ನು ತಿದ್ದಿ ತೀಡಿದ ಪುಣ್ಯಜೀವಿಗಳೆನಿಸಿದ್ದಾರೆ.

ಅಡಿ ಟಿಪ್ಪಣಿಗಳು

೧. ಸ.ಸ. ಮಾಳವಾಡ(ಸಂ), ಹರಿಹರರಾಘವಾಂಕರು, ಪ್ರಸ್ತಾವನೆ, ಪು.೬

೨. ಆರ್.ಸಿ.ಹಿರೇಮಠ(ಸಂ), ಷಟ್ಸ್ಥಲಪ್ರಭೆ, ಪು.೧

೩. ಎಂ.ವಿ.,ಕೃಷ್ಣರಾವ್, ಎಂ. ಕೇಶವಭಟ್ಟ, ಕರ್ನಾಟಕ ಇತಿಹಾಸ ದರ್ಶನ, ಪು.೪೬೦

೪. ಬಿ.ಮುದ್ದಾಚಾರ್, (ಲೇ), ಕರ್ನಾಟಕದ ರಾಜಕೀಯ ಚರಿತ್ರೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ, ಸಂ.೫, ಪು.೨

೫. ಅದೇ, ಪು.೬

೬. ಅದೇ, ಪು.೧೦

೭. ಲಕ್ಷ್ಮಣ್ ತೆಲಗಾವಿ, ಎಂ.ವಿ. ಶ್ರೀನಿವಾಸಮೂರ್ತಿ ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು.೪೯

೮. ಡಿ.ಎನ್. ಯೋಗೀಶ್ವರಪ್ಪ, ಹಾಗಲವಾಡಿ ನಾಯಕರು, ಪು.೧೦

೯. ಎಂ.ವಿ. ಕೃಷ್ಣರಾವ್, ಎಂ. ಕೇಶವಭಟ್ಟ, ಕರ್ನಾಟಕದ ಇತಿಹಾಸ ದರ್ಶನ, ಪು.೪೯೩

೧೦. ಡಿ.ಎನ್. ಯೋಗೀಶ್ವರಪ್ಪ(ಲೇ), ಹಾಗಲವಾಡಿನಾಯಕರ ರಾಜಗುರುಗಳು, ಸಿದ್ಧರಾಮ ಸಂಪದ, ಪು.೧೩೫

೧೧. ಓ.ಎನ್. ಲಿಂಗಣ್ಣಯ್ಯ, ಷಡಕ್ಷರಕವಿಯ ಕಾಲದ ರಾಜಕೀಯ ಪರಿಸ್ಥಿತಿ, ಪು.೨೧

೧೨. ಪಿ.ಎಂ. ಹುಗ್ಗಿ, ಷಡಕ್ಷರಿದೇವ ಒಂದು ಅಧ್ಯಯನ, ಪು.೨೫

೧೩. ಮೈಸೂರ್ ಗೆಜೆಟಿಯರ್, ಸಂ.೨, ಭಾಗ ೪, ಪು.೨೪೪೪-೪೬

೧೪. ದೇವಚಂದ್ರ, ರಾಜಾವಳಿಕಥಾಸಾರ, ಪು.೧೩

೧೫. ಮೈಸೂರ್ ಗೆಜೆಟಿಯರ್, ಸಂ.೨, ಭಾಗ-೪, ಪು.೧೪೫೮

೧೬. ಪಿ.ಎಂ.ಹುಗ್ಗಿ, ಷಡಕ್ಷರಿದೇವ ಒಂದು ಅಧ್ಯಯನ, ಪು.೨೮

೧೭. ಓ.ಎನ್. ಲಿಂಗಣ್ಣಯ್ಯ (ಲೇ), ಹದಿನೆಂಟನೆಯ ಶತಮಾನ, ವೀರಶೈವ ಸಾಹಿತ್ಯ ಸಮೀಕ್ಷೆ, ಪು.೩೩೦

೧೮. ಲಕ್ಷ್ಮಣ್ ತೆಲಗಾವಿ(ಲೇ), ಶ್ರೀ ಬೃಹನ್ಮಠ ಮತ್ತು ಚಿತ್ರದುರ್ಗನಾಯಕ ಅರಸರ ಸಂಬಂಧ, ಚಿನ್ಮೂಲಾದ್ರಿ ಚೇತನ, ಸ್ಮರಣ ಸಂಚಿಕೆ, ೧೯೮೯, ಪು.೨೦೩

೧೯. ಬಿ.ರಾಜಶೇಖರಪ್ಪ (ಲೇ), ಚಿತ್ರದುರ್ಗದನಾಯಕರು ವೀರಶೈವರಾದಾಗಿನ ಅವರ ರಾಜಗುರುಗಳು. ಸಿದ್ಧರಾಮಸಂಪದ, ಪು.೧೬೨

೨೦. ಟಿ.ಎನ್.ಗಂಡುಗಲಿ(ಲೇ), ಬಿಚ್ಚುಕತ್ತಿ ಭರಮಣ್ಣ ನಾಯಕ ಮತ್ತು ಶ್ರೀ ಬೃಹನ್ಮಠ, ಜಂಗಮಜ್ಯೋತಿ, ಸ್ಮರಣ ಸಂಚಿಕೆ ೧೯೭೫, ಪು.೧೩೭

೨೧. ಕುಂ.ಬಾ.ಸದಾಶಿವಪ್ಪ, ಹರಪನಹಳ್ಳಿ ಪಾಳೆಗಾರರು, ಪು.೩೦

೨೨. ಯಶೋದರಾ ರಾಜಶೇಖರಪ್ಪ(ಲೇ), ಮತ್ತೋಡು ಪಾಳೆಯಗಾರರ ರಾಜಗುರುಗಳು, ಸಿದ್ಧರಾಮ ಸಂಪದ ಪು.೧೭೧

೨೩. ಎಸ್.ಶಿವಣ್ಣ(ಲೇ), ಕಳಲೆ ದಳವಾಯಿಗಳ ರಾಜಗುರುಗಳು, ಸಿದ್ಧರಾಮ ಸಂಪದ, ಪು.೧೦೯

೨೪. ಎಂ.ಎಂ. ಕಲಬುರ್ಗಿ, ಸಿದ್ಧರಾಮಸಂಪದ, ಪು.೧೩೫

೨೫. ಟಿ. ಗಿರಿಜಾ, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು.೯೧

೨೬. ಬಿ.ಎಲ್. ರೈಸ್, ಎ.ಕ.ಸಂಪುಟ ೧೧, ಚಿತ್ರದುರ್ಗ, ಶಾ.ಸಂ.೮೪

೨೭. ---,,--- ಹೊಳಲ್ಕೆರೆ, ಶಾ.ಸಂ.೧೩

೨೮. ಪಿ.ವಿ. ಕೃಷ್ಣಮೂರ್ತಿ, ಸಗಟೂರು ವೀರಶೈವ ಅರಸು ಮನೆತನ, ಪು.೩೭

೨೯. ಲಕ್ಷ್ಮಣ್ ತೆಲಗಾವಿ (ಲೇ), ಶ್ರೀ ಬೃಹನ್ಮಠ ಮತ್ತು ಚಿತ್ರದುರ್ಗ ನಾಯಕ ಅರಸರ ಸಂಬಂಧ, ಚಿನ್ಮೂಲಾದ್ರಿ ಚೇತನ, ಸ್ಮರಣ ಸಂಚಿಕೆ, ೧೯೮೯, ಪು.೨೦೩

೩೦. ಜಿ.ಎಸ್.ದೀಕ್ಷಿತ್(ಲೇ), ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಬೆಂಗಳೂರು ವಿಶ್ವವಿದ್ಯಾಲಯ, ಸಂ.೫. ಪು.೧೩

೩೧. ಆರ್. ನರಸಿಂಹಾಚಾರ್, ಕರ್ಣಾಟಕ ಕವಿ ಚರಿತೆ, ಸಂ.೨

೩೨. ಅದೇ, ಸಂ.೩

೩೩. ದೇವಚಂದ್ರನ ರಾಜಾವಳಿ ಕಥಾಸಾರ, ಅಧಿಕಾರ ೧೨, ಪು.೪೪೬

೩೪. ಬಿ.ಮುದ್ದಾಚಾರ್(ಲೇ) ಕರ್ನಾಟಕದ ರಾಜಕೀಯ ಚರಿತ್ರೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ, ಸಂ.೫, ಪು.೯

೩೫. ಎಸ್.ಶಿವಣ್ಣ(ಲೇ), ಹದಿನಾರನೆ ಶತಮಾನ, ವೀರಶೈವ ಸಾಹಿತ್ಯ ಸಮೀಕ್ಷೆ, ಪು.೨೧೨

೩೬. ಶ್ರೀನಿವಾಸ ರಿತ್ತಿ, (ಲೇ), ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಚರಿತ್ರೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾನಿಲಯ, ಸಂ.೩, ಪು.೧೮

೩೭. ಓ.ಎನ್. ಲಿಂಗಣ್ಣಯ್ಯ, (ಲೇ) ಹದಿನೆಂಟನೆಯ ಶತಮಾನ, ವೀರಶೈವ ಸಾಹಿತ್ಯ ಸಮೀಕ್ಷೆ, ಪು.೩೩೩

೩೮. ಎಲ್. ಬಸವರಾಜು(ಸಂ) ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು.೮೭

ಅಧ್ಯಾಯ ೩

ಶೂನ್ಯಪೀಠ ಪರಂಪರೆ

೧. ಶೂನ್ಯತತ್ವ

೨. ಶೂನ್ಯಸಿಂಹಾಸನ ಬೆಳೆದು ಬಂದ ಘಟ್ಟಗಳು

೩. ಸಮಯ ಭೇದಗಳು

ಕರ್ನಾಟಕವು ಪ್ರಾಚೀನ ಕಾಲದಿಂದ ಅನೇಕ ಧರ್ಮಗಳ ಸಂಗಮ ಕ್ಷೇತ್ರವಾಗಿದೆ. ಜೈನ, ಬೌದ್ಧ, ಕ್ರಿಶ್ಚಿಯನ್, ಮುಸಲ್ಮಾನ, ಹಿಂದೂ ಧರ್ಮಗಳ ಪೋಷಣೆ-ಸಂರಕ್ಷಣೆ ಮತ್ತು ಪ್ರಸಾರಗಳ ಹೊಣೆ ಹೊತ್ತ ಈ ನಾಡು 'ವೀರಶೈವ'ವೆಂಬ ಹೊಸ ಧರ್ಮದ ಆವಿಷ್ಕಾರದ ತಾಣವಾಗಿದೆ. ಧರ್ಮ ಸಂರಕ್ಷಣೆಗೆಂದು ಹುಟ್ಟಿಕೊಂಡ ವಿಜಯನಗರ ಸಾಮ್ರಾಜ್ಯ ಹಾಗೂ ಸಮಾಜದ ಪರಿವರ್ತನೆ ಮತ್ತು ಆತ್ಮದ ಉನ್ನತಿಗಾಗಿ ರಚನೆಗೊಂಡ ಶಿವಶರಣರ 'ವಚನಸಾಹಿತ್ಯ'. ಇವುಗಳನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿದ ಈ ನಾಡಿನ ಅರಸರಾಗಲಿ, ಶರಣ ಸಂತರಾಗಲಿ, ಪ್ರಜೆಗಳಾಗಲಿ ಯಾವ ಧರ್ಮಕ್ಕೂ ಅಡ್ಡಿ ಮಾಡದೆ ಸರ್ವಧರ್ಮಗಳನ್ನು ಸಮಾನತೆಯ ದೃಷ್ಟಿಯಿಂದ ಕಂಡು ತಮತಮಗೆ ಬೇಕಾದ ಧರ್ಮವನ್ನು ಸ್ವೀಕರಿಸಿದವರಾಗಿದ್ದಾರೆ.

ವೀರಶೈವ ಧರ್ಮದಲ್ಲಿ 'ಗುರುವರ್ಗ', 'ವಿರಕ್ತವರ್ಗ' ಹಾಗೂ 'ಭಕ್ತವರ್ಗ' ಎಂಬ ಮೂರು ಪಂಗಡಗಳಿವೆ. ಒಂದೊಂದು ವರ್ಗಕ್ಕೂ ಅನ್ವಯಿಸಿ ಪೀಠಗಳು ಮತ್ತು ಮಠಗಳು ಹುಟ್ಟಿಕೊಂಡಿವೆ. ಪಂಚಾಚಾರ್ಯರಲ್ಲಿ ಒಬ್ಬರಾದ ರೇಣುಕಾಚಾರ್ಯರಿಂದ ಆರಂಭವಾಗುವ ಮಠಗಳನ್ನು ಗುರುವರ್ಗದ ಪೀಠಗಳೆಂದು ಕರೆಯುತ್ತಾರೆ. ಕಾಶಿ, ಕೇದಾರ, ಶ್ರೀಶೈಲ, ಉಜ್ಜಯಿನಿ ಮತ್ತು ರಂಭಾಪುರಿ ಎಂಬೈದು ಪೀಠಗಳನ್ನು 'ಗುರುವರ್ಗದ' ಪೀಠಗಳೆಂದೂ, ಇವುಗಳಿಗೆ ವೀರ, ನಂದಿ, ಭೃಂಗಿ, ಸ್ಕಂದ ಮತ್ತು

ವೃಷಭ ಎಂಬ ಐದು ಗೋತ್ರಗಳನ್ನು ಹೆಸರಿಸುತ್ತಾರೆ. ಈ ಪೀಠಗಳ ಅಧಿಪತಿಗಳು ಬ್ರಹ್ಮಚಾರಿಗಳಾಗಿದ್ದು, ಆಗಮ ಪ್ರೇರಿತವಾದ ವೀರಶೈವ ಸಿದ್ಧಾಂತಗಳನ್ನು ಬೋಧಿಸುತ್ತ, ದೀಕ್ಷೆ, ಉಪನಯನ, ಲಿಂಗಧಾರಣೆ ವಿವಾಹ ಮುಂತಾದ ಶುಭ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಈ ಪೀಠಗಳಿಗೆ ಅಧಿಕಾರಿಗಳಾಗುವವರು ಮೇಲಿನ ಐದು ಗೋತ್ರಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿರಬೇಕೆಂಬ ನಿಯಮವಿದೆ. ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭು ಮತ್ತು ಬಸವಣ್ಣನವರಿಂದ ಆರಂಭವಾದ ಅನುಭವಮಂಟಪದ 'ಶೂನ್ಯಪೀಠ'ವನ್ನು ತಮ್ಮ ಮೂಲವೆಂದು ಹೇಳಿಕೊಳ್ಳುವ ಮಠಗಳು 'ವಿರಕ್ತವರ್ಗ'ಕ್ಕೆ ಸೇರಿದವುಗಳಾಗಿವೆ. ಇವರು ಶಿವಶರಣರ ವಚನಗಳನ್ನು, ತತ್ತ್ವಗಳನ್ನು ಪ್ರಮಾಣ ಗ್ರಂಥಗಳೆಂದು ಭಾವಿಸುತ್ತಾರೆ. ಅಲ್ಲಮ ಪ್ರಭು, ಸಿದ್ಧಲಿಂಗ, ನಂದಿಕೇಶ್ವರ ಎಂಬ ಮೂರು ಸಂಪ್ರದಾಯದ ಭೇದಗಳನ್ನು ಹೇಳುತ್ತಾರೆ. ಹಾಗೂ ಪೀಠಾಧಿಕಾರಿಗಳಾಗುವವರು ಕಡ್ಡಾಯವಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕಾಗಿರುತ್ತದೆ. ಈ ಎರಡೂ ವರ್ಗಗಳಿಗಿಂತಲೂ ಸಂಪೂರ್ಣ ಭಿನ್ನಮಾರ್ಗದಲ್ಲಿ ನಿಲ್ಲುವವರೆಂದರೆ 'ಭಕ್ತವರ್ಗ'ದ ಶರಣರು. ಇವರಲ್ಲಿ ಯಮ, ನಿಯಮ, ಯೋಗಗಳೆಂಬ ಮಾತಿಲ್ಲ. ತಪಸ್ಸಿನ ಶುದ್ಧಿಯಿಲ್ಲ, ದೇಹವನ್ನು ದಂಡಿಸುವ, ಇಂದ್ರಿಯ ನಿಗ್ರಹ ಮಾಡುವ ಕಟ್ಟಳೆಗಳೇನೂ ಇಲ್ಲದೆ ಸಾಮಾನ್ಯ ಜನರಂತೆ ಸಂಸಾರಿಗಳಾಗಿದ್ದು, ಕುಟುಂಬದ ಜೊತೆಯಲ್ಲಿಯೇ ತಮ್ಮ ತಮ್ಮ ಪೀಠಗಳಿಗೆ ಒಡೆಯರಾಗಿರುತ್ತಾರೆ. ಉದಾಹರಣೆಗೆ ಕಲಬುರ್ಗಿಯ ಶರಣಬಸವೇಶ್ವರಮಠ, ಕಾನಾಮಡುವಿನ ಶರಣರ ಮಠ, ದೇವನೂರು ಗುರುಸ್ವಾಮಿಗಳ ಮಠ ಮೊದಲಾದವುಗಳನ್ನು ಹೆಸರಿಸಬಹುದು.[7] ಇಲ್ಲಿ ಗುರು-ವಿರಕ್ತ-ಭಕ್ತ ಎಂಬ ಮೂರು ವರ್ಗಗಳಲ್ಲಿ ಕರ್ತವ್ಯ ವಿಂಗಡಣೆಯಲ್ಲಿ ಭೇದವಿರುತ್ತಿತ್ತೇ ಹೊರತು, ಉದ್ದೇಶಗಳಲ್ಲಿ ಭೇದವಿರುತ್ತಿರಲಿಲ್ಲ. ಏಕೆಂದರೆ ಇಂದಿಗೂ ಸಮಾಜದಲ್ಲಿ ಈ ಎಲ್ಲಾ ಮಠಗಳು ಸಮಾನ ಗೌರವಕ್ಕೆ ಮಾನ ಮನ್ನಣೆಗೆ ಪಾತ್ರವಾಗಿವೆ.

ಹನ್ನೆರಡನೆಯ ಶತಮಾನದಲ್ಲಿ ಹಲವಾರು ಧರ್ಮಗಳ, ಪಂಥ, ಪಂಗಡಗಳ ಏರಾಟ, ಜಗ್ಗಾಟಗಳಲ್ಲಿ ಜನಸಾಮಾನ್ಯರು ದಿಕ್ಕು ತಪ್ಪಿ ಹೋಗಿದ್ದರು. 'ಮಡಿಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ.... ಕೊಳಗ ದೈವ, ಗಿಣ್ಣಿಲು ದೈವ'ವೆಂದು[8] ಕಾಲಿಡಲು ಜಾಗವಿರದಷ್ಟು ದೇವರುಗಳನ್ನು ನಿರ್ಮಿಸಿಕೊಂಡು ಪೂಜಿಸುತ್ತಿದ್ದ ಜನತೆ, ಈ ಜನತೆಯ ಮುಗ್ಧ ಮನಸ್ಸನ್ನೇ ತಮ್ಮ ದುಡಿಮೆಯ ಭೂಮಿಯನ್ನಾಗಿಸಿಕೊಂಡು ಸಮಾಜದ ಮೇಲ್ವರ್ಗಗಳು ಸದಾ ಶೋಷಣೆ ಮಾಡುತ್ತಿದ್ದವು. ಹೀಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮತೋಲನಗಳ ಮಧ್ಯೆ ಸಿಲುಕಿ ಅಜ್ಞಾನದ ಕತ್ತಲೆಯೊಳಗೆ ಅಲೆಯುತ್ತಿದ್ದ ಜನರ ತೊಳಲಾಟವನ್ನು ಕಣ್ಣಾರೆ ಕಂಡ ಬಸವಣ್ಣನವರು ಅಸಮಾನತೆಯ ನಿವಾರಣೆಗಾಗಿ, ಮುಗ್ಧ ಜನತೆಯ ಹಿತಾಸಕ್ತಿಗಳನ್ನು ಅರಿತುಕೊಂಡು, ಅವುಗಳ ಚರ್ಚೆಗಾಗಿ ಒಂದು ವೇದಿಕೆಯನ್ನು ನಿರ್ಮಾಣ

ಮಾಡಿಕೊಂಡರು. ಅದಕ್ಕೆ ಅನುಭವ ಮಂಟಪ ಎಂದು ಹೆಸರಿಟ್ಟರು. ಹೀಗೆ ಶರಣರು ಒಂದೆಡೆ ಸೇರಿ ನಡೆಸುತ್ತಿದ್ದ ಅನುಭಾವದ ಪ್ರಸಂಗಗಳನ್ನೇ 'ಅನುಭಾವ ಗೋಷ್ಠಿ', 'ತತ್ವ ಗೋಷ್ಠಿ', 'ಶಿವತತ್ವ ಗೋಷ್ಠಿ', 'ಗೀತ ಗೋಷ್ಠಿ', 'ಧರ್ಮ ಗೋಷ್ಠಿ' ಮುಂತಾದ ಹೆಸರುಗಳಿಂದ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಕರೆಯಲಾಗಿದೆ.[೩] ಈ ಗೋಷ್ಠಿಯಲ್ಲಿ ಶರಣರ ಅನುಭಾವ ಪ್ರಸಂಗಗಳ ವಿನಿಮಯ, ಸತ್ಯಾಸತ್ಯತೆಯ ನಿಷ್ಕರ್ಷೆ, ತದನಂತರ ಅವುಗಳ ಪರಾಮರ್ಶೆ ನಡೆಸುತ್ತಿದ್ದರು. ತಮ್ಮ ತಮ್ಮ ಅನುಭವಗಳ ಚರ್ಚೆಯೇ 'ಅನುಭಾವ ಗೋಷ್ಠಿ' ಎಂದೂ, ಅದರ ಅಧ್ಯಕ್ಷ ಸ್ಥಾನವನ್ನು 'ಶೂನ್ಯ ಪೀಠ'ವೆಂದು ಕರೆಯುತ್ತಿದ್ದರು. ಅಲ್ಲಿ ವರ್ಗ, ವರ್ಣ, ಭೇದಗಳಿಗೆ ಅವಕಾಶವಿಲ್ಲದೆ ಸಮಾನ ವೇದಿಕೆಯ ಮೇಲೆ ಕುಳಿತು ಚರ್ಚೆ ನಡೆಸುತ್ತ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು.

'ಶೂನ್ಯತತ್ವ'

'ಶೂನ್ಯ' ಎಂಬ ಪದಕ್ಕೆ ಖಾಲಿಯಾದ, ಬರಿದಾದ, ಇಲ್ಲದ, ವಿಹೀನವಾದ, ಅರ್ಥಹೀನವಾದ, ಅರ್ಥವಿಲ್ಲದ, ಏಕಾಂಗಿಯಾದ, ಹಾಳಾದ, ನಶಿಸಿದ ಎಂಬ ಅರ್ಥಗಳಿವೆ. 'ಎನಗೆ ಮನಮಿಂದು ಶೂನ್ಯಂ ಮನೆ ಶೂನ್ಯಂ ಬೀಡು ಶೂನ್ಯವಾದುದು ಸಕಲಾವನಿ ಶೂನ್ಯಮಾಯ್ತು ದುಶ್ಶಾಸನನಿಲ್ಲದೆ ಕರ್ಣನಿಲ್ಲದೆ'[೪] ಎಂಬ ರನ್ನನ ಗದಾಯುದ್ಧದ ಈ ಮಾತು ಏನೂ ಇಲ್ಲದ, ಬರಿದಾದ ಎಂಬ ಅರ್ಥವನ್ನು ಸೂಚಿಸುತ್ತದೆ. ವ್ಯಾಕರಣಶಾಸ್ತ್ರದಲ್ಲಿ 'ಬಿಂದು ಮುತ್ತಂಪೋಲ್ತು ಸೊನ್ನೆಯಂತೆ ಬಟ್ಟಿತ್ತಾಗಿರ್ಪುದರಿಂ ಶೂನ್ಯ ಶಬ್ದಂ'[೫] ಎಂದರೆ ಶೂನ್ಯವು ಇಲ್ಲಿ ಬಿಂದು, ಅನುಸ್ವಾರವಾಗಿ ಬಳಕೆಗೊಳ್ಳುತ್ತದೆ. ಗಣಿತಶಾಸ್ತ್ರದಲ್ಲಿ 'ಸೊನ್ನೆ' ಎಂದರೆ ಅರ್ಥಹೀನವಾದ, ಬೆಲೆಯಿಲ್ಲದ ಸಂಖ್ಯೆ ಎನಿಸಿಕೊಳ್ಳುತ್ತದೆ. ವೀರಶೈವರಲ್ಲಿ 'ವಾರಿ ಬಲಿದು ವಾರಿ ಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು'[೬] ಎಂದರೆ ನಿರವಯಲು, ಬಯಲು, ಆಕಾಶವಿಲ್ಲದುದು, ಸಾಧಕನಿಗೆ ಅಂತ್ಯದಲ್ಲಿ ಒದಗುವ ಬ್ರಹ್ಮ ಸಾಕ್ಷಾತ್ಕಾರ ಎಂಬ ಅರ್ಥದಲ್ಲಿ ಶೂನ್ಯವನ್ನು ಭಾವಿಸಲಾಗಿದೆ. ಅದೇ ಶೂನ್ಯತತ್ತ್ವ. ಶರಣರ ಮಾತಿನಲ್ಲಿ 'ಶೂನ್ಯ' ಎಂಬ ಪದದ ಅರ್ಥ ಎಲ್ಲವನ್ನೂ ಒಳಗೊಂಡುದುದು ಮತ್ತು ಅದೆಲ್ಲದರ ಅಸ್ತಿತ್ವಕ್ಕೆ ಕಾರಣವಾದುದು ಎಂಬ ಅರ್ಥವನ್ನು ಪಡೆಯುತ್ತದೆ. ಅದಕ್ಕೆ ಅಲ್ಲಮನ ಈ ವಚನವನ್ನು ಉದಾಹರಿಸಬಹುದಾಗಿದೆ.

ಆದಿಅನಾದಿ ಇಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶೂನ್ಯವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರನೊಬ್ಬನೇ 'ಇದ್ದೆಯಲ್ಲ ಇಲ್ಲದಂತೆ'||

ಇಲ್ಲಿ ಆದಿ-ಅನಾದಿ, ಹಮ್ಮ-ಬಿಮ್ಮು, ಸುರಾಳ-ನಿರಾಳ, ಶೂನ್ಯ-ನಿಶೂನ್ಯ, ಸಚರಾಚರ ಜಗತ್ತು ಇವಾವೂ ಇಲ್ಲದೇ ಇದ್ದಾಗ ಗುಹೇಶ್ವರನೊಬ್ಬನೇ 'ಇದ್ದೆಯಲ್ಲ ಇಲ್ಲದಂತೆ' ಎಂಬ ಧ್ವನ್ಯಾರ್ಥವೇ ಶರಣರ 'ಶೂನ್ಯತತ್ವ'ದ ಕಲ್ಪನೆಯಾಗಿದೆ. ಸರ್ವಸ್ವವನ್ನು ಒಳಗೊಂಡು ಅದೆಲ್ಲದಕ್ಕೂ ಅತೀತವಾಗಿ ನಿಲ್ಲುವ ಪರಿಯನ್ನೇ ಶರಣರು 'ಶೂನ್ಯ', 'ಬಯಲು', 'ಸ್ಥಲ' ಇತ್ಯಾದಿ ಪಾರಿಭಾಷಿಕ ಪದಗಳಿಂದ ನಿರ್ದೇಶಿಸಿದ್ದಾರೆ. ಅವರ ದೃಷ್ಟಿಯಲ್ಲಿ ಜೀವನದ ಪರಮಗುರಿ ಶೂನ್ಯವನ್ನು ಸಂಪಾದಿಸುವುದೇ ಆಗಿದೆ. 'ಶೂನ್ಯಸಂಪಾದನೆ' ಎಂಬ ಮಾತೂ ಕೂಡ ಅವರ ಅನುಭಾವಿಕ ಜೀವನದ ಪ್ರತಿಮೆಯಾಗಿದೆ. ಎಲ್ಲಾ ಶರಣರು ಬೇರೆ ಬೇರೆ ವರ್ಗಗಳಿಂದ, ಬೇರೆ ಬೇರೆ ಪ್ರದೇಶಗಳಿಂದ ಬಂದು ಅನುಭವಮಂಟಪದಲ್ಲಿ ಸೇರಿ ವೈಯಕ್ತಿಕ ವಿಚಾರಗಳ ಜೊತೆಗೆ ಅವರು ಕಂಡುಕೊಂಡ ಸತ್ಯಗಳ ಬಗ್ಗೆ ಚರ್ಚಿಸುತ್ತಿದ್ದರು, ಬೇರೆ ಬೇರೆ ವಿಷಯಗಳನ್ನು ತಾತ್ವಿಕ ಚೌಕಟ್ಟಿನಲ್ಲಿ ವಿಮರ್ಶೆಗೊಳಪಡಿಸಿದರೂ ಮೂಲತಃ ಅವರ ಗುರಿ 'ಶೂನ್ಯ'ವನ್ನು ಸಂಪಾದಿಸುವುದಾಗಿತ್ತು. ಹೀಗಾಗಿ ಶರಣರ ವ್ಯಷ್ಟಿ ಸಂವೇದನೆಗಳೆಲ್ಲವೂ ಸೇರಿ ಶೂನ್ಯದ ಸಮಷ್ಟಿ ಸಂವೇದನೆಗಳಾಗಿ ರೂಪುಗೊಳ್ಳುತ್ತಿದ್ದವು.

ಶೂನ್ಯಸಿಂಹಾಸನ

'ಶೂನ್ಯಸಿಂಹಾಸನ'ವೆಂಬುದೊಂದು ಕಲ್ಪನೆಯ ಬೌದ್ಧಿಕ ಸಂಕೇತವೇ ಹೊರತು, ಭೌತಿಕವಾದ ಐತಿಹಾಸಿಕ ರಚನೆಯಲ್ಲ ಎಂಬ ವಾದವಿದೆ[೨] ಅದಕ್ಕೆ ಪ್ರತಿವಾದವೂ ಇದೆ[೩] ಸುದೀರ್ಘವಾದ ಈ ವಿಚಾರವನ್ನು ಇಲ್ಲಿ ಕೈಬಿಡಲಾಗಿದೆ. ವೀರಶೈವರ ಮುಕ್ತಿಯ ಮಾರ್ಗಗಳಾದ ಪಂಚಾಚಾರಗಳು, ಷಟಸ್ಥಲಗಳು, ಅಷ್ಟಾವರಣಗಳು ಇವುಗಳ ರೂಢಿ ಕ್ರಮದಿಂದ ಸಾಧಕನಲ್ಲಾಗುವ ಬದಲಾವಣೆಗಳನ್ನು ಹಂತ ಹಂತವಾಗಿ ಗಮನಿಸಿ, ಕೊನೆಗೆ ಆತ್ಮ ಪರಮಾತ್ಮಗಳ ನಡುವಿನ ದ್ವಂದ್ವವು ಇಲ್ಲದಂತಾಗಿ, ಅವೆರಡೂ ಪೂರ್ಣ ಒಂದಾಗುವಿಕೆಯ ಸ್ಥಿತಿಯನ್ನು 'ಶೂನ್ಯಸಂಪಾದನೆ' ಎನ್ನುತ್ತಾರೆ. 'ಭಕ್ತನಾದರೆ ಬಸವಣ್ಣನಂತಾಗಬೇಕು, ಜಂಗಮನಾದರೆ ಅಲ್ಲಮಪ್ರಭುವಿನಂತಾಗಬೇಕು' ಎಂಬ ವಚನದಂತೆ, ಬಸವಣ್ಣನ ಭಕ್ತಿ, ಪ್ರಭುವಿನ ಜಂಗಮ ನಿಷ್ಠೆಗಳು ಅನುಭವಮಂಟಪ ಮತ್ತು ಶೂನ್ಯ ಸಿಂಹಾಸನದ ನಿರ್ಮಾಣಕ್ಕೆ ಕಾರಣವಾಗಿವೆ. ಇವರಿಬ್ಬರೂ ಚಾರಿತ್ರಿಕ ವ್ಯಕ್ತಿಗಳೇ, ಅಂತೆಯೇ ಬಸವಣ್ಣನವರ ಮಹಾಮನೆಯಲ್ಲಿ ಅನುಭವಮಂಟಪ, ಅದರಲ್ಲಿ 'ಶೂನ್ಯಸಿಂಹಾಸನ'ದ ರಚನೆಯು ಭಕ್ತಿ-ಜಂಗಮ ತತ್ವಗಳ ಅನುಸಂಧಾನದ ಐತಿಹಾಸಿಕ ಕುರುಹುಗಳಾಗಿವೆ. ಅಲ್ಲಮಪ್ರಭು ಮೊದಲ ಬಾರಿ ಕಲ್ಯಾಣಕ್ಕೆ ಬಂದಾಗ, ಸರಿಯಾಗಿ ಉಪಚಾರಗೊಳ್ಳದೆ ಕೋಪಗೊಂಡು ಕ್ಷೇತ್ರಪರ್ಯಟನೆಗೆ ಹೊರಡುತ್ತಾನೆ. ಮರಳಿ ಕಲ್ಯಾಣಕ್ಕೆ ಬರಬೇಕಾದರೆ ಬಸವಣ್ಣ ಹನ್ನೆರಡು ವರ್ಷಗಳ ಕಾಲ ಕಾಯಬೇಕಾಗುತ್ತದೆ.

ಹಮ್ಮಿಹನ್ನೆರಡು ಸಂವತ್ಸರ ಹಿಂದಾಯಿತು
ಏನ ಮಾಡಿದಡೇನಯ್ಯ ಎನ್ನಲ್ಲಿ ದಿಟವಿಲ್ಲದನ್ನಕ್ಕರ || (ಬ.ವ.೩೮೨)

ಇದೇ ಮಾತನ್ನು ಚಾಮರಸನು

"ಹಣ್ಣೆ ಹನ್ನೇರಡರಬ್ದವಾಯಿತು
ಶೂನ್ಯ ಸಿಂಹಾಸನವನಕಟಾ ......" (ಪ್ರ.ಲೀ.೨೨-೩)

ಈ ಕಾಯುವ ಪರಿಯು ಬಸವಣ್ಣನಿಗೆ ನಿರಾಶೆ ಮೂಡಿಸುವಷ್ಟರ ಮಟ್ಟಿಗೆ ಮುಂದುವರಿಯುತ್ತದೆ. ಬೇಸತ್ತ ಬಸವಣ್ಣ ಈ ರೀತಿ ನುಡಿಯುತ್ತಾನೆ.

ಅರಸನರಿಯದ ಬಿಟ್ಟಿಗೆಲಸದ
ಪರಿಯಲಾಯಿತು ಎನ್ನ ಮಾಡಿದ
ಪರಿಕರಣೆ ..... ಹರಹರಾ ...... || (ಪ್ರ.ಲಿಂ.ಲೀಲೆ. ೨೨-೪)

ಅಲ್ಲಮನ ಬರುವಿಗಾಗಿ ಕಾಯ್ದು ಆ ಪೀಠದಲ್ಲಿ ಪ್ರಭುದೇವರನ್ನು ಕುಳ್ಳಿರಿಸಿ ಆರಾಧಿಸಿದರೆಂಬುದು ಅನೇಕ ಆಧಾರಗಳಿಂದ ವ್ಯಕ್ತವಾಗುತ್ತದೆ.[r] ಈ ಶೂನ್ಯ ಪೀಠದ ಪ್ರಥಮ ಗುರು ಪ್ರಭುವಾದ ಕಾರಣ ಈ ಪರಂಪರೆಗೆ "ಪ್ರಭುಸಂಪ್ರದಾಯ" ಎಂದೂ ಕರೆಯಲಾಗುತ್ತದೆ.

ಶೂನ್ಯಸಿಂಹಾಸನದ ಸ್ವರೂಪ

ಚಾಮರಸನು ತನ್ನ 'ಪ್ರಭುಲಿಂಗಲೀಲೆ'ಯಲ್ಲಿ 'ಶೂನ್ಯಸಿಂಹಾಸನ'ದ ನಿರ್ಮಾಣ ಮತ್ತು ಅದರ ಸ್ವರೂಪವನ್ನು ಹೀಗೆ ವಿವರಿಸಿದ್ದಾರೆ - " ಇಂದು ಕಾಂತದ ಶಿಲೆಯ ಚಪ್ಪಡಿಗಳಿಂದ ಬಿಗಿದ ಸೋಪಾನ, ಅದರ ಸುತ್ತಲೂ ಒಂದಕ್ಕಿಂತ ಒಂದು ಎತ್ತರವಾದ ಏಳು ಸುತ್ತಿನ ಆವರಣ ಭಿತ್ತಿ, ಅದರ ಮಧ್ಯೆ ಶೂನ್ಯ ಪೀಠ. ಆ ಶೂನ್ಯ ಪೀಠಕ್ಕೆ ಒಂದರ ಮೇಲೊಂದು ಏಳು ಅಂತಸ್ತು, ಆ ಮಹಾಸ್ಥಾವರದ ಹೊರವಲಯದಲ್ಲಿ ಒಂಬತ್ತು ಬಾಗಿಲು, ಮಧ್ಯವಲಯದಲ್ಲಿ ನಾಲ್ಕು ಬಾಗಿಲು, ಗರ್ಭವಲಯದಲ್ಲಿ ಎರಡು ಬಾಗಿಲು, ಉಪರಿವಲಯದಲ್ಲಿ ಕಣ್ದೆರದ ಬಾಗಿಲು, ಶಿಖರ(ಸಹಸ್ರಾರ)ದಲ್ಲಿ ಮಹದರಿವಿನ 'ಶೂನ್ಯಸಿಂಹಾಸನ' ಅಲ್ಲಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಆಜ್ಞೇಯಗಳನು ನೆಲೆಗೊಳಿಸಿ ಮೇಲೆ ಬ್ರಹ್ಮಸ್ಥಾನವನ್ನು ರಚಿಸಲಾಯಿತು. ಕ್ರಮವಾಗಿ ಪೃಥ್ವಿ, ಅಪ್ಪು, ತೇಜ, ವಾಯು ಆಕಾಶ ಮತ್ತು ಆತ್ಮ ನಿರಾಳವನ್ನು ಪ್ರತಿನಿಧಿಸುವ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಎಂಬ ನೆಲೆಗಳು ಸಂಕೇತಗಳಾದವು. ಪೃಥ್ವಿಯ ನೆಲೆಯಲ್ಲಿ ಕಠಿಣತರವನ್ನು, ಅಪ್ಪಿನ ನೆಲೆಯಲ್ಲಿ ರಸಮಯವನ್ನು, ತೇಜದ ನೆಲೆಯಲ್ಲಿ ದಹನತೆಯನ್ನು, ವಾಯುವಿನ ನೆಲೆಯಲ್ಲಿ ವಹನತೆಯನ್ನು, ಆಕಾಶದ ನೆಲೆಯಲ್ಲಿ ಅಂಬರವನ್ನು, ಆತ್ಮದ ನೆಲೆಯಲ್ಲಿ 'ಶೂನ್ಯ'ವನ್ನು ನಿಲಿಸಿ 'ಶೂನ್ಯ ಸಿಂಹಾಸನ'ವು ಪ್ರಜ್ವಲಿಸಿತು".

'ಈಡೆ, ಪಿಂಗಳೆ, ಸುಷುಮ್ನ ನಾಡಿಗಳೂ, ಎಂಟು ದಿಕ್ಕಿಗೆ ಮದಗಜಗಳೂ, ಸೋಮ-ಸೂರ್ಯ ವೀಧಿಗಳೂ ಕೂಡಿ ಅದೊಂದು ಭುವನದಂತೆ ತೋರಿತು. ಪ್ರಣವ ಬೇರು, ಸ್ವರವೇ ಬುಡ, ಶಿವಪಂಚಾಕ್ಷರಿಯೆ ಶಾಖೆ, ಅಕ್ಷರಗಳೇ ಹೂವು, ಪದಾರ್ಥವೇ ಫಲ, ಈ ರೀತಿಯ ನಾದ ವೃಕ್ಷವು 'ಶೂನ್ಯಪೀಠ'ದ ಬೆನ್ನ ಹಿಂದೆ ರತ್ನ ಖಚಿತವಾಗಿ ಕೆತ್ತನೆಗೊಂಡಿತ್ತು. ಆ ವೃಕ್ಷಕ್ಕೆ ಹಬ್ಬಿದ ಲತೆಯಂತೆ ಮಹಾಶಿವತತ್ವ ಸರ್ಪವೂ ಅದರ ಫಣಾಮಣಿಯ ಬೆಳಗು ಎಂಬಂತೆ, ಪರಂಜ್ಯೋತಿ ಪ್ರಕಾಶವೂ ಅಲ್ಲಿ ಒಡಮೂಡಿದವು. ಪೃಥ್ವಿ, ಅಪ್ಪು, ತೇಜ, ವಾಯ, ಆಕಾಶದ ನೆಲೆಗಳಲ್ಲಿ ಹದಿನಾಲ್ಕು ಲೋಕಗಳ ಚಿತ್ರವನ್ನು ಬಿಡಿಸಲಾಯಿತು. ಮೇಲಣ ಆತ್ಮ ತತ್ವದ ನೆಲೆಯಲ್ಲಿ ಐಕ್ಯ ಪದವಿ ಬಣ್ಣನೆಗೊಂಡಿತು. ನಿರುಪಮ ನಿರ್ವಿಕಾರ ಸ್ಥಲವೆನಿಸಿದ ಏಳನೆಯ ತುದಿಯಲ್ಲಿ 'ಶೂನ್ಯಸಿಂಹಾಸನ' ಮೂರ್ತಗೊಂಡಿತು'. ಹೀಗೆ ಅದ್ಭುತವಾಗಿ, ಆಧ್ಯಾತ್ಮಿಕ ತತ್ವಗಳನ್ನೊಳಗೊಂಡ ನಿಗೂಢತೆಗಳ ಈ ಸಿಂಹಾಸನವನ್ನು ಅಲ್ಲಮಪ್ರಭು ಏರಿದ ರೀತಿಯನ್ನು ಮಹಾಲಿಂಗ ಕವಿ ಈ ರೀತಿ ವರ್ಣಿಸುತ್ತಾನೆ.

ಅಲ್ಲಮಪ್ರಭುವರಂ ವಿಗಡವೇಷದಿ ಬಸವ
ನಲ್ಲಿಗೈತರಲುಕುಕ್ಷಿಂಭರಿಗಳಾದ
ರೆಲ್ಲರೈದಲ್‌ಪೊರಗಮಾಗಳಾ ಬಸವನವಗಂ ಭಕ್ತಿಯಂ ನಟಿಸಲು
ನಿಲ್ಲದಾ ಶೂನ್ಯಸಿಂಹಾಸನವನೇರಿ ಗುರು
ವಲ್ಲಭಂ ಮೂರ್ತಿಗೊಂಡಿರೆ ಬಸವದಂಡೇಶ
ನುಲ್ಲಸತ್‌ಪ್ರಿಯ ಭೋಜನದಿ ತೃಪ್ತಿಪಡಿಸಿತತ್ಕರುಣಂಬಡೆದನವನು||

(ಮ.ಲಿಂ.ವಿ.೧೩-೧೮೫)

ಅಲ್ಲಮಪ್ರಭುವಿನಿಂದ ಆರಂಭವಾದ ಈ ಸಂಪ್ರದಾಯವು ಅಂದಿನಿಂದ ಇಂದಿನವರೆಗೂ ಅನೇಕ ಕಡೆ ಸಂಚರಿಸುತ್ತಾ, ಧರ್ಮಪ್ರಸಾರ ಮಾಡುತ್ತಾ ಬಂದಿದೆ. ಹನ್ನೆರಡನೆಯ ಶತಮಾನದ ಶರಣರು ಈ ಶೂನ್ಯಸಿಂಹಾಸನದ ಮೂಲಪುರುಷರಾಗಿದ್ದಾರೆ. ಆದರೆ ಅಲ್ಲಮಪ್ರಭುವಿನ ನಂತರ ಈ ಪೀಠ ಪರಂಪರೆಯಲ್ಲಿ ಆದ ಸ್ಥಿತ್ಯಂತರಗಳ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ. ಏಕೆಂದರೆ ಬರೆಯದವರ, ಬರೆಯಿಸದವರ ಚರಿತ್ರೆಯ ಕುರುಹುಗಳನ್ನು ಹಿಡಿದು ಹರಿಹರ, ರಾಘವಾಂಕ, ಚಾಮರಸ, ಭೀಮಕವಿ, ನೂರೊಂದು ವಿರಕ್ತರು, ತೋಂಟದ ಸಿದ್ಧಲಿಂಗ ಯತಿಗಳ ಪರಂಪರೆಯಲ್ಲಿ ಬರುವ ಶಿಷ್ಯ-ಪ್ರಶಿಷ್ಯರು, ಬಹು ಕಾಲಾನಂತರದಲ್ಲಿ ಬರೆದ ಶೂನ್ಯ ಪೀಠಾಧಿಕಾರಿಗಳ ಜೀವನ ಚರಿತ್ರೆಗಳು ಭಿನ್ನಾಭಿಪ್ರಾಯ ಮೂಡಿಸಲಿಕ್ಕೆ ಕಾರಣವಾಗಿವೆ. ಪ್ರಸ್ತುತ ಈ ದೀರ್ಘಕಾಲದ ಪರಂಪರೆಯ ಅಧ್ಯಯನವನ್ನು ಮೂರು ಘಟ್ಟಗಳನ್ನಾಗಿ ವಿಭಜಿಸಿ 'ಶೂನ್ಯಪೀಠ' ಪರಂಪರೆಯನ್ನು ಕುರಿತು ಸ್ಥೂಲವಾಗಿ ಹೀಗೆ ವಿವೇಚಿಸಬಹುದಾಗಿದೆ.

ಪ್ರಥಮ ಘಟ್ಟ (ಅಲ್ಲಮಪ್ರಭುವಿನಿಂದ - ತೋಂಟದಸಿದ್ಧಲಿಂಗರವರೆಗೆ ಕ್ರಿ.ಶ.೧೧೯೦-೧೫೦೦)

ಬಸವಣ್ಣನವರ ಅಂತರಂಗದ ಹಂಬಲ ಹಾಗೂ ದೂರದೃಷ್ಟಿಯ ಫಲವಾಗಿ ರಚಿತವಾದ ಶೂನ್ಯಸಿಂಹಾಸನದ ಪ್ರಥಮ ಪಟ್ಟಾಧ್ಯಕ್ಷರಾಗಿ ಅಲ್ಲಮಪ್ರಭು ಷಟ್ಸ್ಥಲ ಧರ್ಮ ಪ್ರಚಾರ ಮಾಡಿದರು. ಜಂಗಮ ಸ್ವರೂಪಿಯಾದ ಅವರು ಕಲ್ಯಾಣದಲ್ಲಿ ಮುಂದೆ ಸಂಭವಿಸಬಹುದಾದ ವಿಪ್ಲವಗಳನ್ನು ಮನಗಂಡು ಚೆನ್ನಬಸವಣ್ಣನಿಗೆ ಎರಡನೇ ಪಟ್ಟವನ್ನು ಕಟ್ಟುತ್ತಾರೆ. ಆ ಸಂದರ್ಭದಲ್ಲಿ ಕಲ್ಯಾಣ ಕ್ರಾಂತಿ ಸಂಭವಿಸಿ ಶರಣರನ್ನು ಬಿಜ್ಜಳನ ಸೇನೆಯು ಬೆನ್ನಟ್ಟುತ್ತದೆ. ಚೆನ್ನಬಸವಣ್ಣನವರು ಉಳುವಿಯವರೆಗೆ ಹೋಗಿ ಅಲ್ಲಿ ಬಯಲಾಗುತ್ತಾರೆ. ಬಯಲಾಗುವ ಮುನ್ನ ಶಿಖಾ ಶೈಲ ಸಿಂಹಾಸನಗಳನ್ನು ದೆಹಲಿಯ ಮಲ್ಲೂಖಾನ ಎಂಬ ವಜೀರನಿಗೆ ಕೊಟ್ಟು, ಮುಂದೆ ನಮ್ಮವರು ಬಂದಾಗ ವಾಪಸ್ಸು ಕೊಡುವಂತೆ ದಾಖಲೆ ಬರೆಸಿಕೊಳ್ಳುತ್ತಾರೆ.[೧೦] ಈ ಕ್ರಾಂತಿಯ ಪರಿಣಾಮವಾಗಿ ಶರಣರು ದಿಕ್ಕಾಪಾಲಾಗಿ ಚದುರಿಹೋದ ನಂತರ ಈ ನಿರಂಜನ ಪಟ್ಟವು ಯಾರ ಮೂಲಕ ಮುಂದುವರಿಯುತ್ತಾ ಬಂದಿತೆಂಬುದು ಸ್ಪಷ್ಟವಿಲ್ಲ.

ಫ.ಗು.ಹಳಕಟ್ಟಿಯವರು ಕಲ್ಯಾಣದ ವಿನಾಶದ ನಂತರ ಪಟ್ಟದಕಲ್ಲು, ಪುಲಿಗೆರೆ, ಬನವಾಸಿ, ಬಳ್ಳಿಗಾವಿ, ಮಂಗಳವಾಡ, ಮುದನೂರು, ಕಪ್ಪಡಿಸಂಗಮ, ಸಿದ್ಧಗಂಗೆಗಳು ವೀರಶೈವ ಧರ್ಮದ ಪ್ರಸಾರ ಕೇಂದ್ರಗಳಾಗಿದ್ದವು[೧೧] ಎನ್ನುತ್ತಾರೆ. ಸುಮಾರು ನಾಲ್ಕು ಶತಮಾನಗಳ ಕಾಲ ಈ ಪೀಠವು ಒಂದೆಡೆ ನಿಲ್ಲದೆ ತನ್ನ ಕೇಂದ್ರವನ್ನು ಬದಲಿಸುತ್ತ ಉಳುವಿ, ಶ್ರೀಶೈಲ, ಸೊಲ್ಲಾಪುರ, ಓರಂಗಲ್ಲು, ಐಹೊಳೆ, ಬನವಾಸಿ, ಬೇಲೂರು, ಹಂಪೆ, ಪುಲಿಗೆರೆ, ಹರದನಹಳ್ಳಿ ಮುಂತಾದ ಕಡೆಗಳಲ್ಲಿ ಸ್ಥಳಾಂತರಗೊಂಡು ತೋಂಟದ ಸಿದ್ಧಲಿಂಗಯತಿಗಳ (ಕ್ರಿ.ಶ.೧೫೦೦) ಕಾಲಕ್ಕೆ ತುಮಕೂರು ಪ್ರಾಂತ್ಯದಲ್ಲಿ ಸುಳಿದೆಗೆದು ಬೆಳೆದು ಅಲ್ಲಿಂದ ಮತ್ತೆ ಎಲ್ಲ ಕಡೆಗೂ ಹಬ್ಬಲಾರಂಭಿಸುತ್ತದೆ. ಈ ಮಾತು ಸೈದ್ಧಾಂತಿಕವಾಗಿ ಅನ್ವಯಿಸುವಂಥದೇ ಹೊರತು ಯಾವುದೇ ಒಂದು ಮಠವನ್ನು ಕುರಿತಾದುದಲ್ಲ.[೧೨] ಕ್ರಿ.ಶ.೧೧೯೦ರ ವೇಳೆಗೆ ಚನ್ನಬಸವಣ್ಣನವರ ಪಟ್ಟವಾದ ಮೇಲೆ ೧೫ನೇ ಶತಮಾನದ ಕೊನೆಯ ಕಾಲಕ್ಕೆ ಬರುವ ತೋಂಟದ ಸಿದ್ಧಲಿಂಗರವರೆಗೆ ಈ ನಿರಂಜನ ಪಟ್ಟವು ಹೇಗೆ ಮುಂದುವರಿಯಿತೆಂಬುದು ತೀರ ಅಸ್ಪಷ್ಟವಾಗಿದೆ. ಆದರೆ ಸ್ವತಃ ಸಿದ್ಧಲಿಂಗಯತಿಗಳೇ ತಮ್ಮ ಕೃತಿಯಾದ 'ಷಟ್‌ಸ್ಥಲ ಜ್ಞಾನ ಸಾರಾಮೃತ'ದಲ್ಲಿ ಗುರುಪರಂಪರೆಯನ್ನು ಹೀಗೆ ಹೇಳಿಕೊಳ್ಳುತ್ತಾರೆ.

> ಅನಾದಿಗಣೇಶ್ವರನ ಶಿಷ್ಯ ಆದಿಗಣೇಶ್ವರ;
> ಆದಿಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ;
> ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ;
> ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದವೆಂಬ ಗಣೇಶ್ವರನು;
> ಜ್ಞಾನಾನಂದವೆಂಬ ಗಣೇಶ್ವರನ ಶಿಷ್ಯರು ಆತ್ಮಗಣೇಶ್ವರನು;

ಆತ್ಮಗಣೇಶ್ವರನ ಶಿಷ್ಯರು ಆಧ್ಯಾತ್ಮ ಗಣೇಶ್ವರ;
ಆಧ್ಯಾತ್ಮ ಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರ;
ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವ ಪ್ರಭುದೇವರು;
ಬಸವಪ್ರಭು ದೇವರ ಶಿಷ್ಯರು ಹರದನಹಳ್ಳಿಯ ಗೋಸಲದೇವರು;
ಹರದನಹಳ್ಳಿಯ ಗೋಸಲದೇವರ ಶಿಷ್ಯರು ಶಂಕರದೇವರು;
ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು
ದಿವ್ಯಲಿಂಗ ದೇವರ ಶಿಷ್ಯರು ಚನ್ನಬಸವೇಶ್ವರ ದೇವರು
ಚೆನ್ನಬಸವೇಶ್ವರ ದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶುಸಿದ್ಧಲಿಂಗ

ನಾನಯ್ಯ(ವ.೪)

೧. ಅನಾದಿಗಣೇಶ್ವರ, ೨. ಆದಿಗಣೇಶ್ವರ, ೩. ನಿರ್ಮಾಯಗಣೇಶ್ವರ, ೪. ನಿರಂಜನಗಣೇಶ್ವರ ೫. ಜ್ಞಾನಾನಂದಗಣೇಶ್ವರ, ೬. ಆತ್ಮಗಣೇಶ್ವರ, ೭.ರುದ್ರಗಣೇಶ್ವರ, ೮. ಬಸವಪ್ರಭುದೇವರು ೯. ಆದಿಲಿಂಗದೇವರು, ೧೦. ಚೆನ್ನವೀರೇಶ್ವರದೇವರು, ೧೧. ಹರದನಹಳ್ಳಿಗೋಸಲದೇವರು, ೧೨. ಶಂಕರದೇವರು, ೧೩. ದಿವ್ಯಲಿಂಗದೇವರು, ೧೩. ಚನ್ನಬಸವೇಶ್ವರದೇವರು. ಈ ಗೋಸಲ ಪರಂಪರೆಯ ಹರದನಹಳ್ಳಿಯ ಮಠದ ೧೫ನೇ ಪೀಠಾಧ್ಯಕ್ಷರಾಗಿ ತೋಂಟದ ಸಿದ್ಧಲಿಂಗಯತಿಗಳು ಅಧಿಕಾರ ವಹಿಸಿಕೊಳ್ಳುತ್ತಾರೆ ಎಂಬುದು ಈ ಮೇಲಿನ ಗುರುಪರಂಪರೆಯಿಂದ ಸ್ಪಷ್ಟವಾಗುತ್ತದೆ.

ನಿರಂಜನವಂಶರತ್ನಾಕರ (ಭಾಗ-೧)ದಲ್ಲಿ ಶೂನ್ಯಪೀಠದ ಅಧ್ಯಕ್ಷರ ವಿವರ ಮತ್ತು ಅವರು ಐಕ್ಯವಾದ ಸ್ಥಲಗಳನ್ನು ಈ ರೀತಿ ಉಲ್ಲೇಖಿಸಿದ್ದಾರೆ. ೧. ಅಲ್ಲಮಪ್ರಭು - ಶ್ರೀಶೈಲದ ಕದಳಿಮಠದಲ್ಲಿ ಐಕ್ಯ. ೨. ಚೆನ್ನಬಸವೇಶ್ವರರು - ಉಳುವಿಯಲ್ಲಿ, ೩. ಸಿದ್ಧರಾಮೇಶ್ವರರು - ಸೊನ್ನಲಾಪುರದಲ್ಲಿ ೪. ಅನಾದಿಗಣನಾಥ - ಕೊಂಕಣ ಕಡಲ ತಡಿಯ ಕಲ್ಮಠದಲ್ಲಿ ೫. ಆದಿಗಣೇಶ್ವರ(ಪ್ರಭುಸ್ವಾಮಿ) - ಕೊಳ್ಳೇಗಾಲ ತಾಲ್ಲೂಕು ಕುಂತೂರು ಪ್ರಭುಸ್ವಾಮಿ ಬೆಟ್ಟದ ಬಳಿಯ ಮಠದಲ್ಲಿ, ೬. ನಿರ್ಮಾಯ ಗಣೇಶ್ವರರು(ಮಹದೇಶ್ವರಸ್ವಾಮಿ) - ಕೊಳ್ಳೇಗಾಲ ತಾಲೂಕಿನ ಮಹದೇಶ್ವರ ಬೆಟ್ಟದಲ್ಲಿ, ೭. ನಿರಂಜನ ಸ್ವಾಮಿಗಳು - ಕಲ್ಯಾಣದ ತ್ರಿಪುರಾಂತಕ ಕೆರೆಯ ತಟದ ರುದ್ರಮುನಿ ಸ್ವಾಮಿಗಳ ಮಠದಲ್ಲಿ, ೮. ಜ್ಞಾನಾನಂದಸ್ವಾಮಿಗಳು - ಶ್ರೀಶೈಲದ ಪ್ರಭುದೇವರ ಮಠದಲ್ಲಿ, ೯. ಆತ್ಮಗಣವರರು - ಶ್ರೀಶೈಲದ ಕದಳಿಯಗುಹೆಯಲ್ಲಿ, ೧೦. ಆಧ್ಯಾತ್ಮಗಣನಾಥರು - ತಿರುವಣ್ಣಾಮಲೆ ಕೆಂಗನಮಃಶಿವಾಯ ಗವಿಯಲ್ಲಿ, ೧೧. ರುದ್ರಮುನಿಸ್ವಾಮಿಗಳು - ಚಿತ್ರದುರ್ಗ ಜಿಲ್ಲೆ ನಾಯಕನಹಟ್ಟಿಯಲ್ಲಿ ೧೨. ಬಸವಪ್ರಭುಸ್ವಾಮಿಗಳು- ಬಿಜಾಪುರ ಜಿಲ್ಲೆ ಜಮುಖಂಡಿ ತಾಲೂಕು ತೇರದಾಳದಲ್ಲಿ, ೧೩. ಆದಿಲಿಂಗದೇವರು - ಬೆಳಗಾಂ ಜಿಲ್ಲೆ ಸವದತ್ತಿ ತಾಲೂಕು ಸೊಗಲಕ್ಷೇತ್ರದ ಕಲ್ಲೂರು ಗುಡ್ಡದಲ್ಲಿ, ೧೪. ಚೆನ್ನವೀರಸ್ವಾಮಿಗಳು- ಸವದತ್ತಿ ತಾಲೂಕು ಮುನವಳ್ಳಿಯ ಪಂಚಲಿಂಗೇಶ್ವರ ಮಠದಲ್ಲಿ, ೧೫. ಹರದನಹಳ್ಳಿಯ ಗೋಸಲದೇವರು - ತುಮಕೂರು ಜಿಲ್ಲೆ ಸಿದ್ಧಗಂಗೆ ಬೆಟ್ಟದಲ್ಲಿ, ೧೬. ಶಂಕರದೇವರು - ತುಮಕೂರು

ಜಿಲ್ಲೆ ಕೊರಟಗೆರೆ ಸಮೀಪದ ಬೆಟ್ಟದಲ್ಲಿ, ೧೭. ದಿವ್ಯಲಿಂಗದೇವರು - ಮೈಸೂರು ಜಿಲ್ಲೆ, ಚಾಮರಾಜನಗರ ತಾಲೂಕು ಹರದನಹಳ್ಳಿಯಲ್ಲಿ, ೧೮. ಗೋಸಲಚನ್ನಬಸವೇಶ್ವರರು - ತುಮಕೂರು ಜಿಲ್ಲೆ ಗುಬ್ಬಿಯಲ್ಲಿ, ೧೯. ತೋಂಟದಸಿದ್ಧಲಿಂಗೇಶ್ವರರು - ತುಮಕೂರು ಜಿಲ್ಲೆಯ, ಕುಣಿಗಲ್ಲು ತಾಲ್ಲೂಕು ಎಡೆಯೂರಿನಲ್ಲಿ.[೨೩] ಈ ಗುರು ಶಿಷ್ಯ ಸಂಬಂಧದ ಈ ಮೂಲವು ಶೂನ್ಯಪೀಠಾಧಿಕಾರದಲ್ಲಿ ಮುಂದುವರಿದುಕೊಂಡು ಬಂದಿರುವುದಕ್ಕೆ ಈ ಹಿಂದೆ ನೋಡಿದ ಸಿದ್ಧಲಿಂಗೇಶ್ವರರ ವಚನವೂ ಸಾಕ್ಷಿಯಾಗಿದೆ.

'ನಿರಂಜನಜಂಗಮ ವಂಶದರ್ಪಣ'ದಲ್ಲಿ ಇದೇ ಗುರುಪರಂಪರೆ ಹೇಳಲಾಗಿದ್ದರೂ, ನಿರ್ಮಾಯ ಗಣೇಶ್ವರರ ನಂತರ 'ಸ್ವಯಂ ಜ್ಯೋತಿರೂಪ' ಎಂಬ ಗಣೇಶ್ವರರ ಹೆಸರು ಹೆಚ್ಚಿಗೆ ಬಂದಿದೆ.[೨೪] ಮಹಾಲಿಂಗ ಕವಿಯ 'ಮಹಾಲಿಂಗೇಂದ್ರ ವಿಜಯ'ದಲ್ಲಿ ಅಲ್ಲಮ, ಚನ್ನಬಸವಣ್ಣನವರ ನಂತರವೇ ತೋಂಟದಸಿದ್ಧಲಿಂಗರು ಮೂರನೆಯ ಗುರುಗಳಾಗಿ ಕಂಡುಬರುತ್ತಾರೆ. ಆದರೆ ಇದು ತೀರಾ ಅಸ್ಪಷ್ಟವಾದ ವಿಚಾರವಾಗಿದೆ. ನಿರಂಜನವಂಶರತ್ನಾಕರವು ಈ ಸಂಪ್ರದಾಯವನ್ನು ಅಲ್ಲಮಪ್ರಭುದೇವನಿಂದ ಪ್ರಾರಂಭಿಸಿ ಆತನ ತರುವಾಯ ಚನ್ನಬಸವಣ್ಣ, ಸಿದ್ಧರಾಮರನ್ನು ಹೆಸರಿಸಿ ಅನಾದಿಗಣೇಶ್ವರನಿಂದ ಮುಂದುವರಿಸುತ್ತದೆ. ಇದರನ್ವಯ ಅನಾದಿಗಣೇಶ್ವರನು ಈ ಪರಂಪರೆಯಲ್ಲಿ ನಾಲ್ಕನೆಯವನಾಗುತ್ತಾನೆ. ತೋಂಟದಾರ್ಯರು ಹತ್ತೊಂಭತ್ತನೆಯವರಾಗುತ್ತಾರೆ. 'ನಿರಂಜನ ಜಂಗಮವಂಶದರ್ಪಣ'ದಲ್ಲಿ ನಿರ್ಮಾಯಗಣೇಶ್ವರರ ಹೆಸರಿನ ನಂತರ 'ಸ್ವಯಂಜ್ಯೋತಿ ರೂಪ' ಎಂಬ ಹೆಸರು ಸೇರಲ್ಪಡುವುದರಿಂದ ಇಪ್ಪತ್ತನೆಯವರಾಗುತ್ತಾರೆ. ವಿರಕ್ತತೋಂಟದಾರ್ಯನ 'ಸಿದ್ಧೇಶ್ವರ ಪುರಾಣ' ಮತ್ತು ಶಾಂತೇಶನ 'ಸಿದ್ಧೇಶ್ವರ ಪುರಾಣ'ಗಳು ಕೂಡ ತೋಂಟದ ಸಿದ್ಧಲಿಂಗರು ಹೇಳಿದ ಗುರುಪರಂಪರೆಯನ್ನೇ ಬೆಂಬಲಿಸುತ್ತಿರುವುದರಿಂದ ಶೂನ್ಯಪೀಠದ ಹದಿನಾರನೆಯ ಗುರುಗಳಾಗುತ್ತಾರೆ.

ಕಲ್ಯಾಣ ಪಟ್ಟವಲ್ಲರಿಯಲ್ಲಿ ಅಲ್ಲಮಪ್ರಭು, ಚನ್ನಬಸವೇಶ್ವರ, ಸಿದ್ಧರಾಮರು ಶೂನ್ಯಸಿಂಹಾಸನದ ಕರ್ತೃಗಳಾಗಿ ಸ್ಫುಟವಾಗಿದ್ದಾರೆ. ಸಿದ್ಧರಾಮರ ತರುವಾಯ ಶೂನ್ಯಸಿಂಹಾಸನ ಪರಂಪರೆಯ ಚರಿತ್ರೆಯು ಅಜ್ಞಾತವಾಗಿರುವುದರ ಕಾರಣ, ಸಾಂಕೇತಿಕವಾಗಿ ಚನ್ನಬಸವಣ್ಣನು ಮಲ್ಲೂಖಾನನ ಮೂಲಕ ದಿಲ್ಲಿಗೆ ಶೂನ್ಯಸಿಂಹಾಸನ ಶಿಖಾ ಶೈಲಗಳನ್ನು ಅನಾಮತ್ತಾಗಿ ಸಂರಕ್ಷಿಸಲು, ಉತ್ತರಾಧಿಕಾರಿಗೆ ನೀಡಲು ಕಳುಹಿಸಿದರೆಂಬುದು ದಂತಕಥೆಯಾಗಿ ಹೋಗಿದೆ.[೨೫] ಒಟ್ಟಾರೆಯಾಗಿ ಶೂನ್ಯಪೀಠದ ಗುರು ಪರಂಪರೆಯನ್ನು ಅಲ್ಲಮಪ್ರಭುವಿನಿಂದಲೇ ಆರಂಭಿಸಬೇಕು. ಕಾರಣ 'ನಿರಂಜನ ವಂಶರತ್ನಾಕರ'ವೆಂಬ ಕೃತಿಯಲ್ಲಿ ಮೂಡಿ ಬಂದಿರುವ ಪ್ರಕಾರ ತೋಂಟದ ಸಿದ್ಧಲಿಂಗರು ೧೯ನೆಯ ಗುರುಗಳೆಂಬುದು ಒಪ್ಪಬೇಕಾದ ಸಂಗತಿಯಾಗಿದೆ.

ಕಲ್ಯಾಣ ಕ್ರಾಂತಿಯ ನಂತರ ಶೂನ್ಯಸಿಂಹಾಸನದ ಇತಿಹಾಸವು ಕಣ್ಮರೆಯಾಗಿರಬಹುದು, ಆದರೆ ಅದರ ಕೆಲಸ ಕಾರ್ಯಗಳು ನಿಲ್ಲದೆ ಅವಿರತವಾಗಿ ನಡೆದಿರಬೇಕು ಎಂಬುದನ್ನು ತೋಂಟದಸಿದ್ಧಲಿಂಗ ಯತಿಗಳು ತಮ್ಮ ವಚನದಲ್ಲಿ ಹೇಳಿಕೊಂಡಿರುವ ಪೂರ್ವದ ಗುರುಶಿಷ್ಯ ಪರಂಪರೆಯು ಸುಳಿವು ನೀಡುತ್ತದೆ. ಆದಿ ಪ್ರಯತ್ನವೆಂಬಂತೆ ರೇವಣಸಿದ್ಧೇಶ್ವರರು ತಮ್ಮ ಮಗನಾದ ರುದ್ರಮುನಿಸ್ವಾಮಿಯನ್ನು ಒಡಗೊಂಡು ಶಿವಗಂಗೆಯಲ್ಲಿ ಮಠವೊಂದನ್ನು ನಿರ್ಮಿಸಿ, ಅದ್ಭುತವಾದ ಕೆಲಸ ಮಾಡಿದರು. ಅವರ ಲಿಂಗೈಕ್ಯಾನಂತರ ಆ ಕಾರ್ಯಗಳು ಸ್ಥಗಿತಗೊಂಡು, ಮುಂದೆ ಹರದನಹಳ್ಳಿಯಲ್ಲಿ ವೀರಬಣಂಜುಗಳ ವರಿಂದ ಶೂನ್ಯಪೀಠದ ಪರಂಪರೆ ಪುನಃ ನಡೆದು ಬರುವಂತೆ ಮಾಡಿದ ಪ್ರಯತ್ನ ಕುತೂಹಲಕಾರಿ ಯಾದುದು.[೧೬] ಶೂನ್ಯಸಿಂಹಾಸನ ಪರಂಪರೆಯು ಪುನರುಜ್ಜೀವನಗೊಂಡದ್ದು ಹರದನಹಳ್ಳಿಯ ಗೋಸಲ ಪೀಠದಿಂದ. ಆದರೆ ಗೋಸಲ ಪಟ್ಟವಲ್ಲರಿ ಮತ್ತು ಕಲ್ಯಾಣ ಪಟ್ಟವಲ್ಲರಿಗಳ ನಡುವಣ ಕಾಲವು ನಿಗೂಢವಾಗಿದೆ. ಈ ನಿಗೂಢತೆಯನ್ನು ಭೇದಿಸಿ ಗುರುಪರಂಪರೆಗೆ ನಿರಂತರತೆಯನ್ನು ಕಲ್ಪಿಸುವ ಮತ್ತು ಹರದನಹಳ್ಳಿಯ ಮೂಲ ಮಠದ ಸ್ಥಾಪನೆಗೆ ಕಾರಣವಾದ ಘಟನೆಯೊಂದನ್ನು, ಕವಿ ಶಾಂತೇಶ ಹಾಗೂ ವಿರಕ್ತತೋಂಟದಾರ್ಯರ 'ಸಿದ್ದೇಶ್ವರ ಪುರಾಣಗಳು' ಈ ರೀತಿ ನಿರೂಪಿಸುತ್ತವೆ.

"ಒಂದು ಸಲ ಬಣಜಿಗರು ಎತ್ತುಗಳ ಮೇಲೆ ಸಾಮಾನುಗಳನ್ನು ಹೇರಿಕೊಂಡು ಮಧುರೆಯ ಕಡೆಗೆ ವ್ಯಾಪಾರಕ್ಕಾಗಿ ಹೊರಟಿದ್ದರು. ಅವರು ಮಾರ್ಗ ಮಧ್ಯದ ಕಾವೇರೀ ತೀರದ ಗಜಾರಣ್ಯ (ತಲಕಾಡು)ದಲ್ಲಿ ಬೀಡುಬಿಟ್ಟರು. ಅವರು ಅಲ್ಲಿದ್ದ ಲಿಂಗವನ್ನು ಲಿಂಗವೆಂದು ತಿಳಿಯದೆ, ಅದರ ಅಕ್ಕಪಕ್ಕದಲ್ಲಿ ಗುಂಡು ಕಲ್ಲುಗಳನ್ನಿಟ್ಟು ಒಲೆ ಮಾಡಿ ಬೆಂಕಿ ಹಚ್ಚಿ ಮಡಕೆಯನ್ನು ಅದರ ಮೇಲಿಟ್ಟರು. ಕೂಡಲೇ ಮಧ್ಯದ ಲಿಂಗದ ಕಲ್ಲಿನಿಂದ ಹಾಲು ಒಸರಿ ಬೆಂಕಿ ನಂದಿತು. ಇದೇನಿದು ಮಡಕೆ ಒಡೆಯಿತೇ ಎಂದು ಪರೀಕ್ಷಿಸಲು ಮಡಕೆಯಲ್ಲಿದ್ದ ನೀರು ಹಾಗೆಯೇ ಇದ್ದಿತು. ಆಶ್ಚರ್ಯಗೊಂಡ ಅವರು ಕೆಂಡವನ್ನು ಸರಿಸಿ ನೋಡಲು ಲಿಂಗದಿಂದ ಹಾಲು ಹೊರಬರುತ್ತಿತ್ತು. ಕೂಡಲೇ ಲಿಂಗಕ್ಕೆ ನಮಿಸಿ, ಭಜಿಸಿ ಅದಕ್ಕೆ ಅಮೃತೇಶನೆಂಬ ಹೆಸರಿಟ್ಟರು. ಚೀಲದಲ್ಲಿದ್ದ ಅಡಕೆಯನ್ನು ನೋಡಲು ಅವು ಅಳಿಲೆ ಕಾಯಿ ಆಗಿದ್ದವು. ಗಾಬರಿಗೊಂಡ ಬಣಜಿಗರು ಆ ದೇವರಲ್ಲಿ 'ಹಿಂದಿನಂತೆ ಅಡಕೆಯಾದರೆ ಅದನ್ನು ಮಾರಿ ಬಂದ ಲಾಭದಲ್ಲಿ ಗುಡಿ ಕಟ್ಟಿಸುವೆವು ಎಂದು ಹರಕೆ ಹೊತ್ತರು. ಅದೇ ರೀತಿ ಗುಡಿ ಕಟ್ಟಿಸಿ ವಾಣಿಜ್ಯ(ಹರದನಹಳ್ಳಿ)ಪುರವೆಂಬ ಪಟ್ಟಣವನ್ನು ನಿರ್ಮಿಸಿ ಆ ಲಿಂಗವನ್ನು 'ದಿವ್ಯಲಿಂಗೇಶ್ವರ'[೧೭] ಎಂಬ ಹೆಸರಿನಿಂದ ಕರೆದರು. ಸಮಯಾಚಾರಕ್ಕಾಗಿ ಅಲ್ಲಿಯೇ ಮಠವೊಂದನ್ನು ಕಟ್ಟಿಸಿ ಅಲ್ಲಿ ಅನಾದಿ ಗಣೇಶ್ವರ[೧೮]ನೆಂಬ ಒಬ್ಬ ವಿರಕ್ತನನ್ನು ಮಠಾಧ್ಯಕ್ಷರನ್ನಾಗಿ ಮಾಡಿದರು. ನಂತರ ಆದಿ-ನಿರ್ಮಾಯ-ನಿರಂಜನ-ಜ್ಞಾನಾನಂದ-ಆತ್ಮ-ಆಧ್ಯಾತ್ಮ-ರುದ್ರ-ಬಸವಪ್ರಭು-ಆದಿಲಿಂಗೇಶ-ಚೆನ್ನವೀರೇಶ-ಗೋಸಲ

ಯತೀಶ-ಶಂಕರೇಶ-ದಿವ್ಯಲಿಂಗೇಶ[೧೮] ಎಂಬುವವರು ವಿರಕ್ತ ಪಟ್ಟವಾಳಿದ ಮೇಲೆ ತೋಂಟದ ಸಿದ್ಧಲಿಂಗನು ತನ್ನ ಎಂಟನೇ ವಯಸ್ಸಿನಲ್ಲಿ ಆ ಮಠಕ್ಕೆ ಬಂದಾಗ ಚೆನ್ನಬಸವದೇಶಿಕ ಎಂಬುವವರು ಆ ಮಠಾಧ್ಯಕ್ಷರಾಗಿದ್ದರು.[೧೯] ಗುಬ್ಬಿಯ ಮಲ್ಲಣಾರ್ಯ ಮತ್ತು ತೋಂಟದ ಸಿದ್ಧಲಿಂಗ ಯತಿಗಳು ಈತನ ಶಿಷ್ಯರಲ್ಲಿ ಪ್ರಮುಖರಾಗಿದ್ದರು.[೨೦] ಈ ವಿಷಯವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಅಳಿದು ಹೋದ ಶೂನ್ಯಸಿಂಹಾಸನಕ್ಕೆ ಪುನಃ ಮೂರ್ತ ಸ್ವರೂಪ ಕೊಟ್ಟು ಹರದನಹಳ್ಳಿಯ ಮಠದಲ್ಲಿ ಅದನ್ನು ಪ್ರತಿಷ್ಠಾಪಿಸಿದರೆಂಬುದು ಗೊತ್ತಾಗುತ್ತದೆ. ಆದುದರಿಂದ ಈ ಪೂರ್ವದ ಗೋಸಲ ಸಿದ್ಧೇಶ್ವರರ ಹಿಂದಿನ ಹನ್ನೊಂದು ಜನ ಗುರುಗಳು ನಿರಂಜನ ಜಂಗಮ ಪದವನ್ನು ಹೊಂದಿರಲಿಲ್ಲವೆಂದು ತೋರುವುದು. ನಿರಂಜನ ಜಂಗಮಾಧಿಕಾರ ಗೋಸಲ ಸಿದ್ಧೇಶ್ವರರಿಂದಲೇ ಮುಂದುವರಿದು ಮೂಲ ಪೀಠದ ಉತ್ತರಾಧಿಕಾರವನ್ನು ಶಂಕರದೇವರಿಗೆ ವಹಿಸಿರಬೇಕು.[೨೦]

ಮೇಲಿನ ಗುರುಪರಂಪರೆಯಲ್ಲಿ ಹೆಸರಿಸಿರುವ ಅನಾದಿ-ಆದಿ-ನಿರ್ಮಾಯ-ನಿರಂಜನ-ಜ್ಞಾನಾನಂದ-ಆತ್ಮ-ಆಧ್ಯಾತ್ಮ-ರುದ್ರರೆಂಬ ಎಂಟು ಗಣೇಶ್ವರರು ಚಾರಿತ್ರಿಕ ನಿಜ ವ್ಯಕ್ತಿಗಳಾಗಿರದೆ ಶರಣ ಸಿದ್ಧಾಂತದ ಪರಿಭಾಷೆಯ 'ನಿರಂಜನಾದಿ ಆಚಾರಾಂತ್ಯ ಒಂಬತ್ತು ಲಿಂಗತತ್ವಗಳಷ್ಟೇ ಆಗಿವೆ. ಕಾರಣ ತೋಂಟದ ಸಿದ್ಧಲಿಂಗ ಯತಿಗಳ ನಿಜವಾದ ಗುರುಪರಂಪರೆಯು ವಾಸ್ತವವಾಗಿ ಬಸವಪ್ರಭು-ಆದಿ-ದಿವ್ಯಲಿಂಗ-ಚೆನ್ನವೀರ-ಗೋಸಲ-ಶಂಕರ-ದಿವ್ಯಲಿಂಗ-ಚನ್ನಬಸವರಿಂದ ಆರಂಭವಾಗುತ್ತದೆ ಎನ್ನುತ್ತಾರೆ.[೨೨] ಇದಕ್ಕೆ ಪೂರಕವೆನ್ನುವಂತೆ ಎಂ.ಎಂ.ಕಲಬುರ್ಗಿಯವರು ಸಿದ್ಧರಾಮ ಮತ್ತು ತೋಂಟದ ಸಿದ್ಧಲಿಂಗಯತಿಗಳ ನಡುವೆ ಬರುವ ಅನಾದಿ ಗಣೇಶ್ವರರಿಂದ ಹಿಡಿದು, ಚನ್ನಬಸವೇಶ್ವರ ದೇವರವರೆಗಿನ ಎಲ್ಲರನ್ನೂ ಸಂದೇಹದಿಂದ ನೋಡುತ್ತ ಇವು ಶೂನ್ಯಸಿಂಹಾಸನ ಪರಂಪರೆಗೆ ನಿರಂತರತೆಯನ್ನು ಕಂಡುಕೊಳ್ಳಲು ನಿರ್ಮಿಸಿದ ಕಲ್ಪಿತ ನಾಮಗಳು ಎಂಬ ಆಕ್ಷೇಪಣೆಯನ್ನು ಎತ್ತುತ್ತಾರೆ.[೨೩] ಆದರೆ ಈ ಕೆಳಗಿನ ಅಂಶಗಳನ್ನು ಗಮನಿಸಿದಾಗ ಅವು ನಿಜನಾಮಗಳಾಗಿರುವ ಸಾಧ್ಯತೆಗಳನ್ನು ಅರಿಯಬಹುದಾಗಿದೆ.

೧. ನಿರಂಜನ ವಂಶರತ್ನಾಕರ ಕೃತಿಯಲ್ಲಿ ಹೆಸರಿಸಿರುವಂತೆ ಈ ಪರಂಪರೆಯಲ್ಲಿ ಆರನೆಯವನಾಗಿ ಬರುವ ನಿರ್ಮಾಯ ಗಣೇಶ್ವರ, ಇದರಲ್ಲಿ ನಿರ್ಮಾಯವೆಂಬುದರ ಕನ್ನಡದ ರೂಪ 'ಮಾದೇಶ್ವರ', ಈ ಮಾದೇಶ್ವರನ ಗದ್ದುಗೆ ವೀರಶೈವ ಪುಣ್ಯ ಕ್ಷೇತ್ರವಾದ ಶ್ರೀಮಲೆಯಲ್ಲಿ ಇಂದಿಗೂ ಇದೆ. ಈತನು ಒಬ್ಬ ಚಾರಿತ್ರಿಕ ವ್ಯಕ್ತಿಯಾಗಿದ್ದಾನೆ.[೨೪]

೨. ಆರನೆಯ ನಿರ್ಮಾಯಗಣೇಶ್ವರ ಮತ್ತು ಹದಿನೈದನೆಯ ಗೋಸಲದೇವರ ವಿಷಯವಾಗಿ ಎರಡು ತಾಮ್ರಪಟಗಳು ಲಭಿಸುತ್ತಿದ್ದು, ಇವುಗಳಲ್ಲಿ ಒಂದು ಶಾಸನದ ಪೂರ್ವಾರ್ಧದಲ್ಲಿ ಗೋಸಲಯತೀಶನ,

ಉತ್ತರಾರ್ಧದಲ್ಲಿ ನಿರ್ಮಾಯಗಣೇಶ್ವರನ ವಿಷಯ ಬಂದರೆ, ಇನ್ನೊಂದು ಶಾಸನದಲ್ಲಿ ನಿರ್ಮಾಯ ಗಣೇಶ್ವರನ ವಿಷಯವೇ ಕೊಂಚ ವ್ಯತ್ಯಾಸದಿಂದ ಬರುತ್ತದೆ.[೨೫]

೩. ವೀರಬಣಜಿಗರು ಹರದನಹಳ್ಳಿಯಲ್ಲಿ ಮಠವನ್ನು ಸ್ಥಾಪಿಸಲಿಕ್ಕೆ ರೇವಣಸಿದ್ಧೇಶ್ವರರೇ ಮುಖ್ಯಕಾರಣ. ಅನಾದಿಗಣವರನ ಮತ್ತೊಂದು ಹೆಸರು ಪ್ರಭುಸ್ವಾಮಿ, ಈ ಅನಾದಿಗಣವರನಿಗೆ ರೇವಣಸಿದ್ಧೇಶ್ವರರು ರುದ್ರಮುನಿಶಿವಾಚಾರ್ಯರಿಂದ ಷಟಸ್ಥಲೋಪದೇಶ ಕೊಡಿಸಿದರು.[೨೬]

೪. ಹರದನಹಳ್ಳಿಯಲ್ಲಿ ಶೂನ್ಯಸಿಂಹಾಸನ ಪರಂಪರೆಯ ಅತ್ಯಂತ ಪ್ರಾಚೀನ ವಿರಕ್ತಮಠವೊಂದು ಚಿಕ್ಕದೇವರಾಯನ ಕಾಲದಲ್ಲಿ ಅತ್ಯಂತ ಕೀರ್ತಿ ಪ್ರತಿಷ್ಠೆಗಳಿಂದ ಕೂಡಿದ್ದಿತು. ರಾಜನು ಕ್ರಿ.ಶ.೧೬೭೫ರಲ್ಲಿ ಈ ಮಠವನ್ನು ಹಾಳುಗೆಡವಿಸಿ ಪಕ್ಕದಲ್ಲಿಯೇ ಗೋಪಾಲಕೃಷ್ಣಸ್ವಾಮಿಯ ದೇವಾಲಯವನ್ನು ಕಟ್ಟಿಸಿದನು. ವೀರಶೈವ ಧರ್ಮದ ಸಂಕೇತಗಳಿರುವ ಆ ಮಠದ ಕಲ್ಲುಕಂಬಗಳು, ಗೋಡೆಯ ಕಂಬಗಳು ಈಗಲೂ ವೈಷ್ಣವ ದೇವಾಲಯದಲ್ಲಿ ಕಂಡುಬರುತ್ತವೆ.[೨೭]

೫. ಎಂ.ಎಂ.ಕಲಬುರ್ಗಿಯವರು ಅನಾದಿಗಣೇಶ್ವರನಿಂದ ಹಿಡಿದು ಚನ್ನಬಸವೇಶ್ವರರವರೆಗೆ ಬರುವ ಹದಿನಾಲ್ಕು ಜನರ ಹೆಸರುಗಳನ್ನು ಕಲ್ಪಿತವೆನ್ನುತ್ತಾರೆ. ಆದರೆ ಗೋಸಲ ಪೀಠದ ನಿಜಪಟ್ಟವಲ್ಲರಿ ಆರಂಭವಾಗುವುದು ಒಂಬತ್ತನೆಯವರಾದ ಬಸವಪ್ರಭುದೇವರಿಂದ, ಅಲ್ಲಿಂದ ಮುಂದೆ ಬರುವ ವರೆಲ್ಲರೂ ಚಾರಿತ್ರಿಕ ವ್ಯಕ್ತಿಗಳೇ.

೬. ಪಿ.ಎಂ.ಗಿರಿರಾಜು ಅವರು ಅನಾದಿ-ಆದಿ-ನಿರ್ಮಾಯ-ನಿರಂಜನ-ಜ್ಞಾನನಂದ-ಆತ್ಮ-ಅಧ್ಯಾತ್ಮ-ರುದ್ರರೆಂಬ ಎಂಟು ಮಂದಿ ಗಣೇಶ್ವರರಿಗೆ ಒಂಬತ್ತು ಲಿಂಗ ತತ್ವಗಳನ್ನು ಆರೋಪಿಸುತ್ತಾರೆ. ಅದಕ್ಕೆ ಒಂಬತ್ತನೆಯ ಆಚಾರಲಿಂಗವನ್ನು ಬಸವಣ್ಣನವರಿಗೆ ಅಭೇದವಾಗಿ ಕಲ್ಪಿಸುತ್ತಾರೆ. ಇದು ಹೇಗೆ ಸಾಧ್ಯವೆಂಬುದನ್ನು ವಿವರಿಸುವುದಿಲ್ಲ. ಈ ಮೇಲಿನ ಕಾರಣಗಳಿಂದಾಗಿ ಕಲಬುರ್ಗಿಯವರ ಮತ್ತು ಪಿ.ಎಂ.ಗಿರಿರಾಜ ಅವರ ಅಭಿಪ್ರಾಯಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕಾದ ಅವಶ್ಯಕತೆ ಇದೆ.

ದ್ವಿತೀಯ ಘಟ್ಟ - (ತೋಂಟದಸಿದ್ಧಲಿಂಗರಿಂದ - ಕಟ್ಟಿಗೆಹಳ್ಳಿಸ್ವಾಮಿಗಳವರೆಗೆ)

ಹನ್ನೆರಡನೆಯ ಶತಮಾನದಲ್ಲಿ ಚರಜಂಗಮನಾಗಿ ಸಂಚರಿಸುತ್ತ ಸಮಾಜ ಉದ್ಧಾರ ಕಾರ್ಯಗಳನ್ನು ಕೈಗೊಂಡ ಅಲ್ಲಮಪ್ರಭುವಿನಂತೆ ಹದಿನೈದನೆಯ ಶತಮಾನದಲ್ಲಿ 'ದ್ವಿತೀಯಅಲ್ಲಮ'ನೆನಿಸಿದ ತೋಂಟದ ಸಿದ್ಧಲಿಂಗಯತಿಗಳು ಏಳುನೂರಾಎಪ್ಪತ್ತು ಅಮರ ಗಣ ಸಮೂಹದೊಂದಿಗೆ ಹಳ್ಳಿಗೆ 'ಏಕರಾತ್ರಿ', ಪಟ್ಟಣಕ್ಕೆ 'ಪಂಚರಾತ್ರಿ' ಎಂಬ ಗಾದೆಯಂತೆ ದೇಶ ಪರ್ಯಟನೆ ಮಾಡಿ

ಭಕ್ತರನ್ನುದ್ಧರಿಸಿದ್ದಾರೆ. ಅಪಾರ ಭಕ್ತ ವೃಂದವನ್ನು, ಶಿಷ್ಯ ಸಮೂಹವನ್ನು ಪಡೆದ ಇವರು ತುಮಕೂರು ಜಿಲ್ಲೆಯ ಕುಣಿಗಲ್ಲು ತಾಲೂಕಿನ ಎಡೆಯೂರಿನಲ್ಲಿ ಬಯಲಾಗುತ್ತಾರೆ. ಇವರ ಅಪಾರ ಶಿಷ್ಯಬಳಗದಲ್ಲಿ ಬೋಳಬಸವೇಶ್ವರರು ಶೂನ್ಯಪೀಠದ ಉತ್ತರಾಧಿಕಾರಿಗಳಾಗುತ್ತಾರೆ. ಗುರುವಿನ ಹಾದಿಯಲ್ಲೇ ನಡೆದ ಇವರು ಆ ಪೀಠದ ಘನತೆ ಗೌರವಗಳನ್ನು ಹೆಚ್ಚಿಸುತ್ತಾರೆ. ಬೋಳಬಸವರ ತರುವಾಯ ಈ ಪರಂಪರೆಗೆ ಉತ್ತರಾಧಿಕಾರ ಹೊಂದಿದವರ ಬಗ್ಗೆ ತಿಳಿಸುವ ಕೃತಿಗಳಲ್ಲಿ ಏಕರೂಪತೆ ಕಂಡುಬರುವುದಿಲ್ಲ.

ಮಹಾಂತ ಸ್ವಾಮಿಗಳ ಪ್ರಕಾರ[೨೮]: ಬೋಳಬಸವ- ಉದ್ದವಾದಗುರು- ಸಿದ್ಧಕಟ್ಟಿಗೆಹಳ್ಳಿದೇವ.

ಸೋಮಶೇಖರ ಶಿವಯೋಗಿಯ ಪ್ರಕಾರ[೨೯]: ಬೋಳಬಸವ-ಗುಮ್ಮಳಾಪುರದ ಸಿದ್ಧವೀರಯ್ಯ-ಗಗನದಯ್ಯ-ಕಟ್ಟಿಗೆಹಳ್ಳಿಸಿದ್ಧಲಿಂಗೇಶ್ವರ

ಮಹದೇವ ಕವಿಯ ಪ್ರಕಾರ[೩೦]: ಬೋಳಬಸವ-ಸಿದ್ಧವೀರ-ಗೂಳೂರುಸಿದ್ಧವೀರ-ಗಗನದಯ್ಯ-ಕಟ್ಟಿಗೆಹಳ್ಳಿಸ್ವಾಮಿ

ನಿರಂಜನ ವಂಶಗತ್ನಾಕರದ ಪ್ರಕಾರ : ಬೋಳಬಸವ- ಸಿದ್ಧವೀರೇಶಸ್ವಾಮಿಗಳು- ಗುರುಸಿದ್ಧದೇಶಿಕೇಂದ್ರ-ಗಗನದಾರ್ಯ -ಕಟ್ಟಿಗೆಹಳ್ಳಿಸಿದ್ಧವೀರ

ಮಹಾಂತಸ್ವಾಮಿಗಳು ಹೇಳುವ ಗುರುಪರಂಪರೆಯಲ್ಲಿ ಬೋಳಬಸವರ ನಂತರ ನೇರವಾಗಿ ಗಗನದಾರ್ಯರನ್ನು ಹೆಸರಿಸುತ್ತಾರೆ. ಆದರೆ ಸೋಮಶೇಖರಶಿವಯೋಗಿಯು ಮಧ್ಯದಲ್ಲಿ ಗುಮ್ಮಳಾ ಪುರದಸಿದ್ಧವೀರನನ್ನು, ಮಹಾದೇವಕವಿಯು ಗೂಳೂರುಸಿದ್ಧವೀರರನ್ನು ಮಧ್ಯದಲ್ಲಿ ಸೇರಿಸುತ್ತಾರೆ. ನಿರಂಜನವಂಶರತ್ನಾಕರವು ಗೂಳೂರುಸಿದ್ಧವೀರರನ್ನೇ 'ಗುರುಸಿದ್ಧದೇಶಿಕೇಂದ್ರ'ರೆಂದು ಹೆಸರಿಸಿದೆ. ಒಟ್ಟಾರೆಯಾಗಿ ಒಂದೊಂದು ಕೃತಿಯಲ್ಲಿ ಒಂದೊಂದು ರೀತಿ ಗುರುಪರಂಪರೆ ವ್ಯಕ್ತವಾಗಿದ್ದರೂ ಚಿತ್ರದುರ್ಗದ ಪಟ್ಟವಲ್ಲರಿಯೊಂದಿಗೆ ತುಲನಾತ್ಮಕವಾಗಿ ನೋಡಿದಾಗ ಇಲ್ಲಿ ಮಹಾದೇವ ಕವಿ ಮತ್ತು ನಿರಂಜನವಂಶರತ್ನಾಕರದಲ್ಲಿ ಹೇಳಲ್ಪಟ್ಟ ಗುರುಪರಂಪರೆಯೇ ಸರಿಯಾದುದು ಎಂದು ಹೇಳ ಬೇಕಾಗುತ್ತದೆ.

ತೃತೀಯ ಘಟ್ಟ : (ಕಟ್ಟಿಗೆಹಳ್ಳಿಸ್ವಾಮಿಗಳ ತರುವಾಯ ಕ್ರಿ.ಶ.೧೬೨೦ರಿಂದ)

ಪ್ರಥಮ ಘಟ್ಟದಲ್ಲಿ 'ಶೂನ್ಯಪೀಠ' ಸ್ಥಾಪನೆಗೊಂಡು ವಿಜೃಂಭಣೆಯ ಹಂತದಲ್ಲೇ, ಕಲ್ಯಾಣ ಕ್ರಾಂತಿಯ ಪರಿಣಾಮವಾಗಿ ಚದುರಿಹೋದ ಶರಣರ ಜೊತೆಗೆ ಈ ಪೀಠ ಅಜ್ಞಾತವಾಸವನ್ನನುಭವಿಸ ಬೇಕಾಯಿತು. ತದನಂತರ ಹರದನಹಳ್ಳಿಯ ಬಣಜಿಗರು ಮಾಡಿದ ಸಾಹಸದಿಂದಾಗಿ ಮತ್ತು ಗೋಸಲ ಪರಂಪರೆಯ ಆದ್ಯಗುರು ಬಸವಪ್ರಭುಗಳಿಂದ ಅದು ನೆಲೆ ಕಾಣುವಂತಾಯಿತು. ಆದರೂ ಈ ಪರಂಪರೆಯು ತೋಂಟದಸಿದ್ಧಲಿಂಗಯತಿಗಳ ಶಿಷ್ಯ-ಪ್ರಶಿಷ್ಯರಾದ ಏಳೂನೂರಾಎಪ್ಪತ್ತು ಅಮರಗಣಂಗಳು

ಬರುವವರೆಗೆ ಅಜ್ಞಾತವಾಗಿಯೇ ಇದ್ದಿತು. ನಂತರದ ದ್ವಿತೀಯ ಘಟ್ಟದಲ್ಲಿ ದ್ವಿತೀಯ ಅಲ್ಲಮರಿಂದ(ತೋಂಟದಸಿದ್ಧಲಿಂಗ) ದೊರೆತ ಜಂಗಮ ಸ್ವರೂಪದಿಂದಾಗಿ ಅಪಾರ ಭಕ್ತ ಸಮೂಹವನ್ನೊಳಗೊಂಡು, ಶರಣ ಸಾಹಿತ್ಯದ ರಚನೆ-ಸಂಪಾದನೆ -ಸಂಕಲನ -ಟೀಕೆ -ವ್ಯಾಖ್ಯಾನಗಳ ಮೂಲಕ ವೀರಶೈವ ಧರ್ಮದ ಪ್ರಚಾರವನ್ನು ಕೈಗೊಂಡರು. ಬಹುಸಂಖ್ಯಾತ ಶಿಷ್ಯ ಬಳಗವಿದ್ದರೂ ಕೂಡ ಯಾವ ಭೇದ ಭಾವಗಳಿಲ್ಲದೆ ಏಕಮುಖದಿಂದ 'ಶೂನ್ಯಪೀಠ'ವನ್ನು ನಡೆಸಿಕೊಂಡು ಬರುತ್ತಿದ್ದರು. ಗೂಳೂರುಸಿದ್ಧವೀರಸ್ವಾಮಿಗಳ ತರುವಾಯ ಶೂನ್ಯಪೀಠದಲ್ಲಿ ಕುಳಿತ ಗಗನದಾರ್ಯ ಸ್ವಾಮಿಗಳ ಕಾಲದವರೆಗೆ ವಿರಕ್ತ ಮೂರ್ತಿಗಳಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿರಲಿಲ್ಲ. ಅವರು ತಮ್ಮ ತಮ್ಮಲ್ಲಿ ಸಮರ್ಥ ವ್ಯಕ್ತಿಯೋರ್ವರಿಗೆ ಷಟ್‌ಸ್ಥಲ ಪಟ್ಟಕಟ್ಟಿ ಧರ್ಮದ ಉದ್ಧಾರಕ್ಕೆ ಶ್ರಮಿಸುತ್ತಿದ್ದರು.

ತೃತೀಯ ಘಟ್ಟದಲ್ಲಿ ಗಗನದಾರ್ಯರ ತರುವಾಯ ಪಟ್ಟಕ್ಕೆ ಬಂದ ಕಟ್ಟಿಗೆಹಳ್ಳಿಸ್ವಾಮಿಗಳ ಕಾಲದಲ್ಲಿ ವಿರಕ್ತರಲ್ಲಿ ವೈಯಕ್ತಿಕ ಭೇದಗಳು ಹುಟ್ಟಿಕೊಂಡು, ಏಕಮುಖವಾಗಿದ್ದ ಶೂನ್ಯಪರಂಪರೆ ಬಹುಮುಖವಾಗಿ ನಾಡಿನೆಲ್ಲೆಡೆ ಶಾಖಾಮಠಗಳ ಹುಟ್ಟಿಗೆ ಕಾರಣವಾಯಿತು. ಇದುವರೆಗೂ ಈ ಸಂಪ್ರದಾಯದವರು ಭಕ್ತೋದ್ಧಾರಕ್ಕಾಗಿ ಸದಾ ಪ್ರವಾಸದಲ್ಲಿಯೇ ಇರುತ್ತಿದ್ದುದರಿಂದ ಒಂದು ಸ್ಥಿರವಾದ ಮಠವೆಂಬುದು ಇರುತ್ತಿರಲಿಲ್ಲ. ಆದರೆ ಈ ಘಟ್ಟದಲ್ಲಿ ಮೊಟ್ಟ ಮೊದಲ ಬಾರಿಗೆ ಶೂನ್ಯಪೀಠದ ಸ್ಥಿರವಾದ ಒಂದು ಮಠ ಚಿತ್ರದುರ್ಗದಲ್ಲಿ ತಲೆಯೆತ್ತಿತು. ಈ ಶೂನ್ಯಪೀಠದ ಪರಂಪರೆಯಲ್ಲಿ ಕೆಲವು ಕಾಲಾನಂತರ ಹಲವಾರು ಸಮಯ ಭೇದಗಳು ಕಾಣಿಸಿಕೊಂಡವು.

ಎಂತೆನಲ್ ಚೀಲಾಳಸಮಯ ಕೆಂಪಿನಸಮಯ
ಮುಂತೆಸಮಯಂಬಿಟ್ಟ ಸ್ವಾತಂತ್ರಿಗಳಸಮಯ
ಮಂತೆತಾ ಮಾಯಕಟ್ಟಿನಸಮಯ ಗದ್ದಕಟ್ಟಿನಸಮಯ ಗೊಳಿಕೊಂಡ
ಕಾಂತಯ್ಯಗಳಸಮಯಮೆಂದು ಭೇದಿಸುತಮಿವು
ಮುಂತಾಗಿ ಪದಿನಾರು ಸಮಯಮಾಗಿರಲವಂ
ಶಾಂತಗುರುಸಿದ್ಧಗುರುದೇವಂ ಬಹಿಷ್ಕರಿಸಿದಂ ಸದಾಚಾರದಿಂದಂ||

(ಮ.ಲಿಂ.ವಿ.೮೧೮, ೫೨೪)

ಮಹಾಲಿಂಗ ಕವಿಯು ಈ ಪದ್ಯದಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಕಾಲಕ್ಕೆ ಸಮಯ ಭೇದಗಳಾದವು ಎನ್ನುತ್ತಾನೆ. ಆದರೆ ಇದಕ್ಕೂ ಮೊದಲು ಈ ಭೇದಗಳು ಕಾಣಿಸಿಕೊಂಡಿದ್ದು ಚೀಲಾಳಸಮಯ, ಕೆಂಪಿನಸಮಯ, ಸ್ವಾತಂತ್ರಿಗಳಸಮಯ, ಆಯಕಟ್ಟಿನಸಮಯ, ಗದ್ಯಕಟ್ಟಿನ ಸಮಯ, ಗೂಳಿಕೊಂಡಸಮಯ, ಕಾಂತಯ್ಯಗಳಸಮಯ ಮುಂತಾದ ಹದಿನಾರು ಸಮಯಗಳಲ್ಲಿ, ಚೀಲಾಳ, ಸಂಪಾದನ, ಮುರುಘ, ಕುಮಾರ ಹಾಗೂ ಕೆಂಪಿನ ಸಮಯಗಳು ಪ್ರಮುಖವಾದವು. ಈ ಐದು

ಸಮಯ ಭೇದಗಳು ಕಾಣಿಸಿಕೊಳ್ಳಲು ಕಾರಣವಾದ ಸಂದರ್ಭಗಳನ್ನು ಕುರಿತು ಬೇರೆ ಬೇರೆ ಅಭಿಪ್ರಾಯಗಳು, ಹೇಳಿಕೆಗಳು, ಕಟ್ಟುಕಥೆಗಳು ಕಾಣಿಸಿಕೊಂಡಿವೆ. ಇವುಗಳನ್ನೆಲ್ಲ ಕ್ರೋಢೀಕರಿಸಿ ವೀರಶೈವ ಧರ್ಮದಲ್ಲಿ ಕಾಣಿಸಿಕೊಂಡ ಸಮಯಭೇದಗಳನ್ನು ಈ ರೀತಿ ಗುರುತಿಸಬಹುದು.

ಸಂಪಾದನ ಸಮಯ

೨೩ನೆಯ ಪಟ್ಟದ ಶ್ರೀಗಳಾದ ಕಟ್ಟಿಗೆಹಳ್ಳಿಸಿದ್ಧವೀರಸ್ವಾಮಿಗಳಿಗೆ ಸಂಪಾದನೆಯ ಸಿದ್ಧವೀರಪ್ಪ[೩೦]ನೆಂಬ ಚರಮೂರ್ತಿಯು ಒಮ್ಮೆ ಸ್ವಾಮಿಗಳ ಪಾದಕ್ಕೆ ನಮಸ್ಕರಿಸಿ ತನ್ನ ಇಷ್ಟಲಿಂಗದ ಗೋಳಕ ಸಡಿಲಗೊಂಡಿರುವುದನ್ನು ನಿವೇದಿಸಿಕೊಂಡನು. ಆಗ ಶ್ರೀಗಳು 'ಕಂಥೆ ಬದಲಿಸಿ ಧರಿಸಿಕೋ' ಎಂದು ಅಪ್ಪಣೆ ಮಾಡಿದರು. ಹೀಗೆ ಮೂರು ನಾಲ್ಕು ಸಲ ಕಂಥೆ ಬದಲಿಸಿ ಧರಿಸಿಕೊಂಡರೂ ಮತ್ತೆ ಗೋಳಕ ಸಡಿಲಗೊಂಡಿತು. ಅದು ಗುರು-ಲಿಂಗ-ಜಂಗಮದಲ್ಲಿ ದೃಢವಿಲ್ಲದ ಕುರುಹಾಗಿತ್ತು. ಒಂದು ದಿನ ಈ ಚರಮೂರ್ತಿಯು ಪ್ರಾಣ ಕಳೆದುಕೊಳ್ಳುವ ನಟನೆ ಮಾಡಿದನು. ಆಗ ಶ್ರೀಗಳು ಮಠದಿಂದ ಹೊರಹಾಕಿದರು. ಇದರಿಂದ ಸಿದ್ಧವೀರಪ್ಪನವರು ಕೋಪಗೊಂಡು ಮೈಸೂರು ಪ್ರದೇಶದ ರಾಮಾನುಜ ವೈಷ್ಣವರನ್ನ ಮತ್ತು ಹತ್ತಿಬಣಜಿಗರನ್ನು ಕಟ್ಟಿಕೊಂಡು ಶಾಸ್ತ್ರಮುಖದಿಂದ ತರ್ಕವ ಮಾಡಬೇಕೆಂದು ಸನ್ನಿಧಿಯ ಮೇಲೆ ತಿರುಗಿ ಬಿದ್ದ, ಈ ಸಂಗತಿಯು ಮೈಸೂರು ಸಂಸ್ಥಾನಿಕರಿಗೆ ತಿಳಿದು ಸಭೆ ಸೇರಲು ತರ್ಕದಲ್ಲಿ ಸ್ವಾಮಿಗಳು ಗೆದ್ದು ಆಸ್ಥಾನಿಕರಿಂದ ಗೌರವಿಸಲ್ಪಡುತ್ತಾರೆ. ತರ್ಕದಲ್ಲಿ ಸೋತು ಗುರು ದ್ರೋಹಿಯಾದ ಸಂಪಾದನೆಯಸಿದ್ಧವೀರಪ್ಪನು ಹಾಗಲವಾಡಿಗೆ ಬಂದು ಅಲ್ಲಿಯ ದೊರೆ ಹಿರಿಯ ಮುದಿಯಪ್ಪನಾಯಕನನ್ನು ಭಕ್ತನ ಮಾಡಿಕೊಂಡು, ಅವನ ಕಡೆಯಿಂದ ಮಠಮಾನ್ಯಗಳನ್ನು ಪಡೆದು ಅದೇ ಸ್ಥಳದಲ್ಲಿ ಬಯಲಾಗುತ್ತಾನೆ. ಅಲ್ಲಿಂದ ಸಂಪಾದನೆಯಸಮಯ ಆರಂಭವಾಗುತ್ತದೆ[೩೧]. ಈ ಸಂಪ್ರದಾಯದ ಮಠಗಳು ಹಾಗಲವಾಡಿ, ಬೆಂಗಳೂರು, ಹುಕ್ಕೇರಿ ನಾಡು, ಒಂಟಮುರಿ, ನರೇಂದ್ರ, ಬಾಗವಾಡಿ ಮುಂತಾದ ಸ್ಥಳಗಳಲ್ಲಿ ನಿರ್ಮಾಣಗೊಂಡವು.

ಮುರುಗಾ ಹಾಗೂ ಕುಮಾರಸಮಯ

'ಮುರಘ' ಎಂಬ ಪದಕ್ಕೆ ಮಡಿಚುವುದು, ಹೊಸೆಯುವುದು, ತಿರುವುವದು, ಡೊಂಕು ಮಾಡುವುದು, ಬಗ್ಗಿಸುವುದು, ಸುರಳಿಸುತ್ತುವುದು ಎಂಬ ಅರ್ಥಗಳಿವೆ. '....ದಕ್ಷಿಣೋರು ಹಸ್ತಾಬ್ಜದಲ್ಲಿ ಇಂಬಿನಿಂ ತಾಳ್ದ ಮುರಿಗೆಯ ಮುದ್ಗರಂ ಮಸ್ತಕಾಂಬುಜಕೆ ಮುರಿಗೆಯಾಕಾರ ಕೃತ ಕೌಶೇಯದಂಬರಂ ದೇಹದೊಳ್ ಮುರಿಗೆಯಾಗಿರೆ ಪೊದೆದ ಶಾಲುಮದುರಂಜಿಸುತಿರೆ'[೩೨] ಎಂದು ಮಹಾದೇವಕವಿಯು, ಇಮ್ಮಡಿ ಮುರಿಗಾಗುರುಸಿದ್ದರು ತಮ್ಮ 'ಪಾದಸ್ತೋತ್ರ' ಎಂಬ ಕೃತಿಯಲ್ಲಿ 'ಸೆರೆ ಭಕ್ತಿಜ್ಞಾನ

ವೈರಾಗ್ಯ ಮುಪ್ಪುರಿಗೊಂಡು ಶಿರದೊಳು ಮುರಿಮಾಡಿ ಮಾರ್ೋನ್ನದಲಿ ಸುತ್ತಿ ಮೆರೆವುತಲಿಹ ಕಾರಣದಿ ಕರುಣಾಕರಪಸರ್ವಡೆದ ಮುರಿಗಾ ಶಾಂತ್ವೀರಸ್ವಾಮಿಯೆಂಬವರಡಿಗಳಿಗೆ'[೩೪] ಎಂದು 'ಮುರಿಗೆ' ಪದದ ಬಳಕೆಯ ವಿಶೇಷತೆಯನ್ನು ನಿರ್ವಚಿಸುತ್ತಾರೆ. ರಾಜೇಂದ್ರ ಸ್ವಾಮಿಗಳು ಯಾವಾಗಲೂ ಕೈಯಲ್ಲಿ ಮುರಿಗೆ ಮುರಿಗೆಯಾದ ಕೋಲನ್ನು ಹಿಡಿದು ಕೊಳ್ಳುತ್ತಿದ್ದರು, ತಲೆಗೆ ಮುರಿಗೆ ಮುರಿಗೆಯಾದ ವಸ್ತ್ರ ಸುತ್ತುತ್ತಿದ್ದರು, ಎದೆಗೆ ಬೆನ್ನಿಗೆ ಮುರಿಗೆಯಾಗಿ ಒಂದು ಶಾಲನ್ನು ಹೊದ್ದು ಕೊಳ್ಳುತ್ತಿದ್ದ ಕಾರಣ 'ಮುರುಘಾ' ಸ್ವಾಮಿಗಳೆಂದು ಕರೆದಿರಬೇಕು. ಇವರ ನಂತರ ಬಂದ ಎಲ್ಲಾ ಜಗದ್ಗುರುಗಳ ಹೆಸರಿನೊಂದಿಗೆ ಈ ವಿಶೇಷಣವು ಸೇರ್ಪಡೆಗೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಡಾ.ಬಿ.ಶಿವಮೂರ್ತಿಶಾಸ್ತ್ರಿಗಳ ಪ್ರಕಾರ ಮುರುಘಾ ಮಠಕ್ಕೆ ಯೋಗಿ, ಜೋಗಿ, ಭೋಗಿ ಎಂಬ ಮೂರು ಜನರ ಸಂಕೇತವಾಗಿ ಮೂರು 'ಘಿ' ಅಥವಾ 'ಮುರುಗಿ' ಎಂಬ ಹೆಸರು ಬಂದಿತೆಂದು ಮೈಸೂರು ಗೆಜೆಟಿಯರ್‌ನಲ್ಲಿ ಹಾಗೂ ಹಲವು ಪತ್ರ್ಯ ಪುಸ್ತಕಗಳಲ್ಲಿ ಹೇಳಿರುವುದು ತಪ್ಪು. ತಮಿಳಿನಲ್ಲಿ 'ಮುರುಘನ್' ಎಂದರೆ 'ಷಣ್ಮುಖ'ನೆಂದು ಅರ್ಥ.[೩೫] ಅರವತ್ತು ಮೂರು ಮಂದಿ ಪುರಾತನರಲ್ಲಿ 'ಮುರುಘುರು' ಎಂಬ ಒಬ್ಬ ಮಹಾತ್ಮರಿದ್ದಾರೆ. ಚೋಳ ದೇಶದ ತಿರಿಪಗಲ್ಲುರದಲ್ಲಿದ್ದ ಈ ಶರಣನು ಪಂಚಾಕ್ಷರಿಯಲ್ಲದೆ ಮತ್ತೊಂದನ್ನು ಒಡನುಡಿಯದೆ ಇರುತ್ತಾ, ಒಂದು ದಿನ ಚಂದ್ರಮೌಳೇಶ್ವರನನ್ನು ಪೂಜಿಸುತ್ತಾ ಆನಂದ ಪರವಶನಾಗಿ ಮೈಮರೆಯಲು ಶಿವನು ಲಿಂಗಮುಖದಿಂದ ಮೈದೋರಿ ಆತನಿಗೆ ಗಣ ಪದವಿ ನೀಡಿದನು. ಶಿವನೊಡನೆ ಪ್ರತಿದಿನವೂ ಕೈಲಾಸಕ್ಕೆ ಹೋಗಿ ಏಕಾಂತದಲ್ಲಿರುತ್ತಾ, ಒಮ್ಮೆ ಶಿವ ಮಾತನಾಡದಿರಲು ತನ್ನ ಅಪರಾಧವೇನೆಂದು ಕಾಯದ ಮೇಲೆ ಕೋಪಿಸಿಕೊಳ್ಳಲು ಶಿವನು ಪ್ರಸನ್ನನಾದನು. ಕೊಳಲಲ್ಲಿ ಪಂಚಾಕ್ಷರಿಯನ್ನು ನುಡಿಸಿ ಶಿವನ ಕೃಪೆಗೆ ಪಾತ್ರನಾದನು. ಈತನನ್ನು ನಮಃ ಶಿವಾಯ ಮುರುಘು, ಮುರುಘುದೇವ, ಮುರುಘುರು ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಅಲ್ಲದೆ ಅವರು ಷಣ್ಮುಖನ ಅವತಾರವೆಂದು ಭಾವಿಸುತ್ತಿದ್ದರು. ಅವರ ಹೆಸರಿನಲ್ಲಿರುವ ಈ ಮಠಕ್ಕೆ ಮುರುಘಾಮಠ ಎಂಬ ಹೆಸರು ಬಂದಿದೆ.[೩೬] ಎಲ್.ಬಸವರಾಜುರವರು ಕೂಡ 'ಬಹುಶಃ ಮುರುಘ ಎಂಬ ಶಬ್ದ ಶಿವಪುತ್ರನಾದ ಷಣ್ಮುಖನಿಗೆ ಪರ್ಯಾಯವಾಗಿ ತಮಿಳಿನಲ್ಲಿ ಅನ್ವಯಿಸುವ 'ಮುರುಗನ್' ಎಂಬುದರಿಂದ ಬಂದಿರಬೇಕು, ಮುರುಗನ್, ಮುರುಗ,(ಷಣ್ಮುಖ, ಕುಮಾರಸ್ವಾಮಿ) ಆ ಲಾಂಛನದವರು ಮುರುಗೇಂದ್ರರು, ಮುರುಗೇಶ, ಮುರುಗಿಯವರು ಇತ್ಯಾದಿಯಾಗಿರಬೇಕು'[೩೭] ಎಂದಿದ್ದಾರೆ. ಪಿ.ಎಂ.ಗಿರಿರಾಜು ಅವರು 'ಕಟ್ಟಿಗೆಹಳ್ಳಿಯಸಿದ್ಧಲಿಂಗರ ಪ್ರಿಯ ಶಿಷ್ಯರಾದ ಶಾಂತವೀರರು ಜೋಡು ತಂತಿಯ ವೀಣೆ ಹಿಡಿದು ಬಸವಾದಿ ಪ್ರಮಥರ ಸದ್ಬೋಧೆಗಳನ್ನು ತಮಿಳು ಸೀಮೆಯ ಮಧುರೆಯ ಪರಿಸರದಲ್ಲಿ ಭಿತ್ತರಿಸುತ್ತ ವ್ಯಾಪಕವಾಗಿ ಸಂಚರಿಸುತ್ತಿದ್ದರು. ಆ ಪರಿಸರದಲ್ಲಿ 'ಮುರುಘನ್'

ಷಣ್ಮುಖ ಶಿವಪುತ್ರರು 'ನಮಃಶಿವಾಯ' ಎಂಬ ಪಂಚಾಕ್ಷರಿ ಮಂತ್ರವನ್ನು ಸ್ಮರಣೆಗೈಯುತ್ತಿರಲು, ಶಾಂತವೀರರಿಗೂ ಕೂಡಾ 'ಮುರುಘಾ' ಎಂಬ ಹೆಸರು ಪ್ರಾಪ್ತವಾಗಿರಬೇಕು[೬೮].

ಒಟ್ಟಾರೆಯಾಗಿ 'ಮುರುಘ' ಶಬ್ದದ ಮೂಲ ಕುರಿತು ಎರಡು ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಮೊದಲನೆಯದಾಗಿ ನಿಘಂಟುಗಳು, ಮಹದೇವಕವಿ, ಇಮ್ಮಡಿ ಗುರುಸಿದ್ಧರ ಕಾವ್ಯಗಳು 'ಮುರುಘಾ' ಎಂದರೆ ಮಡಿಚುವುದು, ಹೊಸೆಯುವುದು, ಡೊಂಕು ಮಾಡುವುದು, ಸುರಳಿಸುತ್ತುವುದು ಎಂಬ ಅರ್ಥದಲ್ಲಿ ಶಾಂತವೀರರ ಬಾಹ್ಯ ಉಡುಪುಗಳಾದ ಮುದ್ಗರ, ಶಿರೋವಸ್ತ್ರ, ಶಾಲು ಇವುಗಳ ಮುರಿಗೆ ಮುರಿಗೆಯ ವಿನ್ಯಾಸಗಳನ್ನು ಗಮನಿಸಿ 'ಮುರಿಗೆ' ಎಂಬ ವಿಶೇಷಣ ಪ್ರಾಪ್ತವಾಯಿತು ಎನ್ನುತ್ತಾರೆ. ಆದರೆ ವಿದ್ವಾಂಸರುಗಳು ತಮಿಳು ಮೂಲದ ಅರವತ್ತು ಮೂರು ಪುರಾತನರಲ್ಲಿ ಒಬ್ಬರಾದ 'ಮುರುಘನ್' ಎಂಬುವರಿಂದ ಮತ್ತು ಶಿವನ ಪುತ್ರನಾದ ಷಣ್ಮುಖನಿಗೆ ಪರ್ಯಾಯವಾಗಿ ತಮಿಳಿನಲ್ಲಿ ಅನ್ವಯಿಸುವ 'ಮುರುಗನ್' ಎಂಬುದರಿಂದ ಬಂದಿರಬೇಕು ಎನ್ನುತ್ತಾರೆ. ಆದರೆ ನಾವು ಈ ಶಬ್ದದ ಮೂಲವನ್ನು ತಮಿಳು ಭಾಷೆಯಲ್ಲಿ ಹುಡುಕುವುದಾಗಲೀ, ಶೈವಪರಂಪರೆಯ ಅರವತ್ತು ಮೂರು ಮಂದಿ ಪುರಾತನ ಕಾಲದವರೆಗೆ ಹಿಂದಕ್ಕೆ ಹೋಗಿ ನೋಡುವುದಾಗಲಿ ಸಮಂಜಸವೆನಿಸುವುದಿಲ್ಲ. ಏಕೆಂದರೆ ೬೩ ಮಂದಿ ಪುರಾತನರ ಚರಿತ್ರೆಗಳಾಗಲಿ, ಶಿವನ ಪುತ್ರರೆಂಬ ಕಲ್ಪನೆಗಳಾಗಲಿ ಜನಸಾಮಾನ್ಯರು ಅರಿತಿರುವುದಿಲ್ಲ. ಅಂತೆಯೇ ಶಾಂತವೀರರ ಸಮಕಾಲೀನ ಪಂಡಿತ ಕವಿಯಾದ ಇಮ್ಮಡಿ ಮುರಿಗಾ ಗುರುಸಿದ್ಧರು ಮತ್ತು ಅದೇ ಪರಂಪರೆಯಲ್ಲಿ ಬರುವ ಮಹಾದೇವಕವಿಯು ತಮ್ಮ ಗ್ರಂಥಗಳಲ್ಲಿ ಶಾಂತವೀರರನ್ನು ಶಿವನ ಅಪರಾವತಾರ ಎಂದು ಚಿತ್ರಿಸಿದರೂ ಸಹ ಆತನನ್ನು ಎಲ್ಲಿಯೂ 'ಮುರುಘ' ಅಥವಾ 'ಮುರಘನ್' ಎಂದು ಸಂಬೋಧಿಸಿರುವುದಿಲ್ಲ. ಜೊತೆಗೆ ಮುರಿಗೆ ಎಂಬ ವಿಶೇಷಣದ ಬಳಕೆಯ ಬಗ್ಗೆ ಸಕಾರಣಗಳನ್ನು ನೀಡುವ ಪದ್ಯಗಳನ್ನೇ ರಚಿಸಿದ್ದಾರೆ. ಹೀಗಾಗಿ ನಾವು ಯಾವುದೇ ಕಲ್ಪನೆಗಳನ್ನು ಒಳಗೊಂಡ ಮೂಲವನ್ನು ನಂಬುವುದಕ್ಕಿಂದ, ಕಾವ್ಯಾಧಾರಗಳನ್ನು ನಂಬುವುದು ಉಚಿತ. ಕಾರಣ 'ಮುರಿಗಾ', 'ಮುರುಗಾ' ಶಬ್ದಗಳು ಶಾಂತವೀರರ ವೇಷ-ಭೂಷಣಗಳಿಗೆ ಅನ್ವಯಿಸಿ ಹುಟ್ಟಿಕೊಂಡ ವಿಶೇಷಣಗಳಾಗಿವೆ.

045601
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುರುಗ ಹಾಗೂ ಕುಮಾರಸಮಯ ಭೇದದ ಕುರಿತು ನಿರಂಜನವಂಶರತ್ನಾಕರ ಭಾಗ-೧ ರಲ್ಲಿ ಹೀಗೆ ಹೇಳಿದೆ: ೨೩ನೆಯ ಪಟ್ಟದ ಅಧಿಪತಿಗಳಾದ ಕಟ್ಟಿಗೆಹಳ್ಳಿಸ್ವಾಮಿಗಳು ತಾವು ಸಲಹಿದ ಇಬ್ಬರು ಮರಿಗಳನ್ನು ಕರೆದು, ಅದರಲ್ಲಿ ಒಬ್ಬರಿಗೆ ತಮ್ಮ ಗುರುಗಳಾದ ತೋಂಟದಸಿದ್ಧಲಿಂಗಯತಿಗಳ ಹೆಸರನ್ನು (ನೋಡಸಿದ್ದಲಿಂಗ) ಇಟ್ಟರು. ಶಾಸ್ತ್ರ ಸಂಪಾದಿಸಿದ ಕಾರಣ ಆತನಿಗೆ ಶಿವಾನುಭವ ಚರಂತಿಗೆ ಪಟ್ಟವನ್ನು ಕೊಟ್ಟು, ತಮ್ಮ ಈರ್ವರೂ ಶಿಷ್ಯರನ್ನು ಉದ್ದೇಶಿಸಿ ಈ ರೀತಿ ಆದೇಶಿಸುತ್ತಾರೆ.

'ಪೂರ್ವಜರಾದ ಪ್ರಭುಸ್ವಾಮಿಗಳ ಸುವರ್ಣದ ಶೂನ್ಯಪೀಠ, ಶಿಖಾಶೈಲ ಇವುಗಳನ್ನು ಚನ್ನಬಸವೇಶ್ವರರು ದಿಲ್ಲಿ ಅರಸನಾದ ಮಲ್ಲೂಖಾನನೆಂಬವನಿಗೆ ಕೊಟ್ಟಿರುತ್ತಾರೆ. ನೀವು ಅಲ್ಲಿಗೆ ಹೋಗಿ ಸತ್ತ ಆನೆಯನ್ನು ಜೀವಂತಗೊಳಿಸಿ ಪವಾಡ ಮೆರೆದು ತಂದು ಮುರಘುರಾಜೇಂದ್ರರಿಗೆ ಶಿಖಾ ಪಟ್ಟಮಾಡಿರಿ' ಎಂದರು, ಆ ಪ್ರಕಾರ ದಿಲ್ಲಿಗೆ ಹೋಗಿ ಅರಸನಾದ ಮಲ್ಲೂಖಾನನ ವಂಶೀಯರಿಂದ ಶಿಖಾ ಶೈಲಗಳನ್ನು ಪಡೆದು ತಿರುಗಿ ಬರುವಾಗ ನೋಡಸಿದ್ಧಲಿಂಗರು ಸ್ವಾದಿಸೀಮೆಯಲ್ಲಿ ತಮ್ಮ ಅಂತ್ಯವನ್ನು ತಿಳಿದು, ತಮ್ಮ ಜೊತೆಯಲ್ಲಿದ್ದ ಮುರುಘುರಾಜೇಂದ್ರರನ್ನು ಉದ್ದೇಶಿಸಿ 'ಪ್ರಭುದೇವರಪೀಠಕ್ಕೆ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳ ತರುವಾಯ ನಾವು ಅಧಿಪತಿಗಳಾಗಿದ್ದೆವು. ಈ ಮೊದಲು ನಮ್ಮಲ್ಲಿ ಶಿಖಾಪಟ್ಟ, ಶಿವಾನುಭವಚರಂತಿಗೆಪಟ್ಟ ಎಂದು ಎರಡು ಭೇದಗಳಿದ್ದರೂ ನಾವು ಇರದ ಹಾಗೆ ಇದ್ದೆವು. ಈ ಭಾರ ಇನ್ನು ನಿಮ್ಮ ಮೇಲಿದೆ' ಎಂದು ಹೇಳಿ ಕೈಲಾಸ ವಾಸಿಗಳಾಗುತ್ತೇವೆಂದರು. ನೆರೆದ ಸೋದೆ ಸೀಮೆಯ ಜನ 'ನಿಮ್ಮ ಶಿವಾನುಭವಚರಂತಿಗೆಪಟ್ಟವನ್ನು ಯಾರಿಗಾದರೂ ಮಾಡಿರಿ' ಎಂದಾಗ ನೋಡಸಿದ್ಧಲಿಂಗರು ಅದನ್ನು 'ವಾಚ್ಯದಕುಮಾರದೇಶಿಕೇಂದ್ರ'ರೆಂಬುವರಿಗೆ ಮಾಡಿದರು. ಸ್ವಾದಿಯ ಜನ ಮುರುಘುರಾಜೇಂದ್ರರು ಕಾರಣತ್ವಕ್ಕೆ ಗುರುಗಳು, ಕಾರ್ಯಕರ್ತಕ್ಕೆ ಕುಮಾರದೇಶಿಕೇಂದ್ರರೆಂದು ತಿಳಿದುಕೊಂಡರು.

ಮೇಲಿನ ಉಲ್ಲೇಖದಿಂದ ಕಟ್ಟಿಗೆಹಳ್ಳಿಸಿದ್ಧಲಿಂಗರಿಗೆ ನೋಡಸಿದ್ಧಲಿಂಗ, ಮುರುಘುರಾಜೇಂದ್ರ ಎಂಬ ಇಬ್ಬರು ಶಿಷ್ಯರು ಇದ್ದರೆಂದೂ, ಇವರಲ್ಲಿ ಶಿಖಾಪಟ್ಟ, ಶಿವಾನುಭವಚರಂತಿಗೆ ಎಂಬ ಎರಡು ಪಟ್ಟಗಳಿದ್ದವೆಂದೂ, ಇವುಗಳಲ್ಲಿ ಭೇದ ಇರಲಿಲ್ಲವೆಂದೂ ತಿಳಿದುಬರುತ್ತದೆ. ಕಟ್ಟಿಗೆಹಳ್ಳಿಸಿದ್ಧಲಿಂಗರ ಈ ಶಿಷ್ಯರು ಮುಲ್ಲೂಖಾನನ ವಂಶೀಯರಿಂದ ಶೂನ್ಯಸಿಂಹಾಸನದ ಶಿಖಾ-ಶೈಲ-ಸಿಂಹಾಸನಗಳನ್ನು ತಿರುಗಿ ತಂದರೆಂಬ ವಿಷಯ ಸ್ಪಷ್ಟವಾಗುತ್ತದೆ. ಈ ಕಥೆಯನ್ನು ನಂಬುವುದಾದರೆ ಚನ್ನಬಸವಣ್ಣನವರ ತರುವಾಯ ಶಿಖಾಪಟ್ಟವಿಲ್ಲದೆ ಷಟ್‌ಸ್ಥಲಪಟ್ಟ ಮುಂದುವರಿಯಿತು ಎನಿಸುತ್ತದೆ.

ಈ ಸಮಯಗಳ ಕುರಿತ ವಿವರಣೆಯು 'ನಿರಂಜನವಂಶರತ್ನಾಕರ' ಭಾಗ-೨ರಲ್ಲೂ ಮುಂದುವರಿದಿದೆ. ಈ ಇಬ್ಬರೂ ಸ್ವಾಮಿಗಳು ಚಿತ್ರದುರ್ಗದ ಭರಮನಾಯಕನಿಂದ ಮಠಗಳನ್ನು ಕಟ್ಟಿಸಿಕೊಂಡು ಸಖ್ಯದಿಂದ ಇದ್ದರು. ಒಮ್ಮೆ ಕಲ್ಲುಮಠದಬಸವದೇವರ ಮಗ 'ಕಲ್ಯಾಣಿ' ಎಂಬುವನು ಮಾದರ 'ತಿಮ್ಮಿ'ಯ ಸಂಗವ ಮಾಡಿದ ಕಾರಣ ಅವನೊಂದಿಗೆ ಬಳಕೆ ಮಾಡಬಾರದೆಂದು ಕಟ್ಟಿಗೆ ಹಳ್ಳಿಸಿದ್ಧಲಿಂಗಸ್ವಾಮಿಗಳು ಹೊರಹಾಕಿದರು. ದಾಸೋಹದ ದಸೆಯಿಂದ ಹಳೇಬೀಡಿಗೆ ಬಂದ ಮುರುಘುರಾಜೇಂದ್ರರು ತಮ್ಮ ಅಂತ್ಯ ಕಾಲ ಸಮೀಪಿಸಿತೆಂದು ತಿಳಿದು, ಭರಮನಾಯಕನನ್ನು ಕರೆಸಿ ಆತನ ಸಮಕ್ಷಮ ಹಳೆಬೀಡು ಕಲ್ಲುಮಠದ ಸಂಬಂಧವುಳ್ಳ ರುದ್ರಪ್ಪನೆಂಬವನಿಗೆ 'ಇಮ್ಮಡಿ

ಗುರುಸಿದ್ಧ'ನೆಂಬ ನಾಮಕರಣ ಮಾಡಿ ಪಟ್ಟವನ್ನು ಕಟ್ಟಿ, ಕುಮಾರಸ್ವಾಮಿ(ನೋಡಸಿದ್ಧಲಿಂಗರ ಉತ್ತರಾಧಿಕಾರಿ)ಗಳ ಕೂಡ ಭೇದ ಇರದಂತೆ ವರ್ತಿಸಿರೆಂದು ಉಪದೇಶಿಸಿದರು. ಆದರೆ ಕುಮಾರ ಸ್ವಾಮಿಗಳು ತಮ್ಮನ್ನು ಕೇಳದೆ ಮುರುಘಸ್ವಾಮಿಗಳು ಕಲ್ಲುಮಠದ ಸಂಬಂಧವುಳ್ಳವನಿಗೆ ಪಟ್ಟ ಮಾಡಿದರೆಂದು, ಇನ್ನು ಮುಂದೆ 'ಕಲ್ಯಾಣಿ'ವಂಶದವರ ಬಳಕೆ ಮಾಡಿದರೆ ಅಪರಾಧ ಎಂದು ಭಾವಿಸಿ ಸೋದೆಯಸದಾಶಿವನಾಯಕನನ್ನು ಕರೆದು ಇನ್ನೂ ಈ ಲೋಕದಲ್ಲಿ ಇರಬಾರದೆಂದು ಆತನ ಸಮಕ್ಷಮ ಸಿದ್ಧರಾಮಪ್ಪನೆಂಬ ಶಿಷ್ಯನಿಗೆ 'ಕೆಂಪಿನಸಿದ್ಧಬಸವಪ್ಪ' ಎಂದು ಹೆಸರಿಟ್ಟು ಶಿವಾನುಭವಚರಂತಿಗೆ ಮಾಡಿ, ಇನ್ನು ಮುಂದೆ ಚಿತ್ರದುರ್ಗ ಮಠದ ಬಳಕೆ ಮಾಡಬಾರದೆಂದು ಉಪದೇಶಿಸಿದರು. ಒಟ್ಟಿನಲ್ಲಿ ಎರಡೂ ಪೀಠದವರಲ್ಲಿ ವೈಮನಸ್ಸು ಹುಟ್ಟಿಕೊಂಡು ಈ ಕಾರಣದಿಂದ 'ಮುರುಘ' ಹಾಗೂ 'ಕುಮಾರ' ಸಮಯಗಳಾಗಿ ಬೇರ್ಪಟ್ಟವೆಂಬುದು ಮೇಲಿನ ವಿವರಣೆಗಳಿಂದ ತಿಳಿಯುತ್ತದೆ.

'ಮಹಾಲಿಂಗೇಂದ್ರ ವಿಜಯ'ದಲ್ಲಿ ಇದಕ್ಕಿಂತ ಭಿನ್ನವಾದ ನಿರೂಪಣೆಯಿದೆ: ಮುರುಗಾಶಾಂತವೀರರ ಶಿಷ್ಯನಾದ ಕುಮಾರಸ್ವಾಮಿಯು ಶೂನ್ಯಪೀಠ ಪರಂಪರೆಗೆ ಇಮ್ಮಡಿಗುರುಸಿದ್ಧರನ್ನು ನೇಮಿಸಿದಾಗ ಕೋಪಗೊಂಡು ಸ್ವಾದಿಯ ಅರಸ ಸದಾಶಿವನಲ್ಲಿ ಆಶ್ರಯ ಪಡೆಯುತ್ತಾನೆ. ಅಲ್ಲದೆ ಚಿತ್ರದುರ್ಗದ ಮಠದ ಮೇಲೆ ಇಲ್ಲಸಲ್ಲದ ಚಾಡಿ ಮಾತುಗಳನ್ನು ಹೇಳಿ ರಾಜನ ಮನಸ್ಸನ್ನು ಕೆಡಿಸುತ್ತಾನೆ. ಇಮ್ಮಡಿ ಗುರುಸಿದ್ಧರು ಅವನ ಆಸ್ಥಾನಕ್ಕೆ ಹೋದಾಗ ಸ್ವಾಗತಿಸುವುದಿರಲಿ, ಕಂಡೂ ಕಾಣದಂತೆ ಮರ್ಯಾದೆ ಕೊಡದೆ ಸುಮ್ಮನೆ ಕುಳಿತಿರುತ್ತಾನೆ. ಆದರೆ ಗುರುಸಿದ್ಧರು ಕೋಪಗೊಳ್ಳದೆ ನಡೆದ ವಿಷಯವನ್ನೆಲ್ಲ ರಾಜನ ಮುಂದೆ ಹೇಳಿದಾಗ, ಮನಸ್ಸಿನಲ್ಲಿ ಉಂಟಾಗಿದ್ದ ತಪ್ಪು ಕಲ್ಪನೆಗಳನ್ನು ತೊಡೆದು ಹಾಕುತ್ತಾನೆ. ಆಗ ಕುಮಾರ ಸ್ವಾಮಿಯು ಎಸಳೂರಿನಲ್ಲಿ ತಂಗಿದ್ದ ಗುರುಸಿದ್ಧರನ್ನು ಕೊಲೆ ಮಾಡಿಸಲು ಸ್ವಾದಿಯ ಕೆಲವು ಪುಂಡ ಜನರನ್ನು ಆಯುಧ ಸಮೇತವಾಗಿ ಮಠಕ್ಕೆ ಕಳುಹಿಸುತ್ತಾನೆ. ಆ ಜನರು ಮಠದಲ್ಲಿಯ ಗರ್ಭಿಣಿಯನ್ನು ಮತ್ತು ಚರಮೂರ್ತಿಯನ್ನು ಇರಿದು ಕೊಲ್ಲುತ್ತಾರೆ. ಇದನ್ನು ತಿಳಿದ ಗುರುಸಿದ್ಧರು ಸ್ವಾದಿಯ ಅರಸರಲ್ಲಿಗೆ ಹೋಗಿ ಸ್ತ್ರೀಹತ್ಯೆ, ಭ್ರೂಣಹತ್ಯೆ ಮತ್ತು ಜಂಗಮಹತ್ಯೆಗೆ ಕಾರಣನಾದ ಕುಮಾರ ಸ್ವಾಮಿಗೆ ಬಹಿಷ್ಕಾರ ಹಾಕಿ ಗಡಿಪಾರು ಮಾಡುತ್ತಾರೆ. ಆಗ ಕುಮಾರಸ್ವಾಮಿ ಸೋದೆಯಿಂದ ಹುಬ್ಬಳ್ಳಿ ಪಟ್ಟಣಕ್ಕೆ ಹೋಗಿ ನೆಲಸಿ ಅಲ್ಲಿಯ ಪಟ್ಟಣಶೆಟ್ಟಿಯ ಸಹಾಯದಿಂದ ಮಠವನ್ನು ಕಟ್ಟಿಸಿಕೊಳ್ಳುತ್ತಾನೆ. ಅಂದು ಕುಮಾರಸ್ವಾಮಿಗಳು ಸ್ಥಾಪಿಸಿದ ಮಠವೇ ಇಂದಿನ ಮೂರು ಸಾವಿರ ಮಠವಾಗಿದ್ದು, ಕುಮಾರಸಮಯದ ಕೇಂದ್ರ ಪೀಠವೆನಿಸಿಕೊಂಡಿದೆ.

ಈ ಮೇಲಿನ ವಿಷಯಕ್ಕೆ ಪೂರಕವೆನ್ನುವಂತೆ 'ಶ್ರೀ ಮದನಾದಿ ಅಲ್ಲಮಪ್ರಭು' ಗ್ರಂಥದ ಒಂದು ಕಥೆಯಲ್ಲಿ: ಕಟ್ಟಿಗೆಹಳ್ಳಿಸಿದ್ಧಲಿಂಗಸ್ವಾಮಿಗಳಿಗೆ ನೋಡಸಿದ್ಧಲಿಂಗ, ಮುರುಘರಾಜೇಂದ್ರರೆಂಬ

ಶಿಷ್ಯರಿದ್ದರು. ಅವರು ದೆಹಲಿಗೆ ಹೋಗಿ ಶಿಖಾಪಟ್ಟ ತಂದು ಕೆಲಕಾಲ ಸಖ್ಯದಿಂದ ಇದ್ದರು. ತರುವಾಯ ಮುರುಘರಾಜೇಂದ್ರರ ಮನೆತನದವನೊಬ್ಬ ಭವಿ ಜನರ ಸಂಗಡ ಬಳಕೆ ಮಾಡಿದವರನ್ನು ಕಂಡು ಮುರುಘರಾಜೇಂದ್ರರು ಅವನನ್ನು ಶುದ್ಧಿ ಮಾಡಿದರು. ಆದ್ದರಿಂದ ನೋಡಸಿದ್ಧಲಿಂಗರು ಖಿನ್ನಗೊಂಡರು. ಇದೇ ಮುಂದುವರಿದು ಮುರುಘರಾಜೇಂದ್ರರು ಇಮ್ಮಡಿಗುರುಸಿದ್ಧರನ್ನು, ನೋಡಸಿದ್ಧಲಿಂಗರು ಕುಮಾರಸ್ವಾಮಿಗಳನ್ನೂ ಉತ್ತರಾಧಿಕಾರಿಗಳಾಗಿ ಮಾಡಿಕೊಂಡರು. ಈ ಉತ್ತರಾಧಿಕಾರಿಗಳಲ್ಲಿ ವೈಮನಸ್ಸು ಬೆಳೆಯಿತು. ಒಮ್ಮೆ ಇಮ್ಮಡಿಗುರುಸಿದ್ಧರು ಕುಮಾರಸ್ವಾಮಿಗಳ ಶಿಷ್ಯನೊಬ್ಬನಿಗೆ ಪ್ರಸಾದ ನೀಡಲು ಮುಂದಾದಾಗ ಆ ಶಿಷ್ಯನು ಅದನ್ನು ತಿರಸ್ಕರಿಸಿದನು. ಇಮ್ಮಡಿ ಗುರುಸಿದ್ಧರು ಆತನಿಗೆ 'ನಿನ್ನ ಮನೆ ಹೊಲಗೇರಿಯಾಗಲಿ' ಎಂದು ಶಾಪಕೊಟ್ಟರು. ಹುಬ್ಬಳ್ಳಿಯ ಈ ಬಸಪ್ಪಶೆಟ್ಟಿಯು ಶಾಪದಿಂದ ವಿಚಲಿತನಾಗದೆ ಕುಮಾರಸ್ವಾಮಿಗಳ ಬಳಿಗೆ ಬಂದು ನಡೆದ ಪ್ರಸಂಗ ವಿವರಿಸಿದನು. ತನ್ನ ಶಿಷ್ಯನಿಂದಲೇ ಕುಮಾರಸ್ವಾಮಿ ಇಮ್ಮಡಿಗುರುಸಿದ್ಧರಿಗೆ ಶಾಪಕೊಡಿಸಿದನಂತೆ. ಬಸಪ್ಪಶೆಟ್ಟಿಯು ತನ್ನ ಮನೆಯನ್ನು ಹೊಲಗೇರಿಯಾಗಿಸಿ ಹೊಸ ಹುಬ್ಬಳ್ಳಿಯೆಂಬ ಗ್ರಾಮವನ್ನು ಕಟ್ಟಿಸಿದನು. ಅಲ್ಲದೆ ಕುಮಾರಸ್ವಾಮಿಗಳಿಗೆ ಮೂರು ಭವ್ಯವಾದ ಮಠಗಳನ್ನು ಕಟ್ಟಿಸಿಕೊಟ್ಟನು. ಕುಮಾರಸ್ವಾಮಿಗಳು ತಮ್ಮ ಉತ್ತರಾಧಿಕಾರತ್ವವನ್ನು ಬಸಪ್ಪಶೆಟ್ಟಿಯ ಮಗನಿಗೆ ಇತ್ತರೆಂದು ಆತನು ಹುಚ್ಚುಗುರುಸಿದ್ಧನೆಂದು ಪ್ರಸಿದ್ಧಿ ಪಡೆದನೆಂದು ಈ ಕಥೆ ಹೇಳುತ್ತಿದೆ.

ಒಟ್ಟಾರೆ 'ನಿರಂಜನವಂಶರತ್ನಾಕರ'ದ ಪ್ರಕಾರ ಮುರುಘರಾಜೇಂದ್ರರ ಶಿಷ್ಯರು ಕಲ್ಯಾಣಿ ವಂಶದವರ ಶುದ್ಧಿ ಮಾಡಿದುದನ್ನು ಸಹಿಸದೆ ಕುಮಾರ ಸಮಯ ಭಿನ್ನಗೊಂಡಿತೆಂದೂ, 'ಮಹಾಲಿಂಗೇಂದ್ರ ವಿಜಯ'ದ ಪ್ರಕಾರ ಸ್ತ್ರೀಹತ್ಯೆ, ಭ್ರೂಣಹತ್ಯೆ ಮತ್ತು ಜಂಗಮಹತ್ಯೆ ಮಾಡಿದ ಕಾರಣಕ್ಕಾಗಿ ಸ್ವಾದಿಯಿಂದ ಹುಬ್ಬಳ್ಳಿಗೆ ಬಂದ ಕುಮಾರಸ್ವಾಮಿಯಿಂದ ಕುಮಾರಸಮಯವಾಯಿತೆಂದೂ, 'ಶ್ರೀಮದನಾದಿ ಅಲ್ಲಮಪ್ರಭು' ಗ್ರಂಥದ ಪ್ರಕಾರ ಮುರುಘರಾಜೇಂದ್ರರು ತಮ್ಮ ಮನೆತನದ ಒಬ್ಬ ಭವಿಯನ್ನು ಶುದ್ಧಗೊಳಿಸಿದ ಕಾರಣ ನೋಡ ಸಿದ್ಧಲಿಂಗರು ಭಿನ್ನಗೊಂಡರೆಂದು ತಿಳಿದು ಬರುತ್ತದೆ. ಈ ಮೇಲಿನ ವಿಷಯಗಳಿಂದ ಮುರುಗಾ ಹಾಗೂ ಕುಮಾರಸಮಯದವರು ಕೆಲಕಾಲ ಸಖ್ಯದಿಂದ ಇದ್ದು ತರುವಾಯ ದಿನಗಳಲ್ಲಿ ಬೇರ್ಪಟ್ಟರೆಂದು ಹೇಳಬಹುದು.

ಚೀಲಾಳಸಮಯ

'ಚೀಲಾಳಸಮಯ'ವನ್ನು ಕುರಿತು ಭಿನ್ನ ಭಿನ್ನ ಹೇಳಿಕೆಗಳಿವೆ. ಅವುಗಳಲ್ಲಿ 'ನಿರಂಜನವಂಶರತ್ನಾಕರ' ಭಾಗ-೨ ಹಾಗೂ 'ಮಹಾಲಿಂಗೇಂದ್ರವಿಜಯ'ಗಳಿಂದ ಒಂದು ಅಭಿಪ್ರಾಯ ಮೂಡಿ ಬಂದರೆ,

'ಷಟ್ಸ್ಥಲಶಿವಾಯಣ' 'ವೀರಶೈವಾಮೃತ ಪುರಾಣದ ತಾಳೆಪ್ರತಿಯ ಅಂತ್ಯಪ್ರಶಸ್ತಿ' ಮತ್ತು 'ಶ್ರೀಮದನಾದಿ ಅಲ್ಲಮಪ್ರಭು' ಗ್ರಂಥಗಳು ಬೇರೆ ಅಭಿಪ್ರಾಯಗಳನ್ನು ಮೂಡಿಸುತ್ತವೆ.

'ನಿರಂಜನವಂಶರತ್ನಾಕರ'ಕೃತಿಯಲ್ಲಿ ಚೀಲಾಳಬುಡಕಟ್ಟಿನ ತೋಟಪ್ಪನವರು ಚಿತ್ರದುರ್ಗಕ್ಕೆ ಬಂದು ಮುರುಘರಾಜೇಂದ್ರರನ್ನು ಸಂಬೋಧಿಸಿ, ನಾವು ಯೋಗ್ಯ ಚರಮೂರ್ತಿಗಳಾಗಿರಲಿಕ್ಕೆ ಯಾವ ಆಧಾರದ ಮೇಲೆ ನೀವು ಬೇರೆಯವರಿಗೆ (ಇಮ್ಮಡಿ ಗುರುಸಿದ್ಧ) ಶೂನ್ಯಪೀಠದ ಪಟ್ಟವನ್ನು ಕೊಟ್ಟಿರಿ' ಎಂದು ಕೇಳಿದರು. ಅದರಿಂದ ಮುರುಘರಾಜೇಂದ್ರರ ಅನುಯಾಯಿಯಾದ ಮದಕರಿನಾಯಕನು ತೋಟಪ್ಪನವರನ್ನು ಗಡಿಪಾರು ಮಾಡಿದನು. ಅಲ್ಲಿಂದ ಹೊರಟ ತೋಟಪ್ಪನವರು ಚೀಲಾಳ ಬುಡುಕಟ್ಟಿನ ೧೦, ಬಳ್ಳಾರಿ ಬುಡಕಟ್ಟಿನ ೧೫, ಚಿತ್ತರಗಿ ಬುಡಕಟ್ಟಿನ ೧೦, ಆದಿವಾಸಿ ಬುಡಕಟ್ಟಿನ ೧೮, ಕಡಲೆ ಬುಡಕಟ್ಟಿನ ೫, ತಾಡವಾಲಿ ಬುಡಕಟ್ಟಿನ ೨೫, ಗದಗಬುಡಕಟ್ಟಿನ ೧೫, ಹೀಗೆ ೮೮ ಚರಮೂರ್ತಿಗಳನ್ನು ಕೂಡಿಸಿಕೊಂಡು, ಹರಪನಹಳ್ಳಿ ಬಸವಂತನಾಯಕ ದೊರೆಯಿಂದ ಮಠವನ್ನು ಕಟ್ಟಿಸಿಕೊಂಡ ಬಗ್ಗೆ ತಿಳಿದುಬರುತ್ತದೆ.

'ಮಹಾಲಿಂಗೇಂದ್ರವಿಜಯ'ದಲ್ಲಿ ಮುರುಗಾ ಸಂಪ್ರದಾಯದ ಪ್ರವರ್ತಕರಾದ ಮುರುಘರಾಜೇಂದ್ರರು ತಮ್ಮ ಪಟ್ಟವನ್ನು ಇಮ್ಮಡಿಗುರುಸಿದ್ಧರಿಗೆ ಕಟ್ಟಿದಾಗ ಹರಪನಹಳ್ಳಿಯಲ್ಲಿದ್ದ ಚೀಲಾಳಮೂರ್ತಿಗಳು ಅದನ್ನು ವಿರೋಧಿಸಿದರು. ಹೀಗೆ ವಿರೋಧಿಸಿದ ಚೀಲಾಳಪ್ಪನವರನ್ನು ಚಿತ್ರದುರ್ಗದ ಅರಸು ಭರಮನಾಯಕನು ತನ್ನ ಸೀಮೆಯಿಂದ ಹೊರ ಹಾಕಿಸಿದನು. ನಂತರ ಚೀಲಾಳಪ್ಪನವರಿಗೆ ಹರಪನಹಳ್ಳಿಯ ಬಸವಂತಭೂಪಾಲ ಆಶ್ರಯ ನೀಡಿ ಮಠವೊಂದನ್ನು ಕಟ್ಟಿಸಿಕೊಟ್ಟನು.

'ಶ್ರೀಮದನಾದಿ ಅಲ್ಲಮಪ್ರಭು'ಗ್ರಂಥದಲ್ಲಿ ಕಟ್ಟಿಗೆಹಳ್ಳಿಸ್ವಾಮಿಗಳಿಗೆ ಮುರುಘಾರಾಜೇಂದ್ರ ಎಂಬ ಶಿಷ್ಯನಿದ್ದನು. ಇವರು ಆತನನ್ನು ಪಟ್ಟದ ಮೊಹರು ತರಲು ದಿಲ್ಲಿಗೆ ಕಳಿಸಿದರು. ಮುರುಘರಾಜೇಂದ್ರರು ದೆಹಲಿಯ ಅರಸನಾದ ಮುಲ್ಲೂಖಾನನ ಸತ್ತ ಆನೆಯನ್ನು ಜೀವಂತಗೊಳಿಸಿ, ಚನ್ನಬಸವೇಶ್ವರರು ಕೊಟ್ಟಿದ್ದ ಮೊಹರುಗಳನ್ನು ಹಿಂತಿರುಗಿಸಿ ತಂದರು. ಅಷ್ಟರಲ್ಲೇ ಕಟ್ಟಿಗೆಹಳ್ಳಿಸಿದ್ಧಲಿಂಗರು ತಮ್ಮ ಪಟ್ಟವನ್ನು 'ಮಹಾಂತ' ಎಂಬ ವಟುವಿಗೆ ನೀಡಿದ್ದರು. ದಿಲ್ಲಿಯಿಂದ ಹಿಂತಿರುಗಿ ಬಂದ ಮುರುಘರಾಜೇಂದ್ರರು ಹರಪನಹಳ್ಳಿ ಸೀಮೆಯ ತಾಮ್ರ ಹಳ್ಳಿಯಲ್ಲಿ ನಿದ್ರಾವಸ್ಥೆಯಲ್ಲಿದ್ದ ಗುರುಗಳನ್ನು ಮಂಚಸಮೇತವಾಗಿ ಹೊತ್ತು ತರುತ್ತಿರುವಾಗ, ತಿಳುವಳ್ಳಿಯಲ್ಲಿ ಎಚ್ಚರಗೊಂಡರು. ಆಗ ತಮ್ಮ ಹತ್ತಿರ ಮುರುಘರಾಜೇಂದ್ರರಿದ್ದುದನ್ನು ಕಂಡು ಕಳವಳಗೊಂಡರು. ಮುರುಘರಾಜೇಂದ್ರರು ಅವರನ್ನು ಶಿವಾನುಭವಚರಂತಿಗೆ ಕೊಡಿರೆಂದು ಅಂಗಲಾಚಿ ಬೇಡಿದರು.

ಈಗಾಗಲೇ 'ಶಿವಾನುಭವಚರಂತಿ'ಯನ್ನು 'ಮಹಾಂತ' ಎಂಬವರಿಗೆ ಕೊಡಲಾಗಿದೆ ಎಂದು ಸಿದ್ಧಲಿಂಗರು ನುಡಿಯಲು, ಅದರಿಂದ ಮುರುಘರಾಜೇಂದ್ರರು ಕೆಲ ಅನುಯಾಯಿಗಳೊಡನೆ ತಾವೇ ಮುಖ್ಯಗುರುಗಳು ಎಂದು ಕರೆದುಕೊಂಡು ಚಿತ್ರದುರ್ಗದ ಮದಕರಿನಾಯಕನ ಆಶ್ರಯದಲ್ಲಿ ಮಠ ಕಟ್ಟಿಸಿಕೊಂಡರು. ಇತ್ತ ಮಹಾಂತಸ್ವಾಮಿಗಳು ಸ್ವತಂತ್ರರಾಗಿ ಭಕ್ತೋದ್ಧಾರ ಮಾಡುತ್ತಿದ್ದು ನಂತರ ಅರ್ಧನಾರೀಶ್ವರಸ್ವಾಮಿಗಳಿಗೆ ಶಿವಾನುಭವ ಚರಂತಿಗೆಯನ್ನು ವಹಿಸಿಕೊಟ್ಟರು. ಅದೇ ವೇಳೆಗೆ ರಾಜಕೀಯ ಅವ್ಯವಸ್ಥೆಯಲ್ಲಿದ್ದ ಬಸವಂತನಾಯಕನು ತನ್ನ ಅಪಾರ ಸಂಪತ್ತನ್ನು ಗುರುಗಳ ಬಳಿಗೆ ಹೇರಿ ಕಳುಹಿಸಿದನು. ಕೆಳದಿ ಸೀಮೆಯಲ್ಲಿದ್ದ ಅರ್ಧನಾರೀಶ್ವರರ ಶಿಷ್ಯ ಮಂತೂರಶೆಟ್ಟಿ ಎಂಬುವವನ ಸಹಾಯದಿಂದ ಚೀಲಾಳಸಮಯ ಗದುಗಿಗೆ ಬಂದು ನೆಲೆಸಿತು.

'ಷಟ್‌ಸ್ಥಲಶಿವಾಯಣ'ಎಂಬ ಗ್ರಂಥದಲ್ಲಿ ಸಂಗಮೇಶನು ಕಟ್ಟಿಗೆಹಳ್ಳಿಸ್ವಾಮಿಗೆ ಕನಸಿನಲ್ಲಿ ಬಸವಪ್ರಭುಚೀಲಾಳಸ್ವಾಮಿಗಳನ್ನು ಷಟಸ್ಥಲಪಟ್ಟಕ್ಕೆ ತರಲು ಆದೇಶಿಸಿದರು. ಪ್ರಥಮಪಟ್ಟ ನಿರಂಜನ ಪ್ರಭು(ಶಿವ), ದ್ವಿತೀಯಪಟ್ಟ ಅಲ್ಲಮಪ್ರಭು, ತೃತೀಯ ಪಟ್ಟ ತೋಂಟದಸಿದ್ಧಲಿಂಗ, ಚತುರ್ಥಪಟ್ಟ ಬೋಳಬಸವೇಶ್ವರ, ಪಂಚಮಪಟ್ಟ ಚೆನ್ನಂಜೆದೇಶಿಕ, ಷಷ್ಟಮಪಟ್ಟ ಶಮಿತಾ ಪುರಾಧೀಶ್ವರ, ಸಪ್ತಮ ಪಟ್ಟ ಚೀಲಾಳಸ್ವಾಮಿಗೆ ಸಲ್ಲುವುದೆಂದು ಗಗನದಿಂದ ಬಂದ ಪತ್ರವೊಂದು ತಿಳಿಸಿತಂತೆ. ಕಾರಣ ಕಟ್ಟಿಗೆ ಹಳ್ಳಿಸಿದ್ಧಲಿಂಗಸ್ವಾಮಿಗಳು ಸಂಗಮೇಶ್ವರನ ಆದೇಶದಂತೆ ಅತ್ತಿ ಕಟ್ಟೆಯಲ್ಲಿದ್ದ ಬಸವಪ್ರಭುಚೀಲಾಳ ಸ್ವಾಮಿಗಳನ್ನು ಕರೆತರಲು ಶಿಖಿ, ನಿರೂಪ ಹಾಗೂ ಸಕಲ ಚರಮೂರ್ತಿಗಳ ಜೊತೆ ಹರಪನಹಳ್ಳಿ ಬಸವಂತನಾಯಕನನ್ನು ಕಳಿಸಿದನು. ಆ ಪ್ರಕಾರ ಬಸವಪ್ರಭುಗಳು ಕಟ್ಟಿಗೆಹಳ್ಳಿಸಿದ್ಧಲಿಂಗಸ್ವಾಮಿಗಳ ಬಳಿಬಂದು, ಷಟ್ಸ್ಥಲಪಟ್ಟದ ಉತ್ತರಾಧಿಕಾರವನ್ನು ಪಡೆದು ಹರಪನಹಳ್ಳಿಯ ಗುಡ್ಡದ ಪಕ್ಕದಲ್ಲಿರುವ ಭವ್ಯಮಠದಲ್ಲಿ ವಿರಾಜಿಸಿದರು. ಈ ಹೇಳಿಕೆಗಳಿಂದ ಬಸವಪ್ರಭುಗಳು ಕಟ್ಟಿಗೆಹಳ್ಳಿಸಿದ್ಧಲಿಂಗರಿಂದ ಉತ್ತರಾಧಿಕಾರಿಗಳಾದರೆಂಬುದು ಖಚಿತವಾಗುತ್ತದೆ.

'ಮಹಾಲಿಂಗೇಂದ್ರ ವಿಜಯ'ದ ಪ್ರಕಾರ ಮುರುಘರಾಜೇಂದ್ರಸ್ವಾಮಿಗಳು ಇಮ್ಮಡಿಗುರುಸಿದ್ಧರಿಗೆ ಪಟ್ಟ ಕಟ್ಟಲು, ಅಸಂತುಷ್ಟರಾಗಿ ಚೀಲಾಳಸ್ವಾಮಿಗಳು ಹರಪನಹಳ್ಳಿಗೆ, ಕುಮಾರಸ್ವಾಮಿಗಳು ಸ್ವಾದಿಗೆ ಹೋಗಿ ಅಲ್ಲಿಂದ ಹುಬ್ಬಳ್ಳಿಗೆ ಬಂದು ನೆಲಸಿದರೆಂದು ತಿಳಿದುಬರುತ್ತದೆ. 'ಷಟಸ್ಥಲಶಿವಾಯಣ'ದ ಪ್ರಕಾರ ಬಸವಪ್ರಭು ಚೀಲಾಳಸ್ವಾಮಿಗಳು ಕಟ್ಟಿಗೆಹಳ್ಳಿಸಿದ್ದಲಿಂಗರ ಶಿಷ್ಯರು. ಮುರುಘರಾಜೇಂದ್ರರ ಶಿಷ್ಯ ಚೀಲಾಳಸ್ವಾಮಿಯಲ್ಲದುದರಿಂದ ಇಬ್ಬರೂ ಸಮಕಾಲೀನರೆಂದು ಸ್ಪಷ್ಟವಾಗುತ್ತದೆ. ಬಸವಪ್ರಭು ಚೀಲಾಳಸ್ವಾಮಿಗಳು ಕಟ್ಟಿಗೆಹಳ್ಳಿಸಿದ್ದಲಿಂಗಸ್ವಾಮಿಗಳಿಂದ ಉತ್ತರಾಧಿಕಾರಿಗಳಾದ ತರುವಾಯ ಅಸಂತುಷ್ಟಗೊಂಡ ಕೆಲವರು ಬೇರೆ ಸಮಯ ಮಾಡಿಕೊಂಡರೆಂದು 'ಷಟ್‌ಸ್ಥಲಶಿವಾಯಣ'ದ

"....ಕೆಲವರು ಪಾತಕವಹಿಡಿದು ಬೇರೆ ಸಮಯವ ಮಾಡಿಕೊಂಡರು...." ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ.

ಕೆಂಪಿನಸಮಯ

'ನಿರಂಜನವಂಶರತ್ನಾಕರ'ವು ಕೆಂಪಿನಸಮಯವನ್ನು ಕುರಿತು ಈ ರೀತಿ ಹೇಳಿದೆ. ಕೆಂಪಿನ ಬುಡಕಟ್ಟಿನ ಸಂಗನಬಸವಪ್ಪನವರು, ಸೋಮಕಟ್ಟೆ ಬುಡಕಟ್ಟಿನ ಚೆನ್ನಬಸಪ್ಪನವರು, ಗದ್ದನಕಟ್ಟೆಯ ಬುಡಕಟ್ಟಿನ ರುದ್ರಪ್ಪನವರು ಮತ್ತು ಆಯಕಟ್ಟಿನ ಬುಡಕಟ್ಟಿನ ಸಿದ್ಧಲಿಂಗಸ್ವಾಮಿಗಳು, ಮುರುಘ ಹಾಗೂ ಕುಮಾರಸ್ವಾಮಿಗಳು ಸಿಂಹಾಸನಾರೂಢರಾಗಿದ್ದುದನ್ನು ಕಂಡು 'ಅವರ ಸಮ ಮರ್ಯಾದೆ ನಮಗೇಕೆ ಇಲ್ಲ' ಎಂದು ಮಹಾನವಮಿ ಸಭೆಯ ದಿನದಂದು ಪ್ರಶ್ನಿಸಿದರು. ವಿಷಯ ತಿಳಿದು ಸಿಟ್ಟಿಗೆದ್ದ ಮುರುಘರಾಜೇಂದ್ರ ಹಾಗೂ ಕುಮಾರಸ್ವಾಮಿಗಳು ಸೇರಿ ಚಿತ್ರದುರ್ಗದ ನಾಯಕ ಭರಮಣ್ಣನಿಂದ ಅವರನ್ನು ಹೊರಹಾಕಿಸಿದರು. ಹೀಗೆ ಈ ಬುಡಕಟ್ಟಿನವರಲ್ಲಿ ನಾನು ಹೆಚ್ಚು, ನೀನು ಹೆಚ್ಚು ಎಂಬ ವಾದ ನಡೆದು ಕೊನೆಯಲ್ಲಿ ಕೆಂಪಿನ ಸಮಯ ಉದ್ಭವವಾಯಿತೆಂದೂ, ಇವರ ಮಠಗಳು ಕಲ್ಯಾಣ ಮುಂತಾದ ಕಡೆ ಇರುವವೆಂದು ತಿಳಿಸುತ್ತದೆ.

'ಮಹಾಲಿಂಗೇಂದ್ರ ವಿಜಯ'ದಲ್ಲಿ ಕೆಂಪಿನಸಮಯ ಭಿನ್ನಗೊಂಡ ಉಲ್ಲೇಖ ಮಾತ್ರ ಬರುತ್ತದೆ. ಅಲ್ಲಿ ಈ ಸಮಯದ ಬಗೆಗಿನ ಹೆಚ್ಚಿನ ವಿವರವಿಲ್ಲ. ಬುದ್ಧಯ್ಯಪುರಾಣಿಕರು ಸಂಪಾದಿಸಿದ 'ಶ್ರೀಮದನಾದಿ ಅಲ್ಲಮಪ್ರಭು' ಗ್ರಂಥದ ಒಂದು ಕಥೆಯಲ್ಲಿ ಮುರುಘಶಾಂತವೀರ (ಮುರುಘ ರಾಜೇಂದ್ರ)ರ ಶಿಷ್ಯರಾದ ಕೆಂಪಿನನಂಜದೇವರು ಕಲ್ಯಾಣಕ್ಕೆ ಹೋಗಿ, ಪ್ರಭುದೇವರು ಸ್ಥಾಪಿಸಿದ ಮಠದಲ್ಲಿ ನೆಲಸಿ ಕೆಂಪಿನಸಮಯದ ಸ್ಥಾಪಕರಾದರೆಂದು ಹೇಳಲಾಗಿದೆ.

ಈ ರೀತಿಯ ವೈಯಕ್ತಿಕ ಭಿನ್ನಾಭಿಪ್ರಾಯದ ಮೇರೆಗೆ ಸಮಯ ಭೇದಗಳಾದವೇ ಹೊರತು ಯಾವುದೇ ತಾತ್ವಿಕ ನೆಲೆಗಟ್ಟಿನ ಮೇಲಲ್ಲ. ಆದ್ದರಿಂದ ಇವುಗಳ ಆಚರಣೆಯಲ್ಲಾಗಲಿ, ಬಿರುದು ಬಾವುಲಿಯಲ್ಲಾಗಲಿ, ಭಿನ್ನ ಭೇದಗಳಿರಲಿಲ್ಲ. ಹೀಗಾಗಿ ಒಂದು ಮಠವನ್ನು ಆಯಾ ಸಮಯಗಳಲ್ಲಿ ಗುರುತಿಸುವಾಗ ಅಲ್ಲಿಯ ಶ್ರೀಗಳವರ ಪರಂಪರಾಗತ ಹೇಳಿಕೆಗಳನ್ನು ಮಾತ್ರ ಅವಲಂಬಿಸಬೇಕಾಗುತ್ತದೆ. ಒಟ್ಟಿನಲ್ಲಿ ಇಂದಿನ ಈ ವಿರಕ್ತ ಪರಂಪರೆ ಮುನ್ನೂರು ವರ್ಷಗಳ ಹಿಂದೆ ಮೂಲ ಒಂದೇ ಆಗಿದ್ದು, ತದನಂತರ ಒಬ್ಬರ ಅಧಿಪತ್ಯವನ್ನು ಮತ್ತೊಬ್ಬರು ಒಪ್ಪದೇ ಪ್ರತಿಭಟಿಸಿದುದರ ಫಲವಾಗಿ ಅನೇಕ ಸಮಯಬೇಧಗಳಾದವು ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಡಾ. ಬಿ. ಶಿವಮೂರ್ತಿಶಾಸ್ತ್ರಿಗಳು(ಲೇ), ಶೂನ್ಯಪೀಠ ಐತಿಹಾಸಿಕ ವಿವೇಚನೆ, ಜಂಗಮಜ್ಯೋತಿ ಸ್ಮರಣ ಸಂಚಿಕೆ, ೧೯೭೫, ಪು.೨೭

೨. ಆರ್.ಸಿ. ಹಿರೇಮಠ(ಸಂ), ಬಸವಣ್ಣನವರ ವಚನಗಳು, ವ.ಸಂ.೫೬೧

೩. ಬಿ.ವಿ. ಮಲ್ಲಾಪುರ(ಲೇ), ಅನುಭವಮಂಟಪದ ಪ್ರೇರಣೆಗಳು, ಕಾಯಕ ಪರಿಣಾಮಿ, ಪು.೮೧೮

೪. ತಿ.ನಂ.ಶ್ರೀಕಂಠಯ್ಯ(ಸಂ), ರನ್ನನ ಗದಾಯುದ್ಧ, ಅ.೨, ಪ.೬೯

೫. ಕೇಶಿರಾಜ, ಶಬ್ದಮಣಿದರ್ಪಣ, ವೃತ್ತಿ.೧೧

೬. ಎಲ್.ಬಸವರಾಜ(ಸಂ), ಅಲ್ಲಮನ ವಚನಚಂದ್ರಿಕೆ, ಪು.೧೬೫

೭. ವಿ. ಶಿವಾನಂದ (ಲೇ), ಶೂನ್ಯಸಿಂಹಾಸನ ಒಂದು ಸಂಪ್ರದಾಯವೇ? ಒಂದು ವಿವೇಚನೆ, ಕಾಯಕ ಪರಿಣಾಮಿ, ಪು.೫೨೬-೫೪೫

೮. ಉತ್ತಂಗಿ ಚನ್ನಪ್ಪ(ಲೇ), ಅನಭುವ ಮಂಟಪದ ಐತಿಹಾಸಿಕತೆ, ಬಸವಪಥ, ಸಂ.೨,೪ ೧೯೯೦

೯. ಸಿಂಗಿರಾಜಪುರಾಣ, ಭೀಮಕವಿಯ ಬಸವಪುರಾಣ, ಪ್ರಭುಲಿಂಗಲೀಲೆ, ಶೂನ್ಯಸಂಪಾದನೆಗಳು ಮುಂತಾದ ಗ್ರಂಥಗಳು ಪ್ರಭುದೇವರ ಮತ್ತು ಬಸವಣ್ಣನವರ ಮಿಲನ ಹೇಗೆ ಆಯಿತು ಎಂಬುದನ್ನು ತಿಳಿಸುತ್ತವೆ.

೧೦. ಎಲ್. ಬಸವರಾಜು(ಸಂ), ಮಹಾಲಿಂಗೇಂದ್ರ ವಿಜಯ, ಆಶ್ವಾಸ ೧೩-ಪದ್ಯ ೩೮-೪೦

೧೧. ಫ.ಗು.ಹಳಕಟ್ಟಿ, ಶಿವಶರಣಚರಿತೆ ಭಾಗ-೨ ಪು.೨೮೮

೧೨. ಬಿ.ನಂ. ಚಂದ್ರಯ್ಯ (ಲೇ), ಶೂನ್ಯಪೀಠ ಪರಂಪರೆ, ಜಂಗಮಜ್ಯೋತಿ, ಸ್ಮರಣ ಸಂಚಿಕೆ, ೧೯೭೫ ಪು.೫೮

೧೩. ಸಿ. ಮಹಾದೇವಪ್ಪ(ಲೇ), ಗೋಸಲಸಿದ್ಧೇಶ್ವರರು ಒಂದು ಅಧ್ಯಯನ, ದಾಸೋಹಸಿರಿ, ಪು.೧೯೫-೯೬

೧೪. ಆರ್.ಸಿ. ಹಿರೇಮಠ, ಷಟ್‌ಸ್ಥಲಪ್ರಭೆ, ಪು.೩೨೧

೧೫. ಪಿ.ಎಂ. ಗಿರಿರಾಜು(ಲೇ), ಶ್ರೀ ಗುರುಬಸವೇಶ್ವರದೇವರು ಸಂಸ್ಥಾಪಿಸಿದ ಶಿಕ್ಷಾ ಶೀಲಾಖ್ಯ ಶೂನ್ಯಸಿಂಹಾಸನ ಪರಂಪರೆ, ಸತ್ಯಶುದ್ಧಕಾಯಕ ಸಂ.೬, ಸಂಚಿಕೆ.೧-೨, ೧೯೯೬, ಪು.೧೬೯

೧೬. ಪಂಡಿತ ಚನ್ನಪ್ಪ ಎರೆಸೀಮೆ(ಲೇ), ಗೋಸಲ ಪರಂಪರೆಯ ಮಹಾಬೆಳಗು, ದಾಸೋಹ ಸಿರಿ, ಪು.೨೩೩

೧೭. ನಿರಪರಾಧಿಗಳು ಅಪರಾಧಿಗಳೆಂಬ ಅಪವಾದಗಳು ಬಂದಾಗ ಆ ದೇವರ ಮುಂದೆ ನಿಂತು ಕೆಂಪಗೆ ಕಾದ ಕಬ್ಬಿಣದ ಗುಂಡನ್ನು ಕೈಯಲ್ಲಿ ಹಿಡಿದು ಕೈಸುಡದೇ ಇರುವುದನ್ನು ಅಲ್ಲಿ ಸೇರಿದ ಜನರಿಗೆ ತೋರಿಸುತ್ತಿದ್ದರಂತೆ ಕಾರಣ "ಆ ಲಿಂಗಕ್ಕೆ 'ದಿವ್ಯಲಿಂಗೇಶ್ವರ' ಎಂಬ ಹೆಸರಾಯಿತು. ಈ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿದ್ದ ಅಗ್ನಿದಿವ್ಯ, ಜಲದಿವ್ಯ, ತೈಲದಿವ್ಯ ಮುಂತಾದ ಸಪ್ತದಿವ್ಯ(ಶಿಕ್ಷೆ)ಗಳನ್ನು ನೆನಪಿಸಿಕೊಳ್ಳಬಹುದು.

೧೮. ವೈ.ನಾಗೇಶಶಾಸ್ತ್ರಿ(ಸಂ), ಸಿದ್ಧೇಶ್ವರ ಪುರಾಣ, ಸಂಧಿ.೨ ಪದ್ಯ-೩೦-೩೩

೧೯. ಎಫಿಗ್ರಾಫಿಯಾ ಕರ್ನಾಟಕಾ. ಕುಣಿಗಲ್ ೪೯. ಪು.೧೯

೨೦. ಎಫಿಗ್ರಾಫಿಯಾ ಕರ್ನಾಟಕಾ, XVI ಗುಬ್ಬಿ ಪು.೩೦

೨೧. ಪಂಡಿತ ಚನ್ನಪ್ಪ ಎರೆಸೀಮೆ(ಲೇ) ಗೋಸಲ ಪರಂಪರೆಯ ಮಹಾಬೆಳಗು, ದಾಸೋಹಸಿರಿ, ಪು.೨೩೩

೨೨. ಎಂ.ಪಿ.ಗಿರಿರಾಜು(ಲೇ), ಶ್ರೀ ಗುರುಬಸವೇಶ್ವರದೇವರು ಸ್ಥಾಪಿಸಿದ ರಕ್ಷಾ ಶೀಲಾಖ್ಯ ಶೂನ್ಯಸಿಂಹಾಸನ ಪರಂಪರೆ, ಸತ್ಯಶುದ್ಧಕಾಯಕ, ಸಂ.೬ ಸಂಚಿಕೆ.೧-೨ ಪು.೧೭೫

೨೩. ಎಂ.ಎಂ. ಕಲಬುರ್ಗಿ(ಸಂ), ಷಟ್‌ಸ್ಥಲ ಶಿವಾಯಣ, ಪೀಠಿಕೆ ಪು.೧೦

೨೪. ಬಿ. ಶಿವಮೂರ್ತಿಶಾಸ್ತ್ರಿ, ಮಾದೇಶ್ವರ ಚರಿತೆ, ಪು.೭

೨೫. ಎಂ.ಎಂ. ಕಲಬುರ್ಗಿ, ಶಾಸನಗಳಲ್ಲಿ ಶಿವಶರಣರು, ಪು.೧೪೮

೨೬. ಚನ್ನಮಲ್ಲಿಕಾರ್ಜುನ, ರೇವಣಸಿದ್ಧರು, ಪೀಠಿಕೆ, ಪು.೧೫

೨೭. ಓ.ಎನ್.ಲಿಂಗಣ್ಣಯ್ಯ(ಲೇ), ಹದಿನೆಂಟನೆಯಶತಮಾನ, ವೀರಶೈವ ಸಾಹಿತ್ಯ ಸಮೀಕ್ಷೆ, ಪು.೩೩೦

೨೮. ಆರ್. ನರಸಿಂಹಾಚಾರ್, ಕರ್ನಾಟಕ ಕವಿಚರಿತೆ,ಸಂ.೨, ಪು. ೨೯೩

೨೯. ಎಸ್. ವಿದ್ಯಾಶಂಕರ್(ಸಂ), ಷಟ್‌ಸ್ಥಲ ಜ್ಞಾನ ಸಾರಾಮೃತದ ಬೆಡಗಿನ ವಚನದ ಟೀಕೆ, ಪೀಠಿಕೆ ಪು. ೧೦

೩೦. ಎಲ್. ಬಸವರಾಜು(ಸಂ), ಮಹಾಲಿಂಗೇಂದ್ರ ವಿಜಯ, ಆಶ್ವಾಸ-೧೫, ಮತ್ತು ೧೬

೩೧. ಈತನು ಆಚರಣೆ ಸಂಬಂಧ ವಚನಗಳು, ಲಿಂಗಸ್ತೋತ್ರದ ವಚನ, ಮಿಶ್ರಸ್ತೋತ್ರದ ವಚನ, ಸರ್ವಜ್ಞನ ತ್ರಿವಿಧಿ, ಇವುಗಳನ್ನು ಸಂಪಾದಿಸಿದ್ದಾನೆ. ನೋಡಿ(ಕಕಚ ಸಂ-೨ ಪು.೨೭೫-೨೭೬)

೩೨. ನಿರಂಜನವಂಶರತ್ನಾಕರ(ಭಾಗ-೧) ಮತ್ತು 'ಮಹಾಲಿಂಗೇಂದ್ರ ವಿಜಯ'(ಆ.೧೬.ಪದ್ಯ ೩-೨೨) ಎರಡರಲ್ಲೂ ಇದೇ ವಿವರಣೆ ಇದೆ.

೩೩. ಎಲ್. ಬಸವರಾಜು(ಸಂ), ಮಹಾಲಿಂಗೇಂದ್ರ ವಿಜಯ, ಆ ೧೭, ಪ.೬

೩೪. ಎಸ್. ಶಿವಣ್ಣ(ಸಂ), ಪಾದಸ್ತೋತ್ರ, ಸಾಧನೆ, ತ್ರೈಮಾಸಿಕ ೨೩, ೧-೨, ೧೯೯೪, ಹಾಡು ೪

೩೫. ಬಿ. ಶಿವಮೂರ್ತಿಶಾಸ್ತ್ರಿಗಳು(ಲೇ), ಶೂನ್ಯಪೀಠ ಐತಿಹಾಸಿಕ ವಿವೇಚನೆ, ಜಂಗಮಜ್ಯೋತಿ ಸ್ಮರಣಸಂಚಿಕೆ, ೧೯೭೫, ಪು.೨೭

೩೬. ತ.ಸು. ಶಾಮರಾಯ(ಲೇ), ಶಿವಶರಣ ಕಥಾ ರತ್ನಕೋಶ, ಪು.೨೦೯

೩೭. ಎಲ್. ಬಸವರಾಜು(ಸಂ), ಮಹಾಲಿಂಗೇಂದ್ರ ವಿಜಯ, ಪೀಠಿಕೆ, ಪು.೭೫

೩೮. ಎಂ.ಪಿ. ಗಿರಿರಾಜು (ಲೇ), ಶ್ರೀ ಗುರುಬಸವೇಶ್ವರದೇವರು ಸ್ಥಾಪಿಸಿದ ಶಿಕ್ಷಾ ಶೀಲಾಖ್ಯ ಶೂನ್ಯಸಿಂಹಾನ ಪರಂಪರೆ, ಸತ್ಯಶುದ್ಧ ಕಾಯಕ, ಸಂ.೬, ಸಂಚಿಕೆ ೧ ೨, ೧೯೯೬, ಪು.೧-೨

ಅಧ್ಯಾಯ ೪

ಇಮ್ಮಡಿಮುರಿಗಾಗುರುಸಿದ್ಧರ ಜೀವನ

೧. ಮನೆತನ

೨. ಹೆಸರು

೩. ಗುರುಪರಂಪರೆ

೪. ಕಾಲ

೫. ಅಂಕಿತ

೬. ಮುರುಗಾಮಠದ ಸಂಬಂಧ

೭. ದೇಶಪರ್ಯಟನೆ

೮. ವ್ಯಕ್ತಿತ್ವ


ಯಾವುದೇ ಕವಿಯ ಕೃತಿಗಳನ್ನು ಸರಿಯಾದ ರೀತಿಯಲ್ಲಿ ಓದಿ ಅರ್ಥೈಸಿಕೊಂಡು, ರಸಾನುಭವವನ್ನು ಪಡೆಯಲು ಆ ಕವಿಯ ಜೀವನದ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕಾದುದು ಅಗತ್ಯವಾಗಿದೆ. ಏಕೆಂದರೆ ಮನುಷ್ಯ ಸೃಷ್ಟಿಯಾದ ಸಾಹಿತ್ಯವು ಸೃಷ್ಟಿಸಿದವರ ಜೀವನದ ರೀತಿ-ನೀತಿಗಳನ್ನು ನಿರೂಪಿಸುತ್ತದೆ. ಹೀಗಾಗಿ ಕೆಲವರು ತಮ್ಮ ಜೀವನ ವೃತ್ತಾಂತಗಳನ್ನು ಆತ್ಮಕಥೆಗಳಂತೆ ಕೃತಿಗಳಲ್ಲಿ ಹೇಳಿಕೊಂಡರೆ, ಮತ್ತೆ ಕೆಲವರದು ಅಭಿಮಾನಿ ಶಿಷ್ಯರಿಂದ, ಸಮಕಾಲೀನ ಕವಿಗಳಿಂದ ಜೀವನಚರಿತ್ರೆಯಂತೆ ಬರೆಯಲ್ಪಟ್ಟಿರುತ್ತದೆ. ಆದರೆ ೧೭ನೇ ಶತಮಾನದ ಅಂತ್ಯದಲ್ಲಿ ಜೀವಿಸಿದ್ದ ಇಮ್ಮಡಿ ಮುರಿಗಾ ಗುರುಸಿದ್ಧರ ಜನನ, ಬಾಲ್ಯ, ತಂದೆ, ತಾಯಿ, ಬಂಧು-ಬಳಗ ಮುಂತಾದ ವಿಷಯಗಳ ಬಗೆಗೆ ಸ್ವತಃ ೨೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಇಮ್ಮಡಿ ಮುರಿಗಾಗುರುಸಿದ್ಧರಾಗಲಿ ಅಥವಾ ಅವರ ಶಿಷ್ಯ ಪರಂಪರೆಯವರಾಗಲಿ ವೈಯಕ್ತಿಕ ಬದುಕನ್ನು ದಾಖಲಿಸದೆ ಇರುವುದು. ಆತನನ್ನು ಕುರಿತು ಅಧ್ಯಯನ ಮಾಡುವವರಿಗೆ, ನಿಖರವಾದ ಜೀವನ ಚರಿತ್ರೆ ಕಟ್ಟುವವರಿಗೆ ಮೂಲ ಆಕರ ಸಾಮಗ್ರಿಗಳ ಕೊರತೆ ಉಂಟಾಗುತ್ತದೆ. ಆದರೂ ಅವರ ಪೂರ್ವಾಶ್ರಮದ ಬಗೆಗಿನ ಕೆಲವು ವಿವರಗಳನ್ನು ಇಲ್ಲಿ ಸಂಗ್ರಹಿಸಲು ಯತ್ನಿಸಲಾಗಿದೆ. ಮೂಲತಃ ವಿರಕ್ತ ಪರಂಪರೆಗೆ ಸೇರಿದ ಇವರು ತಮ್ಮ ಕೃತಿಗಳಾದ 'ಶಿವರಹಸ್ಯ', 'ಹಾಲಾಸ್ಯಪುರಾಣ', 'ಪ್ರಭುಲೀಲೆ'ಗಳಲ್ಲಿ ತನ್ನ ಗುರುಪರಂಪರೆಯನ್ನು ಮಾತ್ರ ಹೆಸರಿಸುತ್ತಾನೆ. ಆದರೆ

ಇವರು ಶೂನ್ಯ ಪೀಠದ ಅಧ್ಯಕ್ಷರಾದ ತರುವಾಯ ನಡೆದ ಘಟನೆಗಳನ್ನು ಮಹದೇವ ಕವಿಯ 'ಮಹಾಲಿಂಗೇಂದ್ರವಿಜಯ', ಶಿವಮೊಗ್ಗಜಿಲ್ಲೆಯ ಆನಂದಪುರಂ ಮಠದಲ್ಲಿರುವ 'ತಾಮ್ರಶಾಸನ', ಚಿತ್ರದುರ್ಗ ಬೃಹನ್ಮಠದಲ್ಲಿರುವ 'ಪಟ್ಟವಲ್ಲರಿ'ಗಳು ತಿಳಿಸುತ್ತವೆ. ಗುರುಸಿದ್ಧರ ವ್ಯಕ್ತಿತ್ವವನ್ನು ಮಡ್ಲೇರಿಶಿವಲಿಂಗನ 'ಸ್ವರವಚನಗಳು', ಕಾಶೀಗುರುಲಿಂಗಶಿವಯೋಗಿ ಮತ್ತು ಮರುಳೇಶನೆಂಬ ಕವಿಗಳು ತಮ್ಮ ಕೃತಿಗಳಲ್ಲಿ ಮಾಡಿರುವ ಸ್ಮರಣೆಯಿಂದ ಹಾಗೂ ಅಜ್ಞಾತ ಕವಿಯೊಬ್ಬರು ಗುರುಸಿದ್ಧರ ಬಗೆಗೆ ರಚಿಸಿರುವ ಸ್ತುತಿ ಪದ್ಯಗಳಿಂದ ತಿಳಿಯಬಹುದಾಗಿದೆ.

ಮನೆತನದ ವಿವರ

ಅಮರಗುಂಡದ ಮಲ್ಲಣಾರ್ಯರ ವಂಶದವರು ಕಾರಣಾಂತರದಿಂದ ಕುಟುಂಬ ಸಮೇತವಾಗಿ ಧನುಗೂರಿನ ಆಸುಪಾಸಿನ ಗ್ರಾಮಕ್ಕೆ ವಲಸೆ ಬರುತ್ತಾರೆ. ಅವರ ಪೀಳಿಗೆಯವರೇ ಶಾಂತಲಿಂಗಸ್ವಾಮಿಗಳು. ಇವರಿಗೆ ಇಬ್ಬರು ಗಂಡಮಕ್ಕಳು ಒಬ್ಬ ಶಿವಾಲಂಕಾರಪ್ಪ, ಇನ್ನೊಬ್ಬ ಶಿವಬಸಪ್ಪ. ಶಿವಾಲಂಕಾರಪ್ಪನಿಗೆ ಇಬ್ಬರು ಗಂಡು ಮಕ್ಕಳು; ಒಬ್ಬ ಗೌರೀಶಂಕರ ಮತ್ತೊಬ್ಬ ಉಮಾಶಂಕರ. ಅಂತೆಯೇ ಶಿವಬಸಪ್ಪನಿಗೂ ಇಬ್ಬರೂ ಗಂಡುಮಕ್ಕಳು, ಒಬ್ಬ ಸದಾಶಿವಪ್ಪ, ಇನ್ನೊಬ್ಬ ಪರಶಿವಮೂರ್ತಿ. ಹಿರಿಯ ಮಕ್ಕಳಾದ ಗೌರೀಶಂಕರ ಮತ್ತು ಸದಾಶಿವಪ್ಪ ಸೋದರ ಸಂಬಂಧಿ ಪುತ್ರರಾಗಿದ್ದರೂ, ಪರಸ್ಪರ ಪ್ರೀತಿ ವಿಶ್ವಾಸದಿಂದ ಬದುಕಿದವರು. ವಿದ್ಯೆ, ವಿದ್ವತ್ ಎರಡರಲ್ಲೂ ಸಮಾನವಾಗಿದ್ದ ಇವರು ಧನುಗೂರು ಮಠದ ಗುರುಗಳಿಂದ ಅನುಭಾವ ಜ್ಞಾನ ಪಡೆದವರು. ಹೀಗಾಗಿ ಹಿರಿಯವರಾದ ಗೌರೀಶಂಕರರು ಧನುಗೂರು ಮಠದ ಚಿಕ್ಕವೀರದೇಶಿಕರ ಶಿಷ್ಯರಾಗಿ ಅದೇ ಮಠದ ಸ್ವಾಮಿಗಳಾಗಿ 'ಷಡಕ್ಷರಿದೇವ' ಎಂಬ ಹೆಸರಿನಿಂದ ಪ್ರಖ್ಯಾತರಾದರು. ಇವರು ಚಿಕ್ಕದೇವರಾಜ ಒಡೆಯರ(ಕ್ರಿ.ಶ.೧೬೭೩-೧೭೦೪) ತಾಯಿ ಅಮೃತಾಂಬೆಯ ತವರು ಮನೆಗೆ ಕುಲಗುರುವಾಗಿದ್ದರು. ಎಳಂದೂರು ಮುದ್ದುರಾಜನ (ಕ್ರಿ.ಶ.೧೬೫೪) ಅಪೇಕ್ಷೆಯಂತೆ ಎಳಂದೂರಿಗೆ ಬಂದು ಅಲ್ಲಿನ ಮಠದ ಅಧಿಪತಿಗಳಾಗುತ್ತಾರೆ.

ಷಡಕ್ಷರದೇವನು ಧನುಗೂರನ್ನು ಬಿಟ್ಟು ಎಳಂದೂರಿಗೆ ಹೋಗಿ ನೆಲಸಿದ ಮೇಲೆ, ಧನುಗೂರು ಮಠದಲ್ಲಿ ತೆರವಾಗಿದ್ದ ಪೀಠಾಧಿಕಾರಕ್ಕೆ ಅದೇ ಪರಂಪರೆಯ ಸೋಮಶೇಖರಶಿವಯೋಗಿಗಳು ಅಧಿಪತಿಗಳಾಗಿ, ಸದಾಶಿವಪ್ಪನಿಗೆ ಚಿಕ್ಕಂದಿನಲ್ಲೇ ಶಿವದೀಕ್ಷೆಯನ್ನು ಕೊಟ್ಟು 'ಗುರುಸಿದ್ಧ' ಎಂಬ ಹೆಸರಿನಿಂದ ಕರೆದು ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಷಡಕ್ಷರದೇವನಿಗಿಂತ ಕಿರಿಯರಾದ ಇವರನ್ನು ಹುಲ್ಲಹಳ್ಳಿಯ ಮಠಕ್ಕೆ ಅಧಿಪತಿಗಳನ್ನಾಗಿ ನೇಮಿಸುತ್ತಾರೆ. ಈ ಮೇಲಿನ ಉಲ್ಲೇಖಗಳಿಂದ ಇವರ ವಂಶವೃಕ್ಷವನ್ನು ಹೀಗೆ ಗುರುತಿಸಬಹುದಾಗಿದೆ.



೧. ಗೌರೀ ಶಂಕರರು ಮುಂದೆ ಷಡಕ್ಷರದೇವರೆಂದು ಪ್ರಖ್ಯಾತರಾದರು.

೨. ಸದಾಶಿವಪ್ಪನವರು ಮುಂದೆ ಇಮ್ಮಡಿ ಮುರಿಗಾಗುರುಸಿದ್ಧರೆಂದು ಹೆಸರಾದರು.[೧]

ಷಡಕ್ಷರದೇವ ಹಾಗೂ ಇಮ್ಮಡಿಗುರುಸಿದ್ಧರು ಒಂದೇ ವಂಶಕ್ಕೆ ಸೇರಿದವರು ಎಂಬುದನ್ನು ಜಿ.ಎ. ಶಿವಲಿಂಗಯ್ಯನವರು ಮೇಲಿನ ವಂಶಾವಳಿಯ ಆಧಾರದಿಂದ ನಿರೂಪಿಸುತ್ತಾರೆ. ಅಂತೆಯೇ ಕವಿಗಳೀರ್ವರೂ ತಮ್ಮ ತಮ್ಮ ಕೃತಿಗಳಲ್ಲಿ ಹೇಳಿಕೊಂಡಿರುವ ವಂಶಪರಂಪರೆಯೂ ಈ ಅಭಿಪ್ರಾಯಕ್ಕೆ ಪೂರಕವಾಗುತ್ತದೆ. ಕವಿ ಷಡಕ್ಷರದೇವನು 'ಕವಿಕರ್ಣರಸಾಯನ'ಕೃತಿಯಲ್ಲಿ 'ದನುಃಪುರೋದ್ಧಾನ ಯತೀಂದ್ರ ವಂಶಃ'[೨] ಎಂದು ಹೇಳಿದರೆ ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಸಂಸ್ಕೃತ ಕೃತಿ ಪ್ರಭುಲೀಲೆಯಲ್ಲಿ '.....ತತ್ಕಥಾಂತರಸ್ತತ್ರ ಪೂರ್ಭಾತೀತಿ ಧನುಃಪುರೀ, ...ವೀರಶೈವೋಪದೇಷ್ಟಾ ಸಾವಾಸೀದುದ್ಧಾನ ಯೋಗಿರಾಟ್ ತಸ್ಯವಂಶಃ ಕರೇ ಜಾತ...'[೩] ಎಂದು ಹೇಳಿಕೊಳ್ಳುತ್ತಾನೆ. ಇಬ್ಬರೂ ಧನುಗೂರಿನ ಜೊತೆಗೆ ಉದ್ಧಾನಮೂರ್ತಿಯ ವಂಶಸ್ಥರು ಎಂದು ಹೇಳಿಕೊಳ್ಳುವ ಮೂಲಕ ಈ ವಂಶಕ್ಕೆ ಸಂಬಂಧಪಟ್ಟ ಬಂಧು-ಬಳಗದವರ ಒಡಲಲ್ಲಿ ಜನಿಸಿರುವರೆಂಬ ಧ್ವನಿ ಸ್ಪಷ್ಟವಾಗಿ ಹೊರಹೊಮ್ಮುತ್ತದೆ. ಹೀಗಾಗಿ ಇಬ್ಬರ ಜನ್ಮಸ್ಥಳವೂ ಧನುಗೂರು ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

ಈ ಅಭಿಪ್ರಾಯಕ್ಕೆ ಸಮ್ಮತವೆಂಬಂತೆ ಇಬ್ಬರು ಕವಿಗಳು ಸ್ವೀಕರಿಸಿರುವ 'ಶಿವಲಿಂಗ'ವೆಂಬ ಒಂದೇ ಅಂಕಿತ, ಇಂದಿಗೂ ಧನುಗೂರಿನಲ್ಲಿ ಷಡಕ್ಷರಿಯ ಮಠದ ಮುಂದೆ 'ಶಿವಲಿಂಗೇಶ್ವರ' ಎಂಬ ಹಳೆಯ ದೇವಸ್ಥಾನವಿದ್ದು, ಆ ಶಿವಲಿಂಗದ ಪ್ರಭಾವವು ಕವಿಗಳಿಬ್ಬರ ಮೇಲೆ ಆಗಿರಬೇಕು. ಕಾರಣ ಅವರು 'ಶಿವಲಿಂಗ'ವೆಂಬ ಅಂಕಿತವನ್ನು ಆಯ್ದುಕೊಂಡಿದ್ದಾರೆ. ಇವರಿಬ್ಬರ ಅನ್ಯೋನ್ಯತೆಗೆ ಮತ್ತೊಂದು ಸಾಕ್ಷಿ'ಚರಮಗೀತೆ'[೪]. ಈ ಗೀತೆಯನ್ನು ಷಡಕ್ಷರ ಕವಿಯು ಲಿಂಗೈಕ್ಯರಾದಾಗ ಆಪ್ತರೆನಿಸಿದ ಇಮ್ಮಡಿ ಮುರಿಗಾಗುರುಸಿದ್ಧರು ರಚಿಸಿದ್ದು, ಷಡಕ್ಷರಿಯನ್ನು ಮಹಾಗುರು, ಸುವಿವೇಕಶಾಲಿ, ಸತ್ಕವಿ, ಚಕ್ರವರ್ತಿ, ಶುಭಕೀರ್ತಿ, ನಿರ್ಭವ, ಪಾಣಿನಿ, ಸೋಮನಾಥ, ಇತ್ಯಾದಿ ಹೆಸರುಗಳಿಂದ, ಭುವಿಯಲ್ಲಿ ಅವತರಿಸಿ ಬಸವಪುರಾಣವನ್ನು ಹೇಳಿದ ಮಹಾತ್ಮ ಎಂದು ವಿವಿಧ ರೀತಿಯಾಗಿ ಹೊಗಳಿ ಹಾಡುವ ಮೂಲಕ ತನಗಾದ ಅತೀವ ದುಃಖ ಭಾಷ್ಪಾಂಜಲಿಯನ್ನು ಅರ್ಪಿಸಿ, ಪ್ರಾಂಜಲ ಮನದಭಕ್ತಿಯನ್ನು

ಪ್ರಕಟಪಡಿಸುವನು. ಸೋಜಿಗದ ಸಂಗತಿಯೆಂದರೆ ಒಂದೇ ಮನೆತನದಲ್ಲಿ ಹುಟ್ಟಿಬೆಳೆದ ಸಮಾನ ಪ್ರತಿಭೆಯುಳ್ಳ ಇವರ ಕುರಿತಾಗಿ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಷಡಕ್ಷರಿ ಮಾತ್ರ ಕವಿಯಾಗಿ ವಿಜೃಂಭಿಸಿದಂತೆ, ಇಮ್ಮಡಿ ಮುರಿಗಾಗುರುಸಿದ್ಧರು ವಿಜೃಂಭಿಸಲಿಲ್ಲ. ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಸಿದರೂ ಅವು ವಿಮರ್ಶೆಯ ಪರಿಧಿಗೆ ಸೇರ್ಪಡೆಯಾಗಲಿಲ್ಲವೆಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ.

ಹೆಸರು

ಇಮ್ಮಡಿ ಮುರಿಗಾಗುರುಸಿದ್ಧರನ್ನು ಗುರುಸಿದ್ಧಶಿವಯೋಗಿ, ಗುರುಸಿದ್ಧದೇಶಿಕೇಂದ್ರ, ಗುರುಸಿದ್ಧೇಶ ಸ್ವಾಮಿ, ಇಮ್ಮಡಿ ಮುರಿಗಾಗುರುಸಿದ್ಧದೇಶಿಕೇಂದ್ರ, ಇಮ್ಮಡಿಗುರುಸಿದ್ಧ, ದ್ವಿತೀಯಮುರಿಗಾ ಗುರುಸಿದ್ಧದೇಶಿಕೇಂದ್ರ, ದ್ವಿತೀಯಮುರಿಗಾಖ್ಯ ಗುರುಸಿದ್ಧಯೋಗೀಂದ್ರ, ಲೀಲಾಖ್ಯದಮುರಿಗಾಖ್ಯ ಶಿವಯೋಗಿ ಮುಂತಾದ ಹೆಸರುಗಳಿಂದ ಕವಿಗಳು, ಕಾವ್ಯ ಪ್ರತಿಲಿಪಿಕಾರರು ಕರೆದಿದ್ದಾರೆ. ಸ್ವತಃ ಗುರುಸಿದ್ಧರೇ ತಮ್ಮ ಹಾಲಾಸ್ಯ ಪುರಾಣದಲ್ಲಿ:

ಹರಿಸಮನಾಂತು ಮನ್ಮನದೊಳಂ ಗುರುಸುಂದರದೇವನಂಪ್ರಿಯಂ
ಸ್ಮರಿಸೆಮದೀಶನೊಲ್ದು ಹೃದಯಾಬ್ಜದೊಳಂ ಗುರುಸಿದ್ಧನಾಮವಿ
ಸ್ಫುರದುರಭಾಸ್ವದಿರ್ಮಡಿ ಮಹಾಭಿಧಸನ್ಮುರಿಗಾಂಕನಾಗುತಂ
ಸರಸದೆ ದೇಶಿಕೇಂದ್ರನೆನಿಸುತುಸಿರ್ದೆಂ ನಿರಘಂ ಪುರಾಣಮಂ

(ಹಾ.ಪು.ಕಾಂಡ.೪ ಪದ್ಯ.೧೨೬)

ವಿಷ್ಣುವಿನ ಸಮಾನರಾಗಿರುವ, ಗುರುವಾದ ಸುಂದರ ದೇವನನ್ನು ಭಕ್ತಿಯಿಂದ ಸ್ಮರಣೆ ಮಾಡಿದುದಕ್ಕಾಗಿ ಈಶ್ವರನು ಕೃಪೆ ತೋರಿ 'ಗುರುಸಿದ್ಧ' ಎಂಬ ಹೆಸರಿನಿಂದ, 'ಇಮ್ಮಡಿ' ಎಂಬ ಮಹಾಬಿರುದನ್ನು ಪಡೆದು ನಂತರ 'ಮುರಿಗಾಂಕ'ನಾಗುತ್ತ, ಸರಸದೆ 'ದೇಶಿಕೇಂದ್ರ' ಎಂದು ಎನಿಸಿ ಈ ಪುರಾಣವನ್ನು ರಚಿಸಿದೆನೆಂದು ಹೇಳುತ್ತಾನೆ. ಆದರೆ ಇವರ ಪೂರ್ವಾಶ್ರಮದ ವಿವರಗಳಲ್ಲಿ ಕಂಡುಬರುವಂತೆ ಮೊದಲ ಹೆಸರು 'ಸದಾಶಿವಪ್ಪ'. ಈತನು ಸೋಮಶೇಖರಶಿವಯೋಗಿಗಳಿಂದ ಶಿವದೀಕ್ಷೆಯನ್ನು ಹೊಂದಿ 'ಗುರುಸಿದ್ಧ' ಎಂಬ ಹೆಸರನ್ನು ಪಡೆಯುತ್ತಾನೆ. ಚಿತ್ರದುರ್ಗದ ಶೂನ್ಯಪೀಠದ ಮೊದಲ ಅಧಿಪತಿ ಶ್ರೀಶಾಂತವೀರದೇಶಿಕರಾದುದರಿಂದ ಪ್ರಾಯಶಃ ಶಾಂತಲಿಂಗದೇಶಿಕರಿಗೆ ಗುರುಸಿದ್ಧದೇಶಿಕೇಂದ್ರ ಎಂಬ ಅಭಿನಾಮವೂ ಇದ್ದಿರಬೇಕು. ಹೀಗಾಗಿ ಶೂನ್ಯ ಪೀಠದ ೧ನೇ ಗುರುಸಿದ್ಧ ದೇಶಿಕೇಂದ್ರರಾಗಿದ್ದಂತೆ ತೋರುತ್ತದೆ. ಏಕ ಹೆಸರಿನ ಇಬ್ಬರು ವ್ಯಕ್ತಿಯನ್ನು ಗುರುವಾಗಿಸುವ ಸಲುವಾಗಿ ಇವರಿಗೆ ಇಮ್ಮಡಿ ಗುರುಸಿದ್ಧರೆಂದು ಕರೆದಿರಬೇಕು. ಎರಡನೆಯ ಅಧಿಪತಿಯಾದ ಇವರಿಗೆ 'ಇಮ್ಮಡಿ' ಎಂಬ ಅಭಿದಾನ

ಮತ್ತು ಅದು ಮುರಿಗಾ ಸಮಯದ ಮಠವಾದುದರಿಂದ 'ಮುರಿಗಾದೇಶೀಕೇಂದ್ರ' ಎಂಬ ವಿಶೇಷಣಗಳು ಪ್ರಾಪ್ತವಾಗಿರಬೇಕು. ಹೀಗಾಗಿ ಇವರ ಪೂರ್ಣ ಹೆಸರು 'ಇಮ್ಮಡಿ ಮುರಿಗಾಗುರುಸಿದ್ಧದೇಶಿಕೇಂದ್ರ' ಎಂಬುದು ಸ್ಪಷ್ಟವಾಗುತ್ತದೆ.

ಗುರುಪರಂಪರೆ

ಇಮ್ಮಡಿಗುರುಸಿದ್ಧರು ಗುರುಪರಂಪರೆಗೆ ಸಂಬಂಧಿಸಿದಂತೆ ತಮ್ಮ ಕೃತಿಗಳಾದ 'ಶಿವರಹಸ್ಯ', 'ಹಾಲಾಸ್ಯಪುರಾಣ' ಹಾಗೂ 'ಪ್ರಭುಲೀಲೆ'ಗಳಲ್ಲಿ ಈ ಕೆಳಗಿನ ಸಂಗತಿಗಳನ್ನು ತಿಳಿಸುತ್ತಾರೆ. 'ಶಿವರಹಸ್ಯದ' ಪ್ರತಿಕಾಂಡದ ಅಂತ್ಯದಲ್ಲಿ

ಪರಮಶಿವಲಿಂಗ ನಿರುಪಮ| ಪದಕಮಲ ಮಕರಂದ ಮಧುಕರ
ಹೃದಯನೆನಿಸುವ ಸೋಮಶೇಖರ ಗುರುಕರಾಬ್ಜಭವಂ|
ಸದಯ ಗುರುಸಿದ್ದೇಂದ್ರ ಸಮ್ಮನಿ|..... ಎನ್ನುವುದರಿಂದ

ಗುರುಸಿದ್ಧರು ಸೋಮಶೇಖರ ಎಂಬ ಗುರುವಿನ ಶಿಷ್ಯರು ಎಂಬುದು ಸ್ಪಷ್ಟವಾಗುತ್ತದೆ. ಇದೇ ವಿಚಾರವು 'ಹಾಲಾಸ್ಯಪುರಾಣ'ದಲ್ಲಿ ಇನ್ನೂ ದೀರ್ಘವಾಗಿ ಬಂದಿದೆ.

ಪ್ರಣವ ಧನುಃಪುರಸ್ಥ ಚಿತಿಶಕ್ತಿಸುಪೀಠ ಮಠಾಧಿರಾಜಸಂ
ಪ್ರಣುತ ಭವಾಪಹಾರಿ ಗುರುರಾಡ್ವರಸೇವಿತ ಸೋಮಶೇಖರ
ಪ್ರಣುತ ಸುನಾಮದೇಶಿಕ ಪದಾಂಬುಜಮೆನ್ನಯ ಹೃತ್ಸರೋಗ್ರದೊಳ್
ಬಣಿತೆಯಿನೆಯ್ದಿನಿಂದೊಡಿರದಾಂ ಗುರುರೂಪಮನಾಳ್ದೆನುರ್ವಿಯೊಳ್

(ಕಾಂಡ.೪, ಪದ್ಯ.೧೪೯)

ಮಿಸುಪ ಕೇವಲ ಕುಂಭಪಲ್ಲಿಯೆನಿಪ್ಪ ತಾಣದೊಳಾವಗಂ
ಸಸಿನೆ ಸೋಹಮೆನಿಪ್ಪ ಮಂತ್ರಹಸಂಗಳಂ ಸಲೆಲೋಪಿಸಲ್
ಬೆಸುಗೆಯಾದುರೆಯೋಮಯೋರ್ಜಿತ ಸತ್ಕಲಾನ್ವಿತ ಶಬ್ದಮ
ನ್ಯಸದೃಶಾಬ್ಧಿದೇವ ಚಿದ್ಬಸವೇಶನಿಂ ಬುಧನಾದೆನಾಂ

(ಕಾಂಡ.೪, ಪದ್ಯ.೧೫೦)

ಪರಮ ಚಿದದ್ವಯಾತ್ಮಕ ಗುರುದ್ವಯಮಂತದು ತಾನೆಯಾಗಿನಿ
ಷ್ಠುರತರ ಭೇದತಾಮಸ ನಿವಾರಣ ಸೂರ್ಯನಮಾಯನುತ್ಕೃಪಾ
ಕರ ನೆನಿಸುತ್ತೆಲೋಕ ತತಿಯೊಳ್ ನೆರೆಪೂಜ್ಯಪಾದಾಬ್ಜನಾದಸ
ನ್ಮುರಿಗೆಯ ಶಾಂತವೀರದೇಶಿಕನಿಂ ಪರರೂಪವೊಂದಿದೆಂ

(ಕಾಂಡ.೪, ಪದ್ಯ.೧೫೧)

ಧನುಗೂರು(ಧನುಃಪುರ) ಶ್ರೀಮನ್ನಿರಂಜನ ಮಹಾಪೀಠಾಧೀಶನೂ, ಗುರುರಾಡ್ವರ ಸೇವಿತನೂ ಆದ ಸೋಮಶೇಖರದೇಶಿಕರ ಪಾದಕಮಲವು ತನ್ನ ಹೃದಯದಲ್ಲಿ ನೆಲೆಸಲಾಗಿ ಅವರ ಉಪದೇಶದಿಂದ

ತಾನು ಈ ಭೂಮಿಯಲ್ಲಿ ಗುರುರೂಪವನ್ನು ಪಡೆದನು ಎಂದೂ, ಕುಂಬಪಲ್ಲಿಯೆಂಬ ಸ್ಥಳದಲ್ಲಿ ನೆಲೆಸಿದ್ದು ಸದಾ 'ಸೋಹಂ ಸೋಹಂ' ಎಂಬ ಮಂತ್ರವನ್ನು 'ಹಂಸ ಹಂಸ' ಎಂದು ಜಪಿಸುತ್ತ, ಚಿದ್ಘಸವೇಶನೆಂಬ ಮಹಾಯೋಗಿಯಿಂದ ತಾನು ಕವಿತ್ವ ಶಕ್ತಿ ಪಡೆದು ಪಂಡಿತನಾದೆನು ಎಂದು ಹೇಳಿಕೊಳ್ಳುತ್ತಾನೆ. ಸೋಮಶೇಖರದೇಶಿಕ, ಚಿದ್ಘಸವೇಶ ಇವರಿಬ್ಬರ ಕೃಪೆ ಪಡೆದು ನಿಷ್ಠುರವಾಗಿ ಧರ್ಮವನ್ನು ಅನುಸರಿಸುತ್ತಾ, ಭೇದ ತಾಮಸಗಳನ್ನು ಹೋಗಲಾಡಿಸುವ ಸೂರ್ಯನಂತೆ, ಈ ಲೋಕದೊಳಗೆ ಪೂಜ್ಯರಾದ ಮುರಿಗೆಯ ಶಾಂತವೀರದೇಶಿಕರ ಅನುಗ್ರಹದಿಂದ ಷಟಸ್ಥಲಮಾರ್ಗವನ್ನು ಪಡೆದು ಪರರೂಪವನ್ನು ಹೊಂದಿದ ಎಂಬುದು ಮೇಲಿನ ಪದ್ಯಗಳಿಂದ ತಿಳಿದುಬರುತ್ತದೆ. ಈ ಸಂಗತಿಗಳಿಗೆ ಪುಷ್ಟಿ ನೀಡುವಂತೆ 'ಪ್ರಭುಲೀಲೆ' ಕಾವ್ಯದ ಪ್ರಥಮ ಸರ್ಗದ ೨೯ನೇ ಶ್ಲೋಕದಿಂದ ೩೯ನೇ ಶ್ಲೋಕಗಳವರೆಗೆ ಗುರುಪರಂಪರೆಯ ಬಗ್ಗೆ ನೀಡಿರುವ ವಿವರಗಳನ್ನು ನೋಡಬಹುದು.

ಓಂಕಾರ ಧನುರಾಯಕರೇಜಗ್ರಾಹಶಂಕರಃ|
ತತ್ಕಥಾಂತರಸ್ತತ್ರಪೂರ್ಭಾತೀತಿ ಧನುಃಪುರೀ|| ೧-೨೯

ತತ್ರಸಿಂಹಾಸನಂರೇಜೇಚಿಚ್ಛಕ್ತೇಃಪೀಠಸಂಜ್ಞಕಂ|
ತಸ್ಮಿನ್‌ನಿರಂಜನೋಂಕಾರರೂಪ್ಯೋರೋಚತ್‌ಗುರುಶ್ಶಿವಃ|| ೧-೩೦

ಉನ್ನತಂದಾನಮುದ್ಧಾನಂತದ್ವಾನ್‌ಪ್ರಾದಿಸಮಾಸತಃ|
ಕ್ಷಿತವರ್ಣ್ಸಗ್ರಣೀರ್ನಾಮ್ನೋದ್ಧಾನಮೂರ್ತಿರಿತೀರ್ಯತೇ|| ೧-೩೧

ದಕ್ಷಿಣಾದಾನಮಿತ್ಯುಕ್ತಾಸ್ಸಾತ್ತನ್ಮೂರ್ತಿರುದಾದಿತಃ|
ಉದ್ಧಾನಮೂರ್ತಿರೇವಾಸೀದಸಾಧಾರಣಸಂಜ್ಞಯಾ|| ೧-೩೨

ಬೋದ್ಧರ್ಷೀಂಸ್ತ್ರಿಪದಾರ್ಥಾನಾಂದಕ್ಷಿಣಾಮೂರ್ತಿರಪ್ಸಭೂತ್
ವೀರಶೈವೋಪದೇಷ್ಟಾಸಾವಾಸೀದುದ್ಧಾನಯೋಗಿರಾಟ್ || ೧-೩೩

ತಸ್ಯವಂಶಃಕರೇಜಾತಸ್ಸೋಮಶೇಖರಸದ್ಗುರೋಃ|
ಸ್ಸೋಹಂಶಿಕ್ಷಾಂಗಮೀಚಾಶ್ರೀಮದ್ಬಸವಲಿಂಗತಃ|| ೧-೩೪

ತಯಾಮುರಿಗೆಯಾಚಿತ್ಯಾವೀರಾಬ್ಯೇಂದ್ರಿಯಸಂತತಿಃ|
ಶಾಂತೋಯೇನಪರಿವ್ರಾಜಾಮಾನೇತ್ತನ್ನಾಮಕೋ ಗುರುಃ|| ೧.೩೭

ತಸ್ಮಲ್ಲಬ್ಧಿಮಹಾಜ್ಞಾನಾತ್‌ಪ್ರಾಪ್ತತನ್ನಾಮರೂಪಕಃ|
ಭವಾಮಿಗುರುಸಿದ್ಧಾಬ್ಯೋಯೋಗಿಷಟ್ಸ್ಥಲಮಾರ್ಗವಿತ|| ೧.೩೯

ಕವಿಯು ಧನುಗೂರಿನ ಬಗ್ಗೆ ಇರುವ ಪೌರಣಿಕ ಕಥೆಯೊಂದನ್ನು ಪ್ರಸ್ತಾಪಿಸುತ್ತ, ಅಲ್ಲಿದ್ದ ನಿರಂಜನಪೀಠದ ಅಧಿಕಾರಿ ಉದ್ಧಾನಮೂರ್ತಿ, ವೀರಶೈವ ಧರ್ಮ ಬೋಧಕನಾಗಿದ್ದ ಗುರು ಉದ್ಧಾನಮೂರ್ತಿಯ ವಂಶದವನಾದ ನಾನು ಸದ್ಗುರುಸೋಮಶೇಖರನ ಶಿಷ್ಯ ಎಂದು ಹೇಳಿಕೊಳ್ಳುತ್ತಾನೆ. ಕುಂಬಪಲ್ಲಿಯಬಸವಲಿಂಗಸ್ವಾಮಿಗಳಿಂದ ಶಿಕ್ಷಿತನಾಗಿ, ಮುರಿಗಾಶಾಂತವೀರರ ಅನುಗ್ರಹಕ್ಕೆ ಪಾತ್ರರಾಗಿ

ಷಟ್‌ಸ್ಥಲ ಮಾರ್ಗ ಹೊಂದಿದನೆಂಬುದು ತಿಳಿದುಬರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಹಾಲಾಸ್ಯಪುರಾಣದಲ್ಲಿ ಉದ್ಧಾನಮೂರ್ತಿ (ಕ್ರಿ.ಶ.೧೫೯೦-೧೬೨೦)ಯ ಉಲ್ಲೇಖವಿಲ್ಲದಿರುವುದು. ಈ ಉದ್ಧಾನಮೂರ್ತಿಯು ಧನುಗೂರಿನ ಶಿವಭಕ್ತರಾದ ವೀರಮ್ಮ, ವೀರಭದ್ರಪ್ಪ ಎಂಬ ದಂಪತಿಗಳ ಪುತ್ರ, ಈತನ ಮೊದಲ ಹೆಸರು 'ಗುರುಪಾದಪ್ಪ' ಎಂದಿದ್ದು ಹಸುಗಳನ್ನು ಮೇಯಿಸಿಕೊಂಡು ಬರುವ ಕಾಯಕದಲ್ಲಿ ನಿರತನಾಗಿದ್ದ. ಈತನ ಭಕ್ತಿ ಭಾವಗಳನ್ನು ಮೆಚ್ಚಿ ಶ್ರೀರುದ್ರಮುನಿ ದೇಶಿಕೇಂದ್ರರು 'ಉದ್ಧಾನದೇಶಿಕೇಂದ್ರ' ಎಂದು ನಾಮಕರಣ ಮಾಡಿ ಧನುಗೂರಿನ ಮಠಾಧೀಶರನ್ನಾಗಿ ನೇಮಿಸುತ್ತಾರೆ.[೫] ಈ ಶಿವಯೋಗಿಯ ಹೆಸರು ಇಂದಿಗೂ ಶೂನ್ಯಪೀಠ ಪರಂಪರೆಯಲ್ಲಿ ಹೆಸರಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.[೬] ಗುರುಸಿದ್ಧನು ಇಂತವರ ವಂಶದಲ್ಲಿ ಜನಿಸಿದವನು ನಾನು ಎಂದು ಹೇಳಿಕೊಂಡಿರುವನು. ಹಾಲಾಸ್ಯಪುರಾಣದಲ್ಲಿ ಕುಂಬಪಲ್ಲಿಯಚಿದ್ಘಸವೇಶನಿಂಬುಧನಾದೆ ಎಂದಿರುವನು. ಈ ಚಿದ್ಘಸವೇಶನೇ ಶ್ರೀ ಬಸವಲಿಂಗಸ್ವಾಮಿಗಳು ಎಂಬುದು 'ಪ್ರಭುಲೀಲೆ'ಯಿಂದ ಸ್ಪಷ್ಟಪಡುತ್ತದೆ. ಅವರ ಕೃತಿಗಳಲ್ಲಿ ಉಲ್ಲೇಖವಾದಂತೆ ಧನುಗೂರಿನ ಸೋಮಶೇಖರ ಶಿವಯೋಗಿ 'ದೀಕ್ಷಾಗುರು', ಕುಂಬಪಲ್ಲಿಯ ಬಸವಲಿಂಗಸ್ವಾಮಿಗಳು 'ಶಿಕ್ಷಾಗುರು' ಚಿತ್ರದುರ್ಗದ ಮುರಿಗಾಶಾಂತವೀರರು 'ಜ್ಞಾನಗುರು' (ಮೋಕ್ಷಗುರು) ಎಂದು ಹೇಳಬೇಕಾಗುತ್ತದೆ. ಉದ್ಧಾನಶಿವಯೋಗಿಯ ವಂಶಸ್ಥರಾದ ಇವರ ಗುರುಪರಂಪರೆಯನ್ನು ಹೀಗೆ ಗುರುತಿಸಬಹುದಾಗಿದೆ.

ಕೊಲ್ಲಿಪಾಕಿಯ ಲಿಂಗೋದ್ಭವ ರೇಣುಕಾಚಾರ್ಯ

|

ರುದ್ರಮುನೀಶ್ವರ(ಪುತ್ರ)

|

ಉದ್ಧಾನಶಿವಯೋಗಿ(ವಂಶಜ)

|

ಅನ್ನದಾನೀಶ(ಶಿಷ್ಯ)

|

ರೇವಣಸಿದ್ಧದೇಶಿಕ(ಶಿಷ್ಯ)


|

ಚಿಕ್ಕವೀರದೇಶಿಕ(ಶಿಷ್ಯ)

|

ಕವಿಷಡಕ್ಷರಿದೇವ ಇಮ್ಮಡಿಗುರುಸಿದ್ಧ.[೭]

ಇದು ಒಂದು ಮೂಲದ ಗುರುಪರಂಪರೆಯಾದರೆ, ಗುರಸಿದ್ಧರ ಗುರುಪರಂಪರೆಯನ್ನು ಇನ್ನೊಂದು ಮೂಲದಿಂದಲೂ ನೋಡುವ ಸಾಧ್ಯತೆ ಇದೆ. ನಿರಂಜನಪೀಠ ಪರಂಪರೆಯ ಶ್ರೀತೋಂಟದ ಸಿದ್ಧಲಿಂಗರಿಂದ ಬೆಳೆದು ಬಂದು ಕೆಲ ಕಾಲಾನಂತರದಲ್ಲಿ ವೈಯಕ್ತಿಕ ಕಾರಣಗಳಿಂದಾಗಿ ಚೀಲಾಳ ಸಮಯ, ಮುರುಗಾಸಮಯ, ಕುಮಾರಸಮಯಗಳೆಂಬ ಮೂರು ಶಾಖೆಗಳಾಗಿ ಪ್ರವಹಿಸುತ್ತದೆ



ಮುಂತಾದವರ ಸುದೀರ್ಘವಾದ ಮತ್ತು ಉಜ್ವಲವಾದ ಈ ಗುರುಶಿಷ್ಯ ಪರಂಪರೆಯಲ್ಲಿ ಬರುವ ಇಮ್ಮಡಿಗುರುಸಿದ್ಧರು ಧನುಗೂರುಮಠದ ವೀರಸಿಂಹಾಸನ ಪೀಠ ಪರಂಪರೆ ಹಾಗೂ ನಿರಂಜನ ಪೀಠಪರಂಪರೆ ಎರಡರಲ್ಲೂ ಸೇರಿಕೊಂಡಿರುವುದು ಅವರ ವ್ಯಕ್ತಿತ್ವ ಬೆಳವಣಿಗೆಯ ದ್ಯೋತಕವಾಗಿದೆ.

ಕಾಲ

ಇಮ್ಮಡಿ ಮುರಿಗಾಗುರುಸಿದ್ಧರ ಕಾಲವನ್ನು ಕವಿಚರಿತೆಕಾರರು ಕ್ರಿ.ಶ.ಸು೧೬೬೦[೧] ಎಂದು, ಜಿ. ಮರುಳಸಿದ್ಧಯ್ಯ ನವರು ಕ್ರಿ.ಶ. ೧೬೮೭ರಿಂದ ೧೮೩೪ರವರೆಗೆ,[೨] ಮ.ಮಲ್ಲಪ್ಪನವರು ಕ್ರಿ.ಶ.೧೬೮೭

ರಿಂದ ೧೮೦೭ ರವರೆಗೆ,[೧೦] ವಿದ್ಯಾಶಂಕರರು ಕ್ರಿ.ಶ.೧೬೮೮,[೧೧] ಬಿ.ಆರ್.ಹಿರೇಮಠರು ಕ್ರಿ.ಶ.೧೭೨೯[೧೨], ಎಸ್. ಶಿವಣ್ಣನವರು ೧೭ನೇ ಶತಮಾನದ ಉತ್ತರಾರ್ಧ ಹಾಗೂ ೧೮ನೇ ಶತಮಾನದ ಪೂರ್ವಾರ್ಧದಲ್ಲಿನ ಮೊದಲ ಮೂರು ದಶಕಗಳು ಎನ್ನುತ್ತಾರೆ.[೧೩] ಈ ಮೇಲಿನ ವಿದ್ವಾಂಸರು ತಮ್ಮ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ೧೭, ೧೮, ೧೯ ಈ ಮೂರು ಶತಮಾನಗಳವರೆಗೂ ಗುರುಸಿದ್ಧರ ಕಾಲವನ್ನು ಸೂಚಿಸುತ್ತಾರೆ. ೧೨೨ ವರ್ಷಗಳ ಸುದೀರ್ಘ ಕಾಲಾವಧಿಯನ್ನು ನೀಡುವ ಜಿ. ಮರುಳುಸಿದ್ಧಯ್ಯನವರು ಕೊಡುವ ಆಧಾರಗಳು ಹೀಗಿವೆ.

೧. ಪ್ರಾಚ್ಯವಸ್ತು ಸಂಶೋಧನಾಲಯದ S.A.೫೬೪ನೇ ನಂಬರಿನ 'ವೀರಮಾಹೇಶ್ವರಾಚಾರ ಸಂಗ್ರಹ' ಎಂಬ ಹಸ್ತಪ್ರತಿಯ ಅಂತ್ಯದಲ್ಲಿ "ಶ್ರೀ ಕಲಿಯುಗೇ ಪಶ್ಚಾದ್ಭೂತಾನಾಂ ೪೯೨೪ ವರ್ಷಣಾಮಂತ್ಯಸ್ಯ ಶೋಭನ(ಸ್ವಭಾನು) ಸಂವತ್ಸರಸ್ಯ ಮಾಘ ಕೃಷ್ಣ ಚತುರ್ದಶಿ ಭಾನುಜ(ಶನಿ) ವಾಸರೇಶ್ರೀ ನೀಲಕಂಠ ನಾಗನಾಥಾಚಾರ್ಯವರ್ಯ ವಿರಚಿತೋಯಂ ಶ್ರೀಮದ್ವೀರಮಾಹೇಶ್ವರಾಚಾರ ಸಂಗ್ರಹಃ॥ ಶ್ರೀಮಲ್ಲೀಲಾಖ್ಯ ಮುರಿಗಾಖ್ಯಶಿವಯೋಗಿನಾ ಲಿಖಿತ್ವಾಪರಿಸಮಾಪ್ತಃ॥" ಎಂದಿದೆ. ಇಲ್ಲಿ ಸೂಚಿಸಿರುವ ಶೋಭನ ಸಂವತ್ಸರವು ಸ್ವಭಾನು ಸಂವತ್ಸರವೆಂದು ಇಟ್ಟುಕೊಂಡಲ್ಲಿ ಕ್ರಿ.ಶ.೨೮-೨-೧೮೨೪ ಆಗುತ್ತದೆ.

೨. ಕರ್ಣಾಟಕ ಕವಿಚರಿತೆ (ಭಾಗ ೩ ಪರಿಶಿಷ್ಟ ೪ ಪುಟ ೪೫೯)ಯಲ್ಲಿ ಧಾರವಾಡ ಜಿಲ್ಲೆಯ ಹಾನಗಲ್ಲು ವಿರಕ್ತಮಠದಸ್ವಾಮಿಯಾದ ಕುಮಾರವಿಭು ಭಿಕ್ಷುಕಮಹೇಶವಿಲಾಸವನ್ನು "ಪೂರ್ವದಲ್ಲಿ ಲಿಂಗಣಾರ್ಯ (ಗುರುಲಿಂಗ ವಿಭು)ನು ವರ್ಣಕ ರೀತಿಯಲ್ಲಿ ಬರೆದಿದ್ದನ್ನು ತಾನು ಗುರುಸಿದ್ಧದೇಶಿಕನ ಅಪ್ಪಣೆಯ ಮೇರೆಗೆ ವಸ್ತುಕದಲ್ಲಿ ಶಕ ೧೭೪೪ನೆಯ ಚಿತ್ರಭಾನುವಿ(ಕ್ರಿ.ಶ.೧೮೨೧)ನಲ್ಲಿ ಬರೆದಂತೆ ಹೇಳುತ್ತಾನೆ." ಸೋದೆಯ ಸದಾಶಿವನ ವರ್ಣಕ ಹಾಲಾಸ್ಯ ಮಹಾತ್ಮ್ಯವನ್ನು ವಸ್ತು ರೂಪವಾಗಿ ರಚಿಸಿದ ಇಮ್ಮಡಿ ಮರಿಗಾಗುರುಸಿದ್ಧದೇಶಿಕನೇ ಕುಮಾರವಿಭುವಿಗೆ ಅಪ್ಪಣೆ ಕೊಟ್ಟವನು ಎಂಬುದು ಸ್ಪುಟವಾಗುತ್ತದೆ. ಕಾರಣ ಗುರುಸಿದ್ದದೇಶಿಕನು ಕ್ರಿ.ಶ. ೧೮೨೧ರ ಕುಮಾರವಿಭುವಿನ ಸಮಕಾಲೀನನೆನಿಸುವನು.

೩. ನುಲಿಯಚಂದಯ್ಯನ ಕಥೆಯನ್ನು ಬರೆದ ಚೆನ್ನವೃಷಭನ ಕಾಲ ಕ್ರಿ.ಶ.೧೭೦೦. ಈತನು 'ಕರಪುರೀಶನ' ಕರುಣದಿಂದ ತನ್ನ ಗ್ರಂಥವನ್ನು ಬರೆದಂತೆ ಹೇಳುತ್ತಾನೆ. ಇಲ್ಲಿ ಉಕ್ತವಾಗಿರುವ 'ಕರಪುರೀಶ'ನು ಮುರಿಗಾಶಾಂತವೀರೇಶನಾಗಿರಬೇಕು. ಇಮ್ಮಡಿ ಮುರಿಗಾಗುರುಸಿದ್ಧದೇಶಿಕೇಂದ್ರ ತನ್ನ ವಸ್ತುಕ ಹಾಲಾಸ್ಯಪುರಾಣದ ರಚನೆಗೆ ಪ್ರೋತ್ಸಾಹಕರೆಂದು ತಿಳಿಸಿರುವ 'ಮುಚ್ಚನ್ನ ಬಸವೇಶ್ವರನೇ' ಈ ಹಾಡುಗಳ ಕರ್ತೃವಾಗಿರಬೇಕು. ಹೀಗಾಗಿ ಇವರೀರ್ವರೂ ಮುರಿಗಾಶಾಂತ ವೀರರ ಶಿಷ್ಯರಾದ ಕಾರಣ ಇವರಿಬ್ಬರು ಸಮಕಾಲೀನರು. ಕ್ರಿ.ಶ.೧೭೧೨ಕ್ಕೆ ಕಾವ್ಯ ನಿರ್ಮಾತೃವೆನಿಸಿರಲು

ಆಗ್ಗೆ ಸುಮಾರು ೨೫ ವರ್ಷ ವಯಸ್ಕನಾದರೂ ಆಗಿರಬೇಕು. ಅಂದರೆ ಕ್ರಿ.ಶ.೧೬೮೭ ರಿಂದ ೧೮೨೪ರ ವರೆಗೂ ದೀರ್ಘಾಯುವಾಗಿ ಅಂದರೆ ೧೩೭ ವರ್ಷಗಳು ಬಾಳಿದಂತೆ ಖಚಿತವಾಗಿ ತಿಳಿದುಬರುತ್ತದೆ. ಮುಂದೆ ಮತ್ತೆಷ್ಟು ವರ್ಷಗಳು ಬಾಳಿದರೋ ತಿಳಿಯದು. ಅಂತೂ ಇವರ ಜೀವಿತ ಕಾಲ ಕ್ರಿ.ಶ. ೧೬೮೭-೧೮೨೪ ಎಂದು ನಿರ್ಧರಿಸಬಹುದು."[೫] ಎಂದಿದ್ದಾರೆ.

ಆದರೆ ಈ ಕಾಲ ನಿರ್ಣಯವು ಅತ್ಯಂತ ಸುದೀರ್ಘವಾಗಿದ್ದು, ಇಮ್ಮಡಿ ಮುರಿಗಾಗುರುಸಿದ್ಧರು ಕ್ರಿ.ಶ.೧೮೨೪ರವರೆಗೆ ಬದುಕಿರಲಾರರು ಎಂಬುದನ್ನು ಈ ಕೆಳಗಿನ ಅಂಶಗಳಿಂದ ಕಂಡುಕೊಳ್ಳಬಹುದು. ಸ್ವತಃ ಕವಿಯ ಕೃತಿಗಳಾದ ಪಂಚಾಶಿಕೆ, ಬಿಜ್ಜಮಹಾದೇವಿಚಾರಿತ್ರ, ಹಾಲಾಸ್ಯಪುರಾಣಗಳು ಈತನ ಕಾಲವನ್ನು ನಿರ್ಧರಿಸಲು ತುಂಬಾ ಸಹಾಯಕವಾಗುತ್ತವೆ.

೧. ಪಂಚಾಶಿಕೆಯನ್ನು ಪೂರ್ಣಗೊಳಿಸಿದ ವಿವರ ಹೀಗಿದೆ

ಸರ್ವಧಾರಿಯಮಾದಸದ
ಖರ್ವವೈಶಾಖದಸಿತೋಧ್ಭದ
ಪೂರ್ವಪಕ್ಷೈಕಾದಶಿಯ ಶನಿವಾರದುದಯದೊಳು|
ಪರ್ವಪೂರ್ವಕವಾಗಿ ಮುಗಿಯಿ
ತ್ತುರ್ವಿವಿಭುಧರು ಮೆಚ್ಚುವಂದದೆ
ಶರ್ವಶಿವಲಿಂಗೇಶನಾಜ್ಞೆಯೊಳಿದುವೆಶುಭಮಸ್ತು||

(ಪಂ,ಸಂಧಿ.೧೩, ಪದ್ಯ.೪೯)

ಈ ಮೇಲಿನ ಪದ್ಯಗಳಲ್ಲಿ ಬರುವ ವಾರ, ತಿಥಿ, ಮಾಸ, ವರ್ಷಗಳು ಕ್ರಿ.ಶ. ೧೭೦೮ ನೆಯ ಏಪ್ರಿಲ್ ಎಂಟನೇ ತಾರೀಖಿಗೆ ಹೊಂದಿಕೆಯಾಗುತ್ತದೆ.

೨. 'ಬಿಜ್ಜಮಹಾದೇವಿ' ಚಾರಿತ್ರ್ಯದಲ್ಲಿ

ಶಾಲಿವಾಹನ ಸಖದಸಾಹಸ್ರದರುನೂರ
ಮೇಲೆಮೂವತ್ತನಾಲ್ಕನೆವರುಷವೆನಿಪ ||೧||

ಬಗಿತೆಯಿಂಕರನಾಮ ಸಂವತ್ಸರದೊಳು ಶ್ರಾ
ವಣಮಾಸ ಶುಕ್ಲಪಕ್ಷದೊಳು ಸಪ್ತಮಿಯ ||೨||

ಬುಧವಾರ ಸಮಪ್ರದೋಷ ಕಾಲದಿಭದ್ರ
ವಿಧಿಯಿಂದನೂರಾಧೆಯೆಂಬ ನಕ್ಷತ್ರದೊಳು ||೩||

ಪರಮ ಶಿವಲಿಂಗರಥೆ ಬಿಜ್ಜಾಂಬಚರಿತೆ
ಪರಿಪೂರ್ಣವಾಯಿತತಿಶಯ ಭಕ್ತಿರಸದಿಂದೆ ||೪||

ಯಿದನುಪೇಳಿದ ಗುರುಸಿದ್ಧೇಶಸ್ವಾಮಿಗಳು
ಯಿದಬಸವಲಿಂಗ ಬರೆದನು ಕೇಳಿಶುಭಮಸ್ತು ||೫||

ಶಾಲಿವಾಹನ ಶಕ ೧೬೩೪ರ ಕಾಲವು ಅಂದರೆ ಈ ಗ್ರಂಥ ಮುಕ್ತಾಯ ಕಾಲ ಕ್ರಿ.ಶ.೧೭೧೨ ಎಂದು ನಿರ್ಧರಿಸಬಹುದು.

೩. ಹಾಲಾಸ್ಯಪುರಾಣದ ಗ್ರಂಥ ಸಮಾಪ್ತಿಯಲ್ಲಿ ಶಾಲಿವಾಹನ ಶಕ ೧೬೪೨ನೆಯ ಶಾರ್ವರಿ ಸಂವತ್ಸರದ ಜೇಷ್ಠಮಾಸ ಶುದ್ಧ ತದಿಗೆ ಆದಿತ್ಯವಾರ ಸಿಂಹಲಗ್ನ ಪುಷ್ಯ ನಕ್ಷತ್ರ ಧ್ರುವಯೋಗ ಗರಜಾಕರಣ ಉದಯದ ಹದಿನಾಲ್ಕು ಗಳಿಗೆಗೆ ಪರಿಪೂರ್ಣಮಾಯ್ತು ಎಂದಿದ್ದಾರೆ. ಹೀಗಾಗಿ ಹಾಲಾಸ್ಯ ಪುರಾಣವು ಅಂತ್ಯಗೊಂಡದ್ದು ೩೧-೫-೧೭೨೦ ಎಂದು ನಿರ್ಧರಿಸಬಹುದು.

೪. ಸೋಮಶೇಖರಶಿವಯೋಗಿಯ 'ಷಟ್‌ಸ್ಥಲಜ್ಞಾನಸಾರಾಮೃತ' ಮತ್ತು ಮಹಾಲಿಂಗಕವಿಯ 'ಮಹಾಲಿಂಗೇಂದ್ರವಿಜಯ' ಇವುಗಳು ಒಂಭತ್ತನೇ ಪೀಠಾಧ್ಯಕ್ಷರಾಗಿದ್ದ ಇಮ್ಮಡಿ ಮುರಿಗಾ ಗುರುಸಿದ್ಧರು ಸೋದೆಯ ಆನಂದಪುರದಲ್ಲಿ ಐಕ್ಯ ಹೊಂದುವಾಗ ಸ್ವಾದಿಯ ಚನ್ನಬಸವಸ್ವಾಮಿಗಳಿಗೆ ಪಟ್ಟಕಟ್ಟಿದರು ಎಂಬುದನ್ನು ತಿಳಿಸುತ್ತವೆ. ಇವರ ಅವಧಿ ಕ್ರಿ.ಶ.೧೭೨೫-೧೭೩೦ ಆಗಿರುತ್ತದೆ. ನಂತರ ಶಿರಹಟ್ಟಿ ಸಿದ್ಧಲಿಂಗದೇಶಿಕರು ಕ್ರಿ.ಶ.೧೭೩೦-೧೭೫೦ರವರೆಗೆ, ಗುರುಪಾದದೇಶಿಕರು ಕ್ರಿ.ಶ.೧೭೫೦-೧೭೬೦ರವರೆಗೆ ಹೀಗೆ ಶೂನ್ಯ ಪೀಠದ ಅಧ್ಯಕ್ಷರುಗಳಾಗುತ್ತಾರೆ ಎಂಬಲ್ಲಿ ಗುರುಸಿದ್ಧರ ಅಂತ್ಯ ಸರಿ ಸುಮಾರು ಕ್ರಿ.ಶ.೧೭೨೫ರ ಆಸುಪಾಸಿನಲ್ಲಿ ಆಗಿರಬೇಕೆಂಬುದು ದೃಢಪಡುತ್ತದೆ.

೫. ಶಿವಮೊಗ್ಗ ಜಿಲ್ಲೆಯ ಆನಂದಪುರದಲ್ಲಿರುವ ಇಮ್ಮಡಿ ಮುರಿಗಾಗುರುಸಿದ್ಧರ ಸಮಾಧಿ ನಿರ್ವಹಣೆಗೆ ಕೆಳದಿಯ ಎರಡನೆಯ ಬಸವಪ್ಪನಾಯಕನು ಆಂಗೀರಸ ಸಂವತ್ಸರದಲ್ಲಿ (ಕ್ರಿ.ಶ.೧೭೫೨) ದತ್ತಿ ಬಿಟ್ಟಿದ್ದಾನೆ.[೧೫] ಅಲ್ಲದೆ ಈತ ಆನಂದಪುರದ ಮುರಿಗೆದೇವರಿಗೆ ವರ್ಷವರ್ಷವೂ ರಥೋತ್ಸವವಾಗು ವಂತೆ ವ್ಯವಸ್ಥೆ ಮಾಡಿದುದ್ದನ್ನು ಲಿಂಗಣ್ಣ ಕವಿಯು(ಕ್ರಿ.ಶ.೧೭೬೦) 'ಕೆಳದಿನೃಪವಿಜಯ'ದಲ್ಲಿ ದಾಖಲಿಸಿದ್ದಾನೆ.[೧೬]

೬. ಆನಂದಪುರ ಮಠದಲ್ಲಿರುವ ತಾಮ್ರಶಾಸನವೊಂದು ಕೆಳದಿ ಅರಸು ಮೂರನೇ ಸೋಮಶೇಖರ (ಕ್ರಿ.ಶ.೧೭೧೪-೩೯)ನ ಕಾಲದಲ್ಲಿ ಇಮ್ಮಡಿ ಮುರಿಗಾಗುರುಸಿದ್ದರು ಕೆಳದಿ ಸಂಸ್ಥಾನಕ್ಕೆ ಭೇಟಿ ನೀಡಿದ್ದ ಸಂಗತಿಯನ್ನು ತಿಳಿಸುತ್ತದೆ.

೭. ಶಾಲಿವಾಹನ ಶಕೆ ೧೬೪೧ಯ ವಿಕಾರಿ ಸಂವತ್ಸರದ ಪುಷ್ಯಮಾಸದಲ್ಲಿ ಗುರುಸಿದ್ಧಸ್ವಾಮಿಗಳು ಮತ್ತು ಕೆಂಪಿನಸಿದ್ಧಬಸವಸ್ವಾಮಿಗಳು ಹಳೇಬೀಡಿನ ಹೊಲೆ ಬಳಕೆ ಮತ್ತು ಪಂಚದ್ರೋಹದ ವಿವಾದಕ್ಕೆ ಸಂಬಂಧ ಪಟ್ಟ ನ್ಯಾಯ ತೀರ್ಮಾನಿಸಲು ಸೇರುತ್ತಾರೆ.[೧೭] ಈ ಕಾಲವು ಕ್ರಿ.ಶ.೧೭೧೯ನೇ ವರ್ಷಕ್ಕೆ ಸರಿ ಹೊಂದುತ್ತದೆ.

೮. ಎಂ.ಎಸ್.ಬಸವರಾಜಯ್ಯನವರು ಕವಿ 'ಕರ್ಣರಸಾಯನ'ದಲ್ಲಿ ಇವರ ಕಾಲವನ್ನು ಕ್ರಿ.ಶ. ೨೩-೨-೧೭೨೩ ಎಂದು ಗುರುತಿಸಿದ್ದಾರೆ.[೧೮]

೯. ಹುಲ್ಲೂರು ಶ್ರೀನಿವಾಸ ಜೋಯಿಸರು ತಮ್ಮ 'ಕಪೋತವಾಕ್ಯ'ದಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರು ಕ್ರಿ.ಶ.೧೭೨೯ರಲ್ಲಿ ಲಿಂಗೈಕ್ಯರಾದ ಸಂಗತಿಯನ್ನು ಸೂಚಿಸಿದ್ದಾರೆ.[೧೯]

೧೦. ಓಲೆಯ ಕಟ್ಟಿನ ಕೊನೆಯ ಪತ್ರವೊಂದರಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೪೫ ಸಂದ .... ಮುರಿಗೆ ಸಿಂಹಾಸನಾಧೀಶ್ವರ ಗುರುಸಿದ್ಧದೇಶಿಕ ಸಂಪ್ರದಾಯ .... ಪ್ರಥಮಪೂಜ್ಯಾಂಕರಿಷ್ಯೇ ಸಮಾಪ್ತ ಮಂಗಳ ಶ್ರೀಶ್ರೀ"[೨೦] ಎಂದಿದ್ದು. ಕ್ರಿ.ಶ.೧೭೨೩ರ ಸರಿಸುಮಾರಿನಲ್ಲಿ ನಡೆದ ಘಟನೆಯೊಂದನ್ನು ಉಲ್ಲೇಖಿಸುತ್ತದೆ.

ಈ ಮೇಲಿನ ಎಲ್ಲಾ ಘಟನೆಗಳು ಇಮ್ಮಡಿ ಮುರಿಗಾಗುರುಸಿದ್ಧರ ಜೀವಿತದ ಅವಧಿಯಲ್ಲಿ ನಡೆದಿವೆ. ಸುಮಾರು ೨೫ಕ್ಕೂ ಹೆಚ್ಚು ವಿದ್ವತ್‌ಪೂರ್ಣ ಕೃತಿಗಳನ್ನು ರಚಿಸಿರುವ ಇವರು ಪಂಚಾಶಿಕೆಯನ್ನು ಕ್ರಿ.ಶ.೧೭೦೨ರಲ್ಲಿ, ಬಿಜ್ಜಮಹಾದೇವಿಚಾರಿತ್ರವನ್ನು ಕ್ರಿ.ಶ.೧೭೧೨ರಲ್ಲಿ, ಹಾಲಾಸ್ಯಪುರಾಣವನ್ನು ಕ್ರಿ.ಶ.೧೭೨೦ರಲ್ಲಿ ಬರೆದಿರುವಂತೆ ಹೇಳಿಕೊಂಡಿದ್ದಾರೆ. ಅಂದರೆ ಈತನು ಕ್ರಿ.ಶ.೧೭೦೦ಕ್ಕೂ ಪೂರ್ವದಲ್ಲಿ ಕೃತಿ ರಚನೆಗೆ ತೊಡಗಿರಬೇಕು. ಹೀಗಾಗಿ ಕವಿಯ ಕೊನೆಗಾಲವನ್ನು ಜಿ. ಮರುಳುಸಿದ್ಧಯ್ಯನವರು ಸೂಚಿಸಿರುವಂತೆ ಕ್ರಿ.ಶ.೧೮೨೪ರ ವರೆಗೆ ಎಂಬುದನ್ನು ಒಪ್ಪಿಕೊಳ್ಳುವುದು ಕಷ್ಟ, ಏಕೆಂದರೆ ಇಷ್ಟು ಸುದೀರ್ಘವಾದ ಅವಧಿಯವರೆಗೆ ಅವರು ಬದುಕಿದ್ದರೆ ಇನ್ನು ಅನೇಕ ಸಾಧನೆಗಳ ಬಗ್ಗೆ ಆಧಾರಗಳು ದೊರಕಬೇಕಿತ್ತು. ಆದರೆ ಮೇಲೆ ಒದಗಿಸಿರುವ ಎಲ್ಲಾ ಆಧಾರಗಳು ಕ್ರಿ.ಶ.೧೭೨೩ರ ಒಳಗೆ ಇರುವುದರಿಂದ ಕವಿಯ ಕೊನೆಗಾಲವನ್ನು ಕ್ರಿ.ಶ.೧೭೨೫ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಚಿತ್ರದುರ್ಗ ಶೂನ್ಯಪೀಠದ ಪಟ್ಟವಲ್ಲರಿಯಲ್ಲಿ ಬರುವ ಪದ್ಯದ ಆಧಾರದಿಂದ ಅವರ ಜನನ ಕಾಲದ ಮೇಲೂ ಅಲ್ಪಮಟ್ಟಿನ ಬೆಳಕನ್ನು ಚೆಲ್ಲಬಹುದಾಗಿದೆ.

ಮರಳಿ ಬಂದರನಂತಪುರಕೆನೆ
ಭರದೊಳಿಮ್ಮಡಿ ಮುರುಘರಾಜರು
ಹರುಷದಿಂತಾವಂದು ತಮ್ಮಯಮಠದನೆಲೆಸಿರಲು।
ವರುಷವೆಂಬತ್ತೊಂದು ತುಂಬಲು
ತೊರೆದು ಭೌತಶರೀರವನು ತಾ
ವಿರದೆತಮ್ಮಾತ್ಮವನು ಶಿವನೊಳಗೈಕ್ಯಗೊಳಿಸಿದರು॥[೨೧]

ದೇಶಪರ್ಯಟನೆಗಾಗಿ ಹೊರಟಿದ್ದ ಇಮ್ಮಡಿಮುರುಗಾಗುರುಸಿದ್ಧರು ಮರಳಿ ಆನಂದಪುರಕ್ಕೆ ಬಂದು ಸಂತೋಷದಿಂದ ಇರುವಾಗಲೇ, ತಮ್ಮ ಎಂಭತ್ತೊಂದನೆಯ ವರ್ಷಕ್ಕೆ ಭೌತಿಕ ಶರೀರವನ್ನು

ತೊರೆದು ಶಿವನಲ್ಲಿ ಲೀನವಾದರು ಎಂಬುದನ್ನು ತಿಳಿಸುತ್ತದೆ. ಇದರಿಂದ ಕ್ರಿ.ಶ.೧೭೨೫ರ ಸುಮಾರಿಗೆ ಲಿಂಗೈಕ್ಯರಾದ ಇವರ ಜನನ ಕ್ರಿ.ಶ.ಸು ೧೬೪೪ರ ಆಸುಪಾಸಿನಲ್ಲಿ ಆಗಿರಬಹುದು. ಕವಿಯು ತನ್ನನ್ನು ಉದ್ಧಾನಶಿವಯೋಗಿಯ ವಂಶಸ್ಥನೆಂದು ಹೇಳಿಕೊಂಡಿರುವುದರಿಂದ ಈತನ ಹುಟ್ಟೂರು ಕೂಡ ಧನುಗೂರು ಆಗಿರಬೇಕೆಂಬುದು ಖಚಿತವಾಗುತ್ತದೆ. ಆದರೆ ಬಾಲ್ಯ, ಶಿಕ್ಷಣ, ಯೌವ್ವನ ಇತ್ಯಾದಿ ವಿವರಗಳು ಎಲ್ಲಿಯೂ ಲಭ್ಯವಾಗುವುದಿಲ್ಲ.

ಅಂಕಿತ

ವೀರಶೈವ ಮತ್ತು ವೈಷ್ಣವ ಕವಿಗಳಲ್ಲಿ ಕೆಲವರು ಅಂಕಿತಗಳ ಹೆಗ್ಗುರುತಿನಿಂದ ಪ್ರಸಿದ್ಧರಾಗಿದ್ದಾರೆ. ವಚನಕಾರರು ಅಂಕಿತ ಬಳಸದೆ ಯಾವ ವಚನವನ್ನು ಹೇಳಿಲ್ಲ. ಅದೇ ರೀತಿ ಹರಿದಾಸ ಪಂಥದವರು ಸಹ ಅಂಕಿತದ ರೂಢಿಯನ್ನು ಅನುಸರಿಸಿದ್ದಾರೆ. ಬಸವಣ್ಣ 'ಕೂಡಲಸಂಗಮದೇವ', ಅಲ್ಲಮಪ್ರಭು 'ಗುಹೇಶ್ವರ', ಅಕ್ಕಮಹಾದೇವಿ 'ಚನ್ನಮಲ್ಲಿಕಾರ್ಜುನ', ಪುರಂದರದಾಸ 'ಪುರಂದರವಿಠಲ', ಕನಕದಾಸರು 'ಕಾಗಿನೆಲೆಯಾದಿಕೇಶವ', ಹರಿಹರ 'ಪಂಪಾಪುರಾಧೀಶ್ವರ', ಕುಮಾರವ್ಯಾಸ 'ಗದುಗಿನ ವೀರನಾರಾಯಣ', ಸರ್ವಜ್ಞಮೂರ್ತಿ 'ಸರ್ವಜ್ಞ' ಹೀಗೆ ಕನ್ನಡದ ಬಹುಪಾಲು ಕವಿಗಳು ತಮ್ಮ ಇಷ್ಟದೈವದ ಹೆಸರನ್ನು ಅಂಕಿತವಾಗಿ ಬಳಸಿಕೊಂಡಿದ್ದಾರೆ. ಇಮ್ಮಡಿ ಮುರಿಗಾಗುರುಸಿದ್ಧರು ಸಹ 'ಶೂನ್ಯಮಂತ್ರಗೋಪ್ಯ', 'ಶಿವಲಿಂಗಷಟ್ಪದಿ', 'ಮಿಶ್ರಾರ್ಪಣ' ಸ್ವರವಚನಗಳಲ್ಲಿ 'ಶಿವಲಿಂಗ' ಎಂಬ ಅಂಕಿತವನ್ನು ಬಳಸಿದ್ದಾರೆ. ಈ ಅಂಕಿತವನ್ನು ಪ್ರಸಿದ್ಧ ಕವಿ ಷಡಕ್ಷರದೇವನು ಸಹ ಬಳಸಿರುವುದನ್ನು ನೋಡಿದರೆ ಒಂದೇ ವಂಶಕ್ಕೆ ಸೇರಿದ ಇವರ ಅಧಿದೈವವು ಧನುಗೂರಿನ ಮಠದ ಬಳಿ ಇರುವ ದೇವಸ್ಥಾನದ 'ಶಿವಲಿಂಗೇಶ್ವರ' ಎಂಬುದು ಸ್ಪಷ್ಟವಾಗುತ್ತದೆ. ಈ ಅಂಕಿತಗಳನಿಟ್ಟುಕೊಂಡು ಇಮ್ಮಡಿ ಮುರಿಗಾಗುರುಸಿದ್ಧರು ಸಾಹಿತ್ಯ ಸೃಷ್ಟಿಗೆ ತೊಡಗಿರಬೇಕು.

ಚಿತ್ರದುರ್ಗ ಮಠದ ಸಂಬಂಧ

ಇಮ್ಮಡಿಗುರುಸಿದ್ಧರು ಮತ್ತು ಷಡಕ್ಷರಿದೇವ ಇಬ್ಬರೂ ಒಂದೇ ಊರಿನವರು. ಒಂದೇ ಪರಂಪರೆಯ ಗುರುವಿನ ಆಶ್ರಯದಲ್ಲಿ ಬೆಳೆದ ಸಹೋದರ ಸಂಬಂಧಿಗಳು. ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಯಲ್ಲಿ ಪಾಂಡಿತ್ಯ ಪೂರ್ಣವಾದ ಕೃತಿಗಳನ್ನು ರಚಿಸಿದವರು. ಷಡಕ್ಷರಿದೇವನು ಮೊದಲು ಧನುಗೂರಿನ ಮಠಾಧಿಪತಿಯಾದರೆ, ಗುರುಸಿದ್ಧರು ಹುಲ್ಲಹಳ್ಳಿಯ ಮಠಾಧ್ಯಕ್ಷರಾಗುತ್ತಾರೆ. ತದನಂತರ ಷಡಕ್ಷರದೇವರು ಧನುಗೂರು ಬಿಟ್ಟು ಎಳಂದೂರಿನ ಗುರುಪೀಠದ ಅಧಿಪತಿಯಾದರೆ, ಗುರುಸಿದ್ಧರು ಚಿತ್ರದುರ್ಗದ ವಿರಕ್ತಪೀಠದ ಅಧಿಪತಿಗಳಾಗುತ್ತಾರೆ. ಹೀಗೆ ಹುಲ್ಲಹಳ್ಳಿಯ

ಮಠಾಧೀಶರಾಗಿದ್ದ ಗುರುಸಿದ್ಧರಿಗೂ, ಚಿತ್ರದುರ್ಗದ ಮುರಿಗಾಶಾಂತವೀರರಿಗೂ ಸಂಬಂಧ ಹೇಗೆ ಬೆಸೆದುಕೊಂಡಿತು ಎಂಬುದು ನಿಗೂಢವಾದ ವಿಚಾರವಾಗಿದೆ. ಜಿ.ಎ.ಶಿವಲಿಂಗಯ್ಯನವರು 'ಮುರಿಗಾ ತಾರಾವಳಿ'ಯಲ್ಲಿ ನಿರೂಪಿತವಾಗಿರುವ ಶಾಂತವೀರರ ಪ್ರಸಂಗವೊಂದನ್ನು ಪೂರಕವಾಗಿ ತೆಗೆದುಕೊಂಡು ಈ ನಿಗೂಢತೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ.

ಚಿತ್ರದುರ್ಗದ ಶೂನ್ಯಪೀಠದ ಮುರಿಗಾಶಾಂತವೀರರು ಮೈಸೂರು ಅರಸರ ಆಸ್ಥಾನಕ್ಕೆ ಆಗಮಿಸಬೇಕಾದ ಪ್ರಸಂಗ ಬಂದಿತು. ಏಕೆಂದರೆ ಜಂಗಮನೊಬ್ಬನ ಇಷ್ಟಲಿಂಗದ ಗೋಳಕವು ನಾಳದಿಂದ ಸಡಿಲುಗೊಂಡು ಮೇಲೆದ್ದು ಬಂದಿರಲು ಆಗ ಅತ್ಯಂತ ದುಷ್ಟರೂ, ವಂಚಕರೂ ಆದ ಕೆಲವರು ಸೇರಿ 'ಹೀಗಾದುದು ಒಳ್ಳೆಯದಲ್ಲ, ಇಷ್ಟಲಿಂಗದ ಗೋಳಕವು ಬೇರ್ಪಟ್ಟಾಗ ಇಷ್ಟಲಿಂಗಧಾರಿಯು ಪ್ರಾಣತ್ಯಜಿಸುವುದು ಧರ್ಮಸಮ್ಮತ' ಎಂದು ಮೈಸೂರು ಅರಸರ(ಚಿಕ್ಕದೇವರಾಯ) ಸಭೆಯವರೆಗೂ ದೂರನ್ನು ಒಯ್ದು ಅಲ್ಲಿದ್ದ ಬೇರೆ ಬೇರೆ ಮತಸ್ಥರ ಗುಂಪಿನ ನಡುವೆ ವಾದಿಸುತ್ತಾರೆ. ಅದೇ ಸಮಯಕ್ಕೆ ಅಲ್ಲಿಗೆ ಆಗಮಿಸಿದ ಮುರಿಗಾಶಾಂತವೀರರು '..... ಅಖಂಡ ತೇಜೋಮೂರ್ತಿಯಾದ ಇಷ್ಟಲಿಂಗದ ಬುಡ, ನಡು, ಬಟುವು,ಗೋಮುಖ, ಅಂಗ, ತಲೆ, ಎಂಬ ಆರು ಸ್ಥಾನಗಳಲ್ಲಿ ಎಳ್ಳುಕಾಳಿನಷ್ಟು ಒಡಕುಂಟಾದರೂ ವೀರಮಾಹೇಶ್ವರರು ಪ್ರಾಣ ಬಿಡುವುದು ಸೂಕ್ತ. ಆದರೆ ಇಷ್ಟಲಿಂಗದ ಗೋಳಕವು ಸಡಿಲಗೊಂಡರೆ ಅದನ್ನು ಸರ್ಜರಸದಿಂದ ಬಿಗಿಪಡಿಸಬಹುದು. ಇದು ಈ ಭೂಮಿಯ ಲಿಂಗವಂತರಿಗೆಲ್ಲಾ ಸಮ್ಮತವಾದ ಅಭಿಪ್ರಾಯ. ಅದು ಬಿಟ್ಟು ಜಂಗಮರು ಪ್ರತಿಜ್ಞೆ, ಪಂತತೊಟ್ಟು, ಗುಂಪಿನ ದನಗಳಂತೆ ವೇದಸಮ್ಮತವಾದ ನಡಾವಳಿಗಳನ್ನು ಮೀರಿ ನಡೆಯುವುದು ಸಲ್ಲದು' ಎಂದು ಬೋಧಿಸುತ್ತಾರೆ. ಕೆಲವರು ಈ ಮಾತುಗಳಿಗೆ ಕಿವಿಗೊಡದೆ 'ನಿನ್ನಕಣ್ಣು ಇಂಗಿ ಹೋಗಲಿ' 'ನಿನ್ನ ನಾಲಿಗೆ ಸೇದಿ ಹೋಗಲಿ' ಎಂಬ ಮಾತುಗಳನ್ನಾಡುತ್ತಾರೆ. ಇದಾವುದಕ್ಕೂ ಸೊಪ್ಪು ಹಾಕದೆ ಸ್ಥಿರವಾಗಿ ನಿಂತು ಶಾಂತವೀರರು ವಿದ್ವಜ್ಜನರ ಮೆಚ್ಚುಗೆಗೆ ಪಾತ್ರರಾಗುತ್ತಾರೆ.[೨೨]

ಈ ಮೇಲಿನ ಪ್ರಸಂಗದಲ್ಲಿ ಬರುವ ಮೈಸೂರು ಅರಸರು ಚಿಕ್ಕದೇವರಾಜ ಒಡೆಯರು. ಇವರು ಸ್ವತಃ ಕವಿಗಳೂ, ಜ್ಞಾನಿಗಳೂ, ರಾಜಕಾರಣದಲ್ಲಿ ಪರಿಣತರೂ, ವಿದ್ವತ್ ಪಕ್ಷಪಾತಿಗಳು, ಗುರುಭಕ್ತರೂ ಆಗಿದ್ದರೆಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಮುರಿಗಾಶಾಂತವೀರ ಸ್ವಾಮಿಗಳ ವಿದ್ವತ್ತು, ತರ್ಕಸಮ್ಮತ ವಾದ ವೈಖರಿ, ವಾಕ್ ಚಾತುರ್ಯ ಇವುಗಳನ್ನು ಕಣ್ಣಾರೆ ಕಂಡ ಚಿಕ್ಕದೇವರಾಜನು ಶಾಂತವೀರರನ್ನು ಗೌರವಾದರಗಳಿಂದ ಸತ್ಕರಿಸುತ್ತಾನೆ. ಇದರಿಂದ ಮುರಿಗಾಶಾಂತವೀರರ ಮತ್ತು ಚಿಕ್ಕದೇವರಾಜನ ಗುರುಶಿಷ್ಯ ಸಂಬಂಧವು ಗಟ್ಟಿಗೊಂಡು ಆಗಾಗ ತನ್ನ ಅರಮನೆಗೆ ಶಿವಪೂಜಾ ನಿಮಿತ್ತ ಗುರುಗಳನ್ನು ಕರೆಸುತ್ತಿದ್ದಿರಬೇಕು.

ಎಳಂದೂರಿನ ಮಠಕ್ಕೆ ಹಿರಿಯರೂ, ಬಂಧುಗಳೂ ಆಗಿದ್ದ ಷಡಕ್ಷರದೇವನನ್ನು ನೋಡಲು ಗುರುಸಿದ್ಧರು ಆಗಾಗ ಬರುತ್ತಿರಬಹುದು. ಚಿಕ್ಕದೇವರಾಜ ಒಡೆಯರು ತನ್ನ ತಾಯಿಯ ಕುಲಗುರುವಾದ ಷಡಕ್ಷರದೇವರನ್ನು ತನ್ನ ಅರಮನೆಗೆ ಪಾದ ಪೂಜಾನಿಮಿತ್ತ ಬರಮಾಡಿಕೊಳ್ಳುತ್ತಿದ್ದನು. ಇಂತಹ ಯಾವುದೋ ಒಂದು ಸಂದರ್ಭದಲ್ಲಿ ಮುರಿಗೆ ಶಾಂತವೀರರೂ, ಷಡಕ್ಷರದೇವರು ಜೊತೆಗೂಡಿರಬೇಕು. ಇದರಿಂದ ಉಭಯ ಕುಶಲೋಪರಿಯ ವಿಚಾರದ ಜೊತೆಗೆ ಆಧ್ಯಾತ್ಮಿಕ ವಿಷಯಗಳ ವಿಚಾರ ವಿನಿಮಯಗೈದಿರಬೇಕು. ಬಹುದಿನಗಳವರೆಗೆ ನಡೆದುಕೊಂಡು ಬಂದ ಈ ಸಂಬಂಧದಲ್ಲಿ ಷಡಕ್ಷರದೇವರ ಜೊತೆಯಲ್ಲಿರುತ್ತಿದ್ದ ಗುರುಸಿದ್ಧರನ್ನು ಕಂಡು, ಆತನ ಆಧ್ಯಾತ್ಮಿಕ ತೇಜಸ್ಸಿಗೆ ಮಾರುಹೋಗಿ ಮುರಿಗಾಶಾಂತವೀರರು ಬೃಹನ್ಮಠಕ್ಕೆ ಮರಿಸ್ವಾಮಿಗಳನ್ನಾಗಿ ಮಾಡಿಕೊಳ್ಳಲು ಇಚ್ಛಿಸಿ ಆಹ್ವಾನಿಸಿರಬೇಕು. ಗುರುಸಿದ್ಧರು ಅವರ ಆಹ್ವಾನ ಸ್ವೀಕರಿಸಿ ಚಿನ್ಮೂಲಾದ್ರಿಯ ಬೃಹನ್ಮಠಕ್ಕೆ ಬಂದು ಸೇರಿಕೊಂಡಿರಬೇಕು. ನಂತರ ಶಾಂತವೀರರು ಇವರನ್ನು 'ಪೀಠಾಧಿಕಾರಿಗಳನ್ನಾಗಿ' ನೇಮಿಸಿಕೊಂಡು 'ಇಮ್ಮಡಿ ಮುರಿಗಾ ಗುರುಸಿದ್ಧ'ರೆಂದು ಕರೆದಿರಬೇಕು[೨೩] ಎಂಬ ಜಿ.ಎ. ಶಿವಲಿಂಗಯ್ಯನವರ ಈ ಅಭಿಪ್ರಾಯವು ನಡೆದಿರ ಬಹುದಾದ ಘಟನೆಗಳ ಸಂಭವನೀಯತೆಯೇ ಹೊರತು ನಡೆದ ಘಟನೆಗಳ ನಿಶ್ಚಿತ ಮಾಹಿತಿಯಲ್ಲ. ತೋಂಟದಸಿದ್ಧಲಿಂಗಯತಿಗಳಿಂದ ಆರಂಭವಾಗುವ ನಿರಂಜನಪೀಠ ಪರಂಪರೆಯಲ್ಲಿ ಐದನೆಯ ಗುರುವಾಗಿ, ಅಲ್ಲಮನಿಂದ ಆರಂಭಗೊಂಡ ಶೂನ್ಯಪೀಠ ಪರಂಪರೆಯಲ್ಲಿ ಇಪ್ಪತ್ತಮೂರನೆಯ ಪೀಠಾಧಿಕಾರಿಯಾಗಿ ಬರುವ ಉದ್ಧಾನಶಿವಯೋಗಿಗಳ(ಕ್ರಿ.ಶ.೧೫೫೦-೧೬೨೦) ವಂಶಸ್ಥನೆಂದು ಹೇಳಿಕೊಂಡಿರುವ ಗುರುಸಿದ್ಧರಿಗೆ ಶೂನ್ಯಪೀಠದೊಂದಿಗಿನ ಸಂಬಂಧ ಶಾಂತವೀರರ ದರ್ಶನಕ್ಕಿಂತ ಮೊದಲೇ ಇರಬೇಕು. ಜಿ.ಎ.ಶಿವಲಿಂಗಯ್ಯನವರ ಅಭಿಪ್ರಾಯಕ್ಕೆ ಪೂರಕವೆಂಬಂತೆ ಮುರಿಗಾ ಶಾಂತವೀರರೂ ಸಹ ಮೊದಲು ಹುಲ್ಲಹಳ್ಳಿಯ ಮಠಾಧಿಪತಿಗಳಾಗಿದ್ದರು ಎಂದು ಅವರ ಪೂರ್ವಾಶ್ರಮದ ವಿವರಗಳನ್ನು ಶಾಂತಲಿಂಗದೇಶಿಕ(ಕ್ರಿ.ಶ.೧೬೮೦)ರ 'ಶಿವಲಿಂಗ ಚಾರಿತ್ರ್ಯ'ವೆಂಬ ಚಂಪೂ ಕೃತಿಯು ಈ ಕೆಳಗಿನಂತೆ ತಿಳಿಸುತ್ತದೆ. ಪೆನುಗೊಂಡೆ ದೇಶದ ಅಪ್ಪೆಯತೆರೆಯಲ್ಲಿ ಸಕಲಶಾಸ್ತ್ರ ಕಲೆಗಳಲ್ಲಿ ನಿಪುಣನಾಗಿದ್ದ 'ಶಿವಲಿಂಗಾರ್ಯ'ನೆಂಬ ಜಂಗಮ ಪಂಡಿತನಿದ್ದನು. ಆತನು ತನ್ನ ಮಗನಾದ 'ವೀರಣಾರ್ಯ'ನೆಂಬುವನಿಗೆ ಗುರುಪಟ್ಟಕಟ್ಟಿ ಬಯಲಾದನು. ಆಗ ವೀರಣಾರ್ಯರು ಜಂಗಮ ವೃತ್ತಿಯಂತೆ ಶಿವಪೂಜೆ, ಕೀರ್ತನೆ, ಪುರಾಣಾದಿಗಳನ್ನು ಹೇಳುತ್ತಾ ಬಿಜ್ಜಾವರಕ್ಕೆ ಬಂದು ಶಿಷ್ಯನ ಮನೆಯಲ್ಲಿ ತ್ರಿಕಾಲ ಪೂಜೆ ಮಾಡಲು, ಅಲ್ಲಿದ್ದ ದುಷ್ಟಶಕ್ತಿಗಳು ಓಡಿಹೋಗುತ್ತವೆ. ಮುಂದೆ ಉಯ್ಯಂಬಳ್ಳಿಯ ಶಿವಪೂಜೆಯರಸನ ಭೇಟಿ ಮಾಡಿ ಅವರ ಮಧ್ಯಸ್ಥಿಕೆಯಲ್ಲಿ ಆ ಊರಿನ ಗುರುಕನ್ಯೆ ನಂಜಾಂಬಿಕೆಯನ್ನು ವಿವಾಹವಾಗಿ, ಚೆನ್ನವೀರನೆಂಬ ಪುತ್ರನನ್ನು ಪಡೆಯುತ್ತಾನೆ. ಕಾರಣಾಂತರಗಳಿಂದ

ಆ ಊರನ್ನು ಬಿಟ್ಟು, ಬೆಂಗಳೂರಿಗೆ ಬಂದು ದೊರೆ ಎರಡನೆಯ ಕೆಂಪೇಗೌಡನ ಮನ್ನಣೆಗೆ ಪಾತ್ರರಾಗಿ ಅವನ ಆಶ್ರಯದಲ್ಲಿ ಇರುತ್ತಿರಲು, ಅಲ್ಲಿ ಬಸವಾರ್ಯನ ಮಗಳು ಗಿರಿಜಾಂಬಿಕೆಯೊಡನೆ ಚೆನ್ನವೀರನ ವಿವಾಹವಾಗುತ್ತದೆ. ಅಷ್ಟಾವರಣದ ಮಹತ್ವ, ಶಿವಾಚಾರ ನಿಷ್ಠೆ, ಶಿವಧರ್ಮ ಪ್ರಸಾರ ಮಾಡುತ್ತಾ, ಚೆನ್ನವೀರನು ಮೈಸೂರು ಪ್ರದೇಶದ ಹರಿಣಪುರ, ತೃಣಪುರ ಎಂಬ ಹೆಸರನ್ನು ಪಡೆದಿರುವ ಹುಲ್ಲಹಳ್ಳಿಗೆ ಬರುತ್ತಾನೆ. ಅಲ್ಲಿಯ ದೊರೆ ಬಸವೇಂದ್ರನ ಮಗ ವೀರಮಹೇಂದ್ರನಿಂದ ಭೂಮಿಯನ್ನು ಪಡೆದು, ಕೊಡನಾಲತ್ತೂರಿನ ಗುರುಪುರದ ಶಂಭುಲಿಂಗೇಗೌಡನ ನೆರವಿನಿಂದ ಸುಂದರವಾದ ಮಠವೊಂದನ್ನು ಕಟ್ಟಿಸುತ್ತಾನೆ. ತದನಂತರ ಹುಣಿಸೆಹಾಳಿಗೆ ಬಂದು, ಅಲ್ಲಿ ಆಳುತ್ತಿದ್ದ ನಂಜರಾಜೇಂದ್ರನಿಂದ ಉಡುಗೊರೆಗಳನ್ನು ಪಡೆಯುತ್ತಾನೆ. ಹೀಗೆ ಇರುತ್ತಿರಲು ತನ್ನ ಮಗನಾದ ಶಾಂತವೀರರಿಗೆ ಹುಲ್ಲಹಳ್ಳಿಯ ಮಠದ ಗುರುಪಟ್ಟವನ್ನು ನೀಡಿ ಶಿವಗಣಗಳ ಸಮೇತ ಚೆನ್ನವೀರರು ಕೈಲಾಸವಾಸಿಯಾಗುತ್ತಾರೆ."[೨೪] ಶಿವಲಿಂಗಚಾರಿತ್ರ್ಯ ಗ್ರಂಥದ ಈ ಸುದೀರ್ಘವಾದ ಕಥೆಯ ಮಥಿತಾಂಶ ವನ್ನು ಈ ಕೆಳಗಿನಂತೆ ಗ್ರಹಿಸಬಹುದಾಗಿದೆ.

ಚಿತ್ರದುರ್ಗದ ಮೊದಲ ಪೀಠಾಧಿಕಾರಿಗಳು, ಇಮ್ಮಡಿ ಮುರಿಗಾಗುರುಸಿದ್ಧರಿಗೆ ಷಟ್‌ಸ್ಥಲ ಮಾರ್ಗದ ಉಪದೇಶಗೈದ ಮುರಿಗಾ ಶಾಂತವೀರರ ತಂದೆ ಚೆನ್ನವೀರ, ತಾಯಿ ಗಿರಿಜಾಂಬಿಕೆ, ಅಜ್ಜ ವೀರಣಾರ್ಯ, ಮುತ್ತಜ್ಜ ಶಿವಲಿಂಗಾರ್ಯ, ಪೆನುಗೊಂಡೆಯ ದೇಶದ ಅಪ್ಪೆಯ ಕೆರೆಯು ಎಂದರೆ ಮಧುಗಿರಿ ತಾಲೂಕು ದೊಡ್ಡೇರಿ ಹೋಬಳಿಯ ಅಪ್ಪನಹಳ್ಳಿ. ಅಲ್ಲಿಯೇ ಇರುವ ಬಿಜ್ಜಾವರ, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಉಯ್ಯಂಬಳ್ಳಿ, ಬೆಂಗಳೂರನ್ನು ಆಳುತ್ತಿದ್ದ ಎರಡನೆಯ ಕೆಂಪೇಗೌಡನ ಕಾಲ ಕ್ರಿ.ಶ.೧೫೭೮ ರಿಂದ ೧೬೩೮ರವರೆಗೆ, ನಂಜನಗೂಡು ತಾಲೂಕಿನ ಹುಲ್ಲಹಳ್ಳಿಯ ಬಸವಭೂಪನ ಮಗ ವೀರಮಹೇಂದ್ರ(ಕ್ರಿ.ಶ.೧೬೪೦) ಹಾಗೂ ಹುಣಸನಾಳು ನಂಜರಾಜ ದಳವಾಯಿ (ಕ್ರಿ.ಶ.೧೬೩೦)ಗಳ ಉಲ್ಲೇಖಗಳು ಹಾಗೂ ಸ್ವತಃ ಮುರಿಗಾ ಶಾಂತವೀರರು ರಚಿಸಿದ 'ಶಿವಗಣಚಾರಿತ್ರ್ಯ' ದಲ್ಲಿ ಬರುವ

ಚಾಮರಾಜೇಂದ್ರನ ಸಭೆಯೊಳು ತರ್ಕಿಸುವ|
ರಾಮದೀಕ್ಷಿತನ ಭಂಜಿಸಿದ
ಶ್ರೀಮದ್ವೀರಣಾರಾಧ್ಯ ತನುಜ ಗುಣ|
ಧಾಮ ಚೆನ್ನಾರ್ಯರಕ್ಷಿಪುದು|| ಸ.೧, ಪ.೧೩

ಈ ಪದ್ಯದಲ್ಲಿ ಚಾಮರಾಜೇಂದ್ರನ (ಕ್ರಿ.ಶ.೧೬೧೫-೧೬೩೭) ಸಭೆಯಲ್ಲಿ ರಾಮದೀಕ್ಷಿತ ಎಂಬ ಪಂಡಿತನೊಡನೆ ಉಂಟಾದ ವೀರಮಾಹೇಶ್ವರರ ಸಂವಾದ ಸಭೆಯಲ್ಲಿ ಆತನನ್ನು ಸೋಲಿಸಿದ ವೀರಣಾಧ್ಯರ ಮಗ ಚೆನ್ನವೀರ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.[೨೫] ಮೇಲಿನ ಸಂಗತಿಗಳನ್ನು

ಪರಿಶೀಲಿಸಿದಾಗ ಶಾಂತವೀರರ ತಂದೆ ಚೆನ್ನವೀರ, ಚನ್ನವೀರರ ತಂದೆ ವೀರಣಾರ್ಯ ಇವರ ಸ್ವಂತ ಊರು ಹುಲ್ಲಹಳ್ಳಿ, ಅಲ್ಲಿಯ ಗುರುಮಠದ ಅಧಿಪತಿಗಳಾಗಿದ್ದರು ಎಂಬುದನ್ನು 'ಶಾಂತಲಿಂಗದೇಶಿಕ' ಮತ್ತು 'ಶಾಂತವೀರರ' ಕೃತಿಗಳಿಂದ ತಿಳಿದುಬರುತ್ತದೆ.

ಅದೇ ರೀತಿ ಗುರುಸಿದ್ಧರ ಪೂರ್ವಾಶ್ರಮದ ಬಗೆಗೆ ಜಿ.ಎ.ಶಿವಲಿಂಗಯ್ಯನವರ ಅಭಿಪ್ರಾಯಗಳನ್ನು ಗಮನಿಸಿದಾಗ ಗುರುಸಿದ್ಧರು ಷಡಕ್ಷರದೇವನ ಕಿರಿಯ ಸಹೋದರ, ಷಡಕ್ಷರದೇವನು ಯಳಂದೂರಿನ ಮಠಾಧಿಪತಿಗಳಾಗಿ ನೇಮಕಗೊಂಡ ತರುವಾಯ ಗುರುಸಿದ್ಧರನ್ನು ಹುಲ್ಲಹಳ್ಳಿಯ ಮಠಾಧಿಪತಿಗಳನ್ನಾಗಿ ಮಾಡುತ್ತಾರೆ. ಅಲ್ಲಿಂದ ಚಿತ್ರದುರ್ಗದ ಬೃಹನ್ಮಠದ ಅಧ್ಯಕ್ಷರಾಗುತ್ತಾರೆ ಎನ್ನುತ್ತಾರೆ. ಈ ಮೇಲಿನ ವಿಷಯಗಳನ್ನು ಪರಿಶೀಲಿಸಿದಾಗ ಗುರುಸಿದ್ಧರು ಶೂನ್ಯಪೀಠದ ಅಧಿಪತ್ಯಕ್ಕೆ ಬರಲು ಮುಖ್ಯ ಕಾರಣ ಮುರಿಗಾಶಾಂತವೀರರೇ, ಏಕೆಂದರೆ ಹುಲ್ಲಹಳ್ಳಿ ಮಠದ ಪೀಠಕ್ಕೆ ಇಬ್ಬರೂ ಅಧಿಕಾರಿಗಳಾಗಿದ್ದವರೇ, ತದನಂತರ ಅದೇ ಪರಿಸರದಲ್ಲಿ ಬೆಳೆದ ಕ್ರಿಯಾಜ್ಞಾನ ಸಮರ್ಥರಾದ ಗುರುಸಿದ್ಧರು ಶಾಂತವೀರರ ಮೆಚ್ಚುಗೆಯನ್ನು ಸಹಜವಾಗಿ ಗಳಿಸಿಕೊಂಡಿರಬೇಕು. ಅದಕ್ಕಾಗಿ ಸಂಪ್ರದಾಯದಂತೆ ಶಾಂತವೀರರು ಶೂನ್ಯಪೀಠಕ್ಕೆ ತಮ್ಮ ಉತ್ತರಾಧಿಕಾರಿಗಳನ್ನಾಗಿ ಗುರುಸಿದ್ಧರನ್ನು ನೇಮಿಸಿಕೊಂಡಿರಬೇಕು.

ಹೀಗಾಗಿ ಮೊದಲೇ ಪ್ರಭಾವಿತರಾಗಿದ್ದ ಗುರುಸಿದ್ಧರು ಯಾವ ಮೂಲದಿಂದಲಾದರೂ ಚಿತ್ರದುರ್ಗಕ್ಕೆ ಬಂದಿರಬಹುದು. ಇದಕ್ಕೆ ಪೂರ್ವದಲ್ಲಿ ಹುಲ್ಲಹಳ್ಳಿಯ ಮಠಾಧೀಶರಾಗಿದ್ದರು ಎಂಬ ಅಭಿಪ್ರಾಯವನ್ನು ಕೆಲವಿದ್ವಾಂಸರು ವ್ಯಕ್ತಪಡಿಸುತ್ತಾರೆ.

೧. ಉದ್ಧಾನಶಿವಯೋಗಿ ಮಠದ ಷಡಕ್ಷರದೇವನು ಗುರಸ್ಥಲ ಪೀಠಾಧೀಶನಾದರೆ, ಗುರುಸಿದ್ಧರು ವಿರಕ್ತಮಠಾಧೀಶರಾಗಿದ್ದಾರೆ. ತೃಣಪುರಿ ಅರ್ಥಾತ್ ಹುಲ್ಲಹಳ್ಳಿಯ ಮಠಾಧ್ಯಕ್ಷರು, ಈ ಹುಲ್ಲಹಳ್ಳಿ ನಂಜನಗೂಡು ತಾಲೂಕಿನ ಹುಲ್ಲಹಳ್ಳಿಯೇ ಆಗಿದೆ.[೨]

೨. ಗುರುಸಿದ್ಧರು ಉದ್ಧಾನ ಶಿವಯೋಗಿ ವಂಶದವ ಎಂದು ಹೇಳಿಕೊಂಡಿರುವುದು, ಗುರುಪರಂಪರೆಯ ನಿರೂಪಣೆಯಲ್ಲಿ ತಂದೆ ತಾಯಿಗಳ ಹೆಸರು ಬರದೆ ಗುರುವಿನ ಹೆಸರೇ ಬಂದಿರುವುದನ್ನು ನೋಡಿದರೆ ಷಡಕ್ಷರದೇವ ಮತ್ತು ಗುರುಸಿದ್ಧರು ಇಬ್ಬರೂ ಚಿಕವೀರದೇಶಿಕೇಂದ್ರರ ಬಳಿಯೇ ವಿದ್ಯಾಭ್ಯಾಸ ಸಾಗಿಸಿರಬೇಕು. ಪ್ರೀತಿವಿಶ್ವಾಸಗಳಿಂದ ತುಂಬಿದ ಇಬ್ಬರು ಶಿಷ್ಯರಿಗೆ ಒಂದೇ ಬಾರಿಗೆ ಒಂದೇ ಮಠದಲ್ಲಿ ಸ್ಥಾನ ಕಲ್ಪಿಸಲು ಅವಕಾಶವಾಗದೆ, ಧನಗೂರಿನ ಸಮೀಪದ ಹುಲ್ಲಹಳ್ಳಿಯಲ್ಲಿ ಮಠವೊಂದನ್ನು ನಿರ್ಮಿಸಿ ಗುರುಸಿದ್ಧರನ್ನು ಮಠಾಧೀಶರನ್ನಾಗಿ ಮಾಡಿರಬೇಕು.[೨]

೩. ಷಡಕ್ಷರದೇವನು ಧನುಗೂರನ್ನು ಬಿಟ್ಟು ಎಳಂದೂರಿಗೆ ಹೋಗಿ ನೆಲಸಿದ ಮೇಲೆ ತೆರವಾಗಿದ್ದ ಪೀಠಾಧಿಕಾರಕ್ಕೆ, ಅದೇ ಪರಂಪರೆಯ ಸೋಮಶೇಖರಶಿವಯೋಗಿಗಳು ಅಧಿಪತಿಗಳಾಗಿ,

ಸದಾಶಿವಪ್ಪನಿಗೆ ಚಿಕ್ಕಂದಿನಲ್ಲೇ ಶಿವದೀಕ್ಷೆಯನ್ನು ಕೊಟ್ಟು 'ಗುರುಸಿದ್ಧ'ರೆಂಬ ನಾಮವಿಟ್ಟು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸುತ್ತಾರೆ. ಅಲ್ಲಿಯೇ ಇದ್ದ ಹುಲ್ಲಹಳ್ಳಿಯ ಮಠಕ್ಕೆ ಗುರುಸಿದ್ಧರು ಅಧಿಕಾರಿಗಳಾಗುತ್ತಾರೆ.[೨೮]

೪. 'ಹರಿಣಪುರ - ತೃಣಪುರವೆಂಬುಭಯ ನಾಮವನಾಂತು ರಾರಾಜಿಪ ಹುಲ್ಲಹಳ್ಳಿಯೆಂಬ ಪೊಳಲ್' ಉಲ್ಲೇಖದಿಂದ ನಂಜನಗೂಡು ತಾಲೂಕಿನ ಹುಲ್ಲಹಳ್ಳಿಯೇ ಗುರುಸಿದ್ಧರು ಮಠಾಧೀಶರಾಗಿದ್ದ ಹರಿಣಪುರ.[೨೯] ಈ ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ಎರಡು ಸಮಸ್ಯೆಗಳು ಉದ್ಭವಿಸುತ್ತವೆ. ಮೊದಲನೆಯದಾಗಿ ಇಮ್ಮಡಿಗುರುಸಿದ್ಧರು ಚಿತ್ರದುರ್ಗದ ಶೂನ್ಯಪೀಠಾಧಿಕಾರಿಯಾಗುವುದಕ್ಕಿಂತ ಮೊದಲು 'ಹುಲ್ಲಹಳ್ಳಿ' ಎಂಬಲ್ಲಿ ಮಠಾಧ್ಯಕ್ಷರಾಗಿದ್ದರು ಎಂಬುದು. ಎರಡನೆಯದು ಈ ಹುಲ್ಲಹಳ್ಳಿಯು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನದೇ ಅಥವಾ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಧನುಗೂರು ಹತ್ತಿರದ ಹುಲ್ಲಹಳ್ಳಿಯೇ ಎಂಬ ಸಮಸ್ಯೆ ಎದುರಾಗುತ್ತದೆ.

ಓಲೆಯ ಕಟ್ಟಿನ ಅಂತ್ಯ ಪ್ರಶಸ್ತಿವೊಂದರ ಪ್ರಕಾರ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೬೪೫ ಸಂದ ವರ್ತಮಾನ ಶುಭಕಾಲೇ ಕ್ರೋಧಿಸಂವತ್ಸರೇ ಉತ್ತರಾಯಣೇ ಮಾಘ ಶುದ್ಧ ಪೌರ್ನಮಿ ಸೋಮವಾರೇ ಶ್ರೀಮದ್ಗರಳಪುರಕ್ಷೇತ್ರ ಪಶ್ಚಿಮ ಭಾಗೇ ಯೋಜನಾಂತರ ಪ್ರದೇಶೇ ಕಪಿಲಾನದಿ ತೀರೇ ಶಾಂತಮಲ್ಲಿಕಾರ್ಜುನ ಕ್ಷೇತ್ರ ಹರಿಣಪುರಿಸ್ಥಳೇ ವರಮುರಿಗೆ ಸಿಂಹಾಸನಾಧೀಶ್ವರ ಗುರುಸಿದ್ಧದೇಶಿಕ ಸಂಪ್ರದಾಯ ಮಠಸ್ಥಾನೇ ಸಮಸ್ತ ಗಣ ಸಂದೋಹಾನಾಂ ಅಭ್ಯಂಗನ ಸ್ನಾನ ಅಂಗವಸ್ತ್ರ ಪಾದಪೂಜೆ ಮೃಷ್ಟಾಂನ ಭಕ್ಷಭೋಜ್ಯಾದಿ ಶಿವಾರ್ಪಿತ ಪೂರ್ವಕಮಾದ ಅನಂತರದಲ್ಲಿ ವೇದ ವೇದಾಂತಾಗಮ ಪುರಾಣೇತಿಹಾಸ ಸುತ್ತಾದಿ ಶಾಸ್ತ್ರ ಸಂನ್ಮತ ಪುರಾತನ ಗೀತಾನು ಗುಣ್ಯಮಾಗಿ ರುದ್ರಶಿವಯೋಗಿನಾ ವಿರಚಿತ ಜ್ಞಾನಕ್ರಿಯಾರೂಪ ಅಷ್ಟಾವರಣ ಪಂಚಾಚಾರ ಸಿದ್ಧಾಂತ ಪ್ರಕರಣ ಲೇಖನ ಪ್ರಥಮ ಪೂಜಾಂ ಕರಿಷ್ಯೇ ಸಮಾಪ್ತ ಮಂಗಳ ಶ್ರೀಶ್ರೀ"[೩೦] ಶಾಂತಮಲ್ಲಿಕಾರ್ಜುನನ ಕ್ಷೇತ್ರವೆನಿಸಿದ ಹರಿಣಪುರ(ಹುಲ್ಲಹಳ್ಳಿ)ವು ಶ್ರೀಮದ್ಗರಳಪುರ(ಎಳಂದೂರು)ದ ಪಶ್ಚಿಮ ಭಾಗದಲ್ಲಿದ್ದು ಅಲ್ಲಿ ಮುರಿಗೆ ಸಂಪ್ರದಾಯದ ಶಾಖಾಮಠವಿದ್ದಿತು. ಅದರ ಅಧಿಪತಿ ಗುರುಸಿದ್ಧದೇಶಿಕರು ಎಂಬುದು ಸ್ಪಷ್ಟವಾಗುತ್ತದೆ. ಹುಲ್ಲಹಳ್ಳಿಯ ಮಠಾಧೀಶರಾಗಿದ್ದ ಗುರುಸಿದ್ಧರು, ಶಾಂತವೀರರ ಕೃಪಾಕಟಾಕ್ಷದಿಂದ ಚಿತ್ರದುರ್ಗದ ಪೀಠಾಧ್ಯಕ್ಷರಾದರು ಎಂಬ ವಿದ್ವಾಂಸರ ಹೇಳಿಕೆ ಇಲ್ಲಿ ಸಮಂಜಸವೆನಿಸುತ್ತದೆ. ಏಕೆಂದರೆ ಮೇಲಿನ ಉಲ್ಲೇಖವು ತಿಳಿಸುವಂತೆ ಇಮ್ಮಡಿಗುರುಸಿದ್ಧರು ಮುರಿಗಾಮಠದ ಅಧಿಪತಿಗಳಾದ ನಂತರ ಹುಲ್ಲಹಳ್ಳಿಯ ಮಠವು ಮುರಿಗೆ ಸಂಪ್ರದಾಯಕ್ಕೆ ಸೇರುತ್ತದೆ. ಈ ಘಟನೆ ನಡೆದ ಕಾಲ ಶಾಲಿವಾಹನ ಶಕವರ್ಷ ೧೬೪೫ ಅಂದರೆ ಕ್ರಿ.ಶ.೧೭೨೩ ಈ ವೇಳೆಗಾಗಲೇ ಗುರುಸಿದ್ಧರು ಶೂನ್ಯಪೀಠದ ಅಧಿಪತಿಗಳಾಗಿರುತ್ತಾರೆ.

ಈ ಹುಲ್ಲಹಳ್ಳಿಯು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನದಲ್ಲ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನದು ಎನ್ನುತ್ತಾ ಮ.ಮಲ್ಲಪ್ಪನವರು ಹೀಗೆ ಚರ್ಚಿಸಿದ್ದಾರೆ. "ಗುರುಸಿದ್ಧ ಮತ್ತು ಷಡಕ್ಷರದೇವ ಒಂದೇ ವಂಶದವರು. ಧನುಗೂರಿನ ಮಠಾಧ್ಯಕ್ಷರಾದ ಚಿಕವೀರದೇಶಿಕೇಂದ್ರರ ಶಿಷ್ಯರು. ಗುರುವಿರಕ್ತರಲ್ಲಿ ಸರಿಸಮಾನವಾದ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಂಡಿದ್ದ ಇವರು ಷಡಕ್ಷರಿ ದೇವನನ್ನು ಧನುಗೂರಿನ ಮಠದ ಪೀಠಸಿಂಹಾಸನಾಧ್ಯಕ್ಷರನ್ನಾಗಿ ಮಾಡಿದರು. ಪರಿಣಾಮವಾಗಿ ಜೊತೆಯಲ್ಲಿದ್ದ ಗುರುಸಿದ್ಧ ವಿರಕ್ತಮೂರ್ತಿ ಆಗುವಂತಾಯಿತು. ಧನುಗೂರಿನ ಸಮೀಪದ ಹುಲ್ಲಹಳ್ಳಿಯ ಮಠದಲ್ಲಿರುತ್ತಿದ್ದ ಗುರುಸಿದ್ಧರು, ಆಗಾಗ್ಗೆ ಎಳಂದೂರಿಗೆ ಹೋಗಿ ಷಡಕ್ಷರದೇವನನ್ನು ಕಂಡುಬರುತ್ತಿದ್ದಿರ ಬೇಕು. ಹೀಗಾಗಿ ಇವರಿಬ್ಬರ ಮಧ್ಯೆ ಇರುವ ಇವರ ವ್ಯಕ್ತಿಗತ ಸಂಬಂಧವೇ ಗುರುಸಿದ್ಧರು 'ಚರಮಗೀತೆ'ಯನ್ನು ರಚಿಸಿರಲು ಕಾರಣವಾಗಿರಬೇಕು. ಹುಲ್ಲಹಳ್ಳಿಯ ವಿರಕ್ತಮಠಕ್ಕೆ ಗುರುಸಿದ್ಧರೇ ಮೊದಲನೆಯವರು ಆದರೆ ನಂಜನಗೂಡಿನ ಹುಲ್ಲಹಳ್ಳಿಯ ಮಠದ ಪರಂಪರೆಯಲ್ಲಿ ಇವರ ಹೆಸರು ಇರುವುದಿಲ್ಲ. ಗುರುಸಿದ್ಧರ ಹಾಡುಗಳಲ್ಲಿ 'ಶಿವಲಿಂಗ' ಎಂಬ ಅಂಕಿತವಿದೆ. ಧನುಗೂರು ಮಠದ ಬಳಿ ಶಿವಲಿಂಗೇಶ್ವರ ದೇವಾಲಯವಿದ್ದು, ಈ ದೇವರ ಹೆಸರನ್ನೇ ಷಡಕ್ಷರದೇವನು ತನ್ನ ಕಾವ್ಯದಲ್ಲಿ ಅಂಕಿತವಾಗಿ ೧೦೮ ಬಾರಿ ಬಳಸಿದ್ದಾನೆ. ಅದುದರಿಂದ ಇಮ್ಮಡಿ ಗುರುಸಿದ್ಧರ ವಾಸಸ್ಥಳ ಧನುಗೂರಿನ ಹುಲ್ಲಹಳ್ಳಿಯೇ ಹೊರತು ನಂಜನಗೂಡಿನ ಹುಲ್ಲಹಳ್ಳಿಯಲ್ಲ"[೬] ಎಂದಿದ್ದಾರೆ.ಬಹುಶಃ ಇವರ ಈ ವಾದವು ತರ್ಕಸಮ್ಮತ ಮತ್ತು ಸತ್ಯಕ್ಕೆ ಹತ್ತಿರವಾದುದಾಗಿದೆ. ಏಕೆಂದರೆ ಓಲೆಕಟ್ಟಿನ ಅಂತ್ಯ ಪತ್ರದಲ್ಲಿ "ಶ್ರೀಮದ್ಗರಳ..... ಕಪಿಲಾನದಿತೀರೇ ಶಾಂತಮಲ್ಲಿಕಾರ್ಜುನಕ್ಷೇತ್ರ....." ಎಂಬಲ್ಲಿ 'ಕಪಿಲಾತೀರೆ' ಎಂಬುದು ಕಪಿಲಾನದಿ ತೀರವನ್ನು ಸೂಚಿಸುತ್ತದೆ. ಮೈಸೂರು ಜಿಲ್ಲೆಯಲ್ಲಿ ಹರಿಯುವ ಕಾವೇರಿ ನದಿಯ ಉಪನದಿ 'ಕಪಿಲಾ' ಈ ನದಿಯು ಹರಿಯುತ್ತಿರುವುದು ಮಂಡ್ಯಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿ. ಹೀಗಾಗಿ 'ಕಪಿಲಾತೀರೆ' ಎಂಬುದು ಮೈಸೂರು ಜಿಲ್ಲೆಯ ಕಾವೇರಿ ನದಿಯಾಗಿರದೆ ಅದರ ಉಪನದಿ ಮಂಡ್ಯಜಿಲ್ಲೆಯ 'ಕಪಿಲಾ' ನದಿಯಾಗಿದೆ. ಕಾರಣ ಇಮ್ಮಡಿಗುರುಸಿದ್ಧರ ವಾಸಸ್ಥಳ ಮಂಡ್ಯಜಿಲ್ಲೆಯ ಮಳವಳ್ಳಿ ತಾಲೂಕಿನ ಧನುಗೂರಿನ ಹತ್ತಿರದ ಹುಲ್ಲಹಳ್ಳಿ ಎಂಬುದು ಸಿದ್ಧವಾಗುತ್ತದೆ.

ಶೂನ್ಯಪೀಠದ ಅಧಿಪತಿ

"ಸ್ವಭಾನು ಸಂವತ್ಸರದಧಿಕ ವಾ
ದನುಪಮ ಶ್ರಾವಣ ಮಾಸದ ಬಿದಿಗೆ ಚಂ
ದ್ರನವಾರದುರೆ ಮೂರೂವರೆ ತಾಸಿನಿರುಳೊಳ್
ವನಶೀಲ ಶಿವಲಿಂಗದೊಳಗ್ನಿಯುಗ್ನಿಯೊ
ಳನುನಯದಿಂ ಬೆರೆದಂತೆ ಬೆರೆಯೆ"||

(ಮು.ತಾ.ಪದ್ಯ.೩೫)

'ಮುರಿಗಾತಾರಾವಳಿ'ಯಲ್ಲಿ ಶಾಂತವೀರರು ಅಂತ್ಯವಾದ ಕಾಲವನ್ನು ಮೇಲಿನಂತೆ ನಿರೂಪಿಸುತ್ತಾರೆ. ಈ ಕಾಲವು ಸರಿಯಾಗಿ ೫-೭-೧೭೦೩ಕ್ಕೆ ಹೊಂದಿಕೊಳ್ಳುತ್ತದೆ. ಇದರಿಂದ ಇಮ್ಮಡಿಗುರುಸಿದ್ಧಸ್ವಾಮಿಗಳಿಗೆ ಶಾಂತವೀರರು ಲಿಂಗೈಕ್ಯರಾಗುವ ಒಂದೆರಡು ವರ್ಷ ಮುನ್ನವೇ ಪಟ್ಟಗಟ್ಟಿರಬಹುದು. ಅಂದರೆ ಕ್ರಿ.ಶ.೧೭೦೦ರ ಹೊತ್ತಿಗೆ ಶ್ರೀಮಠದ ಅಧಿಪತಿಗಳಾಗಿದ್ದಾರೆ. ಆಗ ಅದೇ ಮಠದ ಚರಮೂರ್ತಿಗಳಾಗಿದ್ದ ಚೀಲಾಳಪ್ಪ, ಕುಮಾರಸ್ವಾಮಿ ಎಂಬ ಶಿಷ್ಯರು ತಮಗೆ ಅಧಿಕಾರ ದೊರೆಯಲಿಲ್ಲವೆಂಬ ಅಸಮಧಾನದಿಂದ ನಡೆಸಿದ ಪಿತೂರಿಗಳನ್ನು ಇಮ್ಮಡಿಗುರುಸಿದ್ಧರು ಸಮರ್ಥವಾಗಿ ಎದುರಿಸಿದ ರೀತಿಯನ್ನು ಮಹಲಿಂಗ ಕವಿಯು ತನ್ನ ಕಾವ್ಯದಲ್ಲಿ ಕೆಳಗಿನಂತೆ ಉಲ್ಲೇಖಿಸಿದ್ದಾನೆ.

ಶಾಂತವೀರರು ಇಮ್ಮಡಿಗುರುಸಿದ್ಧರಿಗೆ ಷಟ್ಸ್ಥಲಪಟ್ಟವನ್ನು ವಹಿಸಿದರು. ಪಂಡಿತ ಪ್ರಿಯರಾಗಿ ಮಹಾಜ್ಞಾನ ನಿಧಿಯಾದ ಗುರುಸಿದ್ಧರು ಭಕ್ತಗಣಕ್ಕೆ, ವೀರಮಾಹೇಶ್ವರ ಗಣಕ್ಕೆ ಷಟ್ಸ್ಥಲ ವಿಚಾರವನ್ನು ಬೋಧಿಸುತ್ತಿದ್ದರು. ಮುರಿಗೇಂದ್ರರ ಕಾಲದಲ್ಲಿಯೇ ಹರಪನಹಳ್ಳಿ ಪ್ರಾಂತ್ಯದಲ್ಲಿ ನಿಯೋಜಿತರಾಗಿದ್ದ ಚೀಲಾಳಚರಮೂರ್ತಿ ಗುರುಸಿದ್ಧರ ಏಳಿಗೆ, ಸತ್ಕೀರ್ತಿಯನ್ನು ಕೇಳಿ ಸಹಿಸಲಾಗದೆ, ತಮಗೆ ಸಲ್ಲಬೇಕಾಗಿದ್ದ ಷಟ್ಸ್ಥಲ ಪಟ್ಟವನ್ನು ಶಾಂತವೀರರು ಮುಂದಾಲೋಚನೆ ಮಾಡದೆ ಅವರ ಕಡೆಗಿದ್ದ ಮರಿಯೊಂದಕ್ಕೆ ಪಟ್ಟಕಟ್ಟಿ ವಂಚನೆ ಮಾಡಿದ್ದಾರೆಂದು ಹರಪನಹಳ್ಳಿ ಪ್ರಾಂತ್ಯದಲ್ಲಿ ಅಪಪ್ರಚಾರ ಮಾಡುತ್ತಿದ್ದರು.

ಅಷ್ಟಕ್ಕೇ ನಿಲ್ಲದೆ ಅವರು ಪ್ರತೀಕಾರ ತೀರಿಸಿಕೊಳ್ಳಲು ಬೃಹನ್ಮಠಕ್ಕೆ ನುಗ್ಗಿ ಬಂದರು. ಒಂದೇ ಸದ್ಗುರುವಿನ ವರಪುತ್ರರಾಗಿ, ವಿರಕ್ತರೆನಿಸಿದ ತಮ್ಮ ತಮ್ಮಲ್ಲಿ ಈ ದ್ವೇಷವು ಅನುಚಿತವಾದುದೆಂದು ಗುರುಸಿದ್ಧರು ವಿವೇಕ ಹೇಳಲು ಪ್ರಯತ್ನಿಸಿದರೂ, ದ್ವೇಷಾ ಅಸೂಯೆಯಿಂದ ತುಂಬಿ ತುಳುಕುತ್ತಿದ್ದ ಚೀಲಾಳಪ್ಪನವರು ಕೇಳದೆ ಮೈಮೇಲೆ ನುಗ್ಗಿ ಬರುತ್ತಾರೆ. ಅವರ ದುರಹಂಕಾರ, ಅನುಚಿತ ವರ್ತನೆಯನ್ನು ಕಂಡು ಮಠದಿಂದ ಹೊರಹಾಕಲಾಯಿತು. ಈ ವಿಷಯ ತಿಳಿದ ಭರಮನಾಯಕನು ಚೀಲಾಳಪ್ಪನನ್ನು ಗಡಿಪಾರು ಮಾಡಿದನು. ಹೀಗೆ ಬಹಿಷ್ಕೃತನಾದ ಚೀಲಾಳಪ್ಪ ಹರಪನಹಳ್ಳಿಗೆ ಬಂದನು. ಚಿತ್ರದುರ್ಗದ ಪಾಳೇಗಾರನಿಗೂ ಮತ್ತು ಹರಪನಹಳ್ಳಿಯ ಪಾಳೇಗಾರನಿಗೂ ರಾಜಕೀಯ ಸಂಬಂಧಗಳು ಸರಿಯಾಗಿರದ ಕಾರಣದಿಂದ ಅಥವಾ ಶರಣಾಗತ ರಕ್ಷಣೆಗಾಗಿಯೋ ಚೀಲಾಳಪ್ಪನಿಗೆ ಅಲ್ಲಿಯ ಅರಸ ಬಸವಂತಭೂಪಾಲ ಮಠವೊಂದನ್ನು ಕಟ್ಟಿಸಿಕೊಟ್ಟು ಅತಿಶಯವಾದ ದಾನ ದತ್ತಿಗಳನ್ನು ಬಿಟ್ಟನು. ಹೀಗಾಗಿ ಅಂದಿನಿಂದ ವೀರಶೈವ ಸಮಾಜ ಬಿರುಕು ಬಿಟ್ಟು ಅದರ ಒಂದು ಹೋಳು 'ಚೀಲಾಳಸಮಯ'ವಾಗಿ ಬೇರ್ಪಟ್ಟಿತು.[೩]

ಇನ್ನೊಂದು ಕಡೆ ಮುರಿಗಾಶಾಂತವೀರರ ಮತ್ತೊಬ್ಬ ಶಿಷ್ಯ ಕುಮಾರಸ್ವಾಮಿ ಗುರುಸಿದ್ಧದೇಶಿಕನ ಉನ್ನತಿಯನ್ನು ನೋಡಿ ಸಹಿಸದೆ ಅವರ ಮೇಲೆ ತಿರುಗಿ ಬಿದ್ದನು. ಸ್ವಾದಿಗೆ ಬಂದು ಅಲ್ಲಿಯ ಅರಸ

ಸದಾಶಿವರಾಯನಿಗೆ ಇಲ್ಲಸಲ್ಲದ್ದನ್ನು ಹೇಳಿ ಚಿತ್ರದುರ್ಗದ ಶೂನ್ಯಸಿಂಹಾಸನದ ಸಂಬಂಧವಾಗಿ ಉದಾಸೀನ ಹುಟ್ಟುವಂತೆ ಮಾಡಿ, ರಾಜನ ಮನಸ್ಸನ್ನು ಕೆಡಿಸಿ ತನ್ನವನನ್ನಾಗಿ ಮಾಡಿಕೊಂಡನು, ಇಂಥ ಅಹಿತಕರ ಘಟನೆಗಳನ್ನು ಸರಿಪಡಿಸಲೆಂದು, ಕುಹಕಿಗಳ ಗರ್ವ ಮುರಿಯಲೆಂದು, ನಡೆದಿರುವ ಮತ್ತು ನಡೆಯುತ್ತಿರುವ ಘಟನೆಗಳಿಗೆ ಕಾರಣರಾರು ಎಂಬ ಸತ್ಯವನ್ನು ಸಾರಲೆಂದು ಒಟ್ಟಾರೆಯಾಗಿ ಸಮಾಜ ಸುಧಾರಣೆಗಾಗಿ ಇಮ್ಮಡಿ ಮುರಿಗಾಗುರುಸಿದ್ಧರು ದೇಶ ಸಂಚಾರಕ್ಕೆ ಹೊರಡುತ್ತಾರೆ.

ದೇಶ ಪರ್ಯಟನೆ

ಸ್ವಾದಿ ಸಂಸ್ಥಾನದ ಕಡೆಗೆ : ಸದಾಶಿವರಾಯನು ಕುಮಾರಜಂಗಮನ ಚಾಡಿ ಮಾತುಗಳನ್ನು ಕೇಳಿ ತಮ್ಮ ಸೀಮೆಗೆ ಬಂದ ಗುರುಸಿದ್ಧರನ್ನು ಸ್ವಾಗತಿಸುವುದಿರಲಿ, ಕಂಡೂ ಕಾಣದಂತೆ ಸುಮ್ಮನೆ ಕುಳಿತಿದ್ದನು. ಸ್ವಾಮಿಗಳು ವಿರಕ್ತರಾದ ಕಾರಣ ರಾಜನ ಪರಿವರ್ತನೆಯ ಬಗೆಗೆ ಸ್ವಲ್ಪವೂ ಮುನಿಸಿಕೊಳ್ಳದೆ ಗಂಭೀರ ಧ್ವನಿಯಲ್ಲಿ ಅವನನ್ನು ಕುರಿತು ಹೀಗೆ ನುಡಿಯುತ್ತಾರೆ. "ಪೂರ್ವದಲ್ಲಿ ಚೆನ್ನಬಸವಣ್ಣ ಮುಂತಾದ ಶರಣರು ಈ ಸ್ವಾದಿಯ ಮೂಲಕವೇ ಉಳುಮೆಗೆ ಹೋಗಿ ಅಲ್ಲಿಂದ ಕೈಲಾಸ ತಲುಪಿದರು. ಇಂಥ ಪುಣ್ಯಭೂಮಿ ಈ ನಿನ್ನ ನಾಡು. ಕಲ್ಯಾಣದ ಪ್ರಮಥರೆಷ್ಟೋ ಜನ ಇಲ್ಲಿಯೇ ಅಂದಿನಿಂದ ಇಂದಿಗೂ ಅಗೋಚರವಾಗಿ ತಪಸ್ಸಿನಲ್ಲಿರುವರು. ಈ ಮಾತನ್ನು ಹಿಂದೆ ನೀನೆಷ್ಟೋ ಸಲ ಕೇಳಿಯೂ ನಂಬದೆ ಇದಕ್ಕೆ ಸಾಕ್ಷಿಯೇನು? ಎಂದು ತಿರಸ್ಕಾರ ಮಾಡಿದ್ದಿ. ಆ ವೇಳೆಗೊಬ್ಬ ಶರಣನು ನಿನಗೆ ಕಾಣಿಸಿಕೊಂಡು ನಿನ್ನ ಕೈಯಲ್ಲೊಂದು ಪುಸ್ತಕವನಿರಿಸಿ ಅದನ್ನು ಯಾರು ಓದುವರೋ ಅವರೇ ಸದ್ಗುರು ಎಂದು ಅದೃಶ್ಯನಾಗಲಿಲ್ಲವೇ? ಅವನಿಂದ ನೀನು ಪಡೆದ ಪುಸ್ತಕವನ್ನಿಲ್ಲಿ ತಾ" ಎಂದು ತರಿಸಿಕೊಂಡು ಅದನ್ನು ಸ್ಫುಟವಾಗಿ ಓದಿ ಖಚಿತವಾಗಿ ಅರ್ಥಹೇಳಿ, ಇಮ್ಮಡಿ ಮುರಿಗಾಗುರುಸಿದ್ಧರು ಮರುಮಾತಾಡದೆ ಅರಮನೆಯಿಂದ ಹೊರಟು ಹೋದರು.

ಆಗ ರಾಜನಿಗೆ ಪೂರ್ವದ ವಿಚಾರಗಳು ನೆನಪಾಗಿ, ಆ ಪುಸ್ತಕದಲ್ಲಿ ಕುಮಾರಸ್ವಾಮಿಯಿಂದ ತನಗೂ ಜಗದ್ಗುರುಗಳಿಗೂ ಉಂಟಾಗಿರುವ ವೈಷಮ್ಯವನ್ನು ಎಷ್ಟೋ ವರ್ಷಗಳ ಹಿಂದೆ ಬರೆದಿರುವುದನ್ನು ಕೇಳಿ, ಭಕ್ತಿಪರವಶನಾದ ರಾಜನು ಭಯದಿಂದ ಓಡಿ ಬಂದು ಗುರುಸಿದ್ಧಜಗದ್ಗುರುಗಳಲ್ಲಿ ಕ್ಷಮೆ ಕೇಳಿದ. ಗುರುವರ್ಯಾ ನಿಮ್ಮ ಮಹಿಮಾದಿ ವಿಶೇಷಗಳನ್ನು ತಿಳಿಯದೇ ನಾನು ಮನೋದೋಷಿಯಾದೆ, ತೀವ್ರವಾಗಿ ನಿಮ್ಮನ್ನು ನಿಂದಿಸಿದ ಕಾರಣದಿಂದ ವಾಗ್ದೋಷಿಯಾದೆ. ನಿಮ್ಮ ಪಾದಗಳಿಗೆ ನಮಿಸದೇ ಅಹಂಕರಿಸಿ ಇಲ್ಲಿಯೇ ನಿಂತಿದ್ದರಿಂದ ಕಾಯಕದೋಷಿಯಾದೆ, ಶಿವಪುರಾತನರ ವಾಕ್ಯಗಳನ್ನು ತಿಳಿಯದವನಾದ ಕಾರಣದಿಂದ ಸರ್ವದೋಷಿಯಾದೆ, ಕಾರಣ ಕುಮಾರಜಂಗಮನಿಂದ ನನ್ನ ಬುದ್ಧಿ ಕೆಟ್ಟಿತ್ತು, ಮನ ಮಲಿನವಾಗಿದ್ದಿತು, ನನ್ನನ್ನು ಮನ್ನಿಸು ಎಂದು ಅರಸನು ಗುರುಸಿದ್ಧರಲ್ಲಿ ಕ್ಷಮೆ ಕೇಳಿದನಲ್ಲದೆ, ಕುಮಾರಜಂಗಮನನ್ನು ತನ್ನ ದೇಶದಿಂದ ಹೊರದಬ್ಬಿಸಿದನು. ಹೀಗೆ ಗುರುಪಿನಿಂದ, ರಾಜರಿಂದ

ದೂರೀಕೃತನಾದ ಕುಮಾರಸ್ವಾಮಿಯು ಸ್ವಾದಿಯ ಸೀಮೆಯಿಂದ ಬಹಿಷ್ಕಾರಗೊಂಡು ಹುಬ್ಬಳ್ಳಿಗೆ ಬಂದನು. ಅಲ್ಲಿಯ ಪಟ್ಟಣಶೆಟ್ಟಿಯನ್ನು ಭಕ್ತನನ್ನಾಗಿ ಮಾಡಿಕೊಂಡು ಸ್ವಾದಿಸೀಮೆಯಿಂದ ಅಡಕೆ, ಮೆಣಸು ಮುಂತಾದ ಪದಾರ್ಥಗಳು ಚಿತ್ರದುರ್ಗಕ್ಕಾಗಲಿ, ಅಥವಾ ಚಿತ್ರದುರ್ಗದ ಪದಾರ್ಥಗಳು ಸ್ವಾದಿ ಸೀಮೆಗಾಗಲಿ ಹೋಗಿ ಬರದಂತೆ ನಿರ್ಬಂಧ ವಿಧಿಸಿ ಸೇಡು ತೀರಿಸಿಕೊಂಡನು.

ಇಮ್ಮಡಿ ಮುರಿಗಾಗುರುಸಿದ್ಧರು ಸ್ವಾದಿಯನ್ನು ಬಿಟ್ಟು, ನಗರ ಸೀಮೆಗೆ ಹೊರಟು ದಾರಿಯಲ್ಲಿ ಸಿಕ್ಕಿದ ಎಸಳೂರಿನಲ್ಲಿ ತಂಗಿದ್ದರು. ಕುಮಾರಜಂಗಮನು ಗುರುಸಿದ್ಧದೇಶಿಕರನ್ನು ಕೊಲ್ಲಿಸುವ ಸಂಚು ಹೂಡಿ, ಸ್ವಾದಿಯ ಕೆಲವು ಪುಂಡ ಜನರನ್ನು ಎಸಳೂರಿಗೆ ಕಳುಹಿಸುತ್ತಾನೆ. ಈ ಜನರು ಜಗದ್ಗುರುವು ಎಸಳೂರಿನ ಮಠದಲ್ಲಿರುವನೆಂದು ತಿಳಿದು ಅಲ್ಲಿಗೇ ಆಯುಧ ಸಮೇತರಾಗಿ ಬಂದಿರುತ್ತಾರೆ. ಆಗ ಅವರನ್ನು ತಡೆಯಲು ಯತ್ನಿಸಿದ ತುಂಬು ಗರ್ಭಿಣಿಯನ್ನು ಕತ್ತಿಯಿಂದ ಇರಿದು ಕೊಲ್ಲುತ್ತಾರೆ. ಅಷ್ಟೇ ಅಲ್ಲದೆ ಮಠದೊಳಗೆ ಬಂದು ಧ್ಯಾನದಲ್ಲಿ ನಿರತರಾಗಿದ್ದ, ಆ ಮಠದ ಚರಮೂರ್ತಿಯನ್ನು ಗುರುಸಿದ್ಧದೇಶಿಕನೆಂದು ಭಾವಿಸಿ ಕತ್ತಿಯಿಂದ ಇರಿದು ಕೊಲ್ಲುತ್ತಾರೆ. ಕುಮಾರಜಂಗಮನ ಈ ಸಂಚನ್ನು ಮೊದಲೇ ಅರಿತ ಗುರುಸಿದ್ಧರು ಆ ರಾತ್ರಿಯೇ ಅವರು ಗುಪ್ತಗಾಮಿನಿಯಾಗಿ ಎಸಳೂರಿನಿಂದ ಶಿರಸಿಗೆ ಹೊರಟು ಬಂದಿರುತ್ತಾರೆ.

ಶಿರಸಿಯಲ್ಲಿದ್ದ ಗುರುಸಿದ್ಧ ಜಗದ್ಗುರುಗಳಿಗೆ ಬೆಳಗಾಗುತ್ತಲೇ ಈ ವಿಷಯ ತಿಳಿಯಲು ಸ್ತ್ರೀಹತ್ಯೆ, ಭ್ರೂಣಹತ್ಯೆ ಮತ್ತು ಜಂಗಮಹತ್ಯೆಯ ಮಹಾಪಾಪದ ವರ್ತನೆಯಿಂದ ಕನಲಿದರು. ಕುಮಾರಯ್ಯನು ವೀರಶೈವಾಚಾರ ದೂರನೆಂದೂ, ಊರೂರಿನ ನೀರಿಗೂ, ಬೆಂಕಿಗೂ ಅವನು ಬಾಹಿರನೆಂದು ಶಾಸನಪತ್ರ ಹೊರಡಿಸಿ ದೇಶದೆಲ್ಲೆಡೆಗೆ ಹಂಚಿಸಿದರು. ಸಮಾಜದವರಿಂದ ಬಹಿಷ್ಕೃತಗೊಂಡ ಕುಮಾರ ಜಂಗಮ ಗುರುಸಿದ್ಧಜಗದ್ಗುರುವಿದ್ದಲ್ಲಿಗೆ ಧಾವಿಸಿ ಬಂದು 'ಈ ದ್ರೋಹ ನನ್ನಿಂದಾದುದಲ್ಲ, ನನ್ನ ಜನಗಳಿಂದಾದುದು ಕ್ಷಮಿಸಬೇಕು ಎಂದು ಬಗೆಬಗೆಯಾಗಿ ಬೇಡಿಕೊಂಡನು. ಜಂಗಮ ದ್ರೋಹಿಯ ಮುಖವನ್ನು ನೋಡಬಾರದೆಂದು ಗುರುಸಿದ್ಧರು ಮುಖ ತಿರುವಿ ಕುಳಿತುಕೊಂಡರು. ಪಶ್ಚತ್ತಾಪ ಪಟ್ಟ ಕುಮಾರನು ಎಸಳೂರಿಗೆ ಬಂದು ತನ್ನ ಕಡೆಯವರು ಕೊಂದ ಜಂಗಮನ ಸಮಾಧಿಯ ಬಳಿ ತನ್ನನ್ನು ತಾನೇ ಇರಿದುಕೊಂಡು ಮಾಡಿದ ತಪ್ಪಿಗೆ ಶಿಕ್ಷೆ ವಿಧಿಸಿಕೊಂಡನು.[೩೩]

ಕೆಳದಿ ರಾಜ್ಯದ ಕಡೆಗೆ : ಗುರುಸಿದ್ಧದೇಶಿಕರು ಸಂಚಾರ ಮಾಡುತ್ತಾ ಹಳೆಬೀಡಿಗೆ ಬರುತ್ತಾರೆ. ಆ ಊರಿನಲ್ಲಿ ಇಬ್ಬರು ಪಟ್ಟದಸ್ವಾಮಿಗಳು ನಿಷ್ಕಾಪೂರ್ಣವಾಗಿ ಭಕ್ತ ಸಮೂಹದಲ್ಲಿ ಸುಧಾರಣೆಗಳನ್ನು ಮಾಡಿ ಜನಪ್ರಿಯರಾಗಿದ್ದರು. ಇದರಿಂದಾಗಿ ಅಲ್ಲಿನ ಹಲವು ಮಠದವರಿಗೆ ಅವರು ಅಪ್ರಿಯವಾಗಿದ್ದರು. ಹೀಗಾಗಿ ಅವರು ಪಟ್ಟದ ಸ್ವಾಮಿಗಳ ವಿರುದ್ಧ ಅಪಪ್ರಚಾರ ಮಾಡತೊಡಗಿದರು. ಜಗದ್ಗುರುಗಳಿಂದ

ತಕ್ಕ ಶಾಸ್ತಿಯಾಗಬೇಕೆಂದು ಒತ್ತಾಯಪಡಿಸಿದರು. ಈ ಸಂಬಂಧವಾಗಿ ವ್ಯಾಜ್ಯ ನಿರ್ಣಯಕ್ಕೆ ಸೇರಿದ ವಿವರ "ಇಮ್ಮಡಿ ಮುರಿಗಾಗುರುಸಿದ್ಧಸ್ವಾಮಿಗಳು ಸದರಿ ಹಳೆಬೀಡು ಹೊಲೆಬಳಕೆ ಮತ್ತು ಪಂಚದ್ರೋಹದ ವ್ಯಾಜ್ಯದ ವಿಚಾರದ ದೆಸೆಯಿಂದ ಶಾಲಿವಾಹನ ಶಕೆ ೧೬೪೧ನೆಯ ವಿಕಾರಿ ಸಂವತ್ಸರದ ಪುಷ್ಯ ಮಾಸಕ್ಕೆ ಜಡೆಯಕ್ಕೆ ಬರಬೇಕೆಂದು ಸಕಲ ದೇಶಗಳ ಪೇಟೇಮನೆ, ಮಠಮಹಂತುಸ್ಥಲ, ಪರಸ್ಥಲದ ದೇಶಭಕ್ತರಿಗೆ ಆಶೀರ್ವಾದ ನಿರೂಪಗಳನ್ನು ಬರಸಿ ಕಳುಹಿಸಿದರು. ಇದೇ ಪ್ರಕಾರ ಮ.ರಾ.ಕೆಂಪಿನಸಿದ್ದ ಬಸವಸ್ವಾಮಿಗಳು ಸಹ ತಮ್ಮ ಪ್ರದೇಶದ ಭಕ್ತ ಮಹೇಶ್ವರರಿಗೆ ಆಶೀರ್ವಾದ ನಿರೂಪಗಳನ್ನು ಬರೆಯಿಸಿ ಕಳುಹಿಸಿದರು. ಸದರಿ ಉಭಯ ಸ್ವಾಮಿಗಳವರು ಬರೆಸಿ ಕಳುಹಿಸಿದ ಆಶೀರ್ವಾದ ನಿರೂಪಗಳನ್ನು ಭಕ್ತರು ನೋಡಿಕೊಂಡು ಕೆಳದಿ ರಾಷ್ಟ್ರವಾದ ಜಡೇದ ಸ್ಥಲಕ್ಕೆ ಬಂದರು.

ಈ ಜಡೇದ ಸ್ಥಲಕ್ಕೆ ತೆಲಗಡ್ಡಪೇಟೆ, ಸೀಮೆಯದೈವ, ಹಾನಗಲ್, ಆಲೂರು, ಆಡೂರು, ತಿಳುವಳ್ಳಿ, ಕಾಗಿನೆಲೆ, ಕಬ್ಬೂರ ಪೇಟೆಯ ದೈವ, ಚಿಕ್ಕೇರೂರು, ಹಿರೇಕೆರೂರು, ಹಂಸಭಾವಿ ಪೇಟೆಯದೈವ, ಇಮರಾಪುರ, ತಡಸ, ಮೀಶ್ರಿಕೋಟೆ ಪೇಟೆಯದೈವ, ಬಂಕಾಪುರ, ರಾಯರಹುಬ್ಬಳ್ಳಿ, ಮಂಗಳವಾಡದಪೇಟೆಯದೈವ, ಶಿಗ್ಗಾವಿ, ತೆಲಸಂಗ, ಜತ್ತಿ ಪೇಟೆದೈವ, ಕುಂದಗೋಳ, ಡೊಂಬಳ, ಶಿರಹಟ್ಟಿ, ಕಲ್ಲುಮುಳಗುಂದದ ಪೇಟೆಯದೈವ, ಅಗಡಿ, ಹಾವೇರಿ, ರಾಹುಪುರ, ಗುತ್ತಲ,ಹಾವನೂರು ಪೇಟೆಯ ದೈವ, ಹರಿಹರ, ರಾಣೆಬೆನ್ನೂರು ಪೇಟೆಯದೈವ, ಸೊರಬ, ಸಾಗರ, ಸಿರವಂತಿ, ಶಿವಮೊಗ್ಗ, ಹೊಳೆಹೊನ್ನೂರು, ತುರುಕರಹೊನ್ನಳ್ಳಿ, ಶಿಕಾರಿಪುರದ ಪೇಟೆಯದೈವ, ಪತ್ತೆಪೇಟೆಯ ದೈವ, ಬೀಳಗಿ, ಸಿದ್ದಾಪುರ, ಸಿರಸಿ, ಸೋದೆ, ಹುಲಿಕಲ್ಲು, ಮೇಲುಗೈ ಯಲ್ಲಾಪುರ, ಸಿಂದಗಿ, ಯಳಮಲ್ಲಿ, ದೇವರಹಿಪ್ಪರಗಿ ಪೇಟೆ ದೈವ, ಮುರುಗೋಡು, ಹೂಲಿ, ನರಗುಂದ, ನವಲಗುಂದದ ಪೇಟೆಯದೈವ, ಕಂಪಲಿ, ಕಮಲಾಪುರ, ಚಿತ್ರವಾಡಗಿ, ಹೊಸಪೇಟೆಯದೈವ, ಇಸಳೂರು ಮುಂತಾದ ಏಳುನೂರು ಪೇಟೆದೈವದವರು, ಸೆಟ್ಟರು, ಯಜಮಾನರು, ಶಾಂತಪುರದ ಒಡೆಯರು ಮುಂತಾದ ಗುರುಸ್ಥಲದ ಮೂರ್ತಿಗಳು ಒಂದು ಸಾವಿರ, ನಗರಸೀಮೆ, ಸೋದೆಸೀಮೆ, ಬೀಳಗಿಸೀಮೆ, ಧಾರವಾಡಸೀಮೆ ಈ ನಾಲ್ಕು ಸೀಮೆಗಳ ಗೌಡಾಧ್ಯರು, ನಾಡಿಗರು, ಅಂತೂ ಕೂಡಿ ನಾಲ್ಕು ಸಾವಿರ ಜನಗೌಡರು, ನಾಡಿಗರು, ನವಲಗುಂದ, ತಲವೂರು, ಹಮ್ಮಿಗಿ, ಶಿರಹಟ್ಟಿ, ಕಿತ್ತೂರು, ವಂಟಮುರಿ ಮುಂತಾದ ಐವತ್ತು ಸಾವಿರ ಪ್ರಜೆಗಳು, ಏಳುನೂರು ಚಲವಾದಿಗಳ ಹಿಡಿದು ಲೆಕ್ಕ ಮಾಡಲು ಐವತ್ತು ಸಾವಿರದ ಒಂಬೈನೂರು ಜನಗಳು ಕೂಡಿದ್ದರು.

ಈ ಸಭೆಯಲ್ಲಿ ಮುಖ್ಯಸ್ಥರು ಕಿತ್ತೂರು ದೇಸಾಯಿ, ಸೋದೆ ದೊರೆಗಳು, ನಗರದ ದೊರೆಗಳ ಮಾವನವರಾದ ಮರಿಯಪ್ಪ ಸೆಟ್ಟರು. ಹಾವೇರಿ ಆನೂರು ಸೆಟ್ಟರು, ವರದಪ್ಪಸೆಟ್ಟರು, ನವಲಗುಂದ

ನರಗುಂದದ ಸೆಟ್ಟರು. ಹುಬ್ಬಳ್ಳಿ ಬಸವಪ್ಪ ಸೆಟ್ಟರು, ಮುರುಗೋಡ ಸೆಟ್ಟರು ಮುಂತಾದ ಏಳುನೂರು ಪೇಟೆಯ ಮುಖ್ಯ ಮುಖ್ಯ ಸೆಟ್ಟರು, ದೇಸಾಯಿಗಳು, ದೊರೆಗಳು, ನಾಡಗೌಡರು, ಗೌಡರು, ನಾಡಿಗರು ಶಾಂತಪುರದ ಮರಿ ಒಡೆಯರು ಮುಂತಾದ ಪಟ್ಟದ ಚರಂತಿಗೆ ದೇವರುಗಳು, ದೇವಭಕ್ತರು ಸಹಜವಾಗಿ ಈ ಸಭೆಯಲ್ಲಿ ನಡೆಯಬೇಕಾದ ಕಾರ್ಯಗಳನ್ನು ಆಲೋಚಿಸಿದರು. ಇಷ್ಟೊಂದು ಬೃಹತ್ ಸಂಖ್ಯೆಯಲ್ಲಿ ಸೇರಿದ್ದ ಜನಗಳಿಗಾಗಿ ಮೆಣಸಿನಹಳ್ಳದ ಒಂದೆಡೆಯಲ್ಲಿ ಸೋದೆಯ ದೊರೆಗಳು, ಮತ್ತೊಂದೆಡೆ ನಗರದ ಸೀಮೆಯ ಗೌಡಾಧ್ಯರುಗಳು ಅನ್ನ ಖರ್ಚುಗಳಿಗೋಸ್ಕರವಾಗಿ ಹಂದರಗಳನ್ನು ಹಾಕಿಸಿದ್ದರು. ಉಭಯ ಸ್ವಾಮಿಗಳ ಅಪ್ಪಣೆಯ ಮೇರೆಗೆ ಭಕ್ತರು ಹಂದರಗಳಲ್ಲಿ ಇಳಿದುಕೊಂಡು ಸ್ವಾಮಿಗಳ ದರ್ಶನ ಪಡೆದು, ಸಭೆಯಲ್ಲಿ ಕುಳಿತರು"[೩೪]. ಇಮ್ಮಡಿ ಮುರಿಗಾಗುರುಸಿದ್ಧರು ಇಂತಹ ಬೃಹತ್ ಪ್ರಮಾಣದ ಸಭೆಯನ್ನು ಕರೆಯಲು ಕಾರಣವಾದ ಘಟನೆ ಹಳೆಯಬೀಡಿನ ಹೊಲೆ ಬಳಕೆ ಮತ್ತು ಪಂಚದ್ರೋಹದ ವ್ಯಾಜ್ಯ. ಈ ವಿಷಯವು ಇಲ್ಲಿ ಅಸ್ಪಷ್ಟವಾಗಿ ಮೂಡಿ ಬಂದಿದೆಯಾದರೂ ಆ ಕಾಲದಲ್ಲಿ ವೀರಶೈವ ಧರ್ಮವು ಹೋಳಾಗಿ ಅನೇಕ ಸಮಯಗಳಾಗಿ ಹಂಚಿಹೋದುದು, ಗುರು-ವಿರಕ್ತ ಪರಂಪರೆಯ ಆಚರಣೆಯ ಭಿನ್ನಾಭಿಪ್ರಾಯಗಳು ಆಗಾಗ ತಲೆ ಎತ್ತುತ್ತ ಸಮಾಜ ಸುಧಾರಣೆ ಕೈಗೊಳ್ಳುವವರಿಗೆ, ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಬೇಕೆಂಬ ವ್ಯಕ್ತಿಗಳಿಗೆ ಇಂತಹ ಘಟನೆಗಳು ಅವರಲ್ಲಿ ನಿರಾಸಕ್ತಿಯನ್ನು ಉಂಟುಮಾಡುತ್ತಿದ್ದವು ಎಂಬುದನ್ನು ಅರಿಯಬಹುದಾಗಿದೆ.

ಇಮ್ಮಡಿ ಮುರಿಗಾಗುರುಸಿದ್ಧರು ಕೆಳದಿಯ ಸಂಸ್ಥಾನದ ಕಡೆಗೆ ಹೋದಾಗ ಅಲ್ಲಿಯ ಅರಸ ಸೋಮಶೇಖರನಾಯಕನು (ಕ್ರಿ.ಶ.೧೭೧೪-೩೯) ಸ್ವಾಮಿಗಳನ್ನು ಬರಮಾಡಿಕೊಂಡು "ತಮ್ಮನ್ನು ನನ್ನ ಸಂಸ್ಥಾನದಲ್ಲಿ ಇರಿಸಿಕೊಳ್ಳಬೇಕೆಂದು ನನ್ನ ಅಪೇಕ್ಷೆ. ಅದು ಆಗುವಂತಿಲ್ಲವಾದರೆ ಚಿತ್ರದುರ್ಗದ ಪಾಳೆಯಗಾರ ದೊರೆ ತಮ್ಮ ಗುರುಗಳಿಂದ ತಮಗೆ ಶಿಖಾಪಟ್ಟ ಮಾಡಿಸಿದ ಹಾಗೆ, ಇಲ್ಲಿ ತಮ್ಮ ಮರಿಗಳೊಬ್ಬರಿಗೆ ತಾವು ಶಿಖಾಚರಪಟ್ಟಾಭಿಷೇಕ ಮಾಡಬೇಕು. ದುರ್ಗದ ಬಿಚ್ಚುಗತ್ತಿ ಭರಮಣ್ಣ ನಾಯಕನ ಪುತ್ರರಾದ ಮೇದಕೇರಿನಾಯಕರು ಗುರು ಸಂಸ್ಥಾನಕ್ಕೆ ಅವರ ಸೀಮೆಯಲ್ಲಿ ಏನೇನು ನಡಿಸಿಕೊಂಡು ಬರುತ್ತಿದ್ದಾರೋ, ಅದನ್ನೇ ನಾನು ತಮ್ಮ ಮರಿಗಳಿಗೆ ನನ್ನ ನಗರ ಸಂಸ್ಥಾನದಲ್ಲಿ ನಡೆಸಿಕೊಂಡು ಬರುತ್ತೇನೆ" ಎಂದು ಭಿನ್ನವಿಸಿಕೊಂಡಾಗ ಇದಕ್ಕೆ ಒಪ್ಪಿಗೆಯಿತ್ತ ಗುರುಸಿದ್ಧಸ್ವಾಮಿಗಳು, ಬೆಕ್ಕಿನ ಕಲ್ಲುಮಠದ ದೊಡ್ಡ ಚೆನ್ನವೀರದೇಶಿಕರೆಂಬ ತಮ್ಮ ಶಿಷ್ಯರಿಗೆ ಈಗಾಗಲೇ ಶಿವಪ್ಪನಾಯಕ, ಸ್ವಾದಿಯಸವಾಯಿ ಬಸವಲಿಂಗರಾಜರು, ತರೀಕೆರೆಯ ಪಾಳೆಯಗಾರರಾದ ದೊಡ್ಡ ರಾಮಪ್ಪ ನಾಯಕರು, ಮುಂತಾದ ರಾಜರು ಹಾಗೂ ಭಕ್ತ ಮಾಹೇಶ್ವರರಂಗಳ ಸಮಕ್ಷಮದಲ್ಲಿ ನಮ್ಮ ಚರಪಟ್ಟವನ್ನು ವಹಿಸಿಕೊಡಲಾಗಿದೆ. ಕಾರಣ ನಮ್ಮ ಪ್ರತಿನಿಧಿಗಳಾಗಿರುವ ಇವರಿಗೆ ಶಿಷ್ಯಭಾವದಲ್ಲಿ ನಡೆದುಕೊಳ್ಳಿರಿ

ಎಂದು ಹೇಳಿದರು. ನಂತರದಲ್ಲಿ ಕೆಳದಿ ಅರಸನಾದ ಸೋಮಶೇಖರನಾಯಕನು ಚಿತ್ರದುರ್ಗದ ಮುರುಘಾಮಠದ ಪ್ರತಿನಿಧಿ ಮಠವಾದ ತುಂಗಭದ್ರಾ ನದಿ ಮಧ್ಯಸ್ಥಾನದಲ್ಲಿರುವ ಬೆಕ್ಕಿನ ಕಲ್ಲುಮಠಕ್ಕೆ ನಡೆದುಕೊಂಡನು''[೨೯] ಎಂಬುದನ್ನು ಶಿವಮೊಗ್ಗ ಜಿಲ್ಲೆಯ ಆನಂದಪುರದ ಮುರಿಗೆ ಮಠದಲ್ಲಿ ದೊರೆತಿರುವ ತಾಮ್ರ ಶಾಸನವೊಂದು ತಿಳಿಸಿಕೊಡುತ್ತದೆ.

ಇಮ್ಮಡಿ ಗುರುಸಿದ್ಧರ ಬದುಕಿನ ಐತಿಹಾಸಿಕ ಘಟನೆಗಳನ್ನು ಬಿಂಬಿಸುವ ಮಡ್ನೇರಿ ಶಿವಲಿಂಗನ ಒಂದು ಹಾಡು ಈ ಕೆಳಗಿನಂತಿದೆ.

ಏನೆಂದು ಹೇಳಲೆ ನಾನಂದು ನೋಡೆಯಕ್ಕ
ಧ್ಯಾನವುಳ್ಳ ಮಹಿಮ ಪುರುಷನು।

ಮೃಡಹರ ಗುರುವು ತಾನಾಗಿ ಮರ್ತ್ಯಕ್ಕೆ ಬಂದು
ದೃಢವುಳ್ಳ ಭಕ್ತರಿಗೊಲಿವನು
ಬಿಡದೆ ಎಂಬತ್ತು ನಾಲ್ಕು ಕೋಟಿ ಜೀವಿಗಳೆಲ್ಲ
ಅಡಿಗಡಿಗೆ ಶರಣೆಂಬೊರೆ ನೋಡೆಯಕ್ಕ ॥

ಧರೆಯೊಳು ಚಿನ್ಮನದುರ್ಗದ ಅರಸು ಮದಕರಿಯ
ಜರಿದು ಭಕ್ತಿಯನುವಲ್ಲದಲೆ
ಉರವಣಿಸುತ ತಾವು ಚರಮೂರ್ತಿಗಳುಯೆಲ್ಲ
ಭರದಿ ಸೋದೆಯ ಪೊಕ್ಕರು ನೋಡೆಯಕ್ಕ ॥

ಒಲುಮೆಯ ಶಿವಭಕ್ತನು ಬಸವಲಿಂಗರಾಜ
ನೊಲಿದು ಬೇಡಿದುದ ನೀಡುವರೆ
ಒಲವಿಂದ ಬಿಟ್ಟುತಾವುಹಳಿದು ಭಕ್ತಿಯನೆಲ್ಲ
ಗೆಲವಿಂದನಡದು ಬೀಳಗಿಗೆ ನೋಡೆಯಕ್ಕ ॥

ತಿಳಿದುಸದ್ಭಕ್ತರೆಲ್ಲರು ಅರಸನೊಂದಾಗಿ
ಸುಳಿವ ಪಾವನ ಮೂರ್ತಿಯು
ಇಳೆಯೊಳು ಬಡವರ ಭಕ್ತಿಯ ಕೈಕೊಂಡು
ತಳುವದೆ ಸಾಗರಕೆ ನಡೆದುನೋಡೆಯಕ್ಕ ॥

ಆದಿ ಮಾರ್ಗವಪಿಡಿದು ಸೋಮಶೇಖರರು
ಸಾಧಿಸಿ ಭಕ್ತಿಮಾರ್ಗವನು
ಮೇದಿನಿಯೊಳು ಬಸವಪ್ರಭುವ ಪೂಜಿಸುವಂತೆ
ಮಾದೇವಷಟ್ಸ್ಥಲಮೂರ್ತಿಗಳನೋಡೆಯಕ್ಕ ॥[೩೦]

ಹೀಗೆ ಮುಂದುವರಿಯುವ ಈ ಸೊಗಸಾದ ಹಾಡಿನಲ್ಲಿ ಗುರುಸಿದ್ಧರ ಜೀವನದ ಪ್ರಮುಖ ಘಟನೆಗಳನ್ನು ನಿರೂಪಿಸುತ್ತಾನೆ. ಮಹಾದೇವಕವಿಯು ತನ್ನ ಕಾವ್ಯದಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಸಹವರ್ತಿಗಳಾದ ಕುಮಾರ, ಚೀಲಾಳ ಇವರೊಡನೆ ಉಂಟಾದ ಮನಸ್ತಾಪ, ಅದಕ್ಕೆ ಪ್ರತೀಕಾರ

ತೀರಿಸಿಕೊಳ್ಳಲು ಕುಮಾರನು ಕೈಗೊಂಡ ಹೇಯ ಕೆಲಸ, ಚೀಲಾಳ ಹರಪನಹಳ್ಳಿಯಲ್ಲಿ ಆಶ್ರಯ ಪಡೆದದ್ದು ಇವುಗಳನ್ನು ಮಾತ್ರ ವಿವರಿಸಿದ್ದಾನೆ. ಆದರೆ ಮಡ್ಲೇರಿಶಿವಲಿಂಗನು ತನ್ನ ಚಿಕ್ಕದಾದ ಈ ಹಾಡಿನ ಮೂಲಕ ಚಿತ್ರದುರ್ಗದ ನಾಯಕ ಅರಸು ಮದಕರಿಗೂ ಹಾಗೂ ಇಮ್ಮಡಿಗುರುಸಿದ್ಧರಿಗೂ ಉಂಟಾದ ಮನಸ್ತಾಪದ ವಿಶೇಷ ಪ್ರಸಂಗದ ಮೇಲೆ ಬೆಳಕು ಚೆಲ್ಲುತ್ತಾನೆ. ಈತನ ಭಕ್ತಿಯನ್ನು ಜರಿದು ಚರಮೂರ್ತಿಗಳ ಸಮೇತ ಸೋದೆಗೆ ಹೊರಡುತ್ತಾರೆ. ಅಲ್ಲಿ ಬೇಡಿದುದನ್ನು ನೀಡುವ ಬಸವಲಿಂಗರಾಜನ ಆಶ್ರಯದಲ್ಲಿ ನಿಲ್ಲದೆ ಬೀಳಗಿಗೆ ಹೋಗಿ ಮುಂದೆ ಸಾಗರಕ್ಕೆ ಪಯಣಬೆಳೆಸುತ್ತಾರೆ.

ನಾಕು ದಿಕ್ಕಿನ ಅರಸುಗಳು ಬಿನ್ನಕ್ಕೆಕಳುಹೆ
ಸಾಕು ಎಂಬುತ ಧಿಕ್ಕರಿಸಿ
ಬೇಕಾದ ಭಕ್ತನಿರ್ವಾಣೇಂದ್ರನ ಭಕ್ತಿಗೊಲಿದು
ಏಕವಾಗಿಯೆ ಬೆರೆದುದನೋಡೆಯಕ್ಕ ||

ನಾಲ್ಕು ದಿಕ್ಕಿನ ರಾಜರು ಭಿನ್ನಹಕ್ಕೆ ಕರೆದರೂ ಹೋಗದೆ ಅದನ್ನು ತಿರಸ್ಕರಿಸಿದ್ದಾರೆ. ಕಾರಣ ರಾಜರ ಬಗೆಗೆ ಅಸಹ್ಯ ಹುಟ್ಟಿಸುವಷ್ಟರ ಮಟ್ಟಿಗೆ ಮದಕರಿನಾಯಕನು ಇಮ್ಮಡಿ ಮುರಿಗಾಗುರುಸಿದ್ಧರ ಬಳಿ ವರ್ತಿಸಿರಬೇಕು. ಸಾಗರದಲ್ಲಿ ಸೋಮಶೇಖರನಾಯಕನ ಮಂತ್ರಿಯಾಗಿದ್ದ ನಿರ್ವಾಣೇಂದ್ರನಿಗೆ ಒಲಿದು ಅಲ್ಲಿ ಕೆಲವು ಕಾಲ ನೆಲಸಿ ತನಗೆ ಮೃತ್ಯು ಸಮೀಪಿಸಿದುದನ್ನು ಅರಿತ ಗುರುಸಿದ್ಧರು ಗಣ ಸಮೂಹ ವನ್ನು ನೋಡುತ್ತ 'ಕಂದಗೊರಳನ ದಯವು ಸಂದಿತು' ಎಂದು ಹೇಳಿ ಆನಂದಪುರದಲ್ಲಿ ಲಿಂಗೈಕ್ಯರಾದರು. ಗುರುಸಿದ್ಧರು ಜಗವ ಕೈಬಿಟ್ಟನೆಂಬುದನು ಕೇಳಿ ನಿರ್ವಾಣೇಂದ್ರನು ಗುರುದರ್ಶನಕ್ಕೆ ಹೋಗಿ ಕಂಬನಿ ಮಿಡಿಯುತ್ತಾನೆ. ಈಗಲೂ ಆನಂದಪುರದಲ್ಲಿ ಇರುವ ಇಮ್ಮಡಿ ಮುರಿಗಾಗುರುಸಿದ್ಧರ ಸಮಾಧಿಯು ಮಡ್ಲೇರಿ ಶಿವಲಿಂಗನ ಹಾಡಿನ ಯಥಾರ್ಥತೆಯನ್ನು ಸೂಚಿಸುತ್ತದೆ. ಹೀಗೆ ಸಮಾಜದ ಉದ್ಧಾರಕ್ಕಾಗಿ ನಿರಂಜನ ಸಿಂಹಾಸನವೇರಿದ್ದ ಪ್ರಸ್ತುತ ಗುರುಗಳು ಸಮಾಜ ಘಾತುಕರನ್ನು ಬಹಿಷ್ಕರಿಸಿ, ದುರಾಚಾರ ಪರವಾದ ಭಕ್ತ-ಮಾಹೇಶ್ವರರ ಸೊಕ್ಕು ಮುರಿದು ಪರಮತದವರನ್ನು ತಮ್ಮ ಪಾಂಡಿತ್ಯದಿಂದ ಗೆಲಿದು, ಶಿವಾಚಾರದ ಏಳ್ಗೆಯನ್ನುಂಟು ಮಾಡಿ, ಶರಣು ಬಂದವರನ್ನು ರಕ್ಷಿಸುತ್ತಾ ಶಿವಮೊಗ್ಗ ಜಿಲ್ಲೆಯ ಆನಂದಪುರಕ್ಕೆ ಬಂದರು. ಅಲ್ಲಿ ತಮ್ಮ ಜೀವಿತದ ಅವಧಿ ಪೂರೈಸಿತೆಂದು ಯೋಗ ದೃಷ್ಟಿಯಿಂದ ಅರಿತು ಸೋದೆಯಚನ್ನಬಸವರಿಗೆ ಶೂನ್ಯಪೀಠದ ಪಟ್ಟವನ್ನು ಕಟ್ಟಿ ಲಿಂಗೈಕ್ಯರಾದರು.

ವ್ಯಕ್ತಿತ್ವ

ಸೋದೆಯ ಸದಾಶಿವರಾಯನು ತನ್ನ ಸ್ವರವಚನಗಳಲ್ಲಿ ಇಮ್ಮಡಿಗುರುಸಿದ್ಧರನ್ನು 'ಶರಣಾಗತ ಪರಿಪಾಲಕ', 'ಭಕ್ತಪ್ರಿಯ', 'ಪರ್ವತಮಯ', 'ಸರ್ವಜ್ಞ', 'ಕವಿತಾಧೀಶ', 'ಕಾವ್ಯರಚನಾನಿಪುಣ', 'ಸತ್ಯಪ್ರಿಯ', 'ಕರುಣಾಸಾಗರ' ಎಂದು ಅವರ ವ್ಯಕ್ತಿತ್ವದ ಒಂದೊಂದು ಮುಖವನ್ನು ಪರಿಚಯಿಸುತ್ತಾನೆ.

ಅಲ್ಲದೆ ದೈವ ಸಂಕಲ್ಪದ ಮೇರೆಗೆ ಈ ರೀತಿಯ ಸ್ವಾಮಿಗಳು ವೀರಶೈವ ಧರ್ಮಕ್ಕೆ ಆಘಾತ ಒದಗಿದಾಗಲೆಲ್ಲ ಅದನ್ನು ಪರಿಹರಿಸಲು ಭೂಮಿಯಲ್ಲಿ ಅವತಾರವೆತ್ತುತ್ತಾರೆ ಎಂಬ ಪೌರಾಣಿಕ ಶೈಲಿಯ ನಿರೂಪಣೆ, ಕೃತಜ್ಞತಾಭಾವ, ಗುರುಭಕ್ತಿಯು ಈ ಕೆಳಗಿನ ಸ್ವರವಚನದಲ್ಲಿ ಮೂಡಿಬಂದಿದೆ.

ಜಂಗಮದೊಳು ವಿಶ್ವಾಸಿಯ
ಜಂಗಮಕಂಸ್ವಯ ಶಾಸ್ತ್ರವನುಭವನೀವ
ಜಂಗಮವನಗಲದಿರುತಿಹ
ಜಂಗಮವೆಶಾಂತವೀರಗುರುಸಿದ್ಧೇಶ ||೩||

ಭಕ್ತರ ಹೃದಯದಲಿಹ
ಭಕ್ತರ ಧರ್ಮಾರ್ಥಕಾಮಮೋಕ್ಷಪ್ರದನೆ
ಭಕ್ತರ ಲಿಂಗಾಕಾರನೆ
ಭಕ್ತಪ್ರಿಯ ಶಾಂತವೀರಗುರುಸಿದ್ಧೇಶ ||೪||

ಸರ್ವಕುವಾದಿಗಳೊಳಗಿಹ
ಗರ್ವವಪರಿಹರಿಸಿದಂತ ಘನಮಹಿಮನೆ ನೀ
ಪರ್ವತ ಸಮಧೈರ್ಯವಂತನೆ
ಸರ್ವಜ್ಞ ಶಾಂತವೀರಗುರುಸಿದ್ಧೇಶ ||೫||

ನಿತ್ಯಶಿವಲಿಂಗಾಚಾರ
ಕೃತ್ಯದಲಾಸ್ತಕ ಕಾವ್ಯರಚನಾನಿಪುಣ
ಭೃತ್ಯಪೋಷಣವ ಮಾಳ್ಪನೆ
ಸತ್ಯಪ್ರಿಯ ಶಾಂತವೀರ ಗುರುಸಿದ್ಧೇಶ||೬||[೩೭]

ಇಲ್ಲಿ 'ಜಂಗಮ' ಎಂಬ ಶಬ್ದಕ್ಕೆ 'ಚಲನಶೀಲತೆ' 'ಗತಿಶೀಲತೆ' ಎಂಬ ಅರ್ಥಬರುತ್ತದೆ. ನಿರಂತರ ಬದಲಾವಣೆಯಲ್ಲಿ ನಂಬಿಕೆಯುಳ್ಳವನು, ಶಾಸ್ತ್ರಗಳನ್ನು, ಅನುಭಾವವನ್ನು ಬಲ್ಲವನು, ಜಂಗಮವನ್ನು ಬಿಡದೆ ಜಂಗಮತ್ವಕ್ಕೆ ಜಂಗಮವೇ ಆದ ಸ್ವರೂಪನು ಎಂಬಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಧಾರ್ಮಿಕ, ಸಾಮಾಜಿಕ ಸಾಹಿತ್ಯಿಕ ವ್ಯಕ್ತಿತ್ವವನ್ನು ಕವಿ ತಿಳಿಸುತ್ತಾನೆ.

'ಸರ್ವಕುವಾದಿಗಳೊಳಗಿಹಗರ್ವವ ಪರಿಹರಿಸಿದ' ಎಂಬ ಮಾತಿನಲ್ಲಿ ಕೇವಲ ಸ್ಥಾನ, ಕೀರ್ತಿಗಳಿಕೆಯಲ್ಲಿ ಆಸಕ್ತಿ ತಳೆದ ಸಹಪಾಠಿಗಳಾದ ಕುಮಾರ, ಚೀಲಾಳ, ಸ್ವಾಮಿಗಳನ್ನು ಎದುರಿಸಿದ ರೀತಿ ಅಲ್ಲಿ ಅವರು ತೋರಿದ ಧೈರ್ಯ, ಸಂಯಮ, ತಾಳ್ಮೆಗಳನ್ನು ಸೂಚಿಸುತ್ತವೆ. 'ನಿತ್ಯಶಿವಲಿಂಗಾಚಾರ', 'ಕೃತ್ಯದಲಾಸಕ್ತ', 'ಕಾವ್ಯರಚನಾ ನಿಪುಣ', 'ಸತ್ಯಪ್ರಿಯ' ಎಂಬ ವರ್ಣನೆಗಳು ಅವರ ಗುಣಗಳಿಗೆ ಹಿಡಿದ ಕನ್ನಡಿಯಾಗಿದೆ. ನಿತ್ಯವೂ ಅವರು ನಡೆಸಿಕೊಡು ಗುರು-ಲಿಂಗ-ಜಂಗಮರ ಸೇವೆ ಅವಿರತ ಪರಿಶ್ರಮದಿಂದ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಕೃತಿ ರಚನೆ ಮಾಡಿದ ರೀತಿ, ಹಳೆಬೀಡಿನ ಪಟ್ಟದಸ್ವಾಮಿಗಳಿಗೆ ಅಂಟಿದ ಅಪವಾದ-ಆರೋಪಗಳನ್ನು ಸೂಕ್ತವಾಗಿ ಚರ್ಚಿಸಿ ನೀಡಿದ ತೀರ್ಪು, ಕುಮಾರಜಂಗಮನಿಂದ ಕಿವಿ

ಕಚ್ಚಿಸಿಕೊಂಡು ಕುಳಿತ ಸದಾಶಿವರಾಯನನ್ನು ಮರುಚಿಂತನೆಗೀಡು ಮಾಡಿ ಅರಸನ ನಡತೆ ತಿದ್ದಿಕೊಳ್ಳುವಂತೆ ಮಾಡಿದ್ದು ಇವೆಲ್ಲವು ಗುರುಸಿದ್ಧರ ವ್ಯಕ್ತಿ ವಿಶೇಷತೆಗಳಾಗಿವೆ.

ಮಡ್ನೇರಿ ಶಿವಲಿಂಗನು ತನ್ನ ಸ್ವರವಚನಗಳಲ್ಲಿ ಅಭಿಮಾನದ ಮಹಾಪೂರವನ್ನೇ ಹರಿಸಿದ್ದಾನೆ.[೩೮] ಮುರಿಗಾಸಂಪ್ರದಾಯದ ಶ್ರೀ ಶಾಂತವೀರರು ಮತ್ತು ಇಮ್ಮಡಿ ಮುರಿಗಾಗುರುಸಿದ್ಧರು ಇವರಿಬ್ಬರೂ ಕಾರಣಿಕ ಪುರುಷರೆಂಬಂತೆ ತನ್ನ ಹಾಡುಗಳಲ್ಲಿ ಚಿತ್ರಿಸಿದ್ದಾನೆ.

ಹಿರಿಯನೆ ನಮ್ಮಯ್ಯ ಹಿರಿಯ ತಾನೆ
ಧರೆಗೀಶ ಮುರಿಗೆ ಇಮ್ಮಡಿ ಗುರುಸಿದ್ಧನು ||

ಈತನನ್ನು ಹಿರಿಯ ಅಯ್ಯನೆಂದು ಶಿವನೊಡನೆ ಸಮೀಕರಿಸಲು ಯತ್ನಿಸುತ್ತಾನೆ. ಈಶ್ವರನಿಗೆ ಸಂಬಂಧಿಸಿದ ಅರ್ಧನಾರೀಶ್ವರ ಕಲ್ಪನೆ, ತ್ರಿಪುರಸಂಹಾರ, ಸಮುದ್ರಮಥನ, ಮೊದಲಾದ ಲೀಲೆಗಳನ್ನು ಶಿವನ ಅಂಶವೆಂದು ಭಾವಿಸುವ ಗುರುಸಿದ್ಧನಿಗೂ ಈ ಸ್ವರವಚನಗಳಲ್ಲಿ ಆರೋಪಿಸಲಾಗಿದೆ.

ಉರ್ವಿಯೊಳಧಿಕವಾದ ಕೆಳದಿಭೂಪ
ಅರಸು ಸೋಮಶೇಖರಗೆ
ಅರ್ಧಾಂಗವಾಗಿರ್ದ ನಿರ್ವಾಣೇಂದ್ರಗೆ
ಸರ್ವ ಸಾಮ್ರಜ್ಯ ಪದವೀವನೆ ಸಿದ್ಧೇಶ ||

ಕೆಳದಿಯ ಅರಸು ಸೋಮಶೇಖರನ ಅರ್ಧಾಂಗವಾಗಿದ್ದ (ಮಂತ್ರಿ) ನಿರ್ವಾಣೇಂದ್ರ ಎಂಬುವವನಿಗೆ ಮೋಕ್ಷ ಪದವಿಯನ್ನು ಕರುಣಿಸಿ ಆನಂದಪುರ ಎಂಬ ಗ್ರಾಮದಲ್ಲಿ ಇಷ್ಟಲಿಂಗ ಪೂಜೆಯಲ್ಲಿ ಬೆರೆತೆ ಎನ್ನುತ್ತಾನೆ. ಕಾಶೀ ಗುರುಲಿಂಗಶಿವಯೋಗಿ ತನ್ನ 'ಶಿವಸೂತ್ರ ಟೀಕೆ' ಗ್ರಂಥದ ಆದಿ ಮತ್ತು ಅಂತ್ಯದಲ್ಲಿ ಅನೇಕ ವಿಶೇಷಣಗಳಿಂದ ಸ್ತುತಿಸಿರುವನು.

ಆದಿಯಲ್ಲಿ

ದ್ವಿತೀಯ ಮುರಿಗಾಸಂಜ್ಞಂ ಷಟ್ಸ್ಥಲಜ್ಞಾನವರ್ತಿನಂ
ಸರ್ವತತ್ತ್ವವಿದಂವಂದೇ ಗುರುಸಿದ್ಧೇಂದ್ರಯೋಗಿನಾಂ ||೧||

ಗುರುಲಿಂಗಾಭಿಧೇಯೇನ ಮಾಯಾಲೋಕಹಿತಾರ್ಥಿನಾ
ರಚ್ಯತೇಶಿವಸೂತ್ರಾಣಾಂ ಟೀಕಾಕರ್ನಾಟಭಾಷಾಯಾ ||೨||

ಅಂತ್ಯದಲ್ಲಿ

"ಶ್ರೀಮದ್ದೇಶಿಕೇಂದ್ರ ಕೃಪಾಪಾಂಗಸಾಂದ್ರ ಚಂದ್ರಿಕಾದರ
ದಳಿತ ಹೃದಯ ಕೈರವ ಸಕಲವೇದಾಗಮಪುರಾಣೇತಿ
ಹಾಸಾದಿ ನಾನಾಶಾಸ್ತ್ರಕೋವಿದ ವೀರಮಾಹೇಶ್ವರ ದ್ವಿತೀಯ
ಮುರಿಗಾಖ್ಯ ಗುರುಸಿದ್ಧಯೋಗಿಂದ್ರ ಬೋಧಿತ ವಿರೂಪಾಕ್ಷ
ಪಂಚಾಶಿಕಾಗಮಾದಿತತ್ತ್ವ ಪ್ರಕರಣಾರ್ಥಶಾಲಿನಾಶಂಭು

ಲಿಂಗ ಸಾಕ್ಷಾತ್ಕಾರ ಸಕಲಶರೀರೇಂದ್ರಿಯನವದ್ವಾರೇಣ
ವೀರಮಾಹೇಶ್ವರಾಧ್ಯಪ್ರವರ್ತಕೇನ ಕಾಶೀಗುರುಲಿಂಗಾಖ್ಯ
ಶಿವಯೋಗೀಶ್ವರೇಣ ವಿರಚಿತಾಯಾಕರ್ನಾಟಭಾಷಾಟೀಕಾಯಾಂ"||

ಇದೇ ರೀತಿ ಮಲ್ಲಿಕಾರ್ಜುನ ಸ್ತೋತ್ರ, ದೇವೀಸ್ತೋತ್ರ, ದೇವಷ್ಟಕ ಎಂಬ ಕೃತಿಗಳನ್ನು ರಚಿಸಿರುವ 'ಮರುಳೇಶ'ನೆಂಬ ಕವಿಯು ತನ್ನ ಕೃತಿಗಳ ಕೊನೆಯಲ್ಲಿ ಗುರುಸಿದ್ಧರನ್ನು ಭಕ್ತಿಯಿಂದ ಸ್ತುತಿಸಿರುವನು. ಹೆಸರು, ಕಾಲ, ದೇಶ ತಿಳಿಯದ ಅಜ್ಞಾತ ಕವಿಯೊರ್ವನು ಇವರನ್ನು ಶಿವನ ಪ್ರತಿರೂಪದಂತೆ ಕಂಡು ಅವನೇ ಇವನು ಎಂಬಂತೆ ಹೋಲಿಕೆಗಳೊಡನೆ ಹಾಡಿ ಹೊಗಳುತ್ತಾನೆ.

ಬಾರೆನ್ನಯ್ಯನೇ ಭಾಗ್ಯ ನಿಧಿಯೆ ಬಾ ಭಕ್ತಚಿಂತಾಮಣಿ
ಬಾರೆನ್ನಾದಿ ಅನಾದಿಕರ್ತುಸತತಂ ಬಾರೆನ್ನ ರಕ್ಷಿಪ್ಪನೇ
ಬಾರೆನ್ನ ಭವವಟ್ಟಿ ಮೆಟ್ಟಿದಭವಾ ಬಾ ಮನ್ಮನೋಪ್ರಿಯನೇ
ಬಾರಾ ಷಡುಸ್ಥಲ ಚಕ್ರವರ್ತಿ ಮುರಿಗಂ ಲಿಂಗಂ ಗುರುಸಿದ್ಧನೇ ||೧||

ಬಾ ರಾಜೇಂದ್ರ ಕಿರೀಟ ಮದನಾ ಬಾ ಗರ್ವವಿಚ್ಛೇದನಾ
ಬಾರಾ ಬಾ ಗಜ ದೈತ್ಯ ಚರ್ಮವದನಾ ಬಾ ಅಂಧಕ ಸಂಹಾರಾ
ಬಾರಾ ಬಾ ಫಣಿರಾಜಕರ್ಣಕಟಿಕಾ ಬಾ ಹರಿಮದನಾರಿ ಬಾ
ಬಾರಾ ಬಾ ಗುರುಸಿದ್ಧಲಿಂಗ ಮುರಿಗಾಂ ಲಿಂಗಂ ಗುರುಸಿದ್ಧನೇ ||೨||"

ಎಂದು ಎಂಟು ಪದ್ಯಗಳಲ್ಲಿ ಗುರುಸಿದ್ಧರನ್ನು ಭಾಗ್ಯದ ನಿಧಿ, ಭಕ್ತಚಿಂತಾಮಣಿ, ಅನಾದಿಕರ್ತು, ಮನ್ಮನೋಪ್ರಿಯ, ಷಡುಸ್ಥಲ ಚಕ್ರವರ್ತಿ, ರಾಜೇಂದ್ರ ಕಿರೀಟ, ಗರ್ವವಿಚ್ಛೇದಕ, ಗಜದೈತ್ಯ, ಅಂಧಕ ಸಂಹಾರ, ಫಣಿರಾಜ ಕರ್ಣಕಟಿಕಾ, ಹರಿಮದನಾರಿ, ಬ್ರಹ್ಮಕಪಾಲ, ಶೂಲವಾಂತಕ, ತ್ರಿಪುರಸಂಹಾರ, ನಂಜುಂಡ, ಪಂಕಜನಾಭನ ಕಣ್ಣು, ನೇತ್ರಗಣ್ಣ, ಶಿವನ ಅರ್ಧಾಂಗಿ, ಬಾಣನ ಬಾಗಿಲ ಕಾಯ್ದುವ, ಚನ್ನನ ಅಂಬಲಿಗೆ ಮನಸುಗೊಟ್ಟವ, ಗೊಲ್ಲಾಳನಿಗೆ ಒಲಿದಾತ ಎಂದು ಶಿವನ ಪಂಚವಿಶಂತಿ ಲೀಲೆಗಳೊಡನೆ ಗುರುಸಿದ್ಧರನ್ನು ಹೋಲಿಸಿ ಅಭೇದ್ಯವಾಗಿ ಕಾಣುತ್ತಾನೆ. ಅಲ್ಲದೆ ಅವನ ಭಿನ್ನಹಗಳನ್ನು ಪ್ರೀತಿಯಿಂದ ಆಲಿಸಿದರೆ ನನ್ನ ದೇಹವನ್ನೇ ನೀಡುವೆ. ನೀನು ಸಂತೋಷಗೊಳ್ಳುವುದಾದಲ್ಲಿ ಮನಮುಟ್ಟಿ ಸದಾಕಾಲ ನಿನ್ನಯ ಸೇವೆಯನ್ನು ಮಾಡುವೆ ಎನ್ನುತ್ತಾನೆ. ಈ ಅಜ್ಞಾತ ಕವಿಯು ಬರೆದಿರುವ ಸ್ತವನವು ಗುರುಸಿದ್ಧರ ವ್ಯಕ್ತಿತ್ವದ ಘನತೆಯನ್ನು ಮನಬಿಚ್ಚಿ ತುಂಬಿದ ಭಕ್ತಿಭಾವದಿಂದ ತಲ್ಲೀನನಾಗಿ ಹಾಡಿರಬೇಕಾದರೆ ಇಮ್ಮಡಿ ಮುರಿಗಾಗುರುಸಿದ್ಧರ ವ್ಯಕ್ತಿತ್ವ ನಿಜಕ್ಕೂ ಭವ್ಯವಾಗಿರಬೇಕು, ಮೇರು ಸದೃಶವಾಗಿರಬೇಕು.

(ಚಿತ್ರದುರ್ಗ ನಾಯಕ ಅರಸರ ಮನೆತನದ ಗುರುಗಳಾಗಿ, ವೀರಶೈವ ಧರ್ಮದ ಆದ್ಯಂತ ವ್ಯಕ್ತಿಗಳಾಗಿ, ಸಾಮಾಜಿಕ ಸಮಸ್ಯೆಗಳ ಪರಿಹಾರಕರಾಗಿ, ವಿದ್ವತ್ ಪರಿಣತರಾಗಿ, ಪರಮತವಾದಿಗಳನ್ನು, ಸ್ವಮತವಿರೋಧಿಗಳನ್ನು ನಿಗ್ರಹಿಸಿ, ತಮ್ಮ ಜಂಗಮ ಶಕ್ತಿಯನ್ನು ತೋರಿದವರಾಗಿದ್ದಾರೆ.

‘ಗುರುಸಿದ್ಧರಂತಹ ಘನವಿದ್ವಾಂಸರು ವೀರರು ಮತ್ತು ವಿರಾಗಿಗಳು, ಮಠದ ಸ್ವಾಮಿಗಳಾದರೆ ಸುವರ್ಣಯುಗ ಬಹಳ ದೂರವಿಲ್ಲ’[೪೦] ಎಂಬ ಡಾ.ಎಲ್. ಬಸವರಾಜು ಅವರ ಹೇಳಿಕೆಯೂ ಕೂಡ ಗುರುಸಿದ್ಧರ ವ್ಯಕ್ತಿತ್ವಕ್ಕೆ ಪ್ರಮಾಣ ಪೂರ್ವಕವಾಗಿ ಹೇಳಿದ ಅನಿಸಿಕೆಯಾಗಿದೆ. ಹೀಗೆ ನಂಜನಗೂಡಿನ ಪ್ರಾಂತ್ಯದಲ್ಲಿ ಹುಟ್ಟಿ, ಸೋಮಶೇಖರಶಿವಯೋಗಿ, ಕುಂಬಪಲ್ಲಿಬಸವಲಿಂಗ ಶಿವಯೋಗಿಗಳ ಪರಿಸರದಲ್ಲಿ ಬೆಳೆದು, ಮುಂದೆ ಮುರಿಗಾಶಾಂತವೀರರಿಂದ ಚಿತ್ರದುರ್ಗಮಠಾಧಿಪತಿಯಾಗಿ ಉದಿತೋದಿತರಾಗಿ, ದೇಶಪರ್ಯಟನೆ ಕೈಗೊಂಡು ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಆರಾಧನೆ ಮಾಡಿದ ಇಮ್ಮಡಿ ಮುರಿಗಾಗುರುಸಿದ್ಧರು ಸುಮಾರು ೮೧ ವರ್ಷಗಳ ಕಾಲ ಜೀವಿಸಿ, ನಾಡು-ನುಡಿಗಳನ್ನು ಶ್ರೀಮಂತಗೊಳಿಸಲು ಇವರು ಪಟ್ಟ ಪರಿಶ್ರಮ ಬಹುಮುಖವಾದದ್ದು.

ಅಡಿಟಿಪ್ಪಣಿಗಳು

೧. ಜಿ.ಎ. ಶಿವಲಿಂಗಯ್ಯ(ಲೇ) ಇಮ್ಮಡಿ ಮುರಿಗೆಯ ಗುರುಸಿದ್ಧ ದೇಶೀಕೇಂದ್ರರು, ಭೂಷಣ, ಪು.೨೨೩

೨. ಎಂ.ಎಸ್. ಬಸವರಾಜಯ್ಯ(ಸಂ), ಕವಿಕರ್ಣರಸಾಯನ, ಸರ್ಗ, ೧.ಪದ್ಯ.೫೪

೩. ಜಿ. ಮರುಳಸಿದ್ಧಯ್ಯ(ಸಂ), ಪ್ರಭುಲೀಲೆ ಸರ್ಗ ೧, ಶ್ಲೋಕ ೨೯ ರಿಂದ ೩೯

೪. ಎಸ್. ಶಿವಣ್ಣ(ಸಂ), ಇಮ್ಮಡಿ ಮುರಿಗಾಗುರುಸಿದ್ಧರ ಸ್ವರವಚನಗಳು, ವಚನ ೫೧

೫. ಮ. ಮಲ್ಲಪ್ಪ, (ಲೇ), ಉದ್ಧಾನಶಿವಯೋಗಿ, ಕೈವಲ್ಯ, ಪು.೧೭೩

೬. ನೋಡಿ: ಅನುಬಂಧ ಸಂಖ್ಯೆ ೧

೭. ಮ. ಮಲ್ಲಪ್ಪ (ಲೇ), ಇಮ್ಮಡಿ ಮುರಿಗಾಗುರುಸಿದ್ಧರು, ಬಸವಪಥ, ಸಂಚಿಕೆ ೧೯, ಸಂ.೧, ೧೯೯೭, ಪು.೪೭

೮. ಆರ್. ನರಸಿಂಹಾಚಾರ್(ಸಂ), ಕರ್ನಾಟಕ ಕವಿ ಚರಿತೆ, ಸಂ.೩, ಪು.೨೫೧

೯. ಜಿ. ಮರುಳಸಿದ್ಧಯ್ಯ(ಸಂ), ಪ್ರಭುಲೀಲೆ ಪೀಠಿಕೆ, ಪು.xi

೧೦. ಮ.ಮಲ್ಲಪ್ಪ(ಲೇ), ಇಮ್ಮಡಿ ಮುರಿಗಾಗುರುಸಿದ್ಧರು, ಬಸವಪಥ, ಸಂ.೧೯, ಸಂ.೧, ಪು.೫೦

೧೧. ಎಸ್. ವಿದ್ಯಾಶಂಕರ(ಸಂ), ಇಮ್ಮಡಿ ಮುರಿಗಾಗುರುಸಿದ್ಧರ ಕೃತಿಗಳು. ಪೀಠಿಕೆ. ಪುಟ xxvi

೧೨. ಬಿ.ಆರ್. ಹಿರೇಮಠ(ಸಂ), ಇಮ್ಮಡಿ ಮುರಿಗಾಗುರುಸಿದ್ಧರ ಐದು ಕೃತಿಗಳು ಪೀಠಿಕೆ, ಪು.೧

೧೩. ಎಸ್. ಶಿವಣ್ಣ(ಸಂ), ಇಮ್ಮಡಿ ಮುರಿಗಾಗುರುಸಿದ್ಧರು ಸ್ವರವಚನಗಳು. ಪೀಠಿಕೆ.ಪು.vIII

೧೪. ಜಿ. ಮರುಳಸಿದ್ಧಯ್ಯ(ಸಂ), ಪ್ರಭುಲೀಲೆ, ಪೀಠಿಕೆ, ಪು.xxi

೧೫. ಎಫಿಗ್ರಾಫಿಯಾ ಕರ್ನಾಟಿಕಾ. ಸಂ. VII ಹೊನ್ನಾಳಿ. ಪು.೪೦೬

೧೬. ಶಾಮಶಾಸ್ತ್ರಿ(ಸಂ), ಕೆಳದಿನೃಪವಿಜಯ, ಆಶ್ವಾಸ-೧೧. ಪದ್ಯ -೧೮

೧೭. ನೋಡಿ: ಸದ್ಧರ್ಮದೀಪಿಕೆ ಸಂಚಿಕೆ ೪೫-೪೬, ೧೯೨೮, ಪು.೧೫೧.

೧೮. ಎಂ.ಎಸ್. ಬಸವರಾಜಯ್ಯ (ಸಂ) ಕವಿಕರ್ಣರಸಾಯನ, ಪೀಠಿಕೆ, ಪು.೪

೧೯. ಶ್ರೀನಿವಾಸ ಜೋಯಿಸರು ಹುಲ್ಲೂರು (ಸಂ) ಕಪೋತವಾಕ್ಯ. ಪೀಠಿಕೆ.ಪು.೮

೨೦. ಜಿ. ಮರುಳಸಿದ್ದಯ್ಯ(ಸಂ), ಪ್ರಭುಲೀಲೆ, ಪೀಠಿಕೆ, ಪು.xiii

೨೧. ಕೆ. ಬಸಪ್ಪ(ಲೇ), ಪಟ್ಟವಲ್ಲರಿ, ಜಂಗಮಜ್ಯೋತಿ, ಸ್ಮರಣ ಸಂಚಿಕೆ, ೧೯೭೫, ಪು.೭

೨೨. ಎಂ.ಎಸ್. ಬಸವರಾಜಯ್ಯ(ಸಂ), ಮುರಿಗೆ ತಾರಾವಳಿ, ಪದ.೨೦

೨೩. ಜಿ.ಎ. ಶಿವಲಿಂಗಯ್ಯ(ಲೇ), ಇಮ್ಮಡಿ ಮುರಿಗೆಯ ಗುರುಸಿದ್ಧದೇಶಿಕೇಂದ್ರರು, ಭೂಷಣ, ಪು.೨೨೮-೨೨೯

೨೪. ಎಂ.ಜಿ. ನಂಜುಂಡಾರಾಧ್ಯ(ಸಂ), ಶಿವಲಿಂಗ ಚಾರಿತ್ರ್ಯ, ಅಧ್ಯಾಯ ೧ ಮತ್ತು ೨

೨೫. ಜಿ.ಜಿ. ಮಂಜುನಾಥ(ಲೇ), ಮುರಿಗಾ ಶಾಂತವೀರರು, ಹರಿತಿಸಿರಿ, ಪು.೪೮೬-೪೯೭

೨೬. ಎಂ.ಎಸ್. ಬಸವರಾಜಯ್ಯ(ಸಂ), ಶಿವಷಡಕ್ಷರಿ, ಪು.೧೨೫

೨೭. ಮ. ಮಲ್ಲಪ್ಪ(ಲೇ), ಇಮ್ಮಡಿ ಮುರಿಗಾಗುರುಸಿದ್ಧರು, ಬಸವ ಪಥ, ಸಂ.೧೯, ಸಂ.೧, ಪು.೪೭

೨೮. ಜಿ.ಎ. ಶಿವಲಿಂಗಯ್ಯ(ಲೇ), ಇಮ್ಮಡಿಮುರಿಗೆಯಗುರುಸಿದ್ಧದೇಶಿಕೇಂದ್ರರು, ಭೂಷಣ, ಪು.೨೨೭

೨೯. KB೨೬ 'ಶಿವಲಿಂಗ ಚಾರಿತ್ರ' ಗ್ರಂಥ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು

೩೦. ಜಿ. ಮರುಳುಸಿದ್ಧಯ್ಯ(ಸಂ), ಪ್ರಭುಲೀಲೆ, ಪೀಠಿಕೆ, ಪು.xiii

೩೧. ಮ. ಮಲ್ಲಪ್ಪ(ಲೇ), ಇಮ್ಮಡಿ ಮುರಿಗಾಗುರುಸಿದ್ಧರು, ಬಸವಪಥ, ಸಂ.೧೯, ಸಂ.೧, ಪು.೫೦- ೫೧

೩೨. ಕರ್ನಾಟಕ ಭಾರತಿ, ಸಂ.೨೪, ಸಂ.೪, ೧೯೯೨ (ಇದರಲ್ಲಿ ಎಂ.ಎಂ.ಕಲಬುರ್ಗಿಯವರು ಮುರಿಗೆ ಶಾಂತವೀರರು ಚೀಲಾಳಸ್ವಾಮಿಗಳು ಗುರುಶಿಷ್ಯರಲ್ಲ. ಇಬ್ಬರು ಸಮಕಾಲೀನರು. ಇವರು ಕಟ್ಟಿಗೆಹಳ್ಳಿಸಿದ್ಧಲಿಂಗರ ಶಿಷ್ಯರು. ಕಾರಣ ಚೀಲಾಳ ಸಮಯವು ಗುರುಸಿದ್ಧರ ಕಾಲಕ್ಕಿಂತ ಮುಂಚಿತವಾಗಿ ಬೇರ್ಪಟ್ಟಿತ್ತು ಎನ್ನುತ್ತಾರೆ.)

೩೩. ಎಲ್. ಬಸವರಾಜು(ಸಂ), ಮಹಾಲಿಂಗೇಂದ್ರ ವಿಜಯ ಅ.೧೮, ಪದ್ಯ ೧೪ ರಿಂದ ೧೯

೩೪. ಸದ್ಧರ್ಮದೀಪಿಕೆ ಸಂಚಿಕೆ ೪೫-೪೬. ಪು.೧೫೧-೧೫೨(ಶ್ರೀ ನಿರಂಜನ ಜಗದ್ಗುರು ಗುರುಸಿದ್ಧ ಸ್ವಾಮಿಗಳು ಮತ್ತು ಕೆಂಪಿನ ಸಿದ್ಧಬಸವ ಸ್ವಾಮಿಗಳು ಇವರ ವಾಜ್ಯ ವಿಮರ್ಶೆಗಾಗಿ ಜಡೆಯಕ್ಕೆ ಸೇರಿದವರ ವಿವರ 'ಹ' ಪ್ರತಿ)

೩೫. ಬಿ. ರಾಜಶೇಖರಪ್ಪ(ಲೇ), ಮುರಿಗಾ ಸಂಪ್ರದಾಯ ಮತ್ತು ಕೆಳದಿ ಹಾಗೂ ಕೊಡಗಿನ ಅರಸರು, ಚಿನ್ಮೂಲಾದ್ರಿ ಚೇತನ ಸ್ಮರಣ ಸಂಚಿಕ, ೧೯೮೯, ಪು.೬೩

೩೬. ವೈ.ಸಿ. ಭಾನುಮತಿ(ಸಂ), ಸ್ವರವಚನ ಸಂ.೪, ಪು.೧೫೩

೩೭. ಬಿ.ಆರ್. ಹಿರೇಮಠ(ಸಂ), ಸೋದೆಯ ಸದಾಶಿವರಾಯನ ಕೃತಿಗಳು, ಪು.೧೭೨.

೩೮. ವೈ.ಸಿ. ಭಾನುಮತಿ(ಸಂ), ಸ್ವರವಚನ ಸಂ.೪,. ಪು.೧೨೮-೧೫೩

೩೯. ಎಸ್. ವಿದ್ಯಾಶಂಕರ (ಲೇ), ಇಮ್ಮಡಿ ಮುರಿಗಾಗುರುಸಿದ್ಧ, ಜಂಗಮ ಜ್ಯೋತಿ ಸ್ಮರಣ ಸಂಚಿಕೆ, ೧೯೭೫, ಪು.೩೯

೪೦. ಎಸ್. ವಿದ್ಯಾಶಂಕರ(ಲೇ), ಇಮ್ಮಡಿ ಮುರಿಗಾಗುರುಸಿದ್ಧ, ಜಂಗಮ ಜ್ಯೋತಿ ಸ್ಮರಣ ಸಂಚಿಕೆ, ೧೯೭೫, ಪು.೪೬

ಅಧ್ಯಾಯ ೫

ಇಮ್ಮಡಿಮುರಿಗಾಗುರುಸಿದ್ಧರ ಸಾಹಿತ್ಯ

೧. ಚಂಪೂ

೨. ವಚನ

೩. ಷಟ್ಪದಿ

೪. ಲಘು ಸಾಹಿತ್ಯ ಕೃತಿಗಳು

೫. ಸಂಸ್ಕೃತ ಕೃತಿಗಳು

ಕವಿಯ ಸಮಕಾಲೀನ ಪರಿಸರ, ಜೀವನ ಚರಿತ್ರೆಯ ಅಧ್ಯಯನದಿಂದ ಅವರ ಬಾಹ್ಯ ಮುಖದ ಪರಿಚಯ ಮಾಡಿಕೊಂಡಂತಾಗುತ್ತದೆ. ಇನ್ನು ಅವರ ಅಂತರಂಗದ ಮುಖವನ್ನು ಅರಿಯಲು ಕವಿಯು ಸೃಷ್ಟಿಸಿರುವ ಸಾಹಿತ್ಯದ ಮೊರೆ ಹೋಗಬೇಕಾಗುತ್ತದೆ. ಅಂದಾಗ ಮಾತ್ರ ಆ ವ್ಯಕ್ತಿಯ ಜೀವನ-ಸಾಧನೆಗಳ ಕುರಿತಾದ ಪರಿಪೂರ್ಣ ವಿಶ್ಲೇಷಣೆ ಸಾಧ್ಯವಾಗುತ್ತದೆ. ಹದಿನೇಳು-ಹದಿನೆಂಟನೆಯ ಶತಮಾನದ ಕನ್ನಡ ಕವಿಗಳಲ್ಲೇ ಪ್ರಮುಖಸ್ಥಾನ ಪಡೆಯಬೇಕಾಗಿದ್ದ ಇಮ್ಮಡಿ ಮುರಿಗಾಗುರುಸಿದ್ಧರು ಹಲವಾರು ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡ ವ್ಯಕ್ತಿಯಾಗಿದ್ದಾರೆ. ಅವರು ಶಿವಯೋಗವನ್ನು ಕರತಲಾಮಲಕ ಮಾಡಿಕೊಂಡ ಷಟ್‌ಸ್ಥಲಜ್ಞಾನಿಗಳೆನಿಸಿದ್ದಾರೆ. ಧರ್ಮದೊಡನೆ ಸಾಹಿತ್ಯವನ್ನು ಸಮಧಾತುವಾಗಿ ಬೆರೆಸಿಕೊಂಡು ಧಾರ್ಮಿಕ, ಸಾಹಿತ್ಯಿಕ ಲೋಕಗಳೆರಡರಲ್ಲೂ ಕೃಷಿ ಗೈದಿದ್ದಾರೆ. ರಾಜಕೀಯ, ಧಾರ್ಮಿಕ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಹೋರಾಡಿ, ಸಂಘರ್ಷದಲ್ಲಿಯೂ ಅಮೂಲ್ಯ ಸಾಹಿತ್ಯವನ್ನು ಸೃಷ್ಟಿಸಿದ ಇವರ ಕವಿತಾ ಶಕ್ತಿ ಅಪೂರ್ವವಾದುದಾಗಿದೆ. ಮೇಲುನೋಟಕ್ಕೆ ನೋಡಿದರೆ ಇವರ ಕೃತಿಗಳು ಬಹಳ ಮಹತ್ವವುಳ್ಳವು ಎಂದೇನೂ ಎನಿಸುವುದಿಲ್ಲ. ಏಕೆಂದರೆ ಭಕ್ತಿಯ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಕವಿ ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ಬರೆದಿದ್ದಾನೆ. ಆದರೆ ಸ್ವಲ್ಪ ಕುತೂಹಲದಿಂದ, ಇಲ್ಲವೆ ಆಸಕ್ತಿ ವಹಿಸಿ ನೋಡಿದಾಗ ಆ ಬಗೆಯ ಅಭಿಪ್ರಾಯ

ಯಾರಿಗೂ ಬರಲಾರದು. ಅತ್ಯಂತ ಕ್ಲಿಷ್ಟವಾದ ಇವರ ಸಾಹಿತ್ಯ ಧಾರ್ಮಿಕವಾದ ವಿಚಾರಗಳನ್ನು ಒಳಗೊಂಡಿದ್ದು, ಅರಿತರೂ ಆಚರಿಸಲುಬಾರದ ಆಗಮೋಕ್ತ ಕ್ರಿಯೆಗಳನ್ನೇ ಹೆಚ್ಚಾಗಿ ಪ್ರತಿಪಾದಿಸುತ್ತವೆ. ಕಾರಣ ಕವಿಗಳು, ವಿಮರ್ಶಕರು, ಸಂಶೋಧಕರು ಹಾಗೂ ಜನಸಾಮಾನ್ಯರಿಂದ ಇವರ ಕೃತಿಗಳು ದೂರ ಉಳಿದಿವೆ. ಆದರೂ ಸಾಹಿತ್ಯಿಕವಾಗಿ, ಚಾರಿತ್ರ್ಯಿಕವಾಗಿ ಅವುಗಳದ್ದೇ ಆದ ಮೌಲ್ಯ ಹಾಗೂ ಮಹತ್ವಗಳಿವೆ.

ಉಭಯ ಭಾಷಾ ಪಂಡಿತರಾದ ಇವರು ಕನ್ನಡ, ಸಂಸ್ಕೃತ ಭಾಷೆಯಲ್ಲಿ ೨೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ವಚನಗಳ ಸೃಷ್ಟಿ, ಸಂಕಲನದ ಜೊತೆಗೆ ಟೀಕು ಪ್ರಕಾರದ 'ಲಿಂಗರಚನಾಗಮ ಟೀಕು', ನಿಘಂಟು ಮಾದರಿಯ 'ಶಬ್ದರತ್ನಾಕರ', ಗದ್ಯಪದ್ಯಗಳಿಂದ ಕೂಡಿದ 'ಕೊರವಂಜಿಕಟ್ಟಳೆ', ಐತಿಹಾಸಿಕ ವಿಚಾರಗಳನ್ನು ತಿಳಿಸುವ 'ಮುರಿಗಾತಾರಾವಳಿ', ಯಕ್ಷಗಾನ ಪ್ರಕಾರದ 'ಬಿಜ್ಜ ಮಹಾದೇವಿ ಚಾರಿತ್ರ್ಯ' ಮತ್ತು 'ಜಲಂಧರ ಕಾಳಗ' ಹಾಡಿನ ರೂಪದ 'ಸ್ವರವಚನಗಳು', ವೀರಶೈವ ತಾತ್ತ್ವಿಕ ವಿಷಯಗಳನ್ನು ತಿಳಿಸುವ 'ಪಂಚಾಶಿಕೆ', 'ಮಿಶ್ರಾರ್ಪಣ' ಮತ್ತು 'ಶೂನ್ಯಮಂತ್ರಗೋಪ್ಯ' ಮುಂತಾದ ಪಂಡಿತ ಪಾಮರರಿಗೂ ರಚಿಸುವ ಕವಿಯ ಸಾಹಿತ್ಯ ರಾಶಿ ಅಪಾರವಾದುದಾಗಿದೆ. ಚಂಪು, ವಚನ, ಷಟ್ಪದಿ, ಚೌಪದಿ, ಯಕ್ಷಗಾನ, ಟೀಕು, ನಿಘಂಟು, ತಾರಾವಳಿ, ವೃತ್ತ ಮೊದಲಾದ ಗದ್ಯ ಪದ್ಯ ಪ್ರಕಾರಗಳಲ್ಲಿ ರಚನೆಗೊಂಡಿರುವ ಸಾಹಿತ್ಯವು ಗುಣ ಹಾಗೂ ಗಾತ್ರದ ದೃಷ್ಟಿಯಿಂದ ಅಮೂಲ್ಯವೆನಿಸಿವೆ. ಮಾರ್ಗಶೈಲಿಯ ಚಂಪು ಸಾಹಿತ್ಯದ ಹರಿಕಾರರಾದ ಜೈನರು ಈ ಶತಮಾನದಲ್ಲಿ ದೇಶೀಯತೆಯ ಕಡೆಗೆ ವಾಲಿದರೆ, ದೇಶೀ ಶೈಲಿಯ ಆದ್ಯರೆನಿಸಿದ ವೀರಶೈವರು ಮಾರ್ಗಶೈಲಿಯ ಚಂಪೂವಿನ ಕಡೆಗೆ ಧಾವಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಪ್ರೌಢ ಕಾವ್ಯಗಳ ಕಾಲ ಮುಗಿಯಿತು ಎಂಬಷ್ಟರಲ್ಲಿಯೇ ಷಡಕ್ಷರದೇವ ಇಮ್ಮಡಿ ಮುರಿಗಾಗುರುಸಿದ್ಧರು ಚಂಪೂವಿನಲ್ಲಿ ಸಾಹಿತ್ಯ ಸೃಷ್ಟಿಸಿ ಪಂಡಿತ ಪರಂಪರೆಯನ್ನು ಮುಂದುವರಿಸಿದ್ದಾರೆ.

ಸೋದೆಯ ಸದಾಶಿವರಾಯನು ವರ್ಣಕದಲ್ಲಿ ಅಂದರೆ ಷಟ್ಪದಿಯಲ್ಲಿ ಹೇಳಿದ ಹಾಲಾಸ್ಯಪುರಾಣವನ್ನು ಚಂಪೂವಿನಲ್ಲಿ, ಚಾಮರಸನ ಷಟ್ಪದಿ ಚಂದಸ್ಸಿನ ಪ್ರಭುಲಿಂಗಲೀಲೆ ಎಂಬ ಕೃತಿಯನ್ನು ಸಂಸ್ಕೃತ ಭಾಷೆ ಮತ್ತು ವೃತ್ತಗಳಲ್ಲಿ, ಬೃಹತ್ ಕೃತಿಯೆನಿಸಿದ ಸಂಸ್ಕೃತದ ಸ್ಕಂದ ಮಹಾಪುರಾಣದ ಶಿವರಹಸ್ಯ ಭಾಗವನ್ನು ದೇಶೀ ಚೌಪದಿಯಲ್ಲಿ, ಆಗಮೋಕ್ತ ವಿಚಾರಗಳನ್ನು ವಚನಗಳಲ್ಲಿ ಹೀಗೆ ಸರಳತೆಯಿಂದ ಕ್ಲಿಷ್ಟತೆಯೆಡೆಗೆ, ಕ್ಲಿಷ್ಟತೆಯಿಂದ ಸರಳತೆಯ ಕಡೆಗೆ ಕೈ ತೋರಿಸುವ ಗ್ರಂಥಗಳು ಇಮ್ಮಡಿ ಮುರಿಗಾ ಗುರುಸಿದ್ಧರ ಸರ್ವತೋಮುಖವಾದ ಕವಿತಾ ಶಕ್ತಿಯನ್ನು ಸೂಚಿಸುತ್ತವೆ.ಇವರ ಕೃತಿಗಳು ಪ್ರಸ್ತುತ ಸಂದರ್ಭದಲ್ಲಿ ಹಲವು ಪ್ರಕಟಿತರೂಪದಲ್ಲಿ, ಕೆಲವು ಅಪ್ರಕಟಿತ ಮತ್ತು ಅಜ್ಞಾತ ಸ್ಥಿತಿಯಲ್ಲಿ

ಚಂಪೂ ಪ್ರಕಾರ

೧. ಹಾಲಾಸ್ಯ ಪುರಾಣಂ

ದೇವರು ಮಾನವರಾಗಿ ಅಥವಾ ಮಾನವ ರೂಪದಲ್ಲಿ ಅವತರಿಸುವ ನಂಬಿಕೆ ಎಲ್ಲ ಧರ್ಮಗಳಲ್ಲಿಯೂ ಸಾಮಾನ್ಯವಾದುದು. ಪ್ರಮುಖ ಜಾಗತಿಕ ಧರ್ಮಗಳಾದ ಕ್ರೈಸ್ತ, ಯಹೂದಿ, ಇಸ್ಲಾಂ, ಹಿಂದೂ, ಬೌದ್ಧ, ಜೈನ, ಸಿಖ್, ಝೋರಾಷ್ಟ್ರಿಯನ್, ಕನ್‌ಪ್ಯೂಷಿಯನ್, ಟಾವೋ ಮತ್ತು ಶಿಂಟೋ ಧರ್ಮಗಳಲ್ಲಿ ಅವತಾರದ ಕಲ್ಪನೆ ಒಂದಲ್ಲಾ ಒಂದು ರೀತಿಯಲ್ಲಿದೆ. ಹಿಂದೂ ಮತ್ತು ಬೌದ್ಧ ಮೊದಲಾದ ಭಾರತೀಯ ಧರ್ಮಗಳಲ್ಲಿ ದೇವರು ಅಥವಾ ಬುದ್ಧನು ಪ್ರಾಣಿಗಳ ಅವತಾರಗಳನ್ನು ಎತ್ತಿದ್ದಾನೆಂಬ ನಂಬಿಕೆಯೂ ಉಂಟು. ಸಂಸ್ಕೃತದ 'ಅವತಾರ' ಎನ್ನುವ ಪದವು 'ಅವ' ಮತ್ತು 'ತಾರ' ಎನ್ನುವ ಎರಡು ಪದಗಳ ಸಂಯೋಗವಾಗಿದ್ದು, 'ಅವ' ಎಂದರೆ 'ಕೆಳಗೆ' 'ತಾರ' ಎಂದರೆ 'ಬರುವುದು' ಎಂಬ ಅರ್ಥಹೊಂದಿದೆ. ಅವತಾರವೆಂದರೆ ದೇವರು ಗೋಚರ ರೂಪದಲ್ಲಿ ಇಳಿದು ಬರುವುದು ಎಂದರ್ಥವಾಗುತ್ತದೆ. ಅವತಾರದ ಕಲ್ಪನೆಯನ್ನು 'ಪ್ರಾದುರ್ಭಾವ'(ವ್ಯಕ್ತವಾಗು) 'ಸಂಭವ'(ಉಂಟಾಗು) ಮತ್ತು 'ಜಾತಕ'(ಹುಟ್ಟುವುದು) ಎನ್ನುವ ಪದಗಳಿಂದ ಕರೆಯುತ್ತಾರೆ.[೧] 'ಅವತಾರ' ಎಂಬ ಪದಕ್ಕೆ ಸಮಾನಾರ್ಥವಾಗಿ 'ಲೀಲೆ' ಎಂಬ ಪದವನ್ನು ಸಹ ಬಳಸುತ್ತಾರೆ. ಈ ಲೀಲೆಗಳು ಸತ್ಯವೋ, ಅಸತ್ಯವೋ ಅವುಗಳನ್ನು ಕುರಿತು ರಚಿತವಾದ ಸಾಹಿತ್ಯವಂತೂ ವಿಪುಲವಾಗಿದೆ. ಇದಕ್ಕೆ ಕನ್ನಡ ಸಾಹಿತ್ಯವೂ ಹೊರತಾಗಿಲ್ಲ.

ಶ್ರೀಸಾಮಾನ್ಯರು ಧರ್ಮದ ವಿಷಯದಲ್ಲಿ ಸಹಜ ಶ್ರದ್ಧೆಯುಳ್ಳವರಾಗಿದ್ದು, ಧಾರ್ಮಿಕ ತತ್ತ್ವಗಳನ್ನು ಶಾಸ್ತ್ರೀಯವಾಗಿ ಅರಿಯದಿದ್ದರೂ ದೃಷ್ಟಾಂತಗಳ ಮೂಲಕ ಅವುಗಳ ಸಾರವನ್ನು ಅರಿತುಕೊಳ್ಳಬಲ್ಲರು. ತತ್ವಗಳನ್ನು ಸರಳಗೊಳಿಸಿ ಧಾರ್ಮಿಕ ಮಹಾಪುರುಷರ ಜೀವನ ವೃತ್ತಾಂತಗಳನ್ನು ಚರಿತ್ರೆ-ಪುರಾಣಗಳ ರೂಪದಲ್ಲಿ ಹೇಳಿದಾಗ ಅವರು ಆಸಕ್ತಿಯಿಂದ ಕೇಳಿ, ಹುಟ್ಟ ಅಂತಹ ಕಥೆಗಳಲ್ಲಿ ಭಕ್ತಿ, ಶ್ರದ್ಧೆ, ನಂಬಿಕೆಗಳನ್ನಿಡುತ್ತಾರೆ. ಹೀಗಾಗಿ ಪುರಾಣಗಳು ಭಾರತೀಯ ಸಂಸ್ಕೃತಿಯ ಜೀವಂತ ಪ್ರತೀಕಗಳೆನಿಸಿವೆ. ಪುರಾಣಗಳು ಹೆಸರಿಗೆ ತಕ್ಕಂತೆ ಪುರಾತನ ಕಾಲದಿಂದಲೂ ಸಾಗಿ ಬಂದಿರುವ ಮತ, ಸಂಪ್ರದಾಯ, ಅವತಾರ, ಲೀಲೆ, ದೇವರು ಮುಂತಾದ ವಿಷಯಗಳ ನಿರೂಪಣೆ ಹಾಗೂ ಆಯಾ ಕಾಲದ ಧಾರ್ಮಿಕ, ರಾಜಕೀಯ, ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಕಥೆ, ಅಖ್ಯಾನ, ಸಂಕೇತ ಉಪಕಥೆ, ಪವಾಡ, ದೃಷ್ಟಾಂತಗಳ ಮೂಲಕ ಜನಸಾಮಾನ್ಯ ಮನೆ-ಮನಗಳಲ್ಲಿ ಭಿತ್ತರಿಸಿ ಭಕ್ತಿ, ಶ್ರದ್ಧೆ, ನಂಬಿಕೆಗಳನ್ನು ಬಲಗೊಳಿಸುವ ಉದ್ದೇಶ ಹೊಂದಿವೆ. ಅಂತೆಯೇ ಪ್ರಾಚೀನ ಕಥಾನಕವುಳ್ಳ ಬ್ರಹ್ಮ, ಪದ್ಮ, ವಿಷ್ಣು, ಶಿವ, ಭಾಗವತ, ನಾರದೀಯ, ಮಾರ್ಕಂಡೇಯ, ಅಗ್ನಿ, ಭವಿಷ್ಯ, ಬ್ರಹ್ಮವೈವರ್ತ, ಲಿಂಗ, ವರಾಹ, ಸ್ಕಂದ, ವಾಮನ, ಕೂರ್ಮ, ಮತ್ಸ್ಯ, ಗರುಡ, ಬ್ರಹ್ಮಾಂಡ ಎಂಬ ಹದಿನೆಂಟು ಪುರಾಣಗಳು ರಚನೆಗೊಂಡಿವೆ. ತದನಂತರ ಆಧುನಿಕರಲ್ಲಿ ಶಿವ-ಶರಣರ, ಸಾಧು-ಸಂತರ, ಯೋಗಿಗಳ, ಸ್ಥಳಮಹಾತ್ಮ್ಯ, ಕಾಲಮಹಾತ್ಮ್ಯ ಮುಂತಾದ ವಿಷಯ ವೈವಿಧ್ಯತೆಗಳಿಂದ ಕೂಡಿದ ಅನೇಕ ಪುರಾಣಗಳು ರಚನೆಯಾಗಿ ಪ್ರಚಾರ ಪಡೆದು ಜನರ ಮನಸ್ಸಿನಲ್ಲಿ ಉಳಿದುಕೊಂಡಿವೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬದಲಾದ ಸಂದರ್ಭಗಳಿಗೆ ಅನುಗುಣವಾಗಿ ಚಂಪು, ಷಟ್ಪದಿ, ತ್ರಿಪದಿ, ಸಾಂಗತ್ಯ ಮುಂತಾದ ಛಂದೋಪ್ರಕಾರಗಳಲ್ಲಿ ಪುರಾಣಗಳು ಹುಟ್ಟಿಕೊಂಡಿವೆ. ಚಂಪೂ ಸಾಹಿತ್ಯ ಪ್ರಕಾರವು ಜೈನ ಕವಿಗಳ ಕೃಷಿ, ಹಳಗನ್ನಡದ ಬೇಸಾಯ, ಕನ್ನಡ ಸಾಹಿತ್ಯ ಕ್ಷೇತ್ರದ ಮೊದಲ ಬಂಗಾರದ ಬೆಳೆ ಎಂಬ ಅಭಿಪ್ರಾಯವಿದ್ದರೂ ಈ ಪ್ರಕಾರವನ್ನು ಎಲ್ಲಾ ಧರ್ಮದ ಕವಿಗಳು ಎಲ್ಲಾ ಕಾಲಕ್ಕೂ ಸಮರ್ಥವಾಗಿ ಕಾವ್ಯಗಳಲ್ಲಿ ಬಳಸಿಕೊಂಡಿರುವುದು ಸಾಹಿತ್ಯ ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಕೆಲ ವಿದ್ವಾಂಸರು ಚಂಪುವಿನ ಚರಿತ್ರೆಯನ್ನು ಆದಿಕವಿ ಪಂಪನಿಂದ, ಸೀಮಾಪುರುಷ ಷಡಕ್ಷರದೇವನವರೆಗೆ ಮಾತ್ರ ಗುರುತಿಸುತ್ತಾರೆ. ಆದರೆ ಷಡಕ್ಷರಕವಿಯಷ್ಟೇ ಸಮರ್ಥವಾದ ರೀತಿಯಲ್ಲಿ ಚಂಪುವನ್ನು ಬಳಸಿ 'ಹಾಲಾಸ್ಯಪುರಾಣ'ವನ್ನು ರಚಿಸಿದ ಇಮ್ಮಡಿ ಮುರಿಗಾಗುರುಸಿದ್ಧರನ್ನು ಹೆಸರಿಸುವುದಿಲ್ಲ. ಇದಕ್ಕೆ ಕಾರಣ ಇದುವರೆವಿಗೂ ಈ ಕವಿ ಮತ್ತು ಕೃತಿಗಳಿಗೆ ಸಂಬಂಧಪಟ್ಟ ಯಾವುದೇ ಅಧ್ಯಯನಗಳು ನಡೆಯದಿರುವುದು.

ಅಷ್ಟಾದಶ ಮಹಾಪುರಾಣಗಳಲ್ಲಿ ಒಂದಾದ 'ಸ್ಕಂದಪುರಾಣ'ವು ೮೧,೧೦೦ ಸಂಖ್ಯೆಯ ಶ್ಲೋಕಗಳನ್ನು ಹೊಂದಿದೆ. ಅದರಲ್ಲಿ ಸನತ್ಕುಮಾರಸಂಹಿತೆ, ಸೂತಸಂಹಿತೆ, ಶಂಕರಸಂಹಿತೆ, ವೈಷ್ಣವಸಂಹಿತೆ, ಬ್ರಾಹ್ಮಸಂಹಿತೆ, ಸೌರಸಂಹಿತೆ ಎಂಬ ಏಳು ಸಂಹಿತೆಗಳಲ್ಲಿ, ಅಗಸ್ತ್ಯ ಸಂಹಿತೆಯಲ್ಲಿ ಬರುವ ಒಂದು ಮಹತ್ವದ ಆಖ್ಯಾನವೇ 'ಹಾಲಾಸ್ಯಮಹಾತ್ಮೆ'. ಇದು ಮಧುರೆಯ ಮೀನಾಕ್ಷಿ ಸುಂದರೇಶ್ವರ ಹಾಗೂ ಹಾಲಾಸ್ಯ ಕ್ಷೇತ್ರದ ಸ್ಥಳ ಮಹಿಮೆಯ ಕಥೆಯನ್ನು ಒಳಗೊಂಡಿದೆ. ಈ ಕೃತಿಯು ಇಮ್ಮಡಿ ಮುರಿಗಾ ಗುರುಸಿದ್ಧರ ನವೀನ ಸೃಷ್ಟಿಯಲ್ಲದಿದ್ದರೂ, ನಿರೂಪಣೆ ಮತ್ತು ಶೈಲಿಯ ದೃಷ್ಟಿಗಳಿಂದ ಹೊಸತನವನ್ನು ಪಡೆದಿದೆ. ಈಗಾಗಲೇ ಕನ್ನಡದಲ್ಲಿ ಇದೇ ಹೆಸರಿನ ಐದು ಕೃತಿಗಳು ರಚನೆಯಾಗಿರುವುದು ತಿಳಿದುಬರುತ್ತದೆ.

೧. ಹಾಲಾಸ್ಯಪುರಾಣ- ವರ್ಣಕ - ಸೋದೆಯಸದಾಶಿವರಾಜ(ಕ್ರಿ.ಶ.೧೬೭೪-೧೯೯೭)

೨. ಹಾಲಾಸ್ಯಪುರಾಣ - ವಸ್ತುಕ - ಇಮ್ಮಡಿ ಮುರಿಗಾಗುರುಸಿದ್ಧ(ಕ್ರಿ.ಶ.೧೭೨೦)

೩. ಹಾಲಾಸ್ಯಮಹಾತ್ಮೆ - ಗದ್ಯ - ಕಳಲೆನಂಜರಾಜ(ಕ್ರಿ.ಶ.೧೭೪೦)

೪. ಹಾಲಾಸ್ಯಮಹಾತ್ಮೆ - ಚಂಪು - ವೆಂಕಟೇಶ(ಕ್ರಿ.ಶ.೧೭೪೦)

೫. ಹಾಲಾಸ್ಯಮಹಾತ್ಮೆ - ಗದ್ಯ - ಮುಮ್ಮಡಿಕೃಷ್ಣರಾಜ(ಕ್ರಿ.ಶ.೧೭೪೯-೧೮೬೮)

ಈ ಐದು ಕೃತಿಗಳು ರಚನೆಯಾಗಿರುವ ಕಾಲವನ್ನು ಗಮನಿಸಿದರೆ ೧೮-೧೯ನೆಯ ಶತಮಾನದ ಅವಧಿಯಲ್ಲಿ ಈ ಕಥಾವಸ್ತುವಿಗೆ ಇದ್ದು ಜನಪ್ರಿಯತೆಯನ್ನು ಅರಿಯಬಹುದಾಗಿದೆ. ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಪ್ರತಿಭೆ, ಪಾಂಡಿತ್ಯ, ಕವಿತ್ವ ಶಕ್ತಿಯನ್ನು ಪ್ರಚುರಪಡಿಸಲು ಮಧುರೆಯ ಮೀನಾಕ್ಷಿ ಸುಂದರೇಶ್ವರನ ಈ ಕಥಾವಸ್ತುವನ್ನೇ ಆಯ್ದುಕೊಂಡಿದ್ದಾರೆ.

ಆಕರ

ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಕಾವ್ಯಕ್ಕೆ ವಸ್ತುವನ್ನು ಆಯ್ದುಕೊಳ್ಳಲು ತನ್ನ ಸಹೋದರ ಸಂಬಂಧಿ, ವಿದ್ವತ್ ಕವಿಯು ಆದ, ಚಂಪೂಕಾವ್ಯ ಪ್ರಕಾರದ ಸೀಮಾಪುರಷರೆನಿಸಿದ ಷಡಕ್ಷರದೇವನ ಮಾರ್ಗವನ್ನು ಅನುಸರಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾದ 'ರಾಜಶೇಖರವಿಳಾಸ'ವನ್ನು ರಚಿಸುವಾಗ 'ವರಮಲ್ಲಣಾರ್ಯರುರಿ ಕವಿರಾಜ ರಾಜಿನುತಮಾಗಿರೆ ವರ್ಣಕದಿಂದ ಭಾವರತ್ನಾಕರ ಮಾಗಿಪೇಳ್ದ ಕಥೆಯನ್ನು ವಸ್ತುಕದಿಂದ ಪೇಳ್ವು'[೩]ದಾಗಿ ಹೇಳುತ್ತಾನೆ. ಅಂದರೆ ಗುಬ್ಬಿಯ ಮಲ್ಲಣಾರ್ಯನು 'ಭಾವ ಚಿಂತಾರತ್ನ' ಎಂಬ ಕೃತಿಯಲ್ಲಿ 'ವರ್ಣಕ'ದಿಂದ ಹೇಳಿದ ವಸ್ತುವನ್ನು ಷಡಕ್ಷರಕವಿಯು 'ರಾಜಶೇಖರವಿಳಾಸ'ದಲ್ಲಿ 'ವಸ್ತುಕ' ರೂಪದಲ್ಲಿ ನಿರೂಪಿಸಿದ್ದಾನೆ. ಅದೇ ರೀತಿ ಇಮ್ಮಡಿ ಮುರಿಗಾ ಗುರುಸಿದ್ಧರು 'ಹಾಲಾಸ್ಯಪುರಾಣ' ರಚಿಸುವಾಗ

ಸಕಲಕಲಾವಿಶಾರದ ನರೇಂದ್ರ ಶಿರೋಮಣಿ ಲಿಂಗಜಂಗಮಾ
ರ್ಚಕನುರು ಸೋದೆಯಪ್ರಭು ಸದಾಶಿವಭೂಪತಿಯೊಲ್ದು ಪೂರ್ವದೊ
ಳ್ಪ್ರಕಟ ಸುವರ್ಣವರ್ಣಕದೆಪೇಳ್ದುದನಾಂ ಪ್ರಮಥೋಕ್ತಿಯಿಂದೆವ
ಸ್ತುಕದಿನಿದಂ ನೆಗಳ್ಚಿದೆನುಮೇಶನ ಭಕ್ತರಪಾರರೊಲ್ಪಿನಂ॥

ಕಾಂ.೧, ಆ.೧, ಪ.೧೧

ಈ ಪದ್ಯದ ಪ್ರಕಾರ ಸೋದೆಯಸದಾಶಿವ ಪ್ರಭು ವರ್ಣಕದಲ್ಲಿ ಅಂದರೆ ಷಟ್ಪದಿಯಲ್ಲಿ ಹೇಳಿದ ಹಾಲಾಸ್ಯ ಪುರಾಣವನ್ನು ತಾನು ವಸ್ತುಕ (ಚಂಪೂ) ರೂಪದಲ್ಲಿ ರಚಿಸುವ ಉದ್ದೇಶ ಹೊಂದಿರುವುದಾಗಿ ಹೇಳುತ್ತಾನೆ. ಅಂತೆಯೇ ಈ ಗ್ರಂಥದಲ್ಲಿಯ ಒಂದು ಪದ್ಯವು ಈ ಮಾತಿಗೆ ಪುಷ್ಟಿನೀಡುತ್ತದೆ.

'ವಿವಿಧತರ ಪ್ರಸಿದ್ಧನಿಯಮೋತ್ಕರಮಂಮಿಗೆ ಮಾಳ್ಪುದಂತದಂ
ತವೆಬಹು ಪದ್ಯಭಾರಭಯದಿಂದಮೆ ಬಿಟ್ಟೆನಖಂಡಿತಾಮಳೋ
ತ್ಸವಲೀಲೆಯಷ್ಟನೆ ಸಮಂತುರೆಪೇಳ್ದನದೆಲ್ಲಮಂ ಸದಾ
ಶಿವಧರಣೀಶನಿ ರಚಿತ ವರ್ಣಕದೊಳ್ ನಡೆನೋಳ್ಪುದುತ್ತಮರ್॥

ಕಾಂ.೧, ಆ.೧೬, ಪ.೩೩

ಹದಿನಾರನೇ ಆಶ್ವಾಸದ 'ಮೇರುಕಾಂಚನಾಪಹರಣಲೀಲೆ'ಯ ಈ ಪದ್ಯವು ಮೇರು ಪರ್ವತಕ್ಕೆ ಸಲ್ಲಿಸುವ ಪೂಜಾ ವಿಧಾನಗಳಲ್ಲಿ ಇನ್ನೂ ಬಹುತರವಾದ ನಿಯಮಗಳು ಉಂಟು, ಇಲ್ಲಿ ವಿಷಯ ವಿಸ್ತಾರದ ಭಯದಿಂದ ನಾನು ಕೈಬಿಟ್ಟಿದ್ದೇನೆ. ಉತ್ತಮರು ಸದಾಶಿವರಾಯನ 'ವರ್ಣಕ ಹಾಲಾಸ್ಯ' ಪುರಾಣವನ್ನು ನೋಡಬಹುದು ಎನ್ನುತ್ತಾನೆ. ಗ್ರಂಥದ ಕೊನೆಯಲ್ಲಿ "...... ಕೇಳ್ದವರ್ಗಂ ಕೇಳಿಸಿದವರ್ಗಂ ಮತ್ತೆಯುಮೀ ಪುರಾಣಮನೋದಿತದಭಿಪ್ರಾಯಮನತಿಶಯಿಸಿ ಪೇಳ್ದವಂಗೆ ರಥ ಗಜ ಗೋ ಭೂಮಿ ಹೇಮಾಂಬರಾದಿಗಳಪ್ಪವು...... ಹಾಲಾಸ್ಯಮಹಾತ್ಮ್ಯೆ ದೊಳಿದೆಲ್ಲ ಮುಕ್ತ ಮಾಗಿರ್ಕುಂ ಗ್ರಂಥ ಬಾಹುಲ್ಯ ಭಯದಿಂ ಪೇಳ್ದುದಿಲ್ಲಮಾಮೀಪುರಾಣಂ ದ್ವಾದಶಾಂತ್ಯ ಮಹತ್ವಂ.... ಶ್ರೀಶ್ರೀಶ್ರೀ" ಎಂದೆನ್ನುತ್ತಾನೆ. ಇಲ್ಲಿ ಗಮನಿಸಬೇಕಾದ ಎರಡು ಸಂಗತಿಗಳೆಂದರೆ ಮೊದಲನೆಯದಾಗಿ ಕವಿ ಆಕರವಾಗಿ ಬಳಸಿಕೊಂಡಿರುವ ಕೃತಿ ಸೋದೆಯಸದಾಶಿವನ 'ಹಾಲಾಸ್ಯ ಪುರಾಣ'. ಎರಡನೆಯದಾಗಿ ಆಕರವಾಗಿ ಬಳಸಿಕೊಂಡ ಕೃತಿಯ ಗಾತ್ರ ಇಮ್ಮಡಿ ಮುರಿಗಾಗುರುಸಿದ್ಧನ ಕೃತಿಗಿಂತ ದೊಡ್ಡದಾಗಿರುವುದು. ಹೀಗಾಗಿ ಸದಾಶಿವರಾಯನ ಹಾಲಾಸ್ಯ ಪುರಾಣದೊಂದಿಗೆ ಈ ಕವಿಯ ಹಾಲಾಸ್ಯ ಪುರಾಣದ ತೌಲನಿಕ ಅಭ್ಯಾಸ ನಡೆಸಬಹುದಿತ್ತು, ಆದರೆ ಸದಾಶಿವರಾಯನ ಕೃತಿ ಇಂದಿಗೂ ದೊರೆತಿಲ್ಲದಿರುವುದರಿಂದ ಇದು ಸಾಧ್ಯವಾಗಿಲ್ಲ. ಈ ವಿಷಯ ಕುರಿತಾಗಿ ಜಿ.ಜಿ.ಮಂಜುನಾಥರವರು ಸಂಸ್ಕೃತ ಹಾಲಾಸ್ಯಮಹಾತ್ಮೆಯ ಯಥಾವತ್ ಅನುವಾದ ಇಮ್ಮಡಿ ಗುರುಸಿದ್ಧನ ಹಾಲಸ್ಯ ಮಹಾತ್ಮ್ಯೆ ಕೃತಿ. ಈ ಎರಡೂ ಕೃತಿಗಳ ತೌಲನಿಕ ಅಭ್ಯಾಸವನ್ನು ನಡೆಸಿದಾಗ ಹೆಜ್ಜೆ ಹೆಜ್ಜೆಗೂ ಆತ ಸಂಸ್ಕೃತ ಹಾಲಾಸ್ಯ ಮಹಾತ್ಮವನ್ನು ಅನುಸರಿಸಿರುವುದನ್ನು ಕಾಣಬಹುದು"[೪] ಎನ್ನುತ್ತಾ ಕೆಲ ಸನ್ನಿವೇಶಗಳನ್ನು ಉದಾಹರಿಸುತ್ತಾರೆ.

ಕೇಶಾ ಮೂರ್ಧಾಲಲಾಟಂಚಲೋಚನೆ ನಾಸಿಕಾತಥಾ॥
ಶ್ರೋತ್ರಗಂಡೋಷ್ಠದಂತಾಶ್ಚಜಿಹ್ವಾಚಚಿಬುಕಂಕ್ರಮಾತ್
ಕಂಠವಕ್ಷೋಭುಜಾಪಾಣಿತಲಾಂಗುಲಿನಖಾಅಪಿ॥
ವಕ್ಷೋಜಯುಗಳಂಕುಕ್ಷಿನಾಭಿರ್ಜಘನಮಂಡಲ
ಊರುಜಾನುದ್ವಯಂಜಂಘೆಗುಲ್ಫೇಚಪ್ರಪದೇತಥಾ॥
ಅಂಗುಳ್ಯಶ್ಚನಖಾಃಪಾದತಲಗಂಧಸ್ವರಾಸ್ತಥಾ
ವರ್ಣಾಶ್ಚವನಿತಾನಾಂಚದ್ವಾತ್ರಿಂಶಲ್ಲಕ್ಷಣಾನಿಚ॥

ಸಂಸ್ಕೃತ ಹಾಲಾಸ್ಯಮಹಾತ್ಮ್ಯದ ಈ ಪದ್ಯವನ್ನು ಇಮ್ಮಡಿಗುರುಸಿದ್ಧರು ಕನ್ನಡದಲ್ಲಿ ಹೀಗೆ ಅನುವಾದಿಸಿದ್ದಾರೆ. 'ಅದೆಂತೆಂದೊಡೆ ಕುಂತಳಶಿರೋಲಲಾಟ ಲೋಚನ ಘ್ರಾಣ ಕರ್ಣಕಪೋಳಾಧರ ದಂತ ರಸನಾ ಚಿಬುಕು ಕಂಠ ವಕ್ಷಸ್ಥಳ ಬಾಹು ಕರತಳಾಂಗುಲಿ ನಖ ಕುಚ ಯುಗ ಕುಕ್ಷಿ ನಾಭಿ ನಿತಂಬಬಿಂಬೋರು ಜಾನು ಜಂಘಾಗುಲ್ಫಪದಾಂಗುಲಿನಖರ ಪದತಳ ಗಂಧ ಸ್ವರ ವರ್ಣಂಗಳೆಂಬಿವೆ ಪೆಂಗಳದ್ವಾತ್ರಿಂಶಲ್ಲಕ್ಷಣಂಗಳವಕ್ಕೆ ವಿವರಮಂತರದಿಂದುಸಿರ್ವೆನೆಂತೆನೆ' ಇದೇ ಬಗೆಯ ಹಲವು ಸಾಮ್ಯಗಳು ಗ್ರಂಥದುದ್ದಕ್ಕೂ ದೊರೆಯುತ್ತವೆ. ಆದರೂ ಕವಿ ತನ್ನ ಕಾವ್ಯದ ಆಕರವಾಗಿ ಸದಾಶಿವರಾಯನ 'ಹಾಲಾಸ್ಯಮಹಾತ್ಮ್ಯೆ'ಯ ಹೆಸರನ್ನು ಹೇಳುತ್ತಾನೆಯೇ ಹೊರತು ಸಂಸ್ಕೃತ ಹಾಲಾಸ್ಯ ಮಹಾತ್ಮ್ಯೆಯ ಹೆಸರನ್ನು ಹೇಳುವುದಿಲ್ಲ ಅಲ್ಲದೇ ಉಭಯ ಭಾಷಾ ಕವಿತ್ವ ಶಕ್ತಿ ಹೊಂದಿದ್ದ ಈತ ಸಂಸ್ಕೃತ ಕೃತಿಯನ್ನು ನೋಡಿರುವ ಬಹಳಷ್ಟು ಸಾಧ್ಯತೆಗಳು ಇವೆ.

ಕೃತಿ ಸ್ವರೂಪ

ಹಾಲಾಸ್ಯ ಪುರಾಣವು ನಾಲ್ಕು ಕಾಂಡ, ಅರುವತ್ತಾರು ಆಶ್ವಾಸ, ೩೬೩೭ ಪದ್ಯಗಳು ಮತ್ತು ತ್ರಿಪದಿ, ರಗಳೆಗಳಿಂದ ಕೂಡಿದ ಬೃಹತ್ ಚಂಪೂ ಕಾವ್ಯ. ಇದರಲ್ಲಿ ವೃತ್ತ, ಕಂದ, ಗದ್ಯಗಳೂ ಸಮಾವೇಶಗೊಂಡಿವೆ. ಸುಮಾರು ೧೬೫ಕ್ಕೂ ಹೆಚ್ಚಿನ ವಿವಿಧ ಪ್ರಕಾರದ ಛಂದಸ್ಸನ್ನು ಕವಿ ಈ ಗ್ರಂಥದಲ್ಲಿ ಬಳಸಿದ್ದಾನೆ. ಕವಿಯು ಕಾವ್ಯಾರಂಭದಲ್ಲಿ ಸುಂದರೇಶ್ವರನಲ್ಲಿ ಕ್ಷೇಮ ಪ್ರಾರಂಭವನ್ನು, ವಿಘ್ನೇಶ್ವರನಲ್ಲಿ ನಿರ್ವಿಘ್ನತ್ವವನ್ನು, ಷಣ್ಮುಖನಲ್ಲಿ ಇಷ್ಟಸಿದ್ಧಿಯನ್ನು, ವೀರಭದ್ರನಲ್ಲಿ ಶುದ್ಧಬುದ್ಧಿಯನ್ನು ಬೇಡುತ್ತ ನಂದಿ, ಭೃಂಗಿ, ರೇಣುಕ, ದಾರುಕ, ಸುಂದರ, ಕಲಿಕಂಬ, ಸಿರಿಯಾಳ, ಚಂದಯ್ಯ, ಬಸವೇಶ, ಮಡಿವಾಳ ಮಾಚಯ್ಯ, ನಾಗಣಾನಂದರನ್ನು ಸ್ಮರಿಸುತ್ತ ಅವರಲ್ಲಿ ತನ್ನ ಕೃತಿಗೆ ಮಂಜುಳವಾಣಿಯನ್ನು ನೀಡಬೇಕೆಂದು ಪ್ರಾರ್ಥಿಸುತ್ತಾನೆ. ಪೂರ್ವಕವಿಗಳಾದ ಹಂಪೆಯ ಹರಿಹರದೇವ, ರಾಘವಾಂಕ, ಪಾಲ್ಕುರಿಕೆ ಸೋಮನಾಥ, ಪಂಡಿತಾರಾಧ್ಯರನ್ನು ಹದವಾದ ರಸಭಾವ ನೀಡುವಂತೆ ಕೇಳಿಕೊಂಡಿದ್ದಾನೆ. ಗುರುತೋಂಟದಾರ್ಯ, ಕೊಟ್ಟೂರೇಶ, ಭುಜಂಗೇಶ್ವರ, ಕರತಳದ ನಾಗಿದೇವರನ್ನು ಸ್ತುತಿಸಿ, ತನ್ನ

ದೀಕ್ಷಾಗುರು ಮತ್ತು ಶಿಕ್ಷಾಗುರುವಿಗೆ ನಮಸ್ಕರಿಸಿ ತನ್ನ ಕೃತಿಯ ಆಕರ, ವಿಶೇಷತೆಗಳನ್ನು ಸ್ಥೂಲವಾಗಿ ಹೇಳಿ ಕಾವ್ಯವನ್ನು ಆರಂಭಿಸುತ್ತಾನೆ. ಕಾವ್ಯವು ಸಂಪ್ರದಾಯದಂತೆ ಸಮುದ್ರ ವರ್ಣನೆಯಿಂದ ಆರಂಭವಾಗಿ ರಜತಪರ್ವತ, ಶಿವನ ಆಸ್ಥಾನ ವರ್ಣನೆಗಳಲ್ಲಿ ಮುಂದುವರೆದು ಭೂಲೋಕಕ್ಕೆ ಬಂದು ಮುಖ್ಯ ಕಥೆಯ ನಿರೂಪಣೆಗೆ ತೊಡಗುವ ಪೂರ್ವದಲ್ಲಿ ಕೃತಿಯ ವಸ್ತುವನ್ನು ಕುರಿತು ಅಭಿಮಾನದಿಂದ ಈ ಕೆಳಗಿನಂತೆ ಹೇಳುತ್ತಾನೆ.

ಹಾಲಾಸ್ಯಮೀಪುರಾಣಂ
ಕಾಲಾಸ್ಯ ಭಯಂಕರಂಹರಂ ಸುಂದರನೀ
ಲೀಲಾಸ್ಯಮಿದಕಧಿಪನೆನೆ
ಲಾಲಸ್ಯಮನೆಯ್ದೆಮಾಡದಿರ್ಪನದಾವಂ||

ಕಾಂ.೧, ಆ.೧, ಪ.೧೫

ಯಾವುದೇ ಕೃತಿಯು ಮಹಾಕಾವ್ಯದ ಸ್ಥಾನ ಪಡೆಯಬೇಕಾದರೆ ಅದರಲ್ಲಿ ಅಷ್ಟಾದಶ ವರ್ಣನೆಗಳಿರಬೇಕೆಂಬುದು ಪ್ರಾಚೀನ ಕವಿಗಳ, ವಿದ್ವಾಂಸರ ಅಭಿಮತವಾಗಿತ್ತು. ಊರು, ಕಡಲು, ಬೆಟ್ಟ, ಋತು, ಚಂದ್ರೋದಯ, ಸೂರ್ಯೋದಯ, ವನವಿಹಾರ, ಜಲಕ್ರೀಡೆ, ಮಧುಪಾನ, ವಿನೋದ, ಸುರತೋತ್ಸವ, ವಿಯೋಗ, ವಿವಾಹ, ಕುಮಾರಜನನ, ಮಂತ್ರಾಲೋಚನೆ, ದೂತಕಾರ್ಯ, ವಿಜಯಯಾತ್ರೆ, ಯುದ್ಧ ಎಂಬ ಹದಿನೆಂಟು ವರ್ಣನೆಗಳು ಈ ಕೃತಿಯಲ್ಲಿ ತಿರಸ್ಕಾರಕ್ಕೆ ಒಳಗಾಗಿವೆ. ಏಕೆಂದರೆ ಶಿವನಲೀಲೆಗಳನ್ನು ಭಕ್ತಿಯಿಂದ ಹೇಳುವ, ಕೇಳುವ ಈ ಕಥಾನಕದಲ್ಲಿ ಅಷ್ಟಾದಶವರ್ಣನೆಗಳು ಕೆಲವೊಮ್ಮೆ ನೀರಸ ಭಾವನೆಗಳನ್ನು ಉಂಟುಮಾಡುತ್ತವೆ. ಅಲ್ಲದೆ ಸಂದರ್ಭ ಸನ್ನಿವೇಶಗಳಲ್ಲಿ ಕೆಲವು ತೊಡಕುಗಳನ್ನು ನಿರ್ಮಿಸುತ್ತವೆ ಕಾರಣ ಕವಿ ವರ್ಣನೆಗಳನ್ನು ಕೈಬಿಟ್ಟ ಬಗ್ಗೆ ತಿಳಿಸುತ್ತಾನೆ.

ನೀರಸ ವಾಕ್ಯದ ವರ್ಣನೆ
ಯಾರಯೆ ಶಿವಭಕ್ತಜನಕೆ ರಸಹೀನಮಿದೆಂ
ದೋರಣದಿನುಳಿದೆನದನಂ
ಬಾ ರಮಣನ ಲೀಲೆಗಳ್ಗೆತೊಡಕಪ್ಪುದರಿಂ||

ಕಾ ೧, ಆ ೧, ಪ ೧೨

ಕೃತಿಯ ಪ್ರಥಮಕಾಂಡದ ಮೊದಲನೇ ಆಶ್ವಾಸದಲ್ಲಿ ಹಾಲಾಸ್ಯಕ್ಷೇತ್ರ ಮಹತ್ವವನ್ನು ಹೇಳುತ್ತ, ಸುಂದರದೇವನು ನಟಿಸಿದ ಕಥೆಯ ವೃತ್ತಾಂತವನ್ನು ಆರಂಭಿಸುತ್ತಾನೆ. ಪ್ರಥಮಕಾಂಡದ ೧೬ ಆಶ್ವಾಸಗಳಲ್ಲಿ ಕೃತಯುಗದಲ್ಲಿ ನಟಿಸಿದ ೧೬ ಲೀಲೆಗಳನ್ನು, ದ್ವಿತೀಯ ಕಾಂಡದ ೧೬ ಆಶ್ವಾಸಗಳಲ್ಲಿ ತ್ರೇತಾಯುಗದ ೧೬ ಲೀಲೆಗಳನ್ನು, ತೃತೀಯ ಕಾಂಡದ ೧೬ ಆಶ್ವಾಸಗಳಲ್ಲಿ ದ್ವಾಪರಯುಗದ ೧೬ ಲೀಲೆಗಳನ್ನು ಚತುರ್ಥಕಾಂಡದ ೧೭ ಆಶ್ವಾಸಗಳಲ್ಲಿ ಕಲಿಯುಗದ ೧೬ ಲೀಲೆಗಳನ್ನು ಒಟ್ಟು

ಸುಂದರದೇವನ ೬೪ ಲೀಲೆಗಳ ಬಗ್ಗೆ ಕೃತಿಯಲ್ಲಿ ಹೇಳುತ್ತಾನೆ. ಗ್ರಂಥದ ಕೊನೆಯಲ್ಲಿ ಕೃತಿ ಮುಕ್ತಾಯವಾದ ಕಾಲವನ್ನು

ಓವಿದಶಾಲಿಸುವಾಹನ
ಸಾವಿರದರರುನೂರರಿಂದೆನಾಲ್ವತ್ತೆರಡನೆ
ಯಾವರಿಸಿದನುತಶಾರ್ವರಿ
ಭಾವಿತವರಸಿಂಹಲಗ್ನದೊಳಗತಿಶಯದಿಂ ||

ಕಾ.೪, ಆ.೧೩, ಪ.೧೬೩

ಶಾಲಿವಾಹನ ಶಕೆ ೧೬೪೨ನೆಯ ಶಾರ್ವರಿ ಸಂವತ್ಸರದ ಜೇಷ್ಠ ಮಾಸ ತದಿಗೆ ಆದಿತ್ಯವಾರ ಸಿಂಹಲಗ್ನ ಪುಷ್ಯ ನಕ್ಷತ್ರ ಧೃವಯೋಗ ಗಜಾಕರಣ ಉದಯದ ಹದಿನಾಲ್ಕು ಗಳಿಗೆಗೆ ಪರಿಪೂರ್ಣವಾಯ್ತು ಎಂದಿದ್ದಾನೆ. ಹೀಗಾಗಿ ಈ ಕೃತಿಯು ಪೂರ್ಣಗೊಂಡದ್ದು ೩೧-೫-೧೭೨೦ ಎಂದು ಹೇಳಬಹುದು.

ಪ್ರತಿ ಆಶ್ವಾಸದ ಅಂತ್ಯದಲ್ಲಿ "ಇದು ಸಕಲ ಸುರವರಾಸುರಪ್ರವರ ಕನಕರತ್ನಖಚಿತ ಮೌಲಿಕೀಲಿತ ಪದಸರೋರುಹ ರುಚಿರ ಶಿವಲಿಂಗ ಪ್ರಸಾದಲಬ್ಧೋಭಯ ಕವಿತ್ವನಿಪುಣ ದ್ವಿತೀಯಮುರಿಗಾಗುರು ಸಿದ್ಧಶಿವಯೋಗೀಂದ್ರ ವಿರಚಿತ ಸುಂದರೇಶ್ವರ ವಿಲಾಸಸ್ಕಾಂದಾಗಸ್ತ್ಯಸಿಂಹಿತಾ ಮಧ್ಯಗತ ಹಾಲಾಸ್ಯಪುರಾಣ ದೊಳ್ಗಗಸ್ತ್ಯ ವಸಿಷ್ಠಾದ್ಯನೇಕ ಮುನೀಶ್ವರ ಸಹಿತಾನಂದವನಾಂತರ ಕದಂಬವನ ಪ್ರವೇಶಾನ್ವಿತ ಸಪ್ತದ ಶಾಶ್ವಾಸಗರ್ಭಿತ ಧರ್ಮಾರ್ಥ ಕಾಮ ಮೋಕ್ಷಾತ್ಮಕ ಚತುರ್ಥಕಾಂಡಕ್ಕಂ ಪರಿಸಮಾಪ್ತ" ಎಂಬ ಗದ್ಯಭಾಗವಿದೆ. ಒಟ್ಟಾರೆಯಾಗಿ ಕೃತಿ ಸ್ವರೂಪವು ಗಾತ್ರದ ಹಾಗೂ ಗುಣದ ದೃಷ್ಟಿಯಿಂದ ಮಹಾಕಾವ್ಯದ ಲಕ್ಷಣಗಳನ್ನು ಹೊಂದಿದೆ.

ಕಥಾ ವಸ್ತು

ಕೈಲಾಸದಲ್ಲಿ ಶಿವಧ್ಯಾನದಲ್ಲಿದ್ದ ಸೂತಮುನಿಯ ಹತ್ತಿರ 'ಶತಾನಂದ' ಎಂಬ ಮುನಿ ಸಮೂಹದವರು ಬಂದು ಭೂಲೋಕದಲ್ಲಿ ಯಾವುದಾದರೊಂದು ಸುಕ್ಷೇತ್ರದ ಮಹಿಮೆಯನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ಸೂತಮುನಿಯು ಈ ಮೊದಲು ಅಗಸ್ತ್ಯಮುನಿಯು ಆನಂದವನದಲ್ಲಿ ಋಷಿ ಸಮೂಹಕ್ಕೆ ಅಗಸ್ತ್ಯಮುನಿಗಳು ಹೇಳಿದ ಕ್ಷೇತ್ರ ಮಹಾತ್ಮೆಯ ಕಥೆಯನ್ನು ಹೇಳಿದುದನ್ನು ನಾನು ನಿಮಗೆ ತಿಳಿಸುತ್ತೇನೆ ಎನ್ನುತ್ತಾ ಹೇಳಲು ಆರಂಭಿಸುತ್ತಾನೆ. ಆ ಕಥೆಯನ್ನು ಕೈಲಾಸದಲ್ಲಿ ಶಿವನು ಪಾರ್ವತಿಗೆ ತಿಳಿಸುತ್ತಿರುವಾಗ ತೊಡೆಯ ಮೇಲಿದ್ದ ಷಣ್ಮುಖನು ಅದನ್ನು ಕೇಳಿಸಿಕೊಂಡು ಅಗಸ್ತ್ಯ ಮುನಿಗಳಿಗೆ ಹೇಳಿರುತ್ತಾನೆ, ಅದೇ ಕಥೆಯನ್ನು ಅಗಸ್ತ್ಯಮಹರ್ಷಿಯು ಋಷಿಗಳಿಗೆ ಹೇಳುತ್ತಿರುವಾಗ ಅವರು ಕಾಶಿ, ಕೇದಾರ ಮೊದಲಾದ ತೀರ್ಥಕ್ಷೇತ್ರಗಳಿಗೆ 'ಹಾಲಾಸ್ಯ ಕ್ಷೇತ್ರವು' ಹೇಗೆ ಸಮಾನ ಎಂದು ಪ್ರಶ್ನಿಸುತ್ತಾರೆ. ಆಗ ಮುನಿಯು ಈ ಕೆಳಗಿನಂತೆ ಉತ್ತರಿಸುತ್ತಾನೆ.

ಕಾಶಿಯೊಳೆ ದೇಹದಂತ್ಯದೊ
ಳಾ ಶಿವನೊಳ್ ಮುಕ್ತಿದೊರೆಗುಮೀ ಹಾಲಾಸ್ಯದೊ
ಳ್ಕೈ ಶರಣತತಿಗೆಕೇಳಿಂ
ಪಾಶವಿದೂರೋರು ಜೀವನ್ಮುಕ್ತಿಯದಕ್ಕುಂ

ಕಾ.೧, ಆ.೧, ಪದ್ಯ.೬೫

ಕಾಶಿಯಲ್ಲಿ ದೇಹಾಂತ್ಯ ಮುಕ್ತಿಯಾದರೆ, ಹಾಲಾಸ್ಯ ಕ್ಷೇತ್ರದಲ್ಲಿ ಜೀವನ್ಮುಕ್ತಿ. ಇದು ಶಿವನ ಲೀಲಾವಿಹಾರ. ಬ್ರಾಹ್ಮಣ ಹತ್ಯೆಯನ್ನು ಮಾಡಿದ ಇಂದ್ರನು ಆ ಪಾಪವನ್ನು ಇಲ್ಲಿ ಕಳೆದುಕೊಂಡನು, ತಾಯಿಯನ್ನು ಸಂಭೋಗಿಸಿ ತಂದೆಯನ್ನು ಕೊಂದ ಬ್ರಾಹ್ಮಣನೊಬ್ಬ ನಾನಾ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರೂ ಫಲ ದೊರಕದೆ ಇಲ್ಲಿ ಆ ಪಾಪವನ್ನು ಕಳೆದುಕೊಂಡನು. ಹೀಗೆ ಈ ಕ್ಷೇತ್ರದಲ್ಲಿ ಮದಮುಖಜನರು, ಕ್ರಿಮಿಗಳೂ ಕೂಡ ಮೋಕ್ಷವನ್ನು ಪಡೆಯುತ್ತವೆ. ಈ ಕ್ಷೇತ್ರಕ್ಕೆ ಕದಂಬವಿಪಿನ, ಕನ್ಯಕಾನಗರಿ, ವಿದ್ಯಾನಗರಿ, ಮಧುರಾಪುರ, ಭೂಲೋಕ, ಶಿವಲೋಕ, ಜೀವನ್ಮುಕ್ತಿಪುರ, ಚತುಷ್ಕೂಟಪುರ ಮೊದಲಾದ ಹೆಸರುಗಳಿವೆ.

ಮೂಲೋಕದೊಳೆಣೆಯಿಲ್ಲಂ
ಹಾಲಾಸ್ಯ ಮಹತ್ವಮೊಡನೆ ತೀರ್ಥಕ್ಷೇತ್ರ
ಸ್ಥೂಲಾಯಮಾನಮಾದುದು
ಲೀಲಾಯತ ಸುಂದರೇಂದ್ರನಿಪ್ಪುದರಿಂದ

ಕಾಂ.೧, ಆ.೧, ಪ.೭೪

ಈ ಕ್ಷೇತ್ರದಲ್ಲಿ ಸುಂದರದೇವನಿರುವುದರಿಂದ ಮೂರು ಲೋಕದಲ್ಲಿಯೂ ಈ ಕ್ಷೇತ್ರ ಪ್ರಸಿದ್ಧವಾಗಿದೆ. ಈತನು ಮಹಾಲಿಂಗ, ಹಾಲಾಸ್ಯಸುಂದರ, ಕರ್ಪೂರಸುಂದರ, ಕದಂಬವನಸುಂದರ, ಸೋಮಸುಂದರ, ಸತ್ಸುಂದರ, ಜನವದತಿಸುಂದರ, ದೇವಸುಂದರ, ಪಾಂಡ್ಯಸುಂದರ, ಸಮಷ್ಟಿವಿದ್ಯಾನಗರಿನಾಯಕ, ಮಧುರಾಧಿಪ, ಕನ್ಯಕಾನಗರಿನಾಥ, ಚತುಷ್ಕೂಟಪುರೇಶ್ವರ, ಭೂಲೋಕ ಶಿವಲೋಕೇಶ, ಜೀವನ್ಮುಕ್ತಿ ಪುರೇಶ್ವರ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾನೆ. ಇಂತಹ ದಿವ್ಯನಾಮಗಳಿಂದ ಪ್ರಭಾವಿತನಾದ ಸುಂದರೇಶ್ವರನು ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗ ಈ ನಾಲ್ಕು ಯುಗಗಳಲ್ಲಿಯೂ ಮೆರೆದ ೬೪ ಲೀಲೆಗಳನ್ನು ಕವಿಯು ಒಂದೊಂದು ಆಶ್ವಾಸದಲ್ಲಿ ಒಂದೊಂದರಂತೆ ಹೇಳಲು ಪ್ರಾರಂಭಿಸುತ್ತಾನೆ.

ಕೃತಯುಗದ ಲೀಲೆಗಳು

೧. ಇಂದ್ರಾನುಗ್ರಹಲೀಲೆ : ಇಂದ್ರನ ಶಾಪದಿಂದ ತ್ವಷ್ಟಾರನ ಮಗ ವಿಶ್ವರೂಪನು ಮರಣ ಹೊಂದಿದಾಗ, ಮಗನನ್ನು ಕಳೆದುಕೊಂಡ ತ್ವಷ್ಟ್ರ ಯಜ್ಞ ಮಾಡಿ ವೃತ್ರಾ ಎಂಬ ಮತ್ತೊಬ್ಬ ಮಗನನ್ನು

ಪಡೆದನು. ಮೂರು ಜಗತ್ತಿನ ತಲೆಗೆ ಕಲ್ಲಾದ ಈತ ದೇವತೆಗಳಿಗೆ ಎದುರಾಳಿಯಾದಾಗ ಅವರು ಬ್ರಹ್ಮನನ್ನು ಮೊರೆಹೊಕ್ಕರು. ವಿಷ್ಣುವಿನ ಸಲಹೆಯಂತೆ ಬ್ರಹ್ಮನು ದಧೀಚಿಯ ಬೆನ್ನುಮೂಳೆಯಿಂದ ತಯಾರಿಸಿದ ವಜ್ರಾಯುಧದಿಂದ ವೃತ್ರಾಸುರನ ವಧೆ ಮಾಡಿದನು. ಬ್ರಹ್ಮೇತಿಯಿಂದ ತಪ್ಪಿಸಿಕೊಳ್ಳಲು ತಾವರೆಯ ದಂಟಿನಲ್ಲಿ ಕುಳಿತು ಗುರುವನ್ನು ಸ್ತುತಿಸುತ್ತಿರಲು ಪ್ರತ್ಯಕ್ಷನಾದ ಗುರು ಶಿವಕ್ಷೇತ್ರಗಳಲ್ಲಿ ಪೂಜೆಸಲ್ಲಿಸುವುದರಿಂದ ವೃತ್ರಹತ್ಯಾಪಾಪ ನಾಶವಾಗುತ್ತದೆಂದು ತಿಳಿಸಿದನು. ಅಂತೆಯೇ ಹಾಲಾಸ್ಯ ಕ್ಷೇತ್ರವನ್ನು ಹೊಕ್ಕ ಕೂಡಲೇ ಬ್ರಹ್ಮೇತಿ ನಾಶವಾಯಿತು, ಶಿವನನ್ನು ಪೂಜಿಸಿದ ಫಲವಾಗಿ ವೃತ್ರಾಹತ್ಯಾ ಪಾಪವೂ ದೂರಾಯಿತು.

೨. **ಐರಾವತಶಾಪವಿಮೋಚನಲೀಲೆ :** ಮೂಲಾಸುರನನ್ನು ಕೊಂದು ಐರಾವತವನ್ನೇರಿ ಬರುತ್ತಿದ್ದ ಇಂದ್ರನಿಗೆ ಶಿವ ನಿರ್ಮಾಲ್ಯವನ್ನು ಕೊಟ್ಟಾಗ, ಅದನ್ನು ಒಂದೇ ಕೈಯಿಂದ ತೆಗೆದುಕೊಂಡು ಐರಾವತದ ಮೇಲಿಟ್ಟಾಗ, ಐರಾವತ ಅದನ್ನು ಕಾಲಿನಿಂದ ಹೊಸಕಿ ಹಾಕಿತು. ಕೋಪದಿಂದ ದೂರ್ವಾಸ ಮುನಿ ಐರಾವತ ಸಾಮಾನ್ಯ ಆನೆಯಾಗಲಿ, ಇಂದ್ರನಿಗೆ ಪಾಂಡ್ಯನಿಂದ ಸೋಲುಂಟಾಗಲಿ ಎಂಬ ಶಾಪಕೊಟ್ಟನು. ಶಾಪ ಪರಿಹಾರಾರ್ಥವಾಗಿ ಹಾಲಾಸ್ಯ ಕ್ಷೇತ್ರಕ್ಕೆ ಬಂದು ಅಲ್ಲಿನ ತೀರ್ಥದಲ್ಲಿ ಮಿಂದು ಇಂದ್ರ ಮತ್ತು ಐರಾವತ ಇಬ್ಬರೂ ಶಾಪ ಪರಿಹಾರ ಹೊಂದುವರು.

೩. **ಕದಂಬವನಪುರನಿರ್ಮಾಣಲೀಲೆ :** ಕದಂಬವನವನ್ನು ಕಡಿದು ಪುರವನ್ನು ನಿರ್ಮಿಸಬೇಕೆಂಬುದು ಪಾರ್ವತಿಯ ಆಕಾಂಕ್ಷೆ, ಅಂತೆಯೇ ಶಿವನು ಕಲ್ಯಾಣ ಪಟ್ಟಣದ ಕುಲಶೇಖರ ಪಾಂಡ್ಯನ ಕನಸಿನಲ್ಲಿ ಸಿದ್ಧೇಶ್ವರನ ರೂಪವಾಗಿ ಬಂದು ಪಟ್ಟಣವನ್ನು ನಿರ್ಮಿಸುವಂತೆ ತಿಳಿಸಿದಾಗ ದೊರೆ ಕಾಡನ್ನು ಕಡಿದು ಪಟ್ಟಣವನ್ನು ನಿರ್ಮಿಸಿದನು. ಆಗ ಕ್ರೂರ ಮೃಗ, ಪ್ರಾಣಿ, ಪಕ್ಷಿ ಮೊದಲಾದವುಗಳಿಂದ ಈ ಪುರವು ಕಲುಷಿತವಾಯಿತು ಎಂದು ದೊರೆ ಚಿಂತಿಸುತ್ತಿದ್ದಾಗ, ಶಿವ ತನ್ನ ತಲೆಯಲ್ಲಿ ಧರಿಸಿದ್ದ ಚಂದ್ರನ ಬೆಳದಿಂಗಳಿಂದ ಪುರವನ್ನು ಶುದ್ಧಿಮಾಡಿದನು. ಸುಂದರೇಶ್ವಲಿಂಗದ ಸೇವೆ ಮಾಡಿದ ಕುಲಶೇಖರ ಪಾಂಡ್ಯ ಚಕ್ರವರ್ತಿ ಪದವಿ ಪಡೆದುದಲ್ಲದೆ, ಮಲಯಧ್ವಜನೆಂಬ ಮಗನನ್ನು ಕಾಂಚನಮಾಲ ಎಂಬ ಸೊಸೆಯನ್ನು ಪಡೆದು ಶಿವಭಕ್ತಿಯಿಂದ ಸುಖವಾಗಿದ್ದನು.

೪. **ತಟಾತಕಾಜನನಲೀಲೆ :** ವಿಶ್ವಾವಸು ಎಂಬ ಗಂಧರ್ವರಾಜನ ಮಗಳು ವಿದ್ಯಾವತಿ. ಪಾರ್ವತಿಯ ಪ್ರಿಯಭಕ್ತಳಾದ ಈಕೆ ಹಾಲಾಸ್ಯಕ್ಷೇತ್ರದ ಮೀನಾಕ್ಷಿಯನ್ನು ಪೂಜಿಸಿ, ನೀನೇ ನನ್ನ ಮಗಳಾಗು ಎಂದು ಪ್ರಾರ್ಥಿಸಿದಳು. ಅಂತೆಯೇ ವಿದ್ಯಾವತಿ ಸೂರಸೇನನಿಗೆ ಕಾಂಚನಮಾಲೆ ಎಂಬ ಮಗಳಾಗಿ ಮಲಯಧ್ವಜನಿಗೆ ಪತ್ನಿಯಾದಾಗ, ಪಾರ್ವತಿ ಇವರಿಗೆ ಅಯೋನಿಜೆಯಾಗಿ 'ತ್ರಿಕುಚದ' ತಟಾಕಾದೇವಿಯಾಗಿ ಜನಿಸುತ್ತಾಳೆ. ಈ ವಿಪರ್ಯಾಸದಿಂದ ಮಲಯಧ್ವಜ ಚಿಂತಾಕ್ರಾಂತನಾದಾಗ ಶಿವನ ನೋಟದಿಂದ ಇದು ದೂರವಾಗುತ್ತದೆ

ಎಂದು ಆಕಾಶವಾಣಿಯಾಗುತ್ತದೆ. ಆಗ ಉಜ್ವಲವಾದ ಹಾಲಾಸ್ಯಕ್ಷೇತ್ರ ದರ್ಶನದಿಂದ ಒಳ್ಳೆಯದಾಗುತ್ತದೆ. ದೊರೆ ಮಗಳನ್ನು ಸರ್ವವಿದ್ಯಾ ಪಾರಂಗತಳನ್ನಾಗಿ ಮಾಡಿ ಸ್ವರ್ಗಸ್ಥನಾಗುತ್ತಾನೆ.

೫. **ತಟಾತಕಾಕಲ್ಯಾಣಲೀಲೆ :** ತನ್ನ ತಾಯಿಯಿಂದ ಆಕಾಶವಾಣಿಯ ಸಂಗತಿಯನ್ನು ತಿಳಿದ ತಟಾತಕಾದೇವಿ ದಿಗ್ವಿಜಯವನ್ನು ಕೈಗೊಂಡು, ದೇವತೆಗಳನ್ನು ಜಯಿಸಿ, ಕೈಲಾಸಕ್ಕೆ ಬಂದು ನಂದಿಯನ್ನು ಗೆಲ್ಲುತ್ತಾಳೆ. ಆಗ ಶಿವನ ದೃಷ್ಟಿ ತಟಾತಕೆಯ ಮೇಲೆ ಬಿದ್ದಾಗ ಅವಳ ಮೂರನೆಯ 'ಕುಚ' ಮಾಯವಾಗುತ್ತದೆ ಯಲ್ಲದೇ, ಶಿವನೇ ತನ್ನ ಪತಿ ಎಂಬ ಅಂಶವೂ ತಿಳಿಯುತ್ತದೆ. ನಡೆದುದೆಲ್ಲವನ್ನು ತಿಳಿದು ಸಂತೋಷಿತಳಾದ ಕಾಂಚನಮಾಲೆ ತನ್ನ ಇಚ್ಛೆಯಂತೆ ಶಿವ ಮತ್ತು ತಟಾತಕೆಯ ವಿವಾಹ ಕಾರ್ಯ ನೆರವೇರಿಸುತ್ತಾಳೆ. ಶಿವನೇ ಸುಂದರಪಾಂಡ್ಯ ರಾಜನಾಗಿ ಮೆರೆಯುತ್ತಾನೆ.

೬. **ಪತಂಜಲೀ ದೃಷ್ಟ ನರ್ತನಲೀಲೆ :** ಶಿವನ ನಾಟ್ಯವನ್ನು ನೋಡದೇ ಊಟ ಮಾಡುವುದಿಲ್ಲವೆಂಬ ಪದ್ಧತಿಯನ್ನಿಟ್ಟುಕೊಂಡ ಪತಂಜಲಿ ತನ್ನ ಇಚ್ಛೆಯನ್ನು ಸುಂದರ ಪಾಂಡ್ಯನಿಗೆ ತಿಳಿಸುತ್ತಾನೆ. ಆಗ ಜಗತ್ತನ್ನು ಅಲ್ಲೋಲ-ಕಲ್ಲೋಲಗೊಳಿಸುವಂತೆ, ಶಿವ ನರ್ತನ ಮಾಡಿದಾಗ ಸುಪ್ರೀತನಾದ ಪತಂಜಲಿ ಶಿವನನ್ನು ಪೂಜಿಸಿ ಊಟ ಮಾಡುವನು.

೭. **ಕುಂಡೋದರಾನ್ನಭಕ್ಷಣಲೀಲೆ :** ಪತಂಜಲಿ ಮೊದಲಾದ ತಾಪಸರು, ದೇವತೆಗಳು, ಮಾನಿಸರು, ಸರ್ಪರಾಜರೆಲ್ಲರೂ ಊಟಮಾಡಿದರೂ ಸಹಿತ ಮೇಲೋಗರ ಮತ್ತು ಬೋನಗಳೆಲ್ಲವೂ ಹಾಗೆಯೇ ಉಳಿಯುತ್ತವೆ. ಆಗ ತಟಾತಕೆ ಶಿವನಲ್ಲಿಗೆ ಬಂದು ನಿನ್ನ ಸತ್ತಿಗೆ ಹಿಡಿಯುವನೊಬ್ಬನನ್ನು ಕಳಿಸಿ ಕೊಡು ಎಂದಾಗ, ಆತ ಕಾಲರುದ್ರನಾದ ಕುಂಡೋದರನನ್ನು ಕಳಿಸುವನು. ಆತ ಬಂದು ಬೆಂದದ್ದು, ಬೇಯದಿದ್ದುದು, ಸೊಪ್ಪು-ಸೊವಡುಗಳೆಲ್ಲವನ್ನೂ ತಿಂದು ಹಾಕಿದಾಗ ತಟಾತಕೆ ಈತನನ್ನು ತೃಪ್ತಿಪಡಿಸುವ ಮಾರ್ಗವಾವುದೆಂದು ಚಿಂತಾಕ್ರಾಂತಳಾಗುವಳು.

೮. **ಕುಂಡಕುಕ್ಷಿದರ್ಶಿತಾನ್ನಗರ್ನಾದಿಲೀಲೆ :** ಕುಂಡೋದರನ ಹಸಿವನ್ನು ತಣಿಸುವಂತೆ ತಟಾತಕೆ ಶಿವನಲ್ಲಿ ಪ್ರಾರ್ಥಿಸಿಕೊಂಡಾಗ, ಹೊಟ್ಟೆ ತುಂಬುವುದಕ್ಕಾಗಿ ಮೊಸರನ್ನ ತುಂಬಿದ ಬಾವಿಗಳನ್ನು, ಬಾಯಾರಿಕೆಯನ್ನು ನೀಗಿಸಲು ವೇಗವತಿ ಎನ್ನುವ ಹೆಸರಿನ ಗಂಗೆಯನ್ನು ಅಲ್ಲಿ ಹರಿಸಿದನು. ಈ ರೀತಿ ಉಗಮ ಹೊಂದಿದ ವೇಗವತಿ ನದಿಯೇ ಇಂದಿಗೂ ಅಲ್ಲಿ ಹರಿಯುತ್ತಿದೆ. ಇದೇ ವೇಗವತಿ ಉತ್ಪತ್ತಿ ಎಂದು ಅಗಸ್ತ್ಯನು ಮುನಿಗಳಿಗೆ ಹೇಳಿದನು.

೯. **ಸಪ್ತಸಾಗರಾಯನಲೀಲೆ :** ಸುಂದರೇಶ್ವರ ದರ್ಶನಾಕಾಂಕ್ಷಿಯಾಗಿ ಬಂದ ಗೌತಮ ಮುನಿಯಿಂದ ಪುರಾಣವನ್ನು ಕೇಳುವುದರ ಜೊತೆಗೆ, ನದೀ ನದ ಸಮುದ್ರಗಳಲ್ಲಿ ಸ್ನಾನಮಾಡಿ, ಮಲಯಧ್ವಜನೊಡನೆ

ಕೈಲಾಸ ಸೇರು ಎಂಬ ಸೂಚನೆಯನ್ನು ಕಾಂಚನಮಾಲೆ ಶಿವನಿಂದ ಪಡೆಯುತ್ತಾಳೆ. ಸಮುದ್ರ ಸ್ನಾನ ಮಾಡಬೇಕೆಂಬ ತನ್ನ ಇಚ್ಛೆಯನ್ನು ತಟಾತಕೆಗೆ ತಿಳಿಸಲಾಗಿ, ಶಿವ ಸಪ್ತಸಮುದ್ರಗಳನ್ನು ಬರಿಸಿದನು. ಅದೇ ಇಂದು ಒಂದು ಕಡೆ ಸೇರಿ ಸಪ್ತಾಬ್ಧಿತೀರ್ಥವೆಂದು ಹೆಸರಾಗಿದೆ.

೧೦. **ಮಲಯಧ್ವಜದರ್ಶನಲೀಲೆ :** ಸಮುದ್ರ ಸ್ನಾನಾಕಾಂಕ್ಷಿಯಾಗಿ ಬಂದ ಕಾಂಚನಮಾಲೆಗೆ ಬುಧರು ಗಂಡ ಮಕ್ಕಳಿಲ್ಲದ ಸಾಗರ ಸ್ನಾನ ವ್ಯರ್ಥ ಎನ್ನುತ್ತಾರೆ. ಇದನ್ನು ತಿಳಿದ ತಟಾತಕೆ ತಂದೆಯನ್ನು ಕರೆಸಬೇಕೆಂದು ಶಿವನನ್ನು ಪ್ರಾರ್ಥಿಸುತ್ತಾಳೆ. ಆಗ ಸ್ವರ್ಗಸ್ಥನಾಗಿದ್ದ ಮಲಯಧ್ವಜನನ್ನು ಶಿವ ಮತ್ತೊಮ್ಮೆ ಭೂಲೋಕಕ್ಕೆ ಕರೆಯಿಸಿಕೊಂಡು, ಕಾಂಚನಮಾಲೆಯೊಡನೆ ದ್ವಿತೀಯ ಕಲ್ಯಾಣ ಮಾಡಿಸಿ ಸಪ್ತಸಾಗರ ಸ್ನಾನ ಮಾಡಿ, ಶಿವಲೋಕದಿಂದ ಬಂದ ವಿಮಾನದಲ್ಲಿ ಅವರಿಬ್ಬರನ್ನು ಕೈಲಾಸಕ್ಕೆ ಕಳಿಸುವನು.

೧೧. **ಕುಮಾರೋತ್ಪತ್ತಿಲೀಲೆ :** ತಟಾತಕೆ ಗರ್ಭವತಿಯಾದಳು, ಸೀಮಂತ ಕರ್ಮಗಳಾದುವು, ಶುಭಲಗ್ನದಲ್ಲಿ ಜನಿಸಿದ ಮಗುವಿಗೆ 'ಉಗ್ರಪಾಂಡ್ಯ' ಎಂದು ನಾಮಕರಣ ಮಾಡುವರು. ಸುಂದರಮಹಾರಾಜ ಅವನಿಗೆ ಮದುವೆಯನ್ನು ಮಾಡಿ ಪಟ್ಟವನ್ನು ಕಟ್ಟಲು ಅನುವಾಗುತ್ತಾರೆ.

೧೨. **ಉಗ್ರಪಾಂಡ್ಯವಲಯಾಧ್ಯಾಯುಧತ್ರಯದಾನಲೀಲೆ :** ಕಲ್ಯಾಣ ನಗರದ ಸೂರ್ಯವಂಶಕ್ಕೆ ಸೇರಿದ ಸೋಮಶೇಖರ ರಾಜನು, ತನ್ನ ಮಗಳಾದ ಕಾಂತಿಮತಿಯ ವಿವಾಹ ಕಾರ್ಯಕ್ಕೆ ಚಿಂತಿಸುತ್ತಿರಲಾಗಿ, ಸುಂದರೇಶ್ವರನು ದೊರೆಯ ಕನಸಿನಲ್ಲಿ ಬಂದು ಒಂದು ಉಪಾಯವನ್ನು ಸೂಚಿಸುತ್ತಾನೆ. ಅದರಂತೆ ದೊರೆ ತನ್ನ ಮಗಳನ್ನು ಉಗ್ರಪಾಂಡ್ಯನಿಗೆ ಧಾರೆಯೆರೆದು ಕೊಡುವುದರೊಂದಿಗೆ ಚಕ್ರ, ಶಕ್ತಿ, ಚಂಡಾಯುಧ ಎನ್ನುವ ಹೆಸರಿನ ಮೂರು ಆಯುಧಗಳನ್ನು ಕೊಟ್ಟನು.

೧೩. **ಶಕ್ತಿಸಾಗರತಾಡಲೀಲೆ :** ದೊರೆತನಕ್ಕೆ ಧರ್ಮವೇ ಬೀಜವೆಂಬಂತೆ ಉಗ್ರಪಾಂಡ್ಯನು ರಾಜ್ಯ ಪರಿಪಾಲನೆ ಮಾಡುತ್ತಾ, ಮಲಯಧ್ವಜ ಪ್ರೀತ್ಯರ್ಥವಾಗಿ ಅಶ್ವಮೇಧಯಾಗ ಮಾಡಿದನಲ್ಲದೆ, ಇಂದ್ರನ ವೈಭವವನ್ನು ಸೆಳೆದು ಕೊಳ್ಳುವ ಸಿದ್ಧತೆಯಲ್ಲಿದ್ದನು. ಇದನ್ನು ತಿಳಿದ ಇಂದ್ರ ಮಧುರಾ ನಗರವನ್ನು ಮುಳುಗಿಸುವಂತೆ ಸಮುದ್ರಕ್ಕೆ ಆಜ್ಞಾಪಿಸಿದನು. ಭಯಭೀತರಾದ ಜನರು ಶಿವನ ಮೊರೆಹೊಕ್ಕರು ಶಿವನ ಸೂಚನೆಯಂತೆ ದೊರೆ ಶಕ್ತ್ಯಾಯುಧವನ್ನು ಪ್ರಯೋಗಿಸಲು ಸಮುದ್ರ ಹಿಂದೆಗೆಯುತ್ತದೆ. ಇಂದ್ರ ಮೊದಲಾದ ದೇವತೆಗಳ ಪ್ರಾರ್ಥನೆಯಂತೆ ಶಿವ ಅಲ್ಲಿಯೇ ನೆಲಸುವುದರೊಂದಿಗೆ ಮಧುರೆಯಲ್ಲಿ ವಿದ್ವಾಂಸರ ತೃತೀಯ ಸಂಘ ಸ್ಥಾಪಿತವಾಗುತ್ತದೆ.

೧೪. **ಇಂದ್ರಮೌಳಿಭೇದನಲೀಲೆ :** ಚೇರ, ಚೋಳ, ಪಾಂಡ್ಯ ರಾಜ್ಯಗಳಲ್ಲಿ ೧೨ ವರ್ಷ ಕ್ಷಾಮ ತಲೆದೋರಲಾಗಿ ಅವರೆಲ್ಲ ಶಿವನನ್ನು ಪ್ರಾರ್ಥಿಸಿದರು. ಆಗ ನುಡಿದ ಆಕಾಶವಾಣಿಯಂತೆ ಅವರು

ಇಂದ್ರನ ಮೊರೆಹೊಕ್ಕರು. ಆಗ ಚೇರ, ಚೋಳ, ರಾಜ್ಯದಲ್ಲಿ ಮಾತ್ರ ಮಳೆಯಾಗುತ್ತದೆ. ಇದನ್ನು ದೈವಾಧೀನವೆಂದು ತಿಳಿದ ಪಾಂಡ್ಯರಾಜ ಶಿವಧ್ಯಾನದಲ್ಲಿ ನಿರತನಾಗುತ್ತಾನೆ. ಬೇಟೆಯಾಡುತ್ತಿರುವಾಗ ಮಲಯಾಚಲದಲ್ಲಿರುವ ಪುಷ್ಕಳ ಮುಖ್ಯ ಮೇಘಗಳನ್ನು ಸೆರೆಯಲ್ಲಿಡುತ್ತಾನೆ. ಇದನ್ನರಿತ ಇಂದ್ರ ಯುದ್ಧಕ್ಕೆ ಬಂದಾಗ ಉಗ್ರನು 'ವಲಯಾಯುಧ'ವನ್ನು ಪ್ರಯೋಗಿಸಿ ಇಂದ್ರಮೌಳಿಭೇದನ ಮಾಡಿದನು. ಆಗ ಕ್ಷಾಮ ಪರಿಹಾರವಾಗಿ ಸುಭೀಕ್ಷೆವುಂಟಾಯಿತು.

೧೫. **ಮೇರುಕಾಂಚನ ಅಪಹರಣಲೀಲೆ :** ಉಗ್ರಪಾಂಡ್ಯನು ತನ್ನ ಮಗ ವೀರಪಾಂಡ್ಯನ ಜೊತೆ ರಾಜ್ಯವಾಳುತ್ತಿರುವಾಗ ರಾಜ್ಯದಲ್ಲಿ ಮತ್ತೆ ಕ್ಷಾಮತಲೆದೋರುತ್ತದೆ. ಉಗ್ರಮಹಾರಾಜನ ಕನಸಿನಲ್ಲಿ ಬಂದ ಶಿವ ಮೇರು ಪರ್ವತದ ತುದಿಯನ್ನು ಚಂಡಾಯುಧದಿಂದ ಹೊಡೆದು ಧನವನ್ನು ತಂದು ಎಲ್ಲರನ್ನು ಸುಖಿಪಡಿಸು ಮಳೆಯಾಗುತ್ತದೆ. ಕಡೆಯಲ್ಲಿ ಶಿವಭಕ್ತನೊಬ್ಬನನ್ನು ಪೂಜಿಸು ಎಂದು ತಿಳಿಸುವನು. ಅದೇ ರೀತಿ ರಾಜ ಮೇರು ಪರ್ವತವನ್ನು ಅಗೆದು ಒಂಟೆಗಳ ಮೇಲೆ ಧನ ಕನಕಗಳನ್ನು ಹೋರಿಸಿಕೊಂಡು ಬಂದು ಶಿವಸ್ತುತಿ ಮಾಡಿದನು.

೧೬. **ವೇದಾರ್ಥಬೋಧನೆಲೀಲೆ :** ನೈಮಿಷಾರಣ್ಯದಲ್ಲಿ ನೆಲಸಿದ್ದ ಕಣ್ವ, ಗಾರ್ಗ್ಯ, ಶಾಂಡಿಲ್ಯ ಮೊದಲಾದ ಋಷಿಗಳು ವೇದಾರ್ಥವನ್ನು ತಿಳಿಸಬೇಕೆಂದು ಹರಭಕ್ತನೆನ್ನುವ ಮುನಿಯನ್ನು ಕೇಳಿದರು. ಅವನು ಸುಂದರೇಶ್ವರನ ದಕ್ಷಿಣ ಭಾಗದಲ್ಲಿರುವ ದಕ್ಷಿಣಾಮೂರ್ತಿಯನ್ನು ಭಜಿಸಲು ತಿಳಿಸಿದನು. ಋಷಿಗಳು ಪ್ರತ್ಯಕ್ಷನಾದ ದಕ್ಷಿಣಾಮೂರ್ತಿಯಿಂದ ವೇದಾರ್ಥವನ್ನು ಅರಿತುಕೊಳ್ಳುವರು.

ತ್ರೇತ್ರಾಯುಗದ ಲೀಲೆಗಳು

೧. **ರಾಜಕಿರೀಟಮಣಿಪ್ರಧಾನಲೀಲೆ :** ಅಭಿಷೇಕಪಾಂಡ್ಯನು ಐದು ವರ್ಷದವನಾಗಿದ್ದಾಗ ಬೇಟೆಗೆ ಹೋದ ವೀರಪಾಂಡ್ಯ ಮರಣ ಹೊಂದುತ್ತಾನೆ. ಮಂತ್ರಿಗಳ ಕುಹಕತನದಿಂದಾಗಿ ಭಂಡಾರವೆಲ್ಲ ಬರಿದಾಗಲು ಅವರೆಲ್ಲರೂ ಸುಂದರೇಶ್ವರನಿಗೆ ಮೊರೆಹೋಗುತ್ತಾರೆ. ಆಗ ಪ್ರತ್ಯಕ್ಷನಾದ ಶಿವನು ಅಭಿಷೇಕಪಾಂಡ್ಯನಿಗೆ ಅಪಾರವಾದ ಮುತ್ತು, ರತ್ನಗಳನ್ನು ನೀಡಿದಾಗ ಹರ್ಷಗೊಂಡ ಮಂತ್ರಿಗಳು ಕುಮಾರನಿಗೆ ಪಟ್ಟಗಟ್ಟುತ್ತಾರೆ.

೨. **ಮೇಘಸಾಗರಪಾನಲೀಲೆ :** ಸುಂದರೇಶ್ವರನನ್ನು ಕರ್ಪೂರ ಸುಂದರನೆಂದು ಪೂಜಿಸುತ್ತಿರುವ, ಅಭಿಷೇಕಪಾಂಡ್ಯನಿಗೆ ಸಮನಾದ ಭಕ್ತರಿಲ್ಲ. ಶಿವನಿಗೆ ಸದೃಶವಾದ ಲಿಂಗವಿಲ್ಲವೆಂದು ಹಾಲಾಸ್ಯ ಕ್ಷೇತ್ರದ ಮಹಿಮೆಯನ್ನು ಇಂದ್ರನಿಂದ ತಿಳಿದ ವರುಣನು, ದೇವವೈದ್ಯರಿಂದಲೂ ಜಗ್ಗದ 'ಜಲೋದರ ರೋಗ'ವನ್ನು ನಿವಾರಿಸಿಕೊಳ್ಳಬೇಕೆಂದು ಮಧುರೆಗೆ ಬರುತ್ತಾನೆ. ಆದರೆ ತನ್ನ ನೀಚ ಬುದ್ಧಿಯಿಂದಾಗಿ

ಗಂಡನ ಮನೆಯಲ್ಲಿ ಬಹುವಿಧದಲ್ಲಿ ಪೀಡಿಸುತ್ತ ಉದಾಸೀನವಾಗಿ ಕಾಣುತ್ತಿರುತ್ತಾರೆ. ಶಿವಭಕ್ತೆಯಾದ ಇವಳ ಕಷ್ಟ ಪರಿಹರಿಸಲು ಶಿವ ಕೈಲಾಸಕ್ಕೆ ಕರೆದೊಯ್ಯುತ್ತಾನೆ.

೮. **ವ್ಯತ್ಯಸ್ತನೃತ್ತಲೀಲೆ :** ವಿಕ್ರಮಪಾಂಡ್ಯನ ಮಗ ರಾಜಶೇಖರಪಾಂಡ್ಯನು ೬೩ ಕಲೆಗಳಲ್ಲಿ ನಿಷ್ಣಾತನಾಗಿದ್ದನಾದರೂ, ಆತನಿಗೆ ಶಿವನ ತಾಂಡವ ನೃತ್ಯಕ್ಕೆ ಸೇರಿದ ನಾಟ್ಯವೊಂದು ಬರುತ್ತಿರಲಿಲ್ಲ. ಇದರಿಂದ ಚಿಂತಿತನಾದ ದೊರೆ ತಾಂಡವೇಶ್ವರನನ್ನು ಪೂಜಿಸಿ ತನ್ನ ಆಸೆಯನ್ನು ಪೂರೈಸಿಕೊಂಡನು. ನಂತರ ಕುಲೋತ್ತುಂಗಪಾಂಡ್ಯನಿಗೆ ಪಟ್ಟಗಟ್ಟಿದನು.

೯. **ದ್ವಿಜವನಿತಾವಧ ನಿರೂಪಣಲೀಲೆ :** ಕುಲೋತ್ತುಂಗ ಪಾಂಡ್ಯನಿಗೆ ಹತ್ತುಸಾವಿರ ಜನ ಹೆಂಡತಿಯರು. ಅರವತ್ತು ಸಾವಿರ ಮಕ್ಕಳು. ಅನಂತ ಎನ್ನುವವನು ಹಿರಿಯ ಮಗ. ಆತನ ರಾಜ್ಯದಲ್ಲಿ ಜನರು ಧರ್ಮಮಾರ್ಗದಲ್ಲಿ ಜೀವಿಸುತ್ತಿರಲು, ನವಪುರದ ಬ್ರಾಹ್ಮಣನ ಹೆಂಡತಿಯು ಬೇಡನೊಬ್ಬ ಬಿಟ್ಟ ಬಾಣ ತಗಲಿ ಅನಿರೀಕ್ಷಿತವಾಗಿ ಮರಣ ಹೊಂದಿದಳು. ಬೇಡನನ್ನು ಸೆರೆಯಲ್ಲಿಟ್ಟು ದೊರೆ ಸುಂದರೇಶ್ವರನನ್ನು ಪ್ರಾರ್ಥಿಸಲು ಆಗ ಸತ್ಯ ಸಂಗತಿಯ ಅರಿವಾಯಿತು. ದೊರೆ ಸೆರೆಯಲ್ಲಿಟ್ಟಿದ್ದ ಬೇಡನನ್ನು ಬಿಡುಗಡೆ ಮಾಡಿ ಬ್ರಾಹ್ಮಣನಿಗೆ ಮತ್ತೊಂದು ಮದುವೆ ಮಾಡುತ್ತಾನೆ.

೧೦. **ಪಿತೃಘ್ನದೋಷನಿವಾರಣಲೀಲೆ :** ಅವಂತಿ ಎಂಬ ಊರಿನ ಬಡ ಬ್ರಾಹ್ಮಣ ಕುಟುಂಬದ ಮಗನೊಬ್ಬ ಕಾಮಾತುರನಾಗಿ ತನ್ನ ತಾಯಿಯನ್ನು ಸಂಭೋಗಿಸಿ, ತಂದೆಯನ್ನು ಕೊಂದು ಪಾಪಿಯಾಗುತ್ತಾನೆ. ಈತನು ಪಾರ್ವತಿ ಪರಮೇಶ್ವರರನ್ನು ಸ್ತುತಿಸಲು ಅವರ ಮಾತಿನಂತೆ ಮಧುರೆಯ ಶಿವಭಕ್ತರು ಮಿಂದ ನೀರಿನಲ್ಲಿ ಮಿಂದು, ಶಿವಭಕ್ತರ ಸೇವೆ ಮಾಡಿ, ಭಿಕ್ಷಾನ್ನವನ್ನು ಉಂಡು ಕೊನೆಯಲ್ಲಿ ಪಾಪ ಮುಕ್ತನಾಗುತ್ತಾನೆ.

೧೧. **ಅಂಕವಿಜಯಲೀಲೆ :** ಮಧುರೆಯ ಶಸ್ತ್ರ ಶಿಕ್ಷಕನ ಶಿಷ್ಯನೊಬ್ಬ ಗುರುವಿನ ವಿರುದ್ಧ ಒಂದು ಗರಡಿಯನ್ನು ಕಟ್ಟುವನಲ್ಲದೇ, ಗುರುಪತ್ನಿಯನ್ನೇ ಮೋಹಿಸಿದಾಗ ಗುರುವಿನ ವೇಷ ಧರಿಸಿದ ಶಿವ ಆತನನ್ನು ಅಂಕದಲ್ಲಿ(ಗರಡಿ) ಕೊಂದುಹಾಕುವನು.

೧೨. **ನಗ್ನಸರ್ಪಹನನಲೀಲೆ :** ಅನಂತಗುಣ ಪಾಂಡ್ಯನ ಶಿವಭಕ್ತಿಯನ್ನು ಸಹಿಸದಾದ ಜೈನರು ಅಭಿಚಾರಯಾಗದಲ್ಲಿ ಉದಯಿಸಿದ ಸರ್ಪದಿಂದ ರಾಜ ಮತ್ತು ಪ್ರಜೆಗಳಿಗೆ ಹಿಂಸಿಸಲು ಪ್ರಾರಂಭಿಸುತ್ತಾರೆ. ಆಗ ಅವರು ಶಿವನನ್ನು ಪ್ರಾರ್ಥಿಸಲು ಆತ ಸಿದ್ಧರೂಪದಿಂದ ಪ್ರತ್ಯಕ್ಷನಾಗಿ, ಭಲ್ಲಾಯುಧದಿಂದ ಸರ್ಪವನ್ನು ಕೊಂದು ರಾಜ ಮತ್ತು ಪ್ರಜೆಗಳನ್ನು ಕಾಪಾಡುತ್ತಾನೆ. ಅಲ್ಲಿ ಸತ್ತ ಸರ್ಪ 'ನಾಗಶೈಲ' ಎನ್ನುವ ಹೆಸರಿನಿಂದ ಪರ್ವತವಾಯಿತು. ಅಂದು ಶಿವ ವಿಷವನ್ನು ಮಧುರವಾಗಿ ಮಾಡಿದುದರಿಂದ ಆ ಊರಿಗೆ ಮಧುರಾಪುರವೆಂದು ಹೆಸರಾಗುತ್ತದೆ.

೧೩. ನಗ್ನಧೇನು ಪತನಲೀಲೆ : ಅನಂತಗುಣಪಾಂಡ್ಯನನ್ನು ಕೊಲ್ಲುವುದಕ್ಕಾಗಿ ಜೈನರು ತಮ್ಮ ಅಭಿಚಾರ ಹೋಮದ ಫಲವಾಗಿ ಅಸುರನೊಬ್ಬನನ್ನು ಹಸುವಿನ ರೂಪದಲ್ಲಿ ಪಡೆಯುವರು. ಭಯಂಕರ ರೂಪಿಯಾದ ಹಸುವನ್ನು ಕಂಡು ಹೆದರಿದ ಜನರು ಶಿವನನ್ನು ಪ್ರಾರ್ಥಿಸಲಾಗಿ, ಆತ ವೃಷಭ ರೂಪಿಯಾಗಿ ಬಂದು ಹಸುವನ್ನು ಕೊಲ್ಲುವನು. ಸತ್ತ ಹಸು ಗೋಪರ್ವತವಾಗಿ, ವೃಷಭನು ವೃಷಭ ಪರ್ವತವಾಗಿ ಕಂಗೊಳಿಸುತ್ತದೆ. ಸೀತೆಯನ್ನು ಹುಡುಕುತ್ತಾ ರಾಮ ಲಕ್ಷ್ಮಣರು ವೃಷಭ ಪರ್ವತಕ್ಕೆ ಬಂದಾಗ, ಅಗಸ್ತ್ಯಮುನಿಯಿಂದ ಸುಂದರೇಶ್ವರ ಮಹಿಮೆ ತಿಳಿದು, ಆಕಾಶವಾಣಿಯು ನುಡಿದಂತೆ ರಾಮನು ಸಮುದ್ರಕ್ಕೆ ಸೇತುವೆ ಕಟ್ಟಿ, ರಾವಣ ಕುಂಭಕರ್ಣರನ್ನು ಕೊಂದು, ವಿಭೀಷಣನಿಗೆ ಪಟ್ಟಕಟ್ಟಿದರು. ಅಲ್ಲಿಯೇ ರಾಮಲಿಂಗವನ್ನು ಸ್ಥಾಪಿಸಿ ಸುಂದರೇಶ್ವರನ ಕರುಣೆಗೆ ಪಾತ್ರರಾಗುವರು.

೧೪. ಸೇನಾದರ್ಶನಲೀಲೆ : ಕುಲಭೂಷಣಪಾಂಡ್ಯನ ಮೇಲೆ ಚೇದಿರಾಜ ಯುದ್ಧ ಸಾರಿದಾಗ ದೊರೆ ತನ್ನ ಸೇನಾಧಿಪತಿಯಾದ ಸುಂದರ ಸಾಮಂತನಿಗೆ ಸೇನಾಸಿದ್ಧತೆಯ ಜವಾಬ್ದಾರಿ ವಹಿಸಿಕೊಡುವನು. ಆರು ತಿಂಗಳ ನಂತರ ದೊರೆ ಸೇನೆ ಸಿದ್ಧವಾಯಿತೇ ಎಂದಾಗ ಸಾಮಂತ ಒಪ್ಪಿಗೆಯಿತ್ತನಾದರೂ, ದೊರೆ ಕೊಟ್ಟ ಹಣವನ್ನು ಶಿವಸೇವೆಗೆ ಸಮರ್ಪಿಸಿದ ಕಾರಣ ಚಿಂತಾಕ್ರಾಂತನಾದನು. ಕರುಣಾಮಯನಾದ ಶಿವನು ನಂದಿ, ಕುಂಡೋದರ ಮೊದಲಾದವರನ್ನು ಶಸ್ತ್ರ ಸನ್ನದ್ಧ ಸೇನೆಯೊಡನೆ ಮಾಡಿ ಕಳಿಸುವನು. ಸಂತೋಷಿತನಾದ ಸಾಮಂತದೊರೆಗೆ ಸೇನೆಯ ಪರಿಚಯ ಮಾಡಿಕೊಡುತ್ತಿರುವಾಗ ಚೇದಿ ದೊರೆ ಮರಣವನ್ನಪ್ಪಿದ ವಿಷಯ ತಿಳಿದುಬರುತ್ತದೆ.

೧೫. ಹೇಮನೀವೀ ಪ್ರಧಾನಲೀಲೆ : ಕುಲಭೂಷಣಪಾಂಡ್ಯನು ಯಾಗ, ಯಜನಾದಿ ಕ್ರಿಯೆಗಳನ್ನು ತ್ಯಜಿಸಿದುದರ ಫಲವಾಗಿ ಕ್ಷಾಮ ತಲೆದೋರುತ್ತದೆ. ಆಗ ಸುಂದರೇಶ್ವರನನ್ನು ಪ್ರಾರ್ಥಿಸಿ, ಶ್ರೌತ್ರೋಕಿ ಸಮೂಹವನ್ನು ಕರೆಸಿ ಧನ, ಕನಕ, ಹಂಚಿಕೆ ಮಾಡುತ್ತಾನೆ. ಆಗ ಮಳೆ ಬಂದು ರಾಜ್ಯದಲ್ಲೆಲ್ಲಾ ಸುಭೀಕ್ಷೆಯುಂಟಾಗುತ್ತದೆ.

೧೬. ವಲಯವಿಕ್ರಯಲೀಲೆ : ಬಿಕ್ಷಾಟನಾಲೀಲೆಯಲ್ಲಿದ್ದ ಶಿವ ಮೃತ್ಯುವಿನ ಗರ್ವವನ್ನು ಮುರಿದಾಗ, ಮೃತ್ಯು ನಿನ್ನ ಪಾದಸೇವೆಯೊಂದೇ ಸಾಕೆಂದಿತು. ದ್ವಾರಕೆಯಲ್ಲಿ ಕೃಷ್ಣನ ನೆತ್ತರನ್ನು ಭಿಕ್ಷೆಯಾಗಿ ಪಡೆದ ಶಿವ, ಕೊನೆಯಲ್ಲಿ ಅದನ್ನು ಕುರುಕ್ಷೇತ್ರದಲ್ಲಿ ನಿಕ್ಷೇಪಿಸುವನು. ದಾರುವನದಲ್ಲಿನ ರಾಗದ್ವೇಷಗಳನ್ನು ಪರೀಕ್ಷಿಸಲು ವಿಷ್ಣುವನ್ನು ಮೋಹಿನಿಯನ್ನಾಗಿ ಮಾಡಿದನಲ್ಲದೇ ಸುಂದರೇಶ್ವರನ ಸ್ಪರ್ಶದಿಂದ ಅವರಿಗೆ ಪುತ್ರ ಸಂತಾನವನ್ನು ಚಿರಂಜೀವಿತ್ವವನ್ನು ಕರುಣಿಸಿದನು.

ದ್ವಾಪರಯುಗದ ಲೀಲೆಗಳು

೧. **ಅಷ್ಟಸಿದ್ಧ್ಯುಪದೇಶಲೀಲೆ :** ಪರಶಿವನು ದಕ್ಷಿಣಾಮೂರ್ತಿ ರೂಪ ತಾಳಿ ಯಕ್ಷಿಣಿಯರಿಗೆ ಅಷ್ಟ ಸಿದ್ಧಿಯ ಉಪದೇಶ ಮಾಡುವ ಪ್ರಸಂಗದಲ್ಲಿ, ಯಕ್ಷಿಣಿಯರು ಎಚ್ಚರ ತಪ್ಪಿದರು. ಕೋಪಗೊಂಡ ಶಿವ ಅವರಿಗೆ ಕಲ್ಲಾಗಿ ಎಂದು ಶಾಪವಿತ್ತನು. ಶಾಪಪರಿಹಾರಾರ್ಥವಾಗಿ ಶ್ರೀಪಟ್ಟ ಮಂಗಳವೆಂಬ ಗ್ರಾಮದಲ್ಲಿ ಮಹಾವಟವೃಕ್ಷವಿದೆ, ಅಲ್ಲಿಗೆ ಹೋಗಿ ಶಿಲಾತನುಗಳಿಂದ ಸಹಸ್ರವರ್ಷ ಶಿವನ ವಾಕ್ಯವನ್ನು ಓದಬೇಕೆಂದು ತಿಳಿಸಿದನಲ್ಲದೆ, ನಂತರ ನಿಮಗೆ ಅಭಯವನ್ನೀಯುತ್ತೇನೆಂದು ನುಡಿದು ಅದೇ ರೀತಿ ನಡೆದುಕೊಂಡ ಯಕ್ಷಿಣಿಯರನ್ನು ಮತ್ತೆ ಕೈಲಾಸಕ್ಕೆ ಕರೆತಂದನು.

೨. **ಕಾಂತಾರಚ್ಛೇದಿಚೋಳಾರ್ಥಂದ್ವಾರಭೇದನಲೀಲೆ :** ಕಾಂತಾರಚ್ಛೇದನೆಂಬ ಚೋಳರಾಜ ಹಾಲಾಸ್ಯಮಹಾತ್ಮ್ಯೆಯನ್ನು ಕೇಳಿ, ಸುಂದರೇಶ್ವರನ ದರ್ಶನಾಕಾಂಕ್ಷಿಯಾಗಿ ಬಂದಾಗ ಸ್ವತಃ ಶಿವನೇ ಆತನಿಗೆ ಎಲ್ಲವನ್ನು ತೋರಿಸುವುದಲ್ಲದೇ, ಶಿವಭಕ್ತನಾದ ಪಾಂಡ್ಯರಾಜನನ್ನು ಬಲಶಾಲಿ ಎಂದು ಪ್ರಶಂಸಿಸಿ, ಮೀನಿನ ಮುದ್ರೆಯಿಂದ ಕೂಡಿದ ಬಾಗಿಲುಗಳಿಗೆ ನಂದಿಮುದ್ರೆ ಹಾಕುವನು.

೩. **ಪಾಂಡ್ಯಸೇನಾ ಪಾನೀಯ ಪ್ರಧಾನಲೀಲೆ :** ಚೋಳ ದೊರೆ ಕಾಂತಾರಚ್ಛೇದಕನು ತನ್ನ ಮಗಳನ್ನು ರಾಜೇಂದ್ರಪಾಂಡ್ಯನಿಗೆ ಕೊಡಬೇಕೆಂದಾಗ, ಪಾಂಡ್ಯರಾಜನ ತಮ್ಮನಾದ ರಾಜಸಿಂಹ ಕಪಟದಿಂದ ಕಾಂಚಿಯ ರಾಜಕುಮಾರಿಯನ್ನು ವಿವಾಹವಾಗುವನು. ನಂತರ ಅಳಿಯ ಮಾವಂದಿರಿಬ್ಬರೂ ಸೇರಿ ಪಾಂಡ್ಯರಾಜನ ಮೇಲೆ ಯುದ್ಧಸಾರುವರು. ಸತತ ಎರಡು ದಿನಗಳು ಯುದ್ಧದಲ್ಲಿ ಭಾಗವಹಿಸಿದ್ದ ಪಾಂಡ್ಯ ಸೇನಾನಿಗಳಿಗೆ ಶಿವ ತನ್ನ ಜಡೆಯಲ್ಲಿದ್ದ ಗಂಗೆಯ ಮೂಲಕ ಬಾಯಾರಿಕೆ ನೀಗಿಸುವನು.

೪. **ರಸವಾದಪ್ರದರ್ಶನಲೀಲೆ :** ಪುಷ್ಪವನವೆಂಬ ನಗರದ ಪುಷ್ಪವನೇಶ್ವರನ ನರ್ತಕಿಯಾದ ಹೇಮಕಿಯು ಶಿವಭಕ್ತರಿಗೆ ತನ್ನ ತನು ಮನ ಧನವನ್ನರ್ಪಿಸಿದ್ದಳು. ಅವಳ ಶಿವಭಕ್ತಿಗೆ ಮೆಚ್ಚಿದ ಶಿವ ಆಕೆಯ ಸ್ತ್ರೀ ಧರ್ಮವನ್ನು ಹೊಗಳಿ, ಅವಳು ಕೈಕೊಂಡಿದ್ದ ಚಿನ್ನದ ಚಂದ್ರಶೇಖರಮೂರ್ತಿಯ ರಚನೆಯ ಕಾರ್ಯದಲ್ಲಿ ಬೆಳ್ಳಿ ತಾಮ್ರಗಳೆಲ್ಲವನ್ನೂ ಚಿನ್ನವನ್ನಾಗಿ ಪರಿವರ್ತಿಸುವನು.

೫. **ಚೋಳಸೇನಾಪ್ರತಾಪನಲೀಲೆ :** ರಾಜೇಂದ್ರ ಪಾಂಡ್ಯನ ನಂತರ ಕ್ರಮವಾಗಿ ರಾಜೇಶ, ರಾಜಗಂಭೀರ, ಪಾಂಡ್ಯವಂಶಪ್ರದೀಪ, ಪುರುಹೂತಜಿತ್ತು, ಪಾಂಡ್ಯವಂಶಪತಾಕ, ಸುಂದರಪಾದ ಶೇಖರರು ಮಧುರೆಯನ್ನು ಆಳಿದರು. ಅಲ್ಪ ಬಲನಾದ ಸುಂದರಪಾದಶೇಖರನ ಮೇಲೆ ಚೋಳ ರಾಜನು ದಂಡೆತ್ತಿ ಬಂದನು. ಭಕ್ತ ಪ್ರಿಯ ಶಿವ ಕಿರಾತವೇಷದಿಂದ ಚೋಳನನ್ನು ಎದುರಿಸಿದನು.

೬. ಶೂದ್ರಾಕ್ಷಿತಮೂತಪ್ರಧಾನಲೀಲೆ : ಮಧುರೆಯಲ್ಲಿ ವಾಸವಾಗಿದ್ದ ಸೌಮ್ಯ ಮತ್ತು ಧರ್ಮಶೀಲಾದೇವಿಯರನ್ನು ಪರೀಕ್ಷಿಸಬೇಕೆಂದು ಅವರ ಹೊಲವೆಲ್ಲವನ್ನು ಹಾಳುಗೆಡಹಿ ಕ್ಷಾಮವುಂಟಾಗುವಂತೆ ಮಾಡುತ್ತಾನೆ. ಜಂಗಮಾರ್ಚಕರಾದ ಈ ಶೂದ್ರ ದಂಪತಿಗಳು ಸುಂದರೇಶ್ವರನನ್ನು ಪ್ರಾರ್ಥಿಸಿದಾಗ, ಶಿವ ಎಂದೆಂದಿಗೂ ತೀರದ ಅಕ್ಕಿಮೂಟೆಗಳನ್ನು ದಯಪಾಲಿಸುವನಲ್ಲದೇ, ಎಂದೆಂದಿಗೂ ಅನ್ನದಾನ ಮಾಡಬೇಕೆಂದು ತಿಳಿಸುತ್ತಾನೆ. ಅದೇ ರೀತಿ ನಡೆದುಕೊಂಡ ದಂಪತಿಗಳಿಬ್ಬರು ರಜತಾದ್ರಿಯನ್ನು ಸೇರುವರು.

೭. ವೈಶ್ಯಮಾತುಳಭಾವನಾಲೀಲೆ : ಮಧುರೆಯಲ್ಲಿ ಅರ್ಥಪತಿ ಮತ್ತು ಸುಶೀಲೆ ಎನ್ನುವ ವೈಶ್ಯದಂಪತಿಗಳಿಗೆ ಮಕ್ಕಳಿಲ್ಲ ಕಾರಣ ತಂಗಿಯ ಮಗನನ್ನು ಸಾಕಿಕೊಂಡರು. ನಂತರದಲ್ಲಿ ತಂಗಿಯ ಮಾತುಗಳಿಂದ ಬೇಸರಗೊಂಡ ದಂಪತಿಗಳಿಬ್ಬರೂ ಕಾಡಿಗೆ ಹೋಗುವರು. ಇತ್ತ ಅರ್ಥಪತಿಯ ದಾಯಾದಿಗಳು ತಾಯಿ-ಮಗನನ್ನು ಕಾಡಿಸಲಾಗಿ ಅವರಿಬ್ಬರೂ ಸುಂದರೇಶ್ವರನನ್ನು ಪ್ರಾರ್ಥಿಸಲಾಗಿ, ಸೋದರಮಾವನ ವೇಷಧಾರಿಯಾಗಿ ಬಂದ ಶಿವ ಎಲ್ಲ ಆಸ್ತಿಯನ್ನು ಅಳಿಯನಿಗೆ ಕೊಡಿಸುತ್ತಾನೆ. ವೈಶ್ಯರೂಪದ ಶಿವನನ್ನು ಪೂಜಿಸಿದ ದೊರೆ ವರಗುಣಪಾಂಡ್ಯನೆಂಬ ಮಗನನ್ನು ಪಡೆಯುತ್ತಾನೆ.

೮. ವರಗುಣಪಾಂಡ್ಯಬ್ರಹ್ಮಹತ್ಯ ವಿನಾಶನಲೀಲೆ : ವರಗುಣಪಾಂಡ್ಯನೊಮ್ಮೆ ಬೇಟೆಯಿಂದ ಹಿಂದಿರುಗುವಾಗ ದಾರಿಯಲ್ಲಿ ಒಬ್ಬ ಬ್ರಾಹ್ಮಣ ಅವರ ಕುದುರೆಯ ಕಾಲಿಗೆ ಸಿಕ್ಕಿ ಸತ್ತನು. ಅದರ ಫಲವಾಗಿ ರಾಜನನ್ನು ಬೊಮ್ಮೇತಿ ಹಿಂಬಾಲಿಸಿತು. ಪರಿಹಾರಕ್ಕೆ ಭಕ್ತನೊಬ್ಬನ ಸಲಹೆಯಂತೆ ದೊರೆ ಸುಂದರೇಶ್ವರ ದೇವಾಲಯದಲ್ಲಿ ಹಗಲು ರಾತ್ರಿ ಸಾವಿರದೆಂಟು ಪ್ರದಕ್ಷಿಣೆ ಹಾಕುತ್ತಿರುವಾಗ ನುಡಿದ ಆಕಾಶವಾಣಿಯಂತೆ, ದೊರೆ ಮಧ್ಯಾರ್ಜುನ ಕ್ಷೇತ್ರವನ್ನು ಪ್ರವೇಶಿಸಿದ ಕೂಡಲೇ ಬೊಮ್ಮೇತಿ ನಾಶವಾಗುತ್ತವೆ. ಆಗ ದೊರೆ ಅಲ್ಲಿಯೇ ದೇವಸ್ಥಾನದಲ್ಲಿ ಮಂಟಪಗಳನ್ನು ಪ್ರಸಾದಗಳನ್ನು ಕಟ್ಟಿಸಿ, ಪೌರಾಣಿಕರಿಂದ ಕೈಲಾಸ ವರ್ಣನೆಯನ್ನು ಕೇಳಿ, ಶಿವಲೋಕವನ್ನು ಕಣ್ಣಾರೆ ನೋಡಲು ಬಯಸಿದನು. ಕೂಡಲೇ ಶಿವ ಅಲ್ಲಿಯೇ ಕೈಲಾಸದರ್ಶನವನ್ನು ಮಾಡಿಸಿದನು. ಅಂದಿನಿಂದ ಮಧುರೆ ಭೂಲೋಕ ಶಿವಲೋಕವೆಂದು ಪ್ರಸಿದ್ಧವಾಯಿತು.

೯. ಕಾಷ್ಠಭಾರ ಧಾರಣಲೀಲೆ : ಚೋಳದೇಶದಿಂದ ಬಂದ ಡಕ್ಕಾವಾದನಕಾರರನ್ನು ಮೆಚ್ಚಿ ವರಗುಣ ಪಾಂಡ್ಯ ತನ್ನ ಆಸ್ಥಾನಗಾಯಕನಾದ ಭದ್ರನಿಗೆ ಸವಾಲೊಡ್ಡುತ್ತಾನೆ. ಇದರಿಂದ ಭಯಭೀತನಾದ ಭದ್ರಗಾಯಕ ಸುಂದರೇಶ್ವರನ ಮೊರೆಹೊಕ್ಕಾಗ, ಸೌದೆ ಮಾರುವವನ ವೇಷದಲ್ಲಿ ಬಂದ ಶಿವ ಚೋಳದೇಶದ ಡಕ್ಕಾವಾದಕನನ್ನು ತನ್ನ ಹಾಡಿನಿಂದ ಸೋಲಿಸಿ ಓಡಿಸುತ್ತಾನೆ.

೧೦. ಪತ್ರಿಕಾಲೇಖನಲೀಲೆ : ಗಾನವನ್ನು ಮೆಚ್ಚಿದ ಸುಂದರೇಶ್ವರ ಭದ್ರನಾಯಕನಿಗೆ ವಸ್ತ್ರಭೂಷಣ ರತ್ನ ಚಿನ್ನಗಳನ್ನು ಕೊಡುತ್ತಿದ್ದನು. ಅದೇ ರೀತಿ ಚೇರಭೂಪಾಲನೂ ಭದ್ರನಾಯಕನಿಗೆ ಹಣವನ್ನು ಕೊಡುವಂತೆ ತಿಳಿಸಿ ಒಂದು ಪತ್ರ ಬರೆದುಕೊಟ್ಟನು. ದೊರೆ ಅದನ್ನು ಓದಿ ಭದ್ರಗಾಯಕನನ್ನು ಆನೆಯ ಮೇಲೆ ಮೆರವಣಿಗೆ ಮಾಡಿಸಿ, ಚಿನ್ನ ತುಂಬಿದ ಚೀಲವನ್ನಿತ್ತು ಕಳಿಸುವನು. ಸಂತೃಪ್ತಿ ಹೊಂದಿದ ಗಾಯಕ ಮಧುರೆಗೆ ಬಂದು ಅಲ್ಲಿಯ ಶಿವಭಕ್ತರಿಗೆ ವಿನಿಯೋಗ ಮಾಡುವನು.

೧೧. ಭದ್ರಫಲಕ ಪ್ರಧಾನಲೀಲೆ : ಇತರ ಗಾಯಕರಿಂದ ನೊಂದ ಭದ್ರ ಮೂರು ಸಂಜೆಯಲ್ಲಿಯೂ ಶಿವನನ್ನು ಹಾಡಿಕೊಂಡು ಪೂಜಿಸುವ ವ್ರತ ಹಿಡಿದನು. ಈತನನ್ನು ಪರೀಕ್ಷಿಸಲು ಉದ್ದೇಶಿಸಿದ ಶಿವ ಭೂಮಿ ತೂತಾಗುವಂತೆ ಮಳೆಗರೆದರೂ ಆತ ವ್ರತಬಿಡದಿದ್ದಾಗ, ಆತನ ಭಕ್ತಿಗೆ ಮೆಚ್ಚಿ ಭದ್ರನಿಗೆ ಒಂದು ಚಿನ್ನದ ಹಲಗೆಯನ್ನು ದಯಪಾಲಿಸುವನು.

೧೨. ಭದ್ರಸ್ತ್ರೀಜಯಪ್ರದಲೀಲೆ : ವರಗುಣಪಾಂಡ್ಯನ ಮಗ ರಾಜರಾಜನು ದ್ವೀಪಾಂತರದಿಂದ ಒಬ್ಬ ಗಾಯಕಿಯನ್ನು ಕರೆಯಿಸಿ ಭದ್ರಗಾಯಕನ ಪತ್ನಿಯನ್ನು ಸೋಲಿಸುವಂತೆ ಹೇಳಿ, ಗೆದ್ದವರಿಗೆ ಗೌಡಿಯ ಪದವಿಯನ್ನು ನೀಡುವುದಾಗಿ ತಿಳಿಸಿದ. ಅವರಿಬ್ಬರೂ ಹಾಡಲಾಗಿ ದೊರೆ ಹೊಸಬಳನ್ನೇ ಹೊಗಳಿದ, ಇದರಿಂದ ದುಃಖಗೊಂಡ ಭದ್ರೆ ಸುಂದರೇಶ್ವರನ ಮೊರೆ ಹೊಕ್ಕಾಗ, ಕವಿವೇಷಧಾರಿಯಾಗಿ ಬಂದ ಶಿವ ಭದ್ರೆಯನ್ನೇ ವಿಜಯಶಾಲಿಯನ್ನಾಗಿ ಮಾಡುವನು.

೧೩. ವರಾಹಶಿಶುಸ್ತನ್ಯ ಪ್ರಧಾನಲೀಲೆ : ವೇಗವತಿನದಿ ತೀರದಲ್ಲಿ ಗುರುತೀರ್ಥವೆಂಬ ಪ್ರದೇಶದ ಸುಕಲಾಹ್ವಯ, ಸುಕಲಾಹ್ವಯೆ ಎಂಬ ಶೂದ್ರ ದಂಪತಿಗಳಿಗೆ ೧೨ ಜನ ಮಕ್ಕಳಿದ್ದರು. ಅವರು ಯೋಗಧ್ಯಾನದಲ್ಲಿದ್ದ ಮುನಿಗೆ ಬೈಯುವುದರೊಂದಿಗೆ ಹಿಂಸಿಸಿದ ಫಲವಾಗಿ ಹಂದಿಗಳಾಗಿ ಹುಟ್ಟುವರು. ಪಾರ್ವತಿಯೊಡನೆ ವಿಮಾನದಲ್ಲಿ ಗಗನವಿಹಾರಿಯಾಗಿ ಹೋಗುತ್ತಿದ್ದ ಶಿವ ಬಿಸಿಲಿನಲ್ಲಿ ಬಾಡಿ ಬಳಲುತ್ತಿದ್ದ ಹಂದಿಯ ಮರಿಗಳಿಗೆ, ಹೆಣ್ಣು ಹಂದಿಯ ವೇಷ ತಾಳಿ ಹಾಲು ಕುಡಿಸುತ್ತಾನೆ. ಶಿವನ ಕ್ಷೀರಪಾನದಿಂದಾಗಿ ಅವುಗಳ ಮುಖ ಮಾತ್ರ ವರಾಹ ರೂಪವಾಗುಳಿದು, ಉಳಿದ ಶರೀರವೆಲ್ಲ ಮನುಷ್ಯರಂತಾಗುತ್ತದೆ.

೧೪. ಕ್ರೋಡಶಿಶುಸಚಿವತ್ವ ಪ್ರಧಾನಲೀಲೆ : ಶಿವನ ಸ್ತನ್ಯಪಾನದಿಂದ ಪುನೀತರಾದ ಹಂದಿಯ ಮರಿಗಳು ಶಿವಾಚಾರ, ರಾಜನೀತಿಯುಳ್ಳವಾಗಿ ದ್ವಾದಶ ಸೂರ್ಯರಂತೆ ಮೆರೆಯುತ್ತವೆಯಲ್ಲದೇ ಶಿವನ ಆಜ್ಞೆಯಂತೆ ಪಾಂಡ್ಯದೊರೆಯ ಮಂತ್ರಿಗಳಾಗಿ ನೇಮಕಗೊಳ್ಳುತ್ತಾರೆ.

೧೫. ಭಾರದ್ವಾಜ ಮೃತ್ಯುಂಜಯೋಪದೇಶಲೀಲೆ : ಕಾಗೆಗಳಿಂದ ಹಿಂಸೆಗೊಳಗಾದ ಸಂಬಾರಗಾಗೆಯು ಈಶ್ವರನನ್ನು ಪೂಜಿಸಿ ಪ್ರತ್ಯಕ್ಷನಾದ ಶಿವನಿಗೆ ತನ್ನ ಸಮಸ್ಯೆಯನ್ನು ಹೇಳುತ್ತದೆ. ಆಗ ಶಿವನು ಮೃತ್ಯುಂಜಯ ಮಂತ್ರವನ್ನು ಉಪದೇಶಿಸಲಾಗಿ ಅದರ ಮಹತ್ವದಿಂದ ಸರ್ವಸಿದ್ಧಿಯನ್ನು ಪಡೆಯುತ್ತದೆ.

೧೬. **ಕೋಯಷ್ಟಿಮುಕ್ತಿ ಪ್ರಧಾನಲೀಲೆ** : ಮಿಂಬುಲಿಗ ಪಕ್ಷಿಯೊಂದು ಸತ್ಯತಪೋ ಮುನಿಯ ಆಶ್ರಯದಲ್ಲಿ ಹಾಲಾಸ್ಯಕ್ಷೇತ್ರ ಮಹಿಮೆಯನ್ನು ತಿಳಿದು, ಮಧುರೆಯ ಹೇಮಪದ್ಮಿನಿತೀರ್ಥದಲ್ಲಿ ಸ್ನಾನ ಮಾಡುವುದಕ್ಕಾಗಿ ಬರುತ್ತದೆ. ಅಲ್ಲಿಯ ಕೊಳದಲ್ಲಿರುವ ಮೀನುಗಳನ್ನು ತಿನ್ನಬೇಕೆಂಬ ಆಸೆಯಾದರೂ ಹಿಂಸೆ ಮಾಡಬಾರದೆಂದು ಜಾಗೃತವಾಗುತ್ತದೆ. ಇದನ್ನು ಮೆಚ್ಚಿದ ಶಿವ ಮೀಂಬುಲಿಗ ಪಕ್ಷಿಯನ್ನು ಪುಷ್ಪಕದಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಕರೆದೊಯ್ಯುತ್ತಾನೆ.

ಕಲಿಯುಗದ ಲೀಲೆಗಳು

೧. **ಪುರಸೀಮಾಪ್ರದರ್ಶನಲೀಲೆ** : ವಂಶಶೇಖರಪಾಂಡ್ಯ ರಾಜ್ಯಭಾರ ಮಾಡುವಾಗ ಮಧುರಾ ಪಟ್ಟಣದಲ್ಲಿ ಜನಸಂದಣಿ ಹೆಚ್ಚಿ ನಗರ ಕಿಷ್ಕಿಂದವಾಯಿತು. ದೊರೆ ಸಮಸ್ಯಾಪರಿಹಾರಕ್ಕಾಗಿ ಸುಂದರೇಶ್ವರನನ್ನು ಪ್ರಾರ್ಥಿಸಿದನು. ವಾಸುಕಿಣಿ ಪುರಸೀಮೆಯನ್ನು ಪ್ರದರ್ಶಿಸಬೇಕೆಂದು ತಿಳಿಸಲಾಗಿ, ಸರ್ಪವು ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರದ ಅಡ್ಡಳತೆಯ ಒಂದು ಗಾವುದದ ಸೀಮೆಯನ್ನು ಪ್ರದರ್ಶಿಸಿತು. ಅಂದಿನಿಂದ ಆ ಕ್ಷೇತ್ರ ಕದಂಬವನ ಎನ್ನಿಸಿಕೊಂಡು 'ಹಾಲಾಸ್ಯ' ಎನ್ನುವ ಹೆಸರನ್ನು ಹೊಂದಿತು. ಪೂರ್ವದ ಬಾಗಿಲು ಪುಷ್ಪವನಕ್ಷೇತ್ರ. ದಕ್ಷಿಣದ ಬಾಗಿಲು ಸುಬ್ರಹ್ಮಣ್ಯಶೈಲ, ಪಶ್ಚಿಮದ ಬಾಗಿಲು ಪದ್ಮಿಕಾಪುರಿ ಮತ್ತು ಉತ್ತರದ ಬಾಗಿಲು ವೃಷಭಾಚಲವೆಂದು ಹಾಲಾಸ್ಯಕ್ಷೇತ್ರದ ಸೀಮೆ ನಿರ್ಧಾರವಾಯಿತು. ಇಂಥ ಮಧುರೆಯಲ್ಲಿ ವಂಶಶೇಖರಪಾಂಡ್ಯ ವೀರಚೂಡಾಮಣಿ ಎನ್ನುವ ಮಗನನ್ನು ಪಡೆದು ಸುಖವಾಗಿದ್ದನು.

೨. **ಚೋಳಸೇನಾ ಪ್ರಬಂಜನಲೀಲೆ** : ವಂಶಶೇಖರಪಾಂಡ್ಯನ ಮೇಲೆ ಏರಿಬಂದ ವಿಕ್ರಮಚೋಳನು ಯುದ್ಧ ಸಾರಲಾಗಿ ಆತ ಸುಂದರೇಶ್ವರನನ್ನು ಪ್ರಾರ್ಥಿಸುತ್ತಾನೆ. ಅಭಯವನ್ನಿತ್ತು ಕಳಿಸಿದ ಶಿವನು ಪಾಂಡ್ಯ ಸೇನೆಯ ಮಧ್ಯದಲ್ಲಿದ್ದುಕೊಂಡು ಒಂದೊಂದು ಬಾಣವೂ, ನೂರಾಗಿ ಇರಿಯಲ್ಪಟ್ಟಾಗ ಚೋಳ ಸೈನಿಕರು ಓಡಿ ಹೋಗುತ್ತಾರೆ.

೩. **ಸಂಘಫಲಕ ಪ್ರಧಾನಲೀಲೆ** : ಬ್ರಹ್ಮನು ಆನಂದವನದಲ್ಲಿದ್ದಾಗ ಉದ್ಧತಳಾದ ಸರಸ್ವತಿಗೆ ನಲವತ್ತೆಂಟು ಮಾನುಷ ಜನ್ಮ ಪಡೆಯುವಂತೆ ಶಾಪವಿತ್ತನು. ಪರಿಹಾರಾರ್ಥವಾಗಿ ಸರಸ್ವತಿ ಬ್ರಹ್ಮನ ಕಾಲಿಗೆ ಬಿದ್ದಾಗ 'ಅ'ಕಾರಾದಿ 'ಹ'ಕಾರಾಂತವಾದ ವರ್ಣಗಳಲ್ಲಿ ಒಟ್ಟಿಗೆ ಜನ್ಮ ಪಡೆ, ಆ ಅಕ್ಷರಗಳೇ ಮುಂದೆ ಕವೀಶ್ವರರಾಗುತ್ತಾರೆ. ನಂತರ ನೀನು ನನ್ನನ್ನು ಸೇರು ಎಂದನು. ಅಂತೆಯೇ ಕಪಿಲ, ನಕ್ಕೀರ, ಭರತ ಮೊದಲಾದ ಕವಿಗಳು 'ಅ'ಕಾರಾದಿಯಾಗಿ ಹುಟ್ಟುತ್ತಾರೆ. 'ಹ' ಕಾರರೂಪನಾದ ಶಿವನು ಕವೀಶ್ವರನಾಗಿ ಜನಿಸುತ್ತಾನೆ. ಈ ಸಂಘಕವಿಗಳೆಲ್ಲರೂ ಸೇರಿ ತಮಗೆ ಅವಶ್ಯವೆನಿಸಿದ ಪೀಠವೊಂದನ್ನು

ಶಿವನಲ್ಲಿ ಕೇಳಿದಾಗ 'ಅ'ಕಾರಾದಿಯಾಗಿ 'ಕ್ಷ'ಕಾರಾಂತವಾದ ಗೇಣುದ್ದದ ಫಲಕವನ್ನು ದಾಯಪಾಲಿಸುತ್ತಾನೆ. ಒಬ್ಬೊಬ್ಬರು ಏರಿದಂತೆಲ್ಲಾ ಅದು ಗೇಣುದ್ದಾ ಹೆಚ್ಚಾತ್ತಾ ಹೋದಾಗ ಕೊನೆಯಲ್ಲಿ ಶಿವನ ಕಾವ್ಯವೇ ಶ್ರೇಷ್ಠವೆಂದು ಆಕಾಶವಾಣಿಯಾಗುತ್ತದೆ.

೪. ದ್ವಿಜಾರ್ಯ ಪ್ರಧಾನಲೀಲೆ : ವಂಶಚೂಡಾಮಣಿಯು ರಾಜ್ಯವಾಳುತ್ತಿರುವಾಗ ಶಿವೆಯ ತುರುಬು ಸಹಜವಾಗಿ ಪರಿಮಳದಿಂದ ಕೂಡಿದುದೋ ಅಥವಾ ಪುಷ್ಪ, ಗಂಧ ಮೊದಲಾದ ಸುಗಂಧಗಳಿಂದ ಪರಿಮಳಗೊಂಡಿತೋ ಎನ್ನುವ ಅನುಮಾನ ಮೂಡುತ್ತದೆ. ಈ ಒಗಟನ್ನು ಬಿಡಿಸಿದವರಿಗೆ ಚಿನ್ನದ ನಾಣ್ಯ ತುಂಬಿದ ಚೀಲವನ್ನು ಕೊಡುವುದಾಗಿ ಘೋಷಿಸಿದನು. ಹೀಗಿರುವಾಗ ಹಣವಿಲ್ಲದೆ ನಿಶ್ಚಿತ ಲಗ್ನ ಮೀರುವುದೆಂಬ ಸಂಕಟದಲ್ಲಿದ್ದ ಬಡ ಬ್ರಾಹ್ಮಣನು ಶಿವನ ಕೃಪೆಯಿಂದ ಆರ್ಯಾವೃತ್ತದಲ್ಲಿ ಉತ್ತರವನ್ನು ಬರೆದು ಕೊಟ್ಟು ಹಣ ಪಡೆಯುತ್ತಾನಲ್ಲದೇ, ವಿವಾಹ ಮಾಡಿಕೊಂಡು ಮಗನನ್ನು ಪಡೆದು ಸುಖವಾಗಿದ್ದನು.

೫. ನತ್ಕೀರ ರಕ್ಷಣಲೀಲೆ : ಹೇಮ ಪದ್ಮಿನೀತೀರ್ಥದಲ್ಲಿ ಮುಳುಗಿದ ನತ್ಕೀರನನ್ನು ಸಂಘಕವಿಗಳೆಲ್ಲರೂ ಶಿವನಲ್ಲಿ ಪ್ರಾರ್ಥಿಸಲಾಗಿ ಶಿವ ನತ್ಕೀರನಿಗೆ ಅನುಗ್ರಹಿಸುವನು. ಸಂಘಕವಿಗಳೆಲ್ಲರೂ ಪೀಠದಲ್ಲಿ ಸ್ಥಾನ ನೀಡುವರು.

೬. ನತ್ಕೀರಸೂತ್ರೋಪದೇಶಲೀಲೆ : ಹೇಮ ಪದ್ಮಿನಿಯಲ್ಲಿ ಪೂಜೆ ಮಾಡಿಕೊಂಡಿದ್ದ ನತ್ಕೀರನಿಗೆ ಅಗಸ್ತ್ಯಮುನಿ ಸೂತ್ರೋಪದೇಶ ಮಾಡುವನು. ತೃಪ್ತನಾದ ಆತ ತನ್ನ ಹಿಂದಿನ ರಚನೆಗಳನ್ನು ಕೈಬಿಟ್ಟು ಶಿವನಿರ್ಮಿತ ಆರ್ಯಾವೃತ್ತವನ್ನು ಸ್ಮರಿಸುತ್ತ ಸುಂದರೇಶ್ವರನನ್ನು ಸ್ತುತಿಸಿದನು. ಶಿವನಾಜ್ಞೆಯಂತೆ ಮುಂದೆ ಆ ಸೂತ್ರಗಳನ್ನು ಗಣಿತ, ಭರತ, ಕಪಿಲಾದಿ ಮುನಿಗಳಿಗೆ ಬೋಧಿಸಿದನು.

೭. ಪ್ರಬಂಧತಾರತಮ್ಯ ನಿರ್ಣಯಲೀಲೆ : ಸಂಘಕವಿಗಳೆಲ್ಲರು ತಮ್ಮಲ್ಲಿ ಉಂಟಾದ ಪ್ರಬಂಧ ತಾರತಮ್ಯ ನಿರ್ಣಯಕ್ಕಾಗಿ ಶಿವನನ್ನು ಪ್ರಾರ್ಥಿಸುತ್ತಾರೆ. ಆಗ ಆತ ಶಿವಪ್ರಿಯ ಹಾಗೂ ಕಾಶ್ಯಪಿ ಎನ್ನುವ ದಂಪತಿಗಳಿಗೆ ಮೂಕನಾಗಿ ಹುಟ್ಟಿದ. ಷಣ್ಮುಖನಿಗೆ ನಿಮ್ಮ ಪ್ರಬಂಧಗಳನ್ನು ತೋರಿಸಿರಿ ಎನ್ನುತ್ತಾನೆ. ಅದರಂತೆ ಮಾಡಿದ ಶಿವ ಕವಿಗಳು ಪರಸ್ಪರ ವೈರವನ್ನು ಮರೆತು ಸುಖವಾಗಿದ್ದರು.

೮. ಉತ್ತರ ಹಾಲಾಸ್ಯ ಪ್ರಾದುರ್ಭಾವಲೀಲೆ : ಮುಖವದನದಲ್ಲಿ ಭಾರತಿಯನ್ನು ಹೊಂದಿದ್ದ ಪಾಂಡ್ಯ ಕುಲೀಶನು ಸಂಘಕವಿಗಳಲ್ಲಿ ಒಬ್ಬನಾಗಿದ್ದನಲ್ಲದೆ, ಮಧ್ಯಾರಣ್ಯೇಶ ಎಂಬ ಕವಿಯ ಕಾವ್ಯವನ್ನು ಅಲ್ಲಗಳೆಯುತ್ತಾನೆ. ಈ ಸಂಗತಿ ತಿಳಿದ ಮಧ್ಯಾರಣ್ಯೇಶ ಶಿವನನ್ನು ಪ್ರಾರ್ಥಿಸಲಾಗಿ ಆತ ಮಧುರೆಯಲ್ಲಿದ್ದ ತನ್ನ ಲಿಂಗವನ್ನು ಅದೃಶ್ಯಗೊಳಿಸಿ ದೇವಾಲಯದ ಉತ್ತರ ದಿಕ್ಕಿನಲ್ಲಿ ನೆಲಸಿದಾಗಿನಿಂದ ಅದು ಉತ್ತರಹಾಲಾಸ್ಯಕ್ಷೇತ್ರವೆಂದು ಪ್ರಸಿದ್ಧವಾಗುತ್ತದೆ.

೯. **ಕೈವರ್ತಕನ್ನಿಕಾಕಲ್ಯಾಣಲೀಲೆ** : ವೇದಾಂತ ಬೋಧನೆಯನ್ನು ಕೇಳುತ್ತಿರುವಾಗ ನಿರ್ಲಕ್ಷಿಸಿದ ಪಾರ್ವತಿಗೆ ಬೆಸ್ತನ ಮಗಳಾಗಿ ಹುಟ್ಟುವಂತೆ ಶಿವ ಶಾಪವನ್ನೀಯುತ್ತಾನೆ. ಅಂತೆಯೇ ಅವಳು ಜನಿಸಲಾಗಿ ತಾನೂ ಬೆಸ್ತನ ವೇಷದಲ್ಲಿ ಬಂದು ಪಾರ್ವತಿಯನ್ನು ವಿವಾಹವಾಗುತ್ತಾನೆ. ಆಗ ಪಾರ್ವತಿ ವೇದಾಂತ ರಹಸ್ಯವನ್ನು ತಿಳಿಯಪಡಿಸಬೇಕೆಂದಾಗ ಶಿವನು ಅರವತ್ತುನಾಲ್ಕು ಗಣ ಸಮೂಹದವರು ಕೇಳುವಂತೆ ಬೋಧಿಸುತ್ತಾನೆ.

೧೦. **ವಾತಪುರೀಶ್ವರಜ್ಞಾನದೀಕ್ಷಾಕಾರಣಲೀಲೆ** : ಅರಿಮರ್ದನಪಾಂಡ್ಯನ ಮಂತ್ರಿಯಾದ ವಾತಪುರೀಶ್ವರ ರಾಜ ಕುದುರೆಗಳನ್ನು ಖರೀದಿಸಲು ಕೊಟ್ಟ ಹಣವನ್ನು ಶಿವಭಕ್ತರ ಸೇವೆಗೆ ವಿನಿಯೋಗಿಸುತ್ತಾನೆ. ಶ್ರೀತಟಾಕದಲ್ಲಿ ಶಿಷ್ಯರಿಗೆ ಉಪದೇಶ ಮಾಡುತ್ತಿದ್ದ ಶಿವನ ಶಿಷ್ಯರ ಜೊತೆಗೂಡುತ್ತಾನೆ. ಇತ್ತ ದೊರೆ ಕುದುರೆಗಳೊಡನೆ ತಕ್ಷಣ ಬರಬೇಕೆಂದು ತಿಳಿಸಿದಾಗ, ವಾತಪುರೀಶ್ವರನ ಪರವಾಗಿ ಶಿವ ಐದಾರು ದಿನಗಳಲ್ಲಿ ಕುದುರೆಗಳೊಡನೆ ಬರುತ್ತೇನೆಂದು ತಿಳಿಸುವನು.

೧೧. **ತುರಂಗ ವಿಕ್ರಮಲೀಲೆ** : ವಾತಪುರೇಶನ ಪ್ರಾರ್ಥನೆಯಂತೆ ಶಿವ ನರಿಗಳನ್ನೇ ಕುದುರೆಗಳನ್ನಾಗಿ ಪರಿವರ್ತಿಸಿ, ಸಾದಿಯ ರೂಪದಲ್ಲಿ ಬಂದು ಅರಿಮರ್ದನಪಾಂಡ್ಯನಿಗೆ ಒಪ್ಪಿಸುವನು. ಹಗ್ಗಗಳನ್ನು ಬಿಚ್ಚಿದ ನಂತರ ನಾನು ಜವಾಬ್ದಾರನಲ್ಲ ಎಂದು ಹೇಳಿ ಮಾಯವಾಗುತ್ತಾನೆ.

೧೨. **ನದ್ಯಾಕರ್ಷಣಲೀಲೆ** : ಲಾಯದಲ್ಲಿ ಕಟ್ಟಿದ ಕುದುರೆಗಳೆಲ್ಲವೂ ನರಿಗಳಾಗಿ ಜನರನ್ನು ಹಿಂಸಿಸಲು ದೊರೆ ವಾತಪುರೇಶನನ್ನು ಕರೆದು ಶಿಕ್ಷಿಸುವನಲ್ಲದೆ, ಹಣ ಹಿಂತಿರುಗಿಸುವಂತೆ ಹೇಳುತ್ತಾನೆ. ಆಗ ವಾತಪುರೇಶ ಸುಂದರೇಶ್ವರನನ್ನು ಪ್ರಾರ್ಥಿಸಲಾಗಿ ಶಿವ ವೇಗವತಿ ನದಿಗೆ ಮಧುರಾಪುರವನ್ನು ಪ್ರವೇಶಿಸುವಂತೆ ಆಜ್ಞಾಪಿಸುತ್ತಾನೆ.

೧೩. **ಪಿಷ್ಟಮೃದ್ಧರಣಲೀಲೆ** : ವೇಗವತಿನದಿಯು ಉಕ್ಕಿ ಹರಿದು ಮಧುರಾಪುರವನ್ನು ಪ್ರವೇಶಿಸಿದಾಗ ಕಟ್ಟೆಯನ್ನು ಕಟ್ಟಲು ಮನೆಗೊಬ್ಬ ಆಳು ಕೆಲಸ ಮಾಡಬೇಕೆಂದು ಅರಿಮರ್ದನ ಪಾಂಡ್ಯ ಆಜ್ಞೆ ಹೊರಡಿಸುತ್ತಾನೆ. ಆ ಊರಿನ ವಯಸ್ಸಾದ ಮುದುಕಿಯ ಸರದಿ ಬಂದಾಗ ಕೈಲಾಗದ ಮುದುಕಿಗೆ ಶಿವನೇ ಹದಿನಾರುವರ್ಷದ ಪ್ರಾಯದ ಯುವಕನಾಗಿ ಬಂದು ಸಹಾಯ ಮಾಡುತ್ತಾನೆ.

೧೪. **ಪಾಂಡ್ಯಜ್ವರ ಶಮನಲೀಲೆ** : ಜೈನಮತವನ್ನು ಸ್ವೀಕರಿಸಿದ ಕುಬ್ಜಪಾಂಡ್ಯ ಜ್ವರ ಪೀಡಿತನಾದಾಗ, ಷಣ್ಮುಖನ ಅಂಶಸಂಭೂತನಾದ ಜ್ಞಾನಸಂಬಂಧನ ಹಸ್ತಸ್ಪರ್ಶದಿಂದ ಜ್ವರವಿಳಿಯುತ್ತದೆ. ಆಗ ಜ್ಞಾನಸಂಬಂಧ ಕುಬ್ಜಪಾಂಡ್ಯನಿಗೆ ಸುಂದರಪಾಂಡ್ಯನೆಂಬ ಹೆಸರಿಡುತ್ತಾನೆ.

೧೫. **ನಗ್ನಶೂಲಾರೋಹಣಲೀಲೆ** : ಸುಂದರಪಾಂಡ್ಯನ ರಾಣಿ ವನಿತೇಶ್ವರಿ ಹಾಗೂ ಕಾಲಬಂಧನ ಎಂಬ ಮಂತ್ರಿಗಳ ಆಪೇಕ್ಷೆಯಂತೆ, ಜ್ಞಾನಸಂಬಂಧನು ಶೈವರನ್ನು ಜೈನರಿಂದ ರಕ್ಷಿಸುವನಲ್ಲದೇ, ಶೈವ

ಧರ್ಮವನ್ನು ಸ್ವೀಕರಿಸಿದ ಜೈನರನ್ನು ಶೂಲಕ್ಕೆ ಏರಿಸಿದನು. ಶೈವಮಂತ್ರವನ್ನೊಳಗೊಂಡ ಪತ್ರವು ಲಿಂಗವಾಗಿ ಪರಿವರ್ತನೆಯಾದಾಗ ಅದನ್ನು 'ಪತ್ರಿಕೇಶ್ವರ' ಎಂದು ಕರೆದು ಒಂದು ವರ್ಷದವರೆಗೆ ಪೂಜಿಸಿ, ಜೀವನ್ಮುಕ್ತಿಪುರವನ್ನು ಸೇರುತ್ತಾನೆ.

೧೯. **ಶಂಭುಕೂಪಶಮಾವೃಕ್ಷಾನಯನಲೀಲೆ** : ಸಮುದ್ರತೀರದ ಶೀಸಪಟ್ಟಣದ ಶೆಟ್ಟಿಯ ಮಗಳು ತಂದೆಯ ಮರಣಾನಂತರ ತನ್ನ ಸೋದರಮಾವನ ಜೊತೆ ಜ್ಞಾನಸಂಬಂಧನ ಆಪೇಕ್ಷೆಯ ಮೇರೆಗೆ ಬನ್ನೀಯ ಮರ, ಬಾವಿ ಮತ್ತು ಶಿವಲಿಂಗ ಸಾಕ್ಷಿಯಾಗಿ ವಿವಾಹವಾಗುತ್ತಾಳೆ. ಕಾಲಾನಂತರ ಹಿರಿಯ ಹೆಂಡತಿ ಹಾಗೂ ಕಿರಿಯಹೆಂಡತಿಯರಲ್ಲಿ ತಾರತಮ್ಯವುಂಟಾಗಿ, ನೀನು ಮದುವೆಯಾದುದಕ್ಕೆ ಸಾಕ್ಷಿಯೇನು ಎಂದಾಗ ಕಿರಿಯಹೆಂಡತಿ ಸುಂದರೀಶ್ವರನನ್ನು ಪ್ರಾರ್ಥಿಸುತ್ತಾಳೆ. ತಕ್ಷಣವೇ ಶಿವನು ಶಿವಾಲಯ, ಬಾವಿ, ಬನ್ನಿಯಮರಗಳನ್ನು ಬರಮಾಡಿದಾಗ ಅವಳ ಮಹಿಮೆಯನ್ನು ಕಂಡ ಜನರೆಲ್ಲ ಹಿರಿಯವಳನ್ನು ಬಿಡಿಸಿ ಕಿರಿಯವಳನ್ನು ಪ್ರಶಂಸಿಸುವರು.

ಹೀಗೆ ಇಮ್ಮಡಿ ಮುರಿಗಾಗುರುಸಿದ್ದರು ಹಾಲಾಸ್ಯಕ್ಷೇತ್ರದ ಮೀನಾಕ್ಷಿ ಸುಂದರೇಶ್ವರನ ಅರವತ್ತುನಾಲ್ಕು ಲೀಲೆಗಳನ್ನು ವಿಸ್ತೃತವಾಗಿ ವಿವರಿಸುತ್ತಾರೆ. ಕವಿಯು ಆರಂಭದಲ್ಲಿ ಹೇಳುವ 'ಇಂತನಂತ ದೃಷ್ಟಾಂತ ಮನುಳಿದು ಲೀಲಾಕಥನ ಬಾಹುಳ್ಯಭಯದಿಂ ಪುರಾಣಮನಾರಂಭಿಸಿದೆ.' ಎಂಬ ಮಾತು ಕಥಾವಸ್ತುವಿನ ವಿಸ್ತಾರದ ಬಗೆಗೆ ಕೃತಿ ರಚಿಸುವ ಪೂರ್ವದಲೇ ತಿಳಿದುಕೊಂಡಿರುವುದು ಕವಿಯ ಔಚಿತ್ಯಜ್ಞಾನವನ್ನು ಸ್ಪುತಪಡಿಸುತ್ತದೆ. ಇಲ್ಲಿಯ ಎಲ್ಲಾ ಲೀಲೆಗಳು ಮುಖ್ಯವಾಗಿ ಸಾಮಾಜಿಕ ನೆಲೆಯಲ್ಲಿ ಇರುವ ನಂಬಿಕೆ, ಶ್ರದ್ಧೆ, ಭಕ್ತಿಗಳಿಂದ ಧರ್ಮವನ್ನು, ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದೇ ಆಗಿದೆ. ಸಮಾಜಿಕ ಮೌಲ್ಯಗಳಾದ ಗುರುಭಕ್ತಿ, ಪಿತೃಭಕ್ತಿಯನ್ನು ಮೀರಿದರೆ ಉಂಟಾಗುವ ಫಲಗಳನ್ನು ಇಂದ್ರಾನುಗ್ರಹಲೀಲೆ, ಅಂಕವಿಜಯಲೀಲೆ, ಪಿತೃಘ್ನದೋಷ ನಿವಾರಣಲೀಲೆಗಳು ತಿಳಿಸುತ್ತವೆ. ಕೈಲಾಗದವರಿಗೆ ಸಹಾಯಮಾಡುವ, ಸಜ್ಜನರಿಗೆ ಕೇಡು ಮಾಡಿದರೆ ಉಂಟಾಗುವ ಫಲವನ್ನು, ಅಹಂಕಾರ ಒಳ್ಳೆಯದಲ್ಲ ಎಂಬ ಸಂಗತಿಗಳನ್ನು ಪಿಷ್ಟಮೃದ್ಧರಣಲೀಲೆ, ಸೂಕರಶಿಶುಸ್ತನ್ಯಪಾನಲೀಲೆ ಮತ್ತು ಕುಂಡಕುಕ್ಷಿಬಹ್ವಾನ್ನ ಲೀಲೆಗಳಲ್ಲಿ ಕಾಣಬಹುದು. ಹೀಗಾಗಿ ಇಲ್ಲಿಯ ಕಥೆಗಳು ಜನಮನದ ಹೃದಯದಲ್ಲಿ ಅಡಗಿರುವ ನೈತಿಕತೆಯನ್ನು ಪ್ರತಿಬಿಂಬಿಸುತ್ತವೆ.

ಪುರಾಣಕಾವ್ಯಗಳು ತ್ರಿಮೂರ್ತಿಗಳ ಲೀಲೆಗಳನ್ನು, ಶಿವಶರಣರಚರಿತ್ರೆ ಮತ್ತು ಧಾರ್ಮಿಕ ತತ್ವಗಳನ್ನು ನಿರೂಪಿಸಲು ಸೀಮಿತವಾಗಿದ್ದರೂ, ಆಯಾ ಕಾಲದ ಜನಜೀವನ, ರಾಜಕೀಯ, ಸಾಂಸ್ಕೃತಿಕ ಅನನ್ಯತೆಯನ್ನು ಮೈಗೂಡಿಸಿಕೊಂಡು ರಚನೆಯಾಗಿರುತ್ತವೆ. ಪ್ರಸ್ತುತ ಕೃತಿಯು ತಮಿಳುನಾಡಿನ ಮಧುರೆಯ ಸುಂದರೇಶ್ವರನ ಚತುಷಷ್ಟಿಲೀಲೆಗಳನ್ನು ವರ್ಣಿಸಿ, ಜನಸಾಮಾನ್ಯರಲ್ಲಿ ಧಾರ್ಮಿಕ

ಭಾವನೆಗಳನ್ನು ಪ್ರಚೋದಿಸುವ ಉದ್ದೇಶವನ್ನಿಟ್ಟುಕೊಂಡು ರಚನೆಯಾಗಿದೆ. ಇದೊಂದು ಶುದ್ಧವಾದ ಪೌರಾಣಿಕ ಕೃತಿಯಾಗಿದ್ದರೂ ಮಧುರೆಯನ್ನಾಳಿದ ಪಾಂಡ್ಯರಾಜರ ಚರಿತ್ರೆ ಮತ್ತು ಸಂಘಸಾಹಿತ್ಯ ವಿಚಾರಗಳನ್ನು ಕವಿಯು ಅಲ್ಲಲ್ಲಿ ಪ್ರಸ್ತಾಪಿಸುತ್ತಾನೆ. ಸಾಹಿತ್ಯಿಕವಾಗಿ ಅಷ್ಟಾದಶ ವರ್ಣನೆಗಳು, ಅಲಂಕಾರಗಳು, ಬಳಸಿದ ಭಾಷೆ, ಕಾವ್ಯರಸಭಾವ ಮತ್ತು ಛಂದಸ್ಸುಗಳ ದೃಷ್ಟಿಯಿಂದ ಒಂದು ಸಾಹಿತ್ಯಿಕ ಕೃತಿಯಸ್ಥಾನ ಪಡೆಯುತ್ತದೆ. ಈ ಕೃತಿಯಲ್ಲಿ ಮಧುರೆಯ ಮೀನಾಕ್ಷಿಸುಂದರರ ಒಂದೊಂದು ಸ್ಥಳಗಳಿಗೂ ಇರುವ ಸ್ಥಳನಾಮಗಳು ಮತ್ತು ಅವುಗಳ ಹಿಂದಿರುವ ಪೌರಾಣಿಕ ಐತಿಹ್ಯಗಳನ್ನು ಕಾವ್ಯದಲ್ಲಿ ಹೆಸರಿಸುತ್ತಾನೆ. ಒಟ್ಟಾರೆಯಾಗಿ ಈ ಕೃತಿಯ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು.

ಚಾರಿತ್ರಿಕ ಸಂಗತಿಗಳು

ಹಾಲಾಸ್ಯಪುರಾಣದಲ್ಲಿ ಬರುವ ಪಾಂಡ್ಯಅರಸರ ವಂಶಾವಳಿ ಹಾಗೂ ಸಂಘಸಾಹಿತ್ಯದ ಉಲ್ಲೇಖಗಳು ಈ ಕಾವ್ಯಕ್ಕೆ ಐತಿಹಾಸಿಕ ಮಹತ್ವವನ್ನು ಒದಗಿಸಿಕೊಟ್ಟಿವೆ. ದಕ್ಷಿಣ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಪಾಂಡ್ಯರಿಗೆ ವಿಶೇಷವಾದ ಸ್ಥಾನಮಾನಗಳು ಸಂದಿವೆ. ಸುಂದರೇಶ್ವರರ ಅರವತ್ತನಾಲ್ಕು ಲೀಲೆಗಳನ್ನು ತಿಳಿಸುವ ಈ ಪುರಾಣದಲ್ಲಿ ಅಲ್ಲಿನ ಅಧಿಪತಿಗಳಾದ ಪಾಂಡ್ಯರಾಜರ ಚರಿತ್ರೆಯೂ ಹಾಸು ಹೊಕ್ಕಾಗಿದೆ. ಇದರ ಪ್ರಕಾರ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳಲ್ಲಿ ಪಾಂಡ್ಯರಾಜರ ಚರಿತ್ರೆ ಹರಡಿದೆ. ಇಲ್ಲಿ ಬರುವ ಪಾಂಡ್ಯ ವಂಶಾವಳಿಯನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ(ಇಲ್ಲಿ ಹೆಸರಿನ ಮುಂದೆ ಬರುವ ಅಂಕಿಗಳು ಹಾಲಾಸ್ಯಪುರಾಣ ಪುಟ ಮತ್ತು ಪದ್ಯಸಂಖ್ಯೆಯನ್ನು ಸೂಚಿಸುತ್ತವೆ).

ಕೃತಯುಗ : ಕುಲಶೇಖರಪಾಂಡ್ಯ(೬೯-೯೨), ಮಲಯಧ್ವಜ(೭೩-೨), ಹೆಂಡತಿ-ಕಾಂಚನಮಾಲೆ(೭೮-೨೯), ಮಗಳು-ತಟಾತಕೆ(೭೬-೧೯), ಅಳಿಯ-ಸುಂದರಮಹಾದೇವ(೮೮-೨), ಮಗ-ಉಗ್ರಪಾಂಡ್ಯ (೧೪೫-೨೧)

ತ್ರೇತಾಯುಗ : ವೀರಪಾಂಡ್ಯ(೨೧೯-೩), ಅಭಿಷೇಕಪಾಂಡ್ಯ(೨೬೪-೨), ವಿಕ್ರಮಪಾಂಡ್ಯ(೨೮೦-೩), ರಾಜಶೇಖರ(೩೦೪-೨), ಕುಲೋತ್ತುಂಗ(೩೧೩-೫), ಅನಂತಗುಣಪಾಂಡ್ಯ(೩೪೨-೧೭), ಕುಲಭೂಷಣ (೩೫೧-೧) (ಈತ ಚೇದಿರಾಜನ ಮೇಲೆ ಯುದ್ಧ ಮಾಡಿದನು).

ದ್ವಾಪರಯುಗ : ರಾಜೇಂದ್ರ ಪಾಂಡ್ಯ(೪೦೮-೧೭), ರಾಜೇಂದ್ರ ಪಾಂಡ್ಯನ ತಮ್ಮ ರಾಜಸಿಂಹ(೪೦೮-೧೭), (ರಾಜಸಿಂಹನ ಮಾವ ಕಾಂಚೀಪ್ರಭು ಕಾಂತಾರಚ್ಛೇದಕ ನೃಪ), ರಾಜೇಶ(೪೨೮-೧೭), ರಾಜಗಂಭೀರ(೪೨೮-೧೭), ಪಾಂಡ್ಯವಂಶಪ್ರದೀಪ(೪೨೮-೧೭), ಪುರುಹೂತಜಿತ್ತು(೪೨೮-೧೭),

ಪಾಂಡ್ಯವಂಶ ಪತಾಕ(೪೨೮-೧ವ), ಸುಂದರೇಶ್ವರಪಾದಶೇಖರ(೪೨೮-೧ವ), (ಈತ ಚೋಳರೊಡನೆ ಯುದ್ಧ ಮಾಡಿದನು) ವರಗುಣಪಾಂಡ್ಯ(೪೫೨-೧ವ), ರಾಜರಾಜ(೪೮೨-೧ವ)

ಕಲಿಯುಗ : ಸುಗುಣಪಾಂಡ್ಯ(೫೩೩-೩), ಚಿತ್ರರಥ(೫೩೩-೩), ಚಿತ್ರಭೂಷಣ(೫೩೩-೪), ಚಿತ್ರಧ್ವಜ (೫೩೩-೪), ಚಿತ್ರವರ್ಮ(೫೩೩-೪), ಚಿತ್ರಸೇನ(೫೩೪-೫), ಚಿತ್ರವಿಕ್ರಮ(೫೩೪-೫), ರಾಜಮಾರ್ತಾಂಡ (೫೩೪-೫), ರಾಜಚೂಡಾಮಣಿ(೫೩೪-೫ವ), ರಾಜಶಾರ್ದೂಲ(೫೩೪-೫ವ), ದ್ವಿಜರಾಜ ಕುಲೋತ್ತಮ (೫೩೪-೫ವ), ಅಯೋಧನ ಪ್ರವೀಣ(೫೩೪-೫ವ), ರಾಜಕುಂಜರ(೫೩೪-೫ವ), ಪರರಾಜ ಭಯಂಕರ (೫೩೪-೫ವ), ಉಗ್ರಸೇನ(೫೩೪-೫ವ), ಮಹಾಸೇನ(೫೩೪-೫ವ), ಶತ್ರುಂಜಯ(೫೩೪-೫ವ) ಭೀಮರಥ (೫೩೪-೫ವ), ಪ್ರತಾಪಮಾರ್ತಾಂಡ(೫೩೪-೪ವ), ವಿಕ್ರಮಕಂಚುಕ(೫೩೪-೫ವ), ಯುದ್ಧ ಕೋಲಾಹಲ (೫೩೪-೫ವ), ಅತುಳವಿಕ್ರಮ(೫೩೪-೫ವ), ಅತುಳಕೀರ್ತಿ(೫೩೪-೫ವ), ಕೀರ್ತಿವಿಭೂಷಣ(೫೩೪-೫ವ), ವಂಶಶೇಖರಪಾಂಡ್ಯ(೫೩೪-೧೨), (ಈತನು ವಿಕ್ರಮ ಚೋಳನನ್ನು ಸೋಲಿಸಿದನು. ಇವನ ಕಾಲದಲ್ಲಿಯೇ ಸಂಘಫಲಕ ಪ್ರಧಾನ ಲೀಲೆ ನಡೆದುದು) ವಂಶಚೂಡಾಮಣಿ(೫೬೭-೧ವ), ಚಂಪಕ ಪಾಂಡ್ಯ(೬೦೦-೨), ಪ್ರತಾಪಸೂರ್ಯವಂಶಧ್ವಜರಿಪುಮರ್ದನ(೬೦೦-೨ವ), ಚೋಳವಂಶಾಂತಕ(೬೦೦-೨ವ), ಚೇರ ವಂಶಾಂತಕ (೬೦೦-೨ವ), ಪಾಂಡ್ಯವಂಶೇಶ(೬೦೦-೨ವ), ವಂಶಶಿರೋಮಣಿ(೬೦೦-೨ವ), ಪಾಂಡ್ಯೇಶ್ವರ ಕುಲಧ್ವಜ(೬೦೦-೨ವ), ವಂಶವಿಭೂಷಣ(೬೦೦-೨ವ), ಸೋಮ ಚೂಡಾಮಣಿ(೬೦೦-೨ವ), ಭೂಪ ಚೂಡಾಮಣಿ(೬೦೦-೨ವ), ಪಾಂಡ್ಯಕುಲೇಶ(೬೦೦-೩), ಅರಿಮರ್ದನಪಾಂಡ್ಯ(೬೨೮-೩), ಜಗನ್ನಾಥ ಪಾಂಡ್ಯ(೬೯-೮೦), ವೀರಬಾಹು(೭೦೦-೧ರ), ವಿಕ್ರಮಬಾಹು(೭೦೦-೧ರ), ವಿಕ್ರಮ ಬಾಹುವಿಜಯ (೭೦೦-೧ರ), ಕಾರುಣ್ಯಪಾಂಡ್ಯ(೭೦೦-೧ರ), ಪುರಷೋತ್ತಮ(೭೦೦-೧ರ), ಕುಬ್ಜ ಪಾಂಡ್ಯ(೭೦೦-೧ರ), ಸುಂದರಪಾಂಡ್ಯ(೭೨೫-೫೨).

ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳಲ್ಲಿ ಶೈವ ಭಕ್ತರಾದ ಒಟ್ಟು ಅರವತ್ತಾರು ಜನ ಪಾಂಡ್ಯರಾಜರ ಹೆಸರುಗಳು ಇಲ್ಲಿ ಕಂಡುಬರುತ್ತವೆ. ಅದರಲ್ಲಿ ಕಲಿಯುಗವೊಂದರಲ್ಲೇ ನಾಲವತ್ತಾರು ಜನ ಪಾಂಡ್ಯರಾಜರು ದೊರೆಯುತ್ತಾರೆ. ಉಳಿದ ಮೂರು ಯುಗಗಳಲ್ಲಿ ಕೇವಲ ಇಪ್ಪತ್ತು ಜನ ರಾಜರು ಉಲ್ಲೇಖಿತಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಇವು ನಿಜವಾದ ಹೆಸರುಗಳೋ ಅಥವಾ ಬಿರುದುಗಳೋ ಎಂಬುದು ಖಚಿತವಾಗಿ ತಿಳಿದುಬಂದಿಲ್ಲ. ಆರಂಭದಲ್ಲಿ ಕುಲಶೇಖರಪಾಂಡ್ಯ, ಮಲಯಧ್ವಜ(ಅಳಿಯ), ಸುಂದರ ಮಹಾದೇವ, ಮಗ ಉಗ್ರಪಾಡ್ಯ ಹೀಗೆ ಪ್ರಾಂಡ್ಯವಂಶದ ಮೂಲ ಪ್ರಾರಂಭವಾಗುತ್ತದೆ. ಆದರೆ ರಾಬರ್ಟ್‌ಸಿವೆಲ್ ಅವರ ಪಾಂಡ್ಯ ವಂಶಾವಳಿ ಪ್ರಕಾರ 'ನೆಡುಂಚೆಳಿಯನ್ ಪಾಂಡ್ಯ I, ವೆರ್ರಿವೇರ್ ಶೆಳಿಯನ್, ನೆಡುಂಚೆಳಿಯನ್ II, ಉಗ್ರಪೆರುವಳುದಿ ಹೀಗೆ ನೆಡುಂಚೆಳಿಯನ್

I ಇವನಿಂದ ಪಾಂಡ್ಯವಂಶ ಆರಂಭವಾಯಿತು'[೫] ಎಂದು ಶಿಲಪ್ಪಾದಿಕಾರಂ ಮತ್ತು ಶಾಸನಗಳ ಆಧಾರದೊಂದಿಗೆ ವಂಶಾವಳಿಯನ್ನು ತಯಾರಿಸುತ್ತಾರೆ(ನೋಡಿ ಅನುಬಂಧ ಸಂ.೬೮). ಕೆಲವು ಇತಿಹಾಸ ಕಾರರು 'ಕಡುಂಗಾನ್ (ಕ್ರಿ.ಶ.೫೯೦-೬೨೦) ಮತ್ತು ಅವನ ಮಗ ಮಾರವರ್ಮ ಅವನಿ ಶೂಲಾಮಣಿ(ಕ್ರಿ.ಶ.೬೨೦-೬೪೫)ಗಳು ಪಾಂಡ್ಯವಂಶದ ಮೂಲಪುರುಷರೆಂದು ಹೇಳುತ್ತಾರೆ.'[೬] ಒಟ್ಟಿನಲ್ಲಿ ರಾಬರ್ಟ್‌ಸಿವೆಲ್ ಮತ್ತು ಇತರ ಚರಿತ್ರಕಾರರು ಗುರುತಿಸುವ ಪಾಂಡ್ಯ ವಂಶದ ಮೂಲಪುರುಷರ ಹೆಸರುಗಳು ಮತ್ತು ಹಾಲಾಸ್ಯ ಪುರಾಣದಲ್ಲಿ ಬರುವ ಮೂಲಪುರುಷರ ಹೆಸರುಗಳಿಗೂ ಹೋಲಿಕೆಗಳು ಇಲ್ಲವಾದ್ದರಿಂದ, ಪುರಾಣದಲ್ಲಿ ಬರುವ ಉಲ್ಲೇಖಗಳ ಸತ್ಯಾಸತ್ಯತೆಯನ್ನು ತಿಳಿಯಲು ಇತಿಹಾಸದಲ್ಲಿ ಕಂಡುಬರುವ ಪಾಂಡ್ಯರಾಜರ ಚರಿತ್ರೆಯೊಡನೆ ತೌಲನಿಕವಾಗಿ ಅಭ್ಯಸಿಸುವ ಅಗತ್ಯವಿದೆ.

ಸಂಘಸಾಹಿತ್ಯಚರಿತ್ರೆ

ತಮಿಳು ಭಾಷೆಯಲ್ಲಿ ಹುಟ್ಟಿಕೊಂಡ ಪ್ರಾಚೀನವಾದ ಸಾಹಿತ್ಯ ಪರಂಪರೆಯ್ನು 'ಸಂಘಸಾಹಿತ್ಯ'ದಿಂದಲೇ ಗುರುತಿಸುತ್ತಾರೆ. ಹಾಲಾಸ್ಯಪುರಾಣದಲ್ಲಿ ಬರುವ ಸಂಘಫಲಕ ಪ್ರಧಾನಲೀಲೆ(ಕಾಂ-೪, ಅ-೩), ದ್ವಿಜಾರ್ಯಪ್ರಧಾನಲೀಲೆ(೪-೪), ನತ್ಕೀರಣಲೀಲೆ(೪-೫), ನತ್ಕೀರಸೂತ್ರೋಪದೇಶಲೀಲೆ(೪-೬), ಪ್ರಬಂಧ ತಾರತಮ್ಯ ನಿರ್ಣಯಲೀಲೆ(೪-೭), ತುರಗ ವಿಕ್ರಮಲೀಲೆ(೪-೧೦), ಪಾಂಡ್ಯಜ್ವರ ಶಮನಲೀಲೆ(೪-೧೪), ನಗ್ನಶೂಲಾರೋಹಣಲೀಲೆ(೪-೧೫) ಇವುಗಳಲ್ಲಿ ಸಂಘಸಾಹಿತ್ಯ ಮತ್ತು ಸಂಘಕವಿಗಳನ್ನು ಕುರಿತಾಗಿ ವಿವರಿಸಲಾಗಿದೆ.

ಬ್ರಹ್ಮನು ಆನಂದವನದಲ್ಲಿದ್ದಾಗ ಉದ್ಧತಟತನದಿಂದ ವರ್ತಿಸಿದ ಸರಸ್ವತಿಗೆ ನಲವತ್ತೆಂಟು ಮನುಷ್ಯ ಜನ್ಮವನ್ನು ಪಡೆಯೆಂದು ಶಾಪಕೊಡುತ್ತಾನೆ. ಸರಸ್ವತಿ ಹೆದರಿ ಬ್ರಹ್ಮನ ಕಾಲಿಗೆ ಬಿದ್ದಾಗ ನೀನು ಭೂಲೋಕದಲ್ಲಿ 'ಅ'ಕಾರಾದಿಯಾಗಿ 'ಹ'ಕಾರಾಂತ ವರ್ಣಗಳಲ್ಲಿ 'ಕಚಟತಪಯಶ'ಗಳೆಂಬ ಎಂಟು ವರ್ಗಗಳಲ್ಲಿ ನಲವತ್ತೊಂಬತ್ತು ಅಕ್ಷರಗಳಾಗಿ ಒಟ್ಟಿಗೆ ಜನ್ಮವನ್ನು ಪಡೆ. ಆ ಅಕ್ಷರಗಳು ಮುಂದೆ ನಲವತ್ತೊಂಬತ್ತು ಜನ ಕವೀಶ್ವರರಾಗಿ ಹುಟ್ಟುತ್ತಾರೆ. ಅವರು ಹಾಲಾಸ್ಯ ಪಟ್ಟಣದಲ್ಲಿ ಸುಂದರೇಶ್ವರನನ್ನು 'ದ್ರಾವಿಡಕವಿತಾ ವಿಚಕ್ಷಣತೆ'ಯಿಂದ ತಲೆದೂಗಿಸುವಂತೆ ಹಾಡಿ, ಸುಂದರೇಶ್ವರನ ಅನುಗ್ರಹದಿಂದ ವಿವಿಧ ಪ್ರಬಂಧಗಳನ್ನು ರಚಿಸುತ್ತಾರೆ. ಕೊನೆಗೆ ಸುಂದರೇಶ್ವರ ಪ್ರತ್ಯಕ್ಷನಾಗಿ ಒಂದೇ ಜನ್ಮದಲ್ಲಿ ಅವರು ಮುಕ್ತಿಯನ್ನು ಹೊಂದುತ್ತಾರೆ. ಅಲ್ಲಿಗೆ ನಿನ್ನ ನಲವತ್ತೊಂಬತ್ತು ಮನುಷ್ಯ ಜನ್ಮಗಳ ಶಾಪ ಮುಗಿಯುತ್ತದೆ. ಆಗ ಮೊದಲಿನಂತೆ ನೀನು ನನ್ನನ್ನು ಕೂಡಿಕೊಳ್ಳಬಹುದು ಎಂದು ಬ್ರಹ್ಮನು ಸರಸ್ವತಿಗೆ ಹೇಳುತ್ತಾನೆ.

ಆ ಪ್ರಕಾರವಾಗಿ ಜನಿಸಿದ 'ಅ'ಕಾರಾದಿ 'ಹ'ಕಾರಂತ ವರ್ಣಗಳೇ ನಲವತ್ತೊಂಬತ್ತು ಜನ ಸಂಘ ಕವಿಗಳು. ಇವರಲ್ಲಿ ನಕ್ಕೀರ, ಕಪಿಲ, ಭರತ, ಮಾಣಿಕ್ಯ, ವಾಚಕ, ತಿರುಜ್ಞಾನಸಂಬಂಧರ್ ಇವರೇ ಮೊದಲಾದವರು ಪ್ರಮುಖರು. ಒಂದು ಸಾರಿ ಇವರೆಲ್ಲರೂ ಸೇರಿ ಸುಂದರೇಶ್ವರನ ಕೃಪೆಯಿಂದ ಗೇಣುದ್ದದ ಫಲಕವನ್ನು ಪಡೆಯುತ್ತಾರೆ. ಒಬ್ಬೊಬ್ಬರು ಏರಿದಂತೆಲ್ಲಾ ಅದು ಗೇಣುದ್ದ ಹೆಚ್ಚುತ್ತಿದ್ದಿತು. ಹೀಗಿರುವಾಗ ಕೆಲವರಿಗೆ ತಮ್ಮ ಪ್ರಬಂಧಗಳೇ ಶ್ರೇಷ್ಠ ಎಂಬ ಭಾವನೆ ತಲೆದೋರಿ ಅವರಲ್ಲಿಯೇ ತಾರತಮ್ಯ ಉಂಟಾಗುತ್ತದೆ. ಆಗ 'ಹ'ಕಾರ ಸ್ವರೂಪಿಯಾದ ಶಿವನ ಕಾವ್ಯವೇ ಶ್ರೇಷ್ಠವೆಂದು ಆಕಾಶವಾಣಿಯಾಗುತ್ತದೆ.

ವಂಶಶೇಖರಪಾಂಡ್ಯನ ಮಗ ವಂಶಚೂಡಾಮಣಿಯು ರಾಜ್ಯವಾಳುತ್ತಿರುವಾಗ, ಶಿವೆಯ ತುರುಬು ಸಹಜವಾಗಿ ಪರಿಮಳದಿಂದಕೂಡಿದೆಯೋ ಅಥವಾ ಪುಷ್ಪಗಂಧ ಮೊದಲಾದ ಸುಗಂಧಗಳಿಂದ ಪರಿಮಳಗೊಂಡಿತೋ ಎಂಬ ಅನುಮಾನವನ್ನು ಪರಿಹರಿಸಿದ ಬಡಬ್ರಾಹ್ಮಣನನ್ನು ಅವಮಾನಿಸಿದ 'ನಕ್ಕೀರ' ಎಂಬ ಕವಿಯನ್ನು ಶಿವನು ತನ್ನ ಹಣೆಗಣ್ಣಿನಿಂದ ಸುಟ್ಟುಹಾಕುವನು. ನಂತರದಲ್ಲಿ ಕಪಿಲ, ಭರತ, ಗಣಿತ ಮೊದಲಾದ ಸಂಘಕವಿಗಳೆಲ್ಲರ ಅಪೇಕ್ಷೆಯಂತೆ ಪುನಃ ಪೀಠದಲ್ಲಿ ಸೇರಿಸಿದನು. ಮುಂದೆ ಅಗಸ್ತ್ಯ ಮುನಿಯಿಂದ 'ನಕ್ಕೀರ'ನಿಗೆ ಸೂತ್ರೋಪದೇಶ ಮಾಡಿಸಿದನು.

'ವಾತಪುರೀಶ್ವರಜ್ಞಾನದೀಕ್ಷಾಕಾರಣಲೀಲೆ'ಯಲ್ಲಿ ಬರುವಂತೆ, ವಾತಪುರೇಶ ಎಂಬ ಬಡ ಬ್ರಾಹ್ಮಣನಿಗೆ ಶಿವನು ದೀಕ್ಷೆ ಕೊಟ್ಟು 'ಮಾಣಿಕ್ಯವಾಚಕ' ಎಂದು ಹೆಸರಿಡುತ್ತಾನೆ. ಈತ ಪಿಷ್ಟಮೃದ್ಧರಣಲೀಲೆಯಲ್ಲಿ ಬರುವ ಬೌದ್ಧರ ಉಪಟಳವನ್ನು ಜಯಿಸುವನಲ್ಲದೇ, ಮೂಕ ಹೆಣ್ಣಿಗೆ ಮಾತು ಬರಿಸುವನು. ತುರಗ ವಿಕ್ರಯ ಲೀಲೆಯಲ್ಲಿ ಸುಂದರೇಶ್ವರನೇ ಸ್ವತಃ ಸಾಧುವಿನ ರೂಪದಲ್ಲಿ ಬಂದು, ಅರಮರ್ದನಪಾಂಡ್ಯನಿಗೆ ಕುದುರೆಗಳನ್ನು ಕೊಡುವ ಮೂಲಕ ವಾತಪುರೇಶನಿಗೆ ಸಹಾಯ ಮಾಡುವನು.

ಮೂರನೆಯ ವರ್ಷದಲ್ಲಿಯೇ ಶಿವಜ್ಞಾನಸಂಪನ್ನನಾದ 'ತಿರುಜ್ಞಾನ ಸಂಬಂಧರ್' ಎಂಬುವನು ಷಣ್ಮುಖನ ಅಂಶ ಸಂಭೂತನಾದ 'ಜ್ಞಾನಸಂಬಂಧ' ಎಂಬ ಹೆಸರಿನಲ್ಲಿ ಬಂದು ಕುಬ್ಜಪಾಂಡ್ಯನ ಜ್ವರವನ್ನು ಭಸ್ಮಲೇಪನದಿಂದ ನಿವಾರಣೆ ಮಾಡುವನು. ಜೈನರೊಡನೆ ಪಂದ್ಯದಲ್ಲಿ ಶಿವಮಂತ್ರದ ಪತ್ರಗಳನ್ನು ಬೆಂಕಿಯಲ್ಲಿ ಹಾಕಿ ಸುಡದ ಹಾಗೆ ಮಾಡುವನು. ಶಿವಮಂತ್ರ ಬರೆದಿದ್ದ ಪತ್ರಗಳು 'ವೇಗವತಿ' ನದಿಯ ಪ್ರವಾಹಕ್ಕೆ ಎದುರಾಗಿ ಹೋಗುವಂತೆ ಮಾಡಿ, ಜೈನರನ್ನು ಗೆದ್ದು ಅವರಲ್ಲಿ ಶೈವರಾಗಿ ಪರಿವರ್ತನೆ ಹೊಂದದೇ ಇರುವವರನ್ನು ಶೂಲಕ್ಕೆ ಹಾಕಿಸುವನು ಇಂತಹ ಅನೇಕ ಸಂಗತಿಗಳು ಪೌರಾಣಿಕ ಸ್ಪರ್ಶಹೊಂದಿದ್ದರೂ ಐತಿಹಾಸಿಕ ಸತ್ಯವನ್ನು ಪಡೆದಿರುವ ಸಾಧ್ಯತೆಗಳಿವೆ.

'ತಿರುವಳ್ಳುವಮಾಲೈ ಎನ್ನುವುದು ಸಂಘಕವಿಗಳೆಲ್ಲರೂ 'ತಿರುವಳ್ಳುವರ' ನನ್ನು ಪ್ರಶಂಸೆ ಮಾಡಿ ಹಾಡಿದ ಹಾಡುಗಳ ಗುಂಪು ಎನ್ನುವರು. ಸಂಘ ಸಾಹಿತ್ಯದ ನಲವತ್ತೊಂಬತ್ತು ಕವಿಗಳ ಹೆಸರು ಅಲ್ಲಿ ಸಿಗುತ್ತದೆ. ಅದರಲ್ಲಿ ಬರುವ ಮೊದಲ ಹಾಡನ್ನು ಭಗವಂತ ಹಾಡಿದನು'[೭] ಎಂಬ ಮಾತು 'ಸಂಘಫಲಕ ಪ್ರಧಾನಲೀಲೆ'ಯಲ್ಲಿ ಬರುತ್ತದೆ. ಬ್ರಹ್ಮನು ಸರಸ್ವತಿಗೆ ನೀಡಿದ ಶಾಪ ಪರಿಹಾರಾರ್ಥವಾಗಿ ಬ್ರಹ್ಮ 'ಅ'ಕಾರಾದಿ 'ಹ'ಕಾರಾಂತ ನಲವತ್ತೊಂಬತ್ತು ಅಕ್ಷರಗಳಲ್ಲಿ ೪೮ ಅಕ್ಷರಗಳು ಕವಿಗಳಾಗಿಯೂ 'ಹ' ಕಾರಾತ್ಮಕನಾದ ಶಿವನು ಕವೀಶ್ವರನಾಗಿಯೂ ವಿರಾಜಿಸುತ್ತಾನೆ. ಅದೇ ನಿನ್ನ ೪೯ ಮಾನುಷ ಜನ್ಮ ಎಂದು ಹೇಳುತ್ತಾನೆ. ಈ ಮಾತನ್ನು ಗಮನಿಸಿದಾಗ ಸಂಘ ಕವಿಗಳ ಸಂಖ್ಯೆ ೪೯ ಎಂಬ ತಮಿಳು ಸಾಹಿತ್ಯ ಚರಿತ್ರೆಯ ಸಂಗತಿಗೆ ಹೋಲಿಕೆಯಾಗುತ್ತದೆ.

'ಅಗೊಪ್ಪೊರುಳ್ ವ್ಯಾಖ್ಯಾನದಲ್ಲಿ ದೊರೆಯುವಂತೆ ದೀರ್ಘಕಾಲಾವಧಿಯಲ್ಲಿ ಕಳೆದು ಹೋದ ಮೂರು ಸಂಘ ಸಾಹಿತ್ಯಗಳು ೯೯೦೦ ವರ್ಷಗಳ ವರೆಗೆ ಇದ್ದಿತೆಂದು, ೮೫೯೮ ಕವಿಗಳು ಅದರಲ್ಲಿದ್ದರೆಂದು, ೧೯೭ ಪಾಂಡ್ಯ ರಾಜರು ಅದಕ್ಕೆ ಪೋಷರಾಗಿದ್ದರೆಂದು ತಿಳಿದುಬರುತ್ತದೆ''[೮] ಕೃತಿಯಲ್ಲಿ ದೊರೆಯುವ ೬೬ಜನ ಪಾಂಡ್ಯರಾಜರುಗಳು ಮೂಲತಃ ಶೈವರಾಗಿದ್ದು ಸಂಘಕವಿಗಳೂ ಸಹ ಶೈವರಾಗಿರುವುದು ಮತ್ತು ಮೇಲಿನ ಹೇಳಿಕೆಯಲ್ಲಿ ಪಾಂಡ್ಯರಾಜರು ಸಂಘಸಾಹಿತ್ಯದ ಪೋಷಕರಾಗಿದ್ದರು ಎಂಬ ವಿಚಾರ(ನೋಡಿ ಅನುಬಂಧ ಸಂ.೬ಆ), ಹೀಗೆ ಒಟ್ಟಿನಲ್ಲಿ ಕೃತಿಯ ಪೌರಾಣಿಕ ಕಲ್ಪನೆಗಳಿಗೆ ಐತಿಹಾಸಿಕ ಘಟನೆಗಳು ಬೆರೆತುಕೊಂಡಿರುವ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತವೆ.

ಪೌರಾಣಿಕ ಅಂಶಗಳು

ತಮಿಳುನಾಡಿನ ರಾಜಧಾನಿಯಾದ ಮದರಾಸನ್ನು ಬಿಟ್ಟರೆ ಮಧುರೆಯೇ ದೊಡ್ಡನಗರ. 'ದೇಗುಲಗಳ ನಗರ' ಎಂದೆನಿಸಿರುವ ಇದು ಯಾವಾಗಲೂ ಧಾರ್ಮಿಕ ಚಟುವಟಿಕೆಗಳಿಂದ ಕೂಡಿರುತ್ತದೆ. ಮೀನಾಕ್ಷಿ-ಸುಂದರರ ವಾಸಸ್ಥಾನವಾಗಿ, ಪಾಂಡ್ಯರಾಜರ ರಾಜಧಾನಿಯಾಗಿ, ಪ್ರಸಿದ್ಧತೀರ್ಥಕ್ಷೇತ್ರವಾಗಿ, ದ್ರಾವಿಡ ಸಂಸ್ಕೃತಿಯ ಕೈಗನ್ನಡಿಯಾಗಿ ಮೆರೆದ ಮಧುರೆಯ ಕ್ಷೇತ್ರ ಹಾಲಾಸ್ಯಪುರಾಣದಲ್ಲಿ ಬರುವ ಮೊದಲ ಪೌರಾಣಿಕ ಸಂಗತಿಯೆನಿಸಿದೆ. ಈ ಕ್ಷೇತ್ರಕ್ಕೆ ಪುರಾಣದಲ್ಲಿ 'ಕದಂಬವಿಪಿನ, ಕನ್ಯಕಾನಗರಿ, ವಿದ್ಯಾನಗರಿ, ಮಧುರಾಪುರ, ಶಿವಲೋಕ-ಭೂಲೋಕ, ಜೀವನ್ಮುಕ್ತಿಪುರ, ಚತುಷ್ಕೂಟಪುರ, ದ್ವಾದಶಾಂತ ಶಿವಾಸ್ಪದ ಎಂಬ ವಿಭಿನ್ನ ಹೆಸರುಗಳಿದ್ದು, ಒಂದೊಂದು ಹೆಸರಿಗೂ ಒಂದೊಂದು ಐತಿಹ್ಯಗಳಿರುವುದನ್ನು ಕಾಣಬಹುದು.

'ಕದಂಬವನಪುರನಿರ್ಮಾಣಲೀಲೆ'(೧-೩)ಯಲ್ಲಿ ಕುಲಶೇಖರಪಾಂಡ್ಯನ ಸ್ವಪ್ನದಲ್ಲಿ ಶಿವ ಸಿದ್ಧವೇಷದಲ್ಲಿ ಬಂದು ಕದಂಬವನವನ್ನು ಕದಂಬಪುರವನ್ನಾಗಿ ನಿರ್ಮಿಸಬೇಕೆಂದು ಪ್ರೇರಣೆಯಿತ್ತಾಗ,

ರಾಜನು ಮಂತ್ರಿಗಳ ಸಲಹೆಯಂತೆ ಅಡವಿಯನ್ನು ಕಡಿದು ಪುರನಿರ್ಮಾಣ ಮಾಡುವನು. ಅದು ಅಂದಿನಿಂದ 'ಕದಂಬಪುರ' ಎನಿಸಿತು. 'ನಗ್ನಸರ್ಪಹನನಲೀಲೆ'(೨-೧೨)ಯಲ್ಲಿ ಅನಂತಗುಣಪಾಂಡ್ಯನನ್ನು ಕೊಲ್ಲುವುದಕ್ಕಾಗಿ ಜೈನರು ಅಭಿಚಾರಯಾಗದಿಂದ ಸೃಷ್ಟಿಸಿದ ಭಯಂಕರವಾದ ಸರ್ಪದ ವಿಷವನ್ನು ಶಿವನು ತನ್ನ ಜಡೆಯ ತಂಗಾಳಿಯಿಂದ ಕಾದ ವಿಷವನ್ನು ಆರಿಸಿದ. ಹೀಗೆ ಅಂದು ಶಿವನು ಅಲ್ಲಿಯ ವಿಷವನ್ನು ಮಧುರವಾಗಿ ಮಾಡಿದ್ದರಿಂದ ಆ ಸ್ಥಳಕ್ಕೆ 'ಮಧುರಾಪುರ' ಎಂದು ಹೆಸರಾಯಿತು. ಸತ್ತ ಸರ್ಪ 'ನಾಗಶೈಲ' ಎನ್ನುವ ಹೆಸರಿನಿಂದ ಪರ್ವತವಾಯಿತು.

'ವರಗುಣಪಾಂಡ್ಯಬ್ರಹ್ಮಹತ್ಯವಿನಾಶನಲೀಲೆ'(೩-೮)ಯಲ್ಲಿ ವರ್ಣಿತವಾದಂತೆ ದೊರೆಯ ಕುದುರೆಯ ಕಾಲಿಗೆ ಸಿಕ್ಕ ಬ್ರಾಹ್ಮಣನೊಬ್ಬನು ಸಾವನ್ನಪ್ಪಿದಾಗ ಬೊಮ್ಮೇತಿ ದೊರೆಯನ್ನು ಹಿಂಬಾಲಿಸುತ್ತದೆ. ಪರಿಹಾರಾರ್ಥವಾಗಿ ರಾಜ ಸುಂದರೇಶ್ವರದೇವಾಲಯಕ್ಕೆ ಸಾವಿರದೆಂಟು ಪ್ರದಕ್ಷಿಣೆ ಗಳನ್ನು ಹಾಕಿದಾಗ ನುಡಿದ ಆಕಾಶವಾಣಿಯಂತೆ, ಶ್ರೀಮಧ್ಯಾರ್ಜುನ ಕ್ಷೇತ್ರದಲ್ಲಿ ದೇವಸ್ಥಾನ ಮಂಟಪಗಳನ್ನು ಕಟ್ಟಿಸುವನು. ಆಗ ಪೌರಾಣಿಕರಿಂದ ಕೇಳಿದ ಶಿವಲೋಕ ವೈಭವವನ್ನು ಕಣ್ಣಾರೆ ನೋಡಬೇಕೆಂದು ಇಚ್ಛಿಸಿರುವುದಕ್ಕಾಗಿ ಸ್ವತಃ ಶಿವನೇ ದೊರೆಗೆ ಶಿವಲೋಕ ದರ್ಶನವನ್ನು ಮಾಡಿಸುತ್ತಾನೆ. ಪರಿಣಾಮವಾಗಿ ಆ ಕ್ಷೇತ್ರವು 'ಭೂಲೋಕ-ಶಿವಲೋಕ'ವೆಂದು ಪ್ರಸಿದ್ಧವಾಯಿತು.

'ಪುರಸೀಮಾಪ್ರದರ್ಶನಲೀಲೆ'(೪-೧)ಯಲ್ಲಿ ವಂಶಶೇಖರಪಾಂಡ್ಯ ರಾಜ್ಯವಾಳುತ್ತಿರುವಾಗ ಹೆಚ್ಚಿದ ಜನಸಂಖ್ಯೆಯಿಂದಾಗಿ ದೊರೆ ಸುಂದರೇಶ್ವರನನ್ನು ಪ್ರಾರ್ಥಿಸುವನು. ಆತ 'ವಾಸುಕಿ' ಎಂಬ ಸರ್ಪವನ್ನು ನೇಮಿಸಿ ಪುರಸೀಮೆಯನ್ನು ನಿರ್ದೇಶಿಸುವಂತೆ ತಿಳಿಸುತ್ತಾನೆ. ಅದೇ ರೀತಿ ಮಾಡಿದ್ದರಿಂದ ಆ ಕ್ಷೇತ್ರ 'ಹಾಲಾಸ್ಯಕದಂಬವನ' ಎನ್ನುವ ಹೆಸರನ್ನು ಹೊಂದಿತು. ಪೂರ್ವದ ಬಾಗಿಲು 'ಪುಷ್ಪವನ ಕ್ಷೇತ್ರ', ದಕ್ಷಿಣದ ಬಾಗಿಲು 'ಸುಬ್ರಹ್ಮಣ್ಯಶೈಲ' ಪಶ್ಚಿಮದ ಬಾಗಿಲು 'ಪದ್ಮಿಕಾಪುರಿ' ಉತ್ತರದ ಬಾಗಿಲು 'ವೃಷಭಾಚಲ'ವೆಂದು ಹಾಲಾಸ್ಯಕ್ಷೇತ್ರ ಸೀಮೆ ನಿರ್ಧಾರವಾಗುತ್ತದೆ.

ವೇಗವತಿಯಉತ್ಪತ್ತಿ(೧-೮), ಸಪ್ತಾಬ್ಧಿತೀರ್ಥ(೧-೯), ಗೋಪರ್ವತ(೨-೧೩), ಉತ್ತರ ಹಾಲಾಸ್ಯಕ್ಷೇತ್ರ (೪-೮), ಪತ್ರಿಕೇಶ್ವರ(೪-೧೦) ಇನ್ನು ಮುಂತಾದ ಅಲ್ಲಿಯ ಒಂದೊಂದು ಸ್ಥಳಗಳಿಗೂ ಇರುವ ಸ್ಥಳನಾಮಗಳ ಕುರಿತಾಗಿ ಇರುವ ಐತಿಹ್ಯಗಳನ್ನು, ಈ ಪುರಾಣದಲ್ಲಿ ಸಂದರ್ಭಾನುಸಾರ ಉಲ್ಲೇಖಿಸುತ್ತಾನೆ. ಒಟ್ಟಾರೆಯಾಗಿ ಇದೊಂದು ಪೌರಾಣಿಕ ಕೃತಿಯಾಗಿರುವುದರಿಂದ ಸುಂದರೇಶ್ವರನ ಅರವತ್ತನಾಲ್ಕು ಲೀಲೆಗಳನ್ನೊಳ ಗೊಂಡು ಇಡೀ ಕಾವ್ಯದ ತುಂಬ ಬರುವ ಸಂಗತಿಗಳೆಲ್ಲವೂ ಪೌರಾಣಿಕ ಹಿನ್ನೆಲೆಯನ್ನು ಒಳಗೊಂಡಿವೆ.

ಶಾಸ್ತ್ರೀಯ ಅಂಶಗಳು

ಈ ಪುರಾಣದಲ್ಲಿ ಪ್ರಾಸಂಗಿಕವಾಗಿ ಅಲ್ಲಲ್ಲಿ ಪುರುಷ ಲಕ್ಷಣ, ಸ್ತ್ರೀಲಕ್ಷಣ, ರತ್ನಶಾಸ್ತ್ರ ಮತ್ತು ಅಶ್ವಶಾಸ್ತ್ರಗಳ ಉಲ್ಲೇಖಗಳು ಕಂಡುಬರುತ್ತವೆ. ಕುಮಾರೋತ್ಪತ್ತಿ ಲೀಲೆಯಲ್ಲಿ ಉಗ್ರಪಾಂಡ್ಯನನ್ನು ವರ್ಣಿಸುವಾಗ ಪುರುಷನ ಮೂವತ್ತೆರಡು ಲಕ್ಷಣಗಳನ್ನು ಮೂರು ವೃತ್ತ ಮತ್ತು ನಾಲ್ಕು ಕಂದ ಪದ್ಯಗಳಲ್ಲಿ ಸಮಗ್ರವಾಗಿ ಹೇಳುತ್ತಾನೆ.

ನೀಳಮೈದಿ ಗಿಡ್ಡನಾಲ್ಕು ಸೂಕ್ಷ್ಮಮೈದು ನೋಡೆ ತಾ
ನೋಳಿಯಿಂದ ಮಾರುವುಪ್ಪುರಂಗಳೇಳೆ ಕೆಂಪುಗಳ್
ಮೇಳದಿಂದೆ ಮೂರೆ ಗುಟ್ಟುಮಂತೆ ಯುಗ್ಮಮಾಯತಂ
ಬಾಳಯವ್ವನಂಗೆ ತೋರೆ ಸುಂದರೇಂದ್ರನುರ್ಬಿದಂ ||

ಕಾಂ.೧, ಆ.೧೧, ಪ.೩೫

ಸಮನಾದಬಾಹುಗಳು, ನಯನಗಳು, ನಾಸಿಕವು, ದೀರ್ಘವಾದ ಕಬಂಧಯುತಜಿಹ್ವೆ, ಶಿಶ್ನ, ಪೃಷ್ಠ, ತುಟಿಗಳು, ಬೆರಳಿನತುದಿಗಳು, ಶಿರ ಮೊದಲಾದವುಗಳನ್ನು ಹೇಳುತ್ತ ಮೂಗು, ವಕ್ಷ, ಪರ್ಬು ಇವುಗಳು ಮಿಕ್ಕಿರಲು ಸಿರಿಯೆಂಬುದು ಚಿಕ್ಕನೆ ಬರುವುದು, ದೀರ್ಘಜೀವನತೆ ಎಂದರೆ ದೀರ್ಘಾಯುಷ್ಯವಾಗಿ ಬಾಳುವರು ಎನ್ನುತ್ತಾನೆ.

ಕೈಯಡಿಗಳ್ಕಂಗಳ್ ಕಡೆ
ಯೊಯ್ಯನೆಯುಗುರ್ದಾಡೆ ಜಿಹ್ವೆ ಕೀಳ್ತುಟಿವೇಳುಂ
ಬೈಯದಕೆಂಪುಗಳಾಗಿರ
ಲಯ್ಯಂತಾನೀವನತುಳ ಸುಖ ಸಂಪದಮಂ||

ಕಾಂ.೧, ಆ.೧೧, ಪ.೩೯

ಪುರುಷರು ಇಂತಹ ಲಕ್ಷಣಗಳನ್ನು ಹೊಂದಿದ್ದರೆ ದೀರ್ಘಾಯುವಾಗಿ, ಸಿರವಂತರಾಗಿ, ಅತಿಸುಖದಿಂದ, ಮನೋಹರವಾಗಿ ಜೀವನ ಸಾಗಿಸುತ್ತಾರೆ ಎಂಬ ನಂಬುಗೆಯಿಂದ ಕವಿ ಲಕ್ಷಣಗಳನ್ನು ವಿವರಿಸುತ್ತಾನೆ. ಕಾಂತಿಮತಿಯ ವರ್ಣನೆಯ ಸಂದರ್ಭದಲ್ಲಿ ಇದೇ ರೀತಿ ಸ್ತ್ರೀಯ ಮೂವತ್ತೆರಡು ಲಕ್ಷಣಗಳನ್ನು ಹನ್ನೊಂದು ವೃತ್ತ ಮತ್ತು ಏಳು ಕಂದಪದ್ಯಗಳಲ್ಲಿ ವಿವರಿಸಿದ್ದಾನೆ.

'ರಾಜಕಿರೀಟಮಣಿ ಪ್ರದಾನಲೀಲೆ'ಯಲ್ಲಿ ವೀರಪಾಂಡ್ಯನ ಮಗ ಅಭಿಷೇಕಪಾಂಡ್ಯನಿಗೆ ಪಟ್ಟಕಟ್ಟುವ ಸಂದರ್ಭದಲ್ಲಿ ರತ್ನಶಾಸ್ತ್ರವನ್ನು ವಿವರಿಸುತ್ತಾನೆ. ಅಭಿಷೇಕಪಾಂಡ್ಯನು ಐದು ವರ್ಷದವನಿದ್ದಾಗ ಬೇಟೆಗೆ ಹೋದ ದೊರೆ ಸತ್ತನು. ದೊರೆಯ ಮರಣಾನಂತರ ಭೋಗಿನೀ ತನಯರು ಮತ್ತು ಗೌಡಿಯರು ರಾಜಕುಮಾರನನ್ನು ವಂಚಿಸಿದರು, ಭಾಂಡಾರ ಬರಿದಾಯಿತು. ಮಂತ್ರಿಗಳು ಗುಟ್ಟು ಗೊತ್ತಾದರೆ ಹಾನಿಯೆಂದು ಮಗುವನ್ನು ಸುಂದರೇಶ್ವರನ ಮುಂದೆ ಅಡ್ಡ ಬೀಳಿಸಿದರು. ಶಿವನು

ವೈಶ್ಯವೇಷವನ್ನು ಧರಿಸಿ ರತ್ನಗಳಿಂದ ತುಂಬಿದ ಚೀಲವನ್ನು ಹಿಡಿಕೊಂಡು ಬಂದನು ಭಕ್ತರು ರಾಜಮುಕುಟಕ್ಕೆ ರತ್ನಗಳನ್ನು ಬೇಡಿದರು. ಆಗ ಶಿವನು ಕುಳಿತುಕೊಂಡು ರತ್ನಗಳನ್ನು ಕೆಳಗೆ ಸುರಿದು ಅವುಗಳ ಜಾತಿ ಲಕ್ಷಣ, ಫಲಗಳನ್ನು ಹೇಳಿ ರಾಜಕುಮಾರನಿಗೆ ರತ್ನಗಳನ್ನು ನೀಡುತ್ತಾನೆ. ಆಗ ಕ್ರಮವಾಗಿ, ವಜ್ರ, ಮುತ್ತು, ಪದ್ಮರಾಗ, ವಿದ್ರುಮ, ಮರಕತ, ಗೋಮೇದ, ನೀಲ, ವೈಡೂರ್ಯಗಳ ವಿವರಗಳನ್ನು ಹೇಳಿ ಅವುಗಳನ್ನು ಧರಿಸುವುದರಿಂದ ಉಂಟಾಗುವ ಫಲಗಳನ್ನು ಹೇಳುತ್ತಾನೆ.

ಪಚ್ಚೆತತ್ಕಥಂಸು ಪುಷ್ಯರಾಗಮಾತ್ತಮೇದಮೇ
ಯಚ್ಚಮಾದಚಾರುಗೋಗಮೇದವಿಂತಿವೆಯ್ದೆತಾ
ವೊಚ್ಚತಂಗಳುಜ್ಜ್ವಳಂನವೋರು ಸಂಖ್ಯೆಯೊಳ್‌ಸದಾ
ಬಿಚ್ಚದಂತೆ ಕೂಡಿತೋರ್ಪವೆಂದನಾವಣಿಗ್ವರಂ ||

ಕಾಂ.೨, ಆ.೧, ಪ.೨೧

'ತುರಂಗವಿಕ್ರಮಲೀಲೆ'ಯಲ್ಲಿ ಕುದುರೆಗಳಿಗೆ ಸಂಬಂಧಿಸಿದ ಅನೇಕ ಶಾಸ್ತ್ರೀಯ ಸಂಗತಿಗಳು ಅಡಕವಾಗಿವೆ. ಶಿವನಿಂದ ಅರಿಮರ್ದನಪಾಂಡ್ಯನು ಕುದುರೆಗಳನ್ನು ಕೊಂಡುಕೊಳ್ಳುವ ಸಮಯದಲ್ಲಿ ಕುದುರೆಗಳ ಜನ್ಮಕ್ಷೇತ್ರ, ಬಣ್ಣ, ಸುಳಿ, ದಶೆ, ಪ್ರಮಾಣ ಮುಂತಾದ ವಿಚಾರಗಳು ಬರುತ್ತವೆ. ಇಮ್ಮಡಿ ಮುರಿಗಾಗುರುಸಿದ್ಧರು ಹೇಳುವ ಪ್ರಕಾರ ಕುದುರೆಗಳ ಉತ್ಪತ್ತಿ ಕ್ಷೇತ್ರಗಳು ಕಾಂಬೋಜ, ಬಾಹ್ಲೀಕ, ವಾಸಂತಿಕ, ಸೌವೀರ, ಮಾಳವ, ತುಳುವ, ವನಾಯು, ಗಾಂಧಾರ, ಆರಟ್ಟ, ಸಿಂಧು, ಯವನಕುಂತಳ, ಕಾಶ್ಮೀರ, ಕೈಕಯ, ಕಳಿಂಗ, ಸೌರಾಷ್ಟ್ರ, ಹಿಮನಗ, ಮಗಧೆ, ಪಾಂಚಾಲ, ಸಾತ್ವೀಯ, ಮಂದರಗಿರಿಗಳು. ಆದರೆ ಭಾರತೀಯ ಆಕರಗಳ ಪ್ರಕಾರ ಕುದುರೆಗಳ ಉತ್ಪತ್ತಿ ಕ್ಷೇತ್ರಗಳು ಗ್ರಂಥದಿಂದ ಗ್ರಂಥಕ್ಕೆ ಭಿನ್ನವಾಗುತ್ತ ಹೋಗುತ್ತವೆ. ಅವುಗಳಲ್ಲಿ ಶಾಲಿಹೋತ್ರನ 'ಅಶ್ವಶಾಸ್ತ್ರ'ದ ಪ್ರಕಾರ ಐವತ್ತನಾಲ್ಕು ಕುದುರೆಯ ಉತ್ಪತ್ತಿ ಕ್ಷೇತ್ರಗಳಿದ್ದು ಅವು ಈ ಕೆಳಗಿನಂತಿವೆ.'

ಅಜಾನ, ಕಾಂಭೋಜ, ಬಾಹ್ಲಿಕ, ವನಾಯುಜ, ಗಾಂಧಾರ, ಆರಟ್ಟ, ಸಿಂಧು, ಚಾಂಪೇಯ, ತೈತಿಲ, ಮೇಚಕ, ಉಪಮೇಚಕ, ತ್ರೈಗರ್ತ, ಅರ್ಜುನ, ಸಾವಿತ್ರ, ಯೌಧೇಯ, ಯಾವನ, ಹ್ರಸ್ವಯಾವನ, ತುಖಾರ, ಕಾಂದಾರ, ಪರ್ವತ, ಓರಸ, ಆವರ್ತ, ಕಾಶ್ಮೀರ, ಶಖಾನಕ, ಉತ್ತರಮದ್ರ, ದಕ್ಷಿಣಮದ್ರ, ಯವನಾಂತದ್ವೀಪ, ಕೈಕಯ, ಅಪರಾಂತ, ಅಂಬಷ್ಟ, ವಾಸಂತಕ, ಸೌವೀರ, ದಾರದ, ಸೈವಕ, ಕ್ಷುದ್ರಕ, ಐರಾವತ, ಮಾಲವ, ಅವಂತಿ, ಕಳಿಂಗ, ಮೌಕುರ, ವನವಾಸ, ತ್ರಿಲಿಂಗ, ಕಥಗ್ನ, ಪ್ರಾವೃತಕ, ಸೌರಾಷ್ಟ್ರ, ಸಾಲ್ವ, ಕುರುಕ್ಷೇತ್ರ, ಪಾಂಚಾಲ, ಪ್ರೋಥಜ, ಕುಕ್ಕುರ, ಹ್ರಸಕುಕ್ಕರ, ಹೈಮವತ, ಅಮವತ್ಯುತ್ತರ, ಮಾಗದ ಹೀಗೆ ೫೪ ಕ್ಷೇತ್ರಗಳನ್ನು ಹೆಸರಿಸುತ್ತಾನೆ. ಕುದುರೆಗಳು ಯಾವ ಯಾವ ಕ್ಷೇತ್ರಗಳಲ್ಲಿ ಹುಟ್ಟುತ್ತವೆಯೋ ಅದೇ ಹೆಸರಿನಿಂದ ಅವುಗಳನ್ನು ಕರೆಯುತ್ತಾರೆ. ಇಮ್ಮಡಿ

ಮುರಿಗಾಗುರುಸಿದ್ಧರು ಕುದುರೆಗಳ ಬಣ್ಣದ ಬಗ್ಗೆ ಮೂರು ವೃತ್ತಗಳಲ್ಲಿ ಈ ಕೆಳಗಿನಂತೆ ವಿವರಿಸಿದ್ದಾನೆ.

ಶ್ವೇತಂ ರಕ್ತಂ ಪಿಶಂಗಂನ್ನಪಲದಸಿತಂ ಮಿಶ್ರಮೀಪಂಚವರ್ಣ
ಪ್ರೋತಂತಾಂಯತ್ತುರಂಗಾಳಿಗೆ ಜಗದೊಳಿವುಂ ಪಂಚವರ್ಣಾಂಗಳ್ಕೆಕೇಳ್
ಮಾತೇಂ ಮುಕ್ತಾಮೃತೇಂದ್ವಜ್ಜರಜತ ಹಿಮವರ್ಣಗಳಲಾಕ್ಷಿವಣ್ಣಂ
ಪೂತಂಗಳ್ ದಾಡಿಮಾಭಂಗಳಿವು ಶುಭತರಂಗಳ್ ತುರಂಗೋತ್ಕರಕ್ಕಂ ||

ಕಾ.೪, ಆ.೧೧, ಪ.೩೩

ಅಂಜನಂಮದ ಕೋಕಿಲಂಮಗಿಲಿಂತು ಶೋಭಿಪವಾಜಿಗಳ
ಮಂಜುಲಂಗಳಿವೈಸೆಪೆಣ್ಬವರಂ ಕಡಾಣೆಯಿವಂಮಿಗಿಲ್
ಪಿಂಜಿಕೊಂಡಿಹವಾರುಹಂಗಳಿವುಂ ಶುಭಂಗಳುದಗ್ನಿಯಾ
ಮಾಂಜದೊಳ್ವೆಳಗಿಂ ವಿರಾಜಿಪ ತೇಜಿಗಳ್ ಬಹುಮಾನಿಗಳ್ ||

ಕಾ.೪, ಆ.೧೧, ಪ.೩೪

ಭಾರತೀಯರ ನಂಬಿಕೆಯಂತೆ ವಿವಿಧ ಬಣ್ಣ, ವಿವಿಧ ಸ್ಥಳ, ವಿವಿಧ ಜಾತಿಯ ಕುದುರೆಗಳಲ್ಲಿ ಯಾವ ಬಣ್ಣದ ಕುದುರೆ, ಯಾವ ಸ್ಥಳದಲ್ಲಿ ಹುಟ್ಟಿದ ಕುದುರೆ ಯಾವ ಜಾತಿಯ ಕುದುರೆಯನ್ನು ತೆಗೆದುಕೊಳ್ಳುವುದರಿಂದ ಆತನಿಗೆ ಒಳ್ಳೆಯದಾಗುತ್ತದೆಯೋ, ಅಂತಹ ಜಾತಿಯ ಕುದುರೆಗಳನ್ನು ಮಾತ್ರ ಕೊಳ್ಳುತ್ತಾನೆ. ಹೀಗೆ ಕವಿಯು ಕುದುರೆಗಳ ಲಕ್ಷಣ, ಅವುಗಳ ಭೇದ, ದೇಶವಿಚಾರ, ಸುಳಿ ಮತ್ತು ಸುಳಿಗಳಿಂದ ಉಂಟಾಗುವ ಶುಭ ಮತ್ತು ಅಶುಭಫಲಗಳ ವಿವೇಚನೆ, ಬಣ್ಣ, ವೇಗ, ಪ್ರಮಾಣ ಮೊದಲಾದ ವಿವರಗಳನ್ನು ತಿಳಿಸುತ್ತಾನೆ. ಹೀಗಾಗಿ ಕವಿಯಲ್ಲಿರುವ ಶಾಸ್ತ್ರಜ್ಞಾನದ ಪರಿಚಯವೂ ಇದರಿಂದಾಗಿ ನಮಗೆ ಕಂಡುಬರುತ್ತದೆ. ಅಷ್ಟೇ ಅಲ್ಲದೆ ಸರ್ವವಿಷಯಗಳನ್ನು ಸಂಕ್ಷೇಪಿಸಿ ಹೇಳುವ ಈತನ ಕ್ರಮವು ಸಾಹಿತ್ಯ ಕ್ಷೇತ್ರಕ್ಕೆ ಮಾದರಿಯೆನಿಸುತ್ತದೆ.

ಸಾಹಿತ್ಯಿಕ ಅಂಶಗಳು

ಕವಿ-ಕಾವ್ಯ, ಸಾಹಿತಿ-ಸಾಹಿತ್ಯ ಎಂಬ ಪದಗಳು ರಚಿಸುವ, ರಚನೆಗೊಳ್ಳುವ ವ್ಯಕ್ತಿ ಮತ್ತು ವಿಷಯಗಳನ್ನು ನಿರ್ದೇಶಿಸುತ್ತವೆ. ಸಾಹಿತಿಯಾಗ ಬಯಸುವವನು ಪೌರಾಣಿಕ, ಚಾರಿತ್ರಿಕ, ಧಾರ್ಮಿಕ ಯಾವುದೇ ವಿಷಯವನ್ನು ತನ್ನ ಕಾವ್ಯಕ್ಕೆ ಆಯ್ದುಕೊಂಡಾಗ ವಸ್ತು, ರೂಪ, ಶೈಲಿಗಳಲ್ಲಿ ಗುರುತಿಸಲ್ಪಡುವುದು. ಆ ಕಾವ್ಯದಲ್ಲಿ ಮೂಡಿಬಂದಿರುವ ಕವಿತ್ವಶಕ್ತಿ, ಭಾಷಾಬಳಕೆ, ಅಲಂಕಾರಗಳು, ಛಂದಸ್ಸು, ವರ್ಣನೆ, ರಸಭಾವದ ಔಚಿತ್ಯ, ಇನ್ನು ಮುಂತಾದ ಸಾಹಿತ್ಯಿಕ ಅಂಶಗಳಿಂದ ಅಂತೆಯೇ ಶುದ್ಧ ಪೌರಾಣಿಕ ವಸ್ತುವನ್ನು ಒಳಗೊಂಡ ಹಾಲಾಸ್ಯಪುರಾಣದಲ್ಲಿ ಅಲ್ಲಲ್ಲಿ ಐತಿಹಾಸಿಕ ವಿಷಯಗಳನ್ನು ಗಮನಿಸಿದ ಹಾಗೆ ಕೆಲವು ಗಂಭೀರವಾದ ಸಾಹಿತ್ಯಿಕ ವಿಚಾರಗಳನ್ನು ಸಹ ಗುರುತಿಸಬಹುದಾಗಿದೆ.

ಉಭಯ ಭಾಷಾಪರಿಣತಿಯನ್ನು ಪಡೆದಿದ್ದ ಈತನು ತನ್ನ ಪ್ರತಿಭೆ, ಪಾಂಡಿತ್ಯ, ಕವಿತ್ವಶಕ್ತಿಗಳನ್ನೆಲ್ಲಾ ಈ ಕೃತಿಯಲ್ಲಿ ಧಾರೆಯೆರೆದಿದ್ದಾನೆ. ವೈವಿಧ್ಯಮಯ ಛಂದೋಬಂಧ, ಸಂಸ್ಕೃತಭೂಯಿಷ್ಠ ಭಾಷೆ, ಹೇರಳ ವರ್ಣನೆಗಳು, ನವರಸ ಪ್ರತಿಪಾದನೆ, ಅಲಂಕಾರಗಳ ಬಳಕೆ ಇವುಗಳಿಂದಾಗಿ ಈ ಪುರಾಣವು ಒಂದು ಉತ್ತಮ ಸಾಹಿತ್ಯಿಕ ಕೃತಿಯ ಸ್ಥಾನವನ್ನು ಗಳಿಸಿಕೊಂಡಿದೆ.

ವರ್ಣನೆ : ಚಂಪೂಕಾವ್ಯದಲ್ಲಿ ಹದಿನೆಂಟು ವರ್ಣನೆಗಳು ಬರಬೇಕೆಂಬುದು ಒಂದು ಸಾಮಾನ್ಯ ನಿಯಮ. ಆದರೆ ಕವಿ ಈ ವಿಷಯದಲ್ಲಿ ವಿಭಿನ್ನ ನಿಲುವನ್ನು ತಾಳಿದ್ದಾನೆ. ಅಷ್ಟಾದಶ ವರ್ಣನೆಗಳು ಶಿವನ ಲೀಲೆಗಳನ್ನು ವರ್ಣಿಸುವಾಗ ಅಡ್ಡಿಯಾಗುತ್ತವೆ. ಆದ್ದರಿಂದ ಶಿವಭಕ್ತ ಜನರು ಒಲ್ಲದ ಆ ನೀರಸ ವಾಕ್ಯದ ವರ್ಣನೆಗಳು ರಸಹೀನ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೂ ನಿಯಮ ಪಾಲನೆಗಾಗಿಯೋ ಅಥವಾ ತನ್ನ ಕಾವ್ಯಕ್ಕೆ ಮಹಾಕಾವ್ಯದ ಸ್ಥಾನ ದೊರೆಯಲೆಂದೋ ಸಂಪ್ರದಾಯದಂತೆ ಸಮುದ್ರವರ್ಣನೆಗೆ ತೊಡಗುವನು.

ತೆರೆಯಿಂದಂನೊರೆಯಿಂದೆಬೊಬ್ಬುಳಿಗಳಿಂದಾವರ್ತದಿಂಪಾಂಸೆಯಿಂ
ತರದಿಂಮೀಂಗಳಿನೇಡಿಯಿಂಮೊಸಳೆಯಿಂಪೇರಾವೆಯಿಂದಾನೆಯಿಂ
ನರರಿಂತೇಜಿಗಳಿಂದೆಶಂಖಚಯದಿಂಮುಕ್ತಾಳಿಯಿಂದದ್ರಿಯಿಂ
ದಿರದೆತ್ತಂಪಡಗಿಂದಮೊಪ್ಪಿದುದಿಳಾಶ್ರೀಗಾಗರಂಸಾಗರಂ||

ಕಾ.೧, ಆ.೧, ಪ.೧೮

ಇಳಾಶ್ರೀಗೆ ಆಗರವಾದ ಈ ಸಾಗರವು ಹರಿಗೆ ಶಂಖವನ್ನು ಕೊಟ್ಟದ್ದು, ಮಹೇಶನಿಗೆ ಶಶಿಯನ್ನು ನೀಡಿದ್ದು, ವಿಧಿಯನ್ನು ತಾವರೆಯ ದಂಟಿನಲ್ಲಿರಿಸಿದ್ದು ಹೀಗೆ ನನಗಾರು ಸರಿ ಎಂದು ಸಮುದ್ರ ಮೆರೆಯುತ್ತಿತ್ತು ಎಂದು ಭಾರತೀಯ ಜನತೆಯಲ್ಲಿ ಸಮುದ್ರದ ಬಗ್ಗೆ ಇರುವ ಪೂರ್ವ ಇತಿಹಾಸವನ್ನೆಲ್ಲ ಇಲ್ಲಿ ಅಡಕಗೊಳಿಸಿದ್ದಾನೆ. ಮುಂದೆ ಕೈಲಾಸ ಪರ್ವತವನ್ನು ಮಂದಾನಿಲ ರಗಳೆಯಲ್ಲಿ ಐವತ್ತೆಂಟು ಸಾಲುಗಳಲ್ಲಿ ವರ್ಣಿಸಿದ್ದಾನೆ. ಬೇಟೆಯಾಡಲು ಬಂದ ಕಿರಾತನ ಕಣ್ಣಿಗೆ ಎದುರಾದ ಆಲದ ಮರದ ವರ್ಣನೆಯು ಓದುಗನ ಗಮನ ಸೆಳೆಯುತ್ತದೆ.

ಕೆಂಬರಲಿಂದೆ ಪಚ್ಚೆವಣೆಯಿಂದೆ ಸುವಿದ್ರುಮದಿಂದೆ ಪರ್ವಿದಾ
ಡಂಬರ ಮಲ್ಲಿಕಾಮಕುಟಮೌಕ್ತಿಕದಿಂದುಳಿದಿರ್ದರನ್ನದಿಂ
ದಂಜುಜಪುತ್ರನಂದು ಸಲೆನಿರ್ಮಿಸಿದುಜ್ವಲ ಮಂಟಪಂ ಸದಾ
ನಂಬಿದರಂಸಮಂತು ಪೊರೆವಂದಮೊ ತಾನೆನಲಾಲಮೊಪ್ಪಿರಲ್||

ಕಾ.೨, ಆ.೯, ಪ.೧೨

ಅದೇ ರೀತಿ ತುರಂಗ ವಿಕ್ರಮಲೀಲೆ(೪-೧೧)ಯಲ್ಲಿ ವಾತಪುರೇಶ ತಂದ ಕುದುರೆಗಳು ಮಧುರೆಯನ್ನು ಪ್ರವೇಶಿಸುವ ಸಂದರ್ಭದಲ್ಲಿ ದಶದಿಕ್ಕುಗಳಲ್ಲಿ ಉಂಟಾದ ಶಬ್ದವನ್ನು ಕುರಿತು

ದಿಕ್ಕಂ ತುಂಬುತ್ತೊತ್ತುತ್ತಂಬಲ್
ಚೊಕ್ಕಂ ಭೋರೆಂದೆತ್ತಂ ನೋಡಲ್
ಪಿಕ್ಕುತ್ತಂ ವಾದ್ಯಂಗಳ್ ಕೇಳಲು
ತಕ್ಕಂತಾಗಲ್ ಚೋದ್ಯಂಬೊಲ್ ತಾಂ ॥

ಕಾ.೪, ಆ.೧೧, ಪ.೧೯

ಎಂದು ಕುದುರೆಗಳು ದುಮುಕುತ್ತವೆ. ಹೀಗೆ ತನ್ನ ವರ್ಣನಾ ಚಾತುರ್ಯದ ಹಲವು ಮುಖಗಳನ್ನು ಇಮ್ಮುಡಿಮುರಿಗಾಗುರುಸಿದ್ಧರು ಕಾವ್ಯದ ಕೆಲವಾರು ಕಡೆ ತೋರಿಸಿದ್ದಾರೆ. ಸಾಮಾಜಿಕ ಅಂಶಗಳಾದ ರಾಜ, ರಾಣಿ, ಸೈನಿಕ, ಸಿದ್ಧ, ಭಿಕ್ಷುಕ, ಅನಾಥ, ಗಂಡ, ಹೆಂಡತಿ, ಮಕ್ಕಳು ಮುಂತಾದ ವಿವಿಧ ಸ್ತರದ ವ್ಯಕ್ತಿಗಳ ಚಿತ್ರಣವನ್ನು ಅವಶ್ಯಕವೆನಿಸಿದಲ್ಲೆಲ್ಲಾ ನೀಡಿದ್ದಾನೆ. ಸಾಂಸ್ಕೃತಿಕ ವಿಚಾರಗಳಾದ ಹುಟ್ಟು, ನಾಮಕರಣ ಸಂದರ್ಭಗಳು ಈ ಕಾವ್ಯದಲ್ಲಿ ಅನೇಕ ಕಡೆ ಬರುತ್ತವೆ. ಕುಮಾರೋತ್ಪತ್ತಿ ಲೀಲೆ(೧-೧೧)ಯಲ್ಲಿ ಬರುವ ಉಗ್ರಪಾಂಡ್ಯನ ನಾಮಕರಣ ಪ್ರಸಂಗದಲ್ಲಿ

ಜೋ ಜೋ ಚಂದ್ರಾರ್ಧಾಕತನುಭವ ಜೋ ಜೋ ಜಗತ್ಪಾಲ ಜೋ ಜೋ
ಜೋ ಜೋ ರಾಜಿವಾಕ್ಷನತಪದ ಜೋ ಜೋ ಜರಾದೂರ ಜೋ ಜೋ
ಜೋ ಜೋ ದಿವ್ಯಜ್ಞಾನ ಜಲನಿಧಿ ಜೋ ಜೋ ಸದಾನಂದ ಜೋ ಜೋ
ಜೋ ಜೋ ಬಾಲಾರ್ಕಾಂಕುಶಯುತತನು ಜೋ ಜೋ ಮಹಾಲೀಲಾ ಜೋ ಜೋ -

ಕಾಂ.೧, ಆ.೧೧, ಪ.೨೨

ಎಂದು ಹಾಡಿದ ಈ ಜೋಗುಳ ಪದವು ಐದು ಪದ್ಯಗಳ ವಿಸ್ತಾರವನ್ನು ಹೊಂದಿ ಕವಿಯ ದೇಶೀಯತೆಯ ಪ್ರಜ್ಞೆಯನ್ನು ಪ್ರಚುರಪಡಿಸುತ್ತವೆ. ಕ್ಷಾಮ, ಬೇಟೆ, ಮಳೆ, ಬಿಸಿಲು, ಬಿರುಗಾಳಿ, ಇತ್ಯಾದಿ ನೈಸರ್ಗಿಕ ಕ್ರಿಯೆಗಳ ಬಗ್ಗೆಯೂ ಈ ಕಾವ್ಯದಲ್ಲಿ ಉಲ್ಲೇಖಗಳಿವೆ. ಮದುವೆಯ ಸಂದರ್ಭವೊಂದರಲ್ಲಿ ಮಾಡಿದ 'ಪುಳ್ಳಿ ಕಜ್ಜ ಪಪ್ಪಳ ಸಂಡಿಗೆ ಪಚ್ಚಡಿ ಸೊಪ್ಪು ಸೊಡವಕ್ಕಿ ಹಚ್ಚುಸುಚ್ಚುವುದು ಮದುವಣಿಗನ ಕೈ ಕೀಳಾಗಿ ಮದುವಣಗಿತ್ತಿಯ ಕೈ ಮೇಲಾಗಿ ಧಾರೆಯ ನೆರೆಯಲ್' ಎಂದು ಊಟಬಡಿಸುವ ಸಂದರ್ಭದ ವಿವರಣೆ ನೀಡುತ್ತಾನೆ. ಅದೇ ರೀತಿ ವೇಶ್ಯಾವಾಟಿಕೆ, ಸಂಗೀತ, ನಾಟ್ಯಗಳ ಬಗ್ಗೆ ವರ್ಣಿಸುತ್ತಾ 'ವ್ಯತ್ಯಸ್ತ ನೃತ್ಯಲೀಲೆ'(೨-೮)ಯಲ್ಲಿ ಶಿವನ ನೃತ್ಯವನ್ನು ಕುರಿತು

ಧಿಕ್ಕು ತಕ್ಕು ಧಿಮಿ ಧಿಂಧಿಮಿಳೆಮಿತೋ
ಧಿಕ್ಕಟೆಂಕು ಝುಣ ತಕ್ಕಿಟಧಿಕಟಾ
ಣಕ್ಕುತೇಯ ತರಿಕಿಂದಣ ತಕಿಟಂ
ತಕ್ಕತೋಂಗಮೆನುತಾಡಿದನಭವಂ ॥

ಕಾಂ.೨, ಆ.೮, ಪ.೨೬)

ಶಿವನ ನಾಟ್ಯದ ರೀತಿಯನ್ನು ಹೇಳುವ ಈ ಪದ್ಯವು ಕವಿಯ ಸಂಗೀತ ಕ್ಷೇತ್ರದ ಅನುಭವವನ್ನು ತಿಳಿಸುತ್ತದೆ. ಕವಿಯು ತಾನೇ ಹಾಕಿಕೊಂಡಿರುವ ಕೆಲವು ನಿರ್ಬಂಧಗಳಿಂದಾಗಿ ಈ ಕಾವ್ಯದಲ್ಲಿ ಸಾಂಪ್ರಾದಾಯಕ ವರ್ಣನೆಗೆ ಕಡಿವಾಣ ಬಿದ್ದಿದೆಯಾದರೂ ಸಹಿತ ಮೇಲಿನಂತಹ ನೂರಾರು ವರ್ಣನೆಗಳನ್ನು ಕಾವ್ಯದುದ್ದಕ್ಕೂ ಕಾಣಬಹುದಾಗಿದೆ.

ಅಲಂಕಾರ : ಕವಿ ಬಳಸಿದ ಭಾಷಾ ಶೈಲಿಯ ಸಾರ್ಥಕತೆಗೆ, ರಸಪ್ರತಿಪಾದನೆಗೆ ಅಲಂಕಾರಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಹಾಲಾಸ್ಯ ಪುರಾಣದ ಕರ್ತೃ ಉಪಮೆ, ದೃಷ್ಟಾಂತ, ರೂಪಕಾದಿ ಅಲಂಕಾರಗಳಲ್ಲಿ ಉಪಮೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದಾನೆ. ಉದಾ: 'ಬಗೆದಂ ವೃತ್ರಾಭಿದಂ ಮೂಜಗದ ತಲೆಗೆ ಕಲ್ಲಾಗಿ', 'ಸರಿವಳಿಯಂತ್ಯದೊಳಂಬರಸ್ಯ ಶಶಿಯಂತು ಮರನಬುಡಕೆ ಕೆರೆಯನೀರಂ ತರು ಶಾಖೆಗಳೆಲ್ಲಮೀಂಟು ವಂದದಿನ್', 'ನಡೆ ನಡೆ ಪೋಗೋಣಂಗಳ್ ತಾವೆಂ ತೋಡುವವಡವಿಗೆ ಕಡುಬರದಿನವರವೋಲ್ ಕೂಡಿದ ಕಾಗೆಗಳ ಮೇಳದಿಂದೆ,' 'ಮರದಿಂದೆ ಝಲ್ಲನೆ ಕೆದರ್ದು ಪಾರ್ವವೊಲಾಕ್ಷಣಂ ತಡೆಯದೆ ತುಪ್ಪದರಿದ ಕೋಳಿಗಳಂದದೆ ಗುಳ್ಮಗಳಂ ಕಡು ತವಕಂಮಿಗಲ್ ತೆರೆದು', 'ಈಚಲಪುಳುಮದು ನೆಲದೊಳ್ ಗೋಚರಿಸುತೆ ಗಳಿಗೆಯೊಳಗೆ ನೆಗೆದಾಡುವ ವೊಲ್', 'ಕೀಟನಲ್ಲಿ ಪಟ್ಟು ಪುಟ್ಟಿದಂತೆ' 'ಸಿರಿಗಂ ಗಂಡಾನೆರೆಯಪರಿಯಿ', ಎಂಬಂತಹ ಮಾತುಗಳು ಕವಿಯ ದೃಷ್ಟಾಂತ ಶಕ್ತಿಗೆ, ಉಪಮಾಚಾತುರ್ಯಕ್ಕೆ ಸಾಕ್ಷಿಯಾಗಿವೆ.

ಸಂದರ್ಭಾನುಸಾರವಾಗಿ ಕವಿ ಅನೇಕ ಗಾದೆಗಳನ್ನು ನಾಣ್ಣುಡಿಗಳನ್ನು ಬಳಸಿದ್ದಾನೆ. 'ನುಂಗಿದ ತುಳ್ತಿಗೆ ರುಚಿಯ ಸಂಗಳಿಸಿದೊಡುಂಟೆ', 'ಸೇರದ ನಾಯಗಳ್ ನಿಂತೊಡೆ ಚಾರುವಿವಾಹದ ಸುಲಗ್ನಮದು ಕೆಡುವುದೆ', 'ಸಾವಿನ ಕಾಲಕ್ಕಂತ್ಯಣವೊಂದೆ ಭಾವಿಸ ವಜ್ರ ಅರಸು', 'ಕಟ್ಟಿದ ಮೇಲೆ ತೀರ್ದಪುದಾಟ' ಮೊದಲಾದ ನುಡಿಗಳು ಕವಿಯ ದೇಶೀತನದ ಅಭಿವ್ಯಕ್ತಿಯ ದ್ಯೋತಕಗಳಾಗಿವೆ.

ರಸ : ಹಾಲಾಸ್ಯಪುರಾಣದಲ್ಲಿ ಬರುವ ನವರಸಗಳಲ್ಲಿ 'ಭಕ್ತಿರಸ'ಕ್ಕೆ ಪ್ರಧಾನವಾದ ಸ್ಥಾನ ಕಲ್ಪಿಸಲಾಗಿದೆ. ವೇದಕಾಲದಿಂದಲೂ ಭಾರತೀಯ ಜನಜೀವನದಲ್ಲಿ ಭಕ್ತಿರಸದ ಪಾತ್ರ ಗಣನೀಯವಾಗಿದೆ. ಪ್ರಸ್ತುತ ಕಾವ್ಯದ ವಸ್ತು ಶಿವನನ್ನೇ ಕೇಂದ್ರವಾಗಿರಿಸಿ ಕೊಂಡಿರುವುದರಿಂದ, ಇದರ ಸ್ಥಾಯೀ ಭಾವವು ಕೂಡ 'ಭಕ್ತಿ'ಯಾಗಿದೆ. ಈ ಕೃತಿಯಲ್ಲಿಯ ಕಥೆಗಳೆಲ್ಲವೂ ಭಕ್ತಿಯನ್ನೇ ಸಾರುತ್ತವೆ. 'ವರಾಹಶಿಶುನ್ಯ ಪ್ರಧಾನಲೀಲೆ'(೩-೧೩)ಯಲ್ಲಿ ಬರುವಂತೆ ಪಾರ್ವತಿಯೊಡನೆ ವಿಮಾನದಲ್ಲಿ ಗಗನ ವಿಹಾರಿಯಾಗಿ ಹೋಗುತ್ತಿದ್ದ ಶಿವ, ಬಿಸಿಲಿನಲ್ಲಿ ಬಾಡಿ ಬಳಲುತ್ತಿದ್ದ ಹಂದಿಯ ಮರಿಗಳಿಗೆ ಹೆಣ್ಣು ಹಂದಿಯ ವೇಷ ತಾಳಿ ಹಾಲನ್ನು ಕುಡಿಸಿದಾಗ ಅತ್ಯಂತ ಹೇಯವಾದ ಈ ಅವತಾರವೇಕೆ? ಎಂದು ಪ್ರಶ್ನಿಸಿದ ಪಾರ್ವತಿಗೆ ಶಿವ ಕೊಡುವ ಉತ್ತರ '...ರಮಣಿ ಜಗದೊಳ್ ಕುಂದಂ ಪಡೆದಂತ್ಯದಲ್ಲಿ ನರಕಕ್ಕಿಳಿವುದು

ಚಂದಮೆ ನಾಡೋಳ್ ಜನರುಂ ಪಂದಿಯೆನಿಪ್ಪೊಂದು ಶಪಥ ಶಬ್ದಮೆ ಕಷ್ಟಂ' ಎನ್ನುತ್ತಾನೆ. ಅದೇ ರೀತಿ ಒಡೆದು ಹೋದ ವೇಗವತಿ ನದಿಯ ದಂಡೆಯನ್ನು ಕಟ್ಟುವಾಗ ಶಿವನು ಕೂಲಿಕಾರನ ವೇಷ ಧರಿಸಿಕೊಂಡು ಬಂದು ಮುದುಕಿಯನ್ನು ಕಾಪಾಡುತ್ತಾನೆ. ಭದ್ರನ ಸೇವಕ ವೇಷವನ್ನು ಧರಿಸಿ ಸೌದೆ ಮಾರುತ್ತ ಸಂಗೀತವನ್ನು ಹಾಡಿ ಭದ್ರನೊಡನೆ ಸ್ಪರ್ಧಿಸಲು ಬಂದಿದ್ದ ಹಾಡುಗಾರನನ್ನು ಓಡಿಹೋಗುವಂತೆ ಮಾಡುತ್ತಾನೆ. ಒಟ್ಟಾರೆಯಾಗಿ ಸುಂದರೇಶ್ವರನ ೬೪ ಲೀಲೆಗಳೂ ಭಕ್ತಿರಸ ಪ್ರಧಾನವಾದವುಗಳು. ಉಳಿದ ಎಂಟು ರಸಗಳು ಕಾವ್ಯದಲ್ಲಿ ಅಲ್ಲಲ್ಲಿ ಪೋಷಿತ ಪಾತ್ರವನ್ನು ವಹಿಸುತ್ತವೆ. ಕಾವ್ಯಾರಂಭದಲ್ಲಿ ಶಿವನನ್ನು, ಶರಣರನ್ನು, ಕಾವ್ಯಾಂತದಲ್ಲಿ ಶಿವ, ಪಾರ್ವತಿ, ತೋಂಟದಸಿದ್ಧಲಿಂಗ ಯತಿಗಳನ್ನು ಭಕ್ತಿ ಪೂರ್ವಕವಾಗಿ ನೆನೆಯುವ ಈತನ ಕಾವ್ಯವೂ ಕೂಡ ಭಕ್ತಿ ರಸ ಪ್ರಧಾನವಾದುದು.

ಭಾಷೆ : ಉಭಯ ಭಾಷಾ ಪಂಡಿತರೆನಿಸಿದ ಇಮ್ಮಡಿ ಮುರಿಗಾಗುರುಸಿದ್ಧರು ಕಾವ್ಯಕ್ಕೆ ಕ್ಲಿಷ್ಟವಾದ ಸಂಸ್ಕೃತ ಮಿಶ್ರಿತ ಭಾಷೆಯನ್ನು ಆಯ್ದುಕೊಂಡಿದ್ದಾರೆ. ಈ ಕಾಲಕ್ಕಾಗಲೇ ಷಟ್ಪದಿ, ರಗಳೆ, ತ್ರಿಪದಿ, ಸಾಂಗತ್ಯಗಳಂಥ ದೇಶೀ ಮಟ್ಟುಗಳಲ್ಲಿ ಸಾವಿರಾರು ಸರಳ ಕಾವ್ಯಗಳು ಹುಟ್ಟಿಕೊಂಡಿದ್ದವು. ಅಲ್ಲದೇ ಇವರೂ ಸಹ ತಾರಾವಳಿ, ಸ್ವರವಚನ, ಯಕ್ಷಗಾನದಂತಹ ಸರಳ ಕಾವ್ಯಗಳನ್ನು ರಚಿಸಿ ಜನಸಾಮಾನ್ಯರ ಕವಿ ಎನಿಸಿಕೊಂಡಿದ್ದರು. ಆದರೆ ಪ್ರೌಢಶೈಲಿಯ ಈ ಕಾವ್ಯ ರಚಿಸಲು ಬಹುಶಃ ಷಡಕ್ಷರಕವಿ ಮತ್ತು ಚಿಕ್ಕದೇವರಾಯನ ಆಸ್ಥಾನದಲ್ಲಿದ್ದ ತಿರುಮಲಾರ್ಯ, ವಿರುಪಾಕ್ಷಪಂಡಿತ ಇವರುಗಳ ಪ್ರೇರಣೆ ದೊರೆತಿರಬಹುದು. ಅಲ್ಲದೆ ಸ್ವತಃ ಕವಿ ಹೇಳಿಕೊಳ್ಳುವಂತೆ

ಯತಿರಾಜೋದ್ಯದ್ಧರೀಶ ಪ್ರಥಿತಗುಣ ಮಹಾಚನ್ನವೀರೇಶ್ವರಾಂಚ
ನ್ಮತಿಯುಕ್ತಾರಾಧ್ಯ ಚಂಚತ್ಕರಿಬಸವ ಸುಸಂಗೀತವಿದ್ಯಾಬ್ಧಿಚಂದ್ರಾ
ಪ್ರತಿಮಾನಸ್ಥಾರ ಮುಚ್ಚನ್ನಬಸವ ವಿಲಸನ್ನಾಮ ಯೋಗೀಂದ್ರರೊಲ್ದೀ
ನುತ ಹಾಲಾಸ್ಯೇಶ ಲೀಲಾಕಥನಮನೊರೆಯಲ್ಚೇಳ್ಕುಮೆಂದಾಡಲಾಗಳ್॥

ಕಾಂ.೪, ಆ.೧೭, ಪ.೧೨೫

ಹರೀಶ, ಚನ್ನವೀರ, ಕರಿಬಸವ, ಚನ್ನಬಸವದೇವರೆಂಬ ಶಿಷ್ಯರ ಒತ್ತಾಯವೂ ಈ ಮಾರ್ಗ ಆಯ್ದುಕೊಳ್ಳಲು ಕಾರಣವಾಗಿರಬಹುದು. ಆದರೂ ಪ್ರಸಂಗಕ್ಕೆ ತಕ್ಕ ಹಾಗೆ ದೇಶೀಯ ಭಾಷೆಯ ಬಳಕೆ ಮಾಡಿದ್ದಾನೆ.

ಹಾ ಮನದನ್ನನೆ ಅಣುಗನೆ
ಹಾ ಮೈದುನನೇ ಮದೀಯ ಭಾವನೆ ಬಂಧುವೆ
ಹಾ ಮಳೆವರಿದುದಯ್ಯೋ
ಭೂಮಿಯೊಳೆಲೆ ಜಿನನೆ ಸತ್ತೆಯಾಯೆಂದೆನುತಂ ॥

ಕಾಂ.೪, ಆ.೧೫, ಪ.೩೨

ಹೀಗೆ ಕವಿ ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳನ್ನು ತನ್ನ ಕಾವ್ಯದಲ್ಲಿ ಲೀಲಾಜಾಲವಾಗಿ ಬಳಸಿದ್ದಾನೆ. ದೇಶಿ ಪದಗಳಾದ ವೈನ, ಒಂದಿರು, ದಿಮಾಕು, ಮಂಡಿಯನೋವು, ಕೋರ್ಚು, ಸೋಬಾರ, ಎಲೆ, ಅಡಕೆ, ಸುಣ್ಣ, ಕತ್ತಿ, ಕುಡುಗೋಲು, ಕೊಡಲಿ ಮುಂತಾದ ಶಬ್ದಗಳನ್ನು ಉಚಿತವಾಗಿ ಬಳಸಿದ್ದಾನೆ. ಒಂದು ಶಬ್ದಕ್ಕೆ ಅನೇಕ ಸಮನಾರ್ಥ ಶಬ್ದಗಳನ್ನು ಸೃಷ್ಟಿಸಿದ್ದಾನೆ. 'ರುದ್ರಾಕ್ಷಿ' ಎನ್ನುವ ಪದಕ್ಕೆ 'ರುದ್ರನೇತ್ರ, ರತ್ನ, ಮರಹರನಯನಮಣಿ, ಮಿಡಚ್ಚಿ ಎಂದೂ, 'ಹಂದಿ' ಎನ್ನುವ ಶಬ್ದಕ್ಕೆ ವರಾಹ, ಸೂರಕ, ಕ್ರೋಡ, ಕಿಟಿ, ಪೋತ್ರ, ಕಿರಿ, ಪಂದಿ, ಎಂದೂ, 'ನರಿ' ಎನ್ನುವ ಶಬ್ದಕ್ಕೆ ಶಿವ, ಜಂಬುಕ, ಸೃಗಾಲ, ಫೇರು, ಕ್ರೋಷ್ಟು, ಸಕ, ಮೋಟ, ಮುಂತಾದ ಸಂವಾದಿ ಶಬ್ದಗಳನ್ನು ಅನೇಕ ಕಡೆ ಬಳಸಿ ತನ್ನ ಕೃತಿಯ ಸರಳತೆಯ ಅಗ್ಗಳಿಕೆಯನ್ನು ಹೀಗೆ ಹೇಳಿಕೊಳ್ಳುತ್ತಾನೆ.

ವ್ಯಾಕರಣದ ಸಮ್ಮತಿಯಿಂದ
ಲೋಕದೊಳರಿದೆನಿಪ ತೆರದೆ ಪೇಳ್ದೀ ಕೃತಿಯಂ
ಜೋಕೆಯಿನ ಭವನ ಭಕ್ತರ್
ಸ್ವೀಕರಿಸಿದೊಡಾದುದೆನಗನಂತ ಸುಖಾಂತಂ ||

ಕಾಂ.೧, ಆ.೧, ಪ.೧೭

ಒಟ್ಟಾರೆಯಾಗಿ ಸಾಹಿತ್ಯ ಕ್ಷೇತ್ರದಲ್ಲಿ ಭಾಷೆಯ ದೃಷ್ಟಿಯಿಂದಲೂ ಸಹ ಪಾಂಡಿತ್ಯ ಪೂರ್ಣವಾದ ವಿದ್ವತ್ ಕೃತಿಯ ಸ್ಥಾನಮಾನವನ್ನು ಗಳಿಸಿಕೊಂಡಿದೆ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಛಂದಸ್ಸು : ಇಮ್ಮಡಿ ಮುರಿಗಾಗುರುಸಿದ್ಧರ ಛಂದಶಾಸ್ತ್ರ ನಿಪುಣತೆಗೆ ಈ ಕೃತಿಯು ಅತ್ಯುತ್ತಮ ನಿದರ್ಶನವಾಗಿದೆ. ಈ ಪುರಾಣದಲ್ಲಿರುವಷ್ಟು ಛಂದೋ ಪ್ರಯೋಗಗಳು ಬೇರೆ ಯಾವ ಗ್ರಂಥದಲ್ಲಿಯೂ ಬಳಕೆಯಾಗಿಲ್ಲವೆಂದು ಹೇಳಬಹುದು. ಕಂದ, ವೃತ್ತ, ರಗಳೆ, ತ್ರಿಪದಿ, ತ್ರಿವಡೆ, ಗದ್ಯ, ವಚನ, ಚೂರ್ಣಿಕೆಗಳು ಹೀಗೆ ಸುಮಾರು ೧೬೫ಕ್ಕೂ ಹೆಚ್ಚಿನ ಛಂದೋಬಂಧಗಳನ್ನು ಬಳಸಿ ಕೃತಿ ರಚಿಸಿದ್ದಾನೆ. ಅವುಗಳನ್ನು ವಿದ್ವಾಂಸರು ಈ ಕೆಳಗಿನಂತೆ ಗುರುತಿಸುತ್ತಾರೆ.

ಅಂಬನಿ, ಅಕ್ಕರಿಕೆ, ಅಚಲಜಿಹ್ವಾವಿತಾನ, ಅಚ್ಯುತಕ, ಅನಂತ, ಅನವದ್ಯ, ಅಭ್ರಕ, ಅಮಳ, ಅಮಳವಿತಾನ, ಅರವಿಂದ, ಅರ್ಕಮರೀತಿ, ಇಂದುವದಾನಾ, ಇಂದ್ರವಜ್ರ, ಉತ್ಪಲಮಾಲೆ, ಉತ್ಸಾಹ, ಉತ್ಸಾಹರಗಳೆ, ಉತ್ಸುಕ, ಉದಯ, ಉದಾತ್ತ, ಉಪಮ, ಉಪೇಂದ್ರವಜ್ರ, ಕಂದ, ಕನಕಾಬ್ಜಿನಿ, ಕಲ್ಯಾಣ, ಕವಿರಾಜವಿರಾಜಿತು, ಕಾಂಚನಮಾಲೆ, ಕಾಂತ, ಕುಮುದ, ಕುಸುಮಶರ ನಿರತಿಶಯ, ಕುಸುಮಾಂಘ್ರಿಪ, ಕೋಮಳ, ಕ್ರೌಂಚಪದ, ಖಚರಪ್ಲುತ, ಗಂಧಶಾಲಿನಿ, ಚಂದ್ರಕಾಂತ, ಚಂದ್ರಿಕಾ, ಚಂದ್ರಿಕೆ, ಚಂಪಕಮಾಲೆ, ಚತುರ್ದಳಿ, ಚಾಮರ, ಚಿತ್ರಪದ, ಚೂರ್ಣಿಕೆ, ಚೂತಕೂಜ, ಛಂದೋವೃತ್ತ, ಜಗದ್ವಿಭೂತಿ, ಜನಹಿತ, ಜನೋದಯ, ಜಲೋದ್ಧತಗತ, ತನುಮಧ್ಯ, ತರಳ, ತಿಲಕ, ತುರಂಗ,

ತೋಟಕ, ತ್ರಿಪದಿ, ತಿಪದೋನ್ನತಿ, ದಿವಿಜಕಲ್ಪಲತಾ, ತ್ರಿವಿಡೆ, ದೇವರಮ್ಮ, ದೃತಪದ, ದ್ರುತವಿಲಂಬಿತ, ಧವಳಾರ ತ್ರಿಪದಿ, ನಿರ್ಕುಟಕ, ನಗರರಂಜಿತ, ನವನಳಿಸ, ನವಮಂಜರಿ, ನಾಕಿನಿ, ನಿಮಾತಿಶಯ, ನಿರುಪಮ, ನುತಪಣವಕ, ಪದ್ಮಮುಖ, ಪುನರ್ಮಂದಾನಿಲ, ಪುಷ್ಪಿತಾಗ್ರ, ಪ್ರಭಾತ, ಪ್ರಮಾಣಿತ, ಪ್ರವರಾಕ್ಷರ, ಪ್ರಹರಣ ತಿಲಕ, ಪ್ರೇಮ, ಪ್ರೋದ್ಧಾಮ, ಬಿರುದಾವಳಿಗದ್ಯ, ಭದ್ರಕ, ಭುಜಂಗ ಪ್ರಯಾತ, ಭುಜಂಗ ವಿಜೃಂಭಿತ, ಭುಜಗ ಶಿಶು, ಭ್ರಮರವಿಲಸಿತ, ಮಂಗಳ, ಮಂಜುಭಾಷಿತ, ಮಂದಾಕ್ರಾಂತ, ಮಂದಾನಿಲ, ಮಂದಾನಿಲರಗಳೆ, ವಾಣಿಗಣನಿಕರ, ಮಣರಂಗ ಮಣಿವಿಭೂಷಿತ, ಮತ್ತ, ಮತ್ತಕೋಕಿಲ, ಮಾಣವಕ, ಮಾನಿನಿ, ಮಾಲಿನಿ, ಮೃಗನೇತ್ರ, ಮೇಘ ವಿಸ್ಫೂರ್ಜಿತ, ಮೋದಕ, ರಥೋದ್ಧತ, ರವಿಭ್ರಮ, ರುಚಿರ, ಲಯಗ್ರಾಹ, ಲಲಿತ, ಲಲಿತಗತಿ, ಲಲಿತಪದ, ಲಲಿತರಗಳೆ, ಲಲಿತಹರಣ, ವಂಶವೃತ್ತ, ವಕುಳ, ವಕುಳ ಕುಟ್ಮಳ, ವನಜ, ವನಚುಂಜರಿ, ವನಲತೆ, ವಸಂತತಿಲಕ, ವಿಚಿತ್ರಪಾದ, ವಿಚಿತ್ರಲಲಿತ, ವಿಜಯಾನಂದ, ವಿದಳಿತವನ, ರುಹಲಲಿತ, ವಿದ್ಯುಸ್ಮಾಲೆ, ವಿಭ್ರಮ, ವೈತಾಳಿ, ವೈವಸ್ವದ, ಶಶಿಕಾಂತ, ಶಾರ್ದೂಲವಿಕ್ರೀಡಿತ, ಶಾಲಿನಿ, ಶಾಲಿನಿವಿತಾನ, ಶಿಖರಿಣಿ ಶ್ಲೋಕ, ಸರಳ, ಸಿಂಧುನಂದನ, ಸುರಂಗ ಕೇಸರ, ಸುರತರು, ಸುಲಲಿತ, ಸೈನಿಕ, ಸೌಂದರ, ಸ್ರಗ್ಧರೆ, ಸ್ರಗ್ವಿಣಿ, ಹಂಸಗತಿ, ಹಂಸಪದ, ಹಂಸವೃತ್ತ, ಹರಿಣ, ಹರಿಣಪ್ಲುತ, ಹಾಲಾಮುಖ ಎಂದು ಗುರುತಿಸಬಹುದಾಗಿದೆ. ಇವುಗಳಲ್ಲಿ ನಾಗವರ್ಮ, ಜಯಕೀರ್ತಿ, ಕೇದಾರಭಟ್ಟ, ಹೇಮಚಂದ್ರ, ವೀರಭದ್ರ, ಗುಣಚಂದ್ರ, ಷಡಕ್ಷರದೇವ, ತಿರುಮಾಲಾರ್ಯ ಮುಂತಾದವರ ಕೃತಿಗಳಲ್ಲಿ ಬರುವ ಛಂದೋಬಂಧಗಳ ಜೊತೆಗೆ ಕವಿಯೇ ಹೊಸದಾಗಿ ಸೃಷ್ಟಿಸಿ ಪ್ರಯೋಗಿಸಿದ ಕೆಲವು ಛಂದೋಬಂಧಗಳು ಸಮಾವೇಶಗೊಂಡಿರುವುದು ಅವುಗಳ ಹೆಸರುಗಳು ಹೀಗಿವೆ.[೧೦]

೧. **ಛಂದೋವೃತ್ತ** : ಇದರ ಲಕ್ಷಣ ರ.ನ.ಭ.ಮ.ಸ.ಸ.ಲ.ಗ. ಎಂದಿದೆ ೨೨ ಅಕ್ಷರಗಳನ್ನೊಳಗೊಂಡ ಈ ವೃತ್ತ ೫ ಸಾರಿಪ್ರಯೋಗಿಸಿದ್ದಾರೆ.

೨. **ಚಂದ್ರಕಾಂತ** : ೨೧ ಅಕ್ಷರ ಸಂಖ್ಯೆಯನ್ನೊಳಗೊಂಡ ಈ ವೃತ್ತ ಬೇರೆ ಯಾವ ಛಂದೋಗ್ರಂಥಗಳಲ್ಲಿ ಬಳಕೆಗೊಂಡಿಲ್ಲ, ಇದರ ಲಕ್ಷಣ ರ.ನ.ಭ.ಭ.ಭ.ರ

೩. **ಕಾಂತ** : ೧೬ ಅಕ್ಷರ, ನಾಗವರ್ಮ ಇದನ್ನು 'ಲಲಿತ' ಪದವೆಂದೂ, ಜಯಕೀರ್ತಿ 'ಕಮಲಪಾದ'ವೆಂದೂ ಕರೆದಿದ್ದಾರೆ.

೪. **ತೋಟಕ** : ಇದು ಹೊಸದು, ಇದರ ಲಕ್ಷಣ ನ ಜ ನ ಸ ನ ನ ಭ ಭ ಗ

೫. **ಕುಸುಮಶರನಿರತಿಶಯ** : ೩೩ ಅಕ್ಷರ ಸಂಖ್ಯೆಯನ್ನೊಳಗೊಂಡಿದ್ದು 'ನ ನ ನ ನ ನ ನ ನ ನ ನ ಭ ಯ' ಲಕ್ಷಣ ಹೊಂದಿದೆ. ಈ ವೃತ್ತ ಎಲ್ಲಿಯೂ ಬಳಕೆಗೊಂಡಿಲ್ಲ

೬. **ಜನೋದಯ :** ೪ ಅಕ್ಷರ ಒಳಗೊಂಡ ಈ ವೃತ್ತ ಯಾವ ಗ್ರಂಥದಲ್ಲೂ ಬಳಕೆಯಾಗಿಲ್ಲ, ಭರತ, ಜಯಕೀರ್ತಿ ಈ ಛಂದಸ್ಸನ್ನು 'ಜಯಾ' ಎಂದೂ ವೀರಭದ್ರನು 'ಸುಕಾಂತಿ' ಎಂದೂ ಕರೆದಿದ್ದಾನೆ.

೭. **ನಿಮಾತಿಶಯ :** ಏಳು ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮನಲ್ಲಿ 'ವಿನಮ್ನ' ಎಂಬ ಹೆಸರಿದೆ.

೮. **ಪ್ರೇಮ :** ನಾಲ್ಕು ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮ 'ಶಕ್ರ' ಎಂದೂ ಜಯಕೀರ್ತಿ 'ಗೀತ' ಎಂದೂ ಗುಣಚಂದ್ರನು 'ಕನ್ಯಾ' ಎಂದೂ ಕರೆದಿದ್ದಾರೆ.

೯. **ಅನಂತ :** ಐದು ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮ 'ನಂದ' ಎಂದೂ, ಜಯಕೀರ್ತಿ, ಕೇದಾರಭಟ್ಟರು 'ಸತಿ' ಎಂದು ಕರೆದಿರುವರು.

೧೦. **ಉಪಮ :** ಹನ್ನೆರಡು ಅಕ್ಷರ. ಈ ವೃತ್ತ ನಾಗವರ್ಮನ 'ಇಂದ್ರವಂಶ'ಕ್ಕೆ ಸರಿ ಹೊಂದುತ್ತದೆ.

೧೧. **ಪೃಥ್ವಿ :** ಹದಿನೇಳು ಅಕ್ಷರಗಳನ್ನೊಳಗೊಂಡ 'ಪೃಥ್ವಿ' ಎಂಬ ವೃತ್ತ ಪ್ರಸಿದ್ಧವಾಗಿದ್ದರೂ ಸಹಿತ ಇಲ್ಲಿ ಕವಿ ಹದಿಮೂರು ಅಕ್ಷರಗಳನ್ನು ಒಳಗೊಂಡ ಈ ವೃತ್ತಕ್ಕೆ 'ಪೃಥ್ವಿ' ಎಂದು ಹೆಸರಿಟ್ಟು ಪ್ರಯೋಗ ಮಾಡಿರುವನು.

ಮೇಲಿನ ಈ ಎಲ್ಲಾ ಅಂಶಗಳ ಪರಿಶೀಲಿಸಿದಾಗ ಇಮ್ಮಡಿ ಮುರಿಗಾಗುರುಸಿದ್ಧರು ೧೬೫ಕ್ಕೂ ಹೆಚ್ಚು ಛಂದೋಪ್ರಯೋಗದಲ್ಲಿ ಆಕರ ಗ್ರಂಥಗಳಾಗಿ ನಾಗವರ್ಮ, ಜಯಕೀರ್ತಿ, ಕೇದಾರಭಟ್ಟ, ಹೇಮಚಂದ್ರ, ವೀರಭದ್ರ, ಗುಣಚಂದ್ರ, ಷಡಕ್ಷರದೇವ ಮತ್ತು ತಿರುಮಲಾರ್ಯ ಮುಂತಾದವರ ಕೃತಿಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. 'ಛಂದಸ್ಸಿನ ದೃಷ್ಟಿಯಿಂದ ಬಹು ಗಮನಾರ್ಹ ಚಂಪೂ ಕೃತಿ, ಶುದ್ಧಕಾವ್ಯದ ಆಧಾರದಿಂದ ನೋಡಿದಾಗ ಇದು ತೀರ ಕಳಪೆ ಕೃತಿ. ಆದರೆ ವಿವಿಧ ಜಾತಿಯ ವೃತ್ತಗಳ ಪ್ರಯೋಗದಲ್ಲಿ ಹಾಗೂ ಪ್ರಾಸಸ್ಥಾನವನ್ನೊಳಿಸಿ ಕೊಂಡಿರುವ ಕ್ರಮದಲ್ಲಿ ಮನ್ನಣೆಯಿದೆ'[೧೧] ಎಂದು ಹಂಪನಾಗರಾಜಯ್ಯನವರ ಅಭಿಪ್ರಾಯಪಟ್ಟಿದ್ದಾರೆ. ಈ ಕಾರಣದಿಂದ ಇಮ್ಮಡಿ ಮುರಿಗಾಗುರುಸಿದ್ಧರು ಛಂದಸ್ಸಿನಂತಹ ಶಾಸ್ತ್ರ ವಿಚಾರಗಳಲ್ಲಿಯೂ ತಮ್ಮ ಸಾಮಾರ್ಥ್ಯವನ್ನು ಒರೆಗೆ ಹಚ್ಚಿದ್ದಾರೆ. ಒಟ್ಟಾರೆಯಾಗಿ ವಸ್ತು, ನಿರೂಪಣೆ, ಶೈಲಿ, ಇವುಗಳಿಗಿಂತ, ಭಾಷಾ ಬಳಕೆ, ಛಂದೋಪ್ರಯೋಗಗಳೇ ಈ ಕಾವ್ಯದ ಆತ್ಮವಾಗಿದೆ.

ಕನ್ನಡ ಚಂಪೂ ಕಾವ್ಯಗಳನ್ನು ೧. ಲೌಕಿಕ ಕಾವ್ಯಗಳು (ಇವುಗಳನ್ನು ಮತ್ತೆ ಇತಿಹಾಸ ಕಾವ್ಯಗಳು, ಕಾಲ್ಪನಿಕ ಕಾವ್ಯಗಳು ಎಂದು ಎರಡು ಭಾಗ) ೨. ಧಾರ್ಮಿಕ ಕಾವ್ಯಗಳು ೩.ಕಥಾಕೋಶಗಳು ಎಂದು ವರ್ಗೀಕರಿಸುತ್ತಾರೆ.[೨] ಆದಿಕವಿ ಪಂಪನಿಂದ ಆರಂಭಿಸಿ ಷಡಕ್ಷರದೇವನವರೆಗೆ ಸಾಹಿತ್ಯ ಚರಿತ್ರೆಕಾರರು

ಚಂಪೂ ಕೃತಿಗಳನ್ನು ವಿಭಾಗಿಸುವ ಈ ಕ್ರಮದಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಕಾವ್ಯವು ಧಾರ್ಮಿಕ ವಸ್ತುವನ್ನು ಒಳಗೊಂಡಿದ್ದರೂ, ಅದೊಂದು ಜನಪದ ಕಥೆಗಳ ಕಥಾಕೋಶ ಎನಿಸಿಕೊಳ್ಳುತ್ತದೆ ಕವಿ ಇಲ್ಲಿ ತಾತ್ವಿಕ ವಿಷಯಗಳನ್ನು ತಿಳಿಸಹೊರಟಿರುವುದು ತನ್ನ ಧರ್ಮದ ಸಾಮಾನ್ಯರಿಗಾಗಿ, ಅಂತೆಯೇ ಪಂಡಿತ ಶೈಲಿಯ ನಿರೂಪಣೆಯ ಜೊತೆಗೆ ಅಲ್ಲಲ್ಲಿ ಸಾಮಾನ್ಯ ಶೈಲಿಯನ್ನು ಬಳಸಿಕೊಂಡಿದ್ದಾನೆ. ಈತನು ಉಭಯ ಭಾಷಾಪರಿಣತತ್ವ, ಪ್ರಕಾಂಡಪಾಂಡಿತತ್ವ ಇವೆರಡನ್ನು ಈ ಕೃತಿಯಲ್ಲಿ ಸಮರ್ಥವಾಗಿ ಪ್ರಚುರಪಡಿಸಿದ್ದಾನೆ. ಒಟ್ಟಾರೆಯಾಗಿ ೧೮ನೇ ಶತಮಾನದಲ್ಲಿ ಷಟ್ಪದಿ, ತ್ರಿಪದಿ, ಸಾಂಗತ್ಯ ಮುಂತಾದ ದೇಶೀ ಮಟ್ಟುಗಳ ಮತ್ತು ಹೊಸಗನ್ನಡ ಸಾಹಿತ್ಯದ ಆರಂಭ ಹೀಗೆ ಎಲ್ಲವೂ ಸರಳೀಕರಣಗೊಂಡಿದ್ದ ಕಾಲದಲ್ಲಿ ಕವಿ ಆರಿಸಿಕೊಂಡಿರುವ ಮಾರ್ಗ ವಿಶಿಷ್ಟವಾಗಿದೆ. ಚಂಪುವಿನ ಗಡಿಯನ್ನು ಷಡಕ್ಷರ ಕವಿಯ ನಂತರ ವಿಸ್ತರಿಸಿದ ಹೆಗ್ಗಳಿಕೆ ಈತನದಾಗಿದೆ. ಅಷ್ಟೇ ಅಲ್ಲದೆ ವೀರಶೈವ ಚಂಪೂ ಕವಿಗಳಲ್ಲಿ ಮೊದಲ ಹೆಸರು ಹರಿಹರನದಾದರೆ ಎರಡು ಮತ್ತು ಮೂರನೆಯ ಹೆಸರು ಷಡಕ್ಷರ ದೇವ ಹಾಗೂ ಇಮ್ಮಡಿ ಮುರಿಗಾಗುರುಸಿದ್ಧರಿಗೆ ಸಲ್ಲಬೇಕಾಗುತ್ತದೆ. ಹೀಗಾಗಿ ಕನ್ನಡ ಸಾಹಿತ್ಯದ ಮಹತ್ವದ ಕೃತಿಗಳಲ್ಲಿ ಹಾಲಾಸ್ಯಪುರಾಣವು ಒಂದೆಂದು ಪರಿಗಣಿಸಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ಬಿ.ಎಸ್.ಭಾಸ್ಕರ್, ಧರ್ಮ, ಪು.೩೧

೨. ಸಿ.ಪಿ.ಕೆ - ಪುಷ್ಪಿಲೇಖ ಪು.೯೨

೩. ರಾಜಶೇಖರ ವಿಳಾಸ -ಸಂಧಿ-೧, ಆ-೧, ಪದ್ಯ-೧೧

೪. ಜಿ.ಜಿ.ಮಂಜುನಾಥ(ಸಂ) ಹಾಲಾಸ್ಯಪುರಾಣ, ಪೀಠಿಕೆ, ಪು.೪೨

೫. ಅದೇ, ಪು.೫೧

೬. ಅದೇ, ಪು.೫೧

೭. ಅದೇ, ಪು.೫೬

೮. ಅದೇ, ಪು.೫೬

೯. ಜಿ.ಜಿ.ಮಂಜುನಾಥ(ಸಂ), ಅಶ್ವಶಾಸ್ತ್ರ, ಪೀಠಿಕೆ ಪು.೪೦

೧೦. ಜಿ.ಜಿ.ಮಂಜುನಾಥ(ಸಂ) ಹಾಲಾಸ್ಯಪುರಾಣ, ಪು.೭೭-೮೩

೧೧. ಹಂಪನಾಗರಾಜಯ್ಯ, ಸಾಹಿತ್ಯ ವಾರ್ಷಿಕ-೧೯೭೫, ಪು.೧೦೮

೧೨. ಸಿ.ಪಿ.ಕೆ, ಪುಷ್ಪಿಲೇಖ, ಪು.೯೩

ವಚನ ಪ್ರಕಾರ

೧. ಸ್ವರವಚನಗಳು

೨. ಪಾದಸ್ತೋತ್ರ

೩. ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ-ಸ್ವರವಚನಗಳು.

೪. ಶೂನ್ಯ ಮಂತ್ರಗೋಪ್ಯ.

ಸ್ವರ-ವಚನಗಳು

'ಹಾಡು' ಅಥವಾ 'ಗೀತ' ಎಂಬ ಸಾಹಿತ್ಯ ಪ್ರಕಾರ ಅತಿ ಪ್ರಾಚೀನವಾದುದು. ಕನ್ನಡ ಸಾಹಿತ್ಯ ಗ್ರಂಥ ಸ್ವರೂಪ ಪಡೆಯುವುದಕ್ಕಿಂತ ಪೂರ್ವದಲ್ಲಿಯೇ ಅದು ಜನಪದರಲ್ಲಿ ಹುಟ್ಟಿ, ಕಂಠಸ್ಥವಾಗಿ ಬೆಳೆದು ಬಂದಿದೆ. ಆದ್ದರಿಂದ ಒಂದರ್ಥದಲ್ಲಿ ನಮ್ಮ ಜನಪದದ ಹುಟ್ಟಿನೊಂದಿಗೇ ಈ ಪ್ರಕಾರವು ರೂಪತಾಳಿತು ಎಂದು ಸ್ಥೂಲವಾಗಿ ಹೇಳಬೇಕಾಗುತ್ತದೆ. ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖವಾದ ಪಾಡು, ಪಾಡುಗಬ್ಬ, ಒನಕೆವಾಡು, ಪಾಡುಗವಿತೆ, ಬೀದಿವಾಡು ಎಂಬ ಹೆಸರುಗಳು ಈ ಪ್ರಕಾರದ ಹಿಂದಿನ ಇರುವಿಕೆಯನ್ನು ಸೂಚಿಸುತ್ತವೆ.[೧] ಆದರೆ ಲಿಖಿತ ರೂಪದ ಹಾಡುಗಳು ನಮಗೆ ದೊರಕುವುದು ಹನ್ನೆರಡನೆಯ ಶತಮಾನದಲ್ಲಿ. ಬಸವಣ್ಣನವರ ಹಿರಿಯ ಸಮಕಾಲೀನನಾದ ಸಕಳೇಶ ಮಾದರಸನಿಂದ ರಚಿತವಾದ 'ತಂಗಾಳಿಗಲಿರು ಮರನೆ ಎನ್ನಂಗದೊಳಗಿಪ್ಪ ಶಿವಲಿಂಗದ ಮರನೆ' ಎಂಬ ಹಾಡು ಅತ್ಯಂತ ಪ್ರಾಚೀನವಾದುದೆಂದು ಗುರುತಿಸಲಾಗಿದೆ. ತರುವಾಯ ಅಲ್ಲಮ, ಚೆನ್ನಬಸವ, ಸಿದ್ಧರಾಮ, ಮಡಿವಾಳ ಮಾಚಿದೇವ, ಅಕ್ಕಮಹಾದೇವಿ ಮೊದಲಾದ ಬಸವಣ್ಣನವರ ಸಮಕಾಲೀನರು ಈ ಪ್ರಕಾರದಲ್ಲಿ ಕೃಷಿಗೈದಿದ್ದಾರೆ.

ಈ ಪರಂಪರೆಯನ್ನು ನಂತರದ ಗುರುಪುರದ ಮಲ್ಲ, ಗುರುಬಸವ, ಕರಸ್ಥಲನಾಗಿದೇವ, ನಿರ್ವಾಣಿ ಬೋಳೇಶ, ಶಂಕರದೇವ, ಬತ್ತಲೇಶ್ವರ, ವೀರಣ್ಣದೇವ, ನಿಜಗುಣಶಿವಯೋಗಿ, ಕೆಸ್ತೂರದೇವ, ಮುಪ್ಪಿನಷಡಕ್ಷರಿ, ಸರ್ಪಭೂಷಣಶಿವಯೋಗಿ, ಬಾಲಲೀಲಾಮಹಾಂತಶಿವಯೋಗಿಗಳು, ಗುರುಬಸವೇಶ್ವರ ಮೊದಲಾದವರು ೧೪ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ಮುಂದುವರಿಸಿಕೊಂಡು ಬಂದರು. ಶರಣರ, ದಾಸರ, ತತ್ತ್ವ ಪದಕಾರರ ಪ್ರಭಾವಕ್ಕೊಳಗಾದ 'ಇಮ್ಮಡಿ ಮುರಿಗಾಗುರುಸಿದ್ಧರು' ಹಾಡುಗಳನ್ನು ರಚಿಸಿ ವಾಗ್ಗೇಯಕಾರರ ಸಾಲಿನಲ್ಲಿ ಸೇರುತ್ತಾರೆ. ಇವರ ಕಾಲದಲ್ಲಿ (೧೮ನೇ ಶತಮಾನ) ರಚಿತವಾದ ಸಾಹಿತ್ಯದಲ್ಲಿ ಹಾಡುಗಬ್ಬಗಳೇ ಹೆಚ್ಚಾಗಿ ಕಂಡುಬರುತ್ತವೆ. ಈ ಹಾಡುಗಬ್ಬಗಳನ್ನು ವೀರಶೈವ ಜಂಗಮ ಶ್ರೇಣಿಯವರು ಏಕನಾದವನ್ನು ಮೀಟುತ್ತ ಹಳ್ಳಿ ಹಳ್ಳಿಗಳಲ್ಲಿ ಹಾಡಿಕೊಂಡು ಸಂಚರಿಸುತ್ತಿದ್ದರು.[೨] ಇವರೆಲ್ಲರೂ ಭಕ್ತಿ ಪ್ರಧಾನವಾದ, ತತ್ತ್ವ ಭೂಯಿಷ್ಟವಾದ ಹಾಡುಗಬ್ಬಗಳನ್ನು ನುಡಿದಿದ್ದಾರೆ.

ಸ್ವರವಚನಗಳಲ್ಲಿ 'ಸ್ವರ' ಮತ್ತು 'ವಚನ' ಎಂಬೆರಡು ಶಬ್ದಗಳಿವೆ. ಸ್ವರವೆಂದರೆ ಧ್ವನಿ, ದಾಟಿ, ರಾಗ ಎಂಬರ್ಥಗಳಿವೆ. ಅಂದರೆ ರಾಗ ಹಿಡಿದು ಹಾಡಲು ಬರುವ ವಚನಗಳನ್ನು 'ಸ್ವರವಚನ'ಗಳೆನ್ನುತ್ತಾರೆ. ರಾಗ-ತಾಳಮಾನಗಳನ್ನು ನಿರ್ದೇಶಿಸಿ, ಪಲ್ಲವಿ ಅನುಪಲ್ಲವಿಗಳ ಮೂಲಕ ಗೇಯಾತ್ಮಕವಾಗಿ ಹಾಡಿಸಿಕೊಂಡು ಹೋಗುವ ಭಕ್ತಿ ಪರವಾದ ಸಾಹಿತ್ಯವಿದು. ಇಂತಹ ಹಾಡುಗಳು ಕನ್ನಡ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತವೆ. ಭಕ್ತಿ ಪಂಥದ ಶರಣರು, ದಾಸರು ಈ ಬಗೆಯ ಹಾಡುಗಳನ್ನು ಬರೆದಿದ್ದಾರೆ. ಆದರೆ ದಾಸರು ಸ್ವರವಚನಗಳನ್ನು ಹಾಡಿದರೂ ಅವುಗಳಿಗೆ ಸುಳಾದಿ, ಉಗಾಭೋಗಗಳೆಂದು ಕರೆದಿದ್ದಾರೆ. ಇವುಗಳ ವಸ್ತು ವಿನ್ಯಾಸವು ಸ್ತುತಿರೂಪದಲ್ಲಿದ್ದು, ಹೊಗಳಿಕೆಯನ್ನೇ ಪ್ರಮುಖವಾಗಿ ಆಶ್ರಯಿಸಿರುತ್ತವೆ. ಆದರೂ ಸಂದರ್ಭಾನುಸಾರ ಹೊಗಳಿಕೆಯನ್ನು ಮೀರಿ ಮನ, ಆತ್ಮ, ಜೀವ, ಪರಮ ಎಂಬ ತತ್ತ್ವಗಳನ್ನು ಬೋಧಿಸುತ್ತವೆ. ಅಂತೆಯೇ ಇವುಗಳಿಗೆ 'ಅನುಭಾವಗೀತೆ', 'ಕೈವಲ್ಯಪದ' 'ಭಜನೆ ಹಾಡು' ಎಂದು ಕರೆಯುತ್ತಾರೆ. ಭಕ್ತಿ ಪರವಾದ ಸಾಹಿತ್ಯವಾದ ಕಾರಣ ಇಲ್ಲಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಶಿವಯೋಗ ಮುಂತಾದ ಆಧ್ಯಾತ್ಮಿಕ ಹಾಗೂ ಶಿವ ಅಥವಾ ಶಿವಯೋಗಿಗಳ ಸ್ತುತಿಗಳಂತಹ ವಿಷಯಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಾ, ಕೆಲವು ಸಂದರ್ಭಗಳಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ವಿಷಯಗಳನ್ನು ತಮ್ಮ ಸ್ವರ ವಚನಗಳಲ್ಲಿ ಮೇಳೈಸಿಕೊಂಡಿರುತ್ತಾರೆ.

ಶ್ರೇಷ್ಠ ಶಿವಯೋಗಿಯಾಗಿದ್ದ 'ಇಮ್ಮಡಿ ಮುರಿಗಾಗುರುಸಿದ್ಧರು' ಸ್ವರವಚನಗಳನ್ನು ರಚಿಸಿದ್ದು, ಲಭ್ಯವಾದ ೨೧೧ ಸ್ವರವಚನಗಳನ್ನು ಎಸ್. ಶಿವಣ್ಣನವರು ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ.

ಇವುಗಳಲ್ಲಿ ಶಿವಸ್ತುತಿ ಪರವಾದ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಸತಿ-ಪತಿ ಭಾವ, ಆತ್ಮ ನಿವೇದನೆ, ಧರ್ಮ, ಮೋಕ್ಷ, ಸಂಸಾರ-ಸಂಕಷ್ಟ, ನೀತಿಬೋಧೆ, ಭರತನಾಟ್ಯ, ಸಂಗೀತ, ಶಿವನ ಮಹಾತ್ಮ್ಯ, ಮುರಿಗಾಶಾಂತವೀರರ ಸ್ತುತಿ, ಶಿವಯೋಗ, ಮಿಶ್ರಾರ್ಪಣ, ಅಷ್ಟಾವರಣ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವ ಸ್ವರ ವಚನಗಳಿವೆ. ಅಧ್ಯಯನದ ಅನುಕೂಲತೆಗಾಗಿ ಸತಿ-ಪತಿ ಭಾವ, ಸಾಮಾಜಿಕ, ಪೌರಾಣಿಕ, ತಾತ್ವಿಕ, ಚಾರಿತ್ರಿಕ, ಸಾಹಿತ್ಯಿಕ ಅಂಶಗಳನ್ನು ಒಳಗೊಂಡ ಸ್ವರವಚನಗಳು ಎಂದು ವಿಂಗಡಿಸಿಕೊಳ್ಳಲಾಗಿದೆ.

ಸತಿ-ಪತಿ ಭಾವ

ಲೌಕಿಕವಾದ ಸಂಸಾರದಲ್ಲಿ ಹೆಣ್ಣು-ಗಂಡುಗಳ ಕೂಡುವಿಕೆ-ಅಗಲುವಿಕೆ, ದಾಂಪತ್ಯದ ಸರಸ-ವಿರಸದ ಭಾವನೆಗಳನ್ನು ಅಲೌಕಿಕವಾದ ಪರಮಾತ್ಮನೊಡನೆ ಮೇಳವಿಸಿ ಭಕ್ತಿಯ ಸುಖವನ್ನನುಭವಿಸುವುದು ಶರಣರ, ದಾಸರ ಮತ್ತು ಇತರ ಭಕ್ತಿ ಪಂಥದವರಲ್ಲಿ ಕಾಣುತ್ತೇವೆ. ಇಲ್ಲಿಯ ಸ್ವರವಚನಗಳನ್ನು ಅವಲೋಕಿಸಿದಾಗ ಬಹುಶಃ ಕವಿಯು ದಾಸರ ಕೀರ್ತನೆಗಳ ಪ್ರೇರಣೆಗೊಳಗಾದಂತೆ ಕಂಡುಬರುತ್ತದೆ. ಏಕೆಂದರೆ ದಾಸರ ಕೀರ್ತನೆ ಹಾಗೂ ಉಗಾಭೋಗಗಳಲ್ಲಿ ಶ್ರೀಕೃಷ್ಣನನ್ನು ಗೋಪಿಕಾ ಸ್ತ್ರೀಯರು ಯಾವ ರೀತಿ ಆಡಿಸಿ-ಕಾಡಿಸಿ ಅಗಲಿಕೆಯಿಂದ ನೊಂದು, ಪರಿತಪಿಸಿ ಮತ್ತೆ ಅವನಲ್ಲಿ ಒಂದಾಗುವ ಬಗೆ ಮತ್ತು ದಾಸರು ತಮ್ಮ ಆರಾಧ್ಯ ದೈವವನ್ನು ಗಂಡ, ಹೆಂಡತಿ, ತಂದೆ, ಮಗು, ಪ್ರೇಯಸಿ ಮುಂತಾದ ಸ್ಥಾನದಲ್ಲಿ ಕಲ್ಪಿಸಿ ತಮ್ಮ ಮನಬಯಕೆಯನ್ನು ವ್ಯಕ್ತಪಡಿಸುವ ಮಾದರಿಯಲ್ಲಿಯೇ ಕವಿಯು ಅದೇ ಭಾವಗಳನ್ನು ಶಿವನಲ್ಲಿ ಮೇಳೈಸಿ ಆನಂದವನ್ನು ಹೊಂದುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಉದಾಹರಣೆಗೆ

ಬಾರೋ ಮನಿಗೆ ನಲ್ಲ ಬರಿದೆ ಮುನಿಯಸಲ್ಲ
ಸೇರದವರ ಮುಂದೆ ಪಂಥವೆ ಕೂಡಿ
ವಾರೆಯಾಗುವದಿದು ಸಂತಸವೆ ||ಪಲ್ಲವಿ||

ಕನ್ನೆವರೆಯದೊಳು ಕೈವಿಡಿದಮರ್ದಪ್ಪಿ
ಎನ್ನ ಸಂಗಸುಖವ ಭೋಗಿಸಿ ಬಲು
ಮನ್ನಣೆಯಿಂದನುರಾಗಿಸಿ ಚೆನ್ನಿಗರೆರೆಯ
ನೀನಿರುತಲಿರುತಲಿರ್ದು
ಬನ್ನಬಡಿಸುವುದು ಛಂದವೆ ಈಗ
ನಿನ್ನ ಮರಸುವುದು ಛಂದವೇ?|| (ವ.೩೬)

ಎಂದು ಯೌವ್ವನದ ಹೆಣ್ಣಿನ ಮನಸ್ಸಿನ ತುಡಿತ ಮಿಡಿತಗಳನ್ನು, ಆಸೆ-ಆಕಾಂಕ್ಷೆಗಳನ್ನು ಹೇಳುತ್ತಲೇ, ವಾಲೆ, ಮೂಗುತಿ, ಸಣ್ಣಶಾಲೆ, ಕಜ್ಜಳವ, ತಾಂಬೂಲವನ್ನು ಕೊಟ್ಟು ತುರುಬಿಗೆ

ಹೂಮುಡಿಸಿ, ಉಪ್ಪರಿಗೆಯ ಮಣಿಮಂಚದ ಮೇಲೆ ಮಲಗಿಸಿ ನನಗೆ ಏನು ಹೇಳಿದೆ ಅದನ್ನು ನೆನಪಿಸಿಕೋ, ಅಂಗನೆಯರೆದುರು ನನ್ನನ್ನು ಅತ್ಯಂತ ಪ್ರೀತಿಯಿಂದ ಹೊಗಳಿ ಈಗ ದೂರವಾಗುವುದು ಉಚಿತವೇ ಎಂದು ಪ್ರಶ್ನಿಸುತ್ತಾ, ಇದೇನು ಮಕ್ಕಳಾಟವೆಂದು ಭಾವಿಸದಿರು ಎಂಬ ಎಚ್ಚರಿಕೆಯನ್ನು ನೀಡುತ್ತಾಳೆ. ವಿರಹ ವೇದನೆಯಲ್ಲಿ ಬಳಲುವ ಪ್ರೇಯಸಿಯ ಚಿತ್ರಣ ನೀಡುವ ಈ ಸ್ವರವಚನದಲ್ಲಿ

ಕರತಂದು ತೋರೆ ಸೈರಿಸಲಾರೆ ಸರಸಿಜನಯನೆ
ಹರಿವಿಧಿಸುರವಂದ್ಯ ಗುರುಕುಲತಿಲಕನ ||ಪ||
ಚಿಕ್ಕಪ್ರಾಯದೊಳು ಎನ್ನನು ತನ್ನ ತೆಕ್ಕೆಯೊಳಮರ್ದು
ಚೊಕ್ಕ ಸಕಲ ಕಲೆಗಳು ಉಕ್ಕಿಸೂಸುತೆ
ಅಕ್ಕರಿಂದಲಿ ತಾಂಬೂಲ ಗುಟಕಿವನ || (ವ-೪೧)

ಹೀಗೆ ಮುಂದುವರಿಯುವ ಹಾಡಿನಲ್ಲಿ ಸೌಂದರ್ಯ ತುಂಬಿದ ಹೆಣ್ಣು ಶೃಂಗಾರ ರಸದಲ್ಲಿ ಮೀಯಲೆಂದು, ಮನದರಸನನ್ನು ಕಣ್ಣುಗಳಲ್ಲಿ ತುಂಬಿಕೊಂಡು ತನ್ನ ಸಖಿಗೆ 'ಕಾಂತೇ ನೀ ಪ್ರಾಣಕಾಂತನ ಕರತಾರೆ ನಾ ಸೈರಿಸಲಾರೆ' ಎಂದು ವಿರಹ ವೇದನೆಯ ತೀವ್ರತೆಯನ್ನು ಹೇಳುತ್ತಾಳೆ.

ಶಿವ-ಪಾರ್ವತಿಯರ ಸ್ವಾರಸ್ಯಕರವಾದ ಸಂಭಾಷಣೆಯನ್ನು ಹೊಂದಿರುವ ಸ್ವರವಚನವೊಂದರಲ್ಲಿ 'ನನ್ನ ಮುಟ್ಟಬೇಡ ನಿನ್ನ ಮಸ್ತಕದಲ್ಲಿರುವ ಭಾಮಿನಿ ಯಾರು ಹೇಳು?' ಎಂದು ಪಾರ್ವತಿ ಕೇಳುವಳು ಅದಕ್ಕೆ ಶಿವ ಹೇಳುವನು 'ಹೇ ನಾ ಮುನ್ನ ಫಣಿಗಣ್ಣುಷ್ಣಕೆ ತಾಳ್ದ ದೇವ ನದಿಯದಲ್ಲವೇ?', ಮತ್ತೆ ಪಾರ್ವತಿ 'ಹೊಳೆಗೆ ಮುಖವಾವುದು? ಈ ಮಾತು ನಿಜವೇ' ಎಂದಾಗ ಶಿವನು 'ಕಾಂತೆ ಕೇಳದು ತಾವರೆಯಲರಲ್ಲವೇ' ಎನ್ನುತ್ತಾನೆ. ಪಾರ್ವತಿಯು ಇನ್ನೊಂದು ಪ್ರಶ್ನೆ 'ನೇತ್ರಂಗಳುಂಟೆ ಭಾವಿಸೆ ಪೊಳೆಗೆ ಪೇಳು ನಲ್ಲ?' ಶಿವನ ಉತ್ತರ ಸಿದ್ಧವಿದೆ 'ಮೀನ್ಗಳು ಕಾಣೆ ಭಾವಜನಾಣೆ' ಮತ್ತೆ ಪಾರ್ವತಿಯು ಸಂಶಯದಿಂದ 'ಪುಸಿಯಿಲ್ಲ ಇನಿಯ ಪುಬ್ಬುಯಾವೆಡೆಯೊಳು ತೋರೆಗಿಲ್ಲ' ಅದಕ್ಕೆ ಶಿವನ ಸಮಂಜಸ ಪರಿಹಾರ 'ಗಾಳಿಯಾವರಿಸಿ ತೀಡಲುದಯವಾದ ತೆರೆಗಳಲ್ಲವೆ'(ವ.೧೪೭). ಹೀಗೆ ಪ್ರಶ್ನೋತ್ತರಗಳ ಸರಮಾಲೆ ಕುತೂಹಲವನ್ನು ಕೆರಳಿಸುತ್ತದೆ. ಗಂಗೆಯನ್ನು ಜಟೆಯಲ್ಲಿ ಕೂಡಿಸಿಕೊಂಡಾಗ ಪಾರ್ವತಿಯಿಂದ ಶಿವ ಅನೇಕ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ ಎಂಬ ವಿಷಯವನ್ನು ಪ್ರಸ್ತಾಪಿಸುವ ಈ ಪ್ರಸಂಗವು ಕವಿಯ ಮನೋಜ್ಞವಾದ ಕಲ್ಪನೆಯಾಗಿದೆ.

ಸಂಭಾಷಣಾ ಪ್ರಧಾನವಾದ ಮತ್ತೊಂದು ಹಾಡು ಪ್ರಶ್ನೆ ಉತ್ತರಗಳಿಂದ ಮನಸ್ಸನ್ನು ಮುದಗೊಳಿಸುತ್ತದೆ. ಮಧ್ಯರಾತ್ರಿ ತನ್ನ ಇನಿಯಳಲ್ಲಿಗೆ ಬರುವ ಪ್ರಿಯಕರನನ್ನು ಸತಾಯಿಸಿ, ಗೋಳು ಹೊಯ್ದುಕೊಂಡು, ಕೊನೆಗೆ ಬಾಗಿಲು ತೆರೆಯುವಳು ಮಿಟುಕಲಾಡಿ ಹೆಣ್ಣು. ಶಿವನು 'ಮದಗಜಗಮನೆ ಮಲಗುವ ಮನೆಯ ಮುದ್ದು ಕದವ ತೆಗೆಯ ಬಂದು ಬೇಗದೆ' ಎಂದಾಗ ಪಾರ್ವತಿಯು 'ಸದರದೆ

ನಡುವಿರುಳೊಳಗೆ ಬಂದವನ್ಯಾರೊ ಕದನವೇತಕೆ ಹೋಗು ಸುಮ್ಮನೆ' ಎನ್ನುತ್ತಾಳೆ. ಶಿವನು ತನ್ನ ವಿಶೇಷ ನಾಮಗಳನ್ನು ಹೇಳಿಕೊಂಡಾಗ ಅದಕ್ಕೆ ತಕ್ಕಂತೆಯೇ ಪಾರ್ವತಿಯು ಉತ್ತರಿಸುತ್ತಾಳೆ.

ಶಿವ : ಸುರರ ಸುಡುವ ವಿಷವನು ಕೊರಲೊಳಗಿಟ್ಟ ವರ ನೀಲಕಂಠನು ಕಾಣೆ ರಮಣಿ.

ಪಾರ್ವತಿ : ಗುರುವತನವಿದೇಕೆ ನೀಲಕಂಠನಾದೊಡೆ ಗಿರಿಯ ಮೇಲಿರು ಹೋಗು ಹೋಗಯ್ಯ.

ಶಿವ : ಸಕಲ ಚರಾಚರ ಜೀವಿಗಳನು ಕಾಯ್ವ ಸುಕರ ಭೂತೇಶ ನೋಡೆ ಸಖಿಯೆ

ಪಾರ್ವತಿ : ಅಕಲಂಕ ಕೇಳು ಭೂತೇಶನಾದೊಡೆ ಲೇಸು ಪೆಕಲದೆ ಮಸಣಕೆ ಹೋಗಯ್ಯ.

ಶಿವ : ಆನೆ ಪುಲಿಯ ಕೊಂದು ಶಾನೆ ಸಮ್ಮವ ಪೊದೆದ ಮಾನಿನಿ ಕೃತ್ತಿವಾಸನೆ ನಾನು

ಪಾರ್ವತಿ : ಸಾನುರಾಗದೆ ಸಮಗಾರರ ಮನೆಗೆ ಹೋಗು ಹೀನರ ನಡೆ ನಡೆ ಯಾತಕೋ.

ಶಿವ : ಮಂಗಳರೂಪೆ ಶೃಂಗಾರ ಕಾಯದ ಶಿವಲಿಂಗೇಶ ಕಾಣೆ ನಿನ್ನ ರಮಣ.

ಪಾರ್ವತಿ : ಹಿಂಗೆ ಹೇಳಿದೊಡೆಯಾಗಲೇ ನಂಬುವೆನು ಯೆನ್ನ ಸಂಗಸುಖದೊಳಿರು ಬಾರಯ್ಯ ಎಂದು ಎದ್ದು ಬಂದು ಕದವನ್ನು ತೆಗೆಯುತ್ತಾಳೆ. ಪಲ್ಲವಿಯೂ ಸೇರಿದಂತೆ ನಾಲ್ಕು ಸಾಲುಗಳ ಎಂಟು ಘಟಕಗಳನ್ನೊಳಗೊಂಡ ಈ ಸ್ವರವಚನದ ಸ್ವಾರಸ್ಯವಿರುವುದು ಉತ್ತರ ಪ್ರತ್ಯುತ್ತರದ ನಾಟ್ಯ ಮಯತೆಯಲ್ಲಿ. ಶಿವ ಪಾರ್ವತಿಯರನ್ನು ಸಾಮಾನ್ಯ ಪ್ರಿಯ-ಪ್ರೇಯಸಿಯರಂತೆ ಗುರುಸಿದ್ಧರು ಚಿತ್ರಿಸಿರುವ ರೀತಿ ಇಲ್ಲಿ ಅನನ್ಯವಾಗಿದೆ.

ಮಧುರಭಾವದಿಂದ 'ಸುಮ್ಮನೆ ಮುನಿವರೇನೋ ಸುಗುಣಹಾರವಿದೇನೋ ಗಮ್ಮನೆ ಮನ್ನಿಸೋ' (ವ-೩೨), 'ಏನದೋ ನಿನ್ನ ವಿಡಾಯೆವನ್ನೊಳು ಪ್ರಿಯಾ, ಮನ್ನಿಸಿ ಮೊದಲೊಲಿಸಿ ಮತ್ತೆ ಮುನಿವುದಿದೇನೋ'(ವ-೫೫), 'ಯಾರೊಡನೆ ಮುನಿದೀಗ ಹೋದೆ ನೀ ಹೇಳಭವದೂರಲಹುದೆ ಬರಿದೆ ಜಗದಗಲಕೆ'(ವ-೫೮), 'ಸತಿ ನಿನ್ನ ಪಾದವನು ಬಲು ನಂಬಿದೆನೋ ನಾನು ಚೆಲುವರಾಯ ಕಾಯೋ ಪ್ರೀಯ ಸಲಿಗೆವೆರಸಿ ನಾಮವರಿಸಿ'(ವ-೧೧೭) ಎಂದು ಹಲವಾರು ವಚನಗಳಲ್ಲಿ ಕೋಪಿಸಿ ಕೊಂಡಿರುವ ಪತಿಯನ್ನು ಸಂತೈಸಲು ತೊಡಗಿರುವ ಹೆಣ್ಣಿನ ಭಾವನೆಗಳನ್ನು ಅಭಿವ್ಯಕ್ತಿಪಡಿಸುತ್ತಾನೆ. ವಾತ್ಸಲ್ಯಭಾವದಿಂದ 'ಅಮ್ಮನೋಡೆ ಇವನ ಚೆಲುವ ನಮ್ಮ ನೋಡಿ, ಗಮ್ಮನೆ ಬಂದಿವನೆಮ್ಮವನಲ್ಲವೇ'(ವ-೯೭), 'ಬಂದು ಮೊಗವ ತೋರಿಸೆಮಗೆ ನೀನೊಲಿದು ತಂದೆ ಮಕ್ಕಳೊಳು ಮತ್ತೆ ಮುನಿದು ಪೋಪುದುಚಿತವೇ' (ವ-೫೧) ಎಂದು ಸಖ್ಯಭಾವದಲ್ಲಿ 'ಇದಕ್ಕೋ ಸಿಕ್ಕಿದನು ಕಳ್ಳ ಈ ಜಗವನು ಹೆದರದೆ ತನ್ನೊಳಗೆ ಚೆದಿರುತ'(ವ-೧೮) 'ಮುಚ್ಚು ಮರೆಯಾಕೆ ಕೇಳು ಮುದ್ದಿನ

ಪೆಣ್ಣುಗಳೊಳು'(ವ-೧೯), 'ಬಂದು ಮನ್ನಿಸೋ ಬಾಲಕಿಯನು ಬಂದು ಮನ್ನಿಸೋ ಸುಪ್ರಸನ್ನ ಬರಿದೆಯಾತಕೊ ನನ್ನ'(ವ-೬೬) ಎಂದು ಇನ್ನೊಂದು ಹಾಡಿನಲ್ಲಿ(ವ-೧೫೫) ಶಿವನನ್ನೇ ಮಗುವಾಗಿ ಭಾವಿಸಿದ ಬಿಜ್ಜಾಂಬ ಚರಿತೆಯ ಅಮ್ಮವ್ವೆಯ ಲೀಲೆ ಮನೋಜ್ಞವಾಗಿ ಮೂಡಿ ಬಂದಿದೆ. ಇಲ್ಲಿ ಕವಿಯು ಆ ಮಗುವನ್ನು(ಶಿವನನ್ನು) ಮೃಗಾಕ್ಷಿಯು ಚೆನ್ನಾಗಿ ನೋಡಿ, ಸಂತಸದಿಂದ ಆ ಮಗುವಿನ ಸರ್ವಾಂಗವನ್ನು ಗಂಧ ತೈಲಗಳಿಂದ ಲೇಪನಗೊಳಿಸಿ, ತನ್ನ ಅಂಗುಷ್ಠದ ಮಣ್ಣನ್ನು ತೆಗೆದು ಮಗುವಿನ ನೊಸಲಿಗೆ ಹಚ್ಚಿ, ಕಣ್ಣು ಕಿವಿಯೊಳಗೆ ಮೆಲ್ಲನೆ ಊದಿ, ಮತ್ತೆ ಚೆನ್ನಾಗಿ ಮೈ ತಿಕ್ಕಿ ಮಲಗಿಸುತ್ತ ಜೋಗುಳವಾಡಿದಳು ಅದೆಂತೆನೆ ಎಂದು ಮತ್ತೆ ಮುಂದುವರಿಸಿ, ತ್ರಿವುಡೆ ತಾಳದಲ್ಲಿ ಜೋಗುಳ ರಚನೆ ಮಾಡಿರುವರು. ಹೀಗೆ ತನ್ನ ಆರಾಧ್ಯ ದೈವವನ್ನು ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರವೆಂಬ ಐದು ರೀತಿಯ ಭಾವಗಳಲ್ಲಿ ಹಾಡಿ ಹೊಗಳುತ್ತ, ಶೃಂಗಾರ ರಸದ ಅಭಿವ್ಯಕ್ತಿಯನ್ನು ಭಕ್ತಿ ರಸದ ಮಡುವಿನಲ್ಲಿ ಮೀಯಲು ಕವಿಯು ಅವಕಾಶ ಕಲ್ಪಿಸಿ ಕೊಟ್ಟಿದ್ದಾನೆ. ಸರಳ-ಸುಂದರವಾಗಿರುವ ಇಲ್ಲಿಯ ಹಾಡುಗಳು ವಾಚ್ಯಾರ್ಥದಲ್ಲಿ ಸಾಮಾನ್ಯವಾದವುಗಳೆಂದೆನಿಸಿದರೆ, ಧ್ವನ್ಯಾರ್ಥದಲ್ಲಿ ವಿಶೇಷತೆಯ ಅನುಭವಗಳನ್ನು ನೀಡುತ್ತವೆ.

ಸಾಮಾಜಿಕ ಅಂಶಗಳು

ಇಮ್ಮಡಿ ಮುರಿಗಾಗುರುಸಿದ್ಧರು ಹದಿನೆಂಟನೆಯ ಶತಮಾನದಲ್ಲಿ ವಚನಗಳನ್ನು ಬರೆದಿದ್ದರೂ, ಕೆಲವು ದೇಶ ಕಾಲಾತೀತವಾದ ವಿಚಾರಗಳನ್ನು, ಸಾರ್ವಕಾಲಿಕ ಮೌಲ್ಯಗಳನ್ನು ತಮ್ಮ ವಚನಗಳಲ್ಲಿ ತುಂಬಿದ್ದಾರೆ. ಅಂತೆಯೇ ಇವರ ಹಾಡುಗಳಲ್ಲಿ ಇಂದಿಗೂ ಜೀವಂತಿಕೆಯು ಒಡೆದು ಕಾಣುತ್ತದೆ. ಯಾವುದೇ ಕವಿಯು ಕಾವ್ಯ ರಚಿಸುವಾಗ ಅದರ ಸಫಲತೆಗಾಗಿ ಜನ ಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟು ಕೊಳ್ಳುವುದು ಅವಶ್ಯಕ, ಅಂತೆಯೇ ಜನ ಸಾಮಾನ್ಯರೂ ಕೂಡ ತಮ್ಮ ಜ್ಞಾನಾರ್ಜನೆಗಾಗಿ ವಿದ್ವತ್ ವಲಯವನ್ನು ಅವಲಂಬಿಸುವುದು ಸಹಜ. ಹೀಗಾಗಿ ಪರಸ್ಪರಾವಲಂಬಿತ ಈ ಸಮಾಜದಲ್ಲಿ ಕವಿಯ ಕಾರ್ಯಕ್ಷೇತ್ರವೂ ಸಹ ಸಮಾಜವಾಗಿರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಸಾಹಿತ್ಯವು ಸಹ ಜನ ಮುಖಿಯಾಗಿ, ಅವರ ಒಳಿತನ್ನೇ ಬಯಸುತ್ತದೆ ಎಂಬುದನ್ನು ಈ ಕವಿಯ ಕೆಲವು ವಚನಗಳ ಮೂಲಕ ತಿಳಿಯಬಹುದಾಗಿದೆ.

ದಿನ ದಿನದ ಹೊಟ್ಟೆ ಹೊರೆಯುವುದರಲ್ಲಿಯೇ ಮಾನವ ಜೀವನ ಮುಗಿಯುತ್ತದೆ. ಮಾನವ ಜನ್ಮದ ಉದ್ದೇಶ ಏನು ಎಂಬುದರ ಸ್ವ-ವಿಮರ್ಶೆಯು ಜೀವನಿಗೆ ಸಾಧ್ಯವಾಗುತ್ತಿಲ್ಲ. ಲೌಕಿಕವಾದ ಈ ಬಂಧನವೇ ಪ್ರಿಯವೆನಿಸಿ, ಬಿಡುಗಡೆಯೇ ಬೇಡವಾಗಿ, ಸಂಸಾರವೇ ಸರ್ವಸ್ವವಾಗಿ ನರಳುತ್ತಿರುವವರಿಗೆ 'ಯಾಕ ಹಂಕರಿಸಿ ಕೆಡುವೆ ತಿಳಿದು ನೋಡೀ ಕಪಟಕಾಯ ನಿಜವೇ ಆತ್ಮ' ಎಂದು ಗಿಡ-ಮರ-

ಬಳ್ಳಿಗಳಾದಿಯಾಗಿ, ಖಗ-ಮೃಗ-ಕೀಟಗಳ ಯೋನಿಗಳಲ್ಲಿ ತಿರುತಿರುಗಿ ಹುಟ್ಟಿ ಈ ಮನುಷ್ಯ ಜನ್ಮ ಬಂದಿದೆ. ಇದರಲ್ಲಿ ಬಾಲ್ಯದಲ್ಲಿ ಮರೆವು, ಕೌಮಾರತನದಲ್ಲಿ ಲಗ್ಗೆ, ಚೆಂಡಿನಂತಹ ಆಟಗಳ ಸಂಭ್ರಮ, ಯೌವ್ವನದಲ್ಲಿ ಸಂಸಾರದ ಸೊಬಗು, ಮುಪ್ಪಿನಲಿ ರೋಗದ ಆಮಂತ್ರಣ, ಕಡೆಗೆ ಮರಣ ಇವನ್ನು ನಂಬಬೇಡವೆಂದು ಎಚ್ಚರಿಸುತ್ತಾನೆ.

ಮಡದಿ ಮಕ್ಕಳು ನಂಟರು ಬಲುಹೊನ್ನು
ಪೊಡವಿ ಮೊದಲಾದವೆಲ್ಲ ನಿನ್ನೊಡನೆ
ನಡೆಗೊಂಬುದಿಲ್ಲವಾಗಿ ಶಿವಲಿಂಗ
ದೊಡವೆರೆವ ಬುದ್ಧಿಗಲಿಯ ಮರುಳೆ (ವ.೫)

ವಿಷಯ ಸುಖಕ್ಕೆ ಪಕ್ಕಾದ ಮನುಜನ ಬಾಳಿನ ನೈಜ ಚಿತ್ರಣದಲ್ಲಿ, ಹದ್ದು ಗಗನದೆತ್ತರಕ್ಕೆ ಹಾರಿದರೂ, ಅದರ ದೃಷ್ಟಿ ನೆಲದ ಮೇಲಿನ ಸತ್ತ ಪ್ರಾಣಿಯ ಕಡೆಗಿರುತ್ತದೆ. ಹದ್ದಿನದು ಅಧೋದೃಷ್ಟಿ, ಹತ್ತಿರದಲ್ಲೇ ಇರುವ ನಕ್ಷತ್ರಗಳನ್ನು ಅದು ನೋಡದು, ಅದಕ್ಕೆ ಊರ್ಧ್ವದೃಷ್ಟಿಯಿರುವುದಿಲ್ಲ. ಇದು ಹದ್ದಿನ ಸ್ವಭಾವ, ಅದರಂತೆ ಆಶೆ-ಆಮಿಷಗಳಿಂದ ಕೂಡಿದ ಜೀವನು ಎಷ್ಟು ಕಾಲ ತೀರ್ಥಯಾತ್ರೆಯನ್ನು ಮಾಡಿದರೂ ತನ್ನ ಗುಣ ಬದಲಾಯಿಸಲಾರ ಎಂಬುದಕ್ಕೆ, ಕಾಸಿಗೆ ಹೋಗುವ ಬ್ರಾಹ್ಮಣನೋರ್ವನ ಚಿತ್ರಣ ಕೊಡುತ್ತಾನೆ.

ಕಾಶಿಗೆ ಹೋಗುತಿಹ ಪಾರ್ವರ ಮಹಾ ರಾಸಿಯೊಳೊರ್ವದ್ವಿಜ
ಆಶೆಯಿಂ ಸೌತೆಯ ಬುಡದಿ ರೊಕ್ಕವನಿಕ್ಕೆ
ಮೋಸವಿಲ್ಲದ ಕಾಯ ಮೆಲಲು ಕಾಡಿತು ಕಲಿ|| (ವ-೧೦೪)

ಡಾಂಭಿಕತನದಲ್ಲಿ 'ಬಚ್ಚ ಬರಿದಾದ ಹುಸಿಗಳ ಪಸರನಿಕ್ಕಿ'ದನು ಎಂದು ಹೇಳುತ್ತ ಮನಸ್ಸು ಏನು ಮಾಡಿದರೂ ಲೋಭವನ್ನು ಬಿಡಲಿಲ್ಲ ಎಂಬುದನ್ನು ತಿಳಿಸುತ್ತಾನೆ. ಲೋಕದಲ್ಲಿರುವ ಆಶೆ, ಆಮಿಷ-ಅಹಂಕಾರ ಮುಂತಾದ ದುರ್ಗುಣಗಳು ಯೋಗಿ, ಚಾಗಿ, ವಿರಾಗಿ, ನಾಗ, ನರ, ಸುರಾದಿಗಳು ಯಾರಾದರೇನು ಬೇಗನೇ ಕೊಂದು ತಿಂದು ತೇಗಿ ಕುಪ್ಪಳಿಸಿ ಕುಣಿದಾಡಿ ಬಿಡುತ್ತವೆ(ವ.೩೯).

ಅಂತಹ ಸಮಯದಲ್ಲಿ ಶರಣರ ನುಡಿಗಳು ಮನಸ್ಸಿಗೆ ನಾಟುವುದಿಲ್ಲ. ದುರ್ಗುಣಗಳನ್ನು ಗೆಲ್ಲ ಬೇಕಾದರೂ, ದಿನ ನಿತ್ಯದ ಸಾಧನೆ ಪ್ರಯತ್ನಗಳು ಬೇಕೇಬೇಕು. ಅದಕ್ಕಾಗಿ 'ಲೋಕದಲಿ ಸ್ತುತಿ ನಿಂದೆಗಳು ಬಂದರೆ ಸಮಾಧಾನಿಯಾಗಿರಬೇಕು' ಎಂಬ ಅಕ್ಕಮಹಾದೇವಿಯ ಅನುಭವ ವೇದ್ಯವಾದ ವಚನದಂತೆ ಸಮಾಜದಲ್ಲಿರುವ ಜನರ ಗುಣಧರ್ಮಗಳ ಕುರಿತು ಎಂತಹ ಜನರು ಇರುತ್ತಾರೆ ಎಂಬುದಕ್ಕೆ

ನೆರೆಯ ಹೊರೆಯ ಜನರ ಬದುಕ
ನಿರದೆ ಕಂಡು ಸೈರಿಸಿರದೆ
ಅರೆಯ ಗಂಜಿಯ ಕುಡಿದು ಉಳಿದ ನರನ ಸಿರಿಯ ಮಾಟದೆ

ಪರರ ಬಾಳುವೆಯನು ನೋಡಿ
ತರತರಿಸದೆ ಕರುಬಿ ಕರುಬಿ
ಬರಿದೆಯಾದೊದೇನು ಫಲವು ಗಿರೀಶನೊಲುಮೆಯಿಲ್ಲದೇ || (ವ-೩೯)

ಇತರರ ಸುಖ-ಸಂತೋಷಗಳನ್ನು ಕಂಡು ಸಹಿಸಲಾರದ ಈ ಜೀವವು ಕೊರಗಿ ಕೊರಗಿ ಸಾಯುತ್ತದೆ. ಇನ್ನೊಬ್ಬರ ಸುಖಗಳು ತನ್ನದಾಗಲಿಲ್ಲವೆಂಬ ಹೊಟ್ಟೆಯ ಕಿಚ್ಚು ಕಾಡುತ್ತಿರುತ್ತದೆ. ಈ ಭ್ರಷ್ಟಲೋಕದ ಬಾಂಧವನು ದುಷ್ಟಬುದ್ಧಿಯನ್ನು, ಕೆಟ್ಟಸಂಗತಿಯನ್ನು ಬಿಟ್ಟು ಬಾಳಬೇಕೆಂದು ಉಪದೇಶಿಸುತ್ತಾನೆ. ಮನುಷ್ಯನ ಮನಸ್ಸು ಬಹಳ ಚಂಚಲವಾಗಿರುತ್ತದೆ ಅದನ್ನು ತಡೆದು ನಿಲ್ಲಿಸುವುದು ಬಲು ಕಠಿಣ ಕೆಲಸ. ಅದರ ಸ್ವಭಾವ ಯಾವಾಗಲೂ ವಕ್ರವಾಗಿರುತ್ತದೆ. ತನ್ನ ತಾ ವಿಚಾರಿಸದೆ ಅನ್ಯರ ವಿಚಾರಕ್ಕೆ ಕೈ ಹಾಕುತ್ತದೆ ಅದಕ್ಕಾಗಿ 'ನಿನ್ನ ನೀನೇ ತಿಳಿದು ನೋಡ ಸಕಲ ಜನನಿಂದೆಯು ಬೇಡ, ಭಿನ್ನಭಾವವನು ಬಿಟ್ಟು ಬಿನ್ನಣವಳವಟ್ಟುವೀಗ' (ವ.೧೦೮) ಎಂದು ಎಚ್ಚರಿಸುತ್ತಾನೆ.

ಶಿವಶರಣರಲ್ಲಿ ಕುಲಜಾತಿ ಭೇದಗಳಿರುವುದಿಲ್ಲ. ಎಲ್ಲರೂ ಹುಟ್ಟುವ ರೀತಿ ಒಂದೇ, ಮೆಟ್ಟುವ ಧರೆ ಒಂದೇ, ಸೇವಿಸುವ ನೀರು ಗಾಳಿ ಎಲ್ಲವೂ ಒಂದೇ ಹೀಗಿರುವಾಗ 'ಆತ್ಮದೊಳು ಪರಮನನರಿತಾತಂಗೆ ಕುಲವಿಲ್ಲ, ಸ್ವಯವನರಿತ ಶರಣರ ಕುಲ ಶಿವಕುಲ'ವೆಂದು ಹೇಳಿ ಜಾತಿಯನ್ನು ಸಾರ್ವತ್ರೀಕರಣ ಗೊಳಿಸುತ್ತಾನೆ.

ಕುಲಛಲಂಗಳನೆಲ್ಲ ನಮಗಾರು ಕೊಟ್ಟವರು
ಸಲೆಯೆಮ್ಮ ಮನೆಯ ವರಸ್ವಾಮಿ
ಸತಿಯಮ್ಮ ಮನೆಯ ವರಸ್ವಾಮಿ ಕೊಟ್ಟರೆ
ಕುಲಛಲವೆಲ್ಲವೆಮಗಿಹವು || (ವ-೧೬೬)

ಸಕಲ ಜೀವರಾಶಿಗಳಲ್ಲಿ ದೇವರನ್ನು ಕಾಣುವವನೇ ಶ್ರೇಷ್ಠ ಕುಲದವನೆಂಬ ಭಾವನೆ 'ಸಲೆಯಮ್ಮ ಮನೆಯ ವರಸ್ವಾಮಿ' ಎಂಬ ನುಡಿಯಲ್ಲಿ ನಮ್ಮೆಲ್ಲರಿಗೂ ಆಶ್ರಯದಾತನಾಗಿರುವ 'ಶಿವನು' ಎಂಬ ಆಶಯವಿದೆ. ಶರಣರು ಹುಟ್ಟಿನಿಂದ ಕುಲವನೆಣಿಸಿದವರಲ್ಲ, ಅವರ ಬದುಕಿನ ರೀತಿ-ನೀತಿ, ಆಚಾರ-ಅನಾಚಾರಗಳ ಮೇಲಿಂದ ಜನರ ಕುಲವನಳೆದರು ಎಂಬುದನ್ನು 'ಸಲೆ ಜೀನನಾಗದಿರೋ ಸಾರಿದೆ ಮನುಜ ಸಲೆ ಜೀನನಾಗದಿರೋ ನೆಲದಲ್ಲಿ ದಾನನಿಶ್ಚಲನಾಗು ಪಾತ್ರದಿ'(ವ.೧೧೧) ಎಂಬ ವಚನದಲ್ಲಿ ವಿವರಿಸುತ್ತಾರೆ. ನಾವು ಕಿಂಕರರಾಗಿ ನಡೆದುಕೊಂಡರೆ ಎಲ್ಲರೂ ನಮಗೆ ಕಿಂಕರರಾಗಿ ನಡೆದುಕೊಳ್ಳುತ್ತಾರೆ. ನಾವು ಕಪಟಿಗಳಾದರೆ ಜಗತ್ತೇ ನಮಗೆ ಕಪಟಯುಕ್ತವಾಗಿ ಕಾಣುತ್ತದೆ. ನಾವು ಇತರರಿಗೆ ಹಿತವನ್ನು ಬಯಸಿದರೆ ಎಲ್ಲರೂ ನಮಗೆ ಹಿತಕಾರಿಯಾಗಿರುತ್ತಾರೆ.

ಕಬ್ಬಿಗೆ ನೀರ ತಿರ್ದಲು ಕಡು ಸಿಹಿಯಾಗುವಂತೆ
ನಿಬ್ಬರದ ಬೇವಿನ ನೀರು ನಿವೇದಿಸಲು
ಕೊಬ್ಬಿದ ರಸವು ಕಹಿಯು ಕೊನೆಗೆ ತಾನಾದ ತೆರದಿ
ಹಬ್ಬಿಯ ಪಾತ್ರಕೆ ಕೊಡಲು ಹಸನಲ್ಲವೆಲ್ಲವೋ?|| (ವ-೧೧೧)

ಎನ್ನುವಲ್ಲಿ ಬದುಕಿನ ಅರ್ಥವನ್ನು ಬಿಚ್ಚಿಡಲು ಪ್ರಯತ್ನಿಸಿದ್ದಾನೆ. 'ಕಬ್ಬಿನ ರಸವು ಕಡು ಸಿಹಿಯಾಗಿರುವಂತೆ, ಬೇವಿನ ಮರದ ರಸವು ಇರಲಾರದು' ಅಂತೆಯೇ ಲೋಕ ಹಿತಕಾರಿಯಲ್ಲದವನೆನಿತು ಕಾಲ ಬದುಕಿದರೂ ಅಷ್ಟೇ, ಅವನಿಂದ ಯಾವ ಪ್ರಯೋಜನವೂ ಇರಲಾರದು. ಇಮ್ಮಡಿ ಮುರಿಗಾ ಗುರುಸಿದ್ಧರು ಸಮಾಜ ವಿಡಂಬನೆಯ ಜೊತೆಗೆ ನೀತಿ ಬೋಧನೆಯನ್ನು ಮಾಡಿದ್ದಾರೆ. 'ಇಂದು ನಾಳೆಯುಯೆಂದು ದಿನವನು ನೀನು ಕಳೆವುದೇನು ಸಂದೇಹವಳಿವುದಾವಾಗ ಹೇಗೆ ಬಹುರಾಗ' (ವ.೨೩), 'ಸಾರಿ ಹೇಳಿದೆ ಕೆಡಬೇಡ ಕ್ಷುದ್ರ ನಾರಿಯರೊಡನಾಟ ನಿನಗೇಕೆ ಮೂಢ' (ವ.೧೦೧), 'ಮೃಡಪಾದಸೇವೆಗಲಸುವ ನರನ ಜೀವನ ಸುಡುಸುಡುವಗೇಕೆ ದೊರೆದುದು ಮನುಜ ಜನನ' (ವ.೧೨೭), 'ಇಮ್ಮನವಿಲ್ಲದೆನಗೆ ಒಮ್ಮನದಿನಾನಾರನುಣಿಸುವೆ ನಿಮ್ಮನವು ಬಂದಂದಿಗೆ ಗಮ್ಮನೆ ಬನ್ನಿ ನೀವೆಲ್ಲ' (ವ.೧೨೪), 'ಏನನೋದಿದೊಡೇನ ಕೇಳಿದೊಡೇನು ಜ್ಞಾನವಿಲ್ಲದೆ ಮುಕ್ತಿಪದವಿಲ್ಲ'(ವ-೪) ಏಕೆಂದರೆ ವೇದಶಾಸ್ತ್ರಬಲ್ಲವ ಬ್ರಹ್ಮ ತನ್ನ ತಲೆಯನ್ನು, ಆತನ ಸತಿಯು ಚೆಲುವಾದ ಮೂಗನ್ನು ಕೊಯ್ದುಕೊಂಡಳು, ದಕ್ಷನು ಕುರಿತಲೆಯವನಾದ, ಬ್ರಹ್ಮನು ಸರ್ವಾಂಗ ಯೋನಿಯಾದ, ಮಿಕ್ಕನರರ ಮಾತೇನು ಅದಕ್ಕಾಗಿ ಎಷ್ಟು ಓದಿರುವನೆಂಬುದು ಮುಖ್ಯವಲ್ಲ, ಏನನ್ನು ತಿಳಿದುಕೊಂಡಿದ್ದಾನೆ ಎಂಬುದು ಮುಖ್ಯ ಎಂಬ ನೀತಿಬೋಧೆಯನ್ನು ಸಾರಿ ಹೇಳುತ್ತಾರೆ.

ಢಾಂಬಿಕತನದ ಭಕ್ತಿಯನ್ನು ಕುರಿತು 'ದೊರೆಗಳ ಭಕ್ತಿಯು ಹೊರಗಳ ಪೂಜ್ಯವು ಹುರುಳಿಲ್ಲ ಒಳಗೆ ನೋಡಿದಡೈಯ್ಯೋ ಸಾಕುಸಾಕು' (ವ.೧೯೨) ಅರಸರ ಭಕ್ತಿಯು ಹೊರಗಿನ ವಿಜೃಂಭಣೆಯೇ ಹೊರತು, ಅಂತರಂಗದಿಂದ ಮೂಡಿ ಬಂದಿರುವ ಕ್ರಿಯೆಯಲ್ಲ ಎನ್ನುತ್ತಾನೆ. ಅದಕ್ಕಾಗಿ ದೃಷ್ಟಾಂತಗಳನ್ನೊಳ ಗೊಂಡ ಈ ಕೆಳಗಿನ ಪದ್ಯವು

ಹೋತನಿಗೆ ಗಡ್ಡವಿರೆ ಹಿರಿಯತನವದಕಹುದೆ
ಭೂತಕ್ಕೆ ಜಡೆಗಳಿರೆ ಋಷಿಯಹುದೆ
ಕೋತಿಗರಿಯನು ವಿರಲು ಹನುಮಂತನಿಗೆಣೆಯಹುದೆ
ಜಾತಿಸೂತಕರು ನಿರ್ಜಾತರಿಗೆ ಸಮವೆ?|| (ವ.೧೮೦)

ಹೋತಿಗೆ ಗಡ್ಡ, ಭೂತಕೆ ಜಡೆ, ಕೋತಿಗೆ ಬಾಲ ಸಹಜವಾಗಿ ಮೂಡಿರಬಹುದೇ ಹೊರತು, ಹಿರಿತನ, ಋಷಿತನ, ಹನುಮಂತನಂತೆ ಎಂದು ಭಾವಿಸುವಂತಿಲ್ಲ. ಹಾಗೆಯೇ ಕಾಮದ ಊಟವನು ಉಂಡು, ಕ್ರೋಧದ ಮಂಚದಲ್ಲಿ ಮಲಗಿ, ಮಹಾಲೋಭಿ ಎಂಬ ಮಾನಿನಿಯನ್ನು ಅಪ್ಪಿಕೊಂಡು, ಮೋಹವೆಂಬ ತಾಂಬೂಲವನು ಮೆದ್ದು, ಮದವೆಂಬ ಲಹರಿಯ ಕೇಳುತ್ತ, ಮತ್ಸರವೆಂಬ ಮಂತ್ರವ ಪಠಿಸಿ, ಸದಾ ಮನದಲ್ಲಿ ಹೊನ್ನು-ಹೆಣ್ಣು- ಮಣ್ಣುಗಳನ್ನು ನೆನೆಯುತ್ತ ಅವನ್ನೇ ಪ್ರಾಣವಾಗಿರಿಸಿಕೊಂಡು ತಪಸ್ವಿಗಳಂತೆ ನಟಿಸುವವರಿಗೆ 'ಬಿಂಕವೇತಕೆ ನಿಮಗೆ ಬಿನುಗುಗಳಿರಾ ಬರಿದೆ ಕೊಂಕುವಿಲ್ಲದೆಗೆಲಿದ ಕೋವಿದರ ಕೂಡೆ' ಎಂಬ ಕಿವಿಮಾತನ್ನು ಹೇಳುತ್ತಾರೆ.

ಕುಕ್ಕುಟ ಕೂಗಲು ಬೆಳಗಹುದಲ್ಲದೆ
ಕುಕ್ಕನರಿಗಳು ಕೂಗಿದೊಡೇನು ಬೆಳಗೆ ॥ (ವ.೩೪)

ಇವು ಲೋಕ ರೂಢಿಯಲ್ಲಿರುವ ವಿಚಾರಗಳೇ. ಕೋಳಿ ಕೂಗುವುದು ಬೆಳಗಿನ ಸಂಕೇತವಾಗಿದೆ. ಅದು ಬಿಟ್ಟು ನಾಯಿ-ನರಿಗಳು ಕೂಗಿದರೆ ಬೆಳಗಾಗಬಹುದೇ?, ನೀರಿನ ಪಕ್ಕದಲ್ಲಿ ಸುವಾಸನೆ ಇಲ್ಲದ ಹೂವು ಇದ್ದ ಮಾತ್ರಕ್ಕೆ ಅದು ಕಮಲದ ಹೂವಿನಂತಾಗುವುದಿಲ್ಲ, ಮಾವಿನ ತೋಪಿನಲ್ಲಿ ಕಾಗೆ ಕೂತ ಮಾತ್ರಕ್ಕೆ ಕೋಗಿಲೆಯಂತೆ ಇಂಪಾದ ರಾಗದಿಂದ ಹಾಡುವುದೇ?, ಪಾತಕ ಜನರು ಸತ್ಯಸಂಧಾನದ ಮಾತುಕಥೆಯಲ್ಲಿ ಇದ್ದರೆ ಅವರೇನು ಸುಜನರಾಗುವರೇ?, ಹುಚ್ಚು ಹತ್ತಿದ ಮನುಜನು ಬಾಯಿಗೆ ಬಂದಂತೆ ಕುಚ್ಚಿತವಾಗಿ ನುಡಿದರೆ ಸಜ್ಜನರು ಮೆಚ್ಚುವರೇ? ಎಂಬ ಪ್ರಶ್ನೆಗಳು ಸಮಾಜದಲ್ಲಿ ಅವರವರ ಶಕ್ತಿ-ಸಾಮರ್ಥ್ಯಗಳನ್ನು ಕೇವಲ ವೇಷ ಭೂಷಣಗಳಿಂದ, ಬಾಹ್ಯ ನೋಟಗಳಿಂದ ಅಳೆಯಲು ಸಾಧ್ಯವಿಲ್ಲ. ಆ ರೀತಿ ಭಾವಿಸಿದ್ದೇ ಆದರೆ ಬೆಣ್ಣೆಯ ಸವಿಯ ರಸಕ್ಕೆ ಮನಸೋತು, ಸುಣ್ಣದ ಮುದ್ದೆಯನ್ನು ಮೆಲಕು ಹಾಕಿದಂತೆ, ಕಣ್ಣಿಲ್ಲದ ಚೆಲುವ ಚಿತ್ರವ ನೋಡಿ ವರ್ಣಿಸಿದಂತಾಗುತ್ತದೆ. ಹೀಗೆ ಸಮಾಜದಲ್ಲಿರುವ ಅರ್ಥವಿಲ್ಲದ ಆಚರಣೆ, ಡಾಂಭಿಕ ಭಕ್ತಿಗಳನ್ನು ಹಳಿಯುತ್ತಾನೆ. ಕವಿಯು ತನ್ನ ಸುತ್ತ ಮುತ್ತಲಿನ ಜನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವರ ಪರಿವರ್ತನೆಗಾಗಿ, ಧರ್ಮ, ಸಮಾಜಗಳ ಏಳಿಗೆಗಾಗಿ, ಮೂರು ದಿನದ ಕನಸೆಂಬ ಸಂಸಾರವನ್ನು ನಂಬಿ ಕೆಡದೆ ಕೈವಲ್ಯದ ದಾರಿ ಹಿಡಿಯುವಂತೆ ಮನಸ್ಸಿಗೆ ಬುದ್ಧಿ ಹೇಳುತ್ತಾನೆ.

ಪೌರಾಣಿಕ ಅಂಶಗಳು

ಇಮ್ಮಡಿ ಮುರಿಗಾಗುರುಸಿದ್ಧರ ಸ್ವರವಚನಗಳ ರಚನೆಯ ಉದ್ದೇಶವೇ ಶಿವ-ಶಕ್ತಿಯರ ಅನುಪಮವಾದ ಲೀಲಾ ವಿಲಾಸಗಳನ್ನು ಕೊಂಡಾಡುವುದು ಆಗಿರುವಂತಿದೆ. ಏಕೆಂದರೆ ಇಲ್ಲಿಯ ಬಹುತೇಕ ಸ್ವರವಚನಗಳು ಶಿವಭಕ್ತಿಯ, ಶಿವದರ್ಶನದ ಸ್ತೋತ್ರ ಗೀತೆಗಳಾಗಿವೆ. ಶಿವನ ಇಪ್ಪತ್ತೈದು ಲೀಲೆಗಳಾದ ಸೋಮಧರ, ಉಮಾಸಮೇತ, ವೃಷಭಾರೂಢ, ನೃತ್ಯವಿಲಾಸ, ಗಿರಿಜಾವಿವಾಹ, ಭಿಕ್ಷಾಟನ, ಕಾಮಹರ, ಕಾಲಹರ, ತ್ರಿಪುರಹರ, ಜಲಂಧರಹರ, ಅಜಶಿರೋಹಾರ, ವೀರಭದ್ರ, ಹರಿವಿಧ್ವಂಸ, ಅರ್ಧನಾರಿ, ಕಿರಾತ, ಕಂಕಾಳೇಶ, ಚಂಡೇಶಾನುಗ್ರಹ, ವಿಷಹಾರಿತ್ವ, ಚಕ್ರಪ್ರಧಾನ, ಉಮಾಸ್ಕಂದ, ಏಕಪಾದ, ಸುಖಪ್ರದತ್ವ, ವಿಘ್ನೇಶಪ್ರದಾನಾಭಿಮುಖತ್ವ, ದಕ್ಷಿಣಾಮೂರ್ತಿ, ಲಿಂಗೋದ್ಭವ ಲೀಲೆಗಳನ್ನು ಸಂದರ್ಭಾನುಸಾರ ಇಲ್ಲಿಯ ಹಾಡುಗಳಲ್ಲಿ ಸ್ಮರಿಸಿ ಕೊಂಡಾಡಿರುವನು.

ಪಂಚವಿಂಶತಿಲೀಲೆಗಳನುರನಟಿಸುತೆ
ವಂಚಿಸದರುವತ್ತು ನಾಲ್ಕನಿಪ
ಮುಂಚುವಶುಭ ವಿಲಾಸಂಗಳನೆಸಗಿದ
ಪಂಚಮುಖದ ಪರಾತ್ಪರ ಫಣಿಭೂಷಣಗೆ ॥ (ವ.೨೫)

ಪಾರ್ವತಿಯ ಪತಿ ನೀನು, ಆಕಾಶಗಂಗೆಯ ಧರಿಸಿದವನು, ಲೋಕಾಧಿಲೋಕ ಭಕ್ತ ಜನರ ಪಾಲಕನು, ಅಸುರರಿಗೆ ಬ್ರಹ್ಮ ಸ್ವರೂಪನು, ಆಗು ಹೋಗುಗಳಿಗೂ ನೀನೇ ಮೂಲ ಪ್ರೇರಕ, ನಿನ್ನ ಚರಿತೆ ಸಪ್ತ ಕೋಟಿಯ ಸೂರ್ಯಪ್ರಕಾಶಕ್ಕಿಂತ ಮಿಗಿಲು ಹೀಗೆ ಶಿವನ ಅನಂತ ನಾಮಾವಳಿಗಳನ್ನು ಸುಮಾರು ಮೂವತ್ತಕ್ಕೂ ಹೆಚ್ಚು ಸ್ವರವಚನಗಳಲ್ಲಿ ಕೊಂಡಾಡಿದ್ದಾನೆ. 'ಅಮ್ಮ ನೋಡೆ ಇವನದೊಂದು ಮಾಯದಾಟವನು ಹಮ್ಮಿನ ಭಿಕ್ಷುಕನು ಕಾಣೆ ಹರಯದ ಜಂಗಮಯ್ಯನೆ'(ವ.೬೦) ಎಂದು ಹುಲಿಯ ಚರ್ಮ, ಕೆಂಜೆಡೆ, ಕೊರಳಲ್ಲಿ ರುಂಡಮಾಲೆ, ಬೂದಿಮೈ, ಎಡಗೈಯಲ್ಲಿ ಗುಂಡಿ, ಬಲಗೈಯಲ್ಲಿ ತಿಸುಳ, ಉಡಿಯಲ್ಲಿ ಸರ್ಪ, ಹಣೆಯಲ್ಲಿ ಕಣ್ಣು ಹೀಗೆ ಶಿವನ ಸ್ವರೂಪ ಹಾಗೂ ಲೀಲೆಗಳನ್ನು ಇಲ್ಲಿಯ ವಚನಗಳ ವಸ್ತುವಾಗಿ ಆಯ್ದುಕೊಂಡಿದ್ದಾನೆ.

ತಾತ್ತ್ವಿಕ ಅಂಶಗಳು

ವೀರಶೈವ ಧರ್ಮ ಸಂಬಂಧವಾದ ಅಷ್ಟಾವರಣ, ಪಂಚಾಚಾರ, ಶಿವಯೋಗ, ಮಿಶ್ರಾರ್ಪಣ ಮುಂತಾದ ವಿಚಾರಗಳ ಕುರಿತಾಗಿಯೂ ಈ ಕವಿಯು ಹಾಡುಗಳನ್ನು ರಚಿಸಿದ್ದಾನೆ. ಬಸವಾದಿ ಶಿವಶರಣರ ವಚನಗಳಿಂದ ಪ್ರೇರಿತರಾದ ಇವರು ಗೂಢವಾದ, ಗಾಢವಾದ ಅರ್ಥಗಳನ್ನು ಸ್ಫುರಿಸುವ 'ಬೆಡಗಿನ' ವಚನಗಳನ್ನು ಸೃಜಿಸಿದ್ದಾರೆ. ಮಾನವನ ಭವ್ಯ ವ್ಯಕ್ತಿತ್ವವು ಸೃಷ್ಟಿಯ ಒಂದು ರಹಸ್ಯವೇ ಸರಿ. ಮಾನವನಿಗೆ ತನ್ನಲ್ಲಿ ಅಡಗಿದ ನಿಜಸುಖವನ್ನು ಅರಿಯುವುದೇ 'ಶಿವಯೋಗ'.

ಅನುದಿನದಿ ಶಿವಯೋಗ ಸುಖ
ವನಗಲಲುಚಿತವದಲ್ಲ ಮುನಿವರ
ವನಜಪರಿಮಳಕಿರದೆರಗಿದವರಮಧುಕ
ರನತೆರದೆ ನಿಜದೊಳು || (ವ.೯೧)

ಶಿವಯೋಗ ಮಾಡುವ ರೀತಿಯನ್ನು ಐದು ಪದ್ಯಗಳ ಈ ಹಾಡಿನಲ್ಲಿ ನಿರೂಪಿಸುತ್ತಾ ಸ್ವಾದಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞೆಗಳೆಂಬ ಆರು ಚಕ್ರಗಳ ಮೇಲೇರಿ, ಈಡಾ, ಪಿಂಗಳ ಮತ್ತು ಸುಷುಮ್ನಗಳೆಂಬ ಮೂರು ಮಂಡಲಗಳ ನಡುವೆ ಬೆರೆತು ಒಂದಾಗುವ, ಭ್ರೂಮಧ್ಯವೆಂಬ ಮಹಾ ಮೇರುವಿನ ಮಧ್ಯದಲ್ಲಿ ಸತತವಾಗಿ ತೋರುತ್ತಿರುವ ಶಿವ ಬೀಜಾಕ್ಷರವಾದ 'ಓಂ' ಎಂಬ ಚಿಜ್ಯೋತಿಯನ್ನು, ಶಿವಪದವಿಯನ್ನು ಮನಸ್ಸಿನಲ್ಲಿ ಪಡೆಯಬೇಕೆಂದು ಹೇಳುತ್ತಾನೆ. 'ಒಂದೇ ಒಂದೇ ಪರಮತತ್ವವೊಂದೆ, ಬಿತ್ತಿದ ಬೀಜವು ಬಿರಿದು ಮತ್ತೆ ಮರನಪ್ಪಂತೆ ಗೊತ್ತಿನರಿವೆ ಜಗಗೋಪ್ಯವಿದಲ್ಲವಲ್ಲ'(ವ.೧೫೦), ಆನಂದ ಭಕ್ತಿಯಿಂದ ಲಿಂಗ ಸ್ವರೂಪವೇ ತಾನೆಂದು ಕಂಡು ಕೊಂಡ ಶರಣ ಇಲ್ಲಿ ಸಮರಸ ಭಕ್ತಿಯಿಂದ, ಲಿಂಗದಲ್ಲಿ ಬೆರೆತು, ತಾನೂ ಲಿಂಗಸ್ವರೂಪನಾಗಿ ಪರಿಣಮಿಸುತ್ತಾನೆ. ಇದು ಅನುಭಾವದ ಕೊನೆಯ ಹಂತ ಇದುವೇ ಲಿಂಗಾಂಗ ಸಾಮರಸ್ಯ. ಈ

ಮಾರ್ಗದಲ್ಲಿ ನಡೆದ ಸಾಧಕನ ಯಾತ್ರೆಯು ಬೇಧದಿಂದ ಪ್ರಾರಂಭವಾಗಿ ಅಬೇಧದಲ್ಲಿ, ದ್ವೈತದಿಂದ, ಅದ್ವೈತದಲ್ಲಿ ಕೊನೆಗೊಳ್ಳುತ್ತದೆ. ಅಂತೆಯೇ ಇಮ್ಮಡಿ ಮುರಿಗಾಗುರುಸಿದ್ಧರು, 'ಸಾಧಕನ ಮಾಡಲೆ ಕುಮಾರ ಬಿಡದೆ ಮಹಾಬಾಧಕಂಗಳು ನಿನ್ನ ಪೀಡಿಸದೆ ತೆರದೆ' ಎಂಬ ಹಾಡಿನಲ್ಲಿ

ಪರಮಶಿವಧರ್ಮವೆಂದೆನಿಪ ಗರಡಿಯಪೊಕ್ಕು
ಗುರುಮೂರ್ತಿಯೆನಿಪ ಮೈಗಾರನಡಿವಿಡಿದು
ಚರಲಿಂಗವೆಂಬ ವೇತಾಳನರ್ಚನೆಗೆಯಿದು
ಶರಣರಿಗೆ ಸಾಷ್ಟಾಂಗವೆರಗುಹವೆ ದಂಡೆ ‖ (ವ.೮೯)

ಸಂಪೂರ್ಣವಾಗಿ ಸಾಧಕನು ಸಾಧನೆಯಲ್ಲಿ ತೊಡಗಿದಾಗ ತನ್ನ ತನು ಮನಗಳನ್ನು ಶುಚಿಗೊಳಿಸಿ ಕೊಂಡು. ಹಂತ ಹಂತವಾಗಿ ತಾನು ಶುಚಿಯಾಗುವ ಬಗೆ, ಕಾಯ ತಾನೆಂದು ಭಾವಿಸಿ ಅದು ಶಾಶ್ವತವೆಂದು ಪರಿಗಣಿಸುವುದು ಅಲ್ಪರ ಗುಣಲಕ್ಷಣ. ಈ ಜಗದ ಅಸ್ಥಿರವಾದ ಸುಖವನ್ನು ತ್ಯಜಿಸಿ, ಆತ್ಮಜ್ಞಾನದಿಂದ ಪರಮಾತ್ಮನ ಸ್ವರೂಪವನ್ನು ತಿಳಿಯುವುದು ಹಾಗೂ ಚರಾಚರವಸ್ತುಗಳೊಡನೆ ಹೊಂದಿರುವ ಸಂಬಂಧಗಳನ್ನು ಅರಿಯುವುದರಿಂದ ಸರ್ವ ಸಾಧನ ಶಕ್ತಿಯು ಸಾಧಕನಿಗೆ ಲಭಿಸುತ್ತದೆ. ಇದರಿಂದ ಮಾನವನ ಘೋರ ಸಂಸಾರವೆಂಬ ಪಾಶ ಮತ್ತು ಭವಮಾಲೆಯನ್ನು ಕಿತ್ತೊಗೆದು ಮೋಕ್ಷದ ದಾರಿಯನ್ನು ಹಿಡಿದಂತಾಗುತ್ತದೆ. 'ಲಿಂಗದ ಲಿಂಗದ ನೆಲೆಯ ತಿಳಿಯೆ ಯಾರ ಹಂಗು ನಿನಗೆ ಹೇಳು ಲಿಂಗವಂತ'(ವ.೪೭) ಎಂಬ ಹಾಡಿನಲ್ಲಿ ಲಿಂಗದ ನುತ ಪೀಠ, ಕಟಿ, ತತವೃತ್ತ, ಗೋಮುಖ, ಸಿತನಾಳ, ಗೋಳಕ ಲಿಂಗದ ಆರು ತಾಣಗಳು, ತಲೆ ಆದಿಯಾಗಿ ಬುಡದವರೆಗೆ ಕೂದಲೆಳೆಯಷ್ಟು ಸೀಳಿದರೂ ದೋಷ. ಆದರೆ ಅದನ್ನು ಸರ್ಜರಸ(ಕಂತೆ ತಯಾರಿಸುವಲ್ಲಿ ಬಳಸುವ ರಸ)ದಿಂದ ಸರಿಪಡಿಸಿ ಕೊಂಡರೆ ದೋಷವಿಲ್ಲ ಎಂದು ಈ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಕ್ಕೆ ಕಾರಣವಾದ 'ಲಿಂಗದ ಸ್ವರೂಪ'ವನ್ನು ವಿವರಿಸುತ್ತಾನೆ. ಮುಂದುವರಿದು ಷಟ್‌ಸ್ಥಲ ಬ್ರಹ್ಮದಲ್ಲಿ ಏಕತ್ವವನ್ನು ಹೊಂದಿ, ಜೀವನ್ಮುಕ್ತನಾಗಿ ಸಂಚರಿಸುವ ಕ್ರಮವನ್ನು ಅಂಗ, ಲಿಂಗ, ಶಕ್ತಿ, ಭಕ್ತಿ, ಹಸ್ತ, ಮುಖ, ಪದಾರ್ಥ, ಕಲೆ, ತನು ಮೊದಲಾದ ಷಟ್‌ಸ್ಥಲ ಸಕೀಲಗಳಲ್ಲಿ ಮಂತ್ರ ಪಂಚೀಕರಣ, ಷಡ್ವಿಧ ವಿಚಾರಗಳನ್ನು ವಿವರಿಸುತ್ತ 'ಗಡ್ಡೆವೇರ್ಗಳು ಮೇಣ ಮರ ತಿಗುಡುಗಳು ಕೊನೆರ್ದೊಡ್ಡೆಲೆಗಳಾ ಮೊಗ್ಗೆಯಲರ್ಗಳೆಗಾಯ್ಪಣ್ಣ...' (ವ.೧೭೮) ಎಂದು ಮಿಶ್ರಾರ್ಪಣದ ಆಚಾರಲಿಂಗಮಿಶ್ರ, ಶಿವಲಿಂಗಮಿಶ್ರ ಮತ್ತು ಪ್ರಸಾದಲಿಂಗ ಮಿಶ್ರಗಳ ಬಗ್ಗೆ ಹೇಳುತ್ತಾನೆ.

ಓಂ ಹ್ರಾಂ ನಮಃಶಿವಾಯೋಂ ಹ್ರೀಂ ನಮಶ್ಶಿವಾ
ಯೋಂ ಹ್ರೂಂ ನಮಃಶಿವಾಯೋಂ ಹ್ರೇಂ ನಮಶ್ಶಿವಾ
ಯೋಂ ಹ್ರೋಂ ನಮಃಶಿವಾಯೋಂ ಹ್ರೌಂನಮಶ್ಶಿವಾ
ಯೋಂ ಹ್ರಃದೆಯೊಳು ಮೂಡಿ ಮುಳುಗಿ ಜಪಿಸುತೆ ‖ (ವ.೨೦೫)

ಭೋಜ್ಯ (ತುತ್ತು ಮಾಡಿ ತಿನ್ನುವಂತಹ ವಸ್ತುಗಳು), ಪಾನ್ಯ (ಎತ್ತಿ ಕುಡಿಯುವಂತಹವು), ಭಕ್ಷ್ಯ (ಹಲ್ಲಿನಿಂದ ಜಗಿದು ತಿನ್ನುವಂತಹವು), ಚೋಷ್ಯ (ಸುರಿದು ಉಣ್ಣುವಂತಹವು), ಲೇಹ್ಯ (ನೆಕ್ಕಿತಿನ್ನುವಂತಹವು) ಮತ್ತು ಇವೆಲ್ಲರಲ್ಲಿಯ ಅರಿವು, ಇವುಗಳು ಷಡ್ಲಿಂಗಗಳಿಗೆ ಅರ್ಪಿತವಾಗಬೇಕಾದ ಕಾಯ ಸಂಬಂಧ ಪದಾರ್ಥಗಳು. ಈ ಪದಾರ್ಥಗಳು ಅರ್ಪಿತವಾಗುವ ರೀತಿಯನ್ನು ಹೀಗೆ ವಿವರಿಸುತ್ತಾನೆ.

೧. ಭೋಜ್ಯವೆಂಬ ಪದಾರ್ಥವನ್ನು ಇಷ್ಟಲಿಂಗದ ವೃತ್ತದಲ್ಲಿರುವ ಆಚಾರ ಲಿಂಗಕ್ಕೆ 'ಓಂ ಹ್ರಾಂ ನಾಂ ನಮಶಿವಾಯ' ಮಂತ್ರ ಸ್ಮರಣೆ ಮಾಡುತ್ತ ಇಷ್ಟಲಿಂಗದ ಮುಖವಾಗಿ ಅರ್ಪಿಸಿದಾಗ ಆದು ಭೋಜ್ಯ ಪ್ರಸಾದವಾಗಿ ಪರಿಣಮಿಸುತ್ತದೆ.

೨. ಪಾನ್ಯವೆಂಬ ಪದಾರ್ಥವನ್ನು ಇಷ್ಟಲಿಂಗದ ಕಟಿಯಲ್ಲಿರುವ ಗುರುಲಿಂಗಕ್ಕೆ 'ಓಂ ಹ್ರೀಂ ಮಾಂನಮಶ್ಶಿವಾಯ' ಮಂತ್ರ ಜಪಿಸುತ್ತ ಇಷ್ಟಲಿಂಗ ಮುಖವಾಗಿ ಅರ್ಪಿಸಿದಾಗ ಪಾನ್ಯ ಪ್ರಸಾದವಾಗುತ್ತದೆ.

೩. ಭಕ್ಷ್ಯವೆಂಬ ಪದಾರ್ಥವನ್ನು ಇಷ್ಟಲಿಂಗದ ಗೋಮುಖದಲ್ಲಿರುವ ಜಂಗಮ ಲಿಂಗಕ್ಕೆ 'ಓಂ ಹ್ರೂಂ ಶಿಂನಮಶ್ಶಿವಾಯ' ಮಂತ್ರ ಜಪಿಸುತ್ತ ಇಷ್ಟಲಿಂಗ ಮುಖವಾಗಿಯೇ ಅರ್ಪಿಸಿದಾಗ ಆ ಭಕ್ಷ್ಯ ಪದಾರ್ಥ ಪ್ರಸಾದವಾಗಿ ಪರಿಣಮಿಸುತ್ತದೆ.

೪. ಚೋಷ್ಯ ಪದಾರ್ಥವನ್ನು ಇಷ್ಟಲಿಂಗದ ಗೋಮುಖದಲ್ಲಿರುವ ಜಂಗಮಲಿಂಗಕ್ಕೆ 'ಓಂ ಹ್ರೈಂ ವಾಂ ನಮಶ್ಶಿವಾಯ' ಮಂತ್ರ ಜಪಿಸುತ್ತ ಇಷ್ಟಲಿಂಗ ಮುಖವಾಗಿ ಅರ್ಪಿಸಿದಾಗ ಪ್ರಸಾದವಾಗಿ ಪರಿಣಮಿಸುತ್ತದೆ.

೫. ಲೇಹ್ಯ ಪದಾರ್ಥವನ್ನು ಇಷ್ಟಲಿಂಗದ ನಾಳದಲ್ಲಿರುವ ಪ್ರಸಾದಲಿಂಗಕ್ಕೆ 'ಓಂ ಹ್ರೋಂ ಯಾಂನಮಶ್ಶಿವಾಯ' ಮಂತ್ರೋಚ್ಚಾಣೆ ಮಾಡುತ್ತ ಇಷ್ಟಲಿಂಗ ಮುಖವಾಗಿಯೇ ಅರ್ಪಿಸಿದಾಗ ಪದಾರ್ಥ ಪ್ರಸಾದವಾಗುತ್ತದೆ.

೬. ಭೋಜ್ಯಾದಿಗಳೆಲ್ಲರ ಅರಿವೆಂಬ ಪದಾರ್ಥವನ್ನು ಇಷ್ಟಲಿಂಗದ ಗೋಳಕದಲ್ಲಿರುವ ಮಹಾಲಿಂಗಕ್ಕೆ 'ಓಂ ಹ್ರಃ ನಮಶ್ಶಿವಾಯ' ಮಂತ್ರೋಚ್ಚಾರಣೆ ಮಾಡುತ್ತ ಇಷ್ಟಲಿಂಗ ಮುಖವಾಗಿಯೇ ಅರ್ಪಿಸಿದಾಗ ಆ ಅರುಹೆಂಬ ಪದಾರ್ಥ ಪ್ರಸಾದವಾಗಿ ಪರಿಣಮಿಸುತ್ತದೆ. ಹೀಗೆ ಅರ್ಪಣ ಕ್ರಿಯೆಯ ಎಲ್ಲ ಪ್ರಕ್ರಿಯೆಗಳನ್ನು 'ರೂಪು ವಸ್ತು ಪದ ಸ್ನಾನ ಮನುಗಳೆಂಬಿವನು ಕ್ರಿಯಾಪರರರಿದಾಚರಿಪುದು ಕ್ರಮದೊಳು' ಎಂದು ನಾಲ್ಕು ಸಾಲಿನ ಮೂರು ಪದ್ಯಗಳಲ್ಲಿ

ಸಂಕ್ಷಿಪ್ತವಾಗಿ ಹೇಳುತ್ತಾನೆ. 'ತೊಳಪ ದೀಕ್ಷೆಗಳಿನ್ನು ಸಮಯನಿಸ್ಸಂಸಾರ ಲಳಿತ ನಿರ್ವಾಣ ತತ್ತ್ವಂಗಳಧ್ಯಾತ್ಮಸಂಜ್ವಳದನುಗ್ರಹ ಶುದ್ಧ ವಿದ್ಯೆಗಳೆನಿಪಿವೇಳು ಪ್ರಾಣದ ದೀಕ್ಷೆಗಳಣಂ' (ವ.೨೦೬) ಎಂದು ಲೌಕಿಕ ಜೀವನದಲ್ಲಿ ತೊಳಲಾಡುತ್ತಿರುವವರಿಗೆ, ಅಜ್ಞಾನದ ಅಂಧಕಾರದ ಕೂಪದಲ್ಲಿ ಬಿದ್ದಿರುವ ವ್ಯಕ್ತಿಗೆ ಸುಜ್ಞಾನದ ಬೆಳಕನ್ನು ನೀಡಿ ಮುಕ್ತಿ ಪಥದತ್ತ ಕೈ ಹಿಡಿದು ಕರೆದೊಯ್ಯುವಲ್ಲಿ ದೀಕ್ಷೆಯ ಪಾತ್ರ ಮತ್ತು ದೀಕ್ಷೆಯ ವಿಧಾನಗಳನ್ನು ಕುರಿತು ಹೇಳುತ್ತಾನೆ. ಹೀಗೆ ಕ್ಲಿಷ್ಟವಾದ ತತ್ತ್ವಗಳನ್ನು ಸರಳ ಸುಂದರ ಶೈಲಿಯಲ್ಲಿ ಭಕ್ತಿ-ಜ್ಞಾನ-ವೈರಾಗ್ಯಗಳನ್ನು ಬೋಧಿಸಿ, ಜನಮನವನ್ನು ತಣಿಸಿ, ಸಮಾಜವನ್ನು ನೀತಿಮಾರ್ಗದಲ್ಲಿ ನಡೆಸಲು ಆ ಮೂಲಕ ಜನರಲ್ಲಿ ಭಕ್ತಿ ಭಾವಗಳನ್ನು ಮೂಡಿಸಲು ಪ್ರಯತ್ನಿಸಿದ್ದಾನೆ.

ಚಾರಿತ್ರಿಕ ಅಂಶಗಳು

ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಸ್ವರವಚನಗಳಲ್ಲಿ ಚಾರಿತ್ರಿಕವೆನ್ನಿಸುವಂಥ ಘಟನೆಗಳನ್ನಾಗಲೀ, ಪಾತ್ರಗಳನ್ನಾಗಲೀ ಉಲ್ಲೇಖಿಸದಿದ್ದರೂ, ಸಮಕಾಲೀನರಾದ ಸೀಮಾಪುರುಷ ಷಡಕ್ಷರದೇವ, ದೀಕ್ಷಾಗುರು ಮುರಿಗಾಶಾಂತವೀರರು, ಚಿತ್ರದುರ್ಗದ ಪಾಳೇಯಗಾರ ಭರಮಭೂಪಾಲ, ಎಡೆಯೂರ ಸಿದ್ಧಲಿಂಗೇಶ, ಕಟ್ಟಿಗೆಹಳ್ಳಿ ಸಿದ್ದಲಿಂಗ ಇವರುಗಳನ್ನು ಸ್ತುತಿರೂಪದಲ್ಲಿ ನೆನಪಿಸಿಕೊಳ್ಳುತ್ತಾನೆ. ಮುರಿಗೆ ಶಾಂತವೀರರನ್ನು ಐದು ಹಾಡುಗಳಲ್ಲಿ ಸ್ಮರಿಸುತ್ತಾ ಅವರನ್ನು 'ರಾಜಾಧಿರಾಜ ಕವಿಸುರಭೂಜ', 'ನಿಗಮಾಗಮ ಪೌರಾಣನಿಪುಣ ನೀತಿಭೂಷಣ', 'ದಕ್ಷಿಣಾಮೂರ್ತಿ'ಯೆಂದು ಸಮೀಕರಿಸುವುದರ ಜೊತೆಗೆ ಅವರ ಪ್ರಕಾಂಡ ಪಾಂಡಿತ್ಯದ ವಿವರಗಳನ್ನು ನೀಡುತ್ತಾನೆ. ಇವರ ಮರಣ ಸಂದರ್ಭದಲ್ಲಿ ರಚನೆಗೊಂಡ ಹಾಡು ಶೋಕ ಗೀತೆಯಾಗಿದ್ದು, ಭಾವಭರಿತರಾದ ಇವರು ತಮ್ಮ ಅಂತರಾಳದ ಸಂಕಟವನ್ನು 'ತಾಯನಗಲಿದ ಕರುವಿನಂತೆ ನಾವೀಗ ಸಾಯಸದಿಂದಿರುತಿರೆ ನಿನಗೆ ಕಾಯಜ ವಿಜಯ ಕರುಣವಿನಿತಿಲ್ಲ ಉಪಾಯವಿದಾವುದುಸಿರು ಮಹಾಮಹಿಮ' ಎಂದು ತೋಡಿಕೊಳ್ಳುತ್ತಾನೆ. ಮುಂದುವರಿದು

ಧರೆಯೊಳತ್ಯಧಿಕ ಚಿಮ್ಮುಲಗಿರಿದುರ್ಗದ
ದೊರೆಯಾದ ಬ್ರಹ್ಮ ಭೂಪಾಲನಿಗೆ
ವರವನೀವುತ ಶಿವಲಿಂಗವಾಗಿಯೇ ಶಾಂತವೀರೇಶ ॥ (ವ.೫೧)

ಚಿತ್ರದುರ್ಗದ ದೊರೆ ಮೇದಕೇರಿ ಕಸ್ತೂರಿ ಭರಮ ಭೂಪಾಲ(ಕ್ರಿ.ಶ.೧೬೮೯-೧೭೨೦)ನಿಗೆ ಮುರಿಗೆ ಶಾಂತವೀರರು ವರವಿತ್ತ ಐತಿಹಾಸಿಕ ಸಂಗತಿಯನ್ನು ಪ್ರಸ್ತಾಪಮಾಡಿದ್ದಾನೆ. ಚಿತ್ರದುರ್ಗವನ್ನು 'ದಕ್ಷಿಣ ಕೈಲಾಸ'ವೆಂದೂ, ಭರಮಭೂಪಾಲನನ್ನು 'ಕಣ್ಣಪ್ಪನ ಕುಲಜಾತ'ನೆಂದು ಕರೆದಿದ್ದಾನೆ. ತಮ್ಮ ಒಡನಾಡಿ, ಆಪ್ತಮಿತ್ರ, ಮಹಾಕವಿ ಷಡಕ್ಷರದೇವನು ಮರಣ ಹೊಂದಿದ ಸಂದರ್ಭದಲ್ಲಿ 'ಭಳಿಕೆಭಲರೆ ನಿಮಗೆಣೆಯಾವನೀ ಲೋಕದೊಳು ಮಹಾಗುರು ಷಡಕ್ಷರಿದೇವ ದೇವ'(ವ.೬೫) ಎಂದು ಆತನನ್ನು

ಸುವಿವೇಕಶಾಲಿ, ಸೂನೃತ ಚಂದ್ರಮೌಲಿ, ಸತ್ಕವಿ ಚಕ್ರವರ್ತಿ, ಸನ್ನತ ಶುಭಕೀರ್ತಿ ಇನ್ನು ಮುಂತಾದ ವಿಶೇಷಣಗಳಿಂದ ಆತನನ್ನು ಸ್ಮರಿಸುವ ಈ ಹಾಡು ಒಂದು ಶ್ರೇಷ್ಠ ಶೋಕ ಗೀತೆಯಾಗಿದೆ. ಇದರಲ್ಲಿ 'ಬಸವಪುರಾಣ'ವನ್ನು ತೆಲುಗು, ಕನ್ನಡ, ಸಂಸ್ಕೃತಗಳಲ್ಲಿ ರಚಿಸಿರುವ ಪಾಲ್ಕುರಿಕೆ ಸೋಮನಾಥ, ಭೀಮಕವಿ, ಶಂಕರ ಕವಿಗಳನ್ನು ಸ್ಮರಿಸಿದ್ದಾನೆ.

ಮುರಿಗಾಶಾಂತವೀರರ ಗುರುವಾದ ಕಟ್ಟಿಗೆಹಳ್ಳಿ ಸಿದ್ಧಲಿಂಗರನ್ನು 'ಕಟ್ಟಿಗೆ ಹಳ್ಳಿಯ ಕರುಣಾಳು ಸಿದ್ಧಲಿಂಗನ ಮುಟ್ಟಿ ಪೂಜಿಪ ಭಕ್ತನವನೆ ಕೃತಾರ್ಥನು'(ವ.೧೬೫), ವೀರಮಾಹೇಶ್ವರಾಚಾರ, ಬೋಧಾಮೃತಸಾರ', 'ಸೂರಿಸನ್ನುತಪಾತ್ರ', 'ದಕ್ಷಿಣಾಮೂರ್ತಿ' ಎಂದು ಹೊಗಳುತ್ತಾಮುಂದುವರಿದು.

ಪರಮಕಾಷ್ಠಕೆ ಕಟ್ಟಿಗೆ ತಾಂ ಪ್ರಾಕೃತದಲ್ಲಿ
ನಿರುತದಿಂದದೆ ತಿಳಿವಳ್ಳಿಯೆಂದೆನಿಸಿ
ಪರಿಪೂರ್ಣ ಜ್ಞಾನವಾಗಿರಲದರಲ್ಲಿಸು
ಸ್ಥಿರ ಶಿವಲಿಂಗಾಂಗ ಯೋಗದೊಳಿಹನ ‖ (ವ.೧೬೫)

ಕಟ್ಟಿಗೆಹಳ್ಳಿಗೆ ಹಿಂದೆ ಕಾಷ್ಠಪುರವೆಂಬ ಹೆಸರಿದ್ದುದಾಗಿಯೂ, ಪ್ರಾಕೃತದಲ್ಲಿ 'ತಿಳಿವಳ್ಳಿ' ಎಂದೆನಿಸಿಕೊಂಡು ಅಲ್ಲಿ ಶಿವಲಿಂಗಾಂಗ ಯೋಗದಲ್ಲಿರುವ ಸೂರಿ ಸನ್ನತರಾದ ಸಿದ್ಧಲಿಂಗರು ತಮ್ಮ ಶಿಷ್ಯ ಸಮೂಹಕ್ಕೆ ವೀರಮಾಹೇಶ್ವರರ ಆಚಾರ ಬೋಧನೆಯ ಸಾರವನ್ನು ಹೇಳುತ್ತಿದ್ದರೆಂದೂ, ದಕ್ಷಿಣಾಮೂರ್ತಿಯಾಗಿ ಪತಿ-ಪಶು-ಪಾಶತ್ರಯವನ್ನು ಮುನೀಶ್ವರರಿಗೆ ಬೋಧಿಸುತ್ತಿದ್ದರೆಂದು ಉಲ್ಲೇಖಿಸಲಾಗಿದೆ. ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಎಲ್ಲಾ ಕೃತಿಗಳಲ್ಲಿ ಸ್ಮರಿಸಿರುವಂತೆ ತೋಂಟದಸಿದ್ಧಲಿಂಗರನ್ನು ಇಲ್ಲಿ ಮೂರು ಸ್ವರವಚನಗಳಲ್ಲಿ ಸ್ಮರಿಸಿದ್ದಾರೆ. 'ಎಡೆಯೂರ ಮಧ್ಯ ನಿವಾಸನಿಗೆ ಎಳೆಯ ಹುಲ್ಲೆಯ ಕರದೊಳಾಂತನಿಗೆ ಮೃಡಗುರು ತೋಂಟದ ಸಿದ್ದೇಶ್ವರನಿಗೆ'(ವ.೧೫೪), 'ಕಾಲಚಂದ್ರಾಧಾರ ನಯನತ್ರಯ ವಿಶಾಲ ಚರಾಕಾರ ತೋಂಟದಸಿದ್ಧಲೀಲ ಮನುಮೂಲ' (ವ.೧೮೪) ಈ ಹಾಡಿನಲ್ಲಿ ತೋಂಟದ ಸಿದ್ಧಲಿಂಗರನ್ನು ಸಾಕ್ಷಾತ್ ಶಿವಸ್ವರೂಪಿಯೆಂದು ವರ್ಣಿಸಲಾಗಿದೆ. ಒಮ್ಮೆ ಬರಗಾಲ ಬಂದು ತಂಪಿಲ್ಲದೆ ಸಕಲ ಜೀವಿಗಳು ಬೆಂದು ನಿಟ್ಟುಸಿರು ಬಿಟ್ಟಾಗ 'ಶಿವಲಿಂಗ ಶಂಕರ ಕೃಪಾಕರ ಶಶಾಂಕಧರ ಪ್ರವಿಮಳಾತ್ಮನೆ ಪಾಲಿಪುದು ಜಗವನು' (ವ.೧೯೭) ಎಂದು ಗುರುಸಿದ್ಧರು ತೋಂಟದಸಿದ್ಧಲಿಂಗರಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ.

ತಂಪಿಲ್ಲದೆ ಸಕಲ ಜೀವಿಗಳ ನಿಟ್ಟುಸಿರ್ಗೆ
ಕುಂಪಟೆಯದಾಯ್ತು ಧರೆ ಬೇಗೆ ಪಡೆದು
ಸೊಂಪಳಿದು ಬೆಳೆ ಬಿತ್ತುಗಳು ಕೆಡದ ಮುನ್ನಮೃಡ
ನೀಂ ಪಡೆದು ಮುಡಿಯ ಗಂಗೆಯ ಮಡುಹನಿಳುವ ‖ (ವ.೧೯೭)

ಎಂದು ಬೇಡಿಕೊಳ್ಳಲು ಇವರ ಮೊರೆಗೆ ಮಣಿದ ಸಿದ್ಧಲಿಂಗರು ಮಳೆಗರೆದು ಬರಗಾಲದ ಬೇಗೆಯನ್ನು ನಿವಾರಿಸಿದರೆಂಬದನ್ನು ಇಲ್ಲಿ ತಿಳಿಸುತ್ತಾನೆ. ಹೀಗೆ ಕವಿಯು ಪ್ರಾಸಂಗಿಕವಾಗಿ ದೈವೀ

ಒಲುಮೆಯ ಸಂದರ್ಭದಲ್ಲಿ ಸಾಕ್ಷಾತ್ ಶಿವನಂತೆ ಕಂಗೊಳಿಸುವ ವ್ಯಕ್ತಿಗಳನ್ನು ಮಾತ್ರ ಕೊಂಡಾಡಿದ್ದಾನೆ. ಕವಿಯು ಬದುಕಿದ ಕಾಲ, ಪರಿಸರಗಳನ್ನು ಅವಲೋಕಿಸಿದರೆ ಅಂದಿನ ರಾಜಕೀಯ ಅಭದ್ರತೆ, ಸಾಮಾಜಿಕ ವಿಪ್ಲವತೆ, ಸಾಹಿತ್ಯಿಕ ಪಲ್ಲಟತೆಗಳನ್ನು ತನ್ನ ಹಾಡುಗಳ ವಿಶೇಷ ವಸ್ತುಗಳನ್ನಾಗಿ ಆಯ್ದುಕೊಳ್ಳಬಹುದಾಗಿತ್ತು. ಆದರೆ ಯಾವುದರ ಗೋಜಿಗೂ ಕೈಹಾಕದೆ ಸ್ವತಂತ್ರವಾಗಿ ತನ್ನ ಆರಾಧ್ಯ ದೈವವನ್ನು ಸ್ತುತಿಸುವ ಮೂಲಕ ಆತನನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದ್ದಾನೆ.

ಸಾಹಿತ್ಯಿಕ ಅಂಶಗಳು

ಹದಿನೆಂಟನೆಯ ಶತಮಾನದಲ್ಲಿ ಜೀವಿಸಿದ್ದ ಇಮ್ಮಡಿ ಮುರಿಗಾಗುರುಸಿದ್ಧರ ಬಹುತೇಕ ವಚನಗಳ ಉದ್ದೇಶವು ಶಿವ-ಶಕ್ತಿಯರನ್ನು ಸ್ತುತಿ ರೂಪದಲ್ಲಿ ವರ್ಣಿಸಿ, ಸ್ವರ ಸಂಯೋಜನೆಯೊಂದಿಗೆ ಸುಶ್ರಾವ್ಯವಾಗಿ ಹಾಡಿ ಶಿವಭಾವದಲ್ಲಿ ತಲ್ಲೀನರನ್ನಾಗಿಸುವುದರ ಮೂಲಕ ಸಹೃದಯ ಓದುಗರ ಮನಸ್ಸನ್ನು ಪರಿವರ್ತನೆಗೊಳಿಸ ಬಯಸುತ್ತಾನೆ. ಇಂತಹ ಶುದ್ಧವಾದ ಭಕ್ತಿ ಕಾವ್ಯದಲ್ಲಿ ಶಾಸ್ತ್ರೀಯ ಮತ್ತು ಸಾಹಿತ್ಯಿಕ ಅಂಶಗಳನ್ನು ಹುಡುಕುವುದು ಸ್ವಲ್ಪ ಕಷ್ಟದ ಕೆಲಸವಾಗುತ್ತದೆ. ಏಕೆಂದರೆ ಸಾಹಿತ್ಯ ರಚನೆಯ ಉದ್ದೇಶ, ವ್ಯಾಮೋಹಗಳಿಲ್ಲದೆ ಸೃಷ್ಟಿಸಿರುವ ಇಲ್ಲಿಯ ಸ್ವರವಚನಗಳು ಸದಾ ಧರ್ಮ ಮುಖಿಯಾಗಿ ನಿಲ್ಲುತ್ತವೆ. ಆದರೂ ಸಂದರ್ಭಾನುಸಾರವಾಗಿ ತಮಗೆ ತೋಚಿದ ವಿಷಯವನ್ನು ಅಭಿವ್ಯಕ್ತಿಗೊಳಿಸುವಲ್ಲಿ ಕವಿಯು ತನ್ನ ಸುತ್ತಮುತ್ತಲಿನ ವಸ್ತುಗಳನ್ನು ಬಳಸಿ ಉಪಮೆ, ರೂಪಕ ಮತ್ತು ದೃಷ್ಟಾಂತಗಳನ್ನು ನೀಡುವುದು, ರಾಗ ಸಂಯೋಜನೆಗಾಗಿ ಆದಿ-ಮಧ್ಯ-ಅಂತ್ಯಪ್ರಾಸಗಳನ್ನು ಬಳಸಿರುವುದು, ವಸ್ತುವಿನ ಮಿತಿಗನುಗುಣವಾಗಿ ಷಟ್ಪದಿ, ಚೌಪದಿ, ತ್ರಿಪದಿ, ದ್ವಿಪದಿಯಂತಹ ಛಂದಸ್ಸುಗಳನ್ನು ಆಶ್ರಯಿಸಿರುವುದು, ಆಯಾ ಘಟನೆಗಳಿಗೆ ತಕ್ಕಂತೆ ನಾಣ್ನುಡಿ, ಜೋಗುಳಪದ, ಶೋಬಾನೆಪದ ಮುಂತಾದ ಜನಸಾಮಾನ್ಯರ ಸಾಹಿತ್ಯವನ್ನು ಅನುಕರಿಸಿರುವುದು ಹೀಗೆ ಇಂತಹ ಹಲವಾರು ಸೂಕ್ಷ್ಮತೆಗಳನ್ನು ಗಮನಿಸಿದಾಗ, ಸೌಂದರ್ಯ ದೃಷ್ಟಿಯಿಂದ ನೋಡಿದಾಗ ಸಾಹಿತ್ಯಿಕವಾಗಿಯೂ ಇಮ್ಮಡಿ ಮುರಿಗಾಗುರುಸಿದ್ಧರ ಸ್ವರವಚನಗಳ ಮಹತ್ವ ಏನೆಂಬುದು ತಿಳಿಯುತ್ತದೆ.

ಅಲಂಕಾರಗಳು : ಕಾವ್ಯಮೀಮಾಂಸೆಯಲ್ಲಿ ಲಾಕ್ಷಣಿಕರು ಉಪಮೆಗಳನ್ನು ಅಲಂಕಾರಗಳೆಂದು ಕರೆಯುತ್ತಾರೆ. ಪ್ರಸ್ತುತ ವಚನಗಳಲ್ಲಿ ನಿರೂಪಿತವಾದ ಉಪಮೆಗಳು ಕೇವಲ ಅಲಂಕಾರಿಕವಾಗಿ ಮಾತ್ರವಿರದೆ ಅವಶ್ಯಕವೂ ಆಗಿವೆ. ಹೇಳಲೇಬೇಕಾದ ವಿಷಯದ ಸ್ಪಷ್ಟೀಕರಣಕ್ಕೆ ಉಪಮೆ ಸೊಗಸಾದ ಮಾಧ್ಯಮ 'ಕುಕ್ಕುಟ ಕೂಗಲು ಬೆಳಗಹುದಲ್ಲದೆ ಕುಕ್ಕನಕಗಳು ಕೂಗಿದೊಡೇನು ಬೆಳಗೆ', 'ಬೆಣ್ಣೆಯ ಸವಿಯ ಸಾರಕೆ ಮನವೊಲಿದಚ್ಚ ಸುಣ್ಣವ ಮೆಲಲದರಂತೆ ಮಧುರವೇ?', 'ಕಣ್ಣಿಲ್ಲದವರ ಚೆಲುವ ಚಿತ್ರವ ನೋಡಿ ಬಣ್ಣಿಸುವನೆ', 'ಕನ್ನಡಿಯಲ್ಲಿ ಮೊಗವ ನೋಳ್ಪರಲ್ಲದೆ ಭಿನ್ನವಾಗಿಹ ಕಾರೋಡಿನೊಳು

ನೋಡುವರೇ?' ಎಂದು ಒಂದರ ಹಿಂದೊಂದು ಸಾಲಾಗಿ, ವಿಪುಲವಾಗಿ ಕವಿಯು ಉಪಮೆಗಳನ್ನು ಬಳಸಿದ್ದಾನೆ.

ಸ್ವಾತಿಮಳೆಯ ಜಲದ ಬಿಂದುಚಿಪ್ಪಿನೊ
ಳೋತು ಪತನವಾಗಿ ತೋರಮುತ್ತಾದ
ನೀತಿಯಿಂ ಗುರುಬೋಧೆ ಶಿಷ್ಯಕರ್ನದಿಬಿದ್ದು
ಕೌತುಕವಾದ ಮುಕ್ತಿಯ ಮಣಿಯಾದುದು ‖ (ವ.೩೫)

ಸ್ವಾತಿ ಮಳೆ ಹನಿಯು ಚಿಪ್ಪಿನೆದೆಯೊಳಗೆ ಬಿದ್ದು ಕಡಲ ತಳದಲ್ಲಿ ಸೇರಿ ಮುತ್ತಾಗುತ್ತದೆ. ಹನಿಯು ನೀರಾಗಿದ್ದರೂ, ನೀರಿನಲ್ಲಿ ಬೆರೆಯದೆ ಮುತ್ತಾದ ರೀತಿಯಲ್ಲಿ ಗುರುಬೋಧೆ. ಗುರು ಉಪದೇಶವನ್ನು ಪಡೆದ ಶಿಷ್ಯನು ಸಮಾಜದಲ್ಲಿದ್ದು ಎಲ್ಲರಂತೆ ತಾನಾಗದೆ ಶ್ರೇಷ್ಠವಾದ ಮುತ್ತಿನಂತಾದ ಎಂಬುದನ್ನು ವಿವರಿಸಲು ಈ ದೃಷ್ಟಾಂತವನ್ನು ನೀಡುತ್ತಾನೆ. ಉಪಮೆ ದೃಷ್ಟಾಂತಗಳಂತೆಯೇ ಇಮ್ಮಡಿ ಮುರಿಗಾ ಗುರುಸಿದ್ಧರ ರೂಪಕ ನಿರ್ಮಾಣ ಶಕ್ತಿಯೂ ಅಗಾಧವಾದುದು. ಅವರ ಅನುಭವ ತೀವ್ರತೆಯನ್ನು ಕಾವ್ಯ ಪ್ರತಿಭೆಯನ್ನು ಸಾರುವ

ತಲೆಯಡಿಯಾಗಿ ಹುತ್ತವ ತಡೆಯದ್ಯೆದಿದಹಾವು
ಹೊಲಬುಗಾಣದ ತೆರದೆ ಹೊರೆಯಾಗದೆ
ಸಲೆ ಮೇಲು ಮೊಗಮಾಡಿ ಸರಸನೋಟದೆ ನೋಡಿ
ನೆಲೆನೆಲೆಗಳನೊಕ್ಕು ನೆತ್ತಿಯೊಳ್ಮಿಕ್ಕು ‖ (ವ.೧೬)

ಇಂತಹ ಕೆಲವು ಪೂರ್ಣ ರೂಪಕಗಳು ಕವಿಯ ರೂಪಕ ಸಾಮಾರ್ಥ್ಯವನ್ನು ಶ್ರುತಪಡಿಸುತ್ತವೆ. ಭಾವಕ್ಕೆ ತಕ್ಕಂತೆ ಭಾಷೆಯನ್ನು ಅವರು ಹೇಗೆ ಹದಗೊಳಿಸಿದ್ದಾರೆಂಬುದನ್ನು ಇಲ್ಲಿ ಮನಗಾಣಬಹುದು. ಇದೇ ರೀತಿ ಇಲ್ಲಿಯ ಅನೇಕ ಸ್ವರವಚನಗಳಲ್ಲಿ ಉಪಮೆ-ದೃಷ್ಟಾಂತ-ರೂಪಕಗಳು ವಿಪುಲವಾಗಿ ದೊರೆಯುತ್ತವೆ.

ಪ್ರಾಸ : ಪ್ರಾಸಾನುಪ್ರಾಸ ಯೋಜನೆಯು ಸ್ವರವಚನಗಳ ರಚನಾ ವಿನ್ಯಾಸದಲ್ಲಿ ಎದ್ದು ಕಾಣುವ ಅಂಶ, ಶಬ್ದಗಳ ಪುನರಾವರ್ತನೆಯ ಮೂಲಕ ಶಬ್ದ ಮಾಧುರ್ಯವನ್ನು ಉಣಬಡಿಸುವಲ್ಲಿ, ಅರ್ಥ ಭಿನ್ನತೆಯನ್ನು ಗುರುತಿಸುವಲ್ಲಿ, ಕವಿಯ ಶಬ್ದ ಸಾಮರ್ಥ್ಯವನ್ನು ಒರೆಗೆ ಹಚ್ಚುವಲ್ಲಿ ಈ ಪ್ರಾಸದ ಮಹತ್ವವಿದೆ. ಈ ವಿಷಯವು ಸಾಮಾನ್ಯವಾಗಿದ್ದರೂ ನಿಯತವಾಗಿ ಆದಿ-ಮಧ್ಯ-ಅಂತ್ಯಪ್ರಾಸ ಗಳನ್ನು ಕವಿಯು ಬಳಸಿದ್ದಾನೆ.

ನಂದ ನಂದನಾನಂದ ಮಂದಿರ ವರದಸುರ
ವೃಂದ ವಂದಿತ ಮಂದಿರಾಚಲ ಮಂದಿರ ಜಯನಂದಿಪತಾಕ ‖ (ವ.೬೦)

'ಆನಂದ' ಎನ್ನುವುದು ನಂದಿ ಹೋಗಲಾರದ್ದು, 'ನಶಿಸಿ' ಹೋಗಲಾರದ್ದು, ಅದು ಸದಾ ಹೃದಯ ಮಂದಿರಲ್ಲಿ ಚೈತನ್ಯ ಸ್ವರೂಪದ್ದು, ಅದನ್ನು ದೇವತೆಗಳಿಗೂ ವಂದಿಸಿ ಜಯಘೋಷಣೆ ಮಾಡುವಂತದ್ದು,

ಹೀಗೆ ಅನಂತ ಅರ್ಥಗಳನ್ನು ಸ್ಫುರಿಸುವ ಈ ವಚನದ ಶಬ್ದಲಾಲಿತ್ಯ, ಶಬ್ದಾಲಂಕಾರದ ಮಾದರಿ, ಪುನಃ ಪುನಃ ಬಳಸಿದರೂ ಒಂದೇ ಪದ ಅನೇಕ ಅರ್ಥಗಳನ್ನು ಸ್ಫುರಿಸುತ್ತದೆ. ಆದಿಪ್ರಾಸ-ಅನುಪ್ರಾಸಗಳ ಶಬ್ದಜೋಡಣೆಯ ಸಹಜತೆಯನ್ನು ತೋರುವ ಕೆಳಗಿನ ಪದ್ಯವು ನೈಜವಾಗಿ ಮೂಡಿಬಂದಿದೆ.

ಅಕ್ಕ ಕೇಳವನ ನಾ ಮಿಕ್ಕವಳಲ್ಲವೆ ತಾ
ನಕ್ಕರುಳವನಂತೆ ಪೊಕ್ಕ ನಡದೀಗಳು
ಚಿಕ್ಕ ಚಕ್ಕನವ ಪಕ್ಕ ಪಕ್ಕನೆಯು
ನಕ್ಕ ನಕ್ಕನೀರೆ ಜಕ್ಕದಕ್ಕ ಮೋರೆ ‖ (ವ.೮೫)

ಅದೇ ರೀತಿ ಆದಿ-ಅಂತ್ಯ ಪ್ರಾಸಕ್ಕೆ ಉದಾಹರಣೆ

ಮಡದಿಯ ಕಣ್ಣಕನ್ನೈದಿಲು ಕಳೆಗುಂದಿ
ಮೃಡನಿನ್ನ ಮೊಗ ನೆರೆವೆರೆಯನು ಹೊಂದಿ
ಬಿಡದೆ ಜೀವಿಪ ಬಗೆಯನು ಬಹುಮಂದಿ
ನುಡಿವ ಮಾತನು ಪೇಳಿದನು ಸದಾನಂದಿ ‖ (ವ.೬೬)

ಇಲ್ಲಿಯ ಆದಿ-ಮಧ್ಯ-ಅಂತ್ಯ ಪ್ರಾಸಗಳು ಎಲ್ಲಿಯೂ ಕೃತಕವೆನಿಸುವುದಿಲ್ಲ ಜೊತೆಗೆ ಅರ್ಥವಂತಿಕೆ ಹಾಗೂ ಲಯದ ದೃಷ್ಟಿಯಿಂದ ಅವು ಓದುಗರಿಗೆ ಪ್ರಿಯವಾಗುತ್ತವೆ. ಇಂತಹ ಅನೇಕ ಪ್ರಾಸ ಪ್ರಯೋಗಗಳು ಸ್ವರವಚನಗಳುದ್ದಕ್ಕೂ ಕಾಣಬಹುದಾಗಿದೆ.

ಛಂದಸ್ಸು : ನಿರ್ದಿಷ್ಟವಾದ ಪ್ರಕಾರವನ್ನು ಬಳಸಬೇಕೆಂಬ ನಿಯಮವನ್ನು ಕವಿಯು ಹಾಕಿಕೊಳ್ಳದಿದ್ದರೂ ತನಗೆ ಅವಶ್ಯಕತೆ ಕಂಡುಬಂದಾಗಲೆಲ್ಲ ಷಟ್ಪದಿ, ಚೌಪದಿ, ದ್ವಿಪದಿ, ಕಂದ, ವೃತ್ತಗಳನ್ನು ಬಳಸಿಕೊಂಡಿದ್ದಾನೆ. ಷಟ್ಪದಿಯಲ್ಲಿ ಭೋಗ ಹಾಗೂ ವಾರ್ಧಕ ಷಟ್ಪದಿಗಳನ್ನು ಬಳಸಿದ್ದಾನೆ. ಗೇಯತೆಗಾಗಿ ಮೂರು ಮಾತ್ರೆಯ ಗಣಗಳನ್ನು, ಸಂಗೀತಕ್ಕೆ ಉಪಯುಕ್ತವಾದ ಕಾವ್ಯತಂತ್ರವನ್ನು ಕಂಡುಕೊಂಡಿದ್ದಾನೆ.

ಕಳ್ಳಚಿಳ್ಳ ಕೊಳ್ಳಿ ಕುಂಭ ಚೂರಿ ಪಾಶ ನಿನಗೆ
ಪಳ್ಳು ಪೊಳ್ಳು ಬಳ್ಳು ಬಗುಳದ್ಯಾಕೆ ಪೇಳು
ಅತ್ತಲಿತ್ತ ಸುತ್ತಿಸುಳಿಯೆ ಫಲವದೇನು ಪೇಳಂ
ಗತ್ತೆ ಮತ್ತೆ ಸತ್ತೆ ನಿನಗೆ ಗತಿಯದೇನು ‖ (ವ.೪೮)

ಹೀಗೆ ಮುಂದುವರಿಯುವ ಈ ಹಾಡಿನಲ್ಲಿ ಮೊದಲಸಾಲಿನಲ್ಲಿ ಮೂರು ಮೂರು ಮಾತ್ರೆಯ ಏಳು ಗಣ್ಗಗಳು, ಎರಡನೇ ಸಾಲಿನಲ್ಲಿ ಆರು ಗಣಗಳು ಬರುತ್ತವೆ. ಶುದ್ಧ ಮುಖಾರಿ ರಾಗದಲ್ಲಿ ಧ್ವನಿ ಪೂರ್ಣವಾಗಿ ಮೂಡಿ ಬಂದಿರುವ ಈ ಸ್ವರವಚನ ಕವಿಯ ಶಬ್ದ ಬಳಕೆಯ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಹೀಗೆ ಶಾಸ್ತ್ರೀಯ ಛಂದಸ್ಸುಗಳಲ್ಲದೆ ಜನಪದರ ಜೋಗುಳ ಪದವನ್ನು ಕಂದ ಪದ್ಯದಲ್ಲಿ ಹೀಗೆ ನಿರೂಪಿಸಿದ್ದಾನೆ.

ಜೋ ಜೋ ಗೌರಿ ತಟಾತಕೆ
ಜೋ ಜೋ ಮಲಯ ಧ್ವಜಾತನೀಳಕುಮಾರಿಕೆ
ಜೋ ಜೋ ಮಧುರಾನಾಯಕಿ
ಜೋ ಜೋಜೋ ಜೋಯೆಂದುಂತೂಗಲ್ಬನನೀ ‖ (ವ.೧೭೨)

ಈ ರೀತಿಯ ಜೋಗುಳ ಹಾಡುಗಳು, ಶೋಬಾನೆಯ ಪದಗಳು ಕವಿಯ ಪ್ರತಿಭೆ, ಚಮತ್ಕಾರ ಸೃಷ್ಟಿಯ ದ್ಯೋತಕಗಳೆನಿಸಿವೆ. ಅಲ್ಲದೆ 'ಹಿರಿಯಕ್ಕನೋಜೆಯ ಮನೆಮಂದಿಗೆಲ್ಲ'(ವ.೨೬), 'ಹೊಳೆಯ ದಾಂಟಿದ ಮೇಲಂಬಿಗರ ಗಂಡ'(ವ.೪೦), 'ಮುಂಗೈ ಕಡಗಕೆ ಕನ್ನಡಿಯಾಕೆ'(ವ.೪೦) ಎಂಬ ನಾಣ್ಣುಡಿಗಳನ್ನು ಕವಿಯು ಬಳಸಿಕೊಂಡಿದ್ದಾನೆ. ಭಾಷೆಯ ದೃಷ್ಟಿಯಿಂದ ಇಲ್ಲಿಯ ಸ್ವರವಚನಗಳನ್ನು ಅವಲೋಕಿಸಿದಾಗ ಶುದ್ಧ ದೇಶೀಯ ಭಾಷೆಯಲ್ಲಿ ಕೆಲವು ರಚನೆಗೊಂಡಿದ್ದರೆ, ಇನ್ನೂ ಕೆಲವು ಶುದ್ಧ ಸಂಸ್ಕೃತ ಭಾಷೆಯ ಸ್ತೋತ್ರ ಪದ್ಯಗಳಂತೆ ಕಂಡುಬರುತ್ತವೆ. ಕವಿಗೆ ಎರಡೂ ಭಾಷೆಯ ಮೇಲೆ ಪ್ರಭುತ್ವ ಇರುವುದರಿಂದ ಅನುಕೂಲಕ್ಕೆ ತಕ್ಕಂತೆ ಭಾಷಾ ಪ್ರಯೋಗ ಮಾಡಿದ್ದಾನೆ.

ಈ ಕವಿಯ ಕೆಲವು ಸ್ವರವಚನಗಳು ಸಾಹಿತ್ಯ ಗುಣದಿಂದ ಸೊರಗಿದರೂ, ಸಂಗೀತ ಗುಣದಿಂದ ಅತ್ಯಂತ ಪ್ರಭಾವಿತವಾಗಿವೆ. ಇಲ್ಲಿಯ ವಚನಗಳಲ್ಲಿ ಕಂಡುಬರುವ ರಾಗಗಳು ನಾಟಿ, ಸಾವೇರಿ, ಶಂಕರಾಭರಣ, ಭೈರವಿ, ಮುಖಾರಿ, ಸೌರಾಷ್ಟ್ರ, ಮಧುಮಾಧವಿ, ತೋಡಿ, ಕಲ್ಯಾಣಿ, ನೀಲಾಂಬರಿ, ರೇವಗುಪ್ತಿ, ಕಾಪಿ, ಮಂಗಳ ಕೌಸಿಕೆ, ಮಧ್ಯಮಾವತಿ, ಘಂಟಾರಾಗ, ಗುಂಬಕಾಂಭೋದಿ, ಕೇತಾರಗೌಳ, ಗೌಳಿಪಂತು, ಯರಕಲಕಾಂಬೋದಿ, ಮಾರವಿ, ನವರೋಜು, ಶಂಕರಾಭರಣ, ಬಿಲಹರಿ, ಘಂಟಾರಹಾ, ಉದೆರಾಗ, ಧವಳಾರ, ಘಂಟಾರವ, ಧನ್ಯಾಸಿ, ದೇಶಿ, ಪಂತುವರಾಳಿ, ತೋಡಿ ಅಷ್ಟತಾಳ, ವಸಂತ ಭೈರವಿ ಅಷ್ಟತಾಳ, ರೇವಗುಪ್ತಿ ಅಷ್ಟತಾಳ, ತೋಡಿಯಲ್ಲಿ ಭೇದಪುನ್ನಾಗವರಾಳಿ ತ್ರಿವಡೆ ತಾಳ, ಬೇಗಡಿ, ಪೂರ್ವಿಕಲ್ಯಾಣಿ ಅಷ್ಟತಾಳ, ನವರೋಜ್ ಆದಿತಾಳ, ಸೌರಾಷ್ಟ್ರ ತ್ರಿವುಡೆ ತಾಳ, ವ್ಯಾಲಪದ, ಮೋಹನ ಕಲ್ಯಾಣಿ ಎಂಬ ರಾಗಗಳು ಕವಿಗೆ ಇರುವ ಸಂಗೀತಜ್ಞಾನದ ತಿಳುವಳಿಕೆಯನ್ನು ಹೇಳುತ್ತವೆ. 'ತಕತಕನಾಡಿದನೆ ನಾಟ್ಯವ ತಕತಕನಾಡಿದನೆ ತಕತಕತಕತಕಯೆಂದೆನುತಂ', 'ಅಚ್ಚುತನು ನಂದಿಯು ಮದ್ದಗಳೆಗಳ ನೊಚ್ಚತ ಧಿಂಧಿಂಧಿಮಿಕೆನೆ ನುಡಿಸಲು' ಎಂದು ಹೇಳುತ್ತ.

ಝುಲಿಝುಲಿಝುಲಿ ಝುಲಿಯೆಂದುರೆ ಕಿರುಗೆಜ್ಜೆಗ
ಳಲುಗಲು ಕಾಲಂದುಗೆಗಳು ರವದಿಂ
ಘುಲಘುಲಘುಲವೆನೆ ಘಂಟೆಗಳಬ್ಬರ
ಸಲೆ ಕಿಣಿ ಕಿಣಿ ಕಿಣಿಯೆಂದೊಗುಮಿಗೆ ಸೊಗಸೆ ‖ (ವ.೧೧೪)

ವಾದ್ಯಗಳ ನಾದವನ್ನು ಅನುಕರಿಸಿ ಶಬ್ದ ರೂಪದಲ್ಲಿ ಹಿಡಿದಿಡುತ್ತಾನೆ. ಮತ್ತೊಂದು ವಚನದಲ್ಲಿ 'ನಿಸರಿಗಗಮಪಧನಿಧಪಸಾರಿಸನಿನಿದಧಪಾಮುಮಾಸಗ', 'ಸರಿಗಮಪಧನಿದಧಪಸಾಸ್ಸರಿಸರಿ

ಗದಿರಿಸಾನಿನಿಧರಿಸರಿಪನನಿಧನಿಧಪಮಾಗಮನಿನಿಧಪಧಧಾಮಾಗಗ'(ವ.೧೩೭) ಎಂಬ ಸ್ವರ ಸಂಯೋಜನೆಯ ಸುಸಂಬದ್ಧತೆಯನ್ನು ಗಮನಿಸಿದಾಗ ಇಲ್ಲಿಯ ಸಂಗೀತ ಗುಣ ಪ್ರಧಾನವಾದ, ಕವಿಯ ಸಂಗೀತ ಜ್ಞಾನ ಪರಿಣತಿಯ ಪರಿಚಯು ನಮಗಾಗುತ್ತದೆ. ಹೀಗಾಗಿ ಇಲ್ಲಿಯ ಸ್ವರವಚನಗಳು ಸಾಹಿತ್ಯಿಕ ಗುಣದಲ್ಲಿ ಸೊರಗಿದರೂ, ಸಂಗೀತ ಗುಣದಲ್ಲಿ ಹಿರಿಮೆಯುಳ್ಳವುಗಳಾಗಿವೆ. ಒಟ್ಟಾರೆಯಾಗಿ ಇಮ್ಮಡಿ ಮುರಿಗಾಗುರುಸಿದ್ಧರು ರಚಿಸಿರುವ ಸ್ವರವಚನಗಳ ವೈಶಿಷ್ಟ್ಯತೆಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

೧. ಪ್ರತಿ ಸ್ವರವಚನದ ಆದಿಯಲ್ಲಿ ಹೆಚ್ಚಾಗಿ ಒಂದು ಅಥವಾ ಎರಡು, ಮೂರು, ನಾಲ್ಕು ಪಾದಗಳ ಪಲ್ಲವಿ ಇರುತ್ತದೆ.

೨. ಕೆಲ ಸ್ವರವಚನಗಳು ಇಷ್ಟದೈವವಾದ ಶಿವಲಿಂಗದ ಅಂಕಿತವನ್ನು ಒಳಗೊಂಡಿವೆ.

೩. ಛಂದೋರೂಪದ ದೃಷ್ಟಿಯಿಂದ ನೋಡಿದರೆ ಷಟ್ಪದಿ, ಸಾಂಗತ್ಯ, ಚೌಪದಿ, ವೃತ್ತ, ಕಂದ ಮತ್ತು ಎರಡು, ಮೂರು ಮಾತ್ರೆಯ ಗಣಗಳನ್ನು ಹೊಂದಿವೆ.

೪. ಬಹಳಷ್ಟು ಸ್ವರವಚನಗಳು ಸ್ತೋತ್ರ ಪ್ರಧಾನವಾಗಿದ್ದರೆ, ಕೆಲವು ಸತಿ- ಪತಿಭಾವ, ಸಮಾಜ ವಿಡಂಬನೆ, ಐತಿಹಾಸಿಕ ವ್ಯಕ್ತಿಗಳ ಉಲ್ಲೇಖ, ತತ್ತ್ವಪ್ರಧಾನ ವಿಷಯ, ಮತ್ತು ನೀತಿ ನಿರೂಪಣೆ ಮಾಡುತ್ತವೆ.

೫. ವಸ್ತುವಿಗನುಗುಣವಾಗಿ ತಾತ್ತ್ವಿಕ ಪದಗಳಲ್ಲಿ ಭಾಷೆ ಬಂಧುರವಾಗಿದ್ದರೆ, ನೀತಿಬೋಧಕ ಮತ್ತು ಮಧುರ ಭಕ್ತಿಯಿಂದ ಕೂಡಿದ ರಚನೆಗಳಲ್ಲಿ ಅದು ಸರಳವಾಗಿದೆ. ಕೆಲವು ಬೆಡಗಿನ ಅರ್ಥಗಳಿಂದ ತುಂಬಿವೆ. ಹೀಗಾಗಿ ಶಿಷ್ಟ ಮತ್ತು ದೇಶೀ ಭಾಷೆಯ ಮಿಶ್ರಣ ಇಲ್ಲಿ ಎದ್ದು ಕಾಣುತ್ತದೆ.

೬.ಸಾಹಿತ್ಯ ರೂಪದ ದೃಷ್ಟಿಯಿಂದ ನೋಡಿದರೆ ಸ್ತೋತ್ರ, ಜೋಗುಳ, ಶೋಭಾನ, ಮಂಗಳಾರತಿ ಮೊದಲಾದವುಗಳು ಮೇಳೈಸಿಕೊಂಡಿವೆ.

ಚತುರ್ಭಾಷಾ ವಿಶಾರದನಾದ ಕವಿ ಇಮ್ಮಡಿ ಮುರಿಗಾಗುರುಸಿದ್ಧರ ಸ್ವರವಚನಗಳಲ್ಲಿ ಶಬ್ದಸಂಪತ್ತು, ನಿರೂಪಣಾ ವಿಧಾನದಲ್ಲಿ ಸಹಜತೆ ಹಾಗೂ ಸರಳತೆಗಳು ತುಂಬಿಕೊಂಡಿರುವುದನ್ನು ಗುರುತಿಸುತ್ತೇವೆ. ಸ್ವರವಚನಗಳಲ್ಲಿ ಅಳವಟ್ಟ ವಿಷಯ ವೈವಿಧ್ಯ, ರೂಪ ವೈವಿಧ್ಯ, ರಚನಾ ಬಂಧುರತೆ, ಭಾವದ ಉತ್ಕಟತೆ, ಗೇಯತೆ, ನಿರರ್ಗಳತೆ ಹಾಗೂ ಶೈಲಿಯ ನಿರಾಡಂಬರತೆಗಳು ಇವರೊಬ್ಬ ಮೇಲ್ಮಟ್ಟದ ಅನುಭಾವಿಕ ಕವಿ ಎಂಬುದನ್ನು ಎತ್ತಿ ತೋರಿಸುತ್ತವೆ.

ಪಾದಸ್ತೋತ್ರ

ಸ್ವರವಚನ ರೂಪದಲ್ಲಿನ ೨೦ ಹಾಡುಗಳನ್ನು ಒಳಗೊಂಡಿರುವ ಕೃತಿ. ಮಹಾಕಾವ್ಯಗಳಂತೆ ಗಾತ್ರದಲ್ಲಿ ಹಿರಿದಾಗಿರದೆ ಸತ್ತ್ವದಲ್ಲಿ ಗರಿಮೆಯನ್ನು ತೋರುವ ಕಾವ್ಯ ಪ್ರಕಾರ. ಇಲ್ಲಿ ದೀರ್ಘ ವರ್ಣನೆಗಳಿಗೆ ಆಸ್ಪದವಿರುವುದಿಲ್ಲ. ಇರುವ ಅಲ್ಪಸಮಯದೊಳಗೆ ಸಹೃದಯರನ್ನು ಸೆಳೆಯುವ ಮಹತ್ವ ಇದರದಾಗಿದೆ. ಇದು ಕೇವಲ ಸ್ತುತಿ ಪರವಾದುದರಿಂದ ಅದರಲ್ಲೂ ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮ ಗುರುಗಳಾದ ಮುರಿಗಾ ಶಾಂತವೀರರನ್ನು ಕುರಿತು 'ಶಿವಾಧವನೆಂದು ಪಿಡಿವೆ ಶ್ರೀಚರಪಾದ ಭವ ನಿವಾರಣವ ಮಾಡುವ ಪಾದ' ಎಂದು ಆರಂಭಿಸಿರುವುದರಿಂದ ಈ ಕೃತಿಗೆ 'ಪಾದಸ್ತೋತ್ರ'ವೆಂದು ಕರೆದಿರಬೇಕು. ಎಲ್ಲಾ ಕೃತಿಗಳ ಆರಂಭದಲ್ಲಿ ಮಂಗಳಾಚರಣೆಯ ಪದ್ಯಗಳಿರುತ್ತವೆ. ಆದರೆ ಈ ಪ್ರಕಾರದಲ್ಲಿ ಇಡೀ ಕಾವ್ಯವೇ ಮಂಗಳ ಪದ್ಯಗಳಿಂದ ಕೂಡಿರುತ್ತದೆ. ಸ್ತೋತ್ರಗಳನ್ನು ಮೊದಮೊದಲು ದೈವೀಕೃಪೆಗಾಗಿ ಹಾರೈಸುವ ಪ್ರಾರ್ಥನೆಗಳೇ ವಸ್ತುವಾಗಿದ್ದರೂ, ಕ್ರಮೇಣ ವೀರಶೈವ ತತ್ತ್ವಗಳು, ಶರಣರು, ಶರಣೆಯರು, ಮಠಾಧೀಶರೂ ವಸ್ತುವಾಗಿರುವುದು ಕಂಡುಬರುತ್ತದೆ. ಇಲ್ಲೆಲ್ಲಾ ಕಾಣುವುದು ಪ್ರಾಂಜಲ ಮನದ ಭಕ್ತಿಭಾವ.[೩]

'ಪಾದಸ್ತೋತ್ರ'[೪] ಸಹ 'ಧರಣಿಗಾಧಾರವಾಗಿಹ ಪಾದ| ಶರಣರ ಹೃದಯದೊಳಿಹ ಪಾದ| ಸ್ಮರನ ದೇಹವ ದಹನ ಪಾದ| ಕರಿಸಿದಂತವರ ಸಂಹಾರ ಪಾದ|' ಎಂದು ಗುರುಗಳಾದ ಶಾಂತವೀರರನ್ನೇ ಮುಖ್ಯವಾಗಿಟ್ಟುಕೊಂಡು ಮಂಗಳ ಪದಗಳನ್ನೊಳಗೊಂಡಿದೆ. ಪ್ರತಿಯೊಂದು ಹಾಡಿನ ಅಂತ್ಯದಲ್ಲಿ 'ಶಿವಲಿಂಗ' ಎಂಬ ಅಂಕಿತವು ಬಳಕೆಗೊಂಡಿದೆ. ಶಿವನ ವಿವಿಧ ಅವತಾರಗಳನ್ನು, ಲೀಲೆಗಳನ್ನು ತನ್ನ ಗುರುವಿಗೆ ಆರೋಪಿಸುತ್ತ ಶಿವನ ಸ್ವರೂಪವನ್ನು ಕಾಣಬಯಸುತ್ತಾನೆ. ಒಟ್ಟಾರೆಯಾಗಿ ಇಲ್ಲಿಯ ಮಂಗಳಾರತಿ ಪದ್ಯಗಳೆಲ್ಲವೂ ತನ್ನ `ಗುರುವಿನ ಸ್ತೋತ್ರ ಪದಗಳಾಗಿ ಒಳ್ಳೆಯ ಪ್ರಾರ್ಥನಾ ವಾಣಿಗಳೆನಿಸಿವೆ. ದೈವೀ ಅನುಗ್ರಹಕ್ಕಾಗಿ ಸದಾ ಹಾತೊರೆಯುವ ಮಾನವನ ಅಂತರಂಗದ ಸುಪ್ತಬಯಕೆಯ ದ್ಯೋತಕವೆನಿಸಿ, ಭಕ್ತಿರಸದ ಮಡುಗಳೆನಿಸಿವೆ. ಇದರಲ್ಲಿ 'ಮುರಿಗೆ' ಪದದ ಬಳಕೆಯ ವಿಶೇಷತೆಯನ್ನು ಕವಿಯು ಹೀಗೆ ನಿರ್ವಚಿಸಿರುವನು.

ನೆರೆಭಕ್ತಿಜ್ಞಾನ
ವೈರಾಗ್ಯ ಮುಪ್ಪುರಿಗೂಡಿ
ಶಿರದೊಳು ಮುರಿಮಾಡಿ ಮಾರೊರ್ನದಲಿ ಸುತ್ತಿ
ಮೆರೆವುತಲಿಹ ಕಾರಣದಿ
ಕರುಣಾಕರಪೆಸರ್ವಡೆದ
ಮುರಿಗಾ ಶಾಂತ್ವೀರಸ್ವಾಮಿಯೆಂಬವರಡಿಗಳಿಗೆ || (ವ.೪)

ಕೈವಲ್ಯ ಸೋಪಾನ ನಾಮ್ಯೆಕೋತ್ತರ ಶತಸ್ಥಲ ಸ್ವರವಚನಗಳು

ವೀರಶೈವರ ಅಂಗವಾದ ಅಷ್ಟಾವರಣ, ಪ್ರಾಣವಾದ ಪಂಚಾಚಾರ, ಆತ್ಮವೆಂದು ಪರಿಗಣಿಸಲಾದ ಷಟ್‌ಸ್ಥಲ ತತ್ತ್ವಗಳು ಇವೆಲ್ಲವುಗಳೂ ಸಮಾವೇಶಗೊಂಡು ಸಾಧಕನ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತವೆಂಬುದನ್ನು ವಚನಕಾರರಿಂದ ಹಿಡಿದು, ಅನೇಕ ಕವಿಗಳು ಶಾಸ್ತ್ರೀಯವಾಗಿ ನಿರೂಪಣೆ ಮಾಡಿದ್ದಾರೆ. 'ಲಿಂಗದತ್ತ ನಡೆದಿರುವ ಅಂಗದ, ಅಂಗದತ್ತ ನಡೆದುಬರುತ್ತಿರುವ ಲಿಂಗದ, ನೂರೊಂದು ಘಟ್ಟದ ಘಟನೆಗಳನ್ನು ಪ್ರತಿಪಾದಿಸುವ' ಗುರಿಯನ್ನು ಹೊಂದಿರುವ ಏಕೋತ್ತರ ಶತಸ್ಥಲ ಸಾಹಿತ್ಯವು ಅತ್ಯಮೂಲ್ಯವಾದ ಸಿದ್ಧಾಂತ ಗ್ರಂಥಗಳೆನಿಸಿವೆ. 'ವೀರಶೈವ ಪಾರಿಭಾಷಿಕ ಪದವಾದ 'ಸ್ಥಲ' ತತ್ತ್ವವು ತನ್ನ ಲೀಲೆಗೋಸುಗ ಸ್ವವಿಮರ್ಶಾ ಶಕ್ತಿಯಿಂದ ಅಂಗ-ಲಿಂಗವೆಂದು ಎರಡಾಗಿ, ಒಂದು ಉಪಾಸ್ಯ ಇನ್ನೊಂದು ಉಪಾಸಕವಾಗಿ, ಅಂಗವು ಭಕ್ತಿಯನ್ನಾಶ್ರಯಿಸಿ, ಲಿಂಗವು ಕಲಾಶಕ್ತಿಯನ್ನಾಶ್ರಯಿಸಿ ಲಿಂಗದ ಪ್ರವೃತ್ತಿಮಾರ್ಗವನ್ನು, ಅಂಗದ ನಿವೃತ್ತಿ ಮಾರ್ಗವನ್ನು ಷಟ್ ಸ್ಥಲಗಳ ಹಾಗೂ ಇನ್ನಿತರ ಸ್ಥಲಕಟ್ಟುಗಳ ನಿರೂಪಣೆಯಲ್ಲಿ ಪ್ರತಿಪಾದಿಸುತ್ತಾರೆ'[೫] 'ಸ್ಥಲ' ಎಂಬ ಶಬ್ದ ಸಾಮಾನ್ಯವಾಗಿ 'ಖಾಲಿಜಾಗ' ಎಂಬ ಅರ್ಥದಲ್ಲಿ ಬಳಸಲ್ಪಡುತ್ತದೆ. ಆದರೆ ಶರಣರು ತಮ್ಮ ವಚನ ಸಾಹಿತ್ಯದಲ್ಲಿ ಆಕಾಶ, ಬಯಲು, ಲಿಂಗ, ನಿರ್ಬಯಲು, ನಿಶೂನ್ಯ, ಪರಶಿವ, ಸರ್ವಶೂನ್ಯನಿರಾಲಂಬ, ನಿಷ್ಕಲಲಿಂಗ, ಮುಂತಾದ ಪಾರಿಭಾಷಿಕ ಅರ್ಥಗಳಲ್ಲಿ ಭಾವಿಸಿಕೊಂಡಿದ್ದಾರೆ. ಮಗ್ಗೆಯ ಮಾಯಿದೇವನು

> ಸ್ಥೀಯತೇ ಲೀಯತೆಯಸ್ಮಿನ್ ಮುಕ್ತಿಂ ಸಂಸಾರಪದ್ಧತೇಃ|
> ತದೇವಸ್ಥಲಮಿತ್ಯುಕ್ತಂ ಸ್ಥಲತತ್ತ್ವ ವಿಶಾರದೈಃ||[೬]

ಎಂದು ಯಾವ ಪರಬ್ರಹ್ಮ ಶಿವನಲ್ಲಿ ಮುಕ್ತಿಯು ಇರುವುದೋ ಅದು 'ಸ್ಥಳ', 'ಸ್ಥಳತತ್ತ್ವ'ವೆಂದೂ ಯಾವ ಕಾರಣದಿಂದ ಸಮಸ್ತ ತತ್ತ್ವಗಳಿಗೆ ಆಶ್ರಯವೂ, ತಡೆಯಿಲ್ಲದುದೂ, ಸಚ್ಚಿದಾನಂದ ಸ್ವರೂಪವೂ, ಪರಬ್ರಹ್ಮವೂ ಆಗಿರುತ್ತದೆಯೋ ಅದು 'ಸ್ಥಲ'ವೆಂದು ಕರೆಯಿಸಿಕೊಳ್ಳುತ್ತದೆ.

> ಏಕಮೇವ ಪರಬ್ರಹ್ಮಸಚ್ಚಿದಾನಂದ ಲಕ್ಷಣಮ್ |
> ಶಿವತತ್ತ್ವಂ ಶಿವಾಚಾರ್ಯಃ ಸ್ಥಲಮಿತ್ಯಾಹುರಾತ್ ||

'ಏಕಮೇವಾದ್ವಿತೀಯಂಬ್ರಹ್ಮ' ಎಂಬುದರಿಂದ ಆದಿಯಾಗಿ ಶ್ರುತಿ ಪ್ರಮಾಣದಿಂದ ತನ್ನಂತೆ ಅನ್ಯವಿಲ್ಲದೇ ತಾನೊಂದೇ ಒಂದಾದುದು, ಪರಬ್ರಹ್ಮವೆಂದು ಕರೆಯಿಸಿಕೊಳ್ಳುವುದು, ಸಚ್ಚಿದಾನಂದ ಲಕ್ಷಣದಿಂದ ಕೂಡಿದುದೂ ಆದ 'ಶಿವತತ್ತ್ವ'ವನ್ನು ಶಿವಾಚಾರ್ಯರು ಸ್ಥಲವೆಂದು ಕರೆಯುತ್ತಾರೆ.[೭] ಅಷ್ಟೇ ಅಲ್ಲದೆ 'ಸ್ಥಲ' ಶಬ್ದಕ್ಕೆ 'ಚರಾಚರವಾದ ಈ ಜಗತ್ತು ಯಾವುದರಲ್ಲಿ ಹುಟ್ಟಿ, ಯಾವುದರಲ್ಲಿ

ಲಯವಾಗುತ್ತದೆಯೋ. ಆ ಏಕಮೇವಾದ್ವಿತೀಯವಾದ ಪರಶಿವ ಬ್ರಹ್ಮನನ್ನೇ 'ಸ್ಥಲ' ಎಂದು ಕರೆಯಲಾಗಿದೆ.[೮] ಪ್ರಸ್ತುತ ಕವಿಯೂ ಕೂಡ ಸ್ಥಲವೆಂಬುದಕ್ಕೆ

ಏಕಮೇವಾದ್ವಿತೀಯಂ ಬ್ರಹ್ಮವದು ತಾನೆ
ಸೀಕರಿಸಿತು ಸ್ಥಲವೆಂಬ ನಾಮವನು
ಜೋಕೆಯಾ ಸ್ಥಲವೇ ಮಹದಾದಿಗೆ ನಿಲಯವು
ಶೋಕ ರಹಿತ ಸ್ಥಲವೇ ಲಯಭೂಮಿಯವರೆ ||[೯]

ಎಂದು ಹೇಳುತ್ತಾನೆ. ಒಟ್ಟಾರೆಯಾಗಿ 'ಸ್ಥಲ' ಎನ್ನುವ ಶಬ್ದಕ್ಕೆ ಸ್ಥಾನ, ಮೆಟ್ಟಿಲು ಎಂಬ ರೂಢವಾದ ಅರ್ಥವಿದ್ದರೂ ಸಹಿತ ಸಾಧಕ ತನ್ನ ಕೊನೆಯ ಗುರಿಯನ್ನು ಸೇರುವ ಮಾರ್ಗದಲ್ಲಿ ನಿರ್ಮಿತವಾದ ವಿವಿಧ ಹಂತಗಳು ಎಂದು ಹೇಳಬಹುದು.

ಈ 'ಸ್ಥಲ' ಸಾಹಿತ್ಯ ವಿಚಾರವು ಆಗಮಿಕ ಗ್ರಂಥಗಳಿಂದಲೇ ಆರಂಭಗೊಂಡಿದೆ. ವೀರಶೈವವು ಆಗಮಿಕ ಶೈವಗಳಲ್ಲಿ ಒಂದು ಎಂದು ವಾತುಲಾಗಮವು ತಿಳಿಸುತ್ತದೆ. ಆಗಮಾಂತವನ್ನು ಅಂದರೆ ವೀರಶೈವವನ್ನು ನಿರೂಪಿಸುವ ಆಗಮ ಭಾಗವನ್ನು 'ಶುದ್ಧಾಖ್ಯ ತಂತ್ರ'ವೆಂದು ಮಗ್ಗೆಯ ಮಾಯಿದೇವ, ಶಿವಯೋಗಿಶಿವಾಚಾರ್ಯರು ಹೆಸರಿಸುತ್ತಾರೆ.[೧೦] ಈಗಲೂ ಆಗಮಗಳನ್ನು ವೀರಶೈವ ಧರ್ಮ, ಸಿದ್ಧಾಂತ, ದರ್ಶನ ಹಾಗೂ ನೈತಿಕ ವಿಚಾರಗಳ ಆಕರ ಸಾಹಿತ್ಯವೆಂದು ಒಪ್ಪಿಕೊಳ್ಳಲಾಗಿದೆ. ಪ್ರಸ್ತುತ ಕವಿಯು ತನ್ನ ಕೃತಿಯ ಪ್ರತಿಯೊಂದು 'ಸ್ಥಲ'ದ ಕೊನೆಗೆ ನೀಡುವ ಸಾರಾಂಶ ಪದ್ಯಗಳು ಹಾಗೂ ಅಂತ್ಯದ ನುಡಿಗಳು ಉತ್ತರವಾತುಲಾಗಮದಿಂದ ತೆಗೆದುಕೊಂಡವುಗಳಾಗಿವೆ. ಉದಾಹರಣೆಗೆ

ಉತ್ತರವಾತೊಳೆ - ಭಕ್ತಸ್ಥಲ - ವಸಂತತಿಲಕವೃತ್ತ.
ಮಿಥ್ಯೇವ ತಥ್ಯಮೇವ ಭಾತಮಿದಂ ಶರೀರಂ
ಪ್ರಾಣಾರ್ಥಜಾಲಮಿತಿ ತತ್ರ ನಿವೃತ್ತ ಚಿತ್ತಂ
ಭಕ್ತಿ ಕ್ರಿಯಾ ಚರಣಾಯ್ಯೆವ ತಯಾವಿಭಕ್ತಂ
ಭಕ್ತ ಸ್ಥಲಂ ಭವ ವಿಕಾರ ವಿದೂರ ಮಾಹುಃ||

ಇದೇ ರೀತಿ ಪ್ರತಿಯೊಂದು ಅಂಗ-ಲಿಂಗದ ಸ್ಥಲಗಳ ಅಂತ್ಯ ಪದ್ಯಗಳು ಉತ್ತರವಾತಲಾಗಮದಿಂದ ತೆಗೆದುಕೊಂಡಿದ್ದಾನೆ. ಇಪ್ಪತ್ತೆಂಟು ಶಿವಾಗಮಗಳು ಅಥವಾ ಪ್ರಭುದೇವರು ಹೆಸರಿಸುವಂತೆ 'ದಿವ್ಯಾಗಮಂಗಳು' ಹಾಗೂ 'ವಚನಶಾಸ್ತ್ರ'ವು ವೀರಶೈವವನ್ನು ಪ್ರತಿಪಾದಿಸುವ ಆಕರ ಸಾಹಿತ್ಯವೆಂದು ಪರಿಗಣಿಸಲಾಗಿದೆ ಎಂಬುದು ಪ್ರಾಜ್ಞರ ಪ್ರತಿಪಾದನೆ.[೧೧] ಎಂಬ ಮಾತು ಆಗಮಗಳಿಂದ ಪ್ರೇರಣೆ ಪಡೆದು ನೂರೊಂದು ಸ್ಥಲಗಳನ್ನು ಸುವ್ಯವಸ್ಥಿತವಾಗಿ ತಿಳಿಸುವ 'ಸಿದ್ಧಾಂತ ಶಿಖಾಮಣಿ'ಯಂತಹ ಗ್ರಂಥ ಹಾಗೂ ಆಗಮ ವಿಚಾರಗಳಿಗೆ ಅರ್ಥಗಳನ್ನು ಬರೆದ ಮಗ್ಗೆಯ ಮಾಯಿದೇವನ 'ಶಿವಾನುಭವ ಸೂತ್ರ'ಗಳಂತಹ ಗ್ರಂಥಗಳಿಂದ ಧೃಢಪಡುತ್ತದೆ.

ಶಿವಶರಣರ ವಚನಗಳನ್ನು ವಿವಿಧ ಸ್ಥಲಗಳಡಿಯಲ್ಲಿ ಸಂಕಲಿಸುವ ಕಾರ್ಯ ನಡೆಸಿದವರಲ್ಲಿ 'ಏಕೋತ್ತರಶತಸ್ಥಲ' ಸಂಕಲನಕಾರರು ಒಂದೆಡೆಯಾದರೆ, ಈ ೧೦೧ ಸ್ಥಲಗಳ ಹೆಸರಿನಲ್ಲಿ ಸ್ವತಂತ್ರ ಕೃತಿಗಳನ್ನು ರಚಿಸಿರುವುದು ಇನ್ನೊಂದೆಡೆ ನಡೆದಿದೆ. ಈ ಕಾರ್ಯವು ಹನ್ನೆರಡನೆಯ ಶತಮಾನದಲ್ಲಿ ಆರಂಭವಾಗಿದ್ದರೂ, ಹದಿನೈದನೆಯ ಶತಮಾನದಲ್ಲಿ ತೀವ್ರಗತಿಯ ಸ್ವರೂಪ ಪಡೆಯಿತು. ಈ ಸೃಷ್ಟಿ-ಅನುಸೃಷ್ಟಿ ಕಾರ್ಯಗಳ ಜೊತೆಯಲ್ಲಿ ಏಕೋತ್ತರ ಶತಸ್ಥಲಗಳಿಗೆ ಟೀಕೆ-ವ್ಯಾಖ್ಯೆಗಳನ್ನು ಬರೆದ ತರುವಾಯದ ಕವಿಗಳು 'ಏಕೋತ್ತರಶತಸ್ಥಲ' ಸಾಹಿತ್ಯ ಪ್ರಕಾರದ ವೈವಿಧ್ಯತೆಗೆ ಕಾರಣರಾದರು. ಷಟ್‌ಸ್ಥಲ ಚೌಕಟ್ಟನ್ನೇ ಮೂಲವಾಗಿಸಿಕೊಂಡು ೧೬, ೧೪, ೩೬, ೧೦೧, ೨೧೬ ಸ್ಥಲಗಳವರೆಗೆ ಹಿಗ್ಗಿಸುತ್ತ ಸಾಹಿತ್ಯ ರಚನೆ ಮಾಡಿದ್ದಾರೆ. ಹೀಗೆ ಕನ್ನಡದಲ್ಲಿ ದೊರೆಯುವ ಏಕೋತ್ತರ ಶತಸ್ಥಲ ಕೃತಿಗಳನ್ನು ಈ ಕೆಳಗಿನಂತೆ ವಿಭಜಿಸಬಹುದು.[೨]

I. ಸಂಕಲನ-ಸಂಗ್ರಹಗಳು

೧. ಮಹಾಲಿಂಗದೇವ(ಕ್ರಿ.ಶ.೧೪೩೦) - ಏಕೋತ್ತರ ಶತಸ್ಥಲ.

೨. ಜಕ್ಕಣಾರ್ಯ (ಕ್ರಿ.ಶ.೧೪೩೦) - ಏಕೋತ್ತರ ಶತಸ್ಥಲ(ಸ್ವರವಚನ)

೩. ಚೆನ್ನದಣ್ಣಾಯಕ (-) - ವಚನೈಕೋತ್ತರ ಶತಸ್ಥಲ

೪. ಸಿದ್ಧಲಿಂಗೇಶ್ವರಾಂಕಿತವುಳ್ಳ(?) - ಏಕೋತ್ತರ ಶತಸ್ಥಲ

೫. ಗುಬ್ಬಿಯ ಮಲ್ಲಣಾರ್ಯ (ಕ್ರಿ.ಶ.೧೪೭೫) - ಗಣಭಾಷಿತ ರತ್ನಮಾಲೆ

II. ಸ್ವತಂತ್ರ ಕೃತಿಗಳು

೧. ಮಗ್ಗೆಯ ಮಾಯಿದೇವರು (ಕ್ರಿ.ಶ ೧೪೩೦) - ಪದ್ಯೈಕೋತ್ತರ ಶತಸ್ಥಲ

೨. ಬಸವೇಶ (ಕ್ರಿ.ಶ.೧೬೦೦) - ಪದ್ಯೈಕೋತ್ತರ ಶತಸ್ಥಲ

೩. ಇಮ್ಮಡಿ ಮುರಿಗಾಗುರುಸಿದ್ಧ (ಕ್ರಿ.ಶ.೧೭೨೦) - ಕೈವಲ್ಯ ನಾಮೈಕೋತ್ತರ ಶತಸ್ಥಲ

III. ಏಕೋತ್ತರ ಶತಸ್ಥಲ ಗ್ರಂಥೋಕ್ತ ಕೃತಿಗಳು

೧. ಗುಬ್ಬಿಮಲ್ಲಣಾರ್ಯ (ಕ್ರಿ.ಶ.೧೪೭೫) - ವೀರಶೈವಾಮೃತ ಮಹಾಪುರಾಣ

೨. ಸಿದ್ಧನಂಜೇಶ (ಕ್ರಿ.ಶ.೧೫೦೦) - ಗುರುರಾಜ ಚಾರಿತ್ರ್ಯ

೩. ವಿರಕ್ತತೋಂಟದಾರ್ಯ (ಕ್ರಿ.ಶ.೧೫೬೦) - ಸಿದ್ಧೇಶ್ವರ ಪುರಾಣ

೪. ದ್ಯಾಂಪುರ ಚೆನ್ನಕವಿ (ಕ್ರಿ.ಶ.೧೯೦೦) - ಪುರಾಣ

IV. ಏಕೋತ್ತರ ಶತಸ್ಥಲ ಟೀಕಾ ಕೃತಿಗಳು

೧. ಶ್ರೀ ಗಿರೀಂದ್ರ (ಕ್ರಿ.ಶ.೧೪೩೦) - ಜಕ್ಕಣಾರ್ಯನ ಏ.ಶ.ಸ್ವರ ವಚನಗಳ ವ್ಯಾಖ್ಯಾನ

೨. ಸಿದ್ಧಲಿಂಗೇಶ್ವರಾಂಕಿತ (?) - ಏಕೋತ್ತರ ಶತಸ್ಥಲ ವ್ಯಾಖ್ಯಾನ

ನೂರೊಂದು ಸ್ಥಲದಲ್ಲಿ ಅಂಗಸ್ಥಲ, ಲಿಂಗಸ್ಥಲವೆಂದು ವಿಂಗಡಿಸಲಾಗಿದೆ. 'ಅಂಗ' ಎಂದರೆ ಪಿಂಡ(ವ್ಯಷ್ಟಿ) ಮತ್ತು ಬ್ರಹ್ಮಾಂಡ(ಸಮಷ್ಟಿ)ಯೆಂಬ ಅರ್ಥದಲ್ಲಿ, ಮಹಾಲಿಂಗಸ್ಥಲವು ಅಂಗಸ್ಥಲ ಮತ್ತು ಲಿಂಗಸ್ಥಗಳಲ್ಲಿ ವಿಕಾಸವಾದಂತೆ ಅಂಗವೂ (ಪಿಂಡ ಅಥವಾ ಬ್ರಹ್ಮಾಂಡ) ಕೂಡ ವಿಕಾಸವಾಗುವದನ್ನು ಶಿವಶರಣರು ಹೇಳುತ್ತಾರೆ. ಅಂಗದ ವಿಕಾಸ ಕ್ರಮದಲ್ಲಿ ಅಂಗಸ್ಥಲಗಳು, ಲಿಂಗಸ್ಥಗಳಾಗುತ್ತವೆ, ಲಿಂಗಸ್ಥಲಗಳೇ ಮಹಾಲಿಂಗವಾಗಿ ಪರಿಣಾಮಗೊಳ್ಳುತ್ತವೆ.[೨] ಹೀಗೆ ೧೦೧ ಸ್ಥಲಗಳಿಂದ ಕೂಡಿದ ವಚನಕಾರರ ವಚನಗಳನ್ನು, ಇಲ್ಲವೇ ಸ್ವತಂತ್ರವಾಗಿ 'ಏಕೋತ್ತರ ಶತಸ್ಥಲ' ಕೃತಿಗಳನ್ನು ರಚಿಸುವ ವಿಚಾರದಲ್ಲಿ ಹಲವಾರು ಬದಲಾವಣೆಗಳು ಕಂಡುಬಂದಿರುವುದನ್ನು ಗಮನಿಸಬಹುದು. ಉದಾಹರಣೆಗೆ ಮಹಲಿಂಗದೇವರ ಕೃತಿ ಶರಣರ ವಚನಗಳ ಸಂಕಲನವಾದರೆ, ಜಕ್ಕಣಾರ್ಯರ ಕೃತಿ ಸ್ವರವಚನಗಳ ಸಂಕಲನ, ಗುಬ್ಬಿಯ ಮಲ್ಲಣಾರ್ಯರದು ಇನ್ನೂ ಮುಂದುವರಿದ ಪ್ರಯತ್ನ. ಅವರು 'ಏಕೋತ್ತರ ಶತಸ್ಥಲ'ದ ತಾತ್ವಿಕ ಚೌಕಟ್ಟಿಗೆ ಶರಣರ ವಚನಗಳನ್ನು ಜೋಡಿಸುವುದು (ಹೊಂದಿಸುವುದು) ಮಾತ್ರವಲ್ಲ. ಆ ವಚನಗಳಲ್ಲಿ ಪ್ರತಿಪಾದಿತವಾಗಿರುವ ವಿಷಯಕ್ಕೆ ಪೂರಕವಾಗಿ ಶಿವಾಗಮಗಳು, ಶಿವರಹಸ್ಯ ಇತ್ಯಾದಿ ಗ್ರಂಥಗಳ ಪ್ರಮಾಣದ ಅಧಿಕೃತತೆಯನ್ನು ದೊರಕಿಸಿಕೊಡುವರು. ಇನ್ನು ಮುಂದಿನ ಮೆಟ್ಟಿಲು 'ಏಕೋತ್ತರ ಶತಸ್ಥಲ'ವನ್ನೇ ಆಧಾರವಾಗಿಟ್ಟುಕೊಂಡು ಮಗ್ಗೆಯ ಮಾಯಿದೇವರು 'ಪದ್ಯೈಕೋತ್ತರ ಶತಸ್ಥಲ'ವನ್ನು, ಇಮ್ಮಡಿ ಮುರಿಗಾಗುರುಸಿದ್ಧರು 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ' ಸ್ವರವಚನಗಳನ್ನು ರಚಿಸಿದ್ದಾರೆ.

ಈ ಕೃತಿಯಲ್ಲಿ ಸ್ಥಲಕ್ಕೆ ಒಂದೊಂದರಂತೆ ನೂರೊಂದು ಸ್ಥಲಗಳಿಗೆ ನೂರೊಂದು ಸ್ವರವಚನಗಳು, ಅಲ್ಲದೆ ಪ್ರಾರಂಭದ 'ಸಕೀಲ ಸಂಬಂಧಸ್ಥಲ'ವೆಂಬ ಭಾಗದಲ್ಲಿ ಆರು ಸ್ವರವಚನಗಳನ್ನು ಹೆಚ್ಚಿಗೆ ಹೊಂದಿದೆ. ಈ ಕೃತಿಗೆ ನೀಡಿದ ಹೆಸರು 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ' ಎಂಬುದು ತುಂಬಾ ಅರ್ಥಪೂರ್ಣವಾಗಿದೆ. 'ಕೈವಲ್ಯ' ಎನ್ನುವ ಪಾರಿಭಾಷಿಕ ಪದವನ್ನು ಮೊತ್ತ ಮೊದಲಿಗೆ ನಿಜಗುಣ ಶಿವಯೋಗಿಗಳು ಬಳಸಿದ್ದಾರೆ. ಇಲ್ಲಿ ಕೈವಲ್ಯ ಎಂದರೆ ಮೋಕ್ಷ, ಶಾಶ್ವತಸುಖ, ಮುಕ್ತಿ, ನಿರ್ವಾಣ, ಶ್ರೇಯಸ್, ನಿಶ್ರೇಯಶ್ ಎಂಬ ಅರ್ಥಗಳನ್ನು ಹೊಂದಿದೆ. ಪ್ರತಿಯೊಬ್ಬ ಮನುಷ್ಯನ ಆತ್ಯಂತಿಕ ಗುರಿ ಮೋಕ್ಷ ಸಾಧನೆಯೇ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು

ಅವಲೋಕಿಸಿದಾಗ ಅವುಗಳ ಮೂಲ ಉದ್ದೇಶ ಮೋಕ್ಷ ಪಡೆಯುವುದೇ ಆಗಿದೆ. ಅಂತೆಯೇ ಕಾವ್ಯಮೀಮಾಂಸಕ ಮಮ್ಮಟನು

"ಕಾವ್ಯಂ ಯಶಸ್ಸೇರ್ಥಕೃತೇ ವ್ಯವಹಾರವಿದೇ ಶಿವೇತ ರಕ್ಷತಯೇ
ಸದ್ಯಃ ಪರನಿರ್ವೃತಯೇ ಕಾಂತಾ ಸಮ್ಮಿತ ತಯೋಪದೇಶಯುಜೇ॥"[೧೯]

ಎಂದು ಕಾವ್ಯವು ಯಶಸ್ಸನ್ನು ಗಳಿಸುವುದಕ್ಕೆ, ಧನಲಾಭಕ್ಕೆ, ವ್ಯವಹಾರಜ್ಞಾನಕ್ಕೆ, ಶಿವೇತರನ್ನು ರಕ್ಷಿಸುವುದಕ್ಕೆ, ತಕ್ಷಣ ಪರಮಾನಂದ ದೊರೆಯುವುದಕ್ಕೆ, ಕಾಂತೆಯಂತೆ ಉಪದೇಶ ಗೈಯ್ಯುವುದಕ್ಕೆ ಉಪಯುಕ್ತವಾಗಿದೆ. 'ಶಿವಪದ'ವನ್ನು ಅಂದರೆ ಮೋಕ್ಷ ಪದವಿಯನ್ನು ಗಳಿಸಿಕೊಡುತ್ತದೆ ಎಂದಿದ್ದಾನೆ. ಇಮ್ಮಡಿ ಮುರಿಗಾಗುರುಸಿದ್ಧರ ಕೃತಿಯ ಹೆಸರೇ ಸೂಚಿಸುವಂತೆ 'ಕೈವಲ್ಯ'ವನ್ನು ಅಥವಾ 'ಲಿಂಗಾಂಗ ಸಾಮರಸ್ಯ'ವನ್ನು ಸಂಪಾದನೆ ಮಾಡಿಕೊಳ್ಳಲು ಇಲ್ಲಿಯ ಸ್ಥಲಗಳು 'ಸೋಪಾನ' (ಮೆಟ್ಟಿಲು)ಗಳಾಗಿ ಕಾರ್ಯನಿರ್ವಹಿಸುತ್ತವೆ. ಕವಿಯ ಮುಖ್ಯ ಉದ್ದೇಶ

ಶಿವಜೀವರೇಕತ್ವವದು ವಿಷಯವಾಶಾಸ್ತ್ರ
ಸುವಿಚಾರವೇ ವಿಷಯ ವಿಷಯತೆಯೆ ಸಂಬಂಧ
ಅವಿರಳ ಕೈವಲ್ಯವೊಂದೇ ಪ್ರಯೋಜನವು
ಪ್ರವಿಮಳ ವೀರನಾವವನವನಧಿಕಾರಿ ॥[೨೦]

ಇಲ್ಲಿ ಕೈವಲ್ಯ ಸಾಧನೆಯೇ ಕವಿಯ ಮುಖ್ಯಗುರಿಯೂ ಹೌದು ಮತ್ತು ಕಾವ್ಯ ಪ್ರಯೋಜನವೂ ಹೌದು ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಏಕೋತ್ತರ ಶತಸ್ಥಲದಲ್ಲಿ 'ಅಂಗಸ್ಥಲ, ಲಿಂಗಸ್ಥಲಗಳೆಂಬ ಎರಡು ಭಾಗಗಳಿದ್ದರೂ ಈ ಸ್ಥಲಗಳ ಒಡಲಲ್ಲಿ ಅನುಭಾವಿಯ ಅನುಭವ ಹಾಗೂ ವಿಚಾರಗಳನ್ನು ಆಧರಿಸಿದ ಸ್ಥಲಗಳ ಕಲ್ಪನೆಯಿರುತ್ತದೆ. ಒಬ್ಬರ ಸ್ಥಲ ಕಲ್ಪನೆಯಂತೆ ಮತ್ತೊಬ್ಬರದಿರುವುದಿಲ್ಲ. ಅನುಭಾವಿಗಳ ಈ ಮಾನಸ ಸ್ತರದಲ್ಲಿನ ಕಲ್ಪನಾ ವಿಲಾಸ ಆಶ್ಚರ್ಯಕರವಾಗಿ ತೋರುತ್ತದೆ. ಒಬ್ಬೊಬ್ಬರ ಸ್ಥಲ ಕಲ್ಪನೆಯಲ್ಲೂ ಅವರ ಸೈದ್ಧಾಂತಿಕ ವಿಚಾರ ಸರಣಿಯಿರುತ್ತದೆ.'[೨೧] ಅಂತೆಯೇ ಇಮ್ಮಡಿ ಮುರಿಗಾಗುರುಸಿದ್ಧರ ವೈಶಿಷ್ಟ್ಯ ಅವರ ಸ್ಥಲಕಲ್ಪನೆಯಲ್ಲೂ ವ್ಯಕ್ತವಾಗುತ್ತದೆ.

ಗುರುಸಿದ್ಧರು ಸಾಂಪ್ರದಾಯಕ ರೀತಿಯಲ್ಲಿ ನೇರವಾಗಿ ಸ್ಥಲ ವಿವರಣೆಗೆ ತೊಡಗದೆ 'ಪಿಂಡಸ್ಥಲವು ಪ್ರಾರಂಭವಾಗುವ ಮುನ್ನ ನೂರೊಂದು ಸ್ಥಲವನ್ನು ಅರಿತು ಆಚರಿಸಬೇಕಾದರೆ ಮೂಲಭೂತವಾಗಿ ತಿಳಿದುಕೊಂಡಿರಲೇಬೇಕಾದ ವಿಷಯಗಳನ್ನು 'ಸಕೀಲ ಸಂಬಂಧ ಸ್ಥಲ'ವೆಂಬ ವಿಚಾರವನ್ನು ಪೂರ್ವ ಪೀಠಿಕೆಯಾಗಿ ಮೊದಲ ಭಾಗದಲ್ಲಿ ತಿಳಿಸಿಕೊಡುತ್ತಾರೆ. ಈ ಸ್ಥಲದಲ್ಲಿ ಆರು ಸ್ವರವಚನಗಳು ಬರುತ್ತವೆ. ೨೧ ತೆರನಾದದೀಕ್ಷೆ, ೧೦ ರೀತಿಯ ಪಾದೋದಕ, ೧೧ ತೆರನಾದ ಪ್ರಸಾದಗಳ ವಿವರವನ್ನು ಒಂದನೇ ಸ್ವರವಚನದಲ್ಲಿಯೂ, ಮಂತ್ರಮೂರ್ತಿ ಸ್ವರೂಪವನ್ನು ಎರಡನೇ ಸ್ವರವಚನದಲ್ಲಿಯೂ, ಕ್ರಿಯಾರ್ಪಣ ವಿಧಾನವನ್ನೂ ಮೂರನೇ ಸ್ವರವಚನದಲ್ಲಿಯೂ, ಗುಣತ್ರಯಾದಿ ಸ್ವರೂಪವನ್ನು

ತಿಳಿಸುತ್ತಾ ಪರಶಿವನು ಸಮಸ್ತ ಜೀವಿಗಳನ್ನು ತನ್ನಲ್ಲಿ ಏಕೀಕರಿಸಿಕೊಂಡಿರುವ ವಿಧಾನವನ್ನು ನಾಲ್ಕನೆಯ ವಚನದಲ್ಲಿ, ಅನುಬಂಧ ಸಾಧನ ಸಮಾಧಿಯ ಸ್ವರೂಪವನ್ನು ಐದನೇ ಸ್ವರವಚನದಲ್ಲಿ, 'ಸ್ಥಲ' ನಾಮದಿಂದ ವಿಶಿಷ್ಟನಾದ ಪರಶಿವನ ಸ್ವರೂಪ, ಅಂಗ, ಲಿಂಗ, ವಿವೇಕ ಮೊದಲಾದ ವಿಷಯಗಳನ್ನು ಆರನೇ ಸ್ವರವಚನದಲ್ಲಿ ನಿರೂಪಿಸಿದ ನಂತರ ಅಂಗಸ್ಥಲದ ಒಂದನೇ ಅವಾಂತರ ಸ್ಥಲದಿಂದ ಸಿದ್ಧಾಂತವು ಪ್ರಾರಂಭವಾಗುತ್ತದೆ. ಪ್ರತಿಸ್ಥಲದ ಆದಿಯಲ್ಲಿ ಸೂತ್ರ, ಅಂತ್ಯದಲ್ಲಿ ಗದ್ಯವಿದೆ. ಇಲ್ಲಿಯ ಸ್ವರವಚನಗಳು 'ಶಿವಲಿಂಗ' ಎಂಬ ಅಂಕಿತಗಳಿಂದ ಕೂಡಿವೆ. ಪ್ರತಿಯೊಂದು ಸ್ಥಲದಲ್ಲಿಯೂ ಈ ಕೆಳಗಿನಂತೆ ಉಪವಿಭಾಗಗಳನ್ನು ಕಾಣಬಹುದು.

೧. ಭಕ್ತಸ್ಥಲ : ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಿಸ್ಥಲ, ಉಭಯಸ್ಥಲ, ತ್ರಿವಿಧಸ್ಥಲ, ಚತುರ್ವಿಧ ಸ್ಥಲ, ಸೋಪಾದಿಸ್ಥಲ, ನಿರೂಪಾದಿಸ್ಥಲ, ಸಹಜದಾನಸ್ಥಲ.

೨. ಮಹೇಶ್ವರಸ್ಥಲ: ಮಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಶ್ರಮ ನಿರಸನಸ್ಥಲ, ವಾಗದ್ವೈತ ನಿರಸನಸ್ಥಲ, ಆಹ್ವಾನ ವಿಸರ್ಜನಸ್ಥಲ, ಅಷ್ಟಮೂರ್ತಿನಿರಸನಸ್ಥಲ, ಸರ್ವಗತ ನಿರಸನಸ್ಥಲ, ಶಿವಜಗನ್ಮಯಸ್ಥಲ, ಭಕ್ತದೇಹಿಕ ಲಿಂಗಸ್ಥಲ.

೩. ಪ್ರಸಾದಿಸ್ಥಲ : ಪ್ರಸಾದಿ ಸ್ಥಲ, ಗುರುಮಹಾತ್ಮಸ್ಥಲ, ಲಿಂಗಮಹಾತ್ಮ್ಯಸ್ಥಲ, ಜಂಗಮಮಹಾತ್ಮ್ಯಸ್ಥಲ, ಭಕ್ತಮಹಾತ್ಮ್ಯಸ್ಥಲ, ಶರಣಮಹಾತ್ಮ್ಯಸ್ಥಲ, ಪ್ರಸಾದಮಹಾತ್ಮ್ಯಸ್ಥಲ.


೪. ಪ್ರಾಣಲಿಂಗಿಸ್ಥಲ : ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನೆಸ್ಥಲ, ಶಿವಯೋಗ ಸಮಾಧಿಸ್ಥಲ, ಲಿಂಗನಿಜಸ್ಥಲ, ಅಂಗಲಿಂಗಸ್ಥಲ.

೫. ಶರಣಸ್ಥಲ : ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನಾಸ್ಥಲ.

೬. ಐಕ್ಯಸ್ಥಲ : ಐಕ್ಯಸ್ಥಲ, ಸರ್ವಾಚಾರಸಂಪತ್ತಿಸ್ಥಲ, ಏಕಭಾಜನಸ್ಥಲ, ಸಹಭಾಜನಸ್ಥಲ.

ಹೀಗೆ ಅಂಗಸ್ಥಲದಲ್ಲಿರುವ ವಿವಿಧ ಸ್ಥಲಗಳ ವಿವರಣೆ ಕೊಡುತ್ತಾನೆ. 'ಅನಾದ್ಯನಂತವಾದ ಜನ್ಮರಹಿತವಾದ ಪರಾತ್ಪರ ವಸ್ತುವಾದ 'ಲಿಂಗ' ಅಥವಾ 'ಲಿಂಗಸ್ಥಲ' ಮಹಾಭಕ್ತಿಯಿಂದ ಹೊಂದುವ ವ್ಯಕ್ತಿ ವಿಶೇಷವೇ 'ಅಂಗ' ಅಥವಾ 'ಅಂಗಸ್ಥಲ' ಎಂದು ಹೇಳಲಾಗುತ್ತದೆ. 'ಅಂಗ' ಎಂಬ ಶಬ್ದದಲ್ಲಿ 'ಅಂ' ಎಂಬುದು ಪರಬ್ರಹ್ಮ, ಆ ಪರಬ್ರಹ್ಮನನ್ನು ಹೊಂದಿ ತತ್ವ ಪರಾಯಣವಾದುದೇ 'ಅಂಗಸ್ಥಲ' ವೆಂದು ಅಂಗತತ್ತ್ವ ವಿಶಾರದರ ಮತ. ಅಲ್ಲದೆ 'ಅಂ' ಎಂಬುದು ಸದ್ರೂಪವಾದ ಪರಬ್ರಹ್ಮಬೋಧಕವೂ 'ಗಂ' ಎಂಬುದು 'ಗಚ್ಛತೀ'(ಹೊಂದುತ್ತದೆ) ಎಂಬ ಅರ್ಥಬೋಧಕವೂ ಅಗಿರುವವು. ಆ ಎರಡರಿಂದಲೇ

'ಅಂಗಂ' ಎಂಬುದು ರೂಪಿತವಾಗಿದೆ. ಎಂದರೆ ಪರಬ್ರಹ್ಮವನ್ನು ಹೊಂದಿ ತಾದಾತ್ಮ್ಯ ರೂಪದಿಂದಿರುವುದೇ ಅಂಗ'[೧೨] ಅಂಗದ ವಿಕಾಸಕ್ರಮವನ್ನು ಈ ಕೆಳಗಿನಂತೆ ಸೂಚಿಸಬಹುದಾಗಿದೆ.



ಅಂಗದ ವಿಕಾಸಕ್ರಮದಲ್ಲಿ ಅಂಗಸ್ಥಲಗಳು ಲಿಂಗಸ್ಥಲಗಳಾಗುವ ಬಗೆಯನ್ನು ಷಟ್ ಸ್ಥಲಾನುಸಾರಿಯಾಗಿಯೇ ವಿಂಗಡಿಸಿರುವರು. ಆಚಾರಲಿಂಗಸ್ಥಲ, ಗುರುಲಿಂಗಸ್ಥಲ, ಶಿವಲಿಂಗಸ್ಥಲ, ಜಂಗಮಲಿಂಗಸ್ಥಲ, ಪ್ರಸಾದಿಲಿಂಗಸ್ಥಲ, ಮಹಾಲಿಂಗಸ್ಥಲವೆಂದು ವಿಭಜಿಸಿ ಪುನಃ ಈ ಕೆಳಗಿನಂತೆ ವಿಂಗಡಣೆ ಮಾಡಿರುವರು

೧. **ಆಚಾರಲಿಂಗಸ್ಥಲ :** ಅಂಗಸ್ಥಲದ ಪೀಠಿಕೆ, ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಕ್ರಿಯಾಲಿಂಗಸ್ಥಲ, ಭಾವಲಿಂಗಸ್ಥಲ, ಜ್ಞಾನಲಿಂಗಸ್ಥಲ, ಸ್ವಯಸ್ಥಲ, ಚಲಸ್ಥಲ, ಪರಸ್ಥಲ.


೨. **ಗುರುಲಿಂಗಸ್ಥಲ :** ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ, ಸಕಾಮಸ್ಥಲ, ಅಕಾಮಸ್ಥಲ, ಪರಕಾಮಸ್ಥಲ, ಧರ್ಮಾಚಾರಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲ.

೩. **ಶಿವಲಿಂಗಸ್ಥಲ :** ಶಿವಲಿಂಗಸ್ಥಲ, ಇಂದ್ರಿಯನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ, ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ, ಶಿಷ್ಯಸ್ಥಲ, ಶುಶ್ರೂಷಾಸ್ಥಲ, ಸೇವ್ಯಸ್ಥಲ.

೪. **ಜಂಗಮಲಿಂಗಸ್ಥಲ :** ಜೀವಾತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ, ನಿರ್ದೇಹಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ, ಆದಿಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯ ಪ್ರಸಾದಿಸ್ಥಲ, ದೀಕ್ಷಾ ಪಾದೋದಕಸ್ಥಲ, ಶೀಕ್ಷಾ ಪಾದೋದಕಸ್ಥಲ, ಜ್ಞಾನ ಪಾದೋದಕಸ್ಥಲ.

೫. **ಪ್ರಸಾದಲಿಂಗಸ್ಥಲ :** ಕ್ರಿಯಾನಿಷ್ಪತ್ತಿಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ, ಪಿಂಡಾಕಾಶಸ್ಥಲ, ಬಿಂಗ್ವಾಕಾಶಸ್ಥಲ, ಮಹದಾಕಾಶಸ್ಥಲ, ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲ.

೬. **ಮಹಾಲಿಂಗಸ್ಥಲ :** ಸ್ವೀಕೃತ ಪ್ರಸಾದಸ್ಥಲ, ಶಿಷ್ಟೋದನಸ್ಥಲ, ಚರಾಚರನಾಸ್ತಿಸ್ಥಲ, ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲ, ಸ್ವಪರಾಜ್ಞಸ್ಥಲ, ಭಾವಾಭಾವಾ ನಷ್ಟಸ್ಥಲ, ಜ್ಞಾನಶೂನ್ಯಸ್ಥಲ. ಈ ಲಿಂಗಸ್ಥಲದ ವಿಕಾಸ ಕ್ರಮವನ್ನು ಈ ಕೆಳಗಿನಂತೆ ಸೂಚಿಸಬಹುದಾಗಿದೆ.



ಹೀಗೆ ಅಂಗಸ್ಥಲಗಳ ೪೪ ಮತ್ತು ಲಿಂಗಸ್ಥಲಗಳು ೫೭ ಕೂಡಿ ೧೦೧ ಸ್ಥಲಗಳಾಗುತ್ತವೆ. ಮಹಾಲಿಂಗಕ್ಕೂ ಲಿಂಗಸೃಷ್ಟಿ ಮತ್ತು ಅಂಗಸೃಷ್ಟಿಗಳಿಗೂ ಇರುವ ಅಂಗಾಂಗೀ ಸಂಬಂಧ ಅವಿಚ್ಛಿನ್ನವಾದುದು. ಇದನ್ನು ಪುಷ್ಪ ಪರಿಮಳಗಳ ಸಂಬಂಧವೆಂದು ಪ್ರಾಜ್ಞರು ಹೆಸರಿಸಿದ್ದಾರೆ. ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚನ್ನು ಕನ್ಯೆಯ ಸ್ನೇಹಕ್ಕೆ ಹೋಲಿಸುತ್ತಾರೆ. ಈ ಎರಡನ್ನೂ ನಿವೃತ್ತಿ ಮತ್ತು ಪ್ರವೃತ್ತಿಮಾರ್ಗ ಅಥವಾ ಅಂಗ ಲಿಂಗ ವಿಕಾಸಗಳಿಗೂ ಅನ್ವಯಿಸಬಹುದು. ಮೊದಲನೆಯದು ಲಿಂಗಸೃಷ್ಟಿಯ ನಿರಾಕಾರದಿಂದ ಸಕಾರವಾಗುವುದಾದರೆ, ಎರಡನೆಯದು ಸಾಕಾರದಿಂದ ನಿರಾಕಾರವಾಗುವುದಾಗಿದೆ. ಮಹಾಲಿಂಗವೆಂಬ ಅದ್ವಿತೀಯವಾದ ಒಂದು ೩೬ ಆಗಿ ಸಾಕಾರವಾದರೆ, ಆ ೩೬ರ ಸಾಕಾರವು ೧೦೧ ಸ್ಥಲವಿಡಿದು ನಿರಾಕಾರವಾಯಿತು[೧೪] ಎನ್ನುತ್ತಾರೆ. ಆದರೆ ಸೃಷ್ಟಿ ಕ್ರಮವನ್ನು ವಿವರಿಸುವಾಗ ಎಲ್ಲ ಶರಣರು ಒಂದೇ ಕ್ರಮವನ್ನು ಅನುಸರಿಸಿರುವುದಿಲ್ಲ. ಒಬ್ಬರ ಸ್ಥಲ ಕಲ್ಪನೆಯಂತೆ ಮತ್ತೊಬ್ಬರದಿರುವುದಿಲ್ಲ. ಏಕೆಂದರೆ ಸ್ಥಲಾನುಕ್ರಮದಲ್ಲಿ ಆಗಮಗಳ ಪ್ರೇರಣೆ, ವಚನಗಳ ಪ್ರೇರಣೆ ಎಂದು ಎರಡು ರೀತಿಯಾಗಿರುವುದರಿಂದ ಉದಾಹರಣೆಗೆ ಇಲ್ಲಿ ಆಗಮಗಳಿಂದ ಪ್ರೇರಣೆ ಪಡೆದು ನೂರೊಂದು ಸ್ಥಲಗಳನ್ನು ಪ್ರತಿಪಾದಿಸುವ 'ಸಿದ್ಧಾಂತ ಶಿಖಾಮಣಿ' ಮತ್ತು ವಚನಗಳಿಂದ ಪ್ರೇರಣೆ ಪಡೆದು ಸ್ಥಲಗಳನ್ನು ಪ್ರತಿಪಾದಿಸಿರುವ 'ಬಸವಣ್ಣನವರ ವಚನಗಳು' (ಪ್ರೊ.ಎಸ್.ಎಸ್. ಬಸವನಾಳರು ಸಂಪಾದನೆ) ಎಂಬ ಎರಡು ಕೃತಿಗಳ ಸ್ಥಲ ಜೋಡಣೆಯನ್ನು ಇಲ್ಲಿ ಗಮನಿಸಬಹುದು.

ಸಿದ್ಧಾಂತ ಶಿಖಾಮಣಿಯಲ್ಲಿ : ಷಟ್‌ಸ್ಥಲ ಮತ್ತು ಅದರ ಉಪಾಂಗ ನೂರೊಂದು ಸ್ಥಲಗಳು ಇಲ್ಲಿವೆ. ಇಲ್ಲಿ ಷಟ್‌ಸ್ಥಲ ಪ್ರಾರಂಭ ಭಕ್ತಸ್ಥಲದಿಂದ ೧. ಭಕ್ತಸ್ಥಲ-ಇದರ ಉಪಾಂಗಸ್ಥಲಗಳು, ೨.ಪಿಂಡಸ್ಥಲ, ಪಿಂಡಜ್ಞಾನಸ್ಥಲ, ೩. ಸಂಸಾರಹೇಯಸ್ಥಲ, ೪. ಗುರುಕಾರುಣ್ಯಸ್ಥಲ, ೫. ಲಿಂಗಧಾರಣಸ್ಥಲ, ೬. ವಿಭೂತಿ ಧಾರಣಸ್ಥಲ, ೭. ರುದ್ರಾಕ್ಷಧಾರಣಸ್ಥಲ, ೮. ಪಂಚಾಕ್ಷರೀಸ್ಥಲ, ೯. ಭಕ್ತಮಾರ್ಗಕ್ರಿಯಾಸ್ಥಲ.

ಬಸವಣ್ಣನವರ ವಚನಗಳಲ್ಲಿ : ಸಿದ್ಧಾಂತ ಶಿಖಾಮಣಿಯಂತೆ ಭಕ್ತಸ್ಥಲದಿಂದ ಆರಂಭವಾಗುತ್ತದೆ ೧. ಭಕ್ತಸ್ಥಲ ಇದರ ಉಪಾಂಗಸ್ಥಲಗಳು. ೨. ಪಿಂಡಸ್ಥಲ, ಪಿಂಡಜ್ಞಾನಸ್ಥಲ, ೩. ಸಂಸಾರಹೇಯಸ್ಥಲ, ೪. ಗುರುಕರುಣಸ್ಥಲ, ೫. ತಾಮಸನಿರಸನಸ್ಥಲ, ೬. ಭಕ್ತಜ್ಞಾನಿಸ್ಥಲ, ೭. ಭಕ್ತಿಸ್ಥಲ, ೮. ಭಕ್ತನ ಮಹೇಶ್ವರಸ್ಥಲ, ೯. ಭಕ್ತನ ಪ್ರಸಾದಿಸ್ಥಲ, ೧೦. ಭಕ್ತನ ಪ್ರಾಣಲಿಂಗಿಸ್ಥಲ, ೧೧. ಭಕ್ತನ ಶರಣಸ್ಥಲ, ೧೨. ಭಕ್ತನ ನೈಕ್ಯಸ್ಥಲ.

ಕೈವಲ್ಯ ಸೋಪಾನ ನಾಮ್ಯೆಕೋತ್ತರ ಶತಸ್ಥಲ ಕೃತಿಯಲ್ಲಿ : ೧. ಪಿಂಡಸ್ಥಲ, ೨. ಪಿಂಡಜ್ಞಾನಸ್ಥಲ, ೩. ಸಂಸಾರಹೇಯಸ್ಥಲ, ೪. ಗುರುಕರುಣಸ್ಥಲ, ೫. ಲಿಂಗಧಾರಣಸ್ಥಲ, ೬. ವಿಭೂತಿಸ್ಥಲ, ೭. ರುದ್ರಾಕ್ಷಿಸ್ಥಲ, ೮. ಪಂಚಾಕ್ಷರಿಸ್ಥಲ, ೯. ಭಕ್ತಿಸ್ಥಲ, ೧೦. ಉಭಯಸ್ಥಲ, ೧೧. ತ್ರಿವಿಧಸ್ಥಲ, ೧೨. ಚತುರ್ವಿಧಸ್ಥಲ, ೧೩. ಸೋಪಾದಿಸ್ಥಲ, ೧೪. ನಿರುಪಾದಿಸ್ಥಲ, ೧೫. ಸಹಜದಾನಸ್ಥಲ.

ಈ ಮೂರು ಗ್ರಂಥಗಳಲ್ಲಿ ಭಕ್ತಿ ಸ್ಥಲದ ಉಪಾಂಗಗಳಾಗಿ ೧. ಪಿಂಡಸ್ಥಲ, ೨. ಪಿಂಡಜ್ಞಾನಸ್ಥಲ, ೩. ಸಂಸಾರಹೇಯಸ್ಥಲ, ೪. ಗುರುಕರುಣಸ್ಥಲ, ೫. ವಿಭೂತಿಸ್ಥಲ, ೬. ಪಂಚಾಕ್ಷರಿಯಸ್ಥಲ ಮತ್ತು ೭. ಲಿಂಗಧಾರಣಸ್ಥಲ ಎಂದು ಇರುತ್ತವೆ. ಆದರೆ ಬಸವಣ್ಣನವರ ವಚನಗಳಲ್ಲಿ ಉಲ್ಲೇಖವಾಗದ 'ರುದ್ರಕ್ಷಿ ಧಾರಣಸ್ಥಲ'ವು ಉಳಿದ ಎರಡೂ ಕೃತಿಗಳಲ್ಲಿ ಇದೆ. ಈ ವಿಶೇಷದೊಡನೆ ಇನ್ನೊಂದು ಹೇಳಬೇಕಾದ ಮಾತೆಂದರೆ ಸಿದ್ಧಾಂತ ಶಿಖಾಮಣಿಯಲ್ಲಿಯ ಭಕ್ತಸ್ಥಲದ ಉಪಾಂಗಗಳಿಗಿಂತ ಇಮ್ಮಡಿ ಮುರಿಗಾಗುರುಸಿದ್ಧರ ಮತ್ತು ಬಸವಣ್ಣನವರ ವಚನಗಳಲ್ಲಿ ಸ್ಥಲಗಳ ಉಪಾಂಗಗಳು ಅಧಿಕವಾಗಿವೆ. ಈ ಉಪಾಂಗಗಳ ಸ್ಥಾನಪಲ್ಲಟದೊಂದಿಗೆ ಸ್ಥಲ ವಿಷಯಗಳೂ ಸಹ ಬೇರೆ ಬೇರೆ ಆಗಿರುವುದನ್ನು ಮೇಲಿನ ಉದಾಹರಣೆಗಳಿಂದ ತಿಳಿಯಬಹುದು. ಇನ್ನು ಮುಂದುವರಿದು ಇಂತಹ ಅನೇಕ ವ್ಯತ್ಯಾಸಗಳನ್ನು ಕಲ್ಲುಮಠದ ಪ್ರಭುದೇವರ 'ಲಿಂಗಲೀಲಾ ವಿಲಾಸ ಚಾರಿತ್ರ್ಯ' ಮತ್ತು ಗುಬ್ಬಿಯ ಮಲ್ಲಣಾರ್ಯರ 'ಗಣಭಾಷ್ಯ ರತ್ನಮಾಲೆ' ಎಂಬ ಕೃತಿಗಳನ್ನು ಅವಲೋಕಿಸುವುದರ ಮೂಲಕ ಸ್ಥಲ ವ್ಯತ್ಯಾಸ, ಸ್ಥಾನಪಲ್ಲಟ, ಸ್ಥಲವಿಷಯ ಪ್ರತಿಪಾದನೆ ಮೊದಲಾದವುಗಳನ್ನು ಅರಿಯಬಹುದಾಗಿದೆ.

ಇಮ್ಮಡಿ ಮುರಿಗಾ ಗುರುಸಿದ್ಧರ ಸ್ಥಲ ಕಲ್ಪನೆ, ವಿಷಯ ನಿರೂಪಣೆಯು ಆಗಮಗಳ ಆಧಾರಿತವಾಗಿದೆ. ಮೂಲತಃ ಆಚಾರ್ಯಪರಂಪರೆಯ ಈ ಕವಿಯು ವಿರಕ್ತ(ಶೂನ್ಯಪೀಠ) ಪೀಠದ ಅಧಿಪತಿಯಾಗಿದ್ದರೂ

ಸ್ಥಲ ಜೋಡಣೆಯ ವಿಷಯದಲ್ಲಿ ವಚನಗಳನ್ನು ಆಶ್ರಯಿಸದೆ, ಸಿದ್ಧಾಂತ ಶಿಖಾಮಣಿಯಂತಹ ಕೃತಿಗಳ ಸ್ಥಲ ನಿರೂಪಣೆಗೆ ಹೋಲುವ ೧೦೧ ಸ್ವರವಚನಗಳನ್ನು ಮತ್ತು 'ಸಕೀಲ ಸಂಬಂಧ'ಗಳನ್ನು ವಿವರಿಸುವ ಆರು ಸ್ವರವಚನಗಳನ್ನು ಸ್ವತಂತ್ರವಾಗಿ ರಚಿಸಿದ್ದಾನೆ. ಪ್ರತಿಯೊಂದು ಸ್ಥಲಕ್ಕೂ 'ಇಂತು ಬಹುಜನ್ಮಕೃತ ಸುಕೃತ ವಶದಿಂಪಾಪಂಗಳ್ಪವೆದು ನಿರ್ಮಲಾಂತಃಕರಣವಾದ ದೇಹಿಯಾವನವಗೆ ಪಿಂಡಸ್ಥಲ ಮದರಂತರ್ಗತ ಬ್ರಹ್ಮವೇಸ್ಥಲಮದರಿಂ ಮುಂದೆ ಪಿಂಡಸ್ಥಲವಾದುದು' ಎಂಬಥ ಸೂತ್ರ ಪದ್ಯಗಳಿವೆ. ಪ್ರತಿ ಸ್ಥಲದ ಅಂತ್ಯದಲ್ಲಿ 'ವಾತುಲಾಗಮ'ದ ಒಂದು ಶ್ಲೋಕವನ್ನು ಉದ್ಧರಿಸಲಾಗಿದೆ.

ಆತೋಪ ಭೋಗ್ಯ ವಿಷಯಾಣಿಃ ಸಾವಧಾನಂ
ದ್ರವ್ಯಾಣ್ಯಹಂ ಕೃತಿಮಿತರಖಿಳೈಃಖವಗ್ಯೈಃ
ಲಿಂಗೇಸಮರ್ಪ್ಯಬಹುಶಲಭತೇಪ್ರಸಾದಿರ
ಯತ್ತತ್ಪ್ರಸಾದಿಗದಿತಂ ಗುರುಭಿಸ್ಥಲಂಸ್ಯಾತ್

ಈ ಶ್ಲೋಕಾರ್ಥವು ಆ ಪ್ರಮುಖ ಸ್ಥಲದ ಮುಖ್ಯಾರ್ಥವನ್ನು ಧ್ವನಿಸುತ್ತದೆ. ಪ್ರತಿಸ್ಥಲದ ಅಂತ್ಯದಲ್ಲಿ 'ಇದು ಸದಮಲ ಹೃದಯ ವಿದಿತ ವೀರಮಾಹೇಶ್ವರಾಂಗೀಕೃತ ಕೈವಲ್ಯಸೋಪಾನನಾಮ್ಮೆಕೋತ್ತರ ಶತದೊಳ್ ಪ್ರಸಾದಿ ಸಪ್ತಸ್ಥಲ ವಿವರಣ ಪ್ರಕರಣ ತೃತೀಯಂ ಸಮಾಪ್ತಂ' ಎಂಬ ಗದ್ಯವು ಆಯಾ ಸ್ಥಲಗಳಿಗನುಗುಣವಾಗಿ ಬರುತ್ತದೆ. ಇಲ್ಲಿ ಕವಿಯು ಬಳಸುವ 'ವೀರಮಾಹೇಶ್ವರ ಅಂಗೀಕೃತ' ಎಂಬ ಶಬ್ದ ಮತ್ತು 'ವಾತುಲಾಗಮ'ದ ಪದ್ಯಗಳಿಂದ ಕವಿಯು ಆಚಾರ್ಯ ಪರಂಪರೆಯ ಆಗಮಗಳ ಪ್ರೇರಣೆ ಪಡೆದಿರುವುದು ಸ್ಪಷ್ಟವಾಗುತ್ತದೆ.

ಪ್ರಸ್ತುತ ಕೃತಿಯು ಸ್ವತಂತ್ರ ರಚನೆಯ ಸ್ವರವಚನಗಳಿಂದ ಕೂಡಿದ್ದು, ಸ್ವರವಚನಗಳ ಲಕ್ಷಣಗಳಲ್ಲೊಂದಾದ ಸ್ವರ ಸಂಯೋಜನೆಯ ರಾಗ-ತಾಳಗಳನ್ನು ಹೊಂದಿದೆ. ಕವಿಯು ಇಲ್ಲಿ ಹೆಸರಿಸಿರುವ ಧನ್ಯಾಸಿ, ಶಂಕರಾಭರಣ, ಮಧುಮಾಧವಿ, ಸಾವೇರಿ, ಶ್ರೀರಾಗ, ತೋಡಿ, ಕಾನಡ, ಕಾಂಬೋದಿ, ಕಲ್ಯಾಣಿ, ತೆಲುಗು ಕಾಂಭೋದಿ, ನಾಟಿ, ವ್ಯಾಲಪದ, ನೀಲಾಂಬರಿ, ರೇವಗುಪ್ತಿ, ಕೇತಾರಗೌಳ, ದೇಶಿ, ರಾಮಕೀಲತೆ, ಪಹಾಡಿ, ಸೌರಾಷ್ಟ್ರ, ಸ್ವಯಿಚ್ಛಾ, ಅಸಾವೇರಿ, ಸಂವ್ಯಾತಿವರ್ಣ, ಭೈರವಿ, ಮುಖಾರಿ, ಕಾನಡ, ಅಹರಿ, ಪೂರ್ವಿ, ಪಂಚಾವರಾಳಿ ಎಂಬ ರಾಗಗಳು. ಆದಿತಾಳ, ತ್ರಿವುಡೆತಾಳ, ಅಟ್ಟತಾಳ, ಅಷ್ಟತಾಳ, ರೂಪಕತಾಳ, ಪಂಚಘಾತಮಠ್ಯೆ ಎಂಬ ತಾಳಗಳು ಕವಿಗೆ ಇರುವ ರಾಗ-ತಾಳಗಳ ಸಂಗೀತ ಜ್ಞಾನವನ್ನು ತಿಳಿಸುತ್ತವೆ. ಸಂಗೀತಾಭ್ಯಾಸಿಗಳಿಗೂ ಈ ಕೃತಿಯು ಮಾರ್ಗದರ್ಶನವೀಯುವಂತಿದೆ ಎಂದರೂ ತಪ್ಪಾಗಲಾರದು. ಉದಾಹರಣೆಗೆ ಭಾವಗೀತಾತ್ಮಕವಾದ ಈ ಕೆಳಗಿನ ವಚನವನ್ನು ನೋಡಬಹುದು

ರಾಗ : ಸಾವೇರಿ

ನೀನೊಡೆಯ ನಾ ಬಂಟ| ನಿತ್ಯ ವಿದೆಂದಿರ್ದು
ಮಾನವಳಿದು ನಿಂದ| ಮಧುರೋಕ್ತಿಯಿಂದ ||ಪ||
ಕೊಡುವವನೀಶನು| ಕೊಡಲು ಪಡೆವವನೀಶನು
ಕೊಡಲುಬೇಕಾದುದೆಲ್ಲವು ಪುರಹರನು
ಮಡನೆ ಪಾತ್ರವದಾಗೆ| ಮೃಡಗನ್ಯವಿಲ್ಲಾಗಿ
ಪೊಡವಿಯೊಳಗಭವನಿಗೆಡೆ ಬಿಡುಹಿಲ್ಲವು ||[೧೯]

ಈ ಕೃತಿಯು ಅಂಗ-ಲಿಂಗ ಸ್ಥಲಗಳ ವಿಕಾಸ ಕ್ರಮವನ್ನು ಅರುಹುವ ವಸ್ತುವನ್ನು ಒಳಗೊಂಡಿರುವುದರಿಂದ ಇಲ್ಲಿ ಅನ್ಯವಿಚಾರಗಳು ಸುಳಿಯುವುದೇ ಇಲ್ಲ. ಭಕ್ತಿಯೇ ಇಲ್ಲಿಯ ಮುಖ್ಯವಾದ ವಿಷಯ ಅದನ್ನು ಶ್ರದ್ಧೆಯಿಂದ ಆಚರಿಸಿ ಕೈವಲ್ಯ ಶಿಖರದ ಒಂದೊಂದು ಮೆಟ್ಟಿಲುಗಳನ್ನು ದಾಟುತ್ತ ಸಾಗಬೇಕೆಂಬುದನ್ನು ನಿರೂಪಿಸುವುದೇ ಇದರ ಪ್ರಮುಖ ಗುರಿ. 'ಅಣವ ಮಲ ಮಾಯಾ ಮಲ ಕಾರ್ಮಿಕ ಮಲವೆಂಬ ಮೂರು ಬಗೆಯ ಮಲಗಳು ಜೀವನನ್ನು ಆವರಿಸಿದಾಗ ಅಣವ ಮಲದಿಂದ ಜೀವನಿಗೆ ಅಣುತ್ವವೂ, ಅಲ್ಪತ್ವವೂ ಉಂಟಾಗುತ್ತದೆ. ಮಾಯಾಮಲವು ಜೀವನದಲ್ಲಿ ವ್ಯಾಮೋಹ, ಅಭಿಮಾನಗಳನ್ನು ಉಂಟುಮಾಡುತ್ತದೆ. ಈ ವ್ಯಾಮೋಹ ಅಭಿಮಾನಗಳನ್ನೇ ಅತಿಯಾಗುವಂತೆ ಕಾರ್ಮಿಕ ಮಲವು ಬೆಳೆಸುತ್ತದೆ. ಹೀಗೆ ತ್ರಿಮಲಗಳಿಂದ ಆವೃತನಾದ ಜೀವನು ಕಿಂಚಿತ್ ಕರ್ತೃತ್ವ, ಕಿಂಚಿಜ್ಞತ್ವ, ಅಪೂರ್ಣತ್ವ, ಅನಿತ್ಯತ್ವ, ಅವ್ಯಾಪಕತ್ವಗಳೆಂಬ, ದುರ್ಗುಣಗಳನ್ನು ಹೊಂದುತ್ತಾನೆ'[೨೦] ಇಂತಹ ದುರ್ಗುಣಗಳನ್ನು ಹೊಂದಿರುವ ಜೀವನು(ಅಂಗ) ಮೋಕ್ಷವನ್ನು ಪಡೆಯಲು ಸನ್ಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಈ ಮಲತ್ರಯಗಳಿಂದ ಬಿಡುಗಡೆ ಹೊಂದಿ ಸರ್ವಕರ್ತೃತ್ವ, ಸರ್ವಜ್ಞತ್ವ, ಪರಿಪೂರ್ಣತ್ವ ನಿತ್ಯತೃಪ್ತತ್ವ, ಸರ್ವವ್ಯಾಪಕತ್ವಗಳನ್ನು ಪಡೆದು ಶಿವನಲ್ಲಿ(ಲಿಂಗ) ಒಂದಾಗುವ ಪರಿಯನ್ನೇ ಇಮ್ಮಡಿ ಗುರುಸಿದ್ಧರು ೧೦೧ ಸ್ವರವಚನಗಳಲ್ಲಿ ಅಥವಾ ಸ್ಥಲಗಳಲ್ಲಿ ನಿರೂಪಿಸಿದ್ದಾರೆ.

ವೀರಶೈವರ ಧಾರ್ಮಿಕ ಆಚಾರ ವಿಚಾರ ವಿಷಯಗಳು ಈ ಸ್ಥಲಗಳಲ್ಲಿ ವಿಶೇಷವಾಗಿ ನಿರೂಪಿಸಲ್ಪಡುವವು. 'ಏಕೋತ್ತರ ಶತಸ್ಥಲಗಳು ತಾತ್ವಿಕ ಜ್ಞಾನಕ್ಕೂ ಆಚಾರ ವಿಷಯಕ್ಕೂ ಸಂಬಂಧಪಡುವ ಒಂದು ಸೇತುವೆಯಂತಿದೆ. ಇದರ ಸಹಾಯದಿಂದ ಮನುಷ್ಯನು ಲಿಂಗ ವಿಷಯಕ ಜ್ಞಾನದ ಪ್ರಗತಿಯನ್ನು ಉಂಟು ಮಾಡಿಕೊಳ್ಳತಕ್ಕದ್ದು. ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿಯಲ್ಲಿ ಆಚರಿಸಬೇಕೆಂಬುದರ ವಿವರಣೆ ಹಾಗೂ ಲಿಂಗಸ್ಥಲಗಳಲ್ಲಿ ಈ ಆಚರಣೆಗಳಿಂದ ಯಾವ ವಿಧದ ಪರಿಣಾಮಗಳು ಮನುಷ್ಯನ ಮೇಲೆ ಉಂಟಾಗುತ್ತವೆಂಬುದರ ವಿವರಣೆ ಇದೆ.[೨೧] ಒಟ್ಟಿನಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರು ನೂರೊಂದು ಸ್ಥಲಗಳ ವಿವರಣೆಯನ್ನು ತತ್ತ್ವ-ಸಾಹಿತ್ಯ-ಸಂಗೀತಗಳ ಮುಪ್ಪುರಿಯಿಂದ ಸಂಯೋಜಿಸಿ

ತಮ್ಮ ಆಧ್ಯಾತ್ಮಿಕ ಅನುಭವವನ್ನು ಲೋಕಾನುಭವವಾಗುವಂತೆ, ಅವರು ಕಂಡುಕೊಂಡ 'ಕೈವಲ್ಯ' ಸತ್ಯದ ದರ್ಶನವನ್ನು ತಮ್ಮ ಸ್ಥಲ ಸಂಯೋಜನಾ ಸಾಮರ್ಥ್ಯದ ಮೂಲಕ ಈ ಕೃತಿಯಲ್ಲಿ ಬಿತ್ತರಿಸಿದ್ದಾರೆ.

ಶೂನ್ಯಮಂತ್ರಗೋಪ್ಯ

ಧಾರ್ಮಿಕ ವಿಧಿ-ವಿಧಾನಗಳಾದ ಪೂಜೆ, ಅರ್ಚನೆ, ಅರ್ಪಣೆ, ಪಠಣೆ ಮುಂತಾದ ಕ್ರಿಯೆಗಳು ಶಾಸ್ತ್ರಬದ್ಧವಾಗಿ ಪರಂಪರಾಗತವಾಗಿ ನಡೆದುಕೊಂಡು ಬಂದಿವೆ. ಇವು ಧರ್ಮದಿಂದ ಮತ್ತೊಂದು ಧರ್ಮಕ್ಕೆ ರೂಪ ಬದಲಾವಣೆಯೊಂದಿಗೆ ವ್ಯತ್ಯಾಸಗೊಳ್ಳುತ್ತಿದ್ದರೂ ಅಂತಿಮವಾಗಿ ಮನುಷ್ಯನನ್ನು ಮುಕ್ತಿಯ ಮಾರ್ಗದೆಡೆಗೆ ಕೊಂಡೊಯ್ಯುವ ಸಾಧನಗಳೆನಿಸಿವೆ. ಬಹುಶಃ ಹನ್ನೆರಡನೆಯ ಶತಮಾನದ ವಚನಕಾರರು ಬಹಿರಂಗದಲ್ಲಿ ಸಮಾಜ ಸುಧಾರಣೆಯ ವಿಚಾರಗಳಲ್ಲಿ ತೊಡಗಿಸಿಕೊಂಡಂತೆ, ಅಂತರಂಗದ ಆತ್ಮೋನ್ನತಿಯ ಮಾರ್ಗದಲ್ಲೂ ತಲ್ಲೀನರಾಗಿದ್ದರೆಂಬುದನ್ನು 'ಏಕೋತ್ತರ ಶತಸ್ಥಲ', 'ಮಂತ್ರಗೋಪ್ಯ', 'ಕರಣಹಸಿಗೆ', 'ಮಿಶ್ರಾರ್ಪಣ' ಮುಂತಾದ ಕೃತಿಗಳಿಂದ ತಿಳಿದುಬರುತ್ತದೆ. ಆ ಪರಂಪರೆಯ ಮುಂದುವರಿಕೆಯಂತಿರುವ ವೀರಶೈವ ವಿರಕ್ತ ಸಂಪ್ರದಾಯದಲ್ಲಿ ಮಠಾಧಿಪತಿಗಳನ್ನು ನೇಮಿಸುವ, ನಿರಾಭಾರಿದೀಕ್ಷೆಯನ್ನು ನೀಡುವ ಸಂದರ್ಭದಲ್ಲಿ 'ಸಂಪಾದನೆಯ ಚರಂತಿಗೆ' 'ಶಿವಾನುಭಾವ ಚರಂತಿಗೆ', 'ಮಂತ್ರಾನುಭಾವ ಚರಂತಿಗೆ' ಎಂದು ವಿವಿಧ ರೀತಿಯಲ್ಲಿ ಆಯಾ ಪರಂಪರೆಗಳಿಗನುಗುಣವಾಗಿ 'ಮಂತ್ರಗೋಪ್ಯ', 'ಕರಣಹಸಿಗೆ' ,'ಮಿಶ್ರಾರ್ಪಣ', 'ಉದ್ಧರಣೆ', 'ಏಕೋತ್ತರಶತಸ್ಥಲ', 'ಶೂನ್ಯಸಂಪಾದನೆ' ಮುಂತಾದ ಕಟ್ಟು(ಗ್ರಂಥ)ಗಳನ್ನು ವಿರಕ್ತರುಗಳಿಗೆ ಧರ್ಮಾಧಿಕಾರದ ಕುರುಹುಗಳಾಗಿ ಮತ್ತು ಧರ್ಮಶಾಸ್ತ್ರದ ಸಂಕೇತಗಳಾಗಿ ನೀಡುವ ಪದ್ಧತಿಯು ಇಂದಿಗೂ ಮುಂದುವರಿದಿರುವುದನ್ನು ಗಮನಿಸಿದಾಗ ಈ ಕೃತಿಗಳ ಪ್ರಾಮುಖ್ಯತೆಯ ಅರಿವಾಗುತ್ತದೆ.

'ಅಲ್ಲಮ ಪ್ರಭುಸ್ವಾಮಿಗಳವರ ಸೂತ್ರವಿಡಿದು ಬೋಧಿಸಿದ ಕರಣಹಸಿಗೆ, ಮಿಶ್ರಾರ್ಪಣ ಸ್ಥಲ ಪ್ರಭುದೇವರ ಮಂತ್ರಗೋಪ್ಯ, ಅಕ್ಕಗಳ ಸೃಷ್ಟಿ ವಚನಗಳೆಂಬ ಸರ್ವ ಪ್ರಮಥರು ನಿರೂಪಿಸಿದ ಶಿವಾನುಭವ ಪುಸ್ತಕದ ಸೂತ್ರವಿಡಿದು ನಡೆದು ಬಂದ ಶಿವಾನುಭಾವ ಚರಂತಿಗೆ ಪಟ್ಟದವರು'[೨೨] ಎಂಬ ಹೇಳಿಕೆಯಿಂದ ಈ ಸಂಪ್ರದಾಯವು ಹನ್ನೆರಡನೆಯ ಶತಮಾನದಿಂದಲೇ ಜಾರಿಯಲ್ಲಿರುವುದು ತಿಳಿದುಬರುತ್ತದೆ. ಇವುಗಳಿಗೆ ಧರ್ಮಶಾಸ್ತ್ರಗಳೆಂಬ ಮಾನ್ಯತೆಯನ್ನು ನೀಡಿದ ಕಾರಣ ಅರ್ಥವಿಸ್ತಾರಕ್ಕಾಗಿ, ಗೋಪ್ಯಬೋಧೆಗಾಗಿ ಈ ಕೃತಿಗಳಿಗೆ ವಿಪುಲವಾದ ಟೀಕೆ, ವಿವರಣೆ, ಭಾವಾರ್ಥ, ತಾತ್ಪರ್ಯ, ವಾಚ್ಯ, ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಪ್ರಸ್ತುತ 'ಮಂತ್ರಗೋಪ್ಯ' ಸಾಹಿತ್ಯವು ಹಾಡುಗಬ್ಬವಾಗಿದ್ದು ವೀರಶೈವರಲ್ಲಿ ಮಂತ್ರವನ್ನು ಗುರುವು ಶಿಷ್ಯನಿಗೆ ಕರ್ಣ(ಕಿವಿ)ದಲ್ಲಿ ಗೌಪ್ಯವಾಗಿ ಹೇಳುತ್ತಾನೆ. ಅದನ್ನು

ಬಹಿರಂಗದಲ್ಲಿ ಉಚ್ಚರಿಸಲಾಗುವುದಿಲ್ಲ ಅದಕ್ಕೆ ಈ ಪ್ರಕಾರಕ್ಕೆ 'ಮಂತ್ರಗೋಪ್ಯ'ವೆಂಬ ಹೆಸರು ಬಂದಿದೆ. ಗುರುವು ಶಿಷ್ಯನ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಪರಿವರ್ತಿಸುವ ಕ್ರಿಯೆಯನ್ನು ರಹಸ್ಯವಾಗಿ ಆಚರಿಸುವುದೇ 'ಗೌಪ್ಯ' ಎನಿಸಿಕೊಳ್ಳುತ್ತದೆ. 'ಮಂತ್ರಗೋಪ್ಯ'ವು ತಾರಾವಳಿಯ ಪದಸಂಖ್ಯೆಯನ್ನು ಹೊಂದಿದ್ದರೂ ಇದು ಬೇರೆ ಪ್ರಕಾರದ್ದು. ಈ ಸಾಹಿತ್ಯದ ಲಕ್ಷಣಗಳನ್ನು ಈ ಕೆಳಗಿನಂತೆ ಹೇಳಬಹುದಾಗಿದೆ.

೧. ರಾಗ, ತಾಳ, ಛಂದ ಸಹಿತವಾದ ಹಾಡುಗಳಾಗಿದ್ದು 'ಗೇಯ'ವಾಗಿವೆ.

೨. ಇವುಗಳ ಛಂದಸ್ಸು ಬಹುತೇಕವಾಗಿ ಚೌಪದವಾಗಿರುತ್ತದೆ.

೩. ಇದು ತತ್ತ್ವನಿಷ್ಠವಾದುದರಿಂದ ವಸ್ತುಕವೇ ಹೊರತು ವರ್ಣಕವಲ್ಲ.

೪. ತತ್ತ್ವ ವಿಚಾರವು ಪ್ರತಿಮಾ ಸಂಕೇತಗಳಿಂದ ಪ್ರತಿಪಾದಿತವಾಗಿರುತ್ತದೆ.

೫. ಇಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಕಾಲ್ಪನಿಕ, ವೈಯಕ್ತಿಕ ಕಥಾ ಪ್ರಸಂಗಗಳಾಗಲಿ, ವರ್ಣನೆಗಳಾಗಲಿ ಇರುವುದಿಲ್ಲ.

೬. ಇದೊಂದು 'ಪ್ರಭುಸಂಹಿತೆ'ಯಂತಹ ವಿಧಿಶಾಸ್ತ್ರ. ಭೌದ್ಧಿಕವಾದ ವಿಚಾರವೇ ಹೊರತು ಮನರಂಜನೀಯವಾದುದಲ್ಲ.[೨]

ಈ ಮಂತ್ರಗೋಪ್ಯ ಕೃತಿಗಳಿಗೆ ಧಾರ್ಮಿಕ ರಂಗದಲ್ಲಿ ಗಮನಾರ್ಹವಾದ, ಪೂಜನೀಯವಾದ ಸ್ಥಾನವಿದೆ. ಬಸವಾದಿ ಪ್ರಮಥರು ನಡೆದು-ನುಡಿದು ತೋರಿಸಿದ ಅನುಭಾವ-ಆಚಾರ-ಅರಿವುಗಳನ್ನು ಹೆಚ್ಚಿನ ರೀತಿಯಲ್ಲಿ ಹೊಗಳುವ ಈ ಸಾಹಿತ್ಯ ಪ್ರಕಾರವನ್ನು ಹೀಗೆ ವಿಭಜಿಸಿ ನೋಡಬಹುದಾಗಿದೆ.

೧. ಮಂತ್ರಗೋಪ್ಯ : ಅಲ್ಲಮಪ್ರಭು ಸಿದ್ಧರಾಮನಿಗೆ ಬೋಧಿಸಿದ ೨೭ ನುಡಿಯ ಹಾಡು, ಇದನ್ನು 'ಪ್ರಭುಮಂತ್ರಗೋಪ್ಯ' ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ರಾಗ-ತಾಳ-ಲಯ ಸಹಿತವಾಗಿ ಪಲ್ಲವಿಯನ್ನು ಹೊಂದಿರುವ ೨೭ ಚೌಪದಿಗಳಲ್ಲಿ, ಐದರಲ್ಲಿ-ಧ್ಯಾನಯೋಗ, ಹನ್ನೊಂದರಲ್ಲಿ-ಧಾರಣಯೋಗ, ಏಳರಲ್ಲಿ-ಸಮಾಧಿಯೋಗ, ನಾಲ್ಕರಲ್ಲಿ-ಸ್ತೋತ್ರಗಳೆಂದು ಇಲ್ಲಿಯ ಚೌಪದಿಗಳನ್ನು ವರ್ಗೀಕರಿಸಲಾಗಿದೆ. ಕಲ್ಲುಮಠದ ಪ್ರಭುದೇವರ 'ಮಂತ್ರಗೋಪ್ಯ ತಾತ್ಪರ್ಯಾರ್ಥ' ಈ ಕೃತಿಯಲ್ಲಿ ೨೭ ನುಡಿಗಳಿಗೆ ಅವತಾರಿಕೆ, ಭಾವಾರ್ಥ, ತಾತ್ಪರ್ಯಾರ್ಥಗಳನ್ನು ರಚಿಸಲಾಗಿದೆ. ಪರ್ವತ ಶಿವಯೋಗಿಯ 'ಮಂತ್ರಗೋಪ್ಯ ಪ್ರತಿಪದಾರ್ಥ ಟೀಕು', ಹಡಪದ ಅಪ್ಪಣ್ಣಗಳ 'ಮಂತ್ರಗೋಪ್ಯ'(೨೭ನುಡಿ), ಮಡದಿ ಲಿಂಗಮ್ಮಳ 'ಮಂತ್ರಗೋಪ್ಯ'(೧೧ನುಡಿ), ಸುಂದರಕವಿಯ 'ಮಂತ್ರಗೋಪ್ಯ' (೨೭ ನುಡಿ) ಮುಂತಾದವು ಗಳನ್ನು ಹೆಸರಿಸಬಹುದು. "ಪರಿಪೂರ್ಣ ಚೈತನ್ಯನಪ್ಪ ನಿಃಕಲ ಪರಶಿವ ತತ್ವವು ತಾನೇ ತನ್ನ

ಲೀಲೆಯಿಂದ ಸ್ಥೂಲ, ಸೂಕ್ಷ್ಮ, ಕಾರಣ ಸ್ವರೂಪನಾಗಿ ಜಗದ್ಬ್ರಹ್ಮಾಂಡಗಳಂ ಕಲ್ಪಿಸಿ, ಮರ್ತ್ಯ ಕೈಲಾಸಂಗಳಂ ಮಾಡಿದ ಶಿವನ ಸ್ಥೂಲವೇ ಗುರು, ಸೂಕ್ಷ್ಮವೇ ಲಿಂಗ, ಕಾರಣವೇ ಜಂಗಮ ಸ್ವರೂಪವಾಗಿರ್ಪುದು' ಎಂಬ ವಿಷಯವನ್ನು ಈ ಮಂತ್ರಗೋಪ್ಯವು ಒಳಗೊಂಡಿದೆ.

೨. ಹಿರಿಯ ಮಂತ್ರಗೋಪ್ಯ : ಚನ್ನಬಸವೇಶ್ವರರು ಸಿದ್ಧರಾಮರಿಗೆ ಬೋಧಿಸಿದ ೨೭ ನುಡಿಯ ಹಾಡು. ಇದಕ್ಕೆ ವರತೆಯ ರಾಮಯ್ಯ ಎಂಬುವರು ವಾಚ್ಯವನ್ನು, ವಿರಕ್ತ ತೋಂಟದಾರ್ಯರು ಮತ್ತು ಪರ್ವತ ಶಿವಯೋಗಿಗಳು ವಿಸ್ತೃತವಾದ ವಿವರಣೆ-ಟೀಕುಗಳನ್ನು ಬರೆದಿದ್ದಾರೆ. ಇಲ್ಲಿ ಸಾಧಕನು ತನ್ನ ಶರೀರ ಇಂದ್ರಿಯಾದಿಗಳನ್ನು ಹೇಗೆ ಲಿಂಗ ರೂಪದಲ್ಲಿ ಪರಿವರ್ತಿಸಬೇಕಾಗುವುದೆಂಬುದನ್ನು ಮಾರ್ಮಿಕವಾಗಿ ಪ್ರತಿಪಾದಿಸಲಾಗಿದೆ. ಮಾನವರು ತಮ್ಮ ಪರಮ ಗುರಿಯಾದ ಶಿವನೊಡನೆ ಒಂದಾಗುವುದನ್ನು ಹೇಗೆ ಸಾಧಿಸಬೇಕಾಗುವುದು? ಎಂಬ ಪ್ರಶ್ನೆಗೆ ಸರಿಯಾದ ಉತ್ತರವನ್ನು ದೊರಕಿಸಲು ಚೆನ್ನಬಸವಣ್ಣನವರ ಈ ಕೃತಿಯ ಮೊರೆ ಹೋಗಬೇಕಾಗುತ್ತದೆ.

೩. ಪದಮಂತ್ರಗೋಪ್ಯ : ಹನ್ನೆರಡನೆಯ ಶತಮಾನದ ಶರಣರಿಂದ ಮಂತ್ರಗೋಪ್ಯಗಳ ರಚನೆ ಆರಂಭವಾಗಿದ್ದರೂ, ಅವನ್ನು ಪದಮಂತ್ರಗೋಪ್ಯಕ್ಕೆ ತಿರುಗಿಸಿದ್ದು ಬಹುಶಃ ಹದಿನೈದನೇ ಶತಮಾನದಲ್ಲಿ. ಈ ಕಾಲದ ಸಂಕಲನಕಾರರು ವಚನ ಸಂಕಲನ ಮಾಡಿ ಅವಕ್ಕೆ ಸ್ವರ ಸಂಯೋಜನೆ, ಟೀಕೆ-ಟಿಪ್ಪಣಿ ಗಳನ್ನು ಒದಗಿಸಿದಂತೆ ಅತ್ಯಂತ ಗೌಪ್ಯವಾಗಿದ್ದ ಮಂತ್ರಗೋಪ್ಯಗಳನ್ನು ಕೂಡಾ ಶೋಧಿಸಿ ಟೀಕುಗಳನ್ನು ಬರೆದಿರಬೇಕು. ಕಲ್ಲುಮಠದ ಪ್ರಭುದೇವರು ವೀರಭದ್ರದೇವರ ಮಂತ್ರಗೋಪ್ಯಕ್ಕೆ ಟೀಕೆ ಬರೆಯುತ್ತ ಅಂತ್ಯದಲ್ಲಿ ಹೇಳಿರುವ "ಅಂದು ಆ ಪ್ರಭುದೇವರು ಸಿದ್ಧರಾಮಯ್ಯ ದೇವರಿಗೆ ಉಪದೇಶಿಸಿದ ಅಂದಿನ ಷಟ್ ಸ್ಥಲ ಮಂತ್ರಗೋಪ್ಯ ಇಂದು ಪರಿಯಂತರ ಗೌಪ್ಯವಾಗಿರ್ದು, ಅಂದಿನ ಚಿತ್ಪ್ರಭು ತಾನೇ ಇಂದಿನ ಕಲ್ಲುಮಠದ ಪ್ರಭುವಿನಂಗದಲ್ಲಿ ಒಡೆದು ಮೂಡಿ ಥಳಥಳಿಸಿ ಚಿತ್ಪ್ರಭಾ ಕಳೆಯಂ ಬೆಳಗುತಿರ್ದ ಮಂತ್ರಗೋಪ್ಯದ ೨೭ ವಚನಗಳಿಗೆ ದರ್ಪಣ ಮುಗಿದುದು"[೨] ಈ ಮಾತು 'ಗೋಪ್ಯ' ಸಾಹಿತ್ಯದ ಮೇಲೆ ಹೊಸಬೆಳಕು ಚೆಲ್ಲುತ್ತದೆ. ಇದರಿಂದ ಈ ಸಾಹಿತ್ಯ ಬೆಳಕಿಗೆ ಬಂದ ಕಾಲ ಹದಿನೈದನೆಯ ಶತಮಾನವೆಂಬುದು ನಿಶ್ಚಿತವಾಗುತ್ತದೆ. ಪದ ಮಂತ್ರಗೋಪ್ಯವನ್ನು ಚೆನ್ನಬಸವಣ್ಣನವರು ಸಿದ್ಧರಾಮದೇವನಿಗೆ ಬೋಧಿಸಿದ್ದು, ಆದಿಯಲ್ಲಿ ಸೂತ್ರಗಳನ್ನೊಳಗೊಂಡ, ರಾಗ, ತಾಳ ಸಹಿತವಾದ ಏಳು ಸ್ವರ ವಚನಗಳುಳ್ಳ ಗೀತ ಮಾಲಿಕೆ ಇದಾಗಿದೆ. ಇದರಲ್ಲಿ 'ಮಂತ್ರರಾಜ' ಎನಿಸಿದ 'ಓಂ'ಕಾರ ಪ್ರಣವಾಕ್ಷರದ ರಹಸ್ಯವನ್ನು ನಿರೂಪಿಸುವುದರ ಜೊತೆಗೆ ಅವರು ಅನುಸಂಧಾನದ ಹಾಗೂ ಪರಿಣಾಮದ ಬಗ್ಗೆ ವಿವರಿಸಲಾಗಿದೆ. ಇದಕ್ಕೆ 'ಸ್ಥಲಮಂತ್ರಗೋಪ್ಯ'ವೆಂಬ ಮತ್ತೊಂದು ಹೆಸರಿದೆ.

೪. ನಿರಾಳಮಂತ್ರಗೋಪ್ಯ : ಜಕ್ಕಣಯ್ಯ(ಸು.೧೪೦೦) ಎಂಬುವನಿಂದ ರಚನೆಗೊಂಡ ಈ ಕೃತಿಯಲ್ಲಿ 'ಝೇಂಕಾರ ನಿಜಲಿಂಗ ಪ್ರಭುವೆ' ಎಂಬ ಅಂಕಿತದ ೭೪೦ ವಚನಗಳಿದ್ದು ಮೇಲಿನ 'ಮಂತ್ರಗೋಪ್ಯ'

ಗಳಿಗಿಂತ ಭಿನ್ನವಾಗಿದೆ. ಇದು ಲಿಂಗಾಂಗ ಸಾಮರಸ್ಯದ ರಹಸ್ಯವನ್ನು ಬೆಡಗಿನ ವಚನಗಳಲ್ಲಿ ಹೇಳಲು ಪ್ರಯತ್ನಿಸಿದೆ. ಇವಲ್ಲದೆ ಕೊಟ್ಟೂರು ಬಸವೇಶ್ವರ ಪುರಾಣದಲ್ಲಿ ಉಲ್ಲೇಖಿಸಿದ ಚನ್ನನಂಜೇದೇವರ 'ಚನ್ನಬಸವ ಮಂತ್ರಗೋಪ್ಯದ ಟೀಕೆ', ಮೈಲಾರ ಬಸವಲಿಂಗಶರಣರು ಹೇಳುವ 'ಚನ್ನವೀರಸ್ವಾಮಿಗಳ ಮಂತ್ರಗೋಪ್ಯದ ಟಿಪ್ಪಣಿ' ಮೊದಲಾದವುಗಳನ್ನು ಹೆಸರಿಸಬಹುದಾಗಿದೆ.[೨೫]

ಮೇಲೆ ಉಲ್ಲೇಖಿಸಲಾದ ಎಲ್ಲಾ ಮಂತ್ರಗೋಪ್ಯಗಳಿಂದ ಭಿನ್ನವಾದ ನಿರಾಳ ಮಂತ್ರಗೋಪ್ಯದ ಮಾರ್ಗವನ್ನು ಅನುಸರಿಸಿದ ಕೃತಿ ಇಮ್ಮಡಿ ಮುರಿಗಾಗುರುಸಿದ್ಧರ 'ಶೂನ್ಯಮಂತ್ರಗೋಪ್ಯ'. ಮೊದಲ ನೋಟಕ್ಕೆ ಕೃತಿಯ ಹೆಸರಿಗೂ ಕೃತಿಯಲ್ಲಿನ ವಿಷಯಕ್ಕೂ ಪರಸ್ಪರ ಸಂಬಂಧವಿಲ್ಲದಂತೆ ಕಂಡುಬರುತ್ತದೆ. ಅದಕ್ಕಾಗಿ 'ಮಂತ್ರಗೋಪ್ಯ'ದ ಸಹಜ ಲಕ್ಷಣಗಳ ಕಕ್ಷೆಯಿಂದ 'ನಿರಾಳಮಂತ್ರಗೋಪ್ಯ' ಮತ್ತು 'ಶೂನ್ಯಮಂತ್ರಗೋಪ್ಯ'ಗಳನ್ನು ಹೊರಗಿಡಬೇಕಾಗುತ್ತದೆ.[೨೬] ಸಾಕ್ಷಾತ್ ನಿಷ್ಕಳ ಶಿವನೇ ಶೂನ್ಯ ವಾಚಿಯಾಗಿದ್ದಾನೆ. ಇನ್ನೂ 'ಶೂನ್ಯ ಮಂತ್ರ'ವೆಂದರೆ 'ಷಡಕ್ಷರ ಮಂತ್ರ'ವೆಂದಾಗುತ್ತದೆ. ಕೊನೆಯದಾದ 'ಗೋಪ್ಯ' ಎಂದರೆ ರಹಸ್ಯವೆಂದರ್ಥವಾಗುತ್ತದೆ. ಹೊರನೋಟಕ್ಕೆ 'ಶೂನ್ಯಮಂತ್ರಗೋಪ್ಯ' ಎಂದಾಗ ಸದ್ಗುರುವು ಶಿಷ್ಯನ ಮಾಂಸಪಿಂಡವನ್ನು ದಹಿಸಿ ಮಂತ್ರಪಿಂಡವನ್ನಾಗಿ ಪರಿವರ್ತಿಸಲು ದೀಕ್ಷೆ ಕೊಡುತ್ತಾನೆ. ಕೊನೆಯಲ್ಲಿ ಅಮರಣಾಂತ ರಹಸ್ಯವಾಗಿ ಶ್ರವಣ, ಮನನ, ನಿಧಿ, ಧ್ಯಾಸದ ಮೂಲಕ ಅರಿತು ಆಚರಿಸಲು ಷಡಕ್ಷರಮಂತ್ರವನ್ನು ರಹಸ್ಯವಾಗಿ ಶಿಷ್ಯನ ಕಿವಿಯಲ್ಲಿ ಉಸುರುತ್ತಾನೆ ಎಂಬ ಅಭಿಪ್ರಾಯಕ್ಕೆ ಬರುವುದು ಸಹಜ. ಆದರೆ ವಾಸ್ತವವಾಗಿ ಈ ಕೃತಿಯ ಆಶಯವೇ ಬೇರೆಯಾಗಿದೆ. ಇಡೀ ವೀರಶೈವ ಸಿದ್ಧಾಂತವನ್ನೇ ಅಥವಾ ವೀರಶೈವ ತತ್ವವನ್ನೇ ಶೂನ್ಯವೆಂದು ಭಾವಿಸಿ, ಅದನ್ನು ಗೋಪ್ಯವಾಗಿ ಗುರುಮುಖೇನ ಅನುಷ್ಠಾನಕ್ಕೆ ತಂದುಕೊಳ್ಳಬೇಕೆಂಬ ಆಶಯ ಈ ಕವಿಗೆ ಇರಬೇಕು[೨೭] ಆದುದರಿಂದ ೨೧೯ ವಚನಗಳಲ್ಲಿ 'ಷಟ್ ಸ್ಥಲ, ಅಂಗಸ್ಥಲ, ಲಿಂಗಸ್ಥಲ, ಶಕ್ತಿಗಳು, ಹಸ್ತಗಳು, ಅಷ್ಟವಿಧ ಹಾಗೂ ಏಕಾದಶ ಸಕೀಲಗಳು, ಷಡ್ವಿಧ ಕ್ರಿಯಾರ್ಪಣ, ವರ್ಗಭೇದಗಳು, ಪ್ರಣಮಗಳೂ, ಪಂಚಬ್ರಹ್ಮಗಳು, ಪಂಚಬ್ರಹ್ಮಮಂತ್ರ, ಷಡಂಗಮಂತ್ರ, ಪಂಚಾಸ್ತ್ರ, ಮಹಾಮಂತ್ರ, ಷಟ್‌ಚಕ್ರಗಳು ಅವುಗಳ ಅಧಿದೇವತೆಗಳು ಈ ಮೊದಲಾದವುಗಳ ವಿವರಣೆಯನ್ನು ಇದರಲ್ಲಿ ತರಬಯಸುತ್ತಾನೆ.

ಈ ಕೃತಿಯಲ್ಲಿ ಬರುವ ವಚನಗಳೆಲ್ಲವೂ ಬಿಡಿ ಬಿಡಿಯಾದ ಮುಕ್ತಕಗಳಾಗಿದ್ದರೂ ಮತ್ತೆಯುಂ, ಬಳಿಕ್ಕಂ, ಮತ್ತಂ ಎಂದು ಹೇಳಿಕೊಳ್ಳುತ್ತಾ ಒಂದಕ್ಕೊಂದು ಸರಪಳಿ ರೀತಿಯಲ್ಲಿ ಬೆಳೆದುಕೊಂಡು ಹೋಗಿವೆ. ಪ್ರತಿಯೊಂದು ವಚನದ ಅಂತ್ಯದಲ್ಲಿ ಪರಮಶಿವಲಿಂಗೇಶ್ವರ, ಪರಮಶಿವಲಿಂಗಯ್ಯ, ಪರಮಶಿವಲಿಂಗ, ಪರಶಿವಲಿಂಗಯ್ಯ, ಎಂಬ ಅಂಕಿತವನ್ನು ಬಳಸಿದ್ದಾನೆ. ಈ ಜಗತ್ತಿನ ಸೃಷ್ಟಿಗೆ ಮೂಲಕಾರಣನಾದ, ಲೀಲಾ ಸೂತ್ರಧಾರಿಯಾದ, ಭೇದಾ ಭೇದಕಗಳಿಲ್ಲದ, ನಿರಂಜನಶೂನ್ಯ, ನಿಷ್ಕಳ ಸಕಳ ಎಂದು ನಾನಾ ರೀತಿಯಲ್ಲಿ ಶಿವನನ್ನು ಸ್ಮರಿಸುತ್ತ ಅಂಗ, ಆತ್ಮ, ಪ್ರಾಣ, ಇಂದ್ರಿಯ, ವಿಷಯ,

ತೃಪ್ತಿ ಇವುಗಳು ಲಿಂಗಾತ್ಮಕವೆಂದು ನಿರೂಪಿಸುತ್ತೇನೆ ಎಂದು ಕಾವ್ಯಾರಂಭ ಮಾಡುತ್ತಾನೆ. ಸ್ಥಲವೊಂದೇ ಇದ್ದರೂ ಶಕ್ತಿಯ ಕಾರಣದಿಂದ ಅಂಗಸ್ಥಲ-ಲಿಂಗಸ್ಥಲವೆಂದು ಎರಡು ರೀತಿಯಾಗುತ್ತವೆ. ಅಂಗಸ್ಥಲದಲ್ಲಿ ಭಕ್ತನು ಯಾವ ರೀತಿ ಆಚರಿಸಬೇಕೆಂಬ ವಿವರಣೆ ಇದ್ದರೆ, ಲಿಂಗಸ್ಥಲದಲ್ಲಿ ಈ ಆಚರಣೆಗಳಿಂದ ಮನುಷ್ಯನ ಮೇಲೆ ಯಾವ ಪರಿಣಾಮಗಳಾಗುತ್ತವೆ ಎಂಬುದರ ವಿವರಣೆ ದೊರೆಯುತ್ತದೆ. ಒಟ್ಟಾರೆಯಾಗಿ ಈ ವಚನಗಳಲ್ಲಿ ಬರುವ ವಿಷಯಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ.

ಅಂಗಸ್ಥಲದಲ್ಲಿ ಮೂರು ವಿಧ : ತ್ಯಾಗಾಂಗ, ಭೋಗಾಂಗ, ಯೋಗಾಂಗ

ಲಿಂಗಸ್ಥಲದಲ್ಲಿ ಮೂರು ವಿಧ : ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ

ತ್ಯಾಗಾಂಗದಲ್ಲಿ ಭಕ್ತ-ಮಹೇಶ, ಭೋಗಾಂಗದಲ್ಲಿ ಪ್ರಸಾದಿ-ಪ್ರಾಣಲಿಂಗಿ, ಯೋಗಾಂಗದಲ್ಲಿ ಶರಣ-ಐಕ್ಯ ರೆಂದು ಆರು ವಿಧಗಳಾದರೆ ಇಷ್ಟಲಿಂಗದಲ್ಲಿ ಆಚಾರಲಿಂಗ-ಗುರುಲಿಂಗ, ಪ್ರಾಣಲಿಂಗದಲ್ಲಿ ಶಿವಲಿಂಗ-ಜಂಗಮಲಿಂಗ, ಭಾವಲಿಂಗದಲ್ಲಿ ಪ್ರಸಾದಲಿಂಗ-ಮಹಾಲಿಂಗಗಳೆಂದು ಆರು ವಿಧಗಳಾಗುತ್ತವೆ. ಇವೆಲ್ಲ ಶಿವನ ಮೂರ್ತ ಸ್ವರೂಪವಾದ ವಸ್ತುಗಳು ಎನ್ನುತ್ತಾನೆ.

ಅಂಗಸ್ಥಲದ ವಿವರಣೆ

ಭಕ್ತಸ್ಥಲದಲ್ಲಿ : ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಸ್ಥಲ, ಪಂಚಾಕ್ಷರಿಸ್ಥಲ, ಭಕ್ತಸ್ಥಲ, ಉಭಯಸ್ಥಲ, ತ್ರಿವಿಧಸಂಪತ್ತುಸ್ಥಲ, ಚತುರ್ವಿಧ ಸಾರಾಯ ಸ್ಥಲಗಳೆಂದು ಹದಿನೈದು ವಿಧಗಳು.

ಮಾಹೇಶ್ವರ ಸ್ಥಲದಲ್ಲಿ : ಮಾಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ, ವಾಗದ್ವೈತ ನಿರಸನಸ್ಥಲ, ಆಹ್ವಾನನಿರಸನಸ್ಥಲ, ಅಷ್ಟತನುಮೂರ್ತಿನಿರಸನಸ್ಥಲ, ಸರ್ವಗತನಿರಸನಸ್ಥಲ, ಶಿವಜಗನ್ಮಯಸ್ಥಲ, ಭಕ್ತದೇಹಿಕಸ್ಥಲ ಎಂದು ಒಂಬತ್ತು ವಿಧಗಳು.

ಪ್ರಸಾದಿಸ್ಥಲದಲ್ಲಿ : ಗುರುಮಹಾತ್ಮೆಸ್ಥಲ, ಲಿಂಗಮಹಾತ್ಮೆಸ್ಥಲ, ಜಂಗಮಮಹಾತ್ಮ್ಯಸ್ಥಲ, ಭಕ್ತ ಮಹಾತ್ಮಸ್ಥಲ, ಶರಣಮಹಾತ್ಮೆಸ್ಥಲ, ಪ್ರಸಾದ ಮಹಾತ್ಮೆಸ್ಥಲ ಎಂದು ಏಳುರೀತಿ.

ಪ್ರಾಣಲಿಂಗಿ ಸ್ಥಲ : ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನೆಯಸ್ಥಲ, ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ, ಅಂಗಲಿಂಗ ಸ್ಥಲಗಳೆಂದು ಐದು ವಿಧಗಳು.

ಶರಣಸ್ಥಲದಲ್ಲಿ : ಶರಣಸ್ಥಲ, ತಾಮಸನಿರಸನ ಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನಾ ಸ್ಥಲಗಳೆಂದು ನಾಲ್ಕು ವಿಧ.

ಐಕ್ಯಸ್ಥಲದಲ್ಲಿ : ಐಕ್ಯಸ್ಥಲ, ಸರ್ವಾಚಾರ ಸಂಪತ್ತುಸ್ಥಲ, ಏಕಭಾಜನಸ್ಥಲ, ಸಹಭೋಜನಸ್ಥಲಗಳೆಂದು ನಾಲ್ಕುವಿಧ. ಈ ತೆರನಾಗಿ ಭಕ್ತನ ಹದಿನೈದು, ಮಾಹೇಶ್ವರನ ಒಂಬತ್ತು, ಪ್ರಸಾದಿಯ ಏಳು, ಪ್ರಾಣಲಿಂಗಿಯ ಐದು, ಶರಣನ ನಾಲ್ಕು ಒಟ್ಟು ೪೪ ಅಂಗಸ್ಥಲಗಳು ಕೂಡಿ ರಚಿತವಾದುದೇ ಪರಬ್ರಹ್ಮನ ಪೂರ್ಣಾಂಗವಾಗಿದೆ ಎನ್ನುತ್ತಾನೆ.

ಲಿಂಗಸ್ಥಲದ ವಿವರಣೆ

ಆಚಾರಲಿಂಗದಲ್ಲಿ : ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು, ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ, ಸ್ವಯಂ, ಚರ, ಪರ ಎಂದು ಒಂಬತ್ತು ವಿಧಗಳು

ಗುರುಲಿಂಗದಲ್ಲಿ : ಕ್ರಿಯಾಗಮ, ಭಾವಾಗಮ, ಜ್ಞಾನಾಗಮ, ಸಕಾಯಾ, ಅಕಾಯಾ, ಪರಕಾಯಾ, ಧರ್ಮಾಚಾರ, ಭಾವಾಚಾರ, ಜ್ಞಾನಚಾರಗಳೆಂದು ಒಂಬತ್ತು ವಿಧಗಳು.

ಜಂಗಮಲಿಂಗದಲ್ಲಿ : ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ದೇಹಾಗಮ, ನಿರ್ಭಾವಾಗಮ, ನಷ್ಟಾಗಮ, ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯ ಪ್ರಸಾದಿಗಳೆಂಬ ಒಂಬತ್ತು ವಿಧಗಳು.

ಪ್ರಸಾದಲಿಂಗದಲ್ಲಿ : ದೀಕ್ಷಾ ಪಾದೋದಕ, ಶಿಕ್ಷಾಪಾದೋದಕ, ಜ್ಞಾನ ಪಾದೋದಕ, ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ, ಪಿಂಡಾಕಾಶ, ಬಿಂದ್ವಾಕಾಶ, ಮಹಾದಾಕಾಶ, ಕ್ರಿಯಾಪ್ರಕಾಶ, ಜ್ಞಾನಪ್ರಕಾಶ, ಭಾವಪ್ರಕಾಶಗಳೆಂದು ಹನ್ನೆರಡು ವಿಧಗಳು.

ಮಹಾಲಿಂಗದಲ್ಲಿ : ಪ್ರಸಾದಿಸ್ಥಲ, ನಿಂದುದೋಗರಸ್ಥಲ, ಚರಾಚರನಾಸ್ತಿಸ್ಥಲ, ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲ, ಸ್ವಪರವರಿಯದ ಸ್ಥಲ, ಭಾವಾಭಾವನಷ್ಟಸ್ಥಲ, ಜ್ಞಾನಶೂನ್ಯ ಸ್ಥಲವೆಂದು ಒಂಬತ್ತು ವಿಧಗಳು. ಹೀಗೆ ಲಿಂಗಸ್ಥಲದ ಒಟ್ಟು ೫೭ ಸ್ಥಲಗಳನ್ನು ಹೆಸರಿಸಿ ಅಂಗಸ್ಥಲ ಮತ್ತು ಲಿಂಗಸ್ಥಲಗಳೆಲ್ಲವೂ ಸೇರಿ 'ಏಕೋತ್ತರ ಶತಸ್ಥಲ'ಗಳಾದವೆಂಬುದನ್ನು ಈ ಕೆಳಗಿನ ಪದ್ಯದಲ್ಲಿ ಹೇಳುತ್ತಾನೆ.

> ತತ್ವಮಸಿ ಎಂಬ ಮಹಾವಾಕ್ಯಾರ್ಥಂಗಳೊಳ್ತತ್ತೆನೆಲಿಂಗಂ
> ತ್ವಮೆನೆಯಂಗಮಸಿ ಎನೆ ಲಿಂಗಾಂಗೈಕ್ಯಂ
> ಮತ್ತಂ, ಪೂರ್ವೋಕ್ತಮಾದ ತ್ವಂ ತದಸಿ ತತ್ವಮಸಿ
> ಇವರ ಶಬ್ದವಾಚ್ಯಮಾದಂಗ ಲಿಂಗೈಕ್ಯ ಪ್ರತಿಪಾದಿತ
> ಮಹಾವಾಕ್ಯ ಸೂತ್ರಾಂತರ್ಗತಮಾದಂಗ ಸ್ಥಲಂಗಳ ನಾಲ್ವತ್ತ
> ನಾಲ್ಕಕ್ಕಂ ಲಿಂಗಸ್ಥಲಂಗಳೈವತ್ತೇಳಕ್ಕಂ
> ನೂರೊಂದು ಸ್ಥಲಗಣನೆಯಾದುದಾಯುಭಯಾತ್ಮಕಂ ನೀನೆಗಡಾ,
> ಪರಮಶಿವಲಿಂಗ ಪ್ರಚುರಾನುಕಂಪ ತರಂಗ ||೨೮||

ಲಿಂಗಾಂಗ ಸಂಯೋಗ ವಿಧಿಯಲ್ಲಿ 'ತತ್' ಪದವು ಲಿಂಗವನ್ನು 'ತ್ವಂ'ಪದವು ಅಂಗನನ್ನು(ಜೀವ) 'ಅಸಿ' ಪದವು ಲಿಂಗಾಂಗಳ ಸಂಯೋಗವನ್ನು ಬೋಧಿಸುವುದಾಗಿ ಹೇಳುತ್ತಾನೆ. ಶಿವನು ಎರಡು ಸ್ಥಲಗಳಾಗಿ ಪರಿಣಮಿಸಿದಂತೆ ಅವನಲ್ಲಿರುವ ಶಕ್ತಿಯೂ ಇಬ್ಬಗೆಯಾಗುತ್ತದೆ. ಕಲಾಶಕ್ತಿ, ಭಕ್ತಿಶಕ್ತಿ ಎಂದು ಇವುಗಳಲ್ಲಿ ಕಲಾಶಕ್ತಿಯನ್ನು 'ಶಕ್ತಿ' ಎಂಬುದಾಗಿಯೂ, ಭಕ್ತಿಶಕ್ತಿಯನ್ನು 'ಭಕ್ತಿ' ಎಂಬುದಾಗಿಯೂ ಕರೆಯಲಾಗಿದೆ. 'ಶಕ್ತಿ' ಲಿಂಗವನ್ನಾಶ್ರಯಿಸುತ್ತದೆ. 'ಭಕ್ತಿ' ಅಂಗವನ್ನಾಶ್ರಯಿಸುತ್ತದೆ. 'ಶಕ್ತಿ' ಪ್ರವೃತ್ತಿ ಪರವಾದುದು. 'ಭಕ್ತಿ' ನಿವೃತ್ತಿ ಪರವಾದುದು ಅಂದರೆ ಭಕ್ತಿಯನ್ನಾಶ್ರಯಿಸಿ 'ಅಂಗ' ಮುಕ್ತಿಯ ಕಡೆಗೆ ನಡೆಯುತ್ತದೆ. ಭಕ್ತಿ-ಶಕ್ತಿಗಳಲ್ಲಿನ ಸೂಕ್ಷ್ಮವಾದ ವ್ಯತ್ಯಾಸ ಗುರುತಿಸಲು ದೀಪದ ಉದಾಹಣೆಯೊಂದನ್ನು ಕೊಡಲಾಗಿದೆ. ಮಹಾಜ್ವಾಲೆಯಲ್ಲಿ ಹೊಗೆಯ ಮಿಶ್ರಣದಿಂದ ಮಂದ ಪ್ರಕಾಶ, ಹೊಗೆಯ ಮಿಶ್ರಣವಿಲ್ಲದ ದೀಪದಲ್ಲಿ ಉತ್ತಮ ಪ್ರಕಾಶ ಕಾಣುವಂತೆ ಲಿಂಗಗತ ಶಕ್ತಿಯಲ್ಲಿ ಸೃಷ್ಟಿಯನ್ನು ಸೃಜಿಸಬೇಕೆಂಬ ವಾಸನೆಯಿದ್ದುದರಿಂದ ಅದನ್ನು ಹೊಗೆ ಮಿಶ್ರಿತ ದೀಪಕ್ಕೆ ಹೋಲಿಸಿದರೆ, ಅಂಗಗತ ಭಕ್ತಿಯಲ್ಲಿ ನಿವೃತ್ತಿ ಪರ ನಿರ್ವಾಸನಾ ಭಾವವಿದ್ದುದರಿಂದ ಅದನ್ನು ಸುಪ್ರಕಾಶಕ್ಕೆ ಹೋಲಿಸಲಾಗಿದೆ.[೨೮] ಇವುಗಳಲ್ಲಿರುವ ಅಂತರ ಹೀಗಿದೆ.[೨೯]

ಶಕ್ತಿ	ಭಕ್ತಿ
೦೧. ಜ್ವಾಲೆ (ಹೊಗೆಯಿದೆ)	ದೀಪ (ಪ್ರಕಾಶ)
೦೨. ಶಕ್ತಿ (ಸವಾಸನಾ)	ಭಕ್ತಿ (ನಿರ್ವಾಸನಾ
೦೩.	ಮಹತ್ತರ, ಶುದ್ಧ, ಸೂಕ್ಷ್ಮ ಸಚ್ಚಿದಾನಂದರೂಪ, ಭೋಗ
೦೪. ಭೋಗಪ್ರದ	ಮೋಕ್ಷಪ್ರದ
೦೫. ಪ್ರವೃತ್ತಿ	ನಿವೃತ್ತಿ
೦೬. ಪ್ರಪಂಚ ಸೃಷ್ಟಿ	ಪ್ರಪಂಚಲಯ
೦೭. ಶಕ್ತಿ ವೈಚಿತ್ರ್ಯರೂಪ	ಭಕ್ತಿ ವೈಚಿತ್ರ್ಯರೂಪ
೦೮. ರೂಪವಿಲ್ಲದ್ದು ರೂಪಗೊಳ್ಳುತ್ತದೆ	ರೂಪನಿರೂಪವಾಗುತ್ತದೆ
೦೯. ಪ್ರಪಂಚಾಗುವ ಬಯಕೆ	ಪ್ರಪಂಚಲಯಾಪೇಕ್ಷೆ
೧೦. ಅಧೋಮುಖ	ಊರ್ಧ್ವಮುಖ
೧೧. ಸಮಾಯ	ನಿರ್ಮಾಯೆ
೧೨. ಉಪಾಸ್ಯತ್ವ	ಉಪಾಸಕತ್ವ
೧೩. ಲಿಂಗಸ್ಥಲಾಶ್ರಯ	ಅಂಗಸ್ಥಲಾಶ್ರಯ
೧೪. ಲಿಂಗಸ್ಥಲದಲ್ಲಿ ಶಿವ	ಅಂಗಸ್ಥಲದಲ್ಲಿ ಜೀವ

ಇದೇ ತತ್ವವನ್ನು ವೇದದಲ್ಲಿ ಶಿವ-ಜೀವ-ಐಕ್ಯವೆಂದು ಆಗಮಗಳಲ್ಲಿ ಶಿವ-ಶಕ್ತಿ-ಐಕ್ಯವೆಂದು, ಉಳಿದ ಕಡೆಗೆ ಪುರುಷ-ಪ್ರಕೃತಿ-ಐಕ್ಯವೆಂದು ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆಯೇ ಹೊರತು ಅನ್ಯ ಭಾವಾರ್ಥಗಳಿಂದಲ್ಲ ಎನ್ನುತ್ತ ಷಟ್‌ಸ್ಥಲ ಸಕೀಲಗಳನ್ನು ಹೆಸರಿಸುತ್ತಾನೆ.

ಕಾರಣ ಷಡಂಗಗಳು : ಸರ್ವಜ್ಞಶಕ್ತಿ, ತೃಪ್ತಿಶಕ್ತಿ, ಅನಾದಿಶಕ್ತಿ, ಪ್ರಭೇದಶಕ್ತಿ, ಲುಪ್ತಶಕ್ತಿ, ಅನಂತಶಕ್ತಿ.

ಸೂಕ್ಷ್ಮ ಷಡಂಗಗಳು : ಭಕ್ತಿ, ಕರ್ಮಕ್ಷಯ, ಬುದ್ಧಿವಿಚಾರ, ದರ್ಪ, ಸಂಕ್ಷಯ, ಸಮ್ಯಜ್ಞಾನ

ಸ್ಥೂಲ ಷಡಂಗಗಳು : ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ಇವುಗಳಿಗೆ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಪರಶಿವ ಎಂಬುವುಗಳೇ ಪರ್ಯಾಯವಾದ ನಾಮಗಳು. ಇವಕ್ಕೆ ಐಶ್ವರ್ಯ, ಸಮಗ್ರ, ವೀರ್ಯಶ್ರೀ, ಯಶೋಜ್ಞಾನ, ವೈರಾಗ್ಯಗಳೆ ಶಬ್ದ-ವಾಚ್ಯಗಳಿಂದೊಡಗೂಡಿದ ಷಡ್ಗುಣಗಳು ಎಂದು ಹೇಳುತ್ತಾನೆ. ಅವಲ್ಲದೆ ಅಂಗ, ಹಸ್ತ, ಶಕ್ತಿ, ಭಕ್ತಿ, ಲಿಂಗಮುಖ ಅರ್ಪಿತ ಪ್ರಸಾದಗಳಿಗೆ ವಿವರಣೆಗಳನ್ನು ಹೇಳುತ್ತೇನೆ ಎಂದು ಅಂಗಮೆನೆ 'ತ್ವಂಪದ' ವಾಚ್ಯ ಅದರಲ್ಲಿ ಕಾರಣ, ಸೂಕ್ಷ್ಮ, ಸ್ಥೂಲವೆಂದು ಮೂರು ಬಗೆಯಲ್ಲಿ ಒಳಗೊಳ್ಳುವ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಸ್ಥಲಗಳು ಹಾಗೂ 'ತತ್ಪದ' ವಾಚ್ಯವಾದ ಲಿಂಗದಲ್ಲಿ ಆಚಾರಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಮತ್ತು ಭಕ್ತಿಯ 'ಪದವಾಚ್ಯ'ದಲ್ಲಿ ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸ ಇವುಗಳು ಕೂಡಿ ಅಂಗ-ಲಿಂಗ ಸಮರಸವಾಗಿದೆ. ಈ ಸಮರಸ ಭಕ್ತಿಯಲ್ಲಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿಗಳು ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯಗಳೆಂಬ ಮುಖಗಳು. ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವಗಳೆಂಬ ಹಸ್ತಗಳು. ಇವುಗಳಿಂದೊಡಗೂಡಿದ ಆರು ವಿಧದ ಪ್ರಸಾದಗಳನ್ನು ಅರ್ಪಿಸಲು ಆ ಶಿವನು ತತ್ಪ್ರಸಾದ ಸ್ವರೂಪನಾಗಿರುವನು.

ಏಕಾದಶವಿಧ ಸಕೀಲಗಳ ವಿವರಣೆ

ಸ್ಥಲಗಳ ಸಂಬಂಧವನ್ನು ತಿಳಿಯಪಡಿಸುವಂತವುಗಳು ಸಕೀಲಗಳು. ಈ ಸಕೀಲಗಳ ಮೂಲಕವೇ ಸ್ಥಲಗಳ ಸಂಬಂಧವನ್ನು ಅರಿತುಕೊಂಡು ಆಚರಿಸಬೇಕಾಗುತ್ತದೆ. ತತ್ವ, ಅಂಗ, ಹಸ್ತ, ಸಾದಾಖ್ಯ, ಶಕ್ತಿ, ಲಿಂಗ, ಕಲೆ, ಮುಖ, ದ್ರವ್ಯ, ಭಕ್ತಿ, ಮಂತ್ರಗಳೆಂಬ ಹನ್ನೊಂದು ಸಕೀಲಗಳು ಒಂದೊಂದು ಆರಾಗಿ ಒಟ್ಟು ಅರವತ್ತಾರು ತೆರನಾದ ಅರ್ಪಣ ಸಕೀಲಗಳಾಗುತ್ತವೆ.

ತತ್ವ	ಅಂಗ	ಹಸ್ತ	ಸಾದಾಖ್ಯ	ಶಕ್ತಿ	ಲಿಂಗ	ಕಲೆ	ಮುಖ	ದ್ರವ್ಯ	ಭಕ್ತಿ	ಮಂತ್ರ
ಪೃಥ್ವಿ	ಭಕ್ತ	ಸುಚಿತ್ತ	ಕರ್ಮ	ಕ್ರಿಯಾ	ಆಚಾರ	ನಿವೃತ್ತಿ	ಘ್ರಾಣ	ಗಂಧ	ಶ್ರದ್ಧೆ	ನ
ಅಪ್ಪು	ಮಾಹೇಶ	ಸುಬುದ್ಧಿ	ಕರ್ತೃ	ಜ್ಞಾನ	ಗುರು	ಪ್ರತಿಷ್ಠೆ	ಜಿಹ್ವೆ	ರಸ	ನಿಷ್ಠೆ	ಮ
ತೇಜ	ಪ್ರಸಾದಿ	ನಿರಹಂಕಾರ	ಮೂರ್ತಿ	ಇಚ್ಛಾ	ಶಿವ	ವಿದ್ಯೆ	ನೇತ್ರ	ರೂಪ	ಸಾವಧಾನ	ಶಿ
ವಾಯು	ಪ್ರಾಣಲಿಂಗ	ಸುಮನ	ಅಮೂರ್ತಿ	ಆದಿ	ಜಂಗಮ	ಶಾಂತಿ	ತ್ವಕ್ಕು	ಸ್ಪರ್ಶ	ಅನುಭಾವ	ವಾ
ಆಕಾಶ	ಶರಣ	ಸುಜ್ಞಾನ	ಶಿವ	ಪರಾ	ಪ್ರಸಾದ	ಶಾಂತ್ಯಾತೀತ	ಶ್ರೋತ್ರ	ಶಬ್ದ	ಆನಂದ	ಯ
ಆತ್ಮ	ಐಕ್ಯ	ಸದ್ಭಾವ	ಮಹಾ	ಚಿಚ್ಛಕ್ತಿ	ಮಹಾ	ಶಾಂತ್ಯಾತೀತೋತ್ತರ	ಹೃದಯ	ತೃಪ್ತಿ	ಸಮರಸ	ಓಂ

ರೂಪ, ದ್ರವ್ಯ, ಪದಾರ್ಥ, ಸ್ನಾನ, ಮಂತ್ರ, ತೃಪ್ತಿಗಳೆಂಬ ಷಡ್ವಿಧ ಕ್ರಿಯಾರ್ಪಣವು ಭೋಜ್ಯವೆಂಬ ರೂಪವನ್ನು, ಕಠಣವೆಂಬ ದ್ರವ್ಯವನ್ನು, ಗಂಧವೆಂಬ ಪದಾರ್ಥವನ್ನು, ಕ್ಷೀರಸ್ನಾನವನ್ನು 'ಓಂ ಹ್ರಾಂ ನಮಃಶಿವಾಯ' ಎಂಬ ಮಂತ್ರದಿಂದ ಆಚಾರಲಿಂಗಕ್ಕೆ ಅರ್ಪಿಸುವುದು. ಪಾನ್ಯವೆಂಬ ರೂಪವನ್ನು, ಮೃದುವೆಂಬ ದ್ರವವನ್ನು, ರಸವೆಂಬ ಪದಾರ್ಥವನ್ನು, ದಧಿಸ್ನಾನವನ್ನು ಓಂ ಹ್ರೀಂ ನಮಃಶಿವಾಯ ಎಂಬ ಮಂತ್ರದಿಂದ ಕಟಿಯಲ್ಲಿಯ ಗುರುಲಿಂಗಕ್ಕೆ ಅರ್ಪಿಸುವುದು. ಭಕ್ಷ್ಯವೆಂಬ ರೂಪನ್ನು, ಉಷ್ಣವೆಂಬ ದ್ರವ್ಯವನ್ನು, ರೂಪು ಎಂಬ ಪದಾರ್ಥವನ್ನು, ಘೃತಸ್ನಾನವನ್ನು 'ಓಂ ಹ್ರೂಂ ನಮಃ ಶಿವಾಯ' ಎಂಬ ಮಂತ್ರದಿಂದ ವರ್ತುಳದಲ್ಲಿಯ ಶಿವಲಿಂಗಕ್ಕೆ ಸಮರ್ಪಿಸುವುದು. ಚೋಹ್ಯವೆಂಬ ರೂಪನ್ನು, ಶೈತ್ಯನೆಂಬ ದ್ರವವನ್ನು, ಸ್ಪರ್ಶನವೆಂಬ ಪದಾರ್ಥವನ್ನು, ಇಕ್ಷುಕೀರ ಸ್ನಾನವನ್ನು 'ಓಂ ಹ್ರೈಂ ನಮಃಶಿವಾಯ' ಎಂಬ ಮಂತ್ರದಿಂದ ಗೋಮುಖದಲ್ಲಿಯ ಜಂಗಮಕ್ಕೆ ಸಮರ್ಪಿಸಿಸುವುದು. ಲೇಹವೆಂಬ ರೂಪನ್ನು, ಮಿತ್ರವೆಂಬ ದ್ರವ್ಯವನ್ನು, ಶಬ್ದವೆಂಬ ಪದಾರ್ಥವನ್ನು, ನಾರೀಕೇಳ ಕ್ಷೀರಸ್ನಾನವನ್ನು 'ಓಂ ಹ್ರಾಂ ನಮಃ ಶಿವಾಯ' ಎಂಬ ಮಂತ್ರದಿಂದ ನಾಳದಲ್ಲಿಯ ಪ್ರಸಾದ ಲಿಂಗಕ್ಕೆ ಸಮರ್ಪಿಸುವುದು. ಇಲ್ಲದಲ್ಲಿಯ ರೂಪನ್ನು ಪರಿಣಾಮವೆಂಬ ದ್ರವ್ಯವನ್ನು, ತೃಪ್ತಿ ಎಂಬ ಪದಾರ್ಥವನ್ನು, ಸ್ವಾದೋದಕ ಸ್ನಾನವನ್ನು 'ಓಂ ಹ್ರಂ ನಮಃಶಿವಾಯ' ಎಂಬ ಮಂತ್ರದಿಂದ ಮಸ್ತಕದಲ್ಲಿಯ ಮಹಾಲಿಂಗಕ್ಕೆ ಸಮರ್ಪಿಸುವುದು. ಹೀಗೆ ರೂಪರುಚಿ ತೃಪ್ತಿಗಳು ಸೇರಿ ೧೦೮ ತೆರನ ಅರ್ಪಣವಾಗಲು ಶಿವನ ನಿಜವಿಲಾಸವೆಂದು ಅಂಗ, ಹಸ್ತ, ಶಕ್ತಿ, ಲಿಂಗ ಮುಖ ಇವುಗಳಲ್ಲಿ ಆರಾರು ರೀತಿಯ ಅರ್ಪಣವಾಗಿ ೩೬ ತೆರನಾದ ಶಿವನ ಸ್ವಕೀಯ ಪ್ರಕಾಶವೆಂದು, ಈ ಮುವತ್ತಾರು ಇನ್ನೂರಾ ಹದಿನಾರು ತೆರನಾಗಲು, ಈ ಇನ್ನೂರ ಹದಿನಾರರಲ್ಲಿ ಮತ್ತೆ ಆರಾರು ವಿಭಾಗಗಳಾಗಲು ೧೨೯೬ ತೆರನಾದ ಅರ್ಪಣವಾಗುತ್ತದೆ. ಇದನ್ನೇ ಶಿವನ 'ಪೂರ್ಣಹಂತಾ ಪ್ರಭೆ' ಎಂದು ವಿವರಿಸುತ್ತಾ ಅಂಗ ಲಿಂಗಸ್ಥಲದ ವಿಚಾರವನ್ನು ಅಂತ್ಯಗೊಳಿಸುತ್ತಾರೆ.

ದಳಚಕ್ರನ್ಯಾಸ

ದೀಕ್ಷೆಯನ್ನು ಹೊಂದಿ ವೀರಶೈವನಾದ ಮೇಲೆ ಆತನ ಶರೀರವು ಮಾಂಸ ಪಿಂಡವಳಿದು ಮಂತ್ರಪಿಂಡ ಸ್ವರೂಪವನ್ನು ತಾಳುತ್ತದೆ. ಆ ಸಂದರ್ಭದಲ್ಲಿ ಷಟಸ್ಥಲಾಚರಣೆಯನ್ನು ಅನುಸರಿಸುವುದರ ಮೂಲಕ ಲಿಂಗಾಂಗ ಸಾಮರಸ್ಯವನ್ನು ಹೊಂದುತ್ತಾನೆ. ಹೀಗಾಗಿ ಆ ಸಂದರ್ಭದ ವಿನ್ಯಾಸ ಕ್ರಮವನ್ನು ಕವಿಯ ಎಲ್ಲಾ ವಿಚಾರಗಳನ್ನು ಕ್ರೋಢೀಕರಿಸಿ ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

ದೇಹಭಾಗಗಳು :	ಗುದ	ಗುಹ್ಯ	ನಾಭಿ	ಹೃದಯ	ಕಂಠ	ಭ್ರೂಮಧ್ಯ
ಚಕ್ರಗಳು :	ಆಧಾರ	ಸ್ವಾಧಿಷ್ಠಾನ	ಮಣಿಪೂರಕ	ಅನಾಹತ	ವಿಶುದ್ಧ	ಆಜ್ಞೇಯ
ಶರೀರ :	ರುಧಿರ	ಮಾಂಸ	ಮೇಧಸ್ಸು	ಅಸ್ಥಿ	ಮಜ್ಜೆ	ತ್ವಕ್
ಲಿಂಗಗಳು :	ಆಚಾರ	ಗುರು	ಶಿವ	ಚರ	ಪ್ರಸಾದ	ಮಹಾ
ಪ್ರಣವಗಳು :	ನಕಾರ	ಮಕಾರ	ಶಿಕಾರ	ವಕಾರ	ಯಕಾರ	ಓಂಕಾರ
ದಳಗಳು :	೪ದಳ (ವ.ಶ ಷ.ಸ)	೬ದಳ (ಬ.ಭ.ಮ ಯ.ರ.ಲ)	೧೦ದಳ (ಡ.ಢ.ಣ ತ.ಥ.ದ ಧ.ನ.ಪ.ಫ)	೧೨ದಳ (ಕ.ಖ.ಗ.ಘ ಙ.ಚ.ಛ.ಜ. ಝ.ಞ.ಟ.ಠ)	೧೬ದಳ (ಅ ದಿಂದ ಅಂ.ವರೆಗೆ)	೨ದಳ (ಹಂ. ಕ್ಷಂ)

ವರ್ಗಭೇದಗಳು : ದಳ ಚಕ್ರದಲ್ಲಿರುವ ವರ್ಣಗಳಲ್ಲಿ ಉಂಟಾದ ಸೃಷ್ಟಿ, ಸ್ಥಿತಿ, ಸಂಹಾರ, ವರ್ಗಗಳನ್ನು ಕುರಿತು ವಿವರಿಸುತ್ತಾನೆ. *ಸೃಷ್ಟಿವರ್ಗ:* ಚಕ್ರದ ಪೂರ್ವ ಈಶಾನ್ಯದಿಂದ ಅಂತ್ಯವಾದ ದಳನ್ಯಸ್ತವಾದ 'ಕ' ಕಾರದಿಂದ 'ಕ್ಷ' ಕಾರದವರಗಿನ ಅಕ್ಷರ ಮಾಲಿಕೆಯನ್ನು ಸೃಷ್ಟಿವರ್ಗವೆಂದು ಕರೆಯುತ್ತಾರೆ. ಇದರಲ್ಲಿ 'ಅ' ವರ್ಗ 'ಕಚಟಪಯಷ' ಎಂಬ ಎಂಟು ವರ್ಗಗಳಿಗೆ ಕ್ರಮವಾಗಿ ಇಂದ್ರ, ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಭೇರ, ಈಶಾನ್ಯ ಎಂಬ ಅಷ್ಟದಿಕ್ಪಾಲಕರು, ಸದಾಶಿವಮಂತ್ರ, ಪಂಚಬ್ರಹ್ಮ ಮಂತ್ರ, ಷಡಂಗಮಂತ್ರ, ಸೌಮ್ಯಮಂತ್ರಗಳಿರುತ್ತವೆ. *ಸ್ಥಿತಿವರ್ಗ:* ಅಗ್ನಿ, ಚಂದ್ರ, ಸೂರ್ಯ ಮಂಡಲದೊಳಗಿರುವ ಸಾತ್ವಿಕ, ರಾಜಸ, ತಾಮಸ ಎಂಬ ಗುಣಗಳಿಗೆ ಅನುಗುಣವಾಗಿ 'ಸಷಶವಲರಯಮ' ಗಳೆಂಬ ಎಂಟು ವರ್ಣಗಳು ಸಾತ್ವಿಕ ವರ್ಗ. ೧೬ ಸ್ವರಗಳು ರಾಜಸವರ್ಗ. 'ಕಚಟತಪ' ಎಂಬ ೨೪ ವರ್ಣಗಳು ತಾಮಸವರ್ಗದವುಗಳೆನ್ನುತ್ತಾರೆ. ಇದರಲ್ಲಿ ಶುದ್ಧಪ್ರಸಾದ, ಮೂಲಪ್ರಸಾದ, ತತ್ವಪ್ರಸಾದ, ಆದಿಪ್ರಸಾದ, ಆತ್ಮಪ್ರಸಾದಗಳೆಂಬ ಪಂಚಪ್ರಸಾದಗಳನ್ನು ಚಕ್ರ ಹಸ್ತಕ್ಷರ ಸ್ಥಿತಿವರ್ಗಗಳೆಂದು ಹೆಸರಿಸುತ್ತಾರೆ. **ಸಂಹಾರವರ್ಗ:** 'ಕ್ಷ' ಕಾರದಿಂದ 'ಕ' ಕಾರದ ಅಕ್ಷರ ಮಾಲಿಕೆಯನ್ನು ಸಂಹಾರವರ್ಗವೆಂದು ಕರೆಯುತ್ತಾರೆ. 'ಕ್ಷಳಹಸಷಶವಲರ' ಎಂಬ ಹತ್ತು ಮೊದಲವರ್ಗ ಇದು ಪೃಥ್ವಿ. 'ಮಭಬಫಪನಧದಥತ' ಎಂಬ ಹತ್ತು ಎರಡನೆಯ ವರ್ಗ ಇದು ಅಪ್ಪು. 'ಣಢಡಠಟಞಝಜಛಚ' ಎಂಬ ಹತ್ತು ಮೂರನೆಯ ವರ್ಗ ಇದು ಅಗ್ನಿ. 'ಙಘಗಖಕ' ಎಂಬ ಐದು ನಾಲ್ಕನೆಯ ವರ್ಗ ಇದು ವಾಯು. ಹದಿನಾರು ಸ್ವರಗಳು ಐದನೆಯ ವರ್ಗ ಇದು ಆಕಾಶ. ಹೀಗೆ ಐದು ವರ್ಗಗಳಲ್ಲಿ ಸಮಸ್ತವಾದ ರುದ್ರಮಂತ್ರಗಳನ್ನು ಉದ್ಧರಿಸುತ್ತಾನೆ.

ಪಂಚಬ್ರಹ್ಮಗಳು : ಮೂರ್ತಿಬ್ರಹ್ಮ, ತತ್ವಬ್ರಹ್ಮ, ಪಿಂಡಬ್ರಹ್ಮ, ಕಲಾಬ್ರಹ್ಮ ಇವು ಸದಾಶಿವನ ಸ್ವರೂಪಗಳಾಗಿದ್ದು ಸಾದಾಖ್ಯಗಳಲ್ಲಿ ಹೊರಡುವ ಶಕ್ತಿ, ತತ್ವ ಮೊದಲಾದವುಗಳನ್ನು ನಿಯಂತ್ರಣ ಮಾಡುವ ಕೆಲಸ ನಿರ್ವಹಿಸುತ್ತವೆ.

ಪಂಚಬ್ರಹ್ಮಮಂತ್ರ - ಓಂ ಹ್ರಾಂ ಸದ್ಯೋಜಾತಾಯ ನಮಃ
ಓಂ ಹ್ರೇಂ ವಾಮದೇವಾಯ ನಮಃ
ಓಂ ಹ್ರುಂ ಅಘೋರಾಯ ನಮಃ
ಓಂ ಹ್ರೀಂ ತತ್ಪುರುಷಾಯ ನಮಃ
ಓಂ ಹ್ರೌಂ ಈಶಾನಾಯ ನಮಃ

ನಂತರದಲ್ಲಿ ಇವುಗಳಿಗಿರುವ ೩೮ ಕಲೆಗಳ ವಿವರಣೆಯನ್ನು ಕೊಡಲಾಗಿದೆ. ಷಡಂಗಮಂತ್ರ ಹ್ರಾಂ ಎಂಬುದು ಹೃದಯಮಂತ್ರ, ಹ್ರೀಂ ಎಂಬುದು ಶಿರೋಮಂತ್ರ. ಹ್ರೂಂ ಎಂಬುದು ಶಿಖಾಮಂತ್ರ, ಹ್ರೈಂ ಎಂಬುದು ಕವಚಮಂತ್ರ, ಹ್ರೌಂ ಎಂಬುದು ನೇತ್ರಮಂತ್ರ. ಓಂ ಹ್ರಃ ಎಂಬುದು ಅಸ್ತ್ರಮಂತ್ರವೆಂದು ಇದು ಶರೀರದ ಭಾಗಗಳಲ್ಲಿ ಮಂತ್ರನ್ಯಾಸ ಮಾಡುತ್ತದೆ.

ಪಂಚಾಸ್ತ್ರ ಮಹಾಮಂತ್ರಗಳು

೧. ಶಿವಾಸ್ತ್ರಮಂತ್ರ - 'ಓಂ ಹಃ ಅನಂತಶಕ್ತಿ ಧಾಮ್ನೆ ಜ್ಯೋತಿರೂಪಾಯ'

೨. ಕುರಿಕಾಸ್ತ್ರಮಂತ್ರ - 'ಓಂ ಕ್ಷಿತಿ ಬೆಚ್ಚಿದ ಕ್ಷುಂ ಕೃತ ಕುರಿಕಾಸ್ತ್ರಾಯ'

೩. ಪಾಶುಪತಾಸ್ತ್ರ ಮಂತ್ರ - 'ಓಂ ಶ್ರೀಂ ಪಶು ಹುಂ ಫಟ'

೪. ವ್ಯೋಮಾಸ್ತ್ರಮಂತ್ರ - 'ಓಂ ಆಂ ಈಂ ಊಂ ವ್ಯೋಮವ್ಯಾಪಿ'

೫. ಅಘೋರಾಸ್ತ್ರಮಂತ್ರ - 'ಓಂ ಸ್ಫುರ ಸ್ಫುರಘೋರ ಘೋರತಮ ತನುರೂಪ ಚಟಚಟ ಪ್ರಚಟ ಕಹ ಕಹ ವಮವಮ ಬಂಧ ಬಂಧ ಘೋರಾಯ ಘೋರಾಯ ಹುಂ ಫಟ ಎಂದು ಶಬ್ದ ವಿನ್ಯಾಸದಲ್ಲಿ ಈ ಮಂತ್ರಗಳನ್ನು ಉಚ್ಚಾರಣೆ ಮಾಡುವ ರೀತಿಯನ್ನು ವಿವರಿಸುತ್ತಾನೆ.

> "ಪೂಜಕನಾದ ಸೂಶೈವಂ ಸಮಸ್ತ ತತ್ವಮಂತ್ರಜನ್ಮಸ್ಥಲವಾದ ಮಹಾಲಿಂಗಮಂ
> ಪೀಠದೊಳಿಟ್ಟು ಪೂಜಿಪವನನೀ ಪಂಚಾಸ್ತ್ರ ಮಂತ್ರದಿಂ
> ತಾನೆಸಗುವ ಸಕಲ ಬಾಹ್ಯ ಕ್ರಿಯಾಕಲಾಪಮಂ ಮಾಡಲುಚಿತವೆಂದಿಂತು
> ಶಿವಾಂಗಾದಿ ಷಡಂಗಂಗಳಂ ನಿರವಿಸಿದೆಯಯ್ಯ, ಪರಶಿವಲಿಂಗಯ್ಯ"(ವ-೧೬೬)

ಎಂದು ವೀರಶೈವರು ಕೆಲವು ವಿಧಿ-ವಿಧಾನಗಳಲ್ಲಿ ಉಪಯೋಗಿಸುವ ಪಂಚಾಸ್ತ್ರ ಮಹಾಮಂತ್ರವನ್ನು ವಿವರಿಸಿರುವರು.

ಮಹಾಲಿಂಗದ ಶಿವಷಟ್ಸ್ಥಾನದಲ್ಲಿ ಆಧಾರಾದಿ ಸ್ಥಾನಗಳಲ್ಲಿರುವ ಷಡ್ವಿಧ ಚಕ್ರಗಳು ಆಧಾರಚಕ್ರ, ಸ್ವಾದಿಷ್ಠಾನಚಕ್ರ, ಮಣಿಪೂರಕ ಚಕ್ರ, ವಿಶುದ್ಧಿ ಚಕ್ರ, ಅನಾಹತ ಚಕ್ರ, ಆಜ್ಞಾಚಕ್ರಗಳು. ಈ ಚಕ್ರಗಳು ಮೂಲ ಚಿತ್ತುವಿನ ಮೂಲಕ ಮಿದುಳಿನಲ್ಲಿ ಉಂಟಾಗುವ ಚೈತನ್ಯಕ್ಕೆ ಕೇಂದ್ರ ಸ್ಥಾನಗಳೆಂದು ಹೇಳಬಹುದು ಇವು ಒಟ್ಟು ಒಂಭತ್ತು. ಆದರೆ ಇಲ್ಲಿ ಕೇವಲ ಶರೀರದಲ್ಲಿರುವ ಆರರ ವಿವರಣೆ

ಮಾತ್ರವಿದೆ. ಗುದದಲ್ಲಿ ಆಧಾರಚಕ್ರ, ಗುಹ್ಯದಲ್ಲಿ ಸ್ವಾಧಿಷ್ಠಾನಚಕ್ರ, ನಾಭಿಸ್ಥಾನದಲ್ಲಿ ಮಣಿಪೂರಕ ಚಕ್ರ, ಹೃದಯದಲ್ಲಿ ಅನಾಹತ ಚಕ್ರ, ಕಂಠದಲ್ಲಿ ವಿಶುದ್ಧಿ ಚಕ್ರ, ಲಲಾಟದಲ್ಲಿ ಅಜ್ಞಾಚಕ್ರಗಳಿವೆ. ಈ ಚಕ್ರಗಳಿಗೆ ಅಧಿದೇವತೆಗಳಿರುವರು. ಕಂಠಸ್ಥಾನದ ವಿಶುದ್ಧಿ ಚಕ್ರದಲ್ಲಿರುವ ರುದ್ರರು ಮತ್ತು ಶಕ್ತಿಯರ ಹೆಸರುಗಳು. ಇವರನ್ನು ಸ್ವರಾಕ್ಷರ ಮೂರ್ತಿಗಳೆಂದು ಹೆಸರಿಸುತ್ತಾನೆ. ಅವುಗಳ ವಿವರ ಹೀಗಿದೆ

ರುದ್ರರು	ಶಕ್ತಿಯರು	ಅಕ್ಷರಗಳು
ಶ್ರೀಕಂಠ	ಪೂರ್ಣೋದರಿ	ಅ
ಅನಂತ	ವಿರಜೆ	ಆ
ಸೂಕ್ಷ್ಮ	ಶಾಲ್ಮಲಿ	ಇ
ತ್ರಿಮೂರ್ತಿ	ಲೋಲಾಕ್ಷಿ	ಈ
ಅಮರೇಶ	ವರ್ತುಳಾಕ್ಷಿ	ಉ
ಅರ್ಹೀಶ	ದೀರ್ಘನಾಶಿಕೆ	ಊ
ಭಾರಭೂತಿ	ದೀರ್ಘಮುಖಿ	ಋ
ಅರಿಕೇಶ	ಗೋಮುಖಿ	ೠ
ಸ್ಥಾಣುಕ	ದೀರ್ಘಜಿಹ್ವೆ	ಒ
ಹರ	ಕುಂಡೋದರಿ	ಎ
ಝುಂಟೀಶ	ಊರ್ಧ್ವಕೇಶಿ	ಏ
ಜಾತುಕ	ವಿಕೃತಮುಖಿ	ಐ
ಸದ್ಯೋಜಾತ	ಜ್ವಾಲಾಮುಖಿ	ಓ
ಅನುಗ್ರಹೇಶ್ವರ	ಉಲ್ಕಾಮುಖಿ	ಔ
ಅಕ್ರೂರ	ಶ್ರೀಮುಖಿ	ಅಂ
ಮಹಾಸೇನ	ವಿದ್ಯಾಮುಖಿ	ಅಃ

ಹೃದಯಸ್ಥಾನದಲ್ಲಿರುವ ರುದ್ರರ ಮತ್ತು ಶಕ್ತಿಯರ ಹೆಸರುಗಳು ಇವರು ಅನಾಹತ ಚಕ್ರದಲ್ಲಿರುವ ವಿಕಲಾಕ್ಷರಾದಿ ದೇವತೆಗಳು ಮತ್ತು ದ್ವಾದಶಾಕ್ಷರರು.

ರುದ್ರರು	ಶಕ್ತಿಯರು	ಅಕ್ಷರಗಳು
ಕ್ರೋಧೀಶ	ಮಹಾಕಾಳಿ	ಕ
ಚಂಡೇಶ	ಸರಸ್ವತಿ	ಖ

ಪಂಚಾಂತಹ	ಗೌರಿ	ಗ
ಶಿವೋತ್ತಮ	ಮಂತ್ರಶಕ್ತಿ	ಘ
ಏಕರುದ್ರ	ಆತ್ಮಶಕ್ತಿ	ಙ
ಕೂರ್ಮ	ಭೂತಮಾತೆ	ಚ
ಏಕನೇತ್ರ	ಲಂಬೋದರಿ	ಛ
ಚತುರಾಸನ	ದ್ರಾವಿಣಿ	ಜ
ಅಜೇಶ	ನಗರಿ	ಝ
ಸರ್ವ	ಖೇಚರಿ	ಞ
ಸೋಮೇಶ	ಮಂಜರಿ	ಟ
ಲಾಂಗುಲಿ	ರೂಪಿಣಿ	ಠ

ಉದರಸ್ಥಾನದಲ್ಲಿರುವ ರುದ್ರರು ಮತ್ತು ಶಕ್ತಿಯರು ಇವರು ಮಣಿಪೂರಕ ಚಕ್ರದಲ್ಲಿರುವರು.

ರುದ್ರರು	ಶಕ್ತಿಯರು	ಅಕ್ಷರಗಳು
ದಾರುಕ	ನಿರಜೆ	ಡ
ಅರ್ಧನಾರೀಶ್ವರ	ಕಾಲೋದರಿ	ಢ
ಸೋಮ	ಪೂತನಿ	ಣ
ಉಮಾಕಾಂತ	ಭದ್ರಕಾಳಿ	ತ
ಆಷಾಢದಂಡಿ	ಯೋಗಿನಿ	ಥ
ಸ್ಫುರ	ಶಂಭೀರಿ	ದ
ಅತಿರುದ್ರ	ಘುರ್ಜನಿ	ಧ
ಮೀನರುದ್ರ	ಕಾಲರಾತ್ರಿ	ನ
ಮೇಷರುದ್ರ	ಕುರ್ದಿನಿ	ಪ
ಲೋಹಿತ	ಕಪರ್ದಿನಿ	ಫ

ಗುಹ್ಯಸ್ಥಾನದಲ್ಲಿರುವ ಸ್ವಾದಿಷ್ಠಾನ ಚಕ್ರದಲ್ಲಿರುವ ರುದ್ರರ ಮತ್ತು ಶಕ್ತಿಯರ ಹೆಸರುಗಳು.

ರುದ್ರರು	ಶಕ್ತಿಯರು	ಅಕ್ಷರಗಳು
ಶಿಖಿ	ವಾಗ್ನಮೆ	ಬ
ಸಕಲಂಡ	ಜಯೆ	ಭ
ದ್ವಿಲಂಡ	ಸುಮುಖಿ	ಮ
ಮಹಾಕಾಲ	ಈಶ್ವರಿ	ಯ

ಸಾಲ	ರೇವತಿ	ರ
ಭುಜಗೇಶ	ಮಾಧವಿ	ಲ

ಗುದಸ್ಥಾನದಲ್ಲಿರುವ ಆಧಾರ ಚಕ್ರದ ರುದ್ರರು ಮತ್ತು ಶಕ್ತಿಗಳು.

ರುದ್ರರು	ಶಕ್ತಿಯರು	ಅಕ್ಷರಗಳು
ಪಿನಾಕೇಶ	ವಾರುಣಿ	ವ
ಖಡ್ಗೀಶ	ವಾಯವಿ	ಶ
ಬಕ	ರಕ್ಷಾವಧಾರಿಣಿ	ಷ
ಶ್ವೇತಬೃಂಗೀಶ	ಸಹಜೆ	ಸ

ಲಲಾಟ ಸ್ಥಾನದಲ್ಲಿರುವ ಅಜ್ಞಾ ಚಕ್ರದ ರುದ್ರರು ಮತ್ತು ಶಕ್ತಿಯರು.

ರುದ್ರರು	ಶಕ್ತಿಯರು	ಅಕ್ಷರಗಳು
ಶಿವ	ವ್ಯಾಪಿನಿ	ಹಂ
ಸುವರ್ತಕ	ಮಾಯಾನ್ವಿತೆ	ಕ್ಷಂ

ಹೀಗೆ ಒಟ್ಟು ೧೦೮ ಜನ ಶಕ್ತಿಯರು ರುದ್ರರೊಡನೆ ಬೆರೆತಾಗ ಚಿದ್ಸಂಥಿಗಳೆನಿಸಿಕೊಳ್ಳುತ್ತಾರೆ. ಆಗ ಲಿಂಗವೇ ಮಂತ್ರ, ಮಂತ್ರವೇ ಚಿತ್ತು ಎಂದು ಅರಿತು ಜಪಿಸಲು ಪ್ರಾಣವಾಯುವಿನ ವಿಕಾರ ಅಳಿಯುತ್ತದೆ. ಸುಜ್ಞಾನವೇ ಸೂತ್ರವಾಗುತ್ತದೆ. ಚಿದ್ರುದ್ರಾಕಿಯನ್ನು ಈ ತೆರನೆಂದು ಭಾವಿಸಿ ಜಪಿಸಬೇಕು. ಇದನ್ನರಿತು ಜಪಿಸಲು ಭಕ್ತನಲ್ಲಿ ಲಿಂಗಶಕ್ತಿಯು ಉದ್ಭವಿಸುತ್ತದೆ. ಈ ರೀತಿಯಾಗಿ ಶೂನ್ಯಮಂತ್ರ ಗೋಪ್ಯದಲ್ಲಿ ವಿಶೇಷ ವೀರಶೈವನೆಂದು ಅನಿಸಿಕೊಳ್ಳಬೇಕಾದವನು ಆಚರಿಸಬೇಕಾದ ವಿಧಿ-ವಿಧಾನಗಳ ವಿಸ್ತೃತ ವಿವರಣೆಯನ್ನು ಕಾಣಬಹುದಾಗಿದೆ.

ಈ ಕೃತಿಯಲ್ಲಿ ವೀರಶೈವ ಸಿದ್ಧಾಂತವನ್ನು ಶಾಸ್ತ್ರೀಯವಾಗಿ ವಿವರಿಸಿದೆ. ಸರಳವಾಗಿ ಪ್ರತಿಪಾದಿಸಿದೆ. ಷಟ್‌ಸ್ಥಲ ಚಕ್ರವರ್ತಿಗಳಾದ ಚನ್ನಬಸವಣ್ಣನವರ 'ಕರಣಹಸಿಗೆ'ಯು 'ಸಂಖ್ಯಾರತ್ನ'ಕೋಶದಂತೆ ಇದ್ದರೆ 'ಶೂನ್ಯಮಂತ್ರಗೋಪ್ಯ'ವು 'ತತ್ವರತ್ನ'ಕೋಶದಂತಿದೆ ಎಂದು ಧಾರಾಳವಾಗಿ ಹೇಳಬಹುದು. ಇದು ಸರ್ವರೂ ಅಧ್ಯಯನ ಮಾಡಲು ಯೋಗ್ಯವಾದ ಕೃತಿಯಾಗಿದೆ ಈ ದೃಷ್ಟಿಯಿಂದ ಅಮೂಲ್ಯವಾದುದೊಂದು ವಚನ ಗ್ರಂಥವಿದು.[೨೦] ವೀರಶೈವ ಧರ್ಮದ ತತ್ತ್ವ-ಸಿದ್ಧಾಂತಗಳನ್ನು ಶಾಸ್ತ್ರೀಯವಾಗಿ ವಚನಗಳ ಮೂಲಕ ಸರಳವಾಗಿ ತಿಳಿಯ ಹೇಳುವ ಇಲ್ಲಿಯ ಪ್ರಯತ್ನವನ್ನು ಮೆಚ್ಚಬೇಕು. ವೀರಶೈವದ ತಾತ್ತ್ವಿಕಾಂಶದ ಪಾರಿಭಾಷಿಕ ಕೋಶದಂತಿರುವ ಇದು ಇಮ್ಮಡಿ ಮುರಿಗಾಗುರುಸಿದ್ಧರ ಶಾಸ್ತ್ರಜ್ಞಾನಕ್ಕೆ ಖಚಿತವಾಗಿ ಅಷ್ಟೇ ಸಂಕ್ಷಿಪ್ತವಾಗಿ ತಿಳಿಯ ಹೇಳುವ ಅವರ

ನಿರೂಪಣಾ ಪ್ರಜ್ಞೆಗೆ ಉತ್ತಮ ಉದಾಹರಣೆಯಾಗಿದೆ.[೧೫] ಹೀಗೆ ಶುದ್ಧ ತಾತ್ತ್ವಿಕ ರೀತಿಯಲ್ಲಿ ರಚಿತವಾದ ಈ ಕೃತಿಯಲ್ಲಿ ವಚನಗಳಿದ್ದರೂ ಅವುಗಳಿಗೆ ಸಾಹಿತ್ಯಿಕ ಪ್ರಾಮುಖ್ಯತೆಯನ್ನು ನೀಡದೆ ಉಳಿದೆಲ್ಲ ಮಂತ್ರಗೋಪ್ಯ ಕೃತಿಗಳಿಗಿಂತ ಭಿನ್ನವಾಗಿ, ವಿಶೇಷವಾದ ರೀತಿಯಲ್ಲಿ ವೀರಶೈವ ಸಿದ್ಧಾಂತವನ್ನೇ 'ಶೂನ್ಯ ಮಂತ್ರಗೋಪ್ಯ'ವೆಂಬ ಶಿರೋನಾಮೆಯಡಿಯಲ್ಲಿ ನಿರೂಪಿಸಿರುವುದರಿಂದ ಮಂತ್ರಗೋಪ್ಯ ಸಾಹಿತ್ಯದ ಸಾಮಾನ್ಯ ಲಕ್ಷಣಗಳಿಂದ ದೂರ ಉಳಿಯುವ ಕೃತಿ ಇದಾಗಿದೆ.

ಅಡಿಟಿಪ್ಪಣಿ

೧. ವೀರಣ್ಣರಾಜೂರ(ಸಂ)., ಶಿವಯೋಗ ಪ್ರದೀಪಿಕೆ, ಪ್ರಸ್ತಾವನೆ, ಪು.೨೦

೨. ಓ.ಎನ್. ಲಿಂಗಣ್ಣಯ್ಯ(ಲೇ) ಹದಿನೆಂಟನೆಯ ಶತಮಾನ, ವೀರಶೈವಸಾಹಿತ್ಯ ಸಮೀಕ್ಷೆ, ಪು. ೩೨೬

೩. ಟಿ.ಆರ್. ಮಹದೇವಯ್ಯ(ಲೇ)., ನಾಂದ್ಯ-ಸ್ತೋತ್ರ ಸಾಹಿತ್ಯ, ಗೌರವ, ಪು. ೩೧೯

೪. ಎಸ್. ಶಿವಣ್ಣನವರು ಸಂಪಾದಿಸಿ ಪ್ರಕಟಿಸಿರುವರು. ಸಾಧನೆ, ತ್ರೈಮಾಸಿಕ, ಸಂಪುಟ-೨೩, ಸಂಚಿಕೆ ೧-೨, ಜನವರಿ ಜೂನ್ -೧೯೯೪ ಓಲೆಪ್ರತಿ ಅ೫ (ಗರಿ:೧೬೩-೧೬೭)

೫. ಎಸ್.ವ್ಹಿ. ಅಯ್ಯನಗೌಡರ (ಲೇ)., 'ಕನ್ನಡದಲ್ಲಿ ಏಕೋತ್ತರ ಶತಸ್ಥಲಗಳು'-ಒಂದು ಕಿರುಪರಿಚಯ. ಬಸವಪಥ, ಸಂಪುಟ-೧೦, ಸಂಚಿಕೆ-೧೨, ಪು.೨, ಮಾರ್ಚ, ೧೯೮೯

೬. ಶಿವಾನುಭವಸೂತ್ರಂ ಅಧಿಕರಣ-೩, ಶ್ಲೋಕ-೩

೭. ವಿ.ಎಸ್.ಕಂಬಿ(ಲೇ) ಸ್ಥಲಕಟ್ಟು ಸಾಹಿತ್ಯ ಮೀಮಾಂಸೆ, ಬಸವಪಥ, ಸಂಪುಟ-೧೧, ಸಂಚಿಕೆ-೧೦, ಜನವರಿ ೧೯೯೦, ಪುಟ-೨೦

೮. ಎಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ, ಪು-೧೩೨

೯. ಜಿ.ಎ. ಶಿವಲಿಂಗಯ್ಯ(ಸಂ), ಕೈವಲ್ಯ ನಾಮೈಕೋತ್ತರ ಶತಸ್ಥಲ ಸ್ವರವಚನಗಳು, ಪು.೯

೧೦. ವಿ.ಎಸ್. ಕಂಬಿ(ಲೇ), ಮೂವತ್ತಾರು ತತ್ತ್ವಗಳ ಮತ್ತು ನೂರೊಂದು ಸ್ಥಲಗಳ ಸಂಬಂದವೆಂತು?- ಬಸವಪಥ, ಸಂಪುಟ-೮, ಸಂಚಿಕ-೭, ಪು.೯ ಅಕ್ಟೋಬರ್, ೧೯೮೨

೧೧. ಆರ್.ಸಿ. ಹಿರೇಮಠ(ಸಂ), ಷಟ್‌ಸ್ಥಲ ಜ್ಞಾನಸಾರಾಮೃತ ಮುನ್ನುಡಿ, ಪು.೭

೧೨. ಎಸ್.ವಿ. ಅಯ್ಯನಗೌಡರ (ಲೇ)., 'ಕನ್ನಡದಲ್ಲಿ ಏಕೋತ್ತರ ಶತಸ್ಥಲಗಳು'-ಒಂದು ಕಿರುಪರಿಚಯ, ಬಸವಪಥ, ಸಂ-೧೦, ಸಂ-೧೨, ಪು.೫, ಮಾರ್ಚ ೧೯೮೯

೧೩. ವಿ.ಎಸ್. ಕಂಬಿ (ಲೇ), ಮುವತ್ತಾರು ತತ್ತ್ವಗಳು ಮತ್ತು ನೂರೊಂದು ಸ್ಥಲಗಳ ಸಂಬಂಧವೆಂತು? ಬಸವಪಥ, ಸಂ-೪, ಸಂ-೭ ಪು.೧೯ ಅಕ್ಟೋಬರ್ ೧೯೮೨

೧೪. ಕೆ. ಕೃಷ್ಣಮೂರ್ತಿ (ಸಂ), ಕನ್ನಡಕಾವ್ಯ ಪ್ರಕಾಶ, ಶ್ಲೋಕ-೧-೨, ಪು.೪

೧೫. ಜಿ.ಎ. ಶಿವಲಿಂಗಯ್ಯ (ಸಂ), ಕೈವಲ್ಯ ಸೋಪಾನ ನಾಮೈಕೋತ್ತರಶತಸ್ಥಲ ಸ್ವರವಚನಗಳು, ಪು.೮

೧೬. ಜಿ.ಎ. ಶಿವಲಿಂಗಯ್ಯ(ಸಂ), ಪೂರ್ವೋಕ್ತ, ಪು.ix

೧೭. ಚನ್ನಬಸವದೇವರು ಓಲೆಮಠ - ಮಗ್ಗೆಯ ಮಾಯಿದೇವನ ಶಿವಾನುಭವ ಸೂತ್ರ-ಒಂದು ಅಧ್ಯಯನ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು.೧೩೫

೧೮. ವಿ.ಎಸ್. ಕಂಬಿ(ಲೇ), ಮುವತ್ತಾರು ತತ್ತ್ವಗಳ ಮತ್ತು ನೂರೊಂದು ಸ್ಥಲಗಳ ಸಂಬಂಧವೆಂತು? ಬಸವಪಥ, ಸಂ-೪, ಸಂ-೭, ಪು. ೨೧ ಅಕ್ಟೋಬರ್, ೧೯೮೨

೧೯. ಜಿ.ಎ. ಶಿವಲಿಂಗಯ್ಯ(ಸಂ), ಕೈವಲ್ಯನಾಮೈಕೋತ್ತರ ಶತಸ್ಥಲ ಸ್ವರವಚನ, ಪು.೨೮

೨೦. ಚನ್ನಬಸವದೇವರು ಓಲೆಮಠ- ಮಗ್ಗೆಯ ಮಾಯಿದೇವನ ಶಿವನುಭವಸೂತ್ರ-ಒಂದು ಅಧ್ಯಯನ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪು.೧೩೮

೨೧. ಫ.ಗು. ಹಳಕಟ್ಟಿ, ವಚನಶಾಸ್ತ್ರಸಾರ, ಭಾಗ-೨, ಪು. ೩೪೩, ೧೯೩೮

೨೨. ಚೆನ್ನಮಲ್ಲಿಕಾರ್ಜುನ(ಸಂ), ನಿರಂಜನ ವಂಶರತ್ನಾಕರ, ಭಾಗ-೨, ಪು.೨

೨೩. ಪಿ.ಎಂ. ಗಿರಿರಾಜು(ಲೇ), ಮಂತ್ರಗೋಪ್ಯ ಸಾಹಿತ್ಯ ಗೌರವ, ಪು.೧೯೪

೨೪. ವಿ. ಶಿವಾನಂದ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪು.೩೧೨

೨೫. ಬಿ.ವಿ. ಶಿರೂರು(ಸಂ), ನಿರಾಳ ಮಂತ್ರಗೋಪ್ಯ, ಪ್ರಸ್ತಾವನೆ, ಪು.೫

೨೬. ಪಿ.ಎಂ. ಗಿರಿರಾಜು(ಲೇ), ಮಂತ್ರಗೋಪ್ಯಸಾಹಿತ್ಯ ಗೌರವ, ಪು.೧೯೫

೨೭. ಜಿ.ಎ. ಶಿವಲಿಂಗಯ್ಯ(ಲೇ), ಇಮ್ಮಡಿಮುರಿಗೆಯಗುರುಸಿದ್ಧದೇಶಿಕೇಂದ್ರರು, ಭೂಷಣ, ಪು.೨೩೪

೨೮. ಮಗ್ಗೆಯ ಮಾಯಿದೇವ, ಶಿವಾನುಭವಸೂತ್ರಂ, ಅಧಿಕರಣ ೨, ಶ್ಲೋಕ ೨೫೨

೨೯. ಚನ್ನಬಸವದೇವರು ಓಲೆಮಠ, ಮಗ್ಗೆಯ ಮಾಯಿದೇವನ ಶಿವಾನುಭವ ಸೂತ್ರ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕ.ವಿ.ವಿ., ೧೯೯೪, ಪು.೧೨೮

೩೦. ಫ.ಗು.ಹಳಕಟ್ಟಿ, ಶಿವಾನುಭವ ಶಬ್ದಕೋಶ, ಪು.೨೦

೩೧. ಎಸ್. ವಿದ್ಯಾಶಂಕರ(ಸಂ), ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಗಳ ಕೃತಿಗಳು, ಪ್ರಸ್ತಾವನೆ, ಪು.೩೦

ಷಟ್ಪದಿ ಪ್ರಕಾರ

೧. ಪಂಚಾಶಿಕೆ
೨. ಮಿಶ್ರಾರ್ಪಣ
೩. ಯೋಗಕಲಾಪಸಾರ
೪. ಶಿವಲಿಂಗ ಷಟ್ಪದಿ
೫. ಶಿವಲಿಂಗ ನಾಂದ್ಯ
೬. ಶಿವರಹಸ್ಯ

ಷಟ್ಪದಿ ಕೃತಿಗಳು

ಹನ್ನೆರಡನೆಯ ಶತಮಾನದ ಶಿವಶರಣರು ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಬದಲಾವಣೆಯ ರೂವಾರಿಗಳಾದಂತೆ ಸಾಹಿತ್ಯ ಕ್ಷೇತ್ರದ ಬದಲಾವಣೆಯ ಹರಿಕಾರರೂ ಆದರು. ವಿಷಯ-ವಸ್ತು-ಭಾಷೆ-ಶೈಲಿ-ಛಂದಸ್ಸು ಮೊದಲಾದವುಗಳ ದೃಷ್ಟಿಯಿಂದ ಕನ್ನಡ ಕಾವ್ಯಗಳ ದಿಕ್ಕನ್ನೇ ಬದಲಿಸಿದರು. ಈ ಆಂದೋಲನದಲ್ಲಿ ಹರಿಹರ, ರಾಘವಾಂಕರಿಂದ ಬಳಕೆಗೊಂಡ ದೇಶಿ ಛಂದಸ್ಸುಗಳಲ್ಲಿ 'ಷಟ್ಪದಿ'ಯೂ ಒಂದು. ಈ ಪ್ರಕಾರವನ್ನು ಮೊದಮೊದಲು ಶಿವನಲೀಲೆಗಳನ್ನು, ಶಿವಶರಣರ ಚರಿತ್ರೆಗಳನ್ನು ನಿರೂಪಿಸಲು ಮಾತ್ರ ಸೀಮಿತಗೊಳಿಸಿಕೊಂಡಿದ್ದರು. ತದನಂತರ ಸಿದ್ಧಾಂತ, ಆಧ್ಯಾತ್ಮ, ಸ್ತೋತ್ರ, ಶಾಸ್ತ್ರ ಮತ್ತು ನಿಘಂಟು ಇತ್ಯಾದಿಗಳ ವಿವರಣೆಗೂ ಷಟ್ಪದಿಯನ್ನು ಬಳಸಿದರು. ಉದಾಹರಣೆಗೆ ಕರಸ್ಥಲನಾಗಿದೇವ(ಕ್ರಿ.ಸು.೧೪೩೦) ವಚನಗಳೆಂಬ ಹೆಸರಿನಲ್ಲಿ ಷಟ್‌ಸ್ಥಲ ಮಾರ್ಗವನ್ನು ವಾರ್ಧಕ ಷಟ್ಪದಿಯಲ್ಲಿ, ಮಗ್ಗೆಯ ಮಾಯಿದೇವನು(ಸು.೧೪೩೦) 'ಏಕೋತ್ತರ ಶತಸ್ಥಲ ಷಟ್ಪದಿ'ಯನ್ನು, ಸಪ್ತಕಾವ್ಯದ ಗುರುಬಸವನು(ಸು.೧೪೩೦) ಷಟ್ಪದಿಯಲ್ಲಿ ಬರೆದ ಏಳು ಕಾವ್ಯಗಳು, ಕಲ್ಯಾಣ ಸ್ವಾಮಿ(ಸು.೧೫೦೦)ಯ 'ಕಾರಣಾಗಮದವಾರ್ಧಕ', ಮುರಿಗೆ ಶಾಂತವೀರರ(ಸು.೧೫೩೦) 'ವೈರಾಗ್ಯಷಟ್ಪದಿ' ಮುಂತಾದ ಕೃತಿಗಳನ್ನು ಹೆಸರಿಸಬಹುದು.

ಸ್ತೋತ್ರ ಪ್ರಕಾರದಲ್ಲಿ ಗುರುನಂಜ(ಸು.೧೫೦೦)ನ 'ಉಮಾಸ್ತೋತ್ರಷಟ್ಪದ' ಇಮ್ಮಡಿಗುರುಸಿದ್ಧರ (ಸು.೧೭೩೦) 'ಶಿವಲಿಂಗನಾಂದ್ಯ'ಗಳನ್ನು, ಶಾಸ್ತ್ರಗ್ರಂಥಗಳಲ್ಲಿ ಕಲ್ಲರಸ(ಸು.೧೪೫೦)ನ 'ಜನವಶ್ಯ', ಜಾಯೇಂದ್ರ(ಸು.೧೭೩೪)ನ 'ಕರ್ಣಾಟಕ ಕುವಲಯಾನಂದ' ಮತ್ತು 'ಶೃಂಗಾರತಿಲಕ'ಗಳನ್ನು, ನಿಘಂಟು ಪ್ರಕಾರದಲ್ಲಿ ಲಿಂಗಣ್ಣ ಮಂತ್ರಿಯ(ಸು.೧೫೩೦) 'ಕಬ್ಬಿಗರ ಕೈಪಿಡಿ', ಮತ್ತು ವಿರಕ್ತ ತೋಂಟದಾರ್ಯರ(ಸು.೧೫೬೦) 'ಕರ್ಣಾಟಕ ಶಬ್ದಮಂಜರಿ', ಇತ್ಯಾದಿ ಕಾವ್ಯಗಳನ್ನು ಹೆಸರಿಸಬಹುದು. ಇನ್ನೂ ಕೆಲವು ಷಟ್ಪದಿ ಕೃತಿಗಳು ನೇರವಾಗಿ ವೀರಶೈವ ಮತ ತತ್ತ್ವ ನಿರೂಪಣೆಗೆ ತೊಡಗದಿದ್ದರೂ, ಆಂಶಿಕವಾಗಿ, ಸಂದರ್ಭಾನುಸಾರ ಪಂಚಾಚಾರ, ಷಟ್ ಸ್ಥಲ, ಅಷ್ಟಾವರಣ, ನೂರೊಂದು ಸ್ಥಳಗಳ ಬಗ್ಗೆ ವಿವರಣೆಯನ್ನು ನೀಡುತ್ತವೆ. 'ಏಕೋತ್ತರ ಶತಸ್ಥಲ' 'ಕರಣಹಸಿಗೆ', 'ಮಿಶ್ರಾರ್ಪಣ', 'ಪಂಚೀಕರಣ', ಮಂತ್ರಗೋಪ್ಯದಂಥ ವಿಚಾರಗಳನ್ನು ಒಳಗೊಂಡ ಕೃತಿಗಳು ಶುದ್ಧವಾದ ಆಧ್ಯಾತ್ಮ, ಸಿದ್ಧಾಂತ, ಶಾಸ್ತ್ರಗಳನ್ನೇ ಬೋಧಿಸುತ್ತವೆ. ಹೀಗಾಗಿ ಇಂತಹುದೇ ಪರಿಸರದಿಂದ ಪ್ರೇರಣೆಗೊಳಗಾದ ಇಮ್ಮಡಿ ಮುರಿಗಾಗುರುಸಿದ್ಧನು ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ, ಶಿವಲಿಂಗದ ನಾಂದ್ಯ, ಶಿವಲಿಂಗಮಹಿಮಾ ಷಟ್ಪದಿ, ಶಿವರಹಸ್ಯ ಎಂಬ ಕೃತಿಗಳನ್ನು ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳಲ್ಲಿ ರಚಿಸಿದ್ದಾನೆ.

ವೀರಶೈವ ಸಿದ್ಧಾಂತದಲ್ಲಿ ಆಯತ, ಸ್ವಾಯತ, ಸನ್ನಿಹಿತ ಎಂಬ ಮೂರು ಕಾಂಡಗಳಿವೆ. ಇವುಗಳಿಗೆ ಷಟ್‌ಸ್ಥಲವೇ ಬುನಾದಿ. ಗುರುಮುಖದಿಂದ ಬಂದ ಇಷ್ಟ ಲಿಂಗವನ್ನು ಅಂಗದ ಮೇಲೆ ಧರಿಸಿ ಸತ್ಯಶುದ್ಧ ಕಾಯಕದಿಂದ ಗಳಿಸಿದುದನ್ನು ಗುರು-ಲಿಂಗ-ಜಂಗಮಕ್ಕೆ ಅರ್ಪಿಸುತ್ತ ಜೀವಿಸಬೇಕೆಂಬುದು 'ಆಯತ'ಕಾಂಡದ ವಿಚಾರವಾದರೆ, ಬಾಹ್ಯವಾದ ಗುರು-ಲಿಂಗ-ಜಂಗಮಾದಿ ಅಷ್ಟಾವರಣಗಳನ್ನು ಅಂತರ್ ಮುಖಿಯಾಗಿಸಲು ಮಾಡಬೇಕಾದ ಸಾಧನೆಯನ್ನು 'ಸ್ವಾಯತ' ಕಾಂಡದಲ್ಲಿ ವಿವರಿಸಲಾಗುತ್ತದೆ. ಕೊನೆಯದಾಗಿ 'ಸನ್ನಿಹಿತ' ಕಾಂಡವು ಶಿವಯೋಗಿ ಸಾಧನೆಯಿಂದ ಲಿಂಗಾಂಗ ಸಾಮರಸ್ಯ ಹೊಂದುವುದನ್ನು ತಿಳಿಸುತ್ತದೆ.[೧] ಪ್ರಸ್ತುತ ಕವಿಯ ಕೃತಿಗಳಾದ ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ ಕೃತಿಗಳು ಕ್ರಮವಾಗಿ ಆಯತ, ಸ್ವಾಯತ, ಸನ್ನಿಹಿತ ಎಂಬ ಮೂರು ಕಾಂಡಗಳಂತಿವೆ. ಇವನ್ನೇ ಇನ್ನೊಂದು ರೀತಿಯಲ್ಲಿ ಅರ್ಚನ-ಅರ್ಪಣ-ಅನುಭಾವ ತತ್ತ್ವಗಳೆನ್ನಬಹುದು. ಅರ್ಚನ ಎಂದರೆ 'ಇಷ್ಟಲಿಂಗಾರ್ಚನೆ', ಅರ್ಪಣವೆಂದರೆ 'ಇಷ್ಟಲಿಂಗಾರ್ಪಣ', ಅನುಭಾವವೆಂದರೆ ಲಿಂಗಾನುಭಾವಿಗಳೊಡನೆ ನಡೆಸುವ 'ಆಲೋಚನಾಗೋಷ್ಠಿ'[೨] ಈ ಮೂರನ್ನು ಸಾಧಕನು ಷಟ್‌ಸ್ಥಲ ಮಾರ್ಗದಿಂದ ಕಂಡುಕೊಳ್ಳಬೇಕಾಗುತ್ತದೆ.

ಪಂಚಾಶಿಕೆ

ಇದೊಂದು ವಿಶಿಷ್ಟ ಕೃತಿ. ಇದು ವೀರಶೈವರ ಪಂಚೀಕರಣ, ಕರಣಹಸಿಗೆ, ಸಕೀಲ ಸಾಹಿತ್ಯಗಳಂಥ ಪ್ರಕಾರಗಳಿಗೂ ಹೋಲಿಕೆಯಾಗದೆ, ಯಾವುದೊಂದು ನಿರ್ದಿಷ್ಟ ವಿಷಯದ ವ್ಯಾಪ್ತಿಗೂ ಒಳಪಡದೆ,

ವೀರಶೈವ ಧರ್ಮದ ಶಿವ-ಶಕ್ತಿ, ಭಕ್ತಿ-ಜ್ಞಾನ-ಕ್ರಿಯೆಗಳ ಸಂಬಂಧ, ದೀಕ್ಷೆ, ಲಿಂಗಧಾರಣ, ವಿಮರ್ಶನ ಶಕ್ತಿ, ವಿಭೂತಿ ವೈಭವ, ಜಗತ್ತಿನ ಸ್ವರೂಪ, ಸೃಷ್ಟಿಕ್ರಿಯೆ, ಮುಕ್ತಿ ಬೋಧೆ ಮೊದಲಾದ ಅನೇಕ ತಾತ್ತ್ವಿಕಾಂಶಗಳನ್ನು ಒಳಗೊಂಡಿದೆ. ಈ ಕೃತಿಯು ೪ ಸ್ಕಂದ, ೧೩ ಸಂಧಿ, ೬೮೮ ಭಾಮಿನಿ ಷಟ್ಪದಿಗಳಿಂದ ಕೂಡಿದ್ದು ದೊಡ್ಡದೂ ಅಲ್ಲದ, ಚಿಕ್ಕದೂ ಅಲ್ಲದ ಮಧ್ಯಮಗಾತ್ರದ ಕೃತಿಯಾಗಿದೆ. ಇದಕ್ಕೆ ಸಂಸ್ಕೃತ ಕವಿಯ ವಿರೂಪಾಕ್ಷಪಾದನ 'ವಿರೂಪಾಕ್ಷ ಪಂಚಾಶಿಕೆ' ಮತ್ತು ವಿದ್ಯಾಚಕ್ರವರ್ತಿಯ' 'ವಿರೂಪಾಕ್ಷ ಪಂಚಾಶಿಕಾ ವಿವೃತ್ತಿ' ಎಂಬ ಕೃತಿಯ ವ್ಯಾಖ್ಯಾನವು ಆಧಾರಗಳಾಗಿವೆ.[೩]

ಶಿವಧರ್ಮದ ಹಿರಿಮೆಯನ್ನು ಸಾರುವ ಈ ಕೃತಿಯ ಪ್ರತಿಯೊಂದು ಸ್ಕಂದದ ಆದಿ ಮತ್ತು ಅಂತ್ಯ ಪದ್ಯಗಳಲ್ಲಿ ಶಿವಸ್ತುತಿಯ ನಂತರ ತೋಂಟದ ಸಿದ್ಧಲಿಂಗಯತಿಗಳ ಸ್ತುತಿ ಮಾಡಲಾಗಿದೆ. ಪ್ರಾರಂಭದಲ್ಲಿ ಶಿವ-ಪಾರ್ವತಿ ತೋಂಟದ ಸಿದ್ಧಲಿಂಗಯತಿಗಳನ್ನು ಒಂದೊಂದು ಪದ್ಯದಲ್ಲಿ ಸ್ತುತಿಸಿದ ಬಳಿಕ ಗುರುವಿಗೆ ಗಣಪತಿಗೆ, ನಂದಿ, ವೀರೇಶ್ವರ, ಕುಮಾರಸ್ವಾಮಿ, ಭೂಲೋಕದ ಸಮಸ್ತ ಶರಣರ ಪಾದಕಮಲಗಳಿಗೆ ವಂದಿಸಿ ದೇವೇಂದ್ರನಿಗೆ ಪರ ಶಿವನು ಉಪದೇಶಿಸಿದ ಪಂಚಾಶಿಕಾಗಮವನ್ನು ರಚಿಸುವುದಾಗಿ ಹೇಳುತ್ತಾರೆ.(೧-೪) ವಿನಯ ಸಂಪನ್ನನಾದ ಕವಿ

ಪೊಡವಿಯೊಳು ತತ್ತ್ವ ಪ್ರಬಂಧಗ
ಳಿಡಿಕಿರಿದು ತುಂಬಿಹವಿದೇತರ
ಬೆಡಗಿನಗ್ಗದ ಕವಿತೆಯೆಂದಿದನಾಳವಾಡದಿರಿ||
ಕಡಲುದಕ ಪರಿಪೂರ್ಣಮಾಗಿರೆ
ತಡಿಯೊಳಿರ್ದ್ದವರೆಲ್ಲರುಂ ನೀ
ರಡಿಸಿಬಂದೊರತೆಯ ಜಲವನೇಂ ಕುಡಿಯದುಳಿದಪರೆ|| ೧-೫

ಈ ಭೂಮಿಯಲ್ಲಿ ತತ್ತ್ವ ಪ್ರಬಂಧಗಳು ಸಾಕಷ್ಟು ತುಂಬಿರುವಾಗ ಇದೇನು ಅಂತಹ ಮಹತ್ವದ ಕೃತಿಯಲ್ಲವೆಂದು ಜರಿಯಬೇಡಿರಿ. ಏಕೆಂದರೆ ಸಮುದ್ರದ ತುಂಬೆಲ್ಲಾ ನೀರಿದ್ದರೂ ಕುಡಿಯಲು ಅಯೋಗ್ಯ. ಕಾರಣ ಎಲ್ಲರೂ ಒರತೆಯ ನೀರನ್ನು ಬಯಸುತ್ತಾರೆ. ಹಾಗೆಯೇ ನನ್ನ ಈ ಕಾವ್ಯವನ್ನು ಪಂಡಿತರು, ಓದುಗರು ಬಯಸುತ್ತಾರೆ. ವಿದ್ವಾಂಸರು ಕಾವ್ಯ ಮೌಲ್ಯಮಾಪನಕ್ಕೆ ಅನುಸರಿಸುವ ಮಾರ್ಗ ಸಂಧಿ, ಸಮಾಸ, ತದ್ಧಿತ, ಕಾರಕ, ವ್ಯಾಕರಣ, ಅಲಂಕಾರ, ರಸ ಇವುಗಳು ಎಷ್ಟು ಪ್ರಮಾಣದಲ್ಲಿ ಉಚಿತವಾಗಿ ಕಾವ್ಯಗಳಲ್ಲಿ ಬಳಕೆಗೊಂಡಿವೆ ಎಂಬುದನ್ನು, ಆದರೆ ನಾನು ಇಂತಹ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸದೆ ಕಾವ್ಯ ಬರೆದಿದ್ದೇನೆ. ಬುದ್ಧಿವಂತರಾದ ಜನರು ಇದನ್ನು ಕ್ಷಮಿಸಬೇಕೆಂದು ಕೋರುತ್ತಾನೆ.(೧-೬)

ಸೃಷ್ಟಿಯ ರಹಸ್ಯವನ್ನು ಭೇದಿಸುವ ದ್ವೈತ, ಅದ್ವೈತ, ಸಿದ್ಧಾಂತಗಳಿರುವಂತೆ ಶಕ್ತಿ ವಿಶಿಷ್ಟಾದ್ವೈತ ಎಂಬ ತತ್ವವೂ ಇದೆ. ಇದನ್ನು 'ಶಿವಾದ್ವೈತ' 'ಬ್ರಹ್ಮಾದ್ವೈತ' ಎಂಬ ಹೆಸರುಗಳಿಂದಲೂ ಕರೆಯುತ್ತಾರೆ.

ಈ ಸಿದ್ಧಾಂತಗಳಲ್ಲಿ ದೇಹ-ಆತ್ಮ, ಶಿವ-ಶಕ್ತಿ, ಜೀವ-ಬ್ರಹ್ಮ, ಪ್ರಕೃತಿ-ಪುರುಷ ಎಂಬ ವಸ್ತುಗಳಲ್ಲಿ ಪರಸ್ಪರ ವ್ಯತ್ಯಾಸವನ್ನು ಗುರುತಿಸಿ ಒಂದಕ್ಕಿಂತ ಒಂದು ಹೆಚ್ಚು ಅಥವಾ ಕಡಿಮೆ ಎಂಬ ಭಿನ್ನಾಭಿಪ್ರಾಯಕ್ಕೆ ಬರುತ್ತಾರೆ. ಆದರೆ ಈ ವಸ್ತುಗಳಲ್ಲಿ ಎರಡೆನಿಸದೆ ಒಂದೇ ಎಂಬ, ಒಂದನ್ನು ಬಿಟ್ಟು ಇನ್ನೊಂದು ಇರಲಾರವು ಎನ್ನುವ ಸಮರಸತ್ವವನ್ನು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವು ಸಾರುತ್ತದೆ.

ಜಗವೆಯೊಡಲೀಶನೆತದಾತ್ಮನು
ಸುಗಮವಿದು ಒಂದನೆಯ ಕಾಂಡದಿ
ಮಿಗೆ ಶಿವನೆ ಜಗವೆಂದು ಪೇಳುವದೆರಡನೆಯ ಕಾಂಡ।
ಸೊಗಯಿಸುವ ಮೂರನೆಯ ಕಾಂಡದಿ
ಜಗವೆ ಶಿವನಾಶಿವನೆಜಗವೆಂ
ದಗಲದುಸಿರ್ದುಪುದ್ಯೆಸಿರಿಯ ನಾಲ್ಕನೆಯ ಕಾಂಡದಲಿ॥ ೧-೭

ಜಗವೇ ಒಡಲು, ಈಶನೆ ಅದರ ಆತ್ಮ, ಶಿವನೇ ಜಗವು, ಜಗವೇ ಶಿವನು ಎಂದು ದೇಹ-ಆತ್ಮಗಳ ಅವಿನಾಭಾವ ಸಂಬಂಧವನ್ನು ನಾಲ್ಕು ಕಾಂಡಗಳಲ್ಲಿ ಬಿತ್ತರಿಸಿದ್ದಾನೆ. ಜೀವ-ಜಗತ್ತು, ಶಿವ-ಶಕ್ತಿ, ದೇಹ-ಆತ್ಮ ಇಂತಹ ಕ್ಲಿಷ್ಟವಾದ ಆಗಮ, ವೇದಾಂತ ವಿಷಯಗಳನ್ನು ಸರಳಗೊಳಿಸಿ ಹೇಳುವ ಪ್ರಯತ್ನದಲ್ಲಿ ಕವಿ ಸಂಭಾಷಣೆಯ ಶೈಲಿಯನ್ನು ಆಯ್ದುಕೊಂಡಿದ್ದಾನೆ. ದೇವೇಂದ್ರ ಮತ್ತು ಶಿವ ಇವರ ನಡುವೆ ನಡೆದ ಪ್ರಶ್ನೋತ್ತರಗಳ ಸಂಗ್ರಹವೇ ಈ ಕಾವ್ಯ. ಹೀಗಾಗಿ ಕಾವ್ಯದಲ್ಲಿ ಒಂದು ಕ್ರಮಬದ್ಧತೆ, ಬಿಗಿಹಿಡಿತ ಕಾಣಿಸಿಕೊಳ್ಳುವುದಿಲ್ಲ.

ಶಿವನ ಹತ್ತಿರ ಬಂದ ದೇವೇಂದ್ರನನ್ನು ಕುರಿತು 'ಮಗನೆ ನಿನ್ನಭಿಮತವದಾವುದು? ಸೊಗಸುವಿತ್ತಪೆವು' ಎಂದು ಕೇಳಲು 'ಚಿದ್ಘನರೂಪನೆ ನಿಗಮ ಶಿರದರ್ಥವನು ತೋರಿಸಿ ಬೆಡಗುಗೊಳಿಸುವ ಮಾಯೆಯಂಗ ಮಿಗೆವಿದಾರಿಸಿನಿನ್ನೊಳೈಕ್ಯವನೀವುದು'(೧-೨೦) ಎಂದು ಪ್ರಾರ್ಥಿಸುವನು. ಆಗ ಶಿವನು ಮಾಯೆ, ಪುರುಷ ತತ್ತ್ವ, ಪರ ಶಿವತತ್ತ್ವಗಳ ಸ್ವರೂಪ ಕುರಿತು.

ಕೇಳು ಶಿವಭಕ್ತಿಯು ಸದಾಶಿವ
ಮೇಳದೀಶ್ವರ ಶುದ್ಧವಿದ್ಯೆನಿ
ರಾಳಮಾಯೆಯು ಕಳೆಯ ವಿದ್ಯೆಯುರಾಗ ಬಹುವಿಧದ।
ಕಾಳ ನೀತಿಯು ಪುರುಷ ಪ್ರಕೃತಿಕ
ರಾಳದಹಂಕಾರ ಬುದ್ಧಿಸು
ಚಾಳಮನಕರ್ಣೋರು ಚರ್ಮಾಂಬರ ರಸನೆಘ್ರಾಣ॥ (೧-೨೩)

ಶಿವ ಮತ್ತು ಶಕ್ತಿಯರಿಬ್ಬರ ಅವಿನಾಭಾವ ಸಂಬಂಧದಿಂದ, ಸತ್ ಚಿತ್ತುಗಳಿಂದ ಮೇಳೈಸುವುದೇ ಶುದ್ಧವಿದ್ಯೆ. ಇದು ಆನಂದದಾಯಕವಾಗಿರುತ್ತದೆ. ಸತ್ವ ರಜಸ್ಸು-ತಮಸ್ಸು ಎಂಬ ಗುಣಗಳಿಂದ

ಕೂಡಿದ ಅಶುದ್ಧ ಅಥವಾ ಅಚಿತ್ ತತ್ತ್ವಗಳಿಂದ ಕೂಡಿ ಹುಟ್ಟಿಕೊಳ್ಳುವುದೇ ಅಶುದ್ಧವಿದ್ಯೆ ಅಥವಾ ಮಾಯಾ ವಿದ್ಯೆ. ಇದು ಪುರುಷ ಪ್ರಕೃತಿಯೊಳಗೆ ಅಹಂಕಾರ ನೆಲೆಗೊಳ್ಳುವಂತೆ ಮಾಡುತ್ತದೆ. ಶುದ್ಧ ವಿದ್ಯೆಯ ಮುಟ್ಟಿ, ಶುದ್ಧ ಅಶುದ್ಧವಾಗಿ ಜಗತ್ತನ್ನು ಮೋಹಿಸಿದ ಮಾಯೆಯು ಅಜ್ಞಾನ ಪ್ರಾಪ್ತವಾಗುವಂತೆ ಮಾಡುತ್ತಾಳೆ. ಇದನ್ನು ಮಾಯಾ ತತ್ತ್ವವೆಂದು(೨-೭)ಕರೆಯುತ್ತಾರೆ. ಇಂತಹ ಮಾಯೆಯಿಂದ ಆವರಿಸಿದ ಈ ದೇಹಕ್ಕೆ ಶಿವನೇ ಒಲಿಗು ಮಾಯಾಪಾಶವನ್ನು ಬಿಡಿಸಿ, ಕ್ಲೇಶ ದೂರವಾಗಿಸಿ, ಆಕಾಶದಂತೆ ನಿರ್ಮಲವಾಗಿರುವುದೇ ಪುರುಷತತ್ತ್ವ(೨-೮). ಇದರ ಸಾಧನೆಗೆ ಐದು ಕಂಚುಕಗಳನ್ನು (ಕವಚ, ಪೊರೆ) ಹೆಸರಿಸುತ್ತಾನೆ. ಮುಕ್ತಿಯ ಮಾರ್ಗಕ್ಕೆ ಅಪಾಯ ತಂದೊಡ್ಡುವ ಕರ್ಮಗಳ ಪಾಶವನ್ನು ಹರಿಯುವುದು ಕಲೆಯೆನಿಸುವ ಮೊದಲನೆಯ ಕಂಚುಕ(೧-೯), ಜಗತ್ತಿನಲ್ಲಿ ಮಿಂಚಿ ಮಾಯವಾಗುವ ಶುದ್ಧ ವಿದ್ಯೆಯ ಸಂಭ್ರಮವನ್ನು ಕಾಣುವುದು ಎರಡನೇ ಕಂಚುಕ(೧-೧೦), ಶುದ್ಧ-ಅಶುದ್ಧ ಮಾರ್ಗವೆನಿಸುವ ಲೋಕ ವಿಷಯಗಳನ್ನು ಅರಿಯುವುದು ಮೂರನೇ ಕಂಚುಕ(೧-೧೧), ಸಿರಿತನ, ಆಯುಷ್ಯ, ರೂಪ, ಅನಿಶ್ಚಿತವೆಂಬ ಕಾಲ ತತ್ತ್ವದ ಪರಿವೆ ನಾಲ್ಕನೇ ಕಂಚುಕ(೧-೧೨), ಒಳ್ಳೆಯದು, ಕೆಟ್ಟದ್ದು ಎಂದು ವಿಚಾರಿಸುವ ನೀತಿತತ್ತ್ವ ಐದನೆಯ ಕಂಚುಕ(೧-೧೩) ಈ ಐದು ಕಂಚುಕಗಳನ್ನು ಅರಿತವನು ಪುರ್ಯಷ್ಟಕ ಶರೀರನು. ಭವತುಷ್ಟಿ ಗೆದ್ದವನು. ಅಷ್ಟಕ ವಿಭೂಷಿತನು, ಅಷ್ಟೈಶ್ವರ್ಯ ಹೊಂದಿದವನು ಇಂಥವನೇ (೧-೧೪) ಪುರುಷನು ಎಂದು ಹೇಳುತ್ತಾನೆ.

ಮಾಡುವವನಾಂ ಕೇಳುವವನಾರಿ
ನೋಡುವವ ನಾನುಣ್ಬವನುನಾಂ
ನಾಡೆ ಮುಟ್ಟುವ ನಾನೆನುತೆವಿ ಹರಿಸುವಹಂಕೃತಿಯೆ|
ಪಾಡಿನ ಪ್ರಕೃತಿಯೊಳುದಿಸಿ ಗುಣ
ತಾಡನಕೆ ಗುರಿಯಾಗಿಚಿತ್ತಿನ
ಗಾಡಿಯಿಂ ಕನಸೆಚ್ಚರುಗಳೊಳಗಾಡುತಿಹುದೊಲ್ಲು||(೨-೧೬)

ಚಿತ್ತ, ಬುದ್ಧಿ, ಅಹಂಕಾರ, ಮನಸ್ಸು ಎಂಬ ಕರಣೇಂದ್ರಿಯಗಳು, ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಎಂಬ ಪಂಚ ಜ್ಞಾನೇಂದ್ರಿಯಗಳನ್ನು ಕಾಯ ವಿಕಾರ, ಮನೋವಿಕಾರಗಳಿಗೆ ಒಳಗಾಗುವಂತೆ ಮಾಡಿ ಕನಸು ಮತ್ತು ಎಚ್ಚರದ ಸ್ಥಿತಿಯಲ್ಲಿ ತೊಳಲಾಡುವಂತೆ ಮಾಡುತ್ತವೆ. ಇಂಥಹ ಸ್ಥಿತಿಯಲ್ಲಿ ಮನುಷ್ಯನಿಗೆ ನಾನು ಎಂಬ ಅಹಂಭಾವ ಬೆಳೆದು, ರಜಸ್ಸು ಮತ್ತು ತಮೋಗುಣಗಳು ಹೆಚ್ಚಾಗುತ್ತವೆ. ಇದನ್ನೇ ಕವಿಯು ಪಿಂಡಾಭಿಮಾನ ಎಂದು ಕರೆಯುತ್ತಾನೆ.

ಕೆಟ್ಟೆನಕ್ಕಟ ಮನೆಯುಬೆಂದುದು
ಕೆಟ್ಟೆನಯ್ಯ ಪೊಲನು ಪೋದುದು
ಕೆಟ್ಟೆ ರಾಜ್ಯಂತ್ಯಜ್ಯವಾದುದುವೆಂದು ಹಲುಬುವುದು|
ನೆಟ್ಟನೆಯ ಹೊಲ ಮನೆಗಳಿಂದಾಂ

ತುಟ್ಟಿವಡೆದೆನು ನಾಡಿಗೆಲ್ಲಕೆ
ಪಟ್ಟಬದ್ಧನೆನಿಸಿದೆ ನಾನೆಂದಿಹುದುವಿಷಯದೊಳು||(೩-೩)

ನಾನು, ನನ್ನದು ಎಂಬ ಭಾವನೆಯಿಂದ ಜೀವಿಸುತ್ತಿರುವ ಮನುಷ್ಯನಿಗೆ ಯಾವುದಾದರೂ ಒಂದು ತನ್ನದೆನ್ನುವ ವಸ್ತುವನ್ನು ಕಳೆದುಕೊಂಡಾಗ ಅತ್ಯಂತ ದುಃಖಕ್ಕೀಡಾಗುತ್ತಾನೆ. ಏಕೆಂದರೆ ಆತನ ಲೌಕಿಕ ಬದುಕು ಸಂಸಾರ, ಅರಿಷಡ್ವರ್ಗಗಳಿಂದ ಕೂಡಿದ್ದು, ಕೇಳುವ, ನೋಡುವ, ಮೂಸುವ, ಸವಿಯುವ, ಸ್ಪರ್ಶಿಸುವ ತಾಮಸ ಬುದ್ಧಿಯು, ನಾನೇ ಈ ಜಗತ್ತಿನಲ್ಲಿ ಸ್ಥಿರವಾಗಿ ಬದುಕಿ-ಬಾಳುತ್ತೇನೆ ಎಂಬ ಭ್ರಮೆಯನ್ನು ಮೂಡಿಸಿರುತ್ತದೆ. ಇದರಿಂದಾಗಿ ಮಾನವನು ಅನೇಕ ಸಾಂಸಾರಿಕ ತೊಂದರೆಗಳಲ್ಲಿ ಸಿಲುಕಿಕೊಂಡು ನರಳುತ್ತಿರುತ್ತಾನೆ. ಈ ಭವ-ಬಂಧನವನ್ನು ಬಿಡಿಸಿಕೊಳ್ಳಲು ಅನುಸರಿಸಬೇಕಾದ ಕ್ರಮವನ್ನು ಕುರಿತು

ಈಶ್ವರತೆ ಕಟ್ಟಳೆಯ ಧರ್ಮವು
ವಿಶ್ವಕರ್ತೃತೆ ಸೃಷ್ಟಿ ಧರ್ಮವು
ಶಾಶ್ವತ ಸ್ವಾತಂತ್ರ್ಯ ನಿಜಲೀಲಾಂಗ ಧರ್ಮವದು|
ಪಶ್ವಧಿಕವಹ ಜನರ ಚಿತ್ತೆ
ನಿಶ್ಚಿಸಿತ ಚೈತನ್ಯ ಧರ್ಮವು
ಸಾಶ್ವಲಾಯನ ಮುಖ್ಯನುತ ಸಮಹಂತೆಯಂಶವಿವು||(೩-೧೩)

ಬಾಲ್ಯ, ಯೌವ್ವನ, ಮುಪ್ಪಿನಲ್ಲೂ ಚಂಚಲವಾದ ಬುದ್ಧಿಯನ್ನು ಹಿಡಿತದಲ್ಲಿಟ್ಟುಕೊಂಡು, ಒಂದು ಮನೋನಿರ್ಧಾರಕ್ಕೆ ಬರಬೇಕು ಏಕೆಂದರೆ ವಿವಿಧ ಧರ್ಮ, ವಿವಿಧ ತತ್ತ್ವ-ಸಿದ್ಧಾಂತ, ನಂಬಿಕೆಗಳಲ್ಲಿ ಯಾವುದನ್ನು ಹಿಡಿಯಬೇಕು, ಯಾವುದನ್ನು ಬಿಡಬೇಕು ಎಂಬ ಗೊಂದಲದಲ್ಲಿ ಬೀಳದೆ ಈಶ್ವರತೆ ಧರ್ಮವನ್ನು, ಜಗಕೆ ಚಿತ್ತುಗಳು ನಿಶ್ಚೈಯಿಸಿದ ಚೈತನ್ಯವೆಂಬ ಧರ್ಮವನ್ನು ಸ್ವೀಕರಿಸಿ ಸಮಾಧಾನಿಯಾಗಿ ಇರಬೇಕು, ಸಮರಸವಾಗಿ ಬದುಕಬೇಕು ಎನ್ನುತ್ತಾನೆ.

ನಾಲ್ಕನೆಯ ಸಂಧಿಯಲ್ಲಿ 'ಸೃಷ್ಟಿಯ ರಚನೆ ಹೇಗಾಯಿತು? ಇದಕ್ಕೆ ಕಾರಣವಾದ ಅಂಶಗಳಾವವು? ಸೃಷ್ಟಿರಚನೆಯ ಕ್ರಿಯೆಯಲ್ಲಿ ಶಿವ-ಶಕ್ತಿಯರ ಪಾತ್ರ ಕುರಿತು ಅತ್ಯಂತ ವಿವರವಾಗಿ, ಹಂ ಪ್ರಭೆ, ಹಂ ಪ್ರಕಾಶ, ಹಂ ದ್ಯುತಿ, ಭೇದ ಪ್ರಕಾಶ, ವಿಮರ್ಶನ ಪ್ರಕಾಶ ಮುಂತಾದ ವಿಷಯಗಳ ಬಗ್ಗೆ ಹೇಳುತ್ತಾನೆ. ಇಲ್ಲಿ ಕವಿಯು ಬಳಸಿರುವ 'ಹಂ' ಎಂಬ ಪದವು ಶಿವ ಮತ್ತು ಶಕ್ತಿಯನ್ನು ಸೂಚಿಸುತ್ತದೆ. 'ಲ'ಕಾರವೇ ಶಿವ 'ಹ'ಕಾರವೇ ಶಕ್ತಿ ಇವೆರಡು ಕೂಡಿಕೊಳ್ಳಲು ಹೊಸದಾದ 'ಹಂ'ಎನ್ನುವ ಪದದ ಆಕಾರದಲ್ಲಿ ಪರಬ್ರಹ್ಮ ಅಂದರೆ ಜಗತ್ತು ಸೃಷ್ಟಿಯಾಯಿತು, ಈ 'ಹಂತೆ'ಯು ನಿರಂತರವಾಗಿ ಶಿವಶಕ್ತ್ಯಾತ್ಮಕವಾಗಿರುವುದು. ಇದನ್ನು ತಿಳಿದವನೇ ಪರಮನು(೪-೧೦) ಎಂದು ಅದರ ಸ್ವರೂಪ ಕುರಿತಾಗಿ

ಕಾದಿಮಾಂತದ ಪಂಚವರ್ಗದಿ
ಮೋದದಿಂ ಭೂಮ್ಯಾದಿ ಪುರುಷಾಂ
ತೋದಯಂಗಳು ಯರಲವಂಗಳನೊಂದಿ ಕಲೆಯಾದಿ।
ಭೇದಿಮಾಯಾಂತವುವಿರಾಜಕು
ಮಾದರದೆ ಶಷಸಹಗಳೊಳಗನು
ವಾದ ಪಂಚಬ್ರಹ್ಮತತ್ತ್ವವಡಂಗಿಹುದು ಬಳಿಕ॥(೪-೧೨)

'ಕ' ಕಾರ ಆದಿಯಿಂದ ಹಿಡಿದು 'ಮ' ಕಾರದವರೆಗಿನ ಇಪ್ಪತ್ತೈದು ವರ್ಗೀಯ ವ್ಯಂಜನಗಳು, ಭೂಮಿ ಮೊದಲಾದ ಪುರುಷಾರ್ಥಗಳು, ಅವರ್ಗೀಯ ವ್ಯಂಜನಗಳಾದ 'ಯರಲವ'ಗಳನ್ನು ಕೂಡಿಕೊಂಡು ಕಲೆಯಾಗಿ, ಭೇದತತ್ತ್ವದಿ ವಿರಾಜಿಸುವುದಲ್ಲದೆ 'ಶಷಸಹ'ಗಳ ಒಳಗೆ ಅನುವಾದ ಪಂಚಬ್ರಹ್ಮತತ್ತ್ವವು ಅಡಗಿರುವುದು. ಪಂಚಬ್ರಹ್ಮ ತತ್ತ್ವವನ್ನು ಅದು ಒಳಗೊಂಡ ವಿಷಯಗಳಿಗನುಗುಣವಾಗಿ ಈ ಕೆಳಗಿನಂತೆ ವಿಭಜಿಸಬಹುದಾಗಿದೆ.

ಪಂಚಮುಖಗಳು	ಅಂಗಗಳು	ಲಕ್ಷಣ	ಗುಣ	ಲಿಂಗಗಳು	ಗಣಾಗಳು	ಭಕ್ತಿ	ಶಕ್ತಿ	ತನು	ಪದಾರ್ಥ	ಪ್ರಣವ
ಸದ್ಯೋಜಾತ	ಪೃಥ್ವಿ	ಸತ್	ಶಾಂತಿ	ಆಚಾರಲಿಂಗ	ಭಕ್ತ	ಶ್ರದ್ಧಾ	ಕ್ರಿಯಾ	ಸ್ಥೂಲ	ಗಂಧ	ನಕಾರ
ವಾಮದೇವ	ಅಪ್ಪು	ಚಿತ್	ಸ್ವಾದ	ಗುರುಲಿಂಗ	ಮಾಹೇಶ್ವರ	ನಿಷ್ಠಾ	ಜ್ಞಾನ	ಸೂಕ್ಷ್ಮ	ರಸ	ಮಕಾರ
ಅಘೋರ	ತೇಜ	ಆನಂದ	ಸರ್ವಭಕ್ಷಣ	ಶಿವಲಿಂಗ	ಪ್ರಸಾದ	ಅವಧಾನ	ಇಚ್ಛಾ	ಕಾರಣ	ರೂಪು	ಶಿಕಾರ
ತತ್ಪುರುಷ	ವಾಯು	ನಿತ್ಯ	ನಿರ್ಮಲತ್ತ್ವ	ಜಂಗಮಲಿಂಗ	ಪ್ರಾಣಲಿಂಗಿ	ಅನುಭವ	ಆದಿ	ನಿರ್ಮಲ	ಸ್ಪರ್ಶ	ವಕಾರ
ಈಶಾನ	ಆಕಾಶ	ಪರಿಪೂರ್ಣ	ನಿರ್ವಯಲು	ಪ್ರಸಾದಲಿಂಗ	ಶರಣ	ಆನಂದ	ಪರಾ	ಆನಂದ	ಶಬ್ದ	ಯಕಾರ

ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಶಿವನ ಪಂಚಮುಖಗಳಿಂದ ಉದ್ಭವಿಸಿದ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬ ಪಂಚಭೂತಗಳು ಸತ್, ಚಿತ್, ಆನಂದ, ನಿತ್ಯ ಹಾಗೂ ಪರಿಪೂರ್ಣಗಳೆಂಬ ಶಿವನ ಮುಖದಿಂದ ರೂಪ ತಳೆದಿವೆ. ಪಂಚಭೂತಗಳ ಪೂರ್ವಾಶ್ರಯವನ್ನು ಕಳೆವ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗಗಳು ಪಂಚಬ್ರಹ್ಮಗಳೂ ಶಿವನೇ, ಪಂಚಭೂತಗಳೂ ಶಿವನೇ, ಹೀಗಾಗಿ ಪಂಚಭೂತಗಳಿಂದಲೇ ಬ್ರಹ್ಮಾಂಡಗಳು, ಚರಾಚರ ವಸ್ತುಗಳು ದೇಹ ಹಾಗು ಜೀವಿಗಳು ಸೃಷ್ಟಿಯಾದವು.[೪] ಆದರೆ ಶಿವನೇನೂ ಸ್ವತಂತ್ರನಲ್ಲ.

ಆಲದಣು ಬೀಜದೊಳುಪುದಿದವಿ
ಶಾಲತರುವಿನೊಲಾ ಪರಮನನು
ಕೂಲ ಹೃದಯವೆನಿಸುವ ಹಂತೆಯ ಕಾರಣೇಚ್ಛೆಯೊಳು।(೪-೧೩)

ಅಣು ಗಾತ್ರದ ಬೀಜದಲ್ಲಿ ವಿಶಾಲವಾದ ಆಲದ ಮರವು ಅಡಗಿರುವಂತೆ ಪರಮಾತ್ಮನಲ್ಲಿ ಬ್ರಹ್ಮಾಂಡದ ಅನಂತ ತತ್ತ್ವಗಳು ಅಡಗಿವೆ. ಸೃಷ್ಟಿಯ ಸಕಲ ಚರಾಚರ ವಸ್ತುಗಳ ಜೀವಾತ್ಮನೆನಿಸಿದ

ಪರಮಾತ್ಮನು ಆಧಾರ ಸ್ತಂಭವಾಗಿದ್ದಾನೆ. ಅವನಿಲ್ಲದೆ ಅವುಗಳಿಗೆ ಅಸ್ಥಿತ್ವವಿಲ್ಲ. ಆದರೆ 'ಮರವನ್ನು ಬಿಟ್ಟು ಬೇರು ಬೆಳೆಯಲಾರದು, ಬೇರನ್ನು ಬಿಟ್ಟು ಮರ ನಿಲ್ಲಲಾರದು' ಎಂಬ ತತ್ತ್ವದಂತೆ ಶಿವನೂ ಸಹ ಜೀವಾತ್ಮರುಗಳನ್ನು, ಬ್ರಹ್ಮಾಂಡವನ್ನು ಬಿಟ್ಟಿರುವಂತಿಲ್ಲ. ಒಂದು ವೇಳೆ ಇವುಗಳನ್ನು ಬೇರ್ಪಡಿಸಿ ನೋಡಿದರೆ ಶಿವನಿಗೂ ಕೂಡ ಅಸ್ತಿತ್ವ ಇಲ್ಲದಂತಾಗುತ್ತದೆ. ಹೀಗೆ ಎರಡೂ ಸ್ವತಂತ್ರವೆನಿಸಿದರೂ, ಸ್ವತಂತ್ರವಲ್ಲ ಇದನ್ನೇ ವೀರಶೈವರು ಶಕ್ತಿ ವಿಶಿಷ್ಟಾದ್ವೈತ ಎಂದು ಕರೆದಿದ್ದಾರೆ. ಕವಿಯು ಇದಕ್ಕೆಲ್ಲ 'ಹಂ ಪ್ರಕಾಶ'ವೇ ಕಾರಣವೆನ್ನುತ್ತಾನೆ(೪-೧೩). 'ಹಂ ಪ್ರಕಾಶ'ದ ರಸಾನುಭೂತಿ, 'ಹಂ ಪ್ರಭೆ'ಯಾಗಿ ಬೆಳಗುವ ಬಗೆ ಜಾತಿ ನಾಮಗಳನ್ನು ಕೇಳದೆ ಬಾಲರಿಂದ ಹಿಡಿದು ವೃದ್ಧರವರೆಗೆ, ಕಾಲತ್ರಯಗಳಲ್ಲಿ ಶುದ್ಧವಾಗಿ ಏಕ ರೀತಿಯಲ್ಲಿ ಗೋಚರಿಸುವ 'ಹಂ ಪ್ರಚುರ', 'ಹಂದ್ಯುತಿ'ಗಳು 'ಸೋಹಂ' ಭಾವದಿಂದ ವಿರಾಜಿಸುತ್ತಿವೆ.

ಅವನಿಗಿವಭಿನ್ನನು ವಿಚಾರಿಸ
ಲಿವನಿನವಭಿನ್ನನು ವಿಭಾಗಿಸ
ಲವನನಾಂ ಬಲ್ಲೆನುಮೊದಲು ಬಳಿಕಿವನನಾಂಬಲ್ಲೆ(೪-೩೩)

ಎಂದು ಲೋಕರೂಢಿಯಲ್ಲಿ ಸಾಮಾನ್ಯ ಮನುಷ್ಯರು ಭೂಮಿಯ ಮೇಲೆ ವ್ಯವಹರಿಸುವ ಹಾಗೆ ಶಿವ ಮತ್ತು ಸೃಷ್ಟಿ ಎರಡೂ ಭಿನ್ನವೆಂದು ತೋರಿದರೂ, 'ಹಂತೇಜ' ಎಂಬುದು ಭಿನ್ನವಲ್ಲ.

ಐದನೆಯ ಸಂಧಿಯಲ್ಲಿ 'ಆಲಿಸೈ ಎಲೆ ಮಗನೆ' ಎಂದು ಈ ವಿಚಿತ್ರವಾದ ಭಿತ್ತಿಯ ಮೇಲೆ ವಿಶಾಲ ಸಮುದ್ರದಂತೆ ಜಗತ್ತು ಏಕರೀತಿಯಲ್ಲಿ ಶೋಭಿಸುತ್ತಿರುವಾಗ ಭಿನ್ನತೆಗೆ ಮೂಲ ಕಾರಣವಾಗಿ ವಿಹರಿಸುತ್ತಿರುವ ಶಕ್ತಿಗಳನ್ನು ನಿರೂಪಿಸುವೆ(೫-೨) ಎನ್ನುತ್ತ ಜ್ಞಾನಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿಗಳ ಸ್ವರೂಪಗಳನ್ನು ವಿವರಿಸುತ್ತಾನೆ. ಇಂದ್ರಿಯ ಗೋಚರವಾಗುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳನ್ನು ತಿಳಿಯುವುದೇ ಜ್ಞಾನಶಕ್ತಿ. ಕುಂಬಾರನ ತೆರದಿ ಏನನ್ನು ಬಯಸದೆ ಜಗತ್ತಿನ ಸೃಷ್ಟಿಯಲ್ಲಿ ತೊಡಗಿರುವ ಶಿವನಿಗೆ ಜ್ಞಾನ, ಕ್ರಿಯಾ ಶಕ್ತಿಗಳು ವಿಜೃಂಭಿಸಿ, ಇಚ್ಛಾಶಕ್ತಿಯಿಂದ ಅನಂತ ಶಕ್ತಿಗಳು(೫-೫) ಸಮುದ್ರದ ತೆರೆಗಳಂತೆ ಏಳುತ್ತಾ ಬೀಳುತ್ತಾ ಗುಂಪು ಗುಂಪಾಗಿ ಹುಟ್ಟಿಕೊಳ್ಳುತ್ತವೆ. ಮತ್ತೆ ತನ್ನಿಚ್ಛೆಯಂತೆ ಆನಂದದಿಂದ ಇದ್ದು, ಇಂದ್ರಿಯ ಗೋಚರವಾಗುವಂತೆ ಎತ್ತನೋಡಿದರೂ ತಾನೇ ತಾನಂತೆ ವಿಶ್ವದಲ್ಲಿ ಗೋಚರಿಸುತ್ತಾನೆ. ಇದನ್ನು ಕವಿ 'ಸಾಗರತರಂಗ ನ್ಯಾಯದಂತೆ' (೫-೭) ಎಂದು ಕರೆಯುತ್ತಾನೆ.

ಶುದ್ಧ-ಸ್ಥಿತಿಯಲ್ಲಿರುವ ಆತ್ಮನಿಗೆ ಇಚ್ಛಾ-ಕ್ರಿಯಾ-ಜ್ಞಾನ ಶಕ್ತಿಗಳು ಸ್ಪರ್ಶವಾದಾಗ ಮಾನವ ಮಲತ್ರಯಗಳ ಬಂಧನಕ್ಕೊಳಗಾಗುತ್ತಾನೆ. ಅಣವ ಮಲದಿಂದ ಅಪರಿಪೂರ್ಣತ್ವ, ಕಾರ್ಮಿಕಮಲದಿಂದ ಅಲ್ಪ ಕರ್ತೃತ್ವ, ಮಾಯಾ ಮಲದಿಂದ ಅಲ್ಪಜ್ಞತ್ವ ಪ್ರಾಪ್ತವಾಗುತ್ತದೆ. ಆತ್ಮನಿಗೆ ಅಣವ ಮಲದಿಂದ

ಮನಸ್ಸು-ಚಿತ್ತಗಳ ಸೂಕ್ಷ್ಮಾವಸ್ಥೆಯ ಕಾರಣತನು ತೃಪ್ತಿ ಗುಣ ಹೊಂದಿ, ಮಾಯಾಮಲದಿಂದ ಅರಿಷಡ್ ವರ್ಗಗಳಿಂದ ಪ್ರೇರಿತವಾದ ಸೂಕ್ಷ್ಮತನು, ಕಾರ್ಮಿಕ ಮಲದಿಂದ ದೇಹಾಭಿಮಾನ, ಇಂದ್ರಿಯ ತೃಷೆ ಉಳ್ಳಂಥ ಸ್ಥೂಲತನುಗಳು ಏರ್ಪಡುತ್ತವೆ.[೫] ಇದನ್ನು 'ಆತ್ಮತತ್ತ್ವ' ಎಂದೂ ಹೆಸರಿಸುತ್ತಾರೆ.

ರೂಪ ರಸ ಗಂಧ ಸ್ಪರ್ಶಶ
ಬ್ದೋಪಲಾಲಿತ ವಿಷಯಭೋಗ್ಯಗ
ಳೀಪರಿಯ ಕಣ್ಬಾಯಿ ಮೂಗುವುಸಮ್ಮ ಕಿವಿಗಳಿವು|
ಮಾಪನಗ್ರಜ ತಿಳಿ ಹೃಷಿಕಕ
ಲಾಪವಿನ್ನುವುನೋಳ್ಪ ಸವಿವಶ
ಚೀಪವಾಸಿಪ ಸೋಂಕಿಪಾಲಿಪ ಭೋಕ್ತೃಗಳಿವೆಲ್ಲ|| ೫-೧೨

ಪಂಚ ಬ್ರಹ್ಮದಿಂದ ಹುಟ್ಟಿದ ಪಂಚಭೂತಗಳು ಪೃಥ್ವಿ, ಅಪ್ಪು, ಅಗ್ನಿ, ವಾಯು ಮತ್ತು ಆಕಾಶ ಇವುಗಳ ಗುಣಧರ್ಮಗಳಾದ ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳನ್ನು ಕಣ್ಣು, ಬಾಯಿ, ಮೂಗು, ಚರ್ಮ, ಕಿವಿ ಎಂಬ ಪಂಚಜ್ಞಾನೇಂದ್ರಿಯಗಳಿಂದ ಭೋಗಿಸಲ್ಪಡುತ್ತವೆ. ಇವು ನೋಡುವ, ಸವಿಯುವ, ಮೂಸುವ, ಸೋಂಕಿಸುವ, ಲಾಲಿಸುವ ಭೋಕ್ತೃ ಗುಣಗಳನ್ನು ಹೊಂದಿವೆ. ರೂಪ, ರಸ, ಗಂಧ, ಸ್ಪರ್ಶ, ಶಬ್ದ ಇವುಗಳು ಪ್ರತಿಯೊಂದು ಪಂಚಭೂತಗಳಲ್ಲಿ ಇರುವುದರಿಂದ ಮನುಷ್ಯನ ಪಂಚ ಕರ್ಮೇಂದ್ರಿಯಗಳು(ವಾಕ್, ಪಾಣಿ, ಪಾದ, ಪಾಯ, ಗುಹ್ಯ), ಪಂಚಜ್ಞಾನೇಂದ್ರಿಯಗಳು, ಪಂಚವಾಯುಗಳು(ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ), ಪಂಚ ವಿಷಯಗಳು, ಕರಣ ಚತುಷ್ಟಯಗಳು (ಮನಸ್ಸು, ಅಹಂಕಾರ, ಬುದ್ಧಿ, ಚಿತ್ತು) ಹುಟ್ಟುತ್ತವೆ. ಇದನ್ನು ಪಂಚಮಹಾಭೂತಗಳ 'ಪಂಚೀಕರಣ' ಎಂದು ಹೇಳಲ್ಪಡುತ್ತದೆ.[೬] ಈ ಕ್ರಿಯೆಗೆ ಮನುಷ್ಯನ 'ದೃಷ್ಟಿಯಂತೆ ಸೃಷ್ಟಿ' ಎಂಬ ಮಾತು ಅನ್ವಯಿಸುತ್ತದೆ. ಏಕೆಂದರೆ ಸೂಕ್ಷ್ಮತೆಯನ್ನು ಪತ್ತೆಹಚ್ಚುವ ಗುಣವಿದ್ದವರಿಗೆ ಮಾತ್ರ ಇವೆಲ್ಲ ಗೋಚರಿಸುತ್ತವೆ.

ದೃಕ್ಕು ರೂಪಂ ಗ್ರಹಿಸುವಲ್ಲಿಯ
ದಕ್ಕ ಭೇದವದಾಗದಿರೆತ
ದೃಕ್ಕು ರೂಪಂ ಗ್ರಹಿಸಲಾರದೆ ಪೋಪುದದರಿಂದೆ|
ದೃಕ್ಕು ರೂಪವದೇಕವಹುದೈ
ದೃಕ್ಕುವುಂ ದ್ರಷ್ಟಾರನುಂ ತಾ
ನಕ್ಕುವೊಂದೆ ರೂಪುವಿದರಂತೆಲ್ಲವನುನೋಡು||(೫-೧೪)

ಪಂಚಭೂತಗಳಿಂದ ಕೂಡಿ ಜಗವು ಸೃಷ್ಟಿಯಾಗಿರಲು ಇದರಲ್ಲಿ ವಾಮೇಶ್ವರಿ, ಖೇಚರಿ, ಗೋಚರಿ, ದಿಕ್ಚರಿ ಮತ್ತು ಭೂಚರಿ ಎಂಬ ಶಕ್ತಿಗಳು ಚಿತ್ ಶಕ್ತಿಗಳಾಗುತ್ತವೆ. ಈ ಶಕ್ತ್ಯಾತ್ಮಕವಾದ ವಿಷಯಗಳನ್ನು ಗ್ರಹಿಸುವಲ್ಲಿಯ ದೃಷ್ಟಿಯು 'ಸಮಹಂತೆ'ಯಲ್ಲಿದ್ದರೆ ಇದನ್ನೇ 'ಬ್ರಹ್ಮ' ಎಂದು

ಭಾವಿಸುತ್ತಾರೆ(೫-೧೫). ಶಿವಶರಣರು 'ಬ್ರಹ್ಮ'ವನ್ನು ಅಷ್ಟವಿಧ ಸಕೀಲಗಳಿಗೆ ಅನುಗುಣವಾಗಿ ಭಾವಿಸುತ್ತಾರೆ. ಇದು ಯಾರೂ ಅರಿಯಲು ಬಾರದ ದಿವ್ಯ ಬೋಧಾಮೃತ(೫-೧೬) ಎಂದು 'ಓಂ'ಕಾರ ಸ್ವರೂಪವನ್ನು ತಿಳಿಸುತ್ತಾನೆ.

ಇದಕೆಯೋಂಕಾರವೆ ನಿರಂತರ
ವಿದಿತ ಬೀಜವಿದಕ್ಕೆಯ ಮಗ
ಉದಿತ ವರ್ಣಗಳೊಂದೆಯಾಗಿರಲೊಂದರೊಂದರೊಳು|
ಸದಮಲ ಷಟ್ಸ್ಥಲಗಳೊಂದಿರೆ
ಮುದದೆಯವನುಸಿರ್ವೆನು ವಿವರದಿಂ
ಗದಿತತಾರೆಸುದಂಡಕೆಯು ಕುಂಡಲಿ ಸದರ್ಥವಿದು||(೫-೧೭)

'ಓಂ' ಕಾರದಿಂದ 'ಅ'ಕಾರ 'ಉ'ಕಾರ 'ಮ' ಕಾರಗಳಾದವು. ಇವೇ 'ಓಂ' ಕಾರದ ಮೂರು ಬೀಜಾಕ್ಷರಗಳು. ಇವುಗಳಲ್ಲಿ 'ಅ' ಕಾರವೆ ನಾದ 'ಉ' ಕಾರವೆ ಬಿಂದು, 'ಮ' ಕಾರವೆ ಕಳೆ. 'ಅ' ಕಾರವೆ ರುದ್ರ, 'ಉ' ಕಾರವೆ ಈಶ್ವರ, 'ಮ' ಕಾರವೆ ಸದಾಶಿವ ಇಂತೀ 'ಅಉಮ' ಕಾರಕ್ಕೆ ನಾದ ಬಿಂದು ಕಳೆಯೇ ಆಧಾರ. ಆನಾದಬಿಂದು ಕಳೆಗೆ ಪ್ರಕೃತಿಯೇ ಆಧಾರ, ಆ ಪ್ರಕೃತಿಗೆ ಪ್ರಾಣವೇ ಆಧಾರ, ಆ ಪ್ರಾಣಕ್ಕೆ ಲಿಂಗವೇ ಆಧಾರ. 'ಅ' ಎಂದರೆ ಅನಾಹತ, 'ಉ' ಎಂದರೆ ನಾದವಿಳಿಯಿತ್ತು. 'ಮ' ಎಂದರೆ ಬಿಂದು ಬಂದು ಕೂಡಲು ಶಿವ-ಶಕ್ತಿಯಾಗುತ್ತ ಇಂತಹ 'ಓಂ' ಕಾರವಾಯಿತು.[೭] 'ಅಉಮ'ಗಳು ಒಂದೊಂದು ವರ್ಣಗಳಾಗಿದ್ದರೂ ಕೂಡ ಒಂದೊಂದರಲ್ಲಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್ಸ್ಥಲಗಳನ್ನು ವಿವರಿಸುತ್ತ ಇವೆಲ್ಲವೂ ಭಕ್ತಿ, ಇವುಗಳಿಂದ ಕರ್ಮವು ಅಳಿಯುತ್ತದೆ. ಬುದ್ಧಿಯುಕ್ತವಾದ ವಿಚಾರಗಳು ಹೊಳೆಯುತ್ತವೆ.

ಷಟ್‌ಸ್ಥಲ ಮಾರ್ಗದಲ್ಲಿ ಅನುಸರಿಸಬೇಕಾದಾಗ ಆಚಾರಗಳನ್ನು ಕುರಿತು ಎಲ್ಲಾ ಪೂಜೆಗಳನ್ನು ಹೊರತುಪಡಿಸಿ, ಲಿಂಗಪೂಜೆಯನ್ನು ಶೂನ್ಯದಲ್ಲಿ ಮಾಡುತ್ತಿದ್ದರೆ ಅದೇ ಸದಾಚಾರ. ಇಂತಹ ಆಚಾರವನ್ನು ಬಿಡದೆ ಮಾಡಲು ಆತನು ಆಚಾರ ವೀರನೆನಿಸುವನು (೫-೨೪). ಶುಚಿ-ಅಶುಚಿ, ಉಚಿತ-ಅನುಚಿತವನ್ನು ಲಿಂಗದ ಬೆಳಕಿನಲ್ಲಿ ನೋಡಿ, ಕೈಕೊಂಡ ಕಾರ್ಯವನ್ನು ಸಮಯ ಪಾಲನೆಯಿಂದ ಕೈಗೊಂಡವನೇ ಆಚಾರ ಪ್ರಸಾದಿಯು. ಶಿವಭಕ್ತಿಯ ನಿಂದೆ ಮಾಡುವುದನ್ನು ಕೇಳದಿರುವುದೇ ಆಚಾರ ಸತ್ಪ್ರಾಣಿ (೫-೨೪). ಇಂತಹ ಆಚಾರದೊಳಗೆ ಸಿಲುಕಿಕೊಂಡು ಬಂಧು ಬಳಗಗಳ, ತಂದೆ-ತಾಯಿಗಳನ್ನು ಮರೆತು ಯಾವಾಗಲೂ ಗುರುವನ್ನು ಜಪಿಸುವವನು ಗುರು ಮೋಹಿ(೫-೨೫), ಗುರುವನ್ನೇ ಬಂಧುವೆಂದು ಗುರುವಿಗೆ ಪೂಜೆ, ಅರ್ಚನೆ, ಮಾಡುತ್ತ ಗುರುವಿನ ಮಾರ್ಗವನ್ನು ಅನುಸರಿಸುತ್ತಿರಲು ಆತನು 'ಗುರುಶೇಷಿ'(೫-೨೬), ಜಂಗಮರಲ್ಲಿ ಕುಲಜಾತಿ, ನಿಯಮ ಮುಂತಾದ ವಿಷಯಗಳನ್ನು ಲೆಕ್ಕಿಸದೇ, ಒಳ್ಳೆಯ ಚಿತ್ತವನ್ನು ಉಳ್ಳವನಾಗಿ ತಿರುಗುತ್ತಿರಲು ಆತನೆ ಚರಮೋಹಿ. ದೇಹದ ಆಶೆ-

ಆಮಿಷಗಳನ್ನು ನಿಗ್ರಹಿಸಿ ಚರಲಿಂಗದ ಮೇಲೆ ಅಭಿಮಾನವುಳ್ಳವನು ಜಂಗಮದ ಭಕ್ತ(೫-೩೦) ಹೀಗೆ ಚರಶೇಷಿ, ಜಂಗಮ ಪ್ರಾಣಿ, ಪೂಜಕ, ತಚ್ಛೇಷ್ಟಿ, ಶಿವಶೇಷೈಕ್ಯ, ಮಹಾಪೂಜಕ ಎಂಬ ಗುಣ ವಿಶೇಷಣಗಳನ್ನು ಒಂದೊಂದು ಪದ್ಯದಲ್ಲಿ ತಿಳಿಸಿದ್ದಾನೆ.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ ಎಂಬ ಷಡಂಗಗಳ ವಿವರಣೆಯಲ್ಲಿ ಯಾವುದು ಉತ್ತಮವಾದ ಅಂಗಸ್ಥಲವೆನಿಸುತ್ತದೆ ಎಂಬುದಕ್ಕೆ

ಉತ್ತಮಾಂಗ ಸ್ಥಳವೆನಲು ಕ್ರಿಯೆ
ಮತ್ತದುವೆ ಚಿತಿವೃತ್ತಿಯದು ತಾಂ
ಸತ್ತಮನೆ ಚೈತನ್ಯ ರೂಪಿಣಿಯಾಗಿದಂತೆಯನು|
ಪತ್ತಿ ಸತ್ಯಾಂಗವೆನಿಸಿಯು
ದಾತ್ತವಹ ಭೋಗಾಂಗವೆಂದೆನಿ
ಸುತ್ತೆಯೋಗಾಂಗಾಂಕಿತದೆ ಆತ್ಮತ್ರಯವನೊಂದಿ||(೫-೪೪)

ತ್ಯಾಗಾಂಗದಲ್ಲಿ ಭಕ್ತ-ಮಹೇಶ, ಭೋಗಾಂಗದಲ್ಲಿ ಪ್ರಸಾದಿ-ಪ್ರಾಣಲಿಂಗಿ, ಯೋಗಾಂಗದಲ್ಲಿ ಶರಣ-ಐಕ್ಯ ಎಂದು ಆರು ಅಂಗಗಳು ಮೂರಾಗುತ್ತವೆ. ಇವು ಕ್ರಿಯೆ, ಚಿತ್ತವೃತ್ತಿ, ಜಡತೆಗಳನ್ನನುಸರಿಸಿ ತ್ಯಾಗಾಂಗದಲ್ಲಿ ಸ್ಥೂಲತನು, ಭೋಗಾಂಗದಲ್ಲಿ ಸೂಕ್ಷ್ಮತನು, ಯೋಗಾಂಗದಲ್ಲಿ ಕಾರಣ ತನುಗಳಾಗಿ ತನು ತ್ರಯಗಳೆನಿಸಿವೆ. ಸ್ಥೂಲ, ಸೂಕ್ಷ್ಮ, ಕಾರಣ ಎಂಬ ತನುತ್ರಯಗಳಿಗನುಗುಣವಾಗಿ ಪೂಜಿಸಿಕೊಳ್ಳುವ ಲಿಂಗಗಳನ್ನು ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳೆಂದು ಮೂರಾಗುತ್ತವೆ. ಜಗತ್ತಿನ ವ್ಯವಹಾರದಿಂದ ತನ್ನ ತಾ ಮರೆತಿರುವ ಜೀವಾತ್ಮನು, ಆ ದೇಹದ ಜಡತ್ವವನ್ನು ಅರಿತು ಚೈತನ್ಯಾತ್ಮಕನಾಗಲು ಹವಣಿಸುತ್ತಾನೆ. ಇದರಿಂದ ತಾನು ಯಾರು ಎಂದು ಚಿಂತಿಸುವ ಅಂತರಾತ್ಮನಾಗಿ, ತನ್ನ ತತ್ತ್ವವನರಿತು ಪರತತ್ತ್ವದಲ್ಲಿ ಪರಾಕಾಷ್ಠೆಯನ್ನು ಹೊಂದಿ ಪರಮಾತ್ಮನಾಗುತ್ತಾನೆ. ಕವಿ ಇದುವರೆಗೆ ಅಂಗಸ್ಥಲಗಳ ವಿಚಾರವನ್ನು ಹೇಳಿ ಮುಂದೆ

ಆಲಿಸೈ ಇನ್ನುಳಿದ ಲಿಂಗದ
ಲೀಲೆಯ ಸ್ಥಲ ಷಟ್ಕವನು ವಾ
ಲೋಲ ಮನದಿಂ ಪೇಳ್ವೆವೆಂದೊಪ್ಪಿದನು ಗುರುರಾಯ|(೫-೪೫)

ಎಂದು ಲಿಂಗಸ್ಥಲದ ಲೀಲೆಯನ್ನು ಅಂದರೆ ಷಟ್‌ಸ್ಥಲ ಮಾರ್ಗವನ್ನು ಆರನೇ ಸಂಧಿಯಲ್ಲಿ ವಿಸ್ತಾರವಾಗಿ ಹೇಳುತ್ತಾನೆ.

ಮಗನೆ ಕೇಳೋಂಕಾರವಾಚಕ
ವಗಲದಂಗ ಸ್ಥಲವು ವಾಚ್ಯವೇ
ಸೊಗಯಿಸುವ ಲಿಂಗಸ್ಥಲವು ಷಟ್ಟ್ರತಿಗಳೊಂದಿರ್ಪ|
ಸುಗಮವಾದ ಷಡಕ್ಷರಂಗಳೆ
ನೆಗಳ್ದವೈಲಿಂಗ ಸ್ವರೂಪವ
ನುಗಿಸದವರಭಿಧಾನವಾವವೆನಲ್ಕೆ ಪೇಳುವೆವು|| (೬-೨)

'ಓಂ' ಕಾರವಾಚಕದಿಂದ ಬಿಟ್ಟು ಇರದ ಅಂಗಸ್ಥಲವು ವಾಚ್ಯವಾದದ್ದೇ, ಆದರೆ ಲಿಂಗಸ್ಥಲವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂಬ ಆರು ವಿಧದಿಂದ ಕೂಡಿ ಸುಗಮವಾದ ಷಡಕ್ಷರ (ಓಂ ನಮಃ ಶಿವಾಯ)ಗಳು ಸೇರಿಕೊಂಡು ಲಿಂಗಸ್ವರೂಪ ವಾಯಿತು. ಇದನ್ನೇ ವಚನಕಾರರು ಸೃಷ್ಟಿಯ ರಚನೆ ತತ್ತ್ವವನ್ನಾಗಿ ವಿವರಿಸುತ್ತಾರೆ. 'ಓಂ' ಕಾರ ಸ್ವರೂಪವಾದ ಮಹಾಲಿಂಗದಿಂದ ಸೃಷ್ಟಿ ರಚನೆಗೆ ಬೇಕಾದ ಸಾಮಾಗ್ರಿಗಳಾದ 'ನ'ಕಾರ 'ಶಿ'ಕಾರ 'ವ'ಕಾರ, 'ಯ'ಕಾರಗಳೆಂಬ ಪಂಚ ಪ್ರಣವಗಳ ಉತ್ಪತ್ತಿ, ಮತ್ತು ಮಹಾಸಾದಖ್ಯ, ಶಿವಸಾದಾಖ್ಯ, ಅಮೂರ್ತಿಸಾದಖ್ಯ ಮೂರ್ತಿಸಾದಖ್ಯ, ಕರ್ತೃಸಾದಾಖ್ಯ, ಕರ್ಮಸಾದಖ್ಯಗಳೆಂಬ ಪಂಚಸಾದಖ್ಯಗಳ ಉತ್ಪತ್ತಿ ಮತ್ತು ಶಾಂತ್ಯಾತೀತೋತ್ತರಾ, ಶಾಂತ್ಯಾತೀತ, ಶಾಂತಿ, ವಿದ್ಯೆ, ಪ್ರತಿಷ್ಠಾ, ನಿವೃತ್ತಿಗಳೆಂಬ ಪಂಚಕಲೆಗಳ ಉತ್ಪತ್ತಿ, ಚಿತ್‌ಶಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿಗಳೆಂಬ ಪಂಚಶಕ್ತಿಗಳ ಉತ್ಪತ್ತಿ ಹಾಗೂ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚ ಮಹಾಭೂತಗಳ ಉತ್ಪತ್ತಿ ಇವೆಲ್ಲವೂ 'ಓಂ'ಕಾರ ಸ್ವರೂಪಿಯಾದ ಮಹಾಲಿಂಗದಿಂದ ಹೊರಹೊಮ್ಮಿರುವುದರಿಂದ ಸೃಷ್ಟಿ ರಚನೆ ರೂಪುಗೊಳ್ಳಲು ಮಹಾಲಿಂಗವೇ ಆದಿಸ್ಥಲವೆನಿಸುತ್ತದೆ'.[೯] ಇದನ್ನು ಈ ಕೆಳಗಿನಂತೆ ಗುರುತಿಸಬಹುದು.

ಮಹಾಲಿಂಗ (ಓಂಕಾರ ಸ್ವರೂಪಿ)

ಪ್ರಣವಗಳು	ಸಾದಖ್ಯಗಳು	ಕಲೆಗಳು	ಶಕ್ತಿಗಳು	ಭೂತಗಳು
೧. 'ನ' ಕಾರ	ಮಹಾಸಾದಖ್ಯ	ಶಾಂತ್ಯಾತೀತೋತ್ತರಾ	ಚಿತ್‌ಶಕ್ತಿ	ಪೃಥ್ವಿ
೨. 'ಮ' ಕಾರ	ಶಿವಸಾದಖ್ಯ	ಶಾಂತ್ಯಾತೀತ	ಪರಾಶಕ್ತಿ	ಅಪ್ಪು
೩. 'ಶಿ' ಕಾರ	ಅಮೂರ್ತಿಸಾದಖ್ಯ	ಶಾಂತಿ ವಿದ್ಯೆ	ಆದಿಶಕ್ತಿ	ತೇಜ
೪. 'ವ' ಕಾರ	ಮೂರ್ತಿಸಾದಖ್ಯ	ಪ್ರತಿಷ್ಠಾ	ಇಚ್ಛಾಶಕ್ತಿ	ವಾಯು
೫. 'ಯ' ಕಾರ	ಕರ್ಮಸಾದಖ್ಯ	ನಿವೃತ್ತಿ	ಜ್ಞಾನಶಕ್ತಿ	ಆಕಾಶ

ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಆರು ಲಿಂಗಗಳಲ್ಲಿ ಸದಾಚಾರ, ನಿಯತಾಚಾರ, ಗಣಾಚಾರವೆಂಬ ಮೂರು ವಿಧದ ಆಚಾರ(೬-೩)ಗಳ ಸ್ವರೂಪವನ್ನು

ಅಜ್ಜರತಿಶಯ ಮಾರ್ಗದಿಂದವೆ
ಸಜ್ಜೆನಿಸಿ ಭಕ್ತರೊಳು ನಡೆಯಲು
ಸಜ್ಜನತ್ವವೆಯದು ಸದಾಚಾರವು ಶಿವಪ್ರಿಯವು।
ರುಜ್ಜಯನೆ ತಾ ಪಿಡಿದ ಬ್ರತವದ

ಪಜ್ಜೆದಪ್ಪದೆ ನಡೆಸುತೆಡಹಲು
ಪಜ್ಜಳಿಪಸುವ ಬಿಡಲು ನಿಯತಾಚಾರವದತಾನು||(೬-೪)

ಹೀಗೆ ಹರಗುರು ಚರಾದಿಗಳನ್ನು ನಿಂದಿಸುವವರನ್ನು ದಂಡಿಸುವುದೇ ಗಣಾಚಾರವೆನಿಸುತ್ತದೆ. ಈ ಆಚಾರಗಳಲ್ಲಿ ನಡೆಯುವ ಕ್ರಿಯೆಗಳನ್ನು ವೇದೋಪದೇಶ, ದೀಕ್ಷೆ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಸ್ವಾಯತ, ಇಂದ್ರಿಯಾರ್ಪಣ, ಏಕಾಗ್ರಚಿತ್ತ, ಸಂಸಾರವಧ್ಯ, ತತ್ತ್ವಜ್ಞಾನ, ಶುದ್ಧವಿದ್ಯೆ, ನಿರಧಿಕರಣ, ಸಮಯಾಚಾರ ಮುಂತಾದ ಕ್ರಿಯೆಗಳ ಬಗ್ಗೆ ಹೇಳುತ್ತಾನೆ. ಮುಕ್ತಿಯ ಉಪದೇಶವು ಶಿವಧರ್ಮಿಣಿ ಮತ್ತು ಲೋಕಧರ್ಮಿಣಿ ಎಂದು ಎರಡು ತೆರನಾಗಿದೆ. ಶಿವಧರ್ಮಿಣಿ ಎಂಬ ದೀಕ್ಷೆಗೆ ಗೃಹಸ್ಥರೇ ಯೋಗ್ಯರು(೬-೧೬). ಏಕೆಂದರೆ ಮರೆವೆಯ ಮಾನವನು ಅರಿಷಡ್ ವರ್ಗಗಳಿಂದ ಪ್ರೇರಿತನಾಗಿ ಪರಧನ, ಪರಸತಿ, ಪರನಿಂದೆ ಮುಂತಾದ ಅನಾಚಾರ ದುರಾಚಾರಗಳನ್ನು ಎಸಗಿ ಭವಿತನವನ್ನು ಅನುಭವಿಸುತ್ತಿರುತ್ತಾನೆ. ಈತನಿಗೆ ಸದ್ ಭಕ್ತಿಯ, ಸನ್ಮಾರ್ಗದ ಅರಿವನ್ನು ಬೋಧಿಸಿ, ಸರ್ವಾಂಗಗಳನ್ನು ಶುದ್ಧಗೊಳಿಸುವ ದೀಕ್ಷೆ ಎಂಬ ಸಂಸ್ಕಾರ ಬೇಕಾಗುತ್ತದೆ.

ಪಂಚ ಕೋಣೆಗಳಿಂದ ಕೂಡಿದ
ಪಂಚ ಕಲೆಗಳ ನಾಂತ ನಿರ್ಮಲ
ಪಂಚಶಕ್ತಿ ಸಮನ್ವಿತದ ತತ್ಪಂಚ ಮುದ್ರೆಯನು|
ಮುಂಚೆಯುದ್ಧರಿಸುತ್ತೆಯದರಸ
ಮುಂಚಿತ ಬಹಿರ್ವಳಯದಲ್ಲಿಯು
ಪಂಚವರ್ಣ್ಣಗೆಯಕ್ಕಿಯಿಂದಲ್ಲದೊಡೆ ಬಿಳಿದಾದ||(೬-೧೮)

ಜ್ಞಾನೇಂದ್ರಿಯಗಳೆಂಬ ಪಂಚ ಕೋಣೆಗಳಿಂದ ಕೂಡಿದ, ಶಾಂತ್ಯಾತೀತೋತ್ತರಾ, ಶಾಂತ್ಯಾತೀತ, ಶಾಂತಿವಿದ್ಯೆ, ಪ್ರತಿಷ್ಠಾ, ನಿವೃತ್ತಿ ಎಂಬ ಪಂಚಕಲೆಗಳನ್ನು ಹೊಂದಿದ, ಚಿತ್‌ಶಕ್ತಿ, ಪರಾಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ ಎಂಬ ಪಂಚಶಕ್ತಿಗಳಿಗೆ ಸಮಾನವಾದ ಕಂಥೆ, ಖಟ್ವಾಂಗ, ದಂಡ, ಗುಂಡಿಗಪ್ಪರದ ಜೋಳಿಗೆ, ಕಾಮಕ್ಷ ಎಂಬ ಪಂಚಮುದ್ರೆಗಳನು ಬಹಿರಂಗದಲ್ಲಿ ನೀಡಬೇಕು. ಇದರಿಂದ ಜೀವಭಾವದ ಭ್ರಮೆಯಿಂದ, ಶಿವಭಾವದ ನೆಲೆ ತೋರುತ್ತದೆ. ಈ ಸಂದರ್ಭದಲ್ಲಿ ಬಿಡಿಸಬೇಕಾದ ಚಿತ್ರವೊಂದರ ವಿವರಣೆಯನ್ನು ಹೀಗೆ ಹೇಳುತ್ತಾನೆ.

ಅಕ್ಕಿಯಿಂ ಬಟುವನು ವಿರಚಿಸಿ ಬ
ಳಿಕ್ಕೆ ನಾಲ್ಕೂಲೆಯನದರ ಬಳ
ಸಿಕ್ಕಿ ಮಧ್ಯದಿ ಕರ್ನಿಕಾಯುತ ಕಮಲವನು ಬರೆದು|
ಮಿಕ್ಕದರ ನಡುವೋಮೆನಿಪ್ಪೊಂ
ದಕ್ಕರವ ಲಿಖಿಸುತ್ತೆ ಸಲೆ ಸಂ
ದಕ್ಕೆಯಳಿದ್ದೆದಕ್ಕರವನ್ನೆ ಮೂಲೆಗಳೊಳಿಟ್ಟು||(೬-೧೯)

ಆ ಮೇಲೆ ಮಂತ್ರೋದಕ ಸಿಂಪಡಿಸಿ, ವಿಭೂತಿ ಪಟ್ಟಕಟ್ಟಿ, ಗುರುವಿನ ಹಸ್ತವನ್ನು ಶಿಷ್ಯನ ಮಸ್ತಕದ ಮೇಲಿರಿಸಿ ಇಷ್ಟಲಿಂಗವನ್ನು ಕರಸ್ಥಲದಲ್ಲಿ ಸ್ಥಾಪಿಸಿ, ಇನ್ನು ಮುಂದೆ ಲಿಂಗವನ್ನು ಮಾತ್ರ ಪೂಜಿಸಬೇಕು. ದೇವಾಲಯಗಳಿಗೆ ಹೋಗಿ ಸ್ಥಾವರ ಮೂರ್ತಿಗಳ ಪೂಜೆಯನ್ನು ಮಾಡುವ ಅಗತ್ಯವಿಲ್ಲ, ಮೂಢನಂಬಿಕೆಗಳನ್ನು ತ್ಯಜಿಸಬೇಕು ಎಂದು ಗುರುಗಳು ಬೋಧಿಸುತ್ತಾರೆ. ಈ ದೀಕ್ಷೆಗಳಲ್ಲಿ ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇದಾ ದೀಕ್ಷೆ ಎಂದು ಮೂರು ವಿಧ. ಶ್ರೀಗುರು ತನ್ನ ಹಸ್ತವ ಶಿಷ್ಯನ ಮಸ್ತಕದ ಮೇಲಿಟ್ಟು ಕಾಯಕ್ಕೆ ಉಪದೇಶ ಮಾಡುವುದು ವೇದಾದೀಕ್ಷೆ. ಇದರಿಂದ ತನುವಿನ ಪೂರ್ವಾಶ್ರಮವಳಿದು ಭಾವಲಿಂಗ ಸಂಬಂಧವಾಗುತ್ತದೆ. ಶ್ರೀಗುರುವು ಪ್ರಣವ ಪಂಚಾಕ್ಷರಿಯ ಮಂತ್ರವನ್ನು ಕಿವಿಯಲ್ಲಿ (ಪ್ರಾಣ) ಉಪದೇಶಿಸಿದುದು ಮಂತ್ರದೀಕ್ಷೆ. ಇದರಿಂದ ಸೂಕ್ಷ್ಮ ತನುವಿನ ಪೂರ್ವಾಶ್ರಯವಳಿದು ಇಷ್ಟಲಿಂಗ ಸಂಬಂಧವಾಗುತ್ತದೆ. ಆ ಮಂತ್ರ ಸ್ವರೂಪವನ್ನೇ ಇಷ್ಟಲಿಂಗ ಸ್ವರೂಪಮಾಡಿ ಕರಸ್ಥಲದಿಂದ ಮನಸ್ಸಿಗೆ ಉಪದೇಶಿಸುವುದು ಕ್ರಿಯಾದೀಕ್ಷೆ. ಇದರಿಂದ ಸ್ಥೂಲತನುವಿನ ಪೂರ್ವಾಶ್ರಯವಳಿದು ಇಷ್ಟಲಿಂಗ ಸಂಬಂಧವಾಗುತ್ತದೆ. ಹೀಗೆ ಗುರುವು ಆಯಾ ವ್ಯಕ್ತಿಯ ಸಾಧನೆಗನುಗುಣವಾಗಿ ದೀಕ್ಷಾಗುರು, ಶಿಕ್ಷಾಗುರು ಮತ್ತು ಮೋಕ್ಷ ಗುರುಗಳಾಗಿ ಆಧ್ಯಾತ್ಮಿಕ ಪ್ರಗತಿಗೆ ನೆರವಾಗುವರು (೬-೪೨). ಶಿಷ್ಯನ ಅಹಂಭಾವ ನೀಗಿ 'ಸೋಹಂ' ಭಾವ ಪ್ರವೃತ್ತನಾಗುವಂತೆ ಮಾಡುವುದೇ ದೀಕ್ಷೆ.

ಶಿವಲಿಂಗವು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂದು ಮೂರು ತೆರನಾಗಿರುವುದು. ಗುರುವು ದೀಕ್ಷಾ ವಿಧಾನದಿಂದ ಮಂತ್ರೋಪದೇಶ ಮಾಡಿ ಅನುಗ್ರಹಿಸಿದ ಲಿಂಗವೇ ಇಷ್ಟಲಿಂಗ (೬-೩೩). ಇದರಲ್ಲಿ ಆಚಾರಲಿಂಗ, ಗುರುಲಿಂಗ ಎಂಬ ಎರಡು ಬಗೆಯಾಗಿರುವುದು. ದೇಹದ ಇಂದ್ರಿಯ ಗುಣಗಳನ್ನೆಲ್ಲ ಪರಿಹರಿಸಿಕೊಂಡು, ನಿರ್ಮಲದೇಹಿಯಾಗಿ ಹೃದಯ ಕಮಲದಲ್ಲಿ ಪರಿಶುದ್ಧನಾದ ಗುರುಮೂರ್ತಿ ಪರಂಜ್ಯೋತಿ ಎಂದೆನಿಸುವ ಲಿಂಗವೇ ಪ್ರಾಣಲಿಂಗ(೬-೩೪). ಇದರಲ್ಲಿ ಶಿವಲಿಂಗ-ಜಂಗಮಲಿಂಗವೆಂದು ಎರಡು ಬಗೆ. ಭಾವ-ಭ್ರಮೆಗಳು ನಷ್ಟವಾಗಿ ಮನಸ್ಸು ಏಕತೆಯಿಂದ ಅನುಭಾವದಲ್ಲಿ ಲೀನವಾಗಿ, ಭಾವ-ಸದ್ಭಾವ-ನಿರ್ಭಾವವೆಂಬ ಭಾವತ್ರಯಗಳಲ್ಲಿ ಯಾವ ಭೇದವಿಲ್ಲದೆ, ಮರವೆಯೆಂಬ ತನುಗುಣದಿಂದ ನಿವೃತ್ತಿ ಹೊಂದುವುದೇ ಭಾವಲಿಂಗ (೬-೩೫). ಇದರಲ್ಲಿ ಪ್ರಸಾದಿಲಿಂಗ, ಮಹಾಲಿಂಗವೆಂದು ಎರಡು ಬಗೆ. ಇದರಲ್ಲಿ ಮೊದಲನೆಯದು ಶುದ್ಧಶೇಷ, ಎರಡನೆಯದು ಸಿದ್ಧಶೇಷ, ಮೂರನೆಯದು ಪ್ರಸಿದ್ಧ ಶೇಷವಾಗಿದೆ.

ಕವಿಯು ಇಲ್ಲಿಯವರೆಗೆ ಜಗತ್ತೇ ಶಿವನೆಂಬ ತತ್ತ್ವವನ್ನು ಅರುಹುತ್ತಾನೆ. ಜಗವಿದು ನಿರ್ಮಲ ಬ್ರಹ್ಮಾತ್ಮವಿದ್ದಂತೆ ಎಂದು ಏಳನೆಯ ಸಂಧಿಯಲ್ಲಿ ಶಿವನೇ ಜಗತ್ತು ಎಂಬ ವಿಚಾರವನ್ನು

ನಿರೂಪಿಸುತ್ತಾನೆ. ವಚನಕಾರರು ತಮ್ಮ ವಚನಗಳಲ್ಲಿ ಹೇಳುವಂತೆ "ಸೃಷ್ಟಿಯ ರಚನೆಯ ತತ್ತ್ವದಲ್ಲಿಯೇ ಪಿಂಡರೂಪವಾದ ದೇಹರಚನೆಯನ್ನು ಶರಣರು ಒಪ್ಪುತ್ತಾರೆ. ಶಿವನ ವ್ಯಕ್ತರೂಪವೇ ಸೃಷ್ಟಿ ಅದನ್ನು ಹೊರತುಪಡಿಸಿ ಅವನು ಹೊರಗಿಲ್ಲ. ಅದರಲ್ಲಿಯೇ ಇದ್ದು ಇಲ್ಲದ ಬೆಡಗಿನಲ್ಲಿದ್ದಾನೆ. ಆತನ ವ್ಯಕ್ತರೂಪವೇ ದೇಹ"[೯]

ಬಿಂದುವಹ ಪರಮಾತ್ಮಲಿಂಗದಿ
ಸಂದಿನಿತುವಿಲ್ಲದೆ ಜಗತ್ತಿದು
ನಿಂದು ತೋರಿರ್ದಡಗುವಂದವನುಸಿರ್ವೆನಾನೆಂದ||(೭-೩)

ಬಿಂದುವಿನ ರೂಪದಂತಿರುವ ಲಿಂಗದಲ್ಲಿ ಸ್ವಲ್ಪವೂ ಸ್ಥಳವಿಲ್ಲದೆ ಈ ಜಗತ್ತು ನಿರ್ಮಾಣಗೊಂಡು, ಮಿಂಚಿ ಮಾಯವಾಗುವ ರೀತಿಯನ್ನು ಹೇಳುತ್ತಾನೆ. ಅನವರತವೂ ಹತ್ತು ಹಲವು ರೂಪಗಳಲ್ಲಿ ಇಂದ್ರಿಯಗೋಚರವಾಗುವ ಈ ಜಗತ್ತು ವೀರಮಾಹೇಶ್ವರರ ಮಾರ್ಗದಲಿ ಏಕವಾದುದು 'ಲೀಲೆಯಾದಾಗ ಉಮಾಪತಿ, ಲೀಲೆ ತಪ್ಪಿದಾಗ ಸ್ವಯಂ ಭೂರೂಪ' ನಾಗುವನೆಂಬ (೭-೪). ವೀರಶೈವ ಸಿದ್ಧಾಂತದ ಅಭಿಮತದಂತೆ ತನ್ನ ಲೀಲೆಯಿಂದ ತಾನೇ ಸ್ವಯಂಭುವಾಗಿದ್ದ ಶಿವನಲ್ಲಿಯೇ ಲೀಲೆಯಾಯಿತು. ಪ್ರಣವ ಷಟ್ಕೃತಿಗಳೆ ಷಡಕ್ಷರಗಳು, ನಿರ್ಮಲವಾದ ನಿರಾಮಯನಾದ ಸದಾಶಿವನು 'ಓಂ' ಎಂದು ಉಸಿರಿದರೆ ಅದೇ ವೇದಗಳ ಸಮೂಹ. ಇದರ ಹೃದಯವೇ 'ಹ'ಕಾರ(೭-೬). ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ, ಮಹಾ ಎಂಬುವುಗಳು ಷಟ್ಸಾದಖ್ಯ ತತ್ತ್ವಗಳು, ಹಿರಿಮೆಯಿಂದ ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾಲಿಂಗಗಳೆಂಬ ಲಿಂಗಷಟ್ಕಗಳು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಗೋಪ್ಯಗಳೆಂಬ ಶಿವನ ಮುಖಗಳಿಂದ ಜನಿಸಿವೆ(೭-೭). ಇವುಗಳಿಗೆ ನಿವೃತ್ತಿ, ಪ್ರತಿಷ್ಠೆ, ವಿದ್ಯೆ, ಶಾಂತಿ, ಶಾಂತ್ಯಾತೀತೆ, ಶಾಂತ್ಯತೀತ್ತೋತ್ತರ ಎಂಬ ಕಲೆಗಳು ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ ಎಂಬುವರು ಕಾರಣ ದೇವತೆಗಳು(೭-೯). ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಪುರುಷ ಎಂಬ ಆರು ಆತ್ಮಗಳು, ಒಂಬತ್ತು ಶುಭ ಅಂಗಗಳಾಗಿ ವಿಶಾಲವಾಗಿ ಬೆಳಗುತ್ತವೆ(೭-೧೦). ಆಚಾರಾದಿ ಲಿಂಗಗಳಿಗೆ ಮೂಗು, ಕಿವಿ, ನಾಲಿಗೆ, ಕಣ್ಣು, ಚರ್ಮ, ಮನಸ್ಸು ಎಂಬ ಜ್ಞಾನೇಂದ್ರಿಯಗಳಿಗೆ ವಾಕ್, ಪಾಣಿ, ಪಾದ, ವಾಯು, ಗುಹ್ಯ ಎಂಬ ಕರ್ಮೇಂದ್ರಿಯಗಳು ಮುಖಗಳಾಗಲು ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿ ಎಂಬ ಪದಾರ್ಥ ಸವಿಯನ್ನು ಸವಿಯುತ್ತವೆ(೭-೧೧). ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ ಭಾವಗಳೆಂಬ ಹಸ್ತದಿಂದ ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ ಎಂಬ ಭಕ್ತಿಗಳು ಲಿಂಗಸಮೂಹಕ್ಕೆ ಅರ್ಪಿಸಲು ಒಂದರೊಳು ಇನ್ನೊಂದು ಕೂಡಿ ಒಂದೇಯಾಗಿ ಸಮುದ್ರದಲ್ಲಿ ಸೇರಿದ ಅನೇಕ ನದಿಗಳಂತೆ ಒಂದರೊಳಗೊಂದು ಲೀನವಾಗುತ್ತ ಮತ್ತೆ ಏಕವಾಗುತ್ತವೆ(೭-೧೩). ಕವಿಯು ಹೇಳಿರುವ ಎಲ್ಲಾ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ.


ಆಕೃತಿಗಳು	ಅಕ್ಷರಗಳು	ಸಾದಾಖ್ಯಗಳು	ಲಿಂಗಗಳು	ಕಲೆಗಳು	ಆತ್ಮಗಳು	ಇಂದ್ರಿಯಗಳು	ಮುಖಗಳು	ಪದಾರ್ಥ	ಹಸ್ತ	ಭಕ್ತಿ
ತಾರಕ	ನಕಾರ	ಕರ್ಮ	ಆಚಾರ	ನಿವೃತಿ	ಜೀವಾತ್ಮ	ಮೂಗು	ಘ್ರಾಣ	ಗಂಧ	ಸುಚಿತ್ತ	ಶ್ರದ್ಧಾ
ದಂಡಕ	ಮಕಾರ	ಕರ್ತೃ	ಗುರು	ಪ್ರತಿಷ್ಠಾ	ಅಂತರಾತ್ಮ	ಕಿವಿ	ಶೋತ್ರ	ಶಬ್ದ	ಸುಬದ್ಧಿ	ನಿಷ್ಠೆ
ಕುಂಡಲ	ಶಿಕಾರ	ಮೂರ್ತಿ	ಶಿವ	ವಿದ್ಯೆ	ಪರಮಾತ್ಮ	ನಾಲಿಗೆ	ಜಿಹ್ವೆ	ರಸ	ನಿರಹಂಕಾರ	ಅವಧಾನ
ಅರ್ಧಚಂದ್ರ	ವಕಾರ	ಅಮೂರ್ತಿ	ಜಂಗಮ	ಶಾಂತಿ	ನಿರ್ಮಲಾತ್ಮ	ಕಣ್ಣು	ನೇತ್ರ	ರೂಪು	ಸುಮನ	ಅನುಭವ
ಬಿಂದು	ಯಕಾರ	ಶಿವ	ಪ್ರಸಾದ	ಶಾಂತ್ಯಾತೀತ	ಶುದ್ಧಾತ್ಮ	ಚರ್ಮ	ತ್ವಚ	ಸ್ಪರ್ಶ	ಸುಜ್ಞಾನ	ಆನಂದ
ಜ್ಯೋತಿ	ಓಂಕಾರ	ಮಹಾ	ಮಹಾಲಿಂಗ	ಶಾಂತ್ಯಾತೀ ತ್ತೋತ್ತರ	ಜ್ಞಾನಾತ್ಮ	ಮನಸ್ಸು	ಹೃದಯ	ತೃಪ್ತಿ	ಸದ್ಭಾವ	ಸಮರಸ

ಶಿವನು ತನ್ನ ವಿನೋದಕ್ಕೆ ತಾನು ಸೃಷ್ಟಿಯನ್ನು ಮಾಡಿದರೂ ಅವನು ಸೃಷ್ಟಿಯಿಂದ ಹೊರಗಾಗದೆ ಬೀಜದೊಳಗಣ ವೃಕ್ಷದಂತೆ, ಸಸಿಯೊಳಗಣ ರಸದ ರುಚಿಯಂತೆ ನನೆಯೊಳಗಣ ಪರಿಮಳದಂತೆ ಸೃಷ್ಟಿಯಲ್ಲೇ ಅಡಗಿದ್ದಾನೆ. "ಪರಮಾತ್ಮನ ನೆನಹು ಮಾತ್ರದಿಂದ ತೋರಿಕೆಗೊಂಡ ಜಗತ್ತೆಲ್ಲ ಪುನಃ ಪರಮಾತ್ಮನಲ್ಲಿಯೇ ಐಕ್ಯವಾಗುತ್ತದೆಂದು ಶರಣರ ನಂಬಿಕೆ. ಅವನ ಲೀಲಾ ಮಾತ್ರದಿಂದ ಹೊರ ಹೊಮ್ಮುವ ಸೃಷ್ಟಿಯೇ ಪ್ರವೃತ್ತಿ. ಪುನಃ ಅದು ಅವನಲ್ಲಿ ಐಕ್ಯಗೊಳ್ಳುವುದೇ ನಿವೃತ್ತಿ. ಶರಣರ ಪರಿಭಾಷೆಯಲ್ಲಿ ಹೇಳಬೇಕೆಂದರೆ ಪರಮಾತ್ಮನ ಸಕಲ ರೂಪವೇ ಪ್ರವೃತ್ತಿ, ನಿಷ್ಕಲ ರೂಪವೇ ನಿವೃತ್ತಿ. ಈ ನಿಷ್ಕಲ ತತ್ತ್ವವೇ ಶರಣರ ಶೂನ್ಯ ತತ್ತ್ವ"[೧೦] ಬ್ರಹ್ಮಾಂಡ ಭರಿತನಾದ ಶಿವನು ಪಿಂಡಾಂಡ ಭರಿತನೂ ಆಗಿ ಇವೆರಡರಿಂದ ಬೇರ್ಪಡದೆ ಇದ್ದುದರಿಂದ ಅಂಗತತ್ತ್ವ, ಲಿಂಗತತ್ತ್ವ ಎಂಬ ಎರಡು ಭೇದಗಳಾದವು. ಅಂಗತತ್ತ್ವದಲ್ಲಿ ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಆತ್ಮ ಇವುಗಳಿಗನುಗುಣವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ ಎಂಬ ಮೆಟ್ಟಿಲುಗಳನ್ನು ಹೆಸರಿಸಿದರೆ, ಲಿಂಗತತ್ತ್ವದಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂಬ ಆರು ಲಿಂಗಗಳನ್ನು ಹೆಸರಿಸುತ್ತಾರೆ. ಇದನ್ನೆ ಇಮ್ಮಡಿ ಮುರಿಗಾಗುರುಸಿದ್ಧರು ಈ ಕೆಳಗಿನಂತೆ ವಿವರಿಸುತ್ತಾರೆ.

ನಿರುತದಿಂ ಪದಿನಾರು ತೆರದಿಂ
ದಿರದೆ ಮತ್ತೊಂಬತ್ತು ತೆರದಿಂ
ಸರಿಸದಿಂದಲಿ ಆರು ತೆರದಿಂ ಮೂರು ತೆರದಿಂದೆ
ತರತರದ ಬಹು ಸಿದ್ಧಿಗಳನಾ
ದರದೆ ಮಾಡುವ ದಿವ್ಯಬಿಂದುವ
ನರರೆ ಬೇರ್ಪಡಿಸುತ್ತೆಯಾರಾಧಿಪರು ಸಾಧಕರು || (೭-೧೮)

ಬಿಂದು ಎಂದರೆ ಶೂನ್ಯ. ಈ ಶೂನ್ಯವೇ ಹದಿನಾರು, ಒಂಬತ್ತು, ಆರು, ಮೂರು ಹೀಗೆ ಬಹುವಿಧದ ರೀತಿಯಲ್ಲಿ ಈ ಮನುಷ್ಯರು ಬೇರ್ಪಡಿಸುತ್ತ, ಅನೇಕ ತರದ ಸಿದ್ಧಿ-ಸಾಧನೆಗಳಿಗೆ

ಬಳಸಿಕೊಳ್ಳುತ್ತಿದ್ದಾರೆ. ಇದನ್ನು 'ಬಿಂದು, ಪರಬಿಂದು, ಶೂನ್ಯವೆಂದು, ಬಿಂದುವನ್ನು ಹೊರತುಪಡಿಸಿ ಯಾವ ವಸ್ತುವೂ ಇಲ್ಲ, ಕಾರಣ ಬಿಂದುವನ್ನೇ ಕೆಲವರು ತಮ್ಮ್ಮಯ ಸಿದ್ಧಿಗೋಸ್ಕರ ಅರ್ಚಿಸುತ್ತಾರೆ (೭-೧೭). ಸೃಷ್ಟಿಯ ಸಮಸ್ತವೂ ಈ ಬಿಂದುವಿನಲ್ಲಿ ಒಂದೊಂದು ತತ್ತ್ವವಾಗಿ ಪರಿಣಮಿಸುತ್ತದೆ. ಇದನ್ನು ಈ ಕೆಳಗಿನಂತೆ ಸೂಚಿಸಬಹುದಾಗಿದೆ.



ಅಂಗತತ್ತ್ವ, ಲಿಂಗತತ್ತ್ವ ಎಂಬ ಎರಡು ಭೇದಗಳಲ್ಲಿ ಲಿಂಗದಲ್ಲಿ ವಿಮರ್ಶಾಶಕ್ತಿ(ಕಲಾಶಕ್ತಿ)ಯು ಕೂಡಿ ಭಾವ, ಪ್ರಾಣ, ಇಷ್ಟವೆಂದು, ಅಂಗದಲ್ಲಿ ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು ಮೂರು ತೆರನಾಗುತ್ತದೆ. ಭಾವ-ಪ್ರಾಣ-ಇಷ್ಟಲಿಂಗದಲ್ಲಿ ಒಂದೊಂದಕ್ಕೆ ಎರಡೆರಡರಂತೆ, ಕ್ರಮವಾಗಿ ಮಹಾಲಿಂಗ, ಪ್ರಸಾದಲಿಂಗ, ಶಿವಲಿಂಗ, ಜಂಗಮಲಿಂಗ, ಗುರುಲಿಂಗ, ಆಚಾರಲಿಂಗ ಎಂದು ಆರು ತೆರನಾಗುತ್ತದೆ. ಯೋಗ, ಭೋಗ, ತ್ಯಾಗಾಂಗಗಳಲ್ಲಿ ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಹೇಶ, ಭಕ್ತ ಎಂಬ ಆರು ಪ್ರಕಾರಗಳಾಗುತ್ತವೆ. ಹೀಗೆ ಒಂದು ಎರಡಾಗಿ, ಎರಡರಲ್ಲಿ ಆರಾಗಿ, ಆರರಲ್ಲಿ ಹನ್ನೆರಡಾಗಿ ಬೆಳೆಯುತ್ತ ಸೃಷ್ಟಿಯು ವಿರಾಡ್ರೂಪವೇ ಆಗುತ್ತದೆ. ಹೀಗೆ ಎರಡಾದ

ಈ ತತ್ತ್ವವೇ ಬೆಳೆಯುತ್ತ ವಿಶಾಲ ವೃಕ್ಷದಂತೆ ಪಿಂಡ ಸಂಬಂಧವಾದ ಸೃಷ್ಟಿಯು ವಿಸ್ತಾರಗೊಳ್ಳುವುದು. ಪುನಃ ಇದೆಲ್ಲ ನಿವೃತ್ತಿ ಮಾರ್ಗದಲ್ಲಿ ಹಿಂದಕ್ಕೆ ಹೋಗುತ್ತ ಮಹಾತತ್ತ್ವದಲ್ಲಿ ಅಂಗವು ಲಿಂಗದಲ್ಲಿ, ಭಕ್ತಿಯು ಶಕ್ತಿಯಲ್ಲಿ, ಒಂದಾಗುವ ಸ್ಥಿತಿಯೇ ಐಕ್ಯ ಸ್ಥಿತಿ. ಕೊನೆಯ ಪರಿಣಾಮ.[೨] ಸೃಷ್ಟಿಗೆ ಕಾರಣನಾದವನು ಶಕ್ತಿ ವಿಶಿಷ್ಟ ಶಿವ. ಇವನ ಶಕ್ತಿ ಎರಡು ಬಗೆಯಾದುದು. ಒಂದು ಪರಾಶಕ್ತಿ ಅಥವಾ ವಿಮರ್ಶಾಶಕ್ತಿ, ಎರಡನೆಯದು ಅಪರಾಶಕ್ತಿ ಅಥವಾ ಪ್ರಕೃತಿ. ಈ ಎರಡು ಶಕ್ತಿಗಳ ವಿವರಣೆಯನ್ನು ಇಮ್ಮಡಿ ಮುರಿಗಾಗುರುಸಿದ್ಧರು ಎಂಟು ಮತ್ತು ಒಂಬತ್ತನೆಯ ಸಂಧಿಯಲ್ಲಿ ವಿವರಿಸುತ್ತಾರೆ.

ವಿಮರ್ಶಾಶಕ್ತಿಯು ಮಾಯಾ, ಕಾಲ, ನಿಯತಿ, ಕಲಾ, ವಿದ್ಯಾ, ರಾಗ ಮತ್ತು ಪುರುಷ ಎಂಬ ಸತ್ (ಶುದ್ಧ) ಚಿತ್ತಗಳನ್ನು ಹೊಂದಿದ್ದರೆ, ಪ್ರಕೃತಿಯು ಸತ್ವ, ರಜಸ್ಸು, ತಮೋಗುಣಗಳಾದ ಬುದ್ಧಿ, ಅಹಂಕಾರ, ಮನಸ್ಸು, ಚಕ್ಷು, ಶ್ರೋತ್ರ, ನಾಸಿಕಾ, ರಸನಾ, ತ್ವಕ್, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಅಪ್, ಪೃಥ್ವಿ ಎಂಬ ಅಚಿತ್ (ಅಶುದ್ಧ) ತತ್ತ್ವಗಳನ್ನು ಹೊಂದಿರುತ್ತದೆ. ಈ ಅಶುದ್ಧ ತತ್ತ್ವಗಳು ಮಾಯೆಯೆಂದು ಗೋಚರಿಸಿ ಅವಿದ್ಯೆ ಎನಿಸುತ್ತವೆ.

> ಮಾಯೆಯಿದು ಜಗವಾಗಿ ಜೀವನ
> ವಾಯರದೆ ಮೋಹಿ ಸುತಿರಲುವದೆ
> ಬೀಯವಹ ಭೋಗ್ಯ ಸ್ವರೂಪವೆನಿಸಿ ವಿರಾಜಿಸಿತು ॥ (೮-೧೪)

ಮಹಾಲಿಂಗದಿಂದ ಉದ್ಭವಿಸಿದ ಶಿವ ಮತ್ತು ಶಕ್ತಿ ತತ್ತ್ವಗಳು, ಕ್ರಿಯೆ ಜ್ಞಾನಗಳನ್ನು ಬೇರೆ ಮಾಡುವ ಭೇದ ಬುದ್ಧಿ ತಲೆದೋರಿ, ತಮೋಗುಣ ಶಕ್ತಿಗೆ ಕಾರಣವಾಗುತ್ತದೆ. ಇದೇ ಜಡಮಾಯೆ. ಈ ಜಡಮಾಯೆಯಲ್ಲಿ ಶಿವನ ವಿಮರ್ಶಾಶಕ್ತಿ ಪ್ರವೇಶಿಸಿ ಪ್ರಕೃತಿಯೆನಿಸುತ್ತದೆ. ಈ ಪ್ರಕೃತಿ ಸತ್ವ, ರಜ, ತಮೋಗುಣದಿಂದ ಕೂಡಿ ಸೃಷ್ಟಿಯ ವೈವಿಧ್ಯತೆಗೆ ಕಾರಣವಾಗುತ್ತದೆ.

> ಅಯ್ಯ ಬಿನ್ನಹವವಧರಿಸಿ ಫಣಿ
> ಶಯ್ಯ ಪಾಶವದೆಯ್ದೆ ಮಾಯೆಯ
> ದೊಯ್ಯನುದ್ಧತ ಶಕ್ತಿಯದು ತಾಂ ಪುರುಷನೆಂತಾಯ್ತು ॥(೮-೧೬)

ಪರಶಿವನ ಅಂಶವಾದ ಆತ್ಮ ಮಾಯಾ ಶಕ್ತಿಯನ್ನು ಪ್ರವೇಶಿಸಿ ಪುರುಷನೆನಿಸುತ್ತದೆ. ಇಂತಹ ಮಾಯಾ ಶಕ್ತಿಯು ಭೋಗ ಕಾಲದಲ್ಲಿ ಭವಾನಿ, ಕದನ ಕಾಲದಲಿ ಕಾಳಿ, ವಿಯೋಗ ಕಾಲದಲ್ಲಿ ದುರ್ಗಿಯಾಗಿ(೮-೧೭) ವರ್ತಿಸುತ್ತಾಳೆ. ವಿಮರ್ಶ(ಶಕ್ತಿಯ)ನದ ಸ್ವರೂಪವನ್ನು, ವಿಭೂತಿ ವೈಭವವನ್ನು, ಮುಕ್ತಿ ಬೋಧನೆಯನ್ನು ಮುಂದಿನ ಸಂಧಿಗಳಲ್ಲಿ ವಿವರಿಸುತ್ತಾನೆ.

ಜಗತ್ತಿನ ಸ್ಥಿತಿ ರೂಪವೆಂತು?, ಜಗವಿದೆಂತಾಯಿತ್ತು?, ಬೆಳಗು ಕತ್ತಲೆ ಯಾವ ಪರಿಯೊಂದು ಪತಿ-ಪಶು-ಪಾಶವೆಂಬವರಿರವದೆಂತು?, ಮಾಯೆಯೇ ಪುರುಷನೆಂತಾಯಿತು? ಬೌದ್ಧರೆಂದರೆ ಮುಕ್ತಿಗೆ ವಿರುದ್ಧರೇ? ಹೀಗೆ ದೇವೇಂದ್ರ ತನ್ನ ಮನದಲ್ಲಿ ಮೊಳಕೆಯೊಡೆದ ಸಂಶಯಗಳನ್ನೆಲ್ಲಾ ಶಿವನ ಮುಂದಿಡುವನು. ಶಿವನು ಆ ಪ್ರಶ್ನೆಗಳಿಗೆಲ್ಲಾ ಬಾಲಕನೇ, ತನಯ, ಸುತನೆ, ಮಗನೆ, ಕಂದ, ಶಿಷ್ಯ ಎಂದು ದೇವೇಂದ್ರನನ್ನು ಆತ್ಮೀಯವಾಗಿ ಸಂಭೋದಿಸುತ್ತಾ, ಅರಿಯದ ಮಗನಿಗೆ ತಿಳಿಯ ಹೇಳುವ ತಂದೆಯ ಸ್ಥಾನದಲ್ಲಿ ನಿಂತು ಆತ್ಮೀಯವಾಗಿ ತಿಳಿಯ ಪಡಿಸುವನು. ಈ ಸಂದರ್ಭದಲ್ಲಿ ಇಂಥಹ ವಿಚಾರಗಳನ್ನು ಯಾರಿಗೆ ಹೇಳಬೇಕು. ಯಾರಿಗೆ ಹೇಳಬಾರದು ಎಂಬುದನ್ನು ತಿಳಿಸುತ್ತಾನೆ.

ಶಾಂತರಿಗೆ ನಿಶ್ಚಿಂತರಿಗೆ ಗುಣ
ವಂತರಿಗೆ ಗುರುಚರಣ ಭಕ್ತ್ಯಾ
ಕ್ರಾಂತರಿಗೆ ಕರುಣಾಂತರಂಗರಿಗಿದನು ಬೋಧಿಪುದು
ಭ್ರಾಂತರಿಗೆ ಬಹುಚಿಂತರಿಗೆ ರತಿ
ಮಂತರಿಗೆ ಮೂರ್ಖರಿಗೆ ಜಗದೊಳ
ಸಂತರಿಗೆ ಬಗೆಯೊಗೆದಿದನು ಪೇಳುವದುಚಿತವಲ್ಲ||(೧೪-೪೬)

ಈ ಕೃತಿಯಲ್ಲಿ ಕವಿಯು ವೀರಶೈವ ಮತವನ್ನು ಎತ್ತಿ ಹೇಳುವುದರ ಜೊತೆಗೆ ಬೌದ್ಧ ಧರ್ಮವನ್ನು ಖಂಡಿಸುತ್ತಾನೆ. ಇದಕ್ಕೆ ತೋಂಟದ ಸಿದ್ಧಲಿಂಗಯತಿಗಳು ಇಮ್ಮಡಿ ಮುರಿಗಾ ಗುರುಸಿದ್ಧರ ಮೇಲೆ ಬೀರಿದ ಆಧ್ಯಾತ್ಮಿಕ ಪ್ರಭಾವ ಕಾರಣವಾಗಿರಬಹುದು. ಏಕೆಂದರೆ ಕವಿಯು ತೋಂಟದ ಸಿದ್ಧಲಿಂಗ ಯತಿಗಳನ್ನು ಕೃತಿಯ ಆದಿ-ಮಧ್ಯ-ಅಂತ್ಯ ಎಲ್ಲಾ ಕಡೆಗೂ ಹೊಗಳುತ್ತಾ, ಸ್ಮರಿಸುತ್ತ 'ಬೌದ್ಧ ಸಮಯ ವಿರುದ್ಧ ಬದ್ಧ ವಿಶುದ್ಧ ಮತಿಪರಿಣದ್ಧ ಸದ್ಗುಣ ಬದ್ಧ ನಿಗಮಸಮುದ್ಧರಣ ಸುಮಹದ್ಧಸನವ ದನ ಸದ್ಧರ ಪರಾ...... ತೋಂಟದ ಸಿದ್ಧಲಿಂಗಸಮೃದ್ಧಿಗಳಸಿಯ' (೨-೨೦) ಎಂದು ಹೇಳುತ್ತಾನೆ. ಇಲ್ಲಿಯ ಬೌದ್ಧಸಮಯ ವಿರುದ್ಧ ಎಂಬ ಮಾತನ್ನು ಗಣನೆಗೆ ತೆಗೆದುಕೊಂಡರೆ, ತೋಂಟದ ಸಿದ್ಧಲಿಂಗಯತಿಗಳು ಬೌದ್ಧ ಧರ್ಮದ ತಾತ್ತ್ವಿಕ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಬೌದ್ಧರ ಗುಣ ಧರ್ಮಗಳ ವಿಚಾರವಾಗಿ

ಕ್ಷಣಿಕವಾದುರು ಬುದ್ಧಿ ತತ್ವವ
ದೆಣಿಸೆಯಾತ್ಮನೆಯೆಂದು ಪೇಳುತೆ
ಮಣಿಯದಾರಿಗೆಯುಂ ಜಗದೊಳತಿ ಚಪಳತೆಯ ನೆಸಗಿ|
ಡೊಣಗರನು ಬೋಧಿಸುತೆ ತಮ್ಮಯ
ಕ್ಷಣಿಕ ಬುದ್ಧಿಯೊಳಡಗಿಸುತ್ತಿಹ
ಬಣಗುಗಳೆ ಬೌದ್ಧರುಗಳವರ ಮತವನು ಖಂಡಿಸುವೆ||(೧೦-೯೦)

ಎಂದು ಇಮ್ಮಡಿ ಮುರಿಗಾಗುರುಸಿದ್ಧರು ಉತ್ತರಿಸಿದ ರೀತಿಯನ್ನು ನೋಡಿದರೆ ಕವಿಯ ಮೇಲೆ ತೋಂಟದ ಸಿದ್ಧಲಿಂಗಯತಿಗಳು ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತದೆ. ಹೀಗೆ ಕ್ಲಿಷ್ಟವೆನಿಸುವ

ತಾತ್ತ್ವಿಕ ವಿಷಯಗಳನ್ನು ಸಂಭಾಷಣೆಯ ರೂಪದಲ್ಲಿ ತುಂಬ ಸರಳವಾಗಿ ನಿರೂಪಿಸಿದ್ದಾರೆ. ಉಭಯ ಭಾಷಾ ಕವಿತಾ ವಿಶಾರದರೆನಿಸಿದ ಇವರು ಕಾವ್ಯದಲ್ಲಿ ಸಂಸ್ಕೃತ ಪದಗಳನ್ನು ಬಳಸಿದ್ದಾರೆ. ತಾತ್ತ್ವಿಕವಾದ ವಿಷಯಗಳನ್ನು ಹೇಳಲಷ್ಟೇ ಮೀಸಲಾಗಿರುವ ಈ ಕೃತಿಯಲ್ಲಿ ವರ್ಣನೆಗಳಿಗೆ ಸ್ಥಾನವಿಲ್ಲದಿದ್ದರೂ ಬ್ರಹ್ಮಾಸುರ-ಮೋಹಿನಿಯರ ಪ್ರಸಂಗದಲ್ಲಿ ಸಿಂಹಾಸನದಲ್ಲಿ ಕುಳಿತ ದೇವೇಂದ್ರನನ್ನು ಕುರಿತು

ಕೊಳಸಿರಾಡಲು ಕಳಿನೀರು ಕಂಗಳೆ
ಜಳಚರಾಂಬುಜ ನೀಲ ನೀರಜ
ಕುಳವದಾಗಿರೆ ಮಡದಿ ಮೊಗನೆರೆಯ್ಯೆರೆದಾಳಿಗಳೆ
ತೊಳಪ ಶಶಿರವಿಗಳು ಶಶಿಕುಚ
ಕಳಕನಯರಿಗಳೆ ಬಗೆಯಲು
ಜ್ವಳಿಪ ಕೋಕ ಚಕೋರ ಪಕ್ಷಿಗಳಾಗಲೊಪ್ಪಿದನು||(೧೧-೧೪)

ಕೃತಿಯ ಕೊನೆಯಲ್ಲಿ ಫಲಶ್ರುತಿ ಎಂಬಂತೆ ಇದನ್ನು ಓದುವವನು, ಹೇಳುವವನು. ಹೇಳಿಸಿದವನು, ಕೇಳುವವನು, ಬರೆದವನು ಹಾಗೂ ಬರೆಯಿಸಿದವರೆಲ್ಲರೂ ಶಿವನಲ್ಲಿ ಸಮರಸ ಐಕ್ಯತ್ವವನ್ನು ಪಡೆಯುವುದಾಗಿಯೂ ಹಾಗೂ ತನ್ನ ಕೃತಿಯನ್ನು ವೈಶಾಖದಸಿತೋದ್ಯದ ಪೂರ್ವಪಕ್ಷೈಕಾದಶಿಯ ಶಶಿವಾರದಲ್ಲಿ ಬರೆದು ಮುಗಿಸಿರುವುದಾಗಿ ತಿಳಿಸಿದ್ದಾನೆ.

ಮಿಶ್ರಾರ್ಪಣ

ಪದಾರ್ಥವನ್ನು ಪ್ರಸಾದವಾಗಿರುವ ಅರ್ಪಣ-ವಿಧಾನಕ್ಕೆ ವೀರಶೈವ ಷಟ್‌ಸ್ಥಲ ಸಿದ್ಧಾಂತದಲ್ಲಿ ಮಹತ್ವ ಪೂರ್ಣ ಸ್ಥಾನವಿದೆ. ಮಿಶ್ರ ಎಂದರೆ ಪದಾರ್ಥ. ಅರ್ಪಣ ಎಂದರೆ ಅರ್ಪಿಸುವುದು. ಸಾಮಾನ್ಯ ಅರ್ಥದಲ್ಲಿ 'ಊಟ ಮಾಡುವುದು' ಎಂದಾಗುತ್ತದೆ. ಇದು ಲಿಂಗಾರ್ಪಣದ ರಹಸ್ಯವನ್ನು ಹೇಳುವ ಶಾಸ್ತ್ರಕೃತಿ. ಷಡ್ವಿಧ ಲಿಂಗದೊಡನೆ ಷಡ್ವಿಧ ಅಂಗಗಳನ್ನು ಸಂಧಿಸುವುದರ ಮೂಲಕ ಷಡ್ವಿಧ ಭಕ್ತಿಯನ್ನು ಸಾಧಿಸಿ ಪರತತ್ತ್ವದಲ್ಲಿ ಬೆರೆತು ಹೋಗುವ ಸ್ಥಿತಿ. ದೇಹ-ಬುದ್ಧಿ, ಮನಸ್ಸುಗಳ ಪ್ರಾಕೃತ ಗುಣಗಳು ಅಳಿದು ಉದಾತ್ತೀಕರಣಗೊಳ್ಳಲು ಅರ್ಪಣ ಕ್ರಿಯೆ ತುಂಬಾ ಅಗತ್ಯ. ಇದರಿಂದ ಲಿಂಗಸಾಧಕತ್ವ, ಪ್ರಸಾದತ್ವಗಳು ಪ್ರಾಪ್ತವಾಗುತ್ತವೆ.[೧೩]

ಮಿಶ್ರಾರ್ಪಣದ ವಿವರಣೆಯನ್ನು ಪ್ರಮುಖವಾಗಿ ವಚನಗಳಲ್ಲಿ ಹಾಗೂ ಹಾಡುಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಎಲ್ಲ ಶರಣರ ಕೆಲವು ವಚನಗಳಲ್ಲಿ ಅರ್ಪಣ ಮತ್ತು ಪ್ರಸಾದಗಳ ಮಹತ್ವವನ್ನು ಕುರಿತಾಗಿ ಸಂಕ್ಷಿಪ್ತ ವಿವರಣೆ ಬರುತ್ತದೆ. ಇವುಗಳಲ್ಲಿ ಚೆನ್ನಬಸವಣ್ಣನವರ 'ಮಿಶ್ರಾರ್ಪಣ' ಹೆಸರಿನ ಕೃತಿಯು ಅತ್ಯಂತ ಮಹತ್ವ ಪೂರ್ಣವಾದುದು. ಅದೇ ರೀತಿ ಆದಯ್ಯ, ತೋಂಟದ ಸಿದ್ಧಲಿಂಗೇಶ್ವರ, ಷಣ್ಮುಖ ಶಿವಯೋಗಿ ಮುಂತಾದ ವಚನಕಾರರು 'ಅರ್ಪಣಾ' ವಿಷಯದ ಬಗ್ಗೆ ಹೇಳಿದ್ದಾರೆ.

ವಚನಗಳಂತೆ ಸ್ವರವಚನ, ಷಟ್ಪದಿ ಛಂದಸ್ಸಿನಲ್ಲಿ ರಚನೆಗೊಂಡ ಕೃತಿಗಳಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ 'ಮಿಶ್ರಾರ್ಪಣ'ವೂ ಒಂದು. ಇದರಲ್ಲಿ ಐದು ವಾರ್ಧಕ ಷಟ್ಪದಿಗಳಿದ್ದು ತನ್ನ ನಿಜವನ್ನು ಅಳಿದು ಷಟ್ಸ್ಥಲ ಬ್ರಹ್ಮದಲ್ಲಿ ಏಕತ್ವವನ್ನು ಪಡೆದು ಜೀವನ್ಮುಕ್ತವಾಗಿ ಸಂಚರಿಸುವ ಕ್ರಮವನ್ನು ತಿಳಿಸಲಾಗಿದೆ.

ಮಿಶ್ರಾರ್ಪಣ ಕೃತಿಯ ವಸ್ತು ಪದಾರ್ಥವನ್ನು ಪ್ರಸಾದವಾಗಿಸುವ ಹಾದಿಯನ್ನು ತೋರಿಸುವುದು. ಇಂದ್ರಿಯಗಳ ಮೂಲಕ ಹೊರಗಿನ ವಿಶ್ವದೊಡನೆ ವ್ಯವಹರಿಸಿ ಸ್ವೀಕರಿಸುವ ಸಮಸ್ತ ವಸ್ತುಗಳು ಅಥವಾ ಸಂಗ್ರಹಿಸುವ ಜ್ಞಾನ, ನೋಡುವ ನೋಟ, ಮಾಡುವ ಮಾಟ, ಕೂಡುವ ಕೂಟ -ಇವೆಲ್ಲ ಲಿಂಗಭೋಗೋಪ ಭೋಗವಾಗಿದ್ದಾಗ ಅವೆಲ್ಲ ಅದೇ ಸಂಸ್ಕಾರದಿಂದ ಭಾವದಲ್ಲಿ ಉಳಿದು ನಮ್ಮನ್ನು ಸದ್ಭಾವ ಸಂಪನ್ನರನ್ನಾಗಿ ಮಾಡುತ್ತವೆ. ಜಾಗ್ರತ, ಸ್ವಪ್ನ, ಸುಸುಪ್ತಿ ಅವಸ್ಥೆಗಳಲ್ಲೂ ಜ್ಞಾನ-ಕ್ರಿಯೆಗಳಿಂದ ಕೂಡಿಕೊಂಡು ನಮ್ಮನ್ನು ಪೂರ್ಣ ವ್ಯಕ್ತಿತ್ವದ ಕಡೆ ಚಲಿಸುವಂತೆ ಮಾಡುತ್ತವೆ. ಹೀಗಾಗಿ ಅರ್ಪಣ ವಿಧಿಯು ಹೊರಗಿನ ಪ್ರಪಂಚದಿಂದ ಪಿಂಡ ಪ್ರಪಂಚಕ್ಕೆ ಒದಗುವ ವಸ್ತುಗಳೆಲ್ಲವೂ ಅದು ಜ್ಞಾನವಾಗಿರಬಹುದು, ಪ್ರಸಾದವಾಗಿರಬಹುದು, ನೋಟವಾಗಿರಬಹುದು, ಮಾಟವಾಗಿರಬಹುದು ಅವೆಲ್ಲವೂ ಅರ್ಪಣಗಳೆನಿಸುವವು.[೧೪] ಈ ಅರ್ಪಣಾ ವಿಧಾನವು ಅತ್ಯಂತ ಸೂಕ್ಷ್ಮವಾದುದು. ೩೬ ಸಕೀಲಗಳಿಂದ ೨೧೬ ಸಕೀಲಗಳವರೆಗೂ ಇದು ಸೂಕ್ಷ್ಮವಾಗುತ್ತ ಹೋಗುವುದು. ಇದೆಲ್ಲವನ್ನು ವೀರಶೈವ ಸಿದ್ಧಾಂತ ಪ್ರಸಾದವೆಂದು ಕರೆಯುತ್ತದೆ.

ಶಿಷ್ಯ ತನ್ನ ಸ್ವರೂಪವನ್ನು ಗುರುಮುಖದಿಂದ ಅರಿತು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರೆಂಬ ಷಟ್‌ಸ್ಥಲಗಳಿಗೆ ಅನುಗುಣವಾಗಿ ಬರುವ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗವೆಂಬ ಷಡ್ವಿಧ ಲಿಂಗಗಳಲ್ಲಿ ಬ್ರಹ್ಮಸ್ವರೂಪವನ್ನು ಹೊಂದಿ, ಅಂಗಲಿಂಗ ಸಾಮರಸ್ಯದಿಂದ ಜೀವನ್ಮುಕ್ತರಾಗಲು ಯಾವ ಕ್ರಮವನ್ನು ಅನುಸರಿಸಬೇಕು ಎಂದು ಶಿಷ್ಯನು ಗುರುವಿನಲ್ಲಿ ಪ್ರಶ್ನೆ ಮಾಡಲು ಗುರುವು ಅದಕ್ಕೆ ಉತ್ತರವಾಗಿ ಹೀಗೆ ಹೇಳ ತೊಡಗುವನು.

ನುತ ಪೀಠ ಕಟಿ ವೃತ್ತ ಗೋಮುಖವು ನಾಳ ವಿ
ಶ್ರುತ ಗೋಳಕವೆನಿಪ್ಪ ಷಟ್ಸ್ಥಾನಗಳೊಳು ಸಂ
ಚಿತ ರೂಪ ವಸ್ತು ಸುಪದ ಸ್ನಾನ ಮಂತ್ರ ಸಂತತಿಯ ಸಂಬಂಧಿಸುತ್ತೆ
ಕ್ಷಿತಿ ಜಲಾನಲ ವಾಯು ಗಗನಾತ್ಮರೆಂಬ ಸ
ಮ್ಮಿತ ತತ್ವಮಯವಾದುದೀ ತತ್ವವೆಂದು ನಿ
ಶ್ಚಿತ ಬುದ್ಧಿಯಿಂದಿರಲ್ಕದು ಸತ್ಕ್ರಿಯಾರ್ಪಣವೆನಿಪುದದುವೆ ಲಿಂಗಮಯವು||೧||

ಲಿಂಗದ ಅಧಃ ಪೀಠ, ಲಿಂಗದ ನಡುವು, ಲಿಂಗದ ವರ್ತುಲ, ಲಿಂಗದ ರಂಧ್ರ, ಲಿಂಗದ ಮುಖ, ಲಿಂಗದ ಮಸ್ತಕವೆಂಬ ಆರು ಸ್ಥಾನಗಳಲ್ಲಿ ಭೋಜ್ಯ ಪಾನ್ಯ, ಭಕ್ಷ, ಚೋಷ್ಯ, ಲೇಹ್ಯ, ತೃಪ್ತಿಗಳೆಂಬ

ಷಡ್ವಿದ ರೂಪ ದ್ರವ್ಯಗಳು. ಕಠಿಣ, ಮೃದು, ಉಷ್ಣ, ಶೀತ, ಮಿಶ್ರ, ತೃಪ್ತಿಗಳೆಂಬ ಷಡ್ವಿಧ ರೂಪ ದ್ರವ್ಯಗಳು. ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿಗಳೆಂಬ ಷಡ್ವಿಧ ಪದಾರ್ಥಗಳು. ದುಗ್ಧ, ದಧಿ, ಘೃತ, ಇಕ್ಷುರಸ, ನಾರಿಕೋಳ್ ಸ್ವಾದೋದಕಗಳೆಂಬ ಷಡ್ವಿದ ಅಭಿಷೇಕವು. 'ಓಂ ಹ್ರಾಂ ನಾಂ ನಮಃ ಶಿವಾಯ', 'ಓಂ ಹ್ರೀಂ ಮಂ ನಮಃಶಿವಾಯ', 'ಓಂ ಹ್ರೂಂ ಶಿಂ ನಮಃಶಿವಾಯ', 'ಓಂ ಹ್ರೈಂ ವಾಂ ನಮಃಶಿವಾಯ', 'ಓಂ ಹ್ರೌಂ ಯಾಂ ನಮಃಶಿವಾಯ, 'ಓಂ ಹ್ರಂ ನಮಃಶಿವಾಯ', ಎಂಬ ಷಡ್ವಿಧ ಮಂತ್ರಗಳ ಸಮೂಹವನ್ನು ಪಠಿಸುತ್ತ, ಪೃಥ್ವಿ, ಜಲ, ವಾಯು, ಆಕಾಶ, ಆತ್ಮರೆಂಬ ತತ್ವಗಳಿಂದ ದೃಢವಾದ ಜ್ಞಾನದಿಂದ ಕೂಡಿರುವುದೇ ಕ್ರಿಯಾರ್ಪಣ ಎನಿಸುವುದು. ಇದುವೇ ಲಿಂಗಸ್ವರೂಪವು ಷಡ್ವಿಧ ಇಷ್ಟಲಿಂಗಕ್ಕೆ ಅರ್ಪಿಸುವ ಈ ಕಾಯಾರ್ಪಣದಲ್ಲಿಯೂ ಒಂದು ಬಗೆಯ ಮಿಶ್ರಣವಿದೆ. ಈ ಷಡ್ಲಿಂಗಗಳಿಗೆ ಅರ್ಪಿಸಬೇಕಾದವು ಕಾಯಸಂಬಂಧವಾದ ಪದಾರ್ಥಗಳು ಅವು ಹೀಗಿವೆ.

೧. ಭೋಜ್ಯ (ತುತ್ತು ಮಾಡಿ ತಿನ್ನುವಂತಹದು)

೨. ಪಾನ್ಯ (ಎತ್ತಿ ಕುಡಿಯುವಂತಹದು)

೩. ಭಕ್ಷ್ಯ (ಹಲ್ಲಿನಿಂದ ಜಗಿದು ತಿನ್ನವಂತಹದು)

೪. ಚೋಷ್ಯ (ಸುರಿದು ಉಣ್ಣುವಂತಹದು)

೫. ಲೇಹ್ಯ (ನೆಕ್ಕಿ ತಿನ್ನುವಂತಹದು)

೬. ಇವೆಲ್ಲರಲ್ಲಿಯ ಅರಿವು (ತೃಪ್ತಿದ್ರವ್ಯ)

ಮುಂದಿನ ಪದ್ಯದಲ್ಲಿ ಷಟ್‌ಸ್ಥಲ ಸಕೀಲಗಳನ್ನೆಲ್ಲ ಹೆಸರಿಸುತ್ತಾ ಮಂತ್ರಪಂಚೀಕರಣದ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಪೃಥ್ವಿ-ಅಪ್ಪು-ತೇಜ-ವಾಯು-ಆಕಾಶ-ಆತ್ಮಗಳೆಂಬ ಷಡ್ವಿಧ ಭೂತಗಳು. ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿಶರಣ-ಐಕ್ಯರೆಂಬ ಷಡ್ವಿಧ ಅಂಗಸ್ಥಲಗಳು. ಸುಚಿತ್ತ-ಸುಬುದ್ಧಿ-ನಿರಹಂಕಾರ-ಸುಮನ-ಸುಜ್ಞಾನ-ಸದ್ಭಾವಗಳೆಂಬ ಷಡ್ವಿಧ ಹಸ್ತಗಳು. ಆಚಾರ-ಗುರು-ಶಿವ-ಜಂಗಮ-ಪ್ರಸಾದ-ಮಹಾಲಿಂಗಗಳೆಂಬ ಷಡ್ವಿಧ ಲಿಂಗಗಳು. ನಿವೃತ್ತಿ-ಪ್ರತಿಷ್ಠಾ-ವಿದ್ಯೆ-ಶಾಂತಿ-ಶಾಂತಾತೀತೆ-ಶಾಂತಾತೀತೋತ್ತರಗಳೆಂಬ ಷಡ್ವಿಧ ಕಲೆಗಳು. ಜಿಹ್ವೆ-ನೇತ್ರ-ತ್ವಕ್ಕು-ಶ್ರೋತ್ರ-ಹೃದಯಗಳೆಂಬ ಷಡ್ವಿಧ ಮುಖಗಳು, ಗಂಧ-ರಸ-ರೂಪ-ಸ್ಪರ್ಶ-ಶಬ್ದ-ತೃಪ್ತಿಗಳೆಂಬ ಷಡ್ವಿಧ ಮನುಗಳು. ಶ್ರದ್ಧೆ-ನಿಷ್ಠೆ-ಅವಧಾನ-ಅನುಭವ-ಆನಂದ-ಸಮರಸಗಳೆಂಬ-ಷಡ್ವಿಧ ಭಕ್ತಿಗಳನ್ನು ಶ್ರೀಗುರುವಿನಿಂದ ತಿಳಿದುಕೊಳ್ಳಬೇಕು. ತದನಂತರ ಷಡ್ವಿಧ ಆಕಾರಗಳು (ಚತುಃ ಕೋಣಾಕಾರ, ಧನುರಾಕಾರ, ತ್ರಿಕೋಣಾಕಾರ, ಷಟ್ಕೋಣಾರ,

ವೃತ್ತಾಕಾರ, ತಮಂಧಾಕಾರ). ಷಡ್ವಿಧ ಚಕ್ರಗಳು (ಆಧಾರ-ಸ್ವಾದಿಷ್ಠಾನ-ಮಣಿಪೂರಕ-ಅನಾಹತ-ವಿಶುದ್ಧಿ-ಆಜ್ಞಾ). ಷಡ್ವಿದ ಕಮಲಗಳು (ಚತುರ್ದಳ, ಷಡ್ದಳ, ದಶದಳ, ದ್ವಾದಶದಳ, ಷೋಡಶದಳ, ದ್ವಿದಳ) ಷಡ್ವಿಧ ವರ್ಣಗಳು(ಪೀತ, ಶ್ವೇತ, ಮಾಣಿಕ್ಯ, ಹಾರೀತ, ಧೂಮ, ಜ್ಯೋತಿ) ಷಡ್ವಿಧ ಅಕ್ಷರಗಳು (ಬ.ಭ.ಮ.ಯ.ರ.ಲ). ಷಡ್ವಿದ ಮಂತ್ರಗಳು (ಓಂ ನಮಶಿವಾಯ) ಇವುಗಳಲ್ಲಿ ಒಂದೊಂದರಲ್ಲಿ ಐದೈದಾಗಿ ಮಿಶ್ರಿಸುವಂಥ ಪಂಚೀಕರಣ ಮಿಶ್ರಣವನ್ನು ಅರಿತುಕೊಳ್ಳಬೇಕು ಎಂದು ಹೇಳುತ್ತಾನೆ.

ವೀರಶೈವ ಸಿದ್ಧಾಂತದ ಪ್ರಕಾರ ಅರ್ಪಣ ಕ್ರಿಯೆಯೆಂಬುದು ಅವಿಚ್ಛಿನ್ನವಾಗಿ ನಡೆದಿರುತ್ತದೆ. ಅಂಗ-ಲಿಂಗ ಸ್ಥಳಗಳು ಮೂರು, ಆರು, ಮೂವತ್ತಾರು, ಇನ್ನೂರಾ ಹದಿನಾರು ಆಗಿ ಅರ್ಪಣ ವಿಧಾನವು ವಿರಾಡ್ರೂಪ ಧರಿಸಿ ಸಾಗುತ್ತದೆ. ಅದಕ್ಕಾಗಿ ಕವಿಯು ಮೇಲಿನ ಸಕೀಲಗಳನ್ನು ಹೆಸರಿಸುತ್ತಾನೆ. ಇಲ್ಲಿ ನಡೆಯುವ ಅರ್ಪಣೆಯೆಲ್ಲಾ ಜ್ಞಾನಾರ್ಪಣೆಯಾಗಬೇಕೆಂಬುದೇ ಮುಖ್ಯ ಗುರಿಯಾಗಿದೆ. ಹೀಗೆ ಸ್ಥೂಲವಾದ ದೇಹ ವಿಷಯಕ ಆಲೋಚನೆ ಸೂಕ್ಷ್ಮವಾಗುತ್ತ, ಸಮಸ್ತ ದೇಹದ ಕಣಕಣದವರೆಗೂ ಹೋಗುತ್ತದೆ. ಆಗ ದೇಹವೆಲ್ಲ ಲಿಂಗಮಯ, ಮಂತ್ರಮಯವಾಗುವ ಪೂರ್ಣವ್ಯಾಪ್ತಿಯನ್ನು ಹೊಂದಿಬಿಡುತ್ತದೆ.[೧೫] ಅರ್ಪಣ ಕ್ರಿಯೆಯಲ್ಲಿ ಅರ್ಪಿಸುವವನು ಅಂಗ, ಅರ್ಪಿಸಿಕೊಳ್ಳುವವನು ಲಿಂಗ. ಅಂಗನಲ್ಲಿರುವ ಭಕ್ತಿಯಾವುದು? ಅವನ ಹಸ್ತವಾವುದು?, ಅವನು ಯಾವ ಪದಾರ್ಥವನ್ನು ಅರ್ಪಿಸುತ್ತಾನೆ?, ಯಾವ ಮುಖವಾಗಿ ಅರ್ಪಿಸುತ್ತಾನೆ?, ಯಾವ ಲಿಂಗಕ್ಕೆ ಅರ್ಪಿಸುತ್ತಾನೆ?, ಆ ಅಂಗದಲ್ಲಿರುವ ಶಕ್ತಿಯಾವುದು?, ಅರ್ಪಣಾನಂತರ ದೊರೆಯುವ ಪ್ರಸಾದ ಯಾವುದು? ಇತ್ಯಾದಿಗಳಿಗೆ ಸಂಬಂಧಪಟ್ಟ ಜ್ಞಾನ ಸಾಧಕನಿಗೆ ಇರಬೇಕಾಗುತ್ತದೆ. ಅರ್ಪಣಾ ಕ್ರಮದಲ್ಲಿ ಇವುಗಳ ಸಂಬಂಧವನ್ನೇ ಅಷ್ಟವಿಧ ಸಕೀಲಗಳೆಂದು ಕರೆಯುತ್ತಾರೆ. ಅವುಗಳ ವಿವರ ಹೀಗಿದೆ.[೧೬]

ಅಂಗ	ಭಕ್ತಿ	ಹಸ್ತ	ಲಿಂಗ	ಶಕ್ತಿ	ಮುಖ	ಪದಾರ್ಥ	ಪ್ರಸಾದ
ಭಕ್ತ	ಶ್ರದ್ಧಾ	ಸುಚಿತ್ತ	ಆಚಾರ	ಕ್ರಿಯಾಶಕ್ತಿ	ಘ್ರಾಣ	ಸುಗಂಧ	ಸುಗಂಧ
ಮಹೇಶ	ನಿಷ್ಠಾ	ಸುಬುದ್ಧಿ	ಗುರು	ಜ್ಞಾನಶಕ್ತಿ	ಜಿಹ್ವೆ	ಸುರಸ	ಸುರಸ
ಪ್ರಸಾದಿ	ಅವಧಾನ	ನಿರಹಂಕಾರ	ಶಿವ	ಇಚ್ಛಾಶಕ್ತಿ	ನೇತ್ರ	ಸುರೂಪ	ಸುರೂಪ
ಪ್ರಾಣಲಿಂಗಿ	ಅನುಭವ	ಸುಮನ	ಜಂಗಮ	ಆದಿಶಕ್ತಿ	ತ್ವಕ್ಕು	ಸುಸ್ಪರ್ಶ	ಸುಸ್ಪರ್ಶ
ಶರಣ	ಆನಂದ	ಸುಜ್ಞಾನ	ಪ್ರಸಾದ	ಪರಾಶಕ್ತಿ	ಶ್ರೋತ್ರ	ಸುಶಬ್ದ	ಸುಶಬ್ದ
ಐಕ್ಯ	ಸಮರಸ	ಸದ್ಭಾವ	ಮಹಾಲಿಂಗ	ಚಿಚ್ಛಕ್ತಿ	ಹೃದಯ	ತೃಪ್ತಿ	ತೃಪ್ತಿ

ಮಿಶ್ರಾರ್ಪಣದಲ್ಲಿ ಕಾಯಾರ್ಪಣ, ಕರಣಾರ್ಪಣ ಹಾಗೂ ಭಾವಾರ್ಪಣವೆಂದು ಮುಖ್ಯವಾಗಿ ಮೂರು ವಿಧ. ಕಾಯ ಸಂಬಂಧವಾದ ರೂಪಪದಾರ್ಥಗಳನ್ನು ಇಷ್ಟಲಿಂಗಕ್ಕೆ ಸಮರ್ಪಿಸುವುದು ಕಾಯಾರ್ಪಣವೆನಿಸಿದರೆ, ಮನೋಸಂಬಂಧವಾದ ರುಚಿ ಪದಾರ್ಥಗಳನ್ನು ಪ್ರಾಣಲಿಂಗಕ್ಕೆ ಅರ್ಪಿಸುವುದು ಭಾವಾರ್ಪಣವೆನಿಸುತ್ತದೆ. ಈ ಮೂರರಲ್ಲಿ ಮತ್ತೆ ಕಾಯಾರ್ಪಣ ಆರುವಿಧ. ಕರಣಾರ್ಪಣ ಮುವತ್ತಾರು ವಿಧ, ಭಾವಾರ್ಪಣ ಇನ್ನೂರಾ ಹದಿನಾರು ವಿಧಗಳಾಗಿ ತೋರುತ್ತವೆ.[೨] ಒಟ್ಟಿನಲ್ಲಿ ಕಾಯ-ಮನ-ಆತ್ಮ ಸಂಬಂಧಿಯಾದ ಸರ್ವಪದಾರ್ಥಗಳನ್ನು ಲಿಂಗಕ್ಕೆ ಸಮರ್ಪಿಸುವ ಸರ್ವಾರ್ಪಣವೇ ಇದರ ವೈಶಿಷ್ಟ್ಯ.

ಹೀಗೆ ಆಚಾರಾದಿ ಆರು ಲಿಂಗಗಳಿಗೆ ಗಂಧಾದಿ ಆರು ಪದಾರ್ಥ(ವಿಷಯ)ಗಳನ್ನು ಸುಚಿತ್ತಾದಿ ಆರು ಹಸ್ತಗಳಿಂದ ಅರ್ಪಿಸುವ ಕ್ರಮವನ್ನು ತಿಳಿದ ಮೇಲೆ ಅದು ಮಿಶ್ರವಾಗುವ ಬಗೆಯನ್ನು ಪರಿಶೀಲಿಸಬಹುದು. ಗಂಧಾದಿ ಆರು ಪದಾರ್ಥಗಳಲ್ಲಿ ಒಂದೊಂದರಲ್ಲೂ ಆರು ಭಾಗಗಳಿವೆ.[೮]

ಗಂಧದಲ್ಲಿ : ೧. ಬೇರು, ಗಡ್ಡೆ, ಗೆಣಸುಗಳ ಗಂಧ. ೨. ಮರ ತೊಗಟೆಗಳ ಗಂಧ.
೩. ಚಿಗುರು ತಳಿರು ಪತ್ರೆಗಳ ಗಂಧ ೪.ಮೊಗ್ಗೆ ಪುಷ್ಪಗಳ ಗಂಧ.
೫. ಕಾಯಿ ಹಣ್ಣುಗಳ ಗಂಧ. ೬. ಇವೆಲ್ಲದರಲ್ಲಿಯ ಗಂಧ.

ರಸದಲ್ಲಿ : ೧. ಮಧುರ ೨. ಒಗರು. ೩. ಕಾರ ೪.ಹುಳಿ ೫.ಕಹಿ ೬.ಇವೆಲ್ಲರಲ್ಲಿಯ ರಸ

ರೂಪದಲ್ಲಿ : ೧. ಪೀತವರ್ಣದ ರೂಪ ೨. ಶ್ವೇತವರ್ಣದ ರೂಪ
೩. ಹರಿತವರ್ಣದ ರೂಪ. ೪. ಮಾಂಜಿಷ್ಟವರ್ಣದ ರೂಪ
೫. ಕಪೋತ(ನೀಲ) ವರ್ಣದ ರೂಪ. ೬. ಇವೆಲ್ಲವುಗಳಲ್ಲಿಯ ರೂಪ.

ಸ್ಪರ್ಶದಲ್ಲಿ : ೧. ಕಠಿಣ ಸ್ಪರ್ಶ ೨. ಮೃದುಸ್ಪರ್ಶ ೩. ಉಷ್ಣಸ್ಪರ್ಶ
೪. ಶೈತ್ಯಸ್ಪರ್ಶ ೫. ನುಣುಪುಸ್ಪರ್ಶ ೬. ಇವೆಲ್ಲರಲ್ಲಿಯ ಸ್ಪರ್ಶ

ಶಬ್ದದಲ್ಲಿ : ೧. ಕಂಚಿನ(ಘನ) ವಾದ್ಯಗಳ ಶಬ್ದ ೨. ತಂತುವಾದ್ಯಗಳ ಶಬ್ದ
೩. ಚರ್ಮವಾದ್ಯಗಳ ಶಬ್ದ ೪. ಸುಷಿರವಾದ್ಯಗಳ ಶಬ್ದ
೫. ಕಂಠದಿಂದ ಹೊರಡುವ ಶಬ್ದ ೬. ಇವೆಲ್ಲದರಲ್ಲಿ ಹುಟ್ಟುವ ಶಬ್ದ

ತೃಪ್ತಿಯಲ್ಲಿ : ೧. ಗಂಧದ ತೃಪ್ತಿ ೨. ರಸದ ತೃಪ್ತಿ ೩. ರೂಪಿನ ತೃಪ್ತಿ
೪. ಸ್ಪರ್ಶನ ತೃಪ್ತಿ ೫.ಶಬ್ದದ ತೃಪ್ತಿ ೬. ಇವೆಲ್ಲದರಲ್ಲಿಯ ತೃಪ್ತಿ

ಹೀಗೆ ಪದಾರ್ಥಗಳು ಒಟ್ಟು ಮುವತ್ತಾರು ಆಗುತ್ತವೆ. ಇವುಗಳನ್ನು ಅರ್ಪಿಸಿಕೊಳ್ಳಲು ಆಚಾರಾದಿ ಷಡ್ಲಿಂಗಗಳಲ್ಲಿ ಪ್ರತಿಯೊಂದೂ ಆರು ಭಾಗವಾಗಿ ೨೧೬ ಆಗುತ್ತವೆ. ಇದೆಲ್ಲವನ್ನು ವೀರಶೈವ ಸಿದ್ಧಾಂತ ಗ್ರಂಥಗಳು ಪ್ರಸಾದವೆಂದು ಕರೆಯುತ್ತವೆ. ಪ್ರಸಾದವೆಂದರೆ ಕೇವಲ ಊಟವಲ್ಲ, ಮನೋಗಮ್ಯವಾದ ಯಾವುದೇ ಆಗಿರಬಹುದು. ಅದು ಮನಃ ಪ್ರಸಾದವನ್ನುಂಟು ಮಾಡಬೇಕು. ಲೌಕಿಕವಾಗಿ ದುಃಖದಿಂದ ಇದ್ದರೂ ಪರಿಪಕ್ವ ಸ್ಥಿತಿಯನ್ನು ಉಂಟುಮಾಡಿಕೊಳ್ಳಬೇಕು.[೯] ಕವಿಯು ಮುಂದುವರಿದು ಆಚಾರಲಿಂಗ ಮಿಶ್ರ, ಶಿವಲಿಂಗಮಿಶ್ರ, ಪ್ರಸಾದಲಿಂಗ ಮಿಶ್ರಗಳನ್ನು ಕುರಿತಾಗಿ ವಿವರಿಸುತ್ತಾನೆ.

ಗಡ್ಡೆ ವೇರ್ಗಳು ಮೇಣ ಮರ ತಿಗಡುಗಳು ಕೊನ
ದೊಡ್ಡೆ ತಿಗಣ ಮೊಗ್ಗೆಯಲರ್ಗಳೆ ಗಾಯ್ಪಣ್ಣ
ಳೊಡ್ಡಿದಿವರೊಳ್ಗಂಪುಗಳ್ತತ್ಸಮಸ್ತ ತೃಪ್ತಾಚಾರಲಿಂಗ ಮಿಶ್ರ||

ಬೆಲ್ಲಗೆಣಸು, ಬೇಳೆಗೆಣಸು, ಕಂಬಗೆಣಸು, ಕುಂಭಗೆಣಸು ಮೊದಲಾದ ಗಂಧ ದ್ರವ್ಯಗಳು. ಬಾಳೆ, ಮಡಿವಾಳ, ಹಂಚಿ ಮೊದಲಾದವುಗಳ ಬೇರು; ತದಿಕಿಲು ಜಾಲ, ಹಾಲಮಡ್ಡಿ, ಗುಗ್ಗಳ, ಮೊದಲಾದ ಮೇಯವಾದ ಗಂಧ, ಅಗಿಲು, ಶ್ರೀಗಂಧ, ದೇವದಾರ ಮೊದಲಾದ ವೃಕ್ಷಗಳು; ಮಾವು, ಮಿಡಿಮಾವು, ಎಳೆಮಾವು, ಕಬಾಬ, ಬನ್ನಿ ಮೊದಲಾದ ಮರಗಳು; ಶಮಿ, ಧಾತ್ರಿ, ಬಿಲ್ವಪತ್ರೆಗಳು; ಮಲ್ಲಿಗೆ, ಜಾಜಿ, ಸುರಗಿ, ಗಂಧ, ಕಮಲ, ಕಲ್ಹಾರ, ಕೈರವ, ಕರವೀರ ಮೊದಲಾದ ಪುಷ್ಪಗಳು; ಗಂಧ, ತೊಂಡೆ, ಸೌತೆ ಮೊದಲಾದ ಕೋಮಲ ಶಲಾಟಗಳು ಗಂಧ; ಚೂತ, ಪನಸು, ಜಂಜೂಪಳ ಮೊದಲಾದವುಗಳ ಪಕ್ವ ಫಲಗಳ ಗಂಧವನ್ನರಿಯುವುದೇ ಆಚಾರಲಿಂಗ ಮಿಶ್ರ.

ಮಿಡ್ದುರವಳಿದ ಸಿಹಿಯೊಗರ್ಕಾರ ಪುಳಿಕಹಿಯ
ಸಡ್ಡೆಗೊಂಡರಿವು ಸಹಗುದ ಮಿಶ್ರ ಪಳದಿ ಬಿಳಿ
ದಡ್ಡಿಯಿಲ್ಲದ ಪಸಿರ್ನಸುಗೆಂಪು ಕಾಪೋತ ಪರಿವು ಶಿವಲಿಂಗ ಮಿಶ್ರಾ||೩||

ಬಾಳೆಹಣ್ಣು, ಸಕ್ಕರೆ, ಜೇನುತುಪ್ಪ ಮೊದಲಾದವುಗಳ ಮಧುರ ರಸದ ರುಚಿ; ಬೆಳಲು, ನೆಲ್ಲಿ, ಅಳಿಲೆ, ಮಾವಿನಮಡಿ ಮೊದಲಾದವುಗಳ ಕಷಾಯ ರಸದ ರುಚಿ; ಹಿಪ್ಪಲಿ, ಶುಂಠಿ, ಲವಂಗ, ಮೆಣಸು ಮೊದಲಾದ ಆಮ್ಲಗಳ ರುಚಿ; ಕಾರ್ಚಿ, ಕೈದಸರಿ, ಹಾಗಲ ಮೊದಲಾದವುಗಳ ತಿಕ್ತ ರಸದ ರುಚಿ. ಅರಿಶಿನ, ಹೊಂದಾವರೆ ಕೊಸಗು, ಕುಂಬಳ ಮೊದಲಾದವುಗಳ ಪೀತ ವರ್ಣದ ಕಾಂತಿ; ಸುಣ್ಣ, ವಂಡಿ, ಕರ್ಪೂರ ಮೊದಲಾದವುಗಳ ಶ್ವೇತ ವರ್ಣದ ಕಾಂತಿ; ಬನ, ಬಳೆ, ಪಚ್ಚೆ, ಗಿಳಿವಣ್ಣ ಮೊದಲಾದ ಹಸಿರು ವರ್ಣದ ಕಾಂತಿಯನರಿಯುವುದು. ಚೂತ, ದಾಸವಾಳ ಮೊದಲಾದ ಬಿಳಿಕೆಂಪಿನ ಕಾಂತಿ, ಸಂಧ್ಯ, ಮೇಘವಿತಾನ. ಪಂಚಾಲಿ, ಪಕ್ಷಿಗಳ ಕಂಠದಲ್ಲಿ ತೋರುವ ಕಪೋತ ವರ್ಣದ ಕಾಂತಿಯನ್ನರಿಯುವುದು ಶಿವಲಿಂಗದ ಮಿಶ್ರ.

ಬಿರಿಸು ಮಿದುಸೆಖೆ ತಣ್ಪು ಬೆರಕೆಯಿವರೊಳು ತೋರು
ವರಿವು ಚರಮಿಶ್ರ ತಾಳವು ತಂತಿ ಚರ್ಮರವ
ನೆರೆ ಸುಷಿರ ಸಂಗೀತ ವಿವರರಿವು ವಿಮಲ ಪ್ರಸಾದಲಿಂಗದ ಮಿಶ್ರವು ||೪||

ಭೂಮಿ, ಹೊಸಕಂಬಳಿ, ಗೋಣಿತಟ್ಟು ಮೊದಲಾದವುಗಳಲ್ಲಿ ತೋರುವ ಕಠಿಣ ಸ್ಪರ್ಶ, ಹಂಸ ತೂಳತಳ್ಪ ಮೊದಲಾದವುಗಳ ಮೃದುಸ್ಪರ್ಶ; ಬಿಸಿಲು, ಬೆಂಕಿ, ಬಿಸಿನೀರು ಮೊದಲಾದವುಗಳಲ್ಲಿಯ ಲೆಗ್ಮಸ್ಪರ್ಶ; ಕೈತಾಳ, ಜಾಗಡೆ ಮೊದಲಾದವುಗಳಲ್ಲಿಯ ಘನವಾದ್ಯದ ಶಬ್ದ. ತಂಬೂರಿ, ವೀಣೆ, ಸರಮಂಡಲ, ಕಿನ್ನರಿ ಮೊದಲಾದವುಗಳಲ್ಲಿಯ ಮೃದುವಾದ್ಯದ ಶಬ್ದ; ತಾಳ, ಸ್ವರ, ವಚನ ಮೊದಲಾದವುಗಳಲ್ಲಿಯ ಗಾನ ಧ್ಯೇಯ ಶಬ್ದವನರಿಯುವುದು ಪ್ರಸಾದಲಿಂಗಮಿಶ್ರ.

ಈ ರೀತಿಯ ೨೧೬ ತೆರನಾದ ಅರ್ಪಣದ ಕ್ರಮವನ್ನು ನೋಡಿ ಸ್ವೀಕರಿಸುತ್ತ ಭಕ್ತನ ಹದಿನಾರು ಸ್ಥಲ. ಮಾಹೇಶ್ವರನ ಒಂಬತ್ತುಸ್ಥಲ. ಪ್ರಸಾದಿಯ ಏಳುಸ್ಥಲ, ಪ್ರಾಣಲಿಂಗಿಯ ನಾಲ್ಕುಸ್ಥಲ ಶರಣನ ನಾಲ್ಕುಸ್ಥಲ, ಐಕ್ಯನ ನಾಲ್ಕುಸ್ಥಲಗಳೆಂಬ ಒಟ್ಟು ೪೪ ಅಂಗಸ್ಥಲಗಳು. ಆಚಾರ ಲಿಂಗದ ಒಂಭತ್ತು ಸ್ಥಲಗಳು, ಗುರುಲಿಂಗದ ಒಂಭತ್ತು ಸ್ಥಲ ಶಿವಲಿಂಗದ ಒಂಭತ್ತು ಸ್ಥಲಗಳು, ಜಂಗಮಲಿಂಗದ ಒಂಭತ್ತು ಸ್ಥಲಗಳು, ಮಹಾಲಿಂಗದ ಹನ್ನೊಂದುಸ್ಥಲಗಳು, ಹೀಗೆ ೫೭ ಲಿಂಗ ಸ್ಥಲಗಳು ಒಂದಾಗುವಂತೆ ಷಟ್ಸ್ಥಲದಲ್ಲಿ ಧ್ಯಾನಿಸುವುದು. ಹೀಗೆ ಈ ವಿಧಾನ ೨೧೬ ಸಕೀಲಗಳಲ್ಲೂ ಪಸರಿಸಿದಾಗ ಪಿಂಡ ಪ್ರಪಂಚವೆಲ್ಲ ಶಿವ ಪ್ರಪಂಚವಾಗುವುದೆಂದು ಈ ಸಿದ್ಧಾಂತದ ನಂಬಿಕೆ. ಈ ವಿಧಿಯ ಶಾಸ್ತ್ರೀಯತೆ ತುಂಬಾ ವೈಜ್ಞಾನಿಕ ವಿಚಾರಗಳಿಂದ ಕೂಡಿದೆ. ಧರ್ಮವೂ ಒಂದು ಬಗೆಯ ವಿಜ್ಞಾನ ಎಂಬುದು ಇದರಿಂದ ಅರ್ಥವಾಗುತ್ತದೆ. 'ಮಹಾವೃಕ್ಷದ ಬೇರಿನಿಂದ ಹೀರಲ್ಪಟ್ಟ ಅನ್ನ ಸತ್ವವು ಬೊಡ್ಡೆ, ರೆಂಬೆ, ಕೊಂಬೆ, ಟಿಸಿಲು, ಅಕಲು, ಕವಲು, ಎಲೆ, ಹೂವು, ಹೀಚು, ಕಾಯಿ, ಹಣ್ಣು ಅದರೊಳಗಿರುವ ಬೀಜ ಇತ್ಯಾದಿ ಸಮಗ್ರ ಭಾಗಗಳಿಗೂ ಪ್ರಸಾರಗೊಂಡು, ಅಖಂಡ ಮರದ ಯೋಗಕ್ಷೇಮಕ್ಕೆ ಕಾರಣವಾಗುವ ಹಾಗೆ, ಅರ್ಪಣ ವಿಧಿ-ವಿಧಾನದ ಸಮಸ್ತವೂ ದೇಹದ ಕಣಕಣದವರೆಗೆ ಸಾಗಬೇಕೆಂಬುವ ವಿಶಿಷ್ಟವಾದ ಆಲೋಚನೆ ಮಾಡಿ, ಅದರ ಕ್ರಮವನ್ನು ತಿಳಿಸಿರುವ ಶರಣರ ಈ ವೈಜ್ಞಾನಿಕ ದೃಷ್ಟಿಗೆ ಮೂಕ ವಿಸ್ಮಿತರಾಗಿ ವಿನಮ್ರ ಭಾವದಿಂದ ತಲೆಬಾಗುವಂತೆ ಮಾಡುತ್ತದೆ.[೨೦] ಹೀಗೆ ಗುರುವು ಶಿಷ್ಯನಿಗೆ ಮಿಶ್ರಾರ್ಪಣದ ವಿಧಾನವನ್ನು ಕ್ರಮವಾಗಿ ಬೋಧಿಸುತ್ತಾನೆ. ಇದನ್ನು ಅರಿತು ಆಚರಿಸಿದರೆ ಲಿಂಗಾಂಗ ಸಾಮರಸ್ಯ ಸಾಧ್ಯ ಎಂದು ಅರಹುತ್ತಾನೆ. ಸರಳ ಷಟ್ಪದಿಯಲ್ಲಿ ಈ ತತ್ವವನ್ನು ಇಮ್ಮಡಿ ಮುರಿಗಾ ಗುರುಸಿದ್ಧರು ಎಲ್ಲರಿಗೂ ತಿಳಿಯುವಂತೆ ನಿರೂಪಿಸಿರುವುದು ವಿಶೇಷವಾಗಿದೆ.

ಅರ್ಚನ-ಅರ್ಪಣೆಯ ನಂತರದಲ್ಲಿ ವೀರಶೈವರು ಅನುಭಾವಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಕ್ರಿಯಾ-ಜ್ಞಾನ-ಇಚ್ಛಾ-ಆದಿ-ಪರಾಶಕ್ತಿಗಳ ಮಥನದಿಂದ, ಕ್ರಮವಾಗಿ ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನ-ಎಂಬ ಐದು ವಾಯುಗಳನ್ನು, ಚಿತ್ ಶಕ್ತಿಯೊಂದರಿಂದ ನಾಗ-ಕೂರ್ಮ-ಕ್ರಕರ-ದೇವದತ್ತ-ಧನಂಜಯ ಎಂಬ ಐದು ವಾಯುಗಳನ್ನು ಒಟ್ಟಾರೆಯಾಗಿ ಈ ದಶವಾಯುಗಳನ್ನು ಹತೋಟಿಯಲ್ಲಿಟ್ಟುಕೊಂಡು. ಶಿವಯೋಗ ಸಿದ್ಧಿಯನ್ನು ಸಾಧಿಸಬೇಕು.[೨೧] ಈ ಯೋಗಸಿದ್ಧಿಯ ವಿಚಾರವು ಮಿಶ್ರಾರ್ಪಣೆಯ ನಂತರದ ಮೆಟ್ಟಿಲಾಗಿದೆ. ಮಿಶ್ರಾರ್ಪಣೆಯಲ್ಲಿ ಒಂದು ಎರಡಾಗಿ, ಎರಡು ಒಂದೊಂದರಲ್ಲೂ ಮೂರು ಮೂರಾಗಿ, ಮೂರು ಆರಾಗಿ, ಆರು ಮುವತ್ತಾರಾಗಿ, ಮುವತ್ತಾರು ಇನ್ನೂರಾ ಹದಿನಾರರವರೆಗೂ ಬೆಳೆದು ವಿರಾಡ್ರೂಪವನ್ನು ತಾಳುತ್ತದೆ. ಈ ನಿವೃತ್ತಿ ತತ್ತ್ವವು ಮತ್ತೆ ವಿಲೋಮ ಕ್ರಮದಲ್ಲಿ ಪುನಃ ಹಿಂದಕ್ಕೆ ಕ್ರಮವಾಗಿ ಸಾಗುತ್ತ ನಿರ್ಭಾವ ಸ್ಥಿತಿ ಅಳವಡಬೇಕೆಂಬ ಪ್ರವೃತ್ತಿಯೇ ಯೋಗಸಿದ್ಧಾಂತ.[೨೨] ಇದು ಶರಣರ ಶೂನ್ಯತತ್ತ್ವದ ಸ್ವರೂಪವಾಗಿದೆ. ಎಲ್ಲವೂ ಶೂನ್ಯದಿಂದ ಉದ್ಭವಿಸಿ, ಶೂನ್ಯದಲ್ಲಿಯೇ ಕೊನೆಗೊಳ್ಳುವ ಮಹಾಲಿಂಗ ತತ್ತ್ವವಾಗಿದೆ. ಜೀವನದಲ್ಲಿ ಭಕ್ತಿ ಬೀಜವ ಬಿತ್ತಿ ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗಗಳಲ್ಲಿ ಲಿಂಗತ್ರಯ ಸ್ಥಾಪಿಸಿ ಶಿವಕಳೆಯನ್ನು ಜಾಗ್ರತಗೊಳಿಸುವ ಪರಿ ಇಲ್ಲಿದೆ.

'ಯೋಗ' ಎಂಬ ಪದವು ಸಂಸ್ಕೃತದ 'ಯುಜ್ ' ಮೂಲಧಾತುವಿನಿಂದ ಬಂದಿದೆ. ಈ ಪದಕ್ಕೆ ಕೂಡಿಸು, ಸೇರಿಸು, ಸಂಬಂಧಿಸು, ಐಕ್ಯಗೊಳಿಸು ಎಂಬ ನಾನಾ ಅರ್ಥಗಳಿವೆ. ಯೋಗ ಸಿದ್ಧಾಂತವನ್ನು ಕುರಿತು ಭಾರತೀಯರ ಪ್ರಾಚೀನ ಗ್ರಂಥಗಳಾದ ವೇದ-ಉಪನಿಷತ್ತುಗಳು, ಪತಂಜಲಿ ಮಹರ್ಷಿಗಳು, ಬುದ್ಧ, ಬಸವ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮತ್ತು ಅನೇಕ ಕವಿಗಳು, ಪಂಡಿತರು ಶಾಸ್ತ್ರಜ್ಞರು ಚರ್ಚಿಸಿದ್ದಾರೆ. ಪತಂಜಲಿಯು 'ಯೋಗದಲ್ಲಿ ಮೊದಲು ಬಾಹ್ಯ ಶರೀರವನ್ನು ಶುದ್ಧಿ ಮಾಡಿಕೊಂಡರೆ ಮಾತ್ರ ಮನಶುದ್ಧಿಯಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ ವೀರಶೈವ ಶರಣರು ಮನಶುದ್ಧಿಗಾಗಿ ಬಾಹ್ಯ ಶರೀರ ಶುದ್ಧಿಯ ಅವಶ್ಯಕವಿಲ್ಲ. ಮನ ಶುದ್ಧಿಯಾದರೆ ಸರ್ವವೂ ತಮ್ಮಿಂದ ತಾವೇ ಶುದ್ಧಿಯಾಗುವವು ಕಾರಣ ಬುದ್ಧಿ, ಮನಸ್ಸು, ಅಹಂಕಾರಾದಿಗಳ ಶುದ್ಧಿಗಾಗಿಯೇ ಧಾರಣ, ಧ್ಯಾನ, ಸಮಾಧಿಗಳೆಂಬ ಯೋಗಾಂಗಳಿರುವವು ಎನ್ನುತ್ತಾರೆ.[೨೩] ಈ ಯೋಗವಿದ್ಯೆಯ ಗುಟ್ಟನ್ನು ಕಂಡುಕೊಂಡ ಶರಣರು ಷಟ್‌ಸ್ಥಲ ಮಾರ್ಗದಲ್ಲಿ ಯೋಗದ ಅಂಶಗಳನ್ನು ಶ್ರೀ ಸಾಮಾನ್ಯರಿಗೆ ತಿಳಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಮಂತ್ರಪಠಣೆ, ಈಶ್ವರಧ್ಯಾನ, ಇಷ್ಟಲಿಂಗ ಪೂಜೆಯಂತಹ ಕ್ರಮಗಳಿಂದ ಸಾಧಿಸಿದ ಈ ವಿದ್ಯೆಗೆ 'ಶಿವಯೋಗ' ಎಂದು ಹೆಸರಿಟ್ಟು,

ಈ ಯೋಗವನ್ನು ತಿಳಿದು ಆಚರಿಸಿದವರಿಗೆ ಶಿವಯೋಗಿಗಳು ಎಂದು ಕರೆದಿದ್ದಾರೆ. ಇಂಥಹ ಶಿವಯೋಗಿಗಳಲ್ಲಿ ಒಬ್ಬರಾದ ಇಮ್ಮಡಿ ಮುರಿಗಾ ಗುರುಸಿದ್ಧರು 'ಯೋಗಕಲಾಪಸಾರ' ಎಂಬ ಕೃತಿ ರಚಿಸಿದ್ದಾರೆ.

ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಕೃತಿಯಲ್ಲಿ ಐದು ಪಟಲಗಳಿವೆ. ಪಟಲ ಒಂದರಲ್ಲಿ ೧೧, ಪಟಲ ಎರಡಲ್ಲಿ ೨೨, ಮೂರರಲ್ಲಿ ೩೧, ನಾಲ್ಕರಲ್ಲಿ ೩೧, ಐದರಲ್ಲಿ ೩೩ ಹೀಗೆ ಒಟ್ಟು ೧೨೮ ಭಾಮಿನಿ ಷಟ್ಪದಿಗಳು ಈ ಕೃತಿಯಲ್ಲಿವೆ. ಪ್ರತಿ ಪಟಲದ ಅಂತ್ಯದಲ್ಲಿ 'ಇದು ನಿಖಿಳ ಶಿವಯೋಗ ಸಂಕುಳ' ಎಂಬ ಷಟ್ಪದಿ ಪದ್ಯವು ತಪ್ಪದೆ ಬಂದಿದೆ. ಪ್ರತಿಯೊಂದು ಪಟಲದ ಆರಂಭದ ಪಲ್ಲವಿಯಲ್ಲಿ, ಆಯಾ ಪಟಲದಲ್ಲಿ ನಿರೂಪಿತವಾದ ವಿಷಯದ ಸೂಚನೆಯಿದೆ. ಒಂದನೇ ಪಟಲದಲ್ಲಿ ಶಿವಯೋಗದ ಸ್ವರೂಪ, ಮಹತ್ವ, ಆಚರಣೆಯ ವಿಧಾನಗಳನ್ನು ಹೇಳಿದರೆ, ಎರಡನೇ ಪಟಲದಲ್ಲಿ ಮಂತ್ರ, ಲಿಂಗರೂಪ, ನಾದ, ಆತ್ಮ, ಹಾಗೂ ವಾಚ್ಯಗುಣಗಳನ್ನು ವಿವರಿಸಲಾಗಿದೆ. ಮೂರನೇ ಪಟಲದಲ್ಲಿ ಅಕ್ಷರಗಳು, ಅವುಗಳ ನೆಲೆಗಳು ಹಾಗೂ ಸ್ವರೂಪವನ್ನು ಕುರಿತಾಗಿ, ನಾಲ್ಕನೇ ಪಟಲದಲ್ಲಿ ಷಟ್ ಚಕ್ರಗಳಲ್ಲಿರುವ ಶಕ್ತಿಯರ ಸ್ಥಾನಗಳನ್ನು, ಪಂಚಭೂತಗಳಲ್ಲಿರುವ ಶಂಭುವಿನ ಸ್ಥಾನವನ್ನು ನಿರೂಪಿಸಲಾಗಿದೆ. ಕೊನೆಯಲ್ಲಿ ಭೋಜನದಿಂದ ದೇಹಶುದ್ಧಿಯ ಮಾಡಿಕೊಂಡ ಯೋಗಿಯ ಧ್ಯಾನ ಸ್ಥಿತಿಗಳನ್ನು, ಗೋಪ್ಯವಾದ ಈ ವಿಷಯ ಯಾರಿಂದ ತಿಳಿಯಬೇಕು. ತಿಳಿದುಕೊಂಡರೆ ಸಿಗುವ ಫಲಶ್ರುತಿಗಳ ಬಗ್ಗೆ ಹೇಳುತ್ತಾನೆ. ಕೃತಿಯುದ್ದಕ್ಕೂ ಪಾರ್ವತಿಯ ಪ್ರಶ್ನೆಗಳಿಗೆ ಶಿವನು ಉತ್ತರಿಸುವ ಸಂಭಾಷಣಾ ಮಾದರಿಯನ್ನು ಬಿತ್ತರಿಸಿದ್ದಾನೆ.

ಮನಸ್ಸಿನ ಚಲನವಲನವನ್ನು ತಡೆದು, ಒಂದೇ ವಿಷಯದ ಮೇಲೆ ಅದನ್ನು ಸ್ಥಿರಪಡಿಸಿ, ಅದೇ ವಿಷಯದ ಧ್ಯಾನದಲ್ಲಿ ತಲ್ಲೀನರಾಗಿ ಬಾಹ್ಯ ವ್ಯವಹಾರವನ್ನು ಮರೆತು ಇಹದಲ್ಲಿಯೇ ಪರಮ ಸುಖವನ್ನನುಭವಿಸುವ ಕ್ರಿಯೆಯನ್ನು ಯೋಗ ಎಂದು ಕರೆಯುತ್ತಾರೆ. ಇದೊಂದು ಭಾವದಲ್ಲಿಯೇ ನಿರ್ಭಾವ ಸ್ಥಿತಿಯನ್ನು ಹೊಂದುವ ಕೆಲಸವಾಗಿದೆ. ನಾವು ದಿನ ನಿತ್ಯವೂ ಬಾಹ್ಯ ಶರೀರದ ಶುದ್ಧಿಗಾಗಿ ಸ್ನಾನ ಮಾಡುತ್ತೇವೆ. ಆದರೆ ಇದರಿಂದ ಶರೀರದೊಳಗಿರುವ ಮಲೀನತೆಯನ್ನು ನಿವಾರಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ನಾವುಗಳು ಮೈಮೇಲಿನ ಚರ್ಮವನ್ನು ನೀರಿನಿಂದ ತೊಳೆದು ಸ್ವಚ್ಛಗೊಳಿಸಿದಂತೆ, ಶರೀರದೊಳಗಿರುವ ಮಲೀನತೆಯನ್ನು ಸರಿಯಾದ ಆಹಾರ, ವಿಹಾರ, ವ್ಯಾಯಾಮ ಧ್ಯಾನ ಮುಂತಾದ ಪರಿಕ್ರಮಗಳಿಂದ ತೊಳೆಯುವ ಕ್ರಮಗಳೇ ಯೋಗಾಂಗಗಳು. ಯೋಗದಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಮತ್ತು ಸಮಾಧಿಗಳೆಂದು ಎಂಟು ಅಂಗಗಳಿರುವವು. ಇವುಗಳಲ್ಲಿ ಯಮ-ನಿಯಮಗಳು ಸದಾಚಾರ ಮತ್ತು ನೀತಿಯನ್ನು

ಬೆಳೆಸುವ ತಳಹದಿಗಳಾಗಿವೆ. ಆಸನವು ಶಾರೀರಿಕ ಮತ್ತು ಮಾನಸಿಕ ಚಲನವಲನಗಳನ್ನು ಸರಿಯಾಗಿ ಕಾಯ್ದುಕೊಳ್ಳಲು ಅನುಕೂಲವಾಗುವುದು. ಪ್ರಾಣಾಯಾಮದಿಂದ ಶರೀರದೊಳಗಿನ ಮಲೀನತೆಯನ್ನೂ ಉಸಿರಾಟದ ಮೂಲಕ ಹೊರಗೆ ಹಾಕಲು ಸಹಾಯವಾಗುವುದು. ಪತ್ಯಾಹಾರದಿಂದ ಶರೀರವು ಸ್ಥೂಲವಾಗದಂತೆ, ಕ್ಷೀಣವಾಗದಂತೆ ಸಮಸ್ಥಿತಿಯನ್ನು ಕಾಪಾಡಲು ಬರುವುದು. ಉಳಿದ ಅಂಗಗಳಾದ ಧಾರಣ, ಧ್ಯಾನ, ಸಮಾಧಿಗಳು ಮನಸ್ಸಿನ ಚಂಚಲತೆಯನ್ನು ನಿಯಂತ್ರಿಸಿ ಏಕಾಗ್ರಚಿತ್ತತೆಯು ನೆಲೆಗೊಳ್ಳುವಂತೆ ಮಾಡುವ ಸಾಧನಗಳಾಗಿವೆ. ಒಂದೇ ವಿಷಯದ ಧ್ಯಾನದಲ್ಲಿ ತಲ್ಲೀನರಾಗಿ, ಬಾಹ್ಯ ವ್ಯವಹಾರವನ್ನು ಮರೆತು, ತನ್ಮಯತೆಯನ್ನು ಹೆಚ್ಚಿಸುವುದಕ್ಕಾಗಿ ಕುಂಭಕ, ಪೂರಕ, ರೇಚಕಗಳ ಮೂಲಕ ಶರೀರದೊಳಗಿನ ಮಲಿನತೆಯನ್ನೂ ನಾಶಮಾಡಿ, ದೇಹದ ವ್ಯಾಧಿಗಳನ್ನು ಗೆಲಿಯುವುದು ಯೋಗದ ಉದ್ದೇಶಗಳು. ಮೇಲಾಗಿ ಯೋಗದಿಂದ ಅಂತರಂಗ, ಬಹಿರಂಗಗಳ ಶುದ್ಧಿಯಾಗುವುದಲ್ಲದೆ ಈಶ್ವರ ಧ್ಯಾನವು ಬಲಪಡುವುದು.[೨೪]

'ಮಂತ್ರೋಲಯೋಹಠೋರಾಜಯೋಗಶ್ಚೇತಿ ಚತುರ್ವಿದಮ್'[೨೫] ಯೋಗವನ್ನು ಬಲ್ಲವರು ಮಂತ್ರ-ಲಯ-ಹಠ-ರಾಜ ಯೋಗಗಳೆಂದು ನಾಲ್ಕುವಿಧವಾಗಿ ವಿಂಗಡಿಸುತ್ತಾರೆ.

ಘ್ರಾಣದೊಳಗೇರಿಳಿದ ಸರಳ
ಪ್ರಾಣ ಪವನೋಚ್ಚರಣೆಯಿಂದವೆ
ಮಾಣದಾಗಳೆ ತೋರುವ ಪ್ರಣವೋಂ ನಾದವದೆ|(೨-೮)

'ಓಂ' ಕಾರ ಮೊದಲಾದ ಮಂತ್ರಗಳನ್ನು ಜಪಿಸುವವರು 'ಮಂತ್ರ'ಯೋಗಿಗಳೆಂದೂ, ಏಕಾಗ್ರಚಿತ್ತತೆಯನ್ನು ಹೊಂದಿ ಆತ್ಮದಲ್ಲಿ ತಲ್ಲೀನರಾಗುವವರು 'ಲಯ'ಯೋಗಿಗಳೆಂದೂ, ಅಷ್ಟಾಂಗ ಮಾರ್ಗಗಳಿಂದ, ಮುದ್ರಾಕರಣ ಬಂಧಗಳಿಂದ, ವಾಯುವನ್ನು ಸ್ವಾಧೀನ ಪಡಿಸಿಕೊಂಡವರು 'ಹಠ'ಯೋಗಿಗಳು, ಮನೋ ವೃತ್ತಿಯಿಲ್ಲದವರೂ, ಜ್ಞಾನದಿಂದ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದವರು 'ರಾಜ'ಯೋಗಿಗಳು, ಲಯ ಮತ್ತು ಹಠ ಮೊದಲಾದವುಗಳಂತೆ ಶರೀರವನ್ನು ದಂಡಿಸದೆ ಮನಸ್ಸಿನ ಚಿತ್ತವೃತ್ತಿಗಳನ್ನು ಸ್ವಾಧೀನ ಪಡಿಸಿಕೊಳ್ಳುವುದೇ ರಾಜಯೋಗದ ವಿಶೇಷ.

ನಾಡಿ ಚಕ್ರದ ನಿರ್ಣಯವ ನಾ
ನಾಡಿ ತೋರುವೆ ನಾಲಿಸದ್ವಿಜೆ
ನಾಡಿ ಮೂಲಾಧಾರದು ಪರಿಯ ಮಾಲೆಯೊಳಗಿರ್ದು
ಪಾಡಿನತಿಶಯವಹ ಸುಷುಮ್ನೆಯು
ಕೂಡೆ ಹನ್ನೆರಡನೆಯ ಕಡೆಯೊಳು
ಮಾಡಿ ತೋರುವುದದರ ನಿಲುಕಡೆ ಮುಖ್ಯವಾಗಿಹುದು||(೪-೧೦)

ಸುಷುಮ್ನಾ, ಪಿಂಗಳಾ, ಇಡಾ, ಸರಸ್ವತೀ, ಪೂಷಾ, ವರುಣಾ, ಹಸ್ತಿ ಜಿಹ್ವಾ, ಯಶಸ್ವಿನೀ, ಅಲಂಬುಷಾ, ಕುಹೂ, ವಿಶ್ವೋದರಾ, ಪಯಸ್ವಿನೀ, ಶಂಕಿನೀ ಮತ್ತು ಗಾಂಧಾರೀ ಮುಂತಾದ ನಾಡಿ ಸ್ಥಾನಗಳನ್ನು ಸೂಚಿಸುತ್ತಾನೆ. ನಾಶಿಕದ ಎಡ ರಂಧ್ರದಲ್ಲಿ ಇಡಾ, ನಾಶಿಕದ ಬಲದಲ್ಲಿ ಪಿಂಗಳಾ, ಅವೆರಡರ ನಡುವೆ ಸುಷುಮ್ನಾ ನಾಡಿಯು ಇರುತ್ತದೆ. ಸುಷುಮ್ನೆಯ ಎಡ-ಬಲದಲ್ಲಿ ಸರಸ್ವತೀ-ಕುಹೂ ನಾಡಿಗಳಿವೆ. ವಾಮಭಾಗದಲ್ಲಿ, ಇಡೆಯ ಪೂರ್ವದಲ್ಲಿ ಗಾಂಧಾರೀ-ಹಸ್ತಿಜಿಹ್ವಾ ನಾಡಿಗಳಿರುವವು. ಬಲ ಭಾಗದಲ್ಲಿ, ಪಿಂಗಳೆಯ ಪೂರ್ವದಲ್ಲಿ ಪೂಷಾ-ಯಶಸ್ವಿನೀ ನಾಡಿಗಳಿರುವವು. ಕುಹೂ-ಹಸ್ತಿ-ಜಿಹ್ವಾ ನಾಡಿಗಳ ಮಧ್ಯದಲ್ಲಿ ವಿಶ್ವೋದರಾ ನಾಡಿಯಿರುವುದು. ಗಾಂಧಾರೀ-ಸರಸ್ವತೀ ನಾಡಿಗಳ ಮಧ್ಯದಲ್ಲಿ ಶಂಕಿನೀ ನಾಡಿಯಿರುವುದು. ಯಶಸ್ವಿನೀ-ಸರಸ್ವತೀ ನಾಡಿಗಳ ಮಧ್ಯದಲ್ಲಿ ಪಯಸ್ವಿನೀ ನಾಡಿಯಿರುವುದು. ಅಲಂಬುಷಾ ನಾಡಿಯು ನಾಶಿಕದ ಮಧ್ಯದಿಂದ ಗುದದ್ವಾರದವರೆಗೆ ವ್ಯಾಪಿಸಿರುವುದು. ಇಡಾನಾಡಿಯು ಕಂದಮೂಲದಿಂದ ನಾಶಿಕ ಬಲ ಕೊನೆಯವರೆಗೆ ವ್ಯಾಪಿಸಿರುವುದು. ಸುಷುಮ್ನಾ ನಾಡಿಯ ಪೂರ್ವ ಭಾಗದಲ್ಲಿರುವ ಕುಹೂ ನಾಡಿಯು ಒಳಗೆ ಸರ್ವಾಂಗದಲ್ಲಿಯೂ ವ್ಯಾಪಿಸಿರುವುದು. ವಿಶ್ವೋದರಾ ನಾಡಿಯು ಬಾಯಿಯ ಮಧ್ಯದಲ್ಲಿ ಇರುವುದು. ಹಸ್ತಿ ಜಿಹ್ವಾ ನಾಡಿಯು ಎಡಪಾದಾಂಗುಷ್ಟದವರೆಗೆ ವ್ಯಾಪಿಸಿರುವುದು. ಗಾಂಧಾರೀ ನಾಡಿಯು ಎಡನೇತ್ರದ ಕೊನೆಯವರೆಗೆ ವ್ಯಾಪಿಸಿರುವುದು. ಶಂಕಿನೀ ನಾಡಿಯು ಶಿಶ್ನ ಮಧ್ಯದಲ್ಲಿರುವುದು. ಸರಸ್ವತೀ ನಾಡಿಯು ಜಿಹ್ವೆಯವರೆಗೆ ವ್ಯಾಪಿಸಿರುವದು. ಪಯಸ್ವಿನೀ ನಾಡಿಯು ಬಲಗಿವಿಯವರೆಗೆ ವ್ಯಾಪಿಸಿರುವುದು. ಪೂಷಾ ನಾಡಿಯ ಬಲಗಣ್ಣಿನವರೆಗೆ ವ್ಯಾಪಿಸಿರುವುದು. ವಾರುಣೀ ನಾಡಿಯು ಮೇಲೆ ಮತ್ತು ಕೆಳಗೆ ಸಂಚರಿಸುತ್ತಿರುವುದು. ಈ ನಾಡಿಗಳಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕ್ರಕರ, ಧನಂಜಯ ಮತ್ತು ದೇವದತ್ತ ಎಂಬ ಹತ್ತು ವಾಯುಗಳು ಹರಿಯುವವು.

ಪ್ರಾಣ ವಾಯುವು ಮುಖ-ಮೂಗುಗಳ ಮಧ್ಯದಲ್ಲಿ, ನಾಭಿ ಮಧ್ಯದಲ್ಲಿ, ಹೃದಯ ಉದರ-ತೊಡೆ ಅಂಡುಗಳ ಮಧ್ಯೆ-ನಡುವು-ಕಣಕಾಲುಗಳಲ್ಲಿ ಇರುತ್ತದೆ. ಅಪಾನ ವಾಯುವು ನಡು-ಮೊಳಕಾಲು ಕಣಕಾಲುಗಳಲ್ಲಿ ಇರುತ್ತದೆ. ವ್ಯಾನ ವಾಯುವು ಕಿವಿ-ನೇತ್ರಗಳ ಮಧ್ಯದಲ್ಲಿ ಹೆಗಲು-ಅಂಗುಷ್ಠ, ಮೂಗು-ಕಂಠಗಳಲ್ಲಿ ಇರುತ್ತದೆ. ಉದಾನ ವಾಯುವು ಸರ್ವಸಂಧಿಗಳಲ್ಲಿದ್ದು ಪಾದ-ಹಸ್ತಗಳಲ್ಲಿ ಹರಿಯುವುದು. ಸಮಾನ ವಾಯುವು ನಾಭಿಯಲ್ಲಿ ಯಾವಾಗಲೂ ಇರುತ್ತದೆ. ನಾಗ-ಕೂರ್ಮ-ಕ್ರಕರ-ಧನಂಜಯ-ದೇವದತ್ತ ವಾಯುಗಳು, ಚರ್ಮ ಮತ್ತು ಎಲುವು ಮುಂತಾದವುಗಳಲ್ಲಿ ಇರುವವು. ಪ್ರಾಣ ವಾಯುವು ನಿಶ್ವಾಸ-ಉಚ್ಛ್ವಾಸಗಳನ್ನು ಮಾಡುವುದು, ಅಪಾನ ವಾಯುವು ಮಲಮೂತ್ರಗಳನ್ನು ಹೊರತಳ್ಳುವುದು, ವ್ಯಾನವಾಯುವು ಸರ್ವಾಂಗದಲ್ಲಿದ್ದು ದೇಹವನ್ನು ಧರಿಸಿಕೊಂಡಿರುವುದು. ಉದಾನ

ವಾಯುವು ಮೇಲೆ ಹೋಗುವಂತೆ ಮಾಡುವುದು, ಸಮಾನ ವಾಯುವು ನಾಭಿಸ್ಥಾನದಲ್ಲಿದ್ದು ಅನ್ನರಸವನ್ನು ಸರ್ವಾಂಗಕ್ಕೆ ಹಂಚುವುದು. ನಾಗ ವಾಯುವು ವಾಂತಿ ಮಾಡಿಸುವುದು. ಕೂರ್ಮ ವಾಯುವು ಕಣ್ಣು ಮುಚ್ಚಿಸುವುದು. ಕ್ರಕರ ವಾಯುವು ಸೀನುವಂತೆ ಮಾಡಿಸುವುದು. ದೇವದತ್ತ ವಾಯುವು ನಿದ್ರೆ-ಮೂರ್ಛೆ ಹೊಂದುವಂತೆ ಮಾಡಿಸುವುದು. ಧನಂಜಯ ವಾಯುವು ಅಳುವಂತೆ ಮಾಡುವುದು.[೨೫] ಹೀಗೆ ನಾಡೀ-ವಾಯಗಳು ಕ್ರಿಯೆಗಳನ್ನು ಮಾಡುತ್ತಿರುತ್ತವೆ. ಇವುಗಳ ಸ್ಥಿತಿಗತಿಗಳನ್ನು ತಿಳಿದುಕೊಂಡು ಯಾರು ಪ್ರಾಣಾಯಾಮವನ್ನು ಮಾಡುತ್ತಾರೋ ಅವರೇ ಯೋಗವನ್ನು ತಿಳಿದವರು ಎಂದು ಭಾವಿಸಬೇಕಾಗುತ್ತದೆ.

ಲಿಂಗಮೂಲದೊಳೆಯ್ದೆ ತೋರ್ಪುದು
ಹೊಂಗಿ ಸ್ವಾಧಿಷ್ಠಾನವದು ಕು
ರಂಗ ಲೋಚನೆಯದಕೆ ಷಡ್ದಳವಿಹುದು ನಾಭಿಯೊಳು|
ತುಂಗ ಮಣಿಪೂರಕವದಕ್ಕಾ
ರಂಗದುರುದಶದಳವನಾಹತ
ಸಾಂಗದಿಂದಿಹುದದಕೆ ಹನ್ನೆರಡೆಸಳು ಹೃದಯವದೆ||(೪-೯)

ಯೋಗದಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳೆಂಬ ಎಂಟು ಅಂಗಗಳಲ್ಲಿ ಧ್ಯಾನದ ಬಗ್ಗೆ ಹೇಳುತ್ತಾನೆ. ಈ ಧ್ಯಾನವು ಸಗುಣ-ನಿರ್ಗುಣವೆಂದು ಎರಡು ವಿಧವಾಗಿದೆ. ಶಿವನನ್ನು ರೂಪ ರಹಿತನೆಂದು ಸಚ್ಚಿದಾನಂದ ಸ್ವರೂಪನೆಂದು ತಿಳಿದು ಧ್ಯಾನಿಸುವುದು ನಿರ್ಗುಣವಾದರೆ, ಈ ರೂಪವನ್ನು ಸಾವಯವಗಳಿಂದ ಕಲ್ಪಿಸಿಕೊಂಡು ಧ್ಯಾನಿಸುವುದು ಸಗುಣವೆನಿಸುವುದು. ಸಗುಣ ಧ್ಯಾನವು ಆಧಾರ ಚಕ್ರ, ಸ್ವಾಧಿಷ್ಠಾನ ಚಕ್ರ, ಮಣಿಪೂರಕ ಚಕ್ರ, ಅನಾಹತ ಚಕ್ರ, ವಿಶುದ್ಧಿ ಚಕ್ರ, ಆಜ್ಞಾಚಕ್ರ, ಬ್ರಹ್ಮರಂಧ್ರ, ಭ್ರೂಮಧ್ಯ ಎಂಬ ಒಂಬತ್ತು ಸ್ಥಾನದಲ್ಲಿ ಒಂಬತ್ತು ಬಗೆಯಾಗಿ ಶಿವನನ್ನು ಧ್ಯಾನಿಸಬೇಕು ಆಗ ಯೋಗಿಯು ಶಿವ ಸ್ವರೂಪವನ್ನು ಹೊಂದುತ್ತಾನೆ. ಇನ್ನು ಮುಂದೆ ಮುದ್ರೆಗಳ ವೈಭವವನ್ನು ಕೇಳು ಎಂದು

ಪೂರ್ಣಗಿರಿಯೆಂದೆನಿಪ ಪೀಠವ
ಪರ್ಣಕಂಠದ ಒಡ ವಿಶುದ್ಧಿವಿ
ಕೀರ್ಣ ಷೋಡಶದಳವದಕೆ ಜಾಲಂಧರವಿದೆಂದು
ವರ್ಣಿಪುದು ತತ್ಪೀಠವನುಸಿರೆ
ವರ್ಣಜನ ಪರ್ಬುಗಳ ಮಧ್ಯದಿ
ತೂರ್ಣದಳ ಯುಗದಾಜ್ಞೆಯೆಡೆಯುಡ್ಯಾಣ ಪೀಠವಲಾ||(೪-೧೦)

ಮುದ್ರೆಗಳಿಂದ ಯೋಗಿಗೆ ಆತ್ಮಜ್ಞಾನವು ಪ್ರಪ್ತವಾಗುತ್ತದೆ. ಉಡ್ಡೀಯಾಣಮುದ್ರಾ, ನಬೋಮುದ್ರಾ, ಮಹಾಮುದ್ರಾ, ಜಾಲಂಧರಮುದ್ರಾ, ಮೂಲಮುದ್ರಾ ಎಂಬ ಐದು ಮುದ್ರೆಗಳಲ್ಲಿ ಉಡ್ಡೀಯಾಣ

ಮುದ್ರೆಯು ಹೊಟ್ಟೆಯ ಪಶ್ಚಿಮ ಸ್ಥಾನದಲ್ಲಿ, ನಾಭಿಯ ಮೇಲೆ ಹೆಚ್ಚಿನ ಮಾತ್ರೆಯಿಂದ ವಾಯುವನ್ನು ಬಂಧಿಸಲು ಸಹಕಾರಿಯಾಗುತ್ತದೆ. ಈ ಮುದ್ರೆಯು ಸಿದ್ಧಿಸಿದರೆ ಆ ಯೋಗಿಯು ಗರುಡನಂತೆ ಸ್ವೇಚ್ಛೆಯಾಗಿ ಅಂತರಿಕ್ಷದಲ್ಲಿ ಸಂಚರಿಸಬಲ್ಲನು. ಯಾವ ಸೌಖ್ಯವನ್ನು ಬೇಕಾದರೂ ಪಡೆಯಬಲ್ಲನು.

ದೇವಿಯಾಲಿಪುದದುವೆ ಸತಿ ಸಂ
ಭಾವಿಸಲ್ಕಡ್ಯಾಣ ಪೀಠವು
ಸಾವಧಾನದೆ ಇನಿತು ಗದ್ದವು ಕೊರಳು ಕುಳಿಯಲ್ಲಿ
ಓವಿ ಹೊಂದಿದೆ ಮುನಿವರೇಣ್ಯರು
ತಾವೆ ಜಾಲಂಧರವದೆಂಬರು
ಭೂವಳೆಯದೊಳಗದುವು ಪೀಠವೆನಿಪ್ಪುದಚಲ ಸುತೆ||(೫-೬)

ಕೊರಳನ್ನು ಸಂಕೋಚ ಮಾಡಿ ಗದ್ದವನ್ನು ಹೃದಯ ಸ್ಥಾನದಲ್ಲಿ ದೃಢವಾಗಿ ನಿಲ್ಲಿಸುವುದೇ 'ಜಾಲಂಧರ ಮುದ್ರಾ'. ಈ ಯೋಗದಿಂದ ಸಹಸ್ರ ಕಮಲಗಳ ಮಧ್ಯದಲ್ಲಿ ಚಂದ್ರ ಮಂಡಲದಿಂದ ಅಮೃತವು ಅಧೋಮುಖವಾಗಿ ಸ್ರವಿಸುತ್ತದೆ. ಆ ಅಮೃತವನ್ನು ಸೇವಿಸುವ ಯೋಗಿಗೆ ಜಠರಾಗ್ನಿಯ ಬಾಧೆಯಿಲ್ಲ. ಹಸಿವು ತೃಷೆಯಗಳಿರುವುದಿಲ್ಲ. ಜಿಹ್ವೆಯ ವಿಪರೀತದ ದೆಸೆಯಿಂದ ಕಪಾಲ ರಂಧ್ರದಲ್ಲಿ, ಉದರದಲ್ಲಿ ವಾಯುವಿನ ಹೋಗುವಿಕೆಯೇ 'ನಭೋಮುದ್ರಾ', ಆಗ ಕಂಗಳ ದೃಷ್ಟಿಯನ್ನು ಭ್ರೂಮಧ್ಯದಲ್ಲಿರಿಸಬೇಕು ಇದನ್ನು 'ಖೇಚರಿ ಮುದ್ರೆ'ಯೆಂದು ಕರೆಯುತ್ತಾರೆ(೫-೭) ಈ ಮುದ್ರೆಯು ಸಿದ್ಧಿಸುವುದರಿಂದ ಚಿತ್ತ ವಾಯುಗಳು ಗಗನ ಮಂಡಲದಲ್ಲಿ ಸಂಚರಿಸುತ್ತವೆ. ಅವನ ಬಿಂದುವು ಸ್ಖಲನವಾಗುವುದಿಲ್ಲ. ಎಲ್ಲಿಯವರೆಗೆ ಬಿಂದುವು ಯೋಗಿಯ ವಶದಲ್ಲಿರುವದೋ ಅಲ್ಲಿಯವರೆಗೆ ಅವನು ನಾಶವಾಗುವುದಿಲ್ಲ. ನಭೋಮುದ್ರೆಯು ವಶವಾದಾಗಲೇ ಬಿಂದುವು ಅವನ ವಶವಾಗಿರುತ್ತದೆ.[೨] ಹೀಗಾಗಿ ಯೋಗಿಯು ಇಚ್ಛಿಸಿದ ಫಲವನ್ನು ಗಳಿಸಬಲ್ಲವನಾಗುತ್ತಾನೆ.

ಪಲ್ಲವಾಧರೆತಯವಗೆ ದುಃಕೃತ
ವಿಲ್ಲಸುಕೃತವದಿಲ್ಲಜ ನಿರ್ಮಿತಿ
ಯಿಲ್ಲ ಶತ್ರುಗಳಿಲ್ಲ ಮಿತ್ರರ ಸೇರುವೆಗಳಿಲ್ಲ|
ಖಿಲ್ಲವಹ ಸಂಸಾರವಾತನೊ
ಳಿಲ್ಲ ಪಾವಕನಲ್ಲಿ ಕಟ್ಟಿಗೆ
ಯಿಲ್ಲದಂದದೆ ಸಕಲವುಂ ಚಿನ್ಮಯವೆಯಾಗಿಹುದು||(೫-೩೧)

ಬಿಂದು ರೂಪನೇ ಮಹಾದೇವನೆಂದು ತಿಳಿದು ಬಿಂದುವಿನಲ್ಲಿ ಸಾಮರಸ್ಯ ಭಾವವನ್ನು ಹೊಂದಿ, ಬಿಂದುವೇ ತಾನು, ತಾನೇ ಬಿಂದುವು ಆದವನು ಯೋಗಿ ಎನಿಸುತ್ತಾನೆ. ಅಂಥವನಿಗೆ ಸುಖ-ದುಃಖ; ಸುಕೃತ-ವಿಕೃತ, ಮಿತ್ರ-ಶತ್ರು, ಹಸಿವು-ತೃಷೆ, ಭ್ರಾಂತಿ-ಚಪಲತೆ ಮುಂತಾದವುಗಳ ಬಂಧನಗಳಿರುವುದಿಲ್ಲ ಎಂದು ಇಂತಹ ಗೌಪ್ಯದ ವಿಷಯಗಳನ್ನು ಈ ಜಗತ್ತಿನಲ್ಲಿ ಗುರುಮುಖದಿಂದ ಮಾತ್ರ ತಿಳಿಯಬೇಕಲ್ಲದೆ,

ಬಗೆಬಗೆಯ ಬೂಟಾಟಿಕೆಯನ್ನು ಮಾಡುವವರಿಂದ ಅಲ್ಲ (೫-೨೩) ಎನ್ನುತ್ತಾನೆ. ಕೊನೆಯಲ್ಲಿ ಈ ಕೃತಿಯನ್ನು

ಆವನಿದನೋದುವನು ಕೇಳುವ
ನಾವನಿದನೋದಿಪನು ಕೇಳಿಪ
ನಾವನಿದನರ್ಥೈಸಿದಪನ ದ್ವೈತ ಬೋಧೆಯನು|
ಸಾವಧಾನದೆ ಯೋಗಸಾರವ
ನೋವಿ ಬರೆದಪನಿರದೆ ಬರೆಯಿಪ
ನೀ ವಿಧದೊಳವನಭವ ಶಿವಲಿಂಗನೊಡನೆವೆರೆವ||(೫-೩೫)

ಓದುವ, ಓದಿಸುವ, ಕೇಳುವ, ಕೇಳಿಸುವ, ಅರ್ಥೈಸುವ, ಬರೆಯುವ, ಬರೆಯಿಸುವ ಯಾವ ಕಾರ್ಯವನ್ನಾದರೂ ಈ ಕೃತಿಯ ಕುರಿತು ಮಾಡಿದರೆ ಸುಖ-ಶಾಂತಿ-ಸಮೃದ್ಧಿಗಳ ಜೊತೆಗೆ ಮೋಕ್ಷ ಪದವಿ ಪ್ರಾಪ್ತವಾಗುತ್ತದೆ ಎಂದು ಹೇಳಿದ್ದಾರೆ.

'ಯೋಗ' ಎಂಬ ಪದವು ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೆ ಬೇರೆ ಬೇರೆ ಧರ್ಮ, ಭಾಷೆ, ಸಂಸ್ಕೃತಿಗಳಲ್ಲಿ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡು ಅವಿರತವಾಗಿ ಬೆಳೆದು ಬಂದಿದೆ. ಇಂದಿನ ವೈಜ್ಞಾನಿಕ, ತಾಂತ್ರಿಕ ಬದುಕು ನಮ್ಮನ್ನು ಅರಿವಿಲ್ಲದಂತೆಯೇ ಮತ್ತೆ ಶಾಸ್ತ್ರೀಯವಾದ, ಆಧ್ಯಾತ್ಮಿಕವಾದ ವಿಚಾರಗಳೆಡೆಗೆ ಕರೆದೊಯ್ಯುತ್ತಲಿದೆ. ಇದೊಂದು ಶುದ್ಧವಾದ ಆರೋಗ್ಯಶಾಸ್ತ್ರವಾಗಿದೆ ಹೊರತು ಮೌಢ್ಯತೆಯ ಸಂಪ್ರಾದಾಯವಲ್ಲ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವಿಗೂ ವಿಶ್ರಾಂತಿಯು ಬೇಕು, ಅದರಂತೆ ಮನಸ್ಸಿಗೂ ವಿಶ್ರಾಂತಿಯ ಅಗತ್ಯವಿದೆ. ಶುದ್ಧ ವಾತಾವರಣದಲ್ಲಿ ಕುಳಿತು ಸಂಸಾರಿಕ ತೊಂದರೆಗಳನ್ನು ಮರೆತು, ನಿಶ್ಚಿಂತ ಮನಸ್ಸಿನಲ್ಲಿ ವಿಶ್ರಾಂತಿ ತೆಗೆದು ಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಉತ್ತಮ. ಆದುದರಿಂದಲೇ ಶರೀರ ಮತ್ತು ಮನಸ್ಸಿನ ವಿಶ್ರಾಂತಿಗಾಗಿ ನಿದ್ರೆಯು ಸ್ವಾಭಾವಿಕವಾಗಿ ಕಲ್ಪಿಸಲ್ಪಟ್ಟಿದ್ದರೂ, ಕೆಲವರಿಗೂ ನಮ್ಮಲ್ಲಿ ನಿದ್ರೆಯಲ್ಲಿಯೂ ಮನಸ್ಸಿಗೆ ವಿಶ್ರಾಂತಿಯಿರುವುದಿಲ್ಲ. ಈ ವಿಶ್ರಾಂತಿಯಿಲ್ಲದೆ ಬಳಲುವವರಿಗೆ ಯೋಗದಿಂದ ಅವರ ಮನಸ್ಸಿಗೆ ವಿಶ್ರಾಂತಿ ದೊರಕಿಸಬಹುದು.

ಹೀಗಾಗಿ ಇಂದಿಗೂ ವೀರಶೈವರು ಸ್ವಾಮಿಗಳ ಪೀಠಾರೋಹಣ ಸಮಯದಲ್ಲಿ ಶೂನ್ಯಸಂಪಾದನೆ. ಕರಣಹಸಿಗೆ, ಏಕೋತ್ತರ ಶತಸ್ಥಲ, ಮಂತ್ರಗೋಪ್ಯ, ಮಿಶ್ರಾರ್ಪಣ, ಯೋಗಕಲಾಪಸಾರ ಮೊದಲಾದ ಗ್ರಂಥಗಳನ್ನು ಕೊಡಲಾಗುತ್ತದೆ. ಏಕೆಂದರೆ ಕರಣಹಸಿಗೆಯಿಂದ ದೇಹದ ರಚನೆ ಮತ್ತು ಪ್ರತಿಯೊಂದು ಅಂಗಕ್ಕಿರುವ ಲಿಂಗವ್ಯವಸ್ಥೆಯನ್ನು ಅರಿತುಕೊಂಡರೆ, ಷಟ್ಸ್ಥಲಗಳಿಗೆ ಸಂಬಂಧಿಸಿದ ಕ್ರಿಯೆಯನ್ನು ಏಕೋತ್ತರ ಶತಸ್ಥಲದ ಮೂಲಕ ವಿವರಿಸುತ್ತದೆ. ಮಂತ್ರಗೋಪ್ಯವು ಸಾಧನೆಯ ಮೆಟ್ಟಿಲುಗಳನ್ನು

ಹತ್ತಬೇಕಾದರೆ ಮಾಡುವ ಕಾರ್ಯವನ್ನು ಹೇಳುತ್ತದೆ. ಮಿಶ್ರಾರ್ಪಣವು ಅದಕ್ಕೆ ಬೇಕಾದ ಮನಃಶಾಸ್ತ್ರವನ್ನು ಪ್ರತಿಪಾದಿಸಿದರೆ, ಶೂನ್ಯಸಂಪಾದನೆ ಮತ್ತು ಯೋಗಕಲಾಪಸಾರಗಳು ವ್ಯಕ್ತಿಯು ಅಂತಿಮವಾಗಿ ತಲುಪಬೇಕಾದ ಪರಮಗುರಿಯನ್ನು ಹೇಳುತ್ತವೆ. ಹೀಗಾಗಿ ಇಮ್ಮಡಿ ಮುರಿಗಾಗುರುಸಿದ್ಧರ ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರಗಳು ವೈಜ್ಞಾನಿಕ ಮನೋಧರ್ಮದಿಂದ, ಶಾಸ್ತ್ರೀಯ ನಿರೂಪಣೆಯನ್ನು ಒಳಗೊಂಡ, ಕ್ರಮಬದ್ಧ ಕೃತಿಗಳಾಗಿವೆ. ಒಟ್ಟಾರೆಯಾಗಿ ಯೋಗ ಎಂಬುದನ್ನು 'ಶಿವಯೋಗ'ವೆಂದು ಕರೆದ ವೀರಶೈವ ಶರಣರು, ವಚನಕಾರರು ಯೋಗದಿಂದಲೇ ಎಲ್ಲಾ ಸಾಧನೆಯನ್ನು ಮಾಡಿ, ಇತರರಿಗೆ ಸಾಧನೆ ಮಾಡುವಂತೆ ಅವುಗಳ ಕ್ಲಿಷ್ಟಕರವಾದ ವಿಚಾರಗಳನ್ನು ಸರಳಗೊಳಿಸಿ ಜನಸಾಮಾನ್ಯರಿಗೆ ತಮ್ಮ ಅನುಭವಗಳ ಮುಖಾಂತರ ವಿವರಿಸಿದ ಗ್ರಾಂಥಿಕ ರೂಪಗಳೇ 'ಯೋಗಕಲಾಪಸಾರ'ದಂಥ ಕೃತಿಗಳು. ಇವುಗಳಲ್ಲಿರುವ ವಿಷಯವೂ ಕೂಡ ಅವರ ಬದುಕಿನಲ್ಲಿ ಕಂಡುಂಡು, ಅನುಭವಿಸಿ ಆನಂದಿಸಿದ ಮಾರ್ಗಗಳ ವಿಶ್ಲೇಷಣೆಯಾಗಿದೆ.

ಶಿವಲಿಂಗ ಷಟ್ಪದಿ

ಭಕ್ತ ವತ್ಸಲತೆ, ಕರುಣಾ ಮೃತತ್ವ, ಅಪ್ರತಿಮತ್ವ, ಸತ್ಕುಪಾಸಿಂದುತ್ವ ಇತ್ಯಾದಿ ಶಿವನ ಲೀಲಾ ವಿಲಾಸಗಳನ್ನು ಹಾಡಿ ಹೊಗಳುವ ವಸ್ತುವನ್ನು ಒಳಗೊಂಡ ಕೃತಿ ಶಿವಲಿಂಗ ಷಟ್ಪದಿ. ೧೦೫ ವಾರ್ಧಕ ಷಟ್ಪದಿಗಳಲ್ಲಿ ಶಿವಲಿಂಗೇಶಾ, ಶಿವಲಿಂಗೇಶ್ವರಾ ಎಂಬ ಅಂಕಿತವನ್ನೊಳಗೊಂಡ ಈ ಕೃತಿಯು ವೇದ, ಆಗಮ, ಪುರಾಣಗಳಲ್ಲಿ ನಿರೂಪಿಸಿರುವ ಶಿವನ ಶ್ರೇಷ್ಠ ಭಕ್ತರ ನಡೆನುಡಿಗಳನ್ನು, ಅವರ ಅತಿಶಯ ಭಕ್ತಿಯ ಪರಿಣಾಮವಾಗಿ ಉಂಟಾಗುವ ಶಿವಸಾಕ್ಷಾತ್ಕಾರವನ್ನು ಮೂರ್ತಸ್ವರೂಪ ಗೊಳಿಸಿದ್ದಾನೆ.

ಆವನಪ್ಪಣೆವಿಡಿದು ವಿಧಿ ಜಗವ ನಿರ್ಮಿಸುವ
ನಾವನಪ್ಪಣೆ ವಿಡಿದದನು ಪೊರೆವನಸುರರಿಪು
ವಾವನಪ್ಪಣೆ ವಿಡಿದದನು ಸಂಹರಿಸುವನು ಕಾಲನೆನಿಸುವ ರುದ್ರನು ||೨||

ಎಂದು ಸವಾಲನ್ನು ಎಸೆಯುತ್ತಾ ಶಿವನೇ ಮೂರು ಲೋಕದ ದೇವನು ಅವನಿಂದಲೇ ಸೃಷ್ಟಿ-ಸ್ಥಿತಿ-ಲಯಗಳು ಸಂಭವಿಸುತ್ತವೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ತದನಂತರ ಸೌಂದರ ನಂಬಿಯಣ್ಣನ ಬಂಟ, ಶ್ರೇಷ್ಠ ಭಕ್ತ ಬೇಡರ ಕಣ್ಣಪ್ಪ, ಕಲಿಗಣ ನಾಥ, ಉರಿಲಿಂಗಪೆದ್ದಿ ಮೊದಲಾದ ಭಕ್ತರ ಶರಣ ವಲ್ಲಭ. ಬಾಣಾಸುರನ ಬಾಗಿಲನ್ನು ಕಾಯ್ದವ. ಮಾದಾರ ಚೆನ್ನಯ್ಯನ ಮನೆಯ ಗಂಜಿಯನ್ನು ಉಂಡಂಥವ. ಚೋಳಿಯಕ್ಕನೆಂಬ ವೇಶ್ಯೆಯ ಶೇಷಾಂಗವನ್ನು ತೆಗೆದು ಕೊಂಡಂಥವ. ವಿಶ್ವವೆಂಬ ನಾರಾಯಣಗೆ ನಿಯಾಮಕನಾಗಿ ವಿಶ್ವೇಶ್ವರನೆಂಬ ಹೆಸರು ಪಡೆದಿರುವವನೆ. ಶಿವನಾಮ ಸ್ತುತಿಸುವುದನ್ನು ಬಿಟ್ಟು, ಹರಿನಾಮವನ್ನು ಸ್ತುತಿಸಿದ ಹಿರಣ್ಯಾಕ್ಷನನ್ನು ಕೊಂದು, ನರಸಿಂಹನ ಗರ್ವವನ್ನು ಮುರಿದು ಆತನ ತಲೆಯನ್ನು ಕಾಶಿಯಲ್ಲಿ ಕಟ್ಟಿ ಮೆರೆದ ಶರಭ ರೂಪವೇ. ಸಚರಾಚರ ಪ್ರಾಣಿಗಳಲ್ಲಿ

ಶೋಭಿಸುವಂತವನೇ. ದಾಸನಾದ ಬ್ರಹ್ಮನ ತಲೆಗೊಯ್ದು, ಸೊಸೆಯಾದ ಸರಸ್ವತಿಯ ಮೂಗನ್ನು ವಿರೂಪಗೊಳಿಸಿದವನೆ, ದಕ್ಷಬ್ರಹ್ಮನಿಗೆ ಕುರಿತಲೆಯನ್ನು ಕೊಟ್ಟವನೇ, ತಾರಕಾಸುರನ ಹಾವಳಿಯನ್ನು ಸಹಿಸದಾದ ಲಕ್ಷ್ಮೀ ಮೊದಲಾದ ದೇವತಾ ಸ್ತ್ರೀಯರು ಬಂದು ರಕ್ಷಣೆ ಬೇಡಿದಾಗ ಅವರನ್ನು ಪೊರೆದವನೇ, ಅಷ್ಟಾದಶ ಪುರಾಣಗಳು ಸಾರುತ್ತಿರುವಂತೆ ಸುರಗಂಗೆಯನು ಧರಿಸಿದ ಕಂತುಹರನೇ, ಈ ಮೊದಲಾಗಿ ಶಿವಪಾರಮ್ಯವನ್ನು ಹೇಳಲಾಗಿದೆ.

ವೇದ, ಆಗಮ, ಪುರಾಣಾದಿ ಶಾಸ್ತ್ರಗಳು, ವಾತುಲಾಗಮದ ೨೮ ದಿವ್ಯಾಗಮಗಳು, ಭಾರತ-ಭಾಗವತ-ರಾಮಾಯಣಾದಿ ಇತಿಹಾಸಗಳಲ್ಲಿಯೇ ಹೇಳಿರುವಂತೆ ಹರಭಕ್ತಿಯಿಂದಲೇ ಮುಕ್ತಿ, ವಿಭೂತಿ-ರುದ್ರಾಕ್ಷಿಗಳೇ ಮೋಕ್ಷ, ಮೋಕ್ಷವನ್ನು ಕರುಣಿಸುವವನು ಮಹೇಶ್ವರನೇ ಎಂಬುದು ಸತ್ಯ.

ಸತ್ಯಸಂಧನೆನಿಪ್ಪ ಭಕ್ತನಿಗೆ ಹರಿಮೆಚ್ಚಿ
ಭೃತ್ಯ ನಿನ್ನಭಿಮತವದಾವುದೆಂದೆನಲಾತ
ನಿತ್ಯ ಮುಕ್ತಿಯ ಪಾಲಿಸೆನಲದೆನ್ನಿಂದಾಗದೀಶ್ವರನ ಪೂಜೆಯಿಂದೆ
ಅತ್ಯಧಿಕ ಕೈವಲ್ಯ ದೊರೆವುದಾ ಹರಪೂಜೆ
ಮತ್ತನುಸರಣೆಯಿಂದೆ ವಿಭೂತಿರುದ್ರಾಕ್ಷಿಯನು
ಕೃತ್ಯಗಳನುಳಿದು ಧರಿಸೆಂದುದ್ಯೆ ಸೂತ ಸಂಹಿತೆಯು ಶಿವಲಿಂಗೇಶ್ವರಾ ||೫೭||

ದುರ್ಜನರ ದುರ್ಗುಣಗಳನ್ನು ಶಿಕ್ಷಿಸುವನೆಂಬುದಕ್ಕೆ ನಿನ್ನ ಕೊರಲಡಿಯ ವಿಷವೇ ಸಾಕ್ಷಿ, ಶರಣಾಗತರಾದವರನ್ನು ರಕ್ಷಿಸುವನೆಂಬುದಕೆ ನಿನ್ನ ಎಡಗೈಯ ಮಿಗವೆ ಸಾಕ್ಷಿ, ಶ್ರೇಷ್ಠವಾದ ಸತ್ವ-ರಜಸ್ಸು-ತಮೋಗುಣಗಳೇ ನಿನ್ನ ಅಂಶವೆಂಬುದಕ್ಕೆ ನೊಸಲ ವಿಭೂತಿಯೇ ಸಾಕ್ಷಿ, ನಿನ್ನ ಕೈಯಲ್ಲಿರುವ ಮಾಯೆ ಪ್ರೀತಿಯಿಂದಿರುವುದಕ್ಕೆ ಹಗ್ಗವೇ ಸಾಕ್ಷಿ. ನೀನು ಅಪ್ರತಿಮನೆಂಬುದಕ್ಕೆ ನಿನ್ನ ನೊಸಲ ವಿಭೂತಿಯೇ ಸಾಕ್ಷಿ, ಹದಿನಾಲ್ಕು ಭುವನಂಗಳ ಪ್ರಭುವೆನಿಸುವುದಕ್ಕೆ ಪರಮೇಶನೆಂಬ ದಿವ್ಯನಾಮವೇ ಸಾಕ್ಷಿ. ಭಕ್ತಭಯ ಸಂಹಾರಕನೆಂಬುದಕ್ಕೆ ಮೃತ್ಯುಂಜಯಾಖ್ಯವೇ ಸಾಕ್ಷಿ. ಹೀಗೆ ಕವಿಯು ಶಿವನನ್ನು ವಿಜಿತಪತಂಗಜಾ, ಸತ್ಕೃಪಾಸಿಂಧು, ಭವದೂರ, ದೋಷದೂರ, ಶೀತಕಿರಣಧರ, ಶರಭರೂಪ, ತರುಣ ಶಶಿಚೂಢ, ನಿಗಮೋತ್ತರಾರೂಢ, ಸತ್ಯ ಮುಕ್ತಿಪುರವಪ್ರ, ಚಿದಾನಂದ, ಶುಭವೃಂದ, ಸಮ್ಯಜ್ಞಾನ ಕಂದ ಎಂಬ ವಿವಿಧ ಹೆಸರುಗಳಿಂದ ಶಿವನ ವ್ಯಕ್ತಿತ್ವದ ಹಲವು ಮುಖಗಳನ್ನು ಪರಿಚಯಿಸಿ ಕೊಟ್ಟಿದ್ದಾರೆ. ಅಸದೃಶ ಶಿವತತ್ವ ಜ್ಞಾನಿಗಳಾದ ಇಮ್ಮಡಿ ಮುರಿಗಾಗುರುಸಿದ್ಧರು ಶಿವನ ಲೀಲಾ ವಿಲಾಸ ಸ್ಮರಣೆಗೆ ಪಾಂಡಿತ್ಯ ಪ್ರದರ್ಶನ ಪದಗಳನ್ನು ಬಳಸಿದ್ದಾರೆ. ಕೃತಿಯ ಕೊನೆಯಲ್ಲಿ ಬರುವ ಗುಣಿತಾಕ್ಷರ ಪದ, ಸರ್ವಲಘು ತಲೆಕಟ್ಟಿನ ಪದ, ನಿರೋಷ್ಟ ಪದ, ಅಚಲ ಜಿಹ್ವಾ ಪದ, ಮಾತ್ರಿಕಾ ಮಾಲ ಪದ್ಯಗಳು ಕವಿಗೆ ಸಂಸ್ಕೃತದ ಮೇಲಿರುವ ಪಾಂಡಿತ್ಯವನ್ನು ತೋರಿಸಿಕೊಡುತ್ತವೆ.

ಕವಿಯು ಸಂದರ್ಭಾನುಸಾರ ಕೆಲವು ನಾಣ್ಣುಡಿಗಳನ್ನು ಬಳಸಿದ್ದಾನೆ. ಉದಾಹರಣೆಗೆ 'ಮುಂಗಯ್ಯ ಕಂಕಣಕ್ಕೆ ಕನ್ನಡಿಯದೇಕೆ?', 'ತಮ್ಮಕ್ಕನಳಿಯದವಸಿಯ್ದೆ ನೆರೆಮನೆಯೊಳಿಹ ಬೊಮ್ಮಕ್ಕ ನಂಬಲ್ಲನೇ?', 'ಮೋಟಮರ ಗಾಳಿಮಿಂಡ', 'ಮೀಸೆಯನು ಕೀಳುವಾಗಿಲ್ಲದಿಹ ಕೋಪವದು ಮೋಸದಿಂದ ತುಪ್ಪಳ ಕೀಳುವಾಗೊದಗಿದುದೆ?', 'ಹುಲಿಯ ಬಣ್ಣವ ನೋಡಿ ನರಿಮಯ್ಯ ಸುಟ್ಟು ಕೊಂಡಲಸಿಯಸವಸದಿಂದೆ ಸತ್ತಂತೆ', 'ಬಾಯ ಪ್ರಸಾದ ಗಂಜಿಯ ಬೋನವೆಂಬಂತೆ' ಎಂಬ ಮುಂತಾದ ಉಪಮೆಗಳನ್ನು ಹೆಸರಿಸಬಹುದಾಗಿದೆ. ಕೃತಿಯ ಕೊನೆಯಲ್ಲಿ ಭಕ್ತ ಜನ ಸಮೂಹದ ಪರವಾಗಿ ಆ ಶಿವನಲ್ಲಿ ಹೀಗೆ ಬೇಡಿಕೊಳ್ಳುತ್ತಾನೆ.

ಕೊಡು ನಿನ್ನ ಭಕ್ತರಡಿದಾವರೆಯ ಭಕ್ತಿಯನು
ಕೊಡು ನಿನ್ನ ಶರಣರೊಳ್ನುಡಿಯಲ್ಲಿ ನಂಬುಗೆಯ
ಕೊಡು ನಿನ್ನ ಭಕ್ತರ ಕಥಾ ಶ್ರವಣವನು ಬಳಿಕ್ಕವರ ಸಂಕೀರ್ತನೆಯನು
ಕೊಡು ನಿನ್ನ ಭಕ್ತರುಗಳೊಲುಮೆಯ ಮನವೊಲ್ದು
ಕೊಡು ನಿನ್ನ ಭಕ್ತರುಗಳೆ ನಿನ್ನ ರೂಪರೆಂ
ದೆಡವಿಡದ ಭಾವವನು ಮಿಕ್ಕ ಪದವಿಯನೊಲ್ಲೆನೊಲ್ಲೆ ಶಿವಲಿಂಗೇಶ್ವರಾ ||೧೦೪||

ಒಟ್ಟಾರೆಯಾಗಿ ಶಿವಯೋಗಿಗಳಾಗಿದ್ದ ಇಮ್ಮಡಿ ಮುರಿಗಾಗುರುಸಿದ್ಧರು ೧೦೪ ಭಾಮಿನಿ ಷಟ್ಪದಿಗಳಲ್ಲಿ ಶಿವನ ಮಹಿಮೆಯನ್ನು ಹೊಗಳಿ ಶಿವಭಕ್ತಿಯನ್ನು ಪ್ರಸಾರ ಮಾಡುವ ಉದ್ದೇಶ ಹೊಂದಿದ್ದಾರೆ. ಅವರು ನಡೆದು ತೋರಿಸಿದ ಹಾದಿಯನ್ನು ಈ ಕೃತಿಗಳಲ್ಲಿ ನುಡಿದಿದ್ದಾರೆ ಮತ್ತು ನುಡಿಸಿದ್ದಾರೆ. ಲೋಕದ ಜನತೆ ಅಧರ್ಮ, ಅಂಧಕಾರದಲ್ಲಿ ತೊಳಲುತ್ತಿರುವಾಗ ಇಂತಹ ಮಹಿಮಾ ಕಥನಗಳು ಅಲ್ಪಮಟ್ಟಿಗಾದರೂ ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿ ಪರಿವರ್ತನೆಗೆ ನಾಂದಿಯಾಗಬಲ್ಲವು. ಅದಕ್ಕಾಗಿಯೇ ನಮ್ಮ ಪೂರ್ವಜರು ಈ ಕಥನಗಳಿಗೆ ಪುಣ್ಯ ಕಥನಗಳು, ಪುರಾಣಗಳು ಎಂದು ಹೆಸರಿಟ್ಟು ಪೂಜ್ಯ ಭಾವನೆಯಿಂದ ಆಲಿಸುತ್ತಿದ್ದರು. ಕಾರಣ ಕವಿಯು ಕೊನೆಯ ಪದ್ಯದಲ್ಲಿ ಇದನ್ನು ಓದುವಾತ, ಕೇಳುವಾತ, ಬರೆಯುವಾತ, ಹೇಳುವಾತನಿಗೆ ಜನನ ಮರಣಗಳನ್ನು ಮೀರಿ ಮಹಾದೇವನಲ್ಲಿ ಒಂದಾಗುತ್ತಾನೆ. ಹೇಗೆಂದರೆ ಅಮೃತದಲ್ಲಿ ಅಮೃತ ಒಂದಾಗುವಂತೆ ಪ್ರೀತಿಯಿಂದ ಶಿವನಲ್ಲಿ ಐಕ್ಯಹೊಂದುವನು ಎನ್ನುತ್ತಾನೆ.

ಶಿವಲಿಂಗ ನಾಂದ್ಯ

'ನಾಂದಿ' ಎಂದರೆ ಮಂಗಳ ಕಾರ್ಯಗಳ ಆರಂಭದಲ್ಲಿ ನೆರವೇರಿಸುವ ಪ್ರಥಮ ದೇವತಾ ಪೂಜೆ. ನಾಟಕ ಆರಂಭವಾಗುವ ಮುಂದೆ ಮಾಡುವ ರಂಗಪೂಜೆ ಮತ್ತು ಹಾಡುವ ದೇವತಾ ಸ್ತೋತ್ರಗಳು ನಾಂದಿ ಎನಿಸುತ್ತವೆ. ಹಾಗೆಯೇ ಕವಿಗಳು ಸಹ ತಮ್ಮ ಕೃತಿಯ ಆರಂಭದಲ್ಲಿ ತಮ್ಮ ತಮ್ಮ ಮನದೈವ-ಮನೆದೈವಗಳನ್ನು ಕುರಿತು ಮಾಡಿದ ಪ್ರಾರ್ಥನೆಗಳೂ ನಾಂದಿ ಎನಿಸುತ್ತವೆ. ಇಮ್ಮಡಿ

ಮುರಿಗಾಗುರುಸಿದ್ಧರಂತಹ ಭಕ್ತ ಮನದ ಕವಿಗಳು ವಿಶೇಷವಾಗಿ ತನ್ನ ಎಲ್ಲ ಕಾವ್ಯಗಳ ಪ್ರತಿ ಸಂಧಿಯ ಆರಂಭ ಅಂತ್ಯ ಹಾಗೂ ಪ್ರತಿ ಪದ್ಯದ ಅಂತ್ಯದಲ್ಲಿಯೂ ಪಾರ್ವತಿಯರ ಸ್ತುತಿಯನ್ನು ಮಾಡಿದ್ದಾರೆ. ಇಂತಹ ನಾಂದೀ ಪದ್ಯಗಳನ್ನು, ಸ್ತುತಿ ಪದ್ಯಗಳನ್ನು ಒಂದೆಡೆ ಸೇರಿಸಿ ಅವನ್ನೇ ಪ್ರತ್ಯೇಕವಾಗಿ ತೆಗೆದಿಟ್ಟರೆ ಸ್ವತಂತ್ರವಾದ ಪ್ರಾರ್ಥನಾ ಗುಚ್ಛವಾಗುತ್ತವೆ. ಇಂಥ ಪ್ರಾರ್ಥನಾ ಸಂಕಲನಗಳೇ ನಾಂದ್ಯಗಳು.[೨೮] ಬಹುಮಟ್ಟಿಗೆ ಎಲ್ಲ ವೀರಶೈವ ಕವಿಗಳ ಕಾವ್ಯಗಳಲ್ಲಿ ಇಂಥ ಸ್ತೋತ್ರರೂಪದ ಪದ್ಯಗಳು ಬಂದಿವೆ. ಜನರನ್ನು ಭಕ್ತಿಭಾವದಲ್ಲಿ ಬಂಧಿಸಿ, ಅವರನ್ನು ತನ್ಮಯರನ್ನಾಗಿ ಮಾಡುವಲ್ಲಿ ಇವು ಸಹಕಾರಿಯಾಗಿವೆ. ಸ್ವತಂತ್ರ ನಾಂದ್ಯ ಕೃತಿಗಳಲ್ಲಿ ಪ್ರಸ್ತುತ ಕವಿಯ 'ಶಿವಲಿಂಗ ನಾಂದ್ಯ', 'ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ' ಎಂಬ ಎರಡು ಕೃತಿಗಳಿವೆ. ಇವುಗಳಿಗೆ ಸ್ವತಂತ್ರ ಕೃತಿಗಳ ಸ್ಥಾನಮಾನ ಸಲ್ಲದಿದ್ದರೂ ಕವಿಯು ಸಂಗ್ರಹಣಾ ದೃಷ್ಟಿಯಿಂದ ಪ್ರಾರ್ಥನೆಯ ಸಂಕಲನಗಳಾಗಿ ನಾಂದ್ಯ ಕೃತಿಗಳೆನಿಸಿವೆ.

ಶಿವಲಿಂಗ ನಾಂದ್ಯವು ಇಪ್ಪತ್ತೈದು ಭಾಮಿನಿ ಹಾಗೂ ವಾರ್ಧಕ ಷಟ್ಪದಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಶಿವನ ಸ್ತುತಿಗಳಿವೆ, ಕುಮಾರಿಕಾಮುಖ, ತಾಮರಸ, ಮಕರಂದ, ಮಧುಕರ, ಸೋಮಶೇಖರ, ಶತಮುಖಾಚ್ಯುತ, ಸ್ನಿಗ್ಧಕಾಯ, ಚರಣ ಪಂಕಜ, ಚಂದ್ರಕಲಾಕಲಾಪ, ಸಮಂಚಿತಾಲಾಪ, ಚಿತ್ರಚರಿತ್ರ, ಪಾವಕನೇತ್ರ, ಶ್ರೀ ಕಮಲಜಾಂಡಮಂಡಲ, ಪಂಡಿತಾರಾಧ್ಯ, ಭೀಕರಾಂತಕರಿಪು, ಸುರಾದ್ಯ, ನಿಗಮಾಭೇದ್ಯ, ಪಾಕಹರಪುತ್ರ, ಫಣೀಶ್ವರ, ಸಾಮಗಾನಾಮೃತಪಾನ, ನಾಗಾಪಗಾಜೂಟ, ಭುವನೇಶ, ಭವನಾಶ ಮರಣಹರ, ಹರಿಣಕರ, ನವನಾದ, ಸುವಿನೋದ, ನುತನಿಗಮನತ, ಸುಗಮಧವಲಯಶ, ವೃಷಯಾನ, ವಿಷಪಾನ, ಪವನಾಂಗ, ಭವಲಿಂಗ, ಲಿಸಿತಸುಖ, ಹಸಿತಮುಖ, ಸುವಿವೇಕ, ಕವಿಲೋಕ, ಗಣರಾಜ, ಗುಣಬೀಜ, ಮೃಡಶರಣ ಎಂದು ಅನೇಕ ರೀತಿಯ ಹೆಸರುಗಳಿಂದ ಶಿವನನ್ನು ಸ್ತೋತ್ರ ಮಾಡುತ್ತಾನೆ. ಗಂಗೆಯನ್ನು ಜಡೆಯಲ್ಲಿ ಧರಿಸಿದ ಶಿವನಿಗೆ ಪಾರ್ವತಿಯು ಜಡೆಯಲ್ಲಿರುವವಳಾರು ಹೇಳು? ಎಂದು ಪೀಡಿಸುವ ಸಂದರ್ಭದ ಪದ್ಯವೊಂದು ಅತ್ಯಂತ ಸರಳವಾಗಿದೆ.

ಓಲೆ ನಾಗರಸುತ್ತು ಮೂಗುತಿ
ಶಾಲೆ ಸಮ್ಮದ ಹಾದಕೆ ಬಳೆ ಫಣಿ
ಮೇಲೆನಿಪ ಕೈದಾತಿ ಮಲ್ಲಿಗೆ ಮಾಲೆ ತಲೆ ಸರವು|
ಕಾಲಕತ್ತುರಿಯಣ್ಬು ಭಸಿತ ವಿ
ಶಾಲ ರೇಖೆಯು ತುರುಬುಕೆಂಜೆಡೆ
ಲೋಲ ಪಂಕಜ ಶೂಲವೆಸೆವರೆವೆಣ್ಣ ಪೊರೆಯಮಾ||೧೧||

ಮತ್ತೊಂದು ಪದ್ಯವು ಅತ್ಯಂತ ಕ್ಲಿಷ್ಟಕರವಾದ ಶಬ್ದಗಳಿಂದ ಸಂಸ್ಕೃತಮಯವಾಗಿರುವುದು ಉದಾ

ತ್ರಿಟ್ಕರೆಂದ್ವಗ್ಣ್ಯಾಕ್ಷಪಟ್ಕಮಲವಿಪ್ಪರಸು
ರೇಟ್ಕನಕಗರ್ಭನತರುಟ್ಕಮನಕೇತನ ವಿ
ರಾಟ್ಕಲಿತಮೂರ್ತಿಜಿತರುಟ್ಕವೃಜಿನಘ್ನರಿಪುಷಟ್ಕವಿಜಯಪ್ರವೀಣಯಾ॥೧೬॥

ಇದು ಕವಿಯ ಪಾಂಡಿತ್ಯವನ್ನು ಹಾಗು ಆತನಿಗಿರುವ ಭಾಷಾ ವ್ಯಾಮೋಹವನ್ನು ಸೂಚಿಸುತ್ತದೆ. ಭಕ್ತಿಯಿಂದ ಶಿವನನ್ನು ಹಾಡಿ ಹೊಗಳುವ ಕ್ರಿಯೆಯಲ್ಲಿಯೇ ಶಿವನ ಚರಿತ್ರೆಯ ಒಂದೊಂದು ಪ್ರಸಂಗವನ್ನು ಒಂದೇ ಶಬ್ದದಲ್ಲಿ ಧ್ವನ್ಯಾರ್ಥ ಬರುವಂತೆ ಉಪಯೋಗಿಸಿದ್ದಾನೆ.

ಶಿವರಹಸ್ಯ

ನಾವು ಅತ್ಯಂತ ಪವಿತ್ರವೆಂದು ಭಾವಿಸಿರುವ ಸ್ಮೃತಿ-ಪುರಾಣ-ಇತಿಹಾಸ ಗ್ರಂಥಗಳು ಒಂದೊಂದು ವಿಷಯವನ್ನು ಪ್ರಧಾನವಾಗಿಟ್ಟುಕೊಂಡು ರಚನೆಗೊಂಡಿವೆ. ಸತ್ಯಕ್ಕೆ ಇರುವ ಹಲವು ಮುಖಗಳನ್ನು ಒಂದೊಂದು ಗ್ರಂಥಗಳು ಪ್ರತಿಪಾದಿಸುತ್ತವೆ. ಭೂಮಿಯಲ್ಲಿ ಹುಟ್ಟಿದ ಮನುಷ್ಯ ಪುಣ್ಯ-ಪಾಪ ಎಂಬ ಎರಡು ಫಲಗಳನ್ನು ಗಳಿಸಿರುತ್ತಾನೆ. ಪುಣ್ಯ ಫಲಗಳಿಸಿದವನಿಗಷ್ಟೇ ಮುಕ್ತಿ. ಪಾಪದ ಫಲಗಳಿಸಿದವನಿಗೆ ಮುಕ್ತಿಯೇ ದೊರೆಯುವುದಿಲ್ಲ ಎಂದು ನಿರಾಶೆಪಡಬೇಕಾಗಿಲ್ಲ. ಏಕೆಂದರೆ ತಾನು ಮಾಡಿದ ಪಾಪ ಕರ್ಮಗಳಿಗೆ ಮತ್ತು ಮಾಡದ ಪುಣ್ಯಕಾರ್ಯಗಳಿಗಾಗಿ ಪಶ್ಚಾತ್ತಾಪಪಟ್ಟರೆ, ಶಿವನಲ್ಲಿ ಶರಣು ಹೋದರೆ ಪಾಪ ವಿಮೋಚನೆಯಾಗಿ ಸತ್ಫಲವು ದೊರೆಯುತ್ತದೆ ಎನ್ನುವಂತಹ ವಿಷಯ ಬೋಧನೆಗಾಗಿಯೇ ಶಿವರಹಸ್ಯದಂಥ ಕೃತಿಗಳು ಜನ್ಮತಳೆದಿವೆ. ಶಿವರಹಸ್ಯಕ್ಕೆ ನಿರ್ದಿಷ್ಟವಾದ ಕರ್ತೃವೊಬ್ಬರಿಲ್ಲ, ಕರ್ತೃವಿನಂತೆ ಅದರ ರಚನಾ ಕಾಲವೂ ಸ್ಪಷ್ಟವಿಲ್ಲ.[೩೧] ಗ್ರಂಥದ ಹೆಸರು ಮಾತ್ರ ತಿಳಿದಿರುವ 'ಸ್ಕಂದಕಲ್ಯಾಣ' ಹಾಗೂ ನಮ್ಮಲ್ಲಿರುವ 'ಶಿವರಹಸ್ಯ' ಎರಡು ಒಂದೇ ಗ್ರಂಥವೇ? ಬೇರೆ ಬೇರೆಯೇ? ಎಂಬುದು ತಿಳಿಯದು. ಉಪಲಬ್ಧ 'ಶಿವರಹಸ್ಯ'ವು ಸಂಸ್ಕೃತ 'ಸ್ಕಂದ ಪುರಾಣ'ದಲ್ಲಿ ಹೇಳಲಾಗಿರುವ ಶಿವಪುತ್ರ ಷಣ್ಮುಖಸ್ವಾಮಿಯ ಮಹಿಮೆಯನ್ನು ಕನ್ನಡದಲ್ಲಿ 'ಪುರಾಣ' ರೂಪದಲ್ಲಿ ಕವಿ ಹೇಳುತ್ತಿರುವುದರಿಂದ 'ಶಿವರಹಸ್ಯ ಪುರಾಣ' ಎಂದು ಕರೆದಿರಬಹುದು[೩೨] ಎಂಬ ಎರಡು ಸಮಸ್ಯೆಗಳು ಇಲ್ಲಿ ಎದುರಾಗುತ್ತವೆ. ನಿರ್ದಿಷ್ಟವಾದ ಕರ್ತೃ ಮತ್ತು ರಚನಾ ಕಾಲದ ಬಗ್ಗೆ ಇದುವರೆಗೂ ಉತ್ತರ ಸಿಕ್ಕಿರುವುದಿಲ್ಲ, ಮೇಲಾಗಿ ಹೊನ್ನೇನಹಳ್ಳಿ ಗಂಗಾಧರ ಶಾಸ್ತ್ರೀಗಳು ಸುಮಾರು ೨೯ ಸಂಪುಟಗಳ 'ಶ್ರೀ ಶಿವರಹಸ್ಯ'ವೆಂಬ ಕೃತಿ ಹೊರತಂದಿದ್ದರೂ ಅವರು ಮೂಲ ವಸ್ತುವನ್ನು ಎಲ್ಲಿ ತೆಗೆದುಕೊಂಡರು ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ.

ಶಿವರಹಸ್ಯ ಮತ್ತು ಸ್ಕಂದಕಲ್ಯಾಣ ಕೃತಿಗಳು ಒಂದೇ? ಅಥವಾ ಬೇರೆ ಬೇರೆಯೇ? ಎಂಬುದನ್ನು ಇಲ್ಲಿ ಸ್ವಲ್ಪ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ. ಏಕೆಂದರೆ ಇಮ್ಮಡಿ ಮುರಿಗಾಗುರುಸಿದ್ಧ ಕವಿಗಳನ್ನು ಗಮನದಲ್ಲಿಟ್ಟುಕೊಂಡು ಈ ಎರಡು ಕೃತಿಗಳು ಬೇರೆ ಬೇರೆ ಎಂದು ಹೇಳಬೇಕಾಗುತ್ತದೆ. ಶಿವರಹಸ್ಯದ

ವಸ್ತುವನ್ನು ಕವಿಯು 'ಸ್ಕಂದಕಲ್ಯಾಣ' ಎಂಬ ಕೃತಿಯಿಂದ ತೆಗೆದುಕೊಂಡಿದ್ದರೂ ಸ್ವತಃ ಕವಿಯೇ 'ಶಿವರಹಸ್ಯ'ವನ್ನು ಷಟ್ಪದಿ ಛಂದಸ್ಸಿನಲ್ಲಿ ಬರೆದರೆ 'ಸ್ಕಂದ ಕಲ್ಯಾಣ'ವನ್ನು ಚೌಪದಿಯಲ್ಲಿ ಬರೆದಿದ್ದಾನೆ. ಪದ್ಯಸಂಖ್ಯೆಗಳ ದೃಷ್ಟಿಯಿಂದ ಗಮನಿಸಿದಾಗ ಎರಡೂ ಬೃಹತ್ತಾದ ಕೃತಿಗಳೇ ಆದರೆ ಉಪಲಬ್ದತೆಯ ಕೊರತೆಯಿಂದಾಗಿ ಇವುಗಳ ಬಗೆಗಿನ ನಿಖರವಾದ ಅಧ್ಯಯನ ಕೈಗೊಳ್ಳಲಾಗಿಲ್ಲ. ಕೃತಿಯ ಉಪಲಬ್ಧ ಭಾಗಗಳಲ್ಲೆಲ್ಲೂ ಕವಿಯ ಹೆಸರಿನ ಉಲ್ಲೇಖ ಕಾಣಬರುವುದಿಲ್ಲವಾದರೂ ಗ್ರಂಥದ ಮೊದಲನೆಯ ಪದ್ಯವು 'ಶಿವಲಿಂಗ' ಎಂಬ ಅಂಕಿತದಿಂದೆ ಕೂಡಿದೆ. ಹಾಗೂ ಶಿವರಹಸ್ಯದ ಪ್ರತಿಯೊಂದು ಕಾಂಡದ ಅಂತ್ಯದಲ್ಲಿ

> ಇದು ಪರಮಶಿವಲಿಂಗ ನಿರುಪಮ
> ಪದಕಮಲ ಮಕರಂದ ಮಧುಕರ
> ಹೃದಯನೆನಿಸುವ ಸೋಮಶೇಖರ ಗುರುಕರಾಬ್ಜಭವಂ||
> ಸದಯ ಗುರುಸಿದ್ಧೇಂದ್ರಸನ್ಮನಿ
> ಮುದದೆ ರಚಿಸಿದ ಶಿವರಹಸ್ಯ||

ಎಂದಿದ್ದು ಈತನ ಗುರು ಸೋಮಶೇಖರನೆಂಬುದು ಹಾಲಾಸ್ಯಪುರಾಣ, ಪ್ರಭುಲೀಲೆ ಗ್ರಂಥಗಳಿಂದ ಖಚಿತಗೊಂಡಿರುವುದು, ಶಿವಲಿಂಗ ಅಂಕಿತ ಬಳಿಸಿರುವುದರಿಂದ ಮತ್ತು ತೋಂಟದ ಸಿದ್ಧಲಿಂಗ ಯತಿಗಳನ್ನು 'ಪಂಚಾಶಿಕೆ' ಕೃತಿಯಲ್ಲಿ ನೆನೆದಿರುವಂತೆ ಇದರಲ್ಲಿಯೂ ಹಲವಾರು ಕಡೆ ಸ್ಮರಿಸಿರುವುದರಿಂದ ಈ ಕೃತಿಯು ಇಮ್ಮಡಿ ಮುರಿಗಾಗುರುಸಿದ್ಧರು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಕವಿಯ ಉಪಲಬ್ಧ ಕೃತಿಗಳೆಲ್ಲಾ ಬಹುಶಃ ದೊಡ್ಡ ಕೃತಿ-ಶಿವರಹಸ್ಯ, ಈಗ ದೊರೆತಿರುವುದು ಅಲ್ಪಭಾಗ ಮಾತ್ರ. ಆ ಭಾಗದಲ್ಲೇ ೪ ಕಾಂಡ, ೧೦೧ ಸಂಧಿ, ೩೦೪೧ ಭಾಮಿನಿ ಷಟ್ಪದಿಗಳಿವೆ. ಎಸ್. ಶಿವಣ್ಣನವರ ಇತ್ತೀಚಿನ ಶೋಧನೆಯಲ್ಲಿ ಕಾಂಡ ೭ರ ಉತ್ತರಭಾಗ(ದಕ್ಷಕಾಂಡ) ಮತ್ತು ಕಾಂಡ ೭ರ ಪೂರ್ವಭಾಗ(ಉಪದೇಶಕಾಂಡ)ಗಳು ಅಪೂರ್ಣವಾಗಿ ಒಟ್ಟು ೨೩ ಪದ್ಯಗಳು ಲಭಿಸಿವೆ.[೩೩] ಪದ್ಯ ಸಂಖ್ಯೆಯನ್ನು ಗಮನಿಸಿದಾಗ ಕೃತಿಯ ಬೃಹತ್ತು ಮಹತ್ತುಗಳ ಅರಿವಾಗುತ್ತದೆ. ಪಾರ್ವತಿಯಿಂದ ಪ್ರಶ್ನಿಸಲ್ಪಟ್ಟ ಮಹಾದೇವನು ಅವಳ ಸಂದೇಹಗಳಿಗೆಲ್ಲಾ ಸೂಕ್ತ ಪರಿಹಾರವನ್ನು ಶಿವರಹಸ್ಯದಲ್ಲಿ ನೀಡುವನು. ಇಲ್ಲಿ ದೇವಿಗೆ ಶಿವನು ಹೇಳಿದುದನ್ನು ಕೇಳಿಸಿಕೊಂಡ ಕುಮಾರಸ್ವಾಮಿಯು 'ಜೈಗೀಷವ್ಯ'ನಿಗೆ ಅದನ್ನು ತಿಳಿಸಿದಂತೆ ನಿರೂಪಿಸಲಾಗಿದೆ. ಶಿವರಹಸ್ಯದ ಒಂಬತ್ತನೆಯ ಅಂಶದಲ್ಲಿ ದೇವಿಯು ಪರಮೇಶ್ವರನನ್ನು ಕುರಿತು 'ಮುಂದೆ ಕಲಿಯುಗದಲ್ಲಿ ಅವತರಿಸುವ ಪ್ರಸಿದ್ಧರಾದ ಶಿವಪಾದ ಪೂಜಕರಾರು? ಅವರ ಚರಿತ್ರೆಯನ್ನು ವಿಸ್ತಾರವಾಗಿ ನನಗೆ ತಿಳಿಸು' ಎಂದು ಪ್ರಾರ್ಥಿಸಿದಾಗ ಅವಳ ಕೋರಿಕೆಯನ್ನು ಮನ್ನಿಸಿದ ಶಿವನು ತಮಿಳುನಾಡಿನ ಅರವತ್ತು ಮೂರು ಭಕ್ತರ ಕಥೆಯನ್ನು ಅವರು ಹುಟ್ಟುವ ಮುನ್ನವೇ ತಿಳಿಯಪಡಿಸುವನು.

‘ಶಿವರಹಸ್ಯ’ದಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರು ಮೊದಲಿಗೆ ಶಿವ-ಪಾರ್ವತಿಯರನ್ನು ಒಂದೊಂದು ಪದ್ಯದಲ್ಲಿ ಸ್ಮರಿಸಿ ನಂತರ ಒಂದೊಂದು ಪದ್ಯದಲ್ಲಿ ಗಣಪತಿ, ವೀರಭದ್ರರನ್ನು ನೆನೆದಿರುವನು. ಐದನೇ ಪದ್ಯದಲ್ಲಿ ನಂದಿ, ಭೃಂಗಿ ಇವರೇ ಮೊದಲಾದ ಪ್ರಮಥಗಣ ಶ್ರೇಷ್ಠರನ್ನು ನೆನೆದು ‘ಇಂದುಧರನಾತ್ಮಜನೇ’ ಈ ಕೃತಿಗೆ ಪ್ರೀತಿಯಿಂದ ನಿರ್ವಿಘ್ನತೆಯನ್ನು, ‘ಸುರನರವಿಬುಧತತಿ’ ಈ ಕೃತಿಗೆ ಅಲಂಕಾರ ರಸಭಾವಾದಿ ಲಕ್ಷಣಗಳನ್ನು ಅಳವಡಿಸಲಿ ಎಂದು ಪ್ರಾರ್ಥಿಸುವನು. ಆರನೇ ಪದ್ಯದಲ್ಲಿ ಗುರುಸ್ತುತಿ. ಏಳನೇ ಪದ್ಯದಲ್ಲಿ ‘ಶಿವಕವಿವರರ ಬಲಗೊಂಡು ಪದಪಿನಿಂದರು ಮೊಗನ ಕೃತಿಯನು ಪದುಳದಿಂದೆ ಸುಲಕ್ಷಣಂಗಳು ಪುದಿದಿರಲು ಕರ್ನಾಟಕ ಭಾಷೆಯಿನಯ್ದು ಬಿತ್ತರಿಪೆಂ’ ಎಂದಿರುವನು. ಶೂನ್ಯಪೀಠ ಪರಂಪರೆಯಲ್ಲಿ ಪ್ರಸಿದ್ಧನಿರುವ ತೋಂಟದ ಸಿದ್ಧಲಿಂಗಯತಿಯನ್ನು ಭಕ್ತಿ ಪೂರ್ವಕವಾಗಿ ಹಲವಾರು ಪದ್ಯಗಳಲ್ಲಿ ಸ್ಮರಿಸಿರುವನು

ಕಗ್ಗರೆ ಯನಾಗಿಣಿಯ ತೀರದೊ
ಳುಗ್ಗಡದ ಬನದೆಡೆಯ ಹುತ್ತದೊ
ಳಗ್ಗಳದ ಪಾವುಗಳ ತೊಡಿಗೆಯನಾಂತುತರುವಾಲಂ
ಹಿಗ್ಗಿಸವಿಮತೆ ನಾಡಿಗೆಲ್ಲಕೆ
ಯಗ್ಗಸುಗ್ಗಿಯನಿತ್ತು ಸಲಹುವ
ಸುಗ್ಗಿಗೊಡೆಯನು ತೋಂಟದಯ್ಯನು ಪೊರೆವ ಮೂಜಗವಂ||

ಕಾಂ.೩, ಅ.೧,ಪ.೨

ಎಂದು ಪ್ರತಿಯೊಂದು ಕಾಂಡದಲ್ಲಿಯೂ ತೋಂಟದ ಸಿದ್ಧಲಿಂಗ ಯತಿಗಳನ್ನು ಅವರ ಲೀಲೆಗಳೊಂದಿಗೆ ಹಾಡಿ ಹೊಗಳಿದ್ದಾನೆ.

ಕವಿ ತನ್ನ ಕೃತಿಯ ವಸ್ತು ಹಾಗೂ ಅದರ ರಚನೋದ್ದೇಶವನ್ನು ಕೆಳಗಿನ ಪದ್ಯವೊಂದರಲ್ಲಿ ಹೀಗೆ ತಿಳಿಸಿರುವನು.

ಶಿವರಹಸ್ಯ ಪುರಾಣವೆಂದಿದ
ಕವನಿಯೊಳು ಪೆಸರಪ್ಪುದೀಶನ
ಕುವರನುರುತರ ಮಹಿಮೆಯಿದರೊಳುನೆಲಸಿನಿಂದಿಹುದು|
ತವೆಯದೆ ಸ್ಕಾಂದೋಕ್ತವಾದಪು
ದವಿರತವು ಕರ್ಣಾಟಕ ಸುಭಾ
ಷೆಯೊಳೊರೆಯಬೇಕೆನೆ ಕನ್ನಡಿಸಿದೆನಿದಂ ಮಹೋತ್ಸವದಿಂ||

ಕಾ.೧, ಅ.೧, ಪ.೯

ಕವಿ ಪ್ರಕಾಂಡ ಪಂಡಿತನೂ ಪ್ರತಿಭಾ ಸಂಪನ್ನನೂ ಆಗಿರುವನು. ಆದಾಗ್ಯೂ ತನ್ನ ಪಾಂಡಿತ್ಯದ ಬಗೆಗೆ ಗರ್ವವಿಲ್ಲ, ಪೂರ್ವಸೂರಿಗಳ ರಚನೆಯ ಬಗೆಗೆ ಗೌರವ, ತನ್ನದು ‘ಬಡ ನುಡಿಯ ಓದು’ ಎನುತ್ತಾನೆ. ಕೃತಿರಚನೆಗೆ ಪ್ರೇರಣೆ ಷಣ್ಮುಖ, ಅವನೇ ಕಥಾನಾಯಕ. ಒಮ್ಮೆ ಬ್ರಹ್ಮನನ್ನು ಮುನಿಗಳು

ತಪಸ್ಸಿಗೆ ಒಳ್ಳೆಯ ಸ್ಥಳಾವಾವುದು? ಎಂದು ಪ್ರಶ್ನಿಸುವರು. ನೈಮಿಶಾರಣ್ಯವೆಂದು ಬ್ರಹ್ಮನು ತಿಳಿಸಲು, ಮುನಿಗಳು ಅಲ್ಲಿಗೆ ಹೋಗಿ ನೆಲಸುವರು. ಆ ವಿಚಾರ ತಿಳಿದ ಶಿವನ ಪ್ರಿಯ ಭಕ್ತನೂ, 'ಊರ್ಜಿತ ಕೀರ್ತಿ'ವಂತನೂ ಆದ ಸೂತಮುನಿಯು ಅಲ್ಲಿಗೆ ಬರುವನು. ಅವನನ್ನು ಎದುರುಗೊಂಡು ಆದರೋಪಚಾರವೆಸಗಿದ ಮುನಿಗಳು ಆತನ ಮುಂದೆ ನಮಗೆ ಈಗಲೇ ಸ್ಕಂದಚರಿತವನ್ನು, ಪಾರ್ವತಿ ಮದುವೆಯ, ಸೋಗಿನ ಸುರವಧೆಯ, ಕಾಳಸರ್ಪದ ವಿಷ ಕುಡಿದ ವಿಷಕಂಠನ ಚರಿತ್ರೆಯನ್ನು ಹೇಳು ಎಂದು ಮುನಿಗಳು ಕೇಳಲು 'ಶ್ರೇಯವಪ್ಪುದು ಪೇಳೆಮಗವನ ಪಾಯವಂಟದ ವಿಕ್ರಮವನಾತ್ಮೀಯ ಬುದ್ಧಿಯೊಳುಜ್ವಳಿಪ ತೆರನಂ ನಿರೂಪಿಸು....'(ಕಾ.೧, ಅ.೧, ಪ.೨೬) ಎಂದು ಕುತೂಹಲಾವಿಷ್ಟರಾಗಿ ಮನವಿಯೊಡ್ಡುವರು. ಅದಕ್ಕೆ ಸೂತಮುನಿಯು 'ಮಾಯೆಗ ಸದಳವಾದ ತಾಪಸರು ಈ ಅಸಮ ಗೌರೀಕುಮಾರನ ಉಪಾಯ ಚರಿತವನ್ನು ಆಲಿಸುವುದರಿಂದ ಫಲದಾಯಕವಾಗುತ್ತದೆ'. ಶಿವಕುಮಾರನ ಚರಿತೆಯನ್ನು ಬಿಡದೆ ಕೇಳಿದ್ದೇ ಆದರೆ ಜಗತ್ತಿನಲ್ಲಿ ಬಯಸಿದುದು ಕೈಸಾರುತ್ತದೆ ಇದು ಸತ್ಯ. ಸಭೆಯಲ್ಲಿ ಈ ದಿವ್ಯ ಚರಿತೆಯನ್ನು ಹೇಳಿದವರನ್ನು ವಿಶೇಷವಾಗಿ ಆದರಿಸುವುದು, ಪೂಜಿಸುವುದು ಎಂದು ಹೇಳಿ ಸ್ಕಂದ ಮಹಿಮೆಯನ್ನು ನಿರೂಪಿಸತೊಡಗುವನು. ಈ 'ಶಿವರಹಸ್ಯ'ವನ್ನು ಸಂಭವಕಾಂಡ, ಮಹಾಸುರಕಾಂಡ, ವೀರಮಹೇಂದ್ರ ಕಾಂಡ ಹಾಗೂ ಸುರಾಸುರ ಯುದ್ಧಕಾಂಡ ಎಂದು ನಾಲ್ಕು ಕಾಂಡಗಳಲ್ಲಿ ಹೇಳಿರುವನು ಈ ಕೃತಿಯು ಅಪೂರ್ಣವಾಗಿ ದೊರಕಿದ್ದರೂ, ಅಪ್ರಕಟಿತ ಸ್ಥಿತಿಯಲ್ಲೇ ಇರುವುದರಿಂದ ಕೃತಿಯ ಕುರಿತಾದ ಇನ್ನು ಹೆಚ್ಚಿನ ವಿಶ್ಲೇಷಣೆ ಇಲ್ಲಿ ಸಾಧ್ಯವಾಗಿಲ್ಲ.

ಇಮ್ಮಡಿ ಮುರಿಗಾಗುರುಸಿದ್ಧರು ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳನ್ನು ಬಳಸಿಕೊಂಡು ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ, ಶಿವಲಿಂಗನಾಂದ್ಯ, ಶಿವಲಿಂಗ ಮಹಿಮಾ ಷಟ್ಪದಿ, ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ ಮತ್ತು ಶಿವರಹಸ್ಯ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಅವರ ಮೂಲ ಉದ್ದೇಶವು ವೀರಶೈವ ತತ್ತ್ವಗಳ ಪ್ರಸಾರವಾಗಿದ್ದಿತು. ಅಂತೆಯೇ ಸಮಾಜದಲ್ಲಿ ಧಾರ್ಮಿಕ ಮೌಲ್ಯಗಳಾದ ಆತ್ಮನ ಸ್ವರೂಪ, ಆತ್ಮಶುದ್ಧಿ, ಆತ್ಮನ ವಿಕಾಸ ಮತ್ತು ಮೋಕ್ಷಗಳಂಥ ವ್ಯಕ್ತಿಯ ಆಂತರಿಕ ಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ಈ ಧಾರ್ಮಿಕ ಕೃತಿಗಳ ಮೂಲಕ ಬಿತ್ತರಿಸಿದ್ದಾನೆ. ಮನುಷ್ಯನ ಉದ್ಧಾರಕ್ಕಾಗಿ, ಸಮಾಜದ ಒಳಿತಿಗಾಗಿ, ಸಂಸ್ಕೃತಿಯ ವಿಕಾಸಕ್ಕಾಗಿ ದುಡಿದ ಇಂತಹ ಯೋಗಿಗಳ ಅನುಭಾವದಿಂದ ಮೂಡಿಬಂದ ಈ ಕೃತಿಗಳಲ್ಲಿ ಕಾವ್ಯಾಂಶಗಳಾದ ಭಾಷೆ, ಛಂದಸ್ಸು, ಅಲಂಕಾರ, ಉಪಮೆಗಳಿಗೆ ಕೂಡ ಯಾವ ಕೊರತೆಯೂ ಇಲ್ಲ. ಕೇವಲ ತತ್ತ್ವ, ಸಿದ್ಧಾಂತ, ಆಧ್ಯಾತ್ಮಿಕ, ನೀತಿ, ಶಾಸ್ತ್ರ ಮುಂತಾದವುಗಳ ವಿವರಣೆಯಲ್ಲಿಯೂ ಕವಿಯು ತನ್ನ ಭಾಷಾ ಪ್ರೌಢಿಮೆಯನ್ನು ಮೆರೆದಿದ್ದಾನೆ. ಆತನ ಸಂಸ್ಕೃತ ವ್ಯಾಮೋಹ, ಶಬ್ದ ಬಂಡಾರದ ಸಂಪತ್ತು

ಒಂದೊಂದು ಪದ್ಯದಲ್ಲಿಯೂ ಕಾಣಸಿಗುತ್ತದೆ. ಶಿವನ ವರ್ಣನೆಗೆ ತೊಡಗಿದರಂತೂ, ಒಂದೊಂದೇ ಶಬ್ದದಲ್ಲಿ ಒಂದೊಂದು ಲೀಲೆಯನ್ನೇ ನೆನಪಿಸುವಂಥಹ ಅರ್ಥಗರ್ಭಿತ ಶಬ್ದಗಳನ್ನು ಬಳಸುತ್ತಾನೆ. ಆತ್ಮವಿಕಾಸದ ಉದಾತ್ತೀಕರಣವನ್ನು ಬೋಧಿಸುವ ಈ ಕೃತಿಗಳು ಇಮ್ಮಡಿ ಮುರಿಗಾಗುರುಸಿದ್ಧರ ಸಾಧನೆ ಸಿದ್ಧಿಗಳ ದ್ಯೋತಕಗಳಾಗಿವೆ.

ಅಡಿಟಿಪ್ಪಣಿಗಳು

೧. ಆರ್. ನರಸಿಂಹಾಚಾರ್, ಕ.ಕ.ಚ., ಸಂ.III, ಪು.೨೪೧

೨. ಅದೇ, ಸಂ.II, ಪು.೭೦

೩. ಎಸ್. ವಿದ್ಯಾಶಂಕರ(ಸಂ), ಇಮ್ಮಡಿ ಮುರಿಗಾಗುರುಸಿದ್ಧರಕೃತಿಗಳು, ಪೀಠಿಕೆ, ಪು.೨೪

೪. ಎಸ್. ವಿದ್ಯಾಶಂಕರ(ಸಂ), ವಚನ ಪರಿಭಾಷಾಕೋಶ ಪು.೧೧೫

೫. ಅದೇ, ಪು.೧೬೫

೬. ಬಿ.ನಂ. ಚಂದ್ರಯ್ಯ(ಲೇ), ಪಂಚೀಕರಣ ಸಾಹಿತ್ಯ:ಗೌರವ, ಪು.೨೬೧

೭. ಅದೇ, ಪು.೨೬೫

೮. ಎಸ್. ವಿದ್ಯಾಶಂಕರ(ಸಂ), ವಚನ ಪರಿಭಾಷಾಕೋಶ, ಪು.೨೩

೯. ಚನ್ನಪ್ಪ ಎರೆಸೀಮೆ(ಲೇ), ಕನ್ನಡದಲ್ಲಿ ವೀರಶೈವ ಸಿದ್ಧಾಂತ ಗ್ರಂಥಗಳು, ಗವಿದೀಪ್ತಿ, ಪು.೫೩೬

೧೦. ಚನ್ನಪ್ಪ ಎರೆಸೀಮೆ(ಲೇ), ವೀರಶೈವ ಸಿದ್ಧಾಂತ ಗ್ರಂಥಗಳು, ಬಸವಪಥ ಸಂ-೭, ಸಂ-೮-೯, ೧೯೮೫, ಪು.೩೭

೧೧. ಅದೇ, ಪು.೪೪

೧೨. ಅದೇ, ಪು.೪೫

೧೩. ಕೆ.ರವೀಂದ್ರನಾಥ(ಸಂ), ಬಸವಯುಗದ ವಚನೋತರ ಸಾಹಿತ್ಯ, ಪ್ರಸ್ತಾವನೆ, ಪು.೧೭

೧೪. ಚನ್ನಪ್ಪ ಎರೆಸೀಮೆ(ಲೇ), ಕನ್ನಡದಲ್ಲಿ ವೀರಶೈವ ಸಿದ್ಧಾಂತ ಗ್ರಂಥಗಳು, ಗವಿದೀಪ್ತಿ, ಪು.೫೫೪

೧೫. ಅದೇ, ಪು.೫೫೩

೧೬. ಬಿ.ವಿ. ಮಲ್ಲಾಪುರ(ಲೇ), ಮಿಶ್ರಾರ್ಪಣ ಸಾಹಿತ್ಯ, ಗೌರವ, ಪು.೨೨೯

೧೭. ವಿವರಗಳಿಗೆ ನೋಡಿ, 'ಶಿವಾನುಭವ ಶಬ್ದಕೋಶ', ಪು.೧೧೩ ರಿಂದ ೧೧೫ರವರೆಗೆ

೧೮. ಬಿ.ವಿ. ಮಲ್ಲಾಪುರ(ಲೇ), ವೀರಶೈವ ತತ್ತ್ವಾರ್ಥ ವಿವೇಚನೆ, ಪು.೧೦೦-೧೦೧

೧೯. ಚನ್ನಪ್ಪ ಎರೆಸೀಮೆ(ಲೇ), ಕನ್ನಡದಲ್ಲಿ ವೀರಶೈವ ಸಿದ್ಧಾಂತ ಗ್ರಂಥಗಳು, ಬಸವಪಥ, ೧೯೮೫, ಸಂ-೭ ಸಂ.೮-೯ ಪು-೫೪

೨೦. ಚನ್ನಪ್ಪ ಎರೆಸೀಮೆ(ಲೇ), ಕನ್ನಡದಲ್ಲಿ ವೀರಶೈವ ಸಿದ್ಧಾಂತ ಗ್ರಂಥಗಳು, ಗವಿದೀಪ್ತಿ, ಪು.೫೫೫

೨೧. ಚನ್ನಪ್ಪ ಎರೆಸೀಮೆ(ಲೇ), ಕನ್ನಡದಲ್ಲಿ ವೀರಶೈವ ಸಿದ್ಧಾಂತ ಗ್ರಂಥಗಳು, ಬಸವಪಥ, ಸಂ-೭ ಸಂ-೮-೯ ಪು.೫೬

೨೨. ಅದೇ, ಪು.೫೭

೨೩. ಎಸ್.ಸಿ.ನಂದೀಮಠ(ಲೇ), ಯೋಗವೂ ವೀರಶೈವರೂ, ವೀರಶೈವ ತತ್ತ್ವಪ್ರಕಾಶ, ಪು.೩೨೬

೨೪. ಅದೇ, ಪು.೩೨೭

೨೫. ವೀರಣ್ಣ ರಾಜೂರ(ಸಂ), ಶಿವಯೋಗಪ್ರದೀಪಿಕೆ, ಪಟಲ-೧, ಪದ್ಯ-೪

೨೬. ಸಿದ್ಧಲಿಂಗೇಶ್ವರಸ್ವಾಮಿಗಳು(ಲೇ), ಶ್ರೀ ಪಂಪಾಮಹಾತ್ಮೆ, ಅಧ್ಯಾಯ ೧೬, ಅಷ್ಟಾಂಗಯೋಗ ನಿರೂಪಣೆ, ಪು.೭೬೬

೨೭. ಅದೇ, ಪು.೭೬೯

೨೮. ಟಿ.ಆರ್. ಮಹದೇವಯ್ಯ (ಲೇ), ನಾಂದ್ಯ ಸ್ತೋತ್ರ ಸಾಹಿತ್ಯ, ಗೌರವ, ಪು.೨೧೩

೨೯. ಬಿ.ಆರ್.ಹಿರೇಮಠ(ಸಂ), ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಗಳ ಐದು ಕೃತಿಗಳು, ಪ್ರಸ್ತಾವನೆ, ಪು.೩

೩೦. ಟಿ.ಆರ್.ಮಹದೇವಯ್ಯ(ಲೇ), ನಾಂದ್ಯ ಸ್ತೋತ್ರ-ಸಾಹಿತ್ಯ, ಗೌರವ, ಪು.೨೨೫

೩೧. ಎಸ್.ವಿದ್ಯಾಶಂಕರ(ಲೇ), ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ.೬೭, ಸಂ-೨ ಪು-೧೫

೩೨. ಎಸ್. ಶಿವಣ್ಣ(ಲೇ), ಶಿವರಹಸ್ಯ, ಬಸವಪಥ ಸಂ.೪, ಸಂ-೨, ಪು.೨೨

೩೩. ಎಸ್. ಶಿವಣ್ಣ(ಲೇ), ಇಮ್ಮಡಿ ಗುರುಸಿದ್ಧಸ್ವಾಮಿಗಳ 'ಶಿವರಹಸ್ಯ ಪುರಾಣ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂ.೭೪ ಸಂ.೧ ಪು.೨೪

ಲಘು ಸಾಹಿತ್ಯ ಪ್ರಕಾರ

೧. ಮುರಿಗೆ ತಾರಾವಳಿ

೨. ಶಬ್ದರತ್ನಾಕರ

೩. ಲಿಂಗರಚನಾಗಮ ಟೀಕು

೪. ಸ್ಕಂದ ಕಲ್ಯಾಣ

೫. ಬಿಜ್ಜಮಹಾದೇವಿ ಚಾರಿತ್ರ

೬. ಜಲಂಧರ ಕಾಳಗ

೭. ಕೊರವಂಜಿ ಕಟ್ಟಳೆ

ಮುರಿಗೆ ತಾರಾವಳಿ

'ತಾರಾವಳಿ' ಪ್ರಕಾರವು ಇತರ ಸಾಹಿತ್ಯ ಪ್ರಕಾರಗಳಂತೆ ಪ್ರಕಟಣೆ ಹಾಗೂ ಅಧ್ಯಯನದ ದೃಷ್ಟಿಯಿಂದ ಅಷ್ಟೇನೂ ಪ್ರಚಾರದಲ್ಲಿಲ್ಲದಿದ್ದರೂ ವೀರಶೈವ ಲಘು ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖವಾದುದಾಗಿದೆ. ಇದು 'ತಾರೆ' ಮತ್ತು 'ಆವಳಿ' ಎಂಬ ಎರಡು ಶಬ್ದಗಳು ಸೇರಿದ ಸಮಸ್ತ ಪದವಾಗಿದೆ. 'ತಾರೆ' ಎಂದರೆ ನಕ್ಷತ್ರ, 'ಆವಳಿ' ಎಂದರೆ ಸಾಲು ಅಥವಾ ಸಮೂಹ. ತಾರಾವಳಿ ಎಂದರೆ ನಕ್ಷತ್ರಗಳ ಸಾಲು. ಜ್ಯೋತಿಷ್ಯ ಶಾಸ್ತ್ರದಲ್ಲಿ ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರ, ಆರಿದ್ರ, ಪುನರ್ವಸು, ಪುಷ್ಯ, ಆಶ್ಲೇಷಾ, ಮಾಘ, ಪೂರ್ವಾ, ಉತ್ತರಾ, ಹಸ್ತ, ಚಿತ್ತ, ಸ್ವಾತಿ, ವಿಶಾಖಾ, ಅನುರಾಧಾ, ಜೇಷ್ಠ, ಮೂಲಾ, ಪೂರ್ವಾಷಾಡ, ಉತ್ತರಾಷಾಡ, ಶ್ರಾವಣ, ಧನಿಷ್ಠ, ಶತತಾರಾ, ಪೂರ್ವಭಾದ್ರಪದ, ಉತ್ತರಬಾದ್ರಪದ, ರೇವತಿ ಎಂಬ ೨೭ ತಾರೆ(ನಕ್ಷತ್ರ)ಗಳು ಇರುವಂತೆ ಪ್ರಸ್ತುತ ಸಾಹಿತ್ಯ ಪ್ರಕಾರದಲ್ಲೂ ೨೭ ನಕ್ಷತ್ರಗಳ ಸಂಕೇತವಾಗಿ ೨೭ ನುಡಿ ಅಥವಾ ಪದ್ಯಗಳು ಇರುತ್ತವೆ. 'ಮುತ್ತಿನ ಹಾರದಿಂದ ದೇವರನ್ನು ಒಲಿಯುವಂತೆ ಮಾಡುವುದು ಸಾಧ್ಯವಿಲ್ಲ. ದೇವರಿಗೆ ಸಲ್ಲಿಸಲು ಉತ್ತಮವಾದ ನಕ್ಷತ್ರ ಮಾಲೆಯೆಂದರೆ ಭಕ್ತಿಯ ಮಿರುಗಿರುವ ಮುತ್ತಿನಂತಹ ಇಪ್ಪತ್ತೇಳು ಮಾತುಗಳ ಪ್ರಬಂಧ. ಈ ಭಾವನೆಯಿಂದ ಪ್ರೇರಿತವಾದ ಸಾಹಿತ್ಯವೇ ತಾರಾವಳಿ'[೧] ಇಪ್ಪತ್ತೇಳು

ನುಡಿಗಳಿರುವುದು ತಾರಾವಳಿಯ ಪ್ರಮುಖ ಲಕ್ಷಣ. ಆದರೆ ಇದು ಕ್ರಮೇಣ ಬದಲಾಗಿ, ಕವಿ ತನ್ನ ಇಷ್ಟಾನುಸಾರ ನುಡಿ ಸಂಖ್ಯೆಯನ್ನು ಹೆಚ್ಚಿಸುತ್ತ ಇಲ್ಲವೆ ಕಡಿಮೆ ಮಾಡುತ್ತ ನಡೆದಿರುವುದು ಕಂಡುಬರುತ್ತದೆ. ಸದ್ಯ ದೊರೆತ ತಾರಾವಳಿಗಳನ್ನು ಗಮನಿಸಿ ಹೇಳುವುದಾದರೆ ಕನಿಷ್ಠ ಮೂರು ನುಡಿಗಳ ಮಿತಿ. ಗರಿಷ್ಠ ಎಂಬತ್ತೇಳು ನುಡಿಗಳ ವ್ಯಾಪ್ತಿ ಕಂಡುಬರುತ್ತದೆ. ಇದರಿಂದ ಕಾಲಕ್ರಮದಲ್ಲಿ 'ತಾರಾವಳಿ' ಎಂದರೆ ಕೇವಲ ೨೭ ನುಡಿಗಳ ಸಾಹಿತ್ಯ ಪ್ರಕಾರ ಎನ್ನುವ ಸಾಂಕೇತಿಕ ಅರ್ಥವನ್ನು ಕಳೆದುಕೊಂಡು ಅದೊಂದು ಸ್ವಚ್ಛಂದ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದುದು ವ್ಯಕ್ತವಾಗುತ್ತದೆ.[೨]

ಅಷ್ಟಕ, ಶತಕಗಳಂತೆ ಕೇವಲ ದೇವತಾ ಸ್ತುತಿಗಾಗಿ ಹುಟ್ಟಿಕೊಂಡ ಈ ಪ್ರಕಾರವನ್ನು ಕನ್ನಡಕ್ಕೆ ತಂದು ಹುಲುಸಾಗಿ ಬೆಳೆಸಿದ ಶ್ರೇಯಸ್ಸು ವೀರಶೈವ ಕವಿಗಳಿಗೆ ಸಲ್ಲುತ್ತದೆ. ಈ ವಿಶಿಷ್ಟ ಬಗೆಯ ಸಾಹಿತ್ಯ ಪ್ರಕಾರವು ಬಳಕೆಗೆ ಬಂದುದು ಪ್ರೌಢದೇವರಾಯನ ಕಾಲದ ಕರಸ್ಥಲನಾಗಿದೇವನ 'ಮಡಿವಾಳಯ್ಯನ ತಾರಾವಳಿ' ಎಂಬ ಕೃತಿಯಿಂದ. ಇದು ತಾರಾವಳಿ ಪ್ರಕಾರದ ಎಲ್ಲಾ ಲಕ್ಷಣಗಳನ್ನೊಳಗೊಂಡು ಆದಿ ಕೃತಿಯೆನಿಸಿದೆ. ಹೀಗೆ ೧೫ನೆಯ ಶತಮಾನದ ಕನ್ನಡದಲ್ಲಿ ಹುಟ್ಟಿದ 'ತಾರಾವಳಿ'ಯು ಅಲ್ಲಿಂದ ಮುಂದೆ ೧೯ನೆಯ ಶತಮಾನದವರೆಗೂ ಉಳಿದ ಲಘು ಸಾಹಿತ್ಯ ಪ್ರಕಾರಗಳ ಜೊತೆಗೆ ಸರಿ ದೊರೆಯಾಗಿ ಬೆಳೆದು ಬಂದಿದೆ. ಅದರಲ್ಲೂ ೧೫, ೧೬, ೧೭ನೆಯ ಶತಮಾನಗಳು ತಾರಾವಳಿ ಸಾಹಿತ್ಯದ ಸುಗ್ಗಿಯ ಕಾಲಗಳೆನಿಸಿವೆ. ಇಮ್ಮಡಿ ಮುರಿಗಾಗುರುಸಿದ್ಧರಂತಹ ಅನೇಕ ಕವಿಗಳು ಹಿರಿಯ ಪ್ರಕಾರಗಳ ಜೊತೆಗೆ, ಇಂತಹ ಕಿರಿಯ ಪ್ರಕಾರಗಳಲ್ಲೂ ಕೃಷಿಗೈದು ವಸ್ತು, ರೂಪ, ರಸ, ಭಾವ, ಭಾಷೆ, ಶೈಲಿಗಳಲ್ಲಿ ವೈವಿಧ್ಯತೆಯನ್ನು ಕಂಡುಕೊಂಡಿದ್ದಾರೆ.

ಲಕ್ಷಣ : ೨೭ ನುಡಿಗಳಿರುವುದು ಇದರ ಪ್ರಮುಖ ಲಕ್ಷಣ. ಆರಂಭದಲ್ಲಿ ಪಲ್ಲವಿ ಇರುತ್ತದೆ. ಕೃತಿಯ ಸಾರ ಸಂಗ್ರಹವನ್ನೊಳಗೊಂಡ ಇದು ಪ್ರತಿ ನುಡಿಗೊಮ್ಮೆ ಪುನರುಕ್ತವಾಗುತ್ತದೆ. ಪಲ್ಲವಿಗಿಂತ ಮೊದಲು ಕೆಲವು ಕೃತಿಗಳಲ್ಲಿ ಒಂದು ವೃತ್ತವು ಇರುತ್ತದೆ. ಪಲ್ಲವಿಯ ನಂತರ ಹಲವು ನುಡಿಗಳಿರುತ್ತವೆ. ಅಲ್ಲಿಯ ನುಡಿಗಳು ಇಷ್ಟೇ ಪಾದಗಳನ್ನು ಪಡೆದಿರಬೇಕೆಂಬ ನಿಯಮವಿರುವುದಿಲ್ಲ. ಉದಾಹರಣೆಗೆ ಮುರಿಗಾ ತಾರಾವಳಿಯಲ್ಲಿ ೧೧, ೧೫, ೧೮, ೧೯, ೨೧ ಹೀಗೆ ಅನಿಯಮಿತವಾದ, ಪಾದಗಳ ಸಂಖ್ಯೆಯ ಜೊತೆಗೆ ಆದಿಪ್ರಾಸ, ಅಂತ್ಯಪ್ರಾಸವನ್ನು ಒಳಗೊಂಡಿರುತ್ತವೆ. ರಗಳೆ ಇವುಗಳ ಮೂಲ ಛಂದಸ್ಸಾಗಿದ್ದರೂ ಕಂದ, ತ್ರಿಪದಿ, ವೃತ್ತ, ಷಟ್ಪದಿಗಳಲ್ಲಿಯೂ ಎಡೆ ಪಡೆದು ಕೊಂಡಿದೆ. ಇವು ಬಾಹ್ಯ ಲಕ್ಷಣಗಳಾದರೆ, ಆಂತರಿಕವಾಗಿ ವಸ್ತು-ಭಾಷೆ-ರಸ-ಭಾವಗಳು ಸಮಾವೇಶಗೊಳ್ಳುತ್ತವೆ. ವಸ್ತುವು ಶಿವ-ಶರಣರ ಸ್ತುತಿ ಪರವಾದುದಾದರೆ, ಶಿಷ್ಟ-ಜಾನಪದ ಭಾಷೆಯ ಮಿಶ್ರ ಬಳಕೆ, ಭಕ್ತಿ, ಶೃಂಗಾರ ರಸದ ಪ್ರತಿಪಾದನೆ ಇಲ್ಲಿ ಎದ್ದು ಕಾಣುತ್ತವೆ.[೩] ಇದೊಂದು ಹಾಡುಗಬ್ಬವಾಗಿರುವುದರಿಂದ

ಇಲ್ಲಿ ಕಾವ್ಯಾಂಶಕ್ಕೆ ಹೆಚ್ಚಿನ ಮಹತ್ವ ಕೊಡದೆ ರಾಗಕ್ಕೆ, ಗೇಯತೆಗೆ ಮಾನ್ಯತೆ ನೀಡುತ್ತಾರೆ. ವಸ್ತುವಿನ ದೃಷ್ಟಿಯಿಂದ ತಾರಾವಳಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

೧. ಸ್ತುತಿ ರೂಪದ ತಾರಾವಳಿಗಳು

೨. ಜಾತ್ರೆ, ಪಲ್ಲಕ್ಕಿ ವರ್ಣನಾ ಪರ ತಾರಾವಳಿಗಳು

೩. ತತ್ತ್ವ ಪ್ರಧಾನ ತಾರಾವಳಿಗಳು

೪. ಐತಿಹಾಸಿಕ ಸಂಗತಿಗಳನ್ನೊಳಗೊಂಡ ತಾರಾವಳಿಗಳು

ತಾರಾವಳಿ ಸಾಹಿತ್ಯ ಪ್ರಕಾರವು ಮುಖ್ಯವಾಗಿ ಸ್ತೋತ್ರ ಸಾಹಿತ್ಯದ ಗುಂಪಿಗೆ ಸೇರುವುದರಿಂದ ಶಿವಸ್ತುತಿ, ಗಣಸ್ತುತಿ, ಶರಣಸ್ತುತಿ ಎಂದೂ, ಶರಣಸ್ತುತಿಯಲ್ಲಿ ಮತ್ತೆ ಪುರಾತನ ಶರಣರ ಸ್ತುತಿ, ಬಸವಾದಿ ಶರಣರ ಸ್ತುತಿ, ವಿರಕ್ತರ ಸ್ತುತಿ ಎಂದು ಉಪವಿಭಾಗಗಳನ್ನು ಕಲ್ಪಿಸಬಹುದಾಗಿದೆ.[೪]

ವಿರಕ್ತರ ಸ್ತುತಿಪರವಾದ ಕೃತಿಗೆ ಒಂದು ಅತ್ಯುತ್ತಮ ನಿದರ್ಶನ ಇಮ್ಮಡಿ ಮುರಿಗಾಗುರುಸಿದ್ಧರ 'ಮುರಿಗೆ ತಾರಾವಳಿ'. ತಾರಾವಳಿ ಸಾಹಿತ್ಯದ ಎಲ್ಲಾ ಲಕ್ಷಣಗಳನ್ನೊಳಗೊಂಡ ಈ ಕೃತಿಗೆ ಕರಸ್ಥಲ ನಾಗಿದೇವ (ಕ್ರಿ.ಶ.೧೪೪೫)ನ 'ಮಡಿವಾಳಯ್ಯನ ತಾರಾವಳಿ'ಯು ಪ್ರೇರಣೆಯನ್ನು ಒದಗಿಸಿರಬೇಕು ಎನಿಸುತ್ತದೆ. ಏಕೆಂದರೆ ಕರಸ್ಥಲನಾಗಿದೇವನ ಗುರಿ ಶಿವಶರಣ ಮಡಿವಾಳ ಮಾಚಿದೇವರ ಚರಿತ್ರೆಯನ್ನು ತಿಳಿಸುವುದಾಗಿತ್ತು. ಅದೇ ರೀತಿ 'ಮುರಿಗೆ ತಾರಾವಳಿ'ಯ ಗುರಿಯೂ ಸಹ ಶಾಂತವೀರರ ಚರಿತ್ರೆಯ ನಿರೂಪಣೆಯನ್ನೇ ಮುಖ್ಯ ಗುರಿಯಾಗಿಸಿಕೊಂಡಿದೆ. ಇವರೀರ್ವರೂ ಬಳಸಿಕೊಂಡ ರಗಳೆ ಛಂದಸ್ಸು, ಕಾವ್ಯಾರಂಭದ ಕ್ರಮ ಒಂದೇ ರೀತಿಯಾಗಿದೆ ಹಾಗೂ ವಸ್ತುವಿನ ಆಯ್ಕೆಯಲ್ಲಿ ಏಕತೆಯಿದೆ. 'ಮುರಿಗಾ ತಾರಾವಳಿ'ಯು 'ಆವಂತಾನಿದರೊಳ್ಮನುಷ್ಯನುತಿಭಾವಾದಿಕ್ಕಮಂ ಮಾಳ್ಪವಂ' ಎಂಬ ಶಾರ್ದೂಲ ವಿಕ್ರೀಡಿತ ವೃತ್ತದಿಂದ ಆರಂಭವಾಗುತ್ತದೆ.

ಬಣ್ಣಿಸಲಳವೆನಿಮ್ಮಯಜಯಶೀಲಮು
ಕ್ಕಣ್ಣ ಮುರಿಗೆಯ ಶ್ರೀಶಾಂತವೀರೇಶ್ವರ
ಬಣ್ಣಿಸಲಳವೆ ನಿಮ್ಮ -||

ಎಂಬ ಪಲ್ಲವಿಯೊಂದಿಗೆ ಕೃತಿಯ ಆರಂಭವಾಗಿ ೧೧ ರಿಂದ ೨೧ ಪಾದಗಳನ್ನೊಳಗೊಂಡ ೨೭ ನುಡಿಗಳು ರಗಳೆ ರೂಪದಲ್ಲಿವೆ. ಪ್ರತಿನುಡಿಯಲ್ಲಿಯೂ ಆದಿ ಪ್ರಾಸ ನಿತ್ಯವಾಗಿದೆ. ಕೊನೆಯ ನುಡಿಯಲ್ಲಿ 'ಶಿವಲಿಂಗೇಶ' ಎಂಬ ಅಂಕಿತವಿದೆ. ಕೃತಿಯ ಅಂತ್ಯದಲ್ಲಿ ಫಲಶ್ರುತಿಯನ್ನೊಳಗೊಂಡ ಮತ್ತೊಂದು ಶಾರ್ದೂಲ ವಿಕ್ರೀಡಿತ ವೃತ್ತವಿದೆ.

ಮುದದೋಳ್ನಿಮ್ಮ ಮಹತ್ವ ಸನ್ನುತಿಯನಾವಂ ಭಕ್ತಿಯಿಂದೋದುವಂ
ಮದನಾ ರಾಶಿಯವಂಗೆ ಭೂರಿಸುಖಮಂ ಕೊಟ್ಟಳ್ಕರಿಂನೋಡಿನಿ

ನ್ನದರೊಳ್ಪಿಂಮಿಗೆ ರಕ್ಷಿಸೈದಯದೆ ದಾಕ್ಷಿಣ್ಯಾಬ್ಧಿ ಪೂರ್ಣಾಬ್ಜನೇ
ತ್ರಿದಶಾದಿತ್ಯ ಕಿರೀಟ ಘಟ್ಟಿತಪದ ಶ್ರೀಶಾಂತವೀರೇಶ್ವರಾ||

'ಮುರಿಗೆ ತಾರಾವಳಿ'ಯ ವಸ್ತು ಚಿತ್ರದುರ್ಗ ಬೃಹನ್ಮಠದ ಶೂನ್ಯಪೀಠದ ಪ್ರಥಮ ಗುರುಗಳಾದ ಶ್ರೀಶಾಂತವೀರೇಶ್ವರರ ವ್ಯಕ್ತಿತ್ವವನ್ನು ಕುರಿತದ್ದಾಗಿದೆ. ಶ್ರೀಗಳ ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಪರಿಸರ ಇತ್ಯಾದಿ ಲೌಕಿಕ ಜೀವನದ ವಿವರಗಳು ಇದರಲ್ಲಿ ದೊರೆಯದಿದ್ದರೂ ಅವರ ಪ್ರಭಾವೀ ವ್ಯಕ್ತಿತ್ವದ ಬಹುಮುಖ ಪರಿಚಯ ಸಿಗುತ್ತದೆ. ಷಟ್‌ಸ್ಥಲ ಮಾರ್ಗಬೋಧಿಸಲು ತೋಂಟದ ಸಿದ್ಧಲಿಂಗಯತಿಗಳು ಅನುಸರಿಸಿದ ಮಾರ್ಗದಲ್ಲಿ ಕಟ್ಟಿಗೆಹಳ್ಳಿಸಿದ್ಧಲಿಂಗರು, ತರುವಾಯ ಅದೇ ಕ್ರಮದಲ್ಲಿ ಮುರಿಗಾಶಾಂತವೀರರು ಲೋಕಕಲ್ಯಾಣಕ್ಕಾಗಿ ಸಂಚಾರ ಹೊರಟಿರುತ್ತಾರೆ. ಅವರನ್ನು ಕಂಡ ಜನರು ಆತನನ್ನು 'ಅಲ್ಲಮನೋ' 'ದಧೀಚನೋ', 'ರೇಣುಕನೋ', 'ಸದಾನಂದನೋ' ಎಂದು ಬೆರಗಾಗುತ್ತ ಆಶ್ಚರ್ಯದಿಂದ ನೋಡುತ್ತಿದ್ದರಂತೆ.

ಗುರುಕುಲ ತಿಲಕ ಸುಧರ್ಮಪತಾಕ ಸಿಂ
ಧುರಮುಖ ಗುಹಮುಖ ಗಣಸಖ ನತಲೇಖ
ವರ ವಾರಿಜಾಕ್ಷಾದಿನುತಿಗತಮಂಗಳ
ಚರಿತ ಚರಾಚರ ಪಾಲಕ ಪಾವನ
ಕರ ಕರುಣಾರ್ದ್ರಕಟಾಕ್ಷವಿಬುಧ ಪಕ್ಷ
ಕರಣ ವಿಜಯ ಕಾಲ ಹರ ಹರಿಣಾಂಕಬಂ
ಧುರವದನಾಂಬುಜ ಭಕ್ತಾಳಿ ಸುರಭೂಜ

ಎಂದು ಅನೇಕ ರೀತಿಯಲ್ಲಿ ಶ್ರೀಶಾಂತವೀರರ ಉಜ್ವಲ ವ್ಯಕ್ತಿತ್ವವನ್ನು ಗುಣ ವಿಶೇಷಣಗಳ ಮೂಲಕ ಪರಿಚಯಿಸುತ್ತಾನೆ. ನಂತರದಲ್ಲಿ ಶಾಂತವೀರರು ಮೆರೆದ ಒಂದೊಂದು ಪವಾಡಗಳನ್ನು ಅವರಿಗಿರುವ ವೇದ, ಆಗಮ, ಪುರಾಣ, ಉಪನಿಷತ್ತುಗಳ ಆಳವಾದ ವಿದ್ವತ್ತನ್ನು ಶೃತಪಡಿಸುವ ಪ್ರಸಂಗಗಳು, ಅನೇಕ ರಾಜರುಗಳೊಂದಿಗಿನ ಸಂಬಂಧ, ಸಾಮಾಜಿಕ ಕಳಕಳಿಗಳನ್ನು ವಿವರಿಸುತ್ತಾ ಹೋಗುತ್ತಾರೆ. ಧರ್ಮ ಸಮಾಜಗಳ ರಕ್ಷಣೆಯ ಬಗೆಗೆ ಹೆಚ್ಚಿನ ಕಾಳಜಿಯುಳ್ಳ ಅವರು ಸದ್ಧರ್ಮದ ಪ್ರತಿಪಾದನೆಗಾಗಿ, ಬೋಧನೆಗಾಗಿ ಕುವಾದಿಗಳ ಮೇಲೆ ವಾದಿಸಬೇಕಾದ ಪರಿಸ್ಥಿತಿ ಆಗ ಸಾಮಾಜಿಕ ನೆಲೆಯಲ್ಲಿದ್ದಿತು. ಸ್ವಮತೀಯರ ಜೊತೆಗೆ ಒಮ್ಮೆ ಮೈಸೂರು ಅರಸರ ಆಸ್ಥಾನದಲ್ಲಿ ವಾದಿಸಬೇಕಾದ ಸಂದರ್ಭ ಒದಗಿತು. ಇದಕ್ಕೆ ಕಾರಣ ಇಷ್ಟಲಿಂಗದ ಗೋಳಕವು ಪೀಠದಿಂದ ಸಡಿಲಿ ಮೇಲೆದ್ದು ಬಂದಿರಲು, ಆಗ ಕೆಲವು ಕುಟಿಲ ಸ್ವಭಾವದವರು ಈ ರೀತಿ ಇಷ್ಟಲಿಂಗದ ಗೋಳಕವು ನಾಳದಿಂದ ಬೇರ್ಪಡಬಾರದು, ಬೇರ್ಪಟ್ಟರೆ ಇಷ್ಟಲಿಂಗಧಾರಿಯು ಪ್ರಾಣವನ್ನು ಬಿಡಬೇಕು, ಇದೇ ಧರ್ಮದ ನಿಯಮ ಎಂದು ಮೈಸೂರಿನ ರಾಜರುಗಳಾದ ದೊಡ್ಡದೇವರಾಜ, ಚಿಕ್ಕದೇವರಾಜರ ಆಸ್ಥಾನದವರೆಗೂ ದೂರು ಒಯ್ಯುತ್ತಾರೆ. ಆಗ ಶ್ರೀಶಾಂತವೀರರು ಆಸ್ಥಾನದವರೆಗೆ ಹೋಗಿ 'ಶಿವನಿಗೂ-ಶಕ್ತಿಗೂ ಭೇದಾ

ಭೇದವಿದ್ದು, ಅಗಲುವುದು-ಕೂಡುವುದು, ಕೂಡುವುದು-ಅಗಲುವುದು' ಈ ರೀತಿಯ ಶಕ್ತಿ ಚಾಲನೆ ಇರುತ್ತದೆ. ಇದರಿಂದಲೇ ಜಗತ್ತಿನ ಉತ್ಪತ್ತಿ ಎಂದು ಶಾಸ್ತ್ರ ಸಮ್ಮತವಾಗಿ ಕುವಾದಿಗಳ ವಾದವನ್ನು ಖಂಡಿಸಬೇಕಾಯಿತು. ಅವರ ತರ್ಕಬದ್ಧವಾದ ವಾದಕ್ಕೆ ಅರಮನೆಯ ವಿದ್ವಾಂಸರು ತಲೆದೂಗಿದರು. ಅವಮಾನಿತರಾದ ಕುಟಿಲ ವಿರಕ್ತ ಮೂರ್ತಿಗಳು 'ಕಣ್ಣು ಹೋಗಲಿ' 'ನಾಲಿಗೆ ಸೇದಿಹೋಗಲಿ' ಎಂದು ಮಾಟ ಮಾಡಿಸಿದರು. ಈ ಯಾವ ಕಾಟಗಳಿಗೂ ಜಗ್ಗದೆ ಶಾಂತವೀರರೂ ಅವರನ್ನು ಮೀರಿ ನಿಂತರು(ಮು.ತಾ.ಪದ. ೩೨ರಿಂದ೭) ಇಲ್ಲಿ ನಡೆದ ವಾದ-ವಿವಾದ ಅನ್ಯಮತೀಯರ ಜೊತೆಯಲ್ಲಲ್ಲ ಸ್ವ ಮತೀಯರ ಜೊತೆಯಲ್ಲೇ, ಅಂದರೆ ಆ ಕಾಲದಲ್ಲಿ ಗುರು-ವಿರಕ್ತರ ನಡುವೆ ಸ್ವ ಪ್ರತಿಷ್ಠೆಯ ಹೋರಾಟ ಪರಾಕಾಷ್ಠತೆಗೆ ತಲುಪಿ, ವೀರಶೈವ ಸಮಾಜವು ಒಡೆದು ಅನೇಕ ಪಂಗಡಗಳಾಗಿರುವುದು ಕಂಡುಬರುತ್ತದೆ. ಈ ಗುರು-ವಿರಕ್ತರ ಪರಸ್ಪರ ಕಿತ್ತಾಟಗಳ ನಂಜು ಸ್ಫೋಟಗೊಂಡು ಅದು ಇಡೀ ಸಮಾಜವನ್ನು ಆವರಿಸಿಕೊಳ್ಳುವುದನ್ನು ಅರಿತ ಮುರಿಗಾ ಶಾಂತವೀರರು ಅದನ್ನು ತಪ್ಪಿಸಲು ಹೋರಾಡಿದರು.

ಸದಾಚಾರ, ಸತ್ ಶೀಲ, ಸನ್ನಡತೆಗಳು ಜಂಗಮರಲ್ಲಿ ಅಪೇಕ್ಷಣೀಯವಾದ ಮುಖ್ಯ ಗುಣಗಳು, ಇವುಗಳಿಲ್ಲದೆ ಚಂಚಲ ಮನಸ್ಸಿನಿಂದ ವಿಷಯ ವಾಸನೆಗಳಿಗೆ ಬಲಿಯಾದರೆ, ಉತ್ತಮಿಕೆಯನ್ನು ಮರೆತು ಅನೈತಿಕ ಜೀವನ ನಡೆಸಿದರೆ ಅದನ್ನು ಸಮಾಜ ಖಂಡಿಸಬೇಕು. ಇಲ್ಲವೆ ಧರ್ಮಮೂರ್ತಿಗಳು ತಿದ್ದಬೇಕು ಅಂತಹ ಪ್ರಸಂಗವೊಂದು ಶ್ರೀಶಾಂತವೀರರಿಗೆ ಒದಗಿ ಬಂದಿರುವುದು ತಾರಾವಳಿಯಿಂದ ತಿಳಿದು ಬರುತ್ತದೆ. 'ಜಂಗಮನೋರ್ವನು ಕಳ್ಳತನದಿಂದ ಅಂತ್ಯಜಳ ಕೂಡ ಬಾಳುವೆ ನಡೆಸುತ್ತ ಮಾನ ಮರ್ಯಾದೆ ಬಿಟ್ಟು ಅವಳ ಬೆನ್ನ ಹಿಂದೆಯೇ ಕೆರ ಮೂಳೆಗಳನ್ನು ಹೊತ್ತುಕೊಂಡು ನಡೆದಾಗ, ಅವನಂತೆಯೇ ಇನ್ನೊಬ್ಬ ಜಂಗಮ ಧರ್ಮಬಾಹಿರ ಸಂಬಂಧವನ್ನಿರಿಸಿಕೊಂಡು ದುರಾಚಾರದಲ್ಲಿ ತೊಡಗಿದಾಗ ಇವರಿಬ್ಬರ ನೈತಿಕ ಪತನವನ್ನು ಕಂಡೂ ಕಾಣದಂತಿದ್ದ ಹಿರಿಯ ಚರಂತಿಗಳ(ಸ್ವಾಮಿ) ವರ್ತನೆಯನ್ನು ನೋಡಿ, ಆ ಮೂವರನ್ನು ಕರೆಯಿಸಿ ಅವರ ದುರ್ನಡತೆಯನ್ನು ಖಂಡಿಸಿದರು. ಇದರಿಂದ ಪರಿವರ್ತನೆಗೊಂಡ ಅವರು ತಪ್ಪನ್ನು ಮನ್ನಿಸುವಂತೆ ಗುರುಗಳ ಪಾದಕ್ಕೆ ನಮಸ್ಕರಿಸುತ್ತಾರೆ. (ಪದ.೮)

ಭವಿಗೆ ಲಿಂಗಧಾರಣೆ ಮಾಡುವುದು ಕ್ರಮವೇ? ಈ ಸಮಸ್ಯೆ ಉದ್ಭವವಾದದ್ದು ಶ್ರೀಗಳು ಲಿಂಗಧಾರಣೆ ಹೊಂದಿದ ಭಕ್ತರ ಮನೆಗೆ ಬಿನ್ನಹ ಸ್ವೀಕರಿಸಲು ಹೋದಾಗ, ಬಣಜಿಗನೋರ್ವನು ಸುಂದರಿಯಾದ ಕೊರವಿಯೋರ್ವಳಿಗೆ ಲಿಂಗಧಾರಣೆ ಮಾಡಿಸಿ ಅವಳೊಡನೆ ಬಾಳುವೆ ಮಾಡುತ್ತಿದ್ದನು. ಈ ದಂಪತಿಗಳು ಶ್ರೀಗಳವರನ್ನು ತಮ್ಮ ಮನೆಗೆ ಬಿನ್ನಹಕ್ಕೆ ಕರೆದರು. ಬಿನ್ನಹಕ್ಕೆ ಹೋದ ಗುರುಗಳ

ಕ್ರಮವನ್ನು ಶಾಸ್ತ್ರಸಮ್ಮತವಲ್ಲವೆಂದು ಕುಹಕಿಗಳು ಹುಯಿಲೆಬ್ಬಿಸಿದರು. ಶಾಂತವೀರರು ವಿವರಣೆ ನೀಡ ಹೊರಟರೆ ಕೇಳದ ಆ ಜನರು ಹರಪನಹಳ್ಳಿಯ ದೊರೆ ಬಸವೋತ್ತಮನವರೆಗೆ ದೂರೊಯ್ದರು. ದೊರೆ ಆ ಜಳ್ಳುವಾದವನ್ನು ತಳ್ಳಿಹಾಕಿ ಗುರುಗಳ ವಿಶಾಲವಾದ, ಉದಾರವಾದ ಮನಸ್ಸು ಮತ್ತು ಬಸವಾದಿ ಶರಣರು ಬೋಧಿಸಿದ ತತ್ತ್ವಗಳನ್ನು ಸಾಕಾರಗೊಳಿಸುವ ದೃಷ್ಟಿಯಿಂದ 'ಲಿಂಗಧಾರಣೆ ಮಾಡಿಸಿಕೊಂಡ ಅಂತ್ಯಜೆಯೋರ್ವಳು ಹೊಸ ಬದುಕಿಗೆ ಪಾದಾರ್ಪಣೆ ಮಾಡಿದ ಈ ದಂಪತಿಗಳನ್ನು' ಪ್ರೋತ್ಸಾಹಿಸುವುದರ ಮೂಲಕ ನಡೆದು ತೋರಿಸಿದ್ದಾರೆ ಎಂದು ಸಮರ್ಥಿಸಿಕೊಳ್ಳುತ್ತಾನೆ. (ಪದ-೧೫)

ಮಹಾಪುರುಷರೂ ವಿಧಿಯ ಅಣಕವೆಂಬಂತೆ ಒಮ್ಮೊಮ್ಮೆ ಲೋಕಾಪವಾದಕ್ಕೆ ಗುರಿಯಾಗುವುದುಂಟು. ಶಾಂತವೀರರು ಇದಕ್ಕೆ ಅಪವಾದವೇನಲ್ಲ. ಅವರ ಪ್ರಸಿದ್ಧಿಯನ್ನು ಸಹಿಸದ ಕೆಲವರು ಶಾಂತವೀರರ ಮೇಲೆ ಕೊಲೆ ಅಪವಾದ ಹೊರಿಸಿದರು. ಪರಮ ಭಕ್ತನಾದ ಹರಪನಹಳ್ಳಿಯ ದೊರೆ ಬಸವೋತ್ತಮನು ಆ ಕೊಲೆಯ ಆರೋಪವನ್ನು ತಾನೇ ಹೊತ್ತುಕೊಂಡು ಗುರುಗಳನ್ನು ರಕ್ಷಿಸಲು ಮುಂದಾದನು. ಈ ದೂರು ಗದುಗಿನ ಡಾಕಿನ ದೇಸಾಯಿಯವರೆಗೆ ಹೋಯಿತು. ಕೂಲಂಕುಷವಾಗಿ ತನಿಖೆ ಮಾಡಿದ ದೇಸಾಯಿಯು ಸ್ವಾಮಿಗಳು ನಿರಪರಾಧಿಗಳೆಂದು ಅವರನ್ನು ಗೌರವಿಸಿದರು(ಪದ-೧೬). ಕವಿಯು ಇಂತಹ ಸಾಮಾಜಿಕ ವಿಷಯಗಳ ಜೊತೆ ಜೊತೆಯಲ್ಲೇ ಅತ್ಯಂತ ಮಹತ್ವದ ಚಾರಿತ್ರಿಕ ಸಂಗತಿಗಳನ್ನು, ಮಹಾಗುರುವನ್ನಾಶ್ರಯಿಸಿ ಧನ್ಯರಾಗಿರುವ ರಾಜರುಗಳ ಗುರುಭಕ್ತಿಯನ್ನು ವಿವರಿಸುತ್ತಾನೆ.

ಮೈಸೂರು ಸಂಸ್ಥಾನದ ರಾಜರುಗಳಾದ ದೊಡ್ಡದೇವರಾಜ, ಚಿಕ್ಕದೇವರಾಜರ ಮೇಳದ ಸಭೆಯಲ್ಲಿ ಇಷ್ಟಲಿಂಗ ವಿಚಾರವಾಗಿ ಸಂಸ್ಕೃತ ಹಾಗೂ ಕನ್ನಡದಲ್ಲಿ ನಿರರ್ಗಳವಾಗಿ ವಾದ ಮಾಡಿ, ಶಿವಧರ್ಮದ ಅರಿವನ್ನು ತಿಳಿಸಿ ಜ್ಞಾನಿಗಳ, ರಾಜರ ಹೊಗಳಿಕೆಗೆ ಶ್ರೀಗಳು ಪಾತ್ರರಾದುದು, (ಪದ ೩ ರಿಂದ ೭) ಭಾಗೇಯನಗರದ (ಭಾಗಾನಗರಗೋಲಕೊಂಡ) ದೊರೆಯಾದ ಕುತುಂಶಾಪಾಚ್ಛ (ಕುತುಬ್ ಬಾದ್ ಷಾ)ನು ತನ್ನ ಪ್ರೀತಿಯ ಆನೆಯನ್ನು ರಕ್ಷಿಸಿದುದಕ್ಕೆ ಶ್ರೀಗುರು ಪಾದದಲ್ಲಿ ಏಳುನೂರು ರೂಪಾಯಿಗಳನ್ನು ಪಾದ, ಕಾಣಿಕೆಯಾಗಿ ಅರ್ಪಿಸಿ, ಶ್ರೀಗುರುವನ್ನು ತೇರಿನ ಮೇಲೆ ಕುಳ್ಳಿರಿಸಿ ರಾತ್ರಿಯೆಲ್ಲ ಮೆರವಣಿಗೆ ಮಾಡಿಸಿದುದು(ಪದ ೧೧ರಿಂದ೧೩), ಔರಂಗಜೇಬನ ದುಷ್ಕೃತ್ಯಕ್ಕೆ ಒಳಗಾಗಿ ಪತನವಾಗುತ್ತಿದ್ದ ಹಿಂದೂ ಸಾಮ್ರಾಜ್ಯ ರಕ್ಷಣೆಗಾಗಿ ಸದಾ ಹೋರಾಡುತ್ತಿದ್ದ ಛತ್ರಪತಿ ಶಿವಾಜಿ ಮಹಾರಾಜನ ನೊಂದ ಹೃದಯಕ್ಕೆ ಉಪದೇಶಗೈದುದು. ಹೀಗೆ ಸ್ವಧರ್ಮೀಯರ ಜೊತೆಗೆ ಅನ್ಯಧರ್ಮೀಯರಿಂದಲೂ ಹೊಗಳಿಕೆಗೆ ಪಾತ್ರರಾಗಿದ್ದಾರೆ. ಲಿಂಗ ಸಂಸ್ಕಾರ ಹೊಂದಿ ಸತಿ ಪತಿಗಳಾಗಿ ಕೈಹಿಡಿದು ಸದಾಚಾರದಿಂದ ಬಾಳುತ್ತಿದ್ದ ಗದುಗಿನ ಬಣಜಿಗನೊಬ್ಬನ ಭಕ್ತಿಯ ಬಿನ್ನಹವನ್ನು ಸ್ವೀಕರಿಸಿದುದು, ಗದುಗಿನ ಬಣಜಿಗರು

ಎದುರಾದಾಗ ಅವರ ಗರ್ವಭಂಗ ಮಾಡಿ ಶಿವಧರ್ಮದ ನಿಲುವಿನ ನೈಜ ನಿರೂಪಣೆ ಮಾಡಿದುದು, ಖೂನಿಯ ಆರೋಪ ಹೊರಿಸಿದ ಸಿಂಗೇರಿಯ ದುಷ್ಟರನ್ನು ಮೆಟ್ಟಿ ಗದುಗಿನ ಡಾಕಿನ ದೇಸಾಯಿಯಿಂದ ವಿಜಯ ಪ್ರಶಸ್ತಿ ಸ್ವೀಕರಿಸಿದುದು, ಹರಪನಹಳ್ಳಿಯ 'ಬಸವಂತ(ಬಸವೋತ್ತಮ) ಭೂಪಾಲನೂ' ಈ ಸಂದರ್ಭದಲ್ಲಿ ನೆರವಾಗಿ ಗುರುಭಕ್ತಿಯನ್ನು ಸಲ್ಲಿಸಿ ಮೆರೆದುದು (ಪದ೧೫-೧೬), ಸುಧಾಪುರ (ಸುಧಾನಗರ-ಸೋದೆ) ಅರಸನಾದ 'ಸದಾಶಿವರಾಜನ' (ಕ್ರಿ.ಶ.೧೬೭೪-೯೭) ಭಕ್ತಿಗೊಲಿದು ಒಂದು ವರ್ಷಕಾಲ ಅರಮನೆಯಲ್ಲಿದ್ದು, ಆತನ ಭಕ್ತಿಗೆ ಮೆಚ್ಚಿ ಅನುಗ್ರಹಿಸಿದರು(ಪದ ೧೭). 'ಶಿವಧರ್ಮಪಾಲ' 'ಶಿವದ್ವಿಜ ಕುಲದೀಪ' ಎನಿಸಿದ ಗುತ್ತೊಳಲಪುರ ವಾಸಿಯಾದ 'ಹನುಮರಾಯನ' ಬಿನ್ನಹದಂತೆ ಅಲ್ಲಿ ತಂಗಿದ್ದು, ಅಲ್ಲಿಂದ ಫಣಿಪುರ(ಹಾವನೂರು)ದ ದೊರೆಯಾದ 'ಪ್ರವೀರ ಭೂಪತಿಯ' ಇಷ್ಟಾರ್ಥವನ್ನು ಪೂರೈಸಿ, ಮುಂದೆ 'ಲಕ್ಷ್ಮೀಶ್ವರದ ಕಾನಭೂಮೀಶನ' ಪುತ್ರನಾದ 'ಕೆಂಚಣಗೌಡ'ನ ಭಕ್ತಿಯ ಆಹ್ವಾನವನ್ನು ಮನ್ನಿಸಿ ಅವರ ಮನೆಯಲ್ಲಿ ಶಿವರಾತ್ರಿ ಪರ್ವವನ್ನಾಚರಿಸಿ, ಆತನಿಗೆ ಸರ್ವಸಂಪದವನ್ನು ಕರುಣಿಸಿದರು(ಪ.೧೮). ಅಲ್ಲಿಂದ ಬೇತೂರು ಮತ್ತು ಅಣಜಾಪುರದ ಭಕ್ತರ ಬಿನ್ನಹವನ್ನು ಅಂಗೀಕರಿಸಿ, ಕಳ್ಳಹುಣಿಸೆ(ಚೋರತಿಂತ್ರಿಣಿ ಈಗಿನ ಲಕ್ಷ್ಮೀಸಾಗರ) ಗ್ರಾಮದ ದೇವಣಗೌಡರ ಗೃಹದಲ್ಲಿ ಭಕ್ತಿಯ ಬಿನ್ನಹವನ್ನು ಸ್ವೀಕರಿಸಿ ಸುಖದಿಂದಿದ್ದರು(ಪ.೨೦).

ಇತ್ತ ಶ್ರೀಗಳವರ ಸವಾರಿ ಕಳ್ಳಹುಣಿಸೆ ಗ್ರಾಮಕ್ಕೆ ಬರುತ್ತಿರುವ ವಾರ್ತೆಯನ್ನು ಕೇಳಿದ 'ಮೆದಕೇರಿ ಕಸ್ತೂರಿ ಬರಮಭೂಪಾಲ'ನು, ತನ್ನ ಪಟ್ಟಣವನ್ನು ಮಂಗಲಕರವಾಗಿ ಶೃಂಗಾರ ಮಾಡಿಸಿ, ಹಸ್ತಿ-ಅಶ್ವ-ರಥ-ಪದಾತಿ ಸೇನೆಗಳ ಸಮೇತ ಮನ್ನೆಯರು, ಮಂತ್ರಿಗಳು, ವಝೀರರು ಕವಿಗಳು ಮತ್ತು ವಂದಿಮಾಗಧರು ಇವರೊಡಗೂಡಿ ದಾರಿ ನಡೆದು ಶ್ರೀಗುರುಗಳಿದ್ದ ಗ್ರಾಮಕ್ಕೆ ತೆರಳಿ, ಫಲ-ಪುಷ್ಪಗಳೊಂದಿಗೆ ದುರ್ಗಕ್ಕೆ ಆಹ್ವಾನ ನೀಡಿದನು. ಶಿವಭಕ್ತಿ ಮಾರ್ಗ ಉದ್ಧಾರ ಕಾರ್ಯದಲ್ಲಿ ಆಸಕ್ತರಾದ ಶ್ರೀಗಳು ಚಿಂಮುಲಗಿರಿಯ ದುರ್ಗಕ್ಕೆ ಪ್ರಯಾಣ ಬೆಳೆಸುತ್ತಾರೆ. ಆಗ ಶ್ರೀಗಳು 'ಎಲೈ ಭಕ್ತರಿರಾ! ನಮ್ಮೀ ಬೆಡಗಿನ ಮಾತನ್ನಾಲಿಸಿರಿ. ನಾವು ದುರ್ಗದ ಮಹಾಜ್ಯೋತಿಯ ಶಿಖರದ ಮೇಲೆ ಖ್ಯಾತಿವೆತ್ತಿರ್ಪ ನೆಲ್ಲಿಯಕಾಯ ಸಿದ್ಧೇಶ್ವರನ ಗವಿಯಲ್ಲಿ ಬಂದು ನಿಲ್ಲುವೆವು. ನೀವೆಲ್ಲರೂ ಮುಂದಿನದನ್ನು ನೀತಿಯಿಂದಿದ್ದು ಕಟ್ಟ ಕಡೆಯಲ್ಲಿ ನೋಡಿರಿ' ಎಂದು ಅಪ್ಪಣೆ ಮಾಡಿದರು. ಈ ಬೆಡಗಿನ ಮಾತು ಅರ್ಥವಾಗದೇ ಹೋದರೂ ಚಿತ್ರದುರ್ಗಕ್ಕೆ ಆಗಮಿಸಿ ಭರಮಭೂಪಾಲನಿಗೆ ಕೃಪೆದೋರಿ ನೆಲ್ಲಿಕಾಯ ಸಿದ್ಧೇಶ್ವರನ ಗವಿಯಲ್ಲಿ ನಿಲ್ಲುತ್ತಾರೆ. ರಾಜನು ಭಕ್ತಿಯಿಂದ ನಿರ್ಮಿಸಿದ ಬೆಟ್ಟದ ಮೇಲಿನ ವಿಶಾಲವಾದ ೩೬೦ ಅಂಕಣದ ಶ್ರೀಮಠಕ್ಕೆ ಪ್ರವೇಶ ಮಾಡಿಸಿ, ಅಲ್ಲಿ ಸಿದ್ಧಗೊಳಿಸ ಲಾಗಿದ್ದ ಉನ್ನತ ಪೀಠದ ಮೇಲೆ ಆಸೀನರಾಗುವಂತೆ ಬೇಡಿಕೊಳ್ಳಲು, ಆ ಪೀಠದ ಮೇಲೆ

ಕುಳಿತುಕೊಳ್ಳುತ್ತಾರೆ. ಅಂದಿನಿಂದ ಶೂನ್ಯಪೀಠದ ಸ್ಥಿರಪಟ್ಟವು ಚಿತ್ರದುರ್ಗದಲ್ಲಿ ನೆಲೆನಿಂತಂತಾಗುತ್ತದೆ (ಪ.೨೩).

ಈ ತಾರಾವಳಿಯು ಮೈಸೂರು ರಾಜರು, ಗೋಲ್ಕೊಂಡದ ಕತುಬ್ ಷಾ, ಶಿವಾಜಿ ಮಹಾರಾಜ, ಹರಪನಹಳ್ಳಿಯ ಬಸವಂತ ಭೂಪಾಲ, ಗದುಗಿನ ಡಾಕಿನ ದೇಸಾಯಿ, ಸೋದೆಯ ಸದಾಶಿವರಾಯ, ಗೊತ್ತಳಪುರದ ಹನುಮರಾಯ, ಹಾವಸೂರಿನ ಪ್ರವೀರಭೂಪತಿ, ಲಕ್ಷ್ಮೇಶ್ವರದ ಕೆಂಚನಗೌಡ, ಬೇತೂರು, ಅಣಜಾಪುರಗಳ ಅಧಿಪತಿಗಳು, ಕಳ್ಳಹುಣಿಸೆ ಗ್ರಾಮದ ದೇವಣಗೌಡ, ಚಿತ್ರದುರ್ಗದ ಭರಮಭೂಪಾಲ ಇಷ್ಟು ಜನ ರಾಜ ಮಹಾರಾಜರ ನಡುವೆ ಮತ್ತು ಶ್ರೀ ಶಾಂತವೀರರ ನಡುವೆ ಇರುವ ಸಂಬಂಧವನ್ನು ಎಳೆ ಎಳೆಯಾಗಿ ಚಿತ್ರಿಸುತ್ತದೆ. ರಾಜ ಪೂಜಿತರಾದ ಇವರು ಹಿಂದೂ-ಮುಸಲ್ಮಾನರೆಲ್ಲರಿಗೂ ಪೂಜ್ಯರಾಗಿ ಭಕ್ತಿಯ ಕೇಂದ್ರ ಬಿಂದುವಾಗಿದ್ದರು. ಈ ಎಲ್ಲ ರಾಜರ ಗುರುಭಕ್ತಿಗಿಂತ ಮಿಗಿಲಾದ ಗುರುಭಕ್ತಿ ಭರಮಭೂಪಾಲನದು. ಈತನು ತನು, ಮನ, ಧನಗಳೆಲ್ಲವನ್ನೂ ಶ್ರೀಗುರುವಿಗೇ ಅರ್ಪಿಸಿಕೊಂಡಿದ್ದನು. ಏಕೆಂದರೆ ಆಡು ಕಾಯುತ್ತಿದ್ದ ಭರಮಣ್ಣನು ಅರಸನಾಗಿ ಭರಮಭೂಪಾಲನಾಗಲು ಕಾರಣ ಶ್ರೀಶಾಂತವೀರರ ದಿವ್ಯ ಕೃಪಾದೃಷ್ಟಿ ಮತ್ತು ಅವರು ಮಾಡಿದ ಸಂಧಾನ ಪ್ರಯತ್ನದ ಫಲ". ಆದುದರಿಂದ ಅರಸನಾದ ಮೇಲೂ ತನಗೆ ನಿತ್ಯವೂ ಒದಗಿಬರುತ್ತಿದ್ದ ಎಡರು ತೊಡರುಗಳ ನಿವಾರಣೆಗೆ ಶ್ರೀಗುರುವನ್ನೇ ಆಶ್ರಯಿಸುತ್ತಿದ್ದನು. ಅದಕ್ಕಾಗಿ ಶಿಷ್ಯನ ಮೇಲಿನ ವಾತ್ಸಲ್ಯಕ್ಕೆ, ಪ್ರತಿನಿತ್ಯ ಇಷ್ಟಲಿಂಗ ತ್ರಿಕಾಲ ಪೂಜೆಯ ಮಂಗಳಾರತಿ ಹಾಡುತ್ತಿದ್ದಾಗ ಈ ಕೆಳಗಿನಂತೆ ರಾಜಾಶೀರ್ವಾದ ಮಾಡಿ ಅನುಗ್ರಹಿಸುತ್ತಿದ್ದರು.

ಶ್ರೀಮದ್ವ್ಯೋಮಸರಿಜ್ಜಟಾಂಘ್ರಿ ಕಮಲ ಪ್ರಖ್ಯಾತ ಭಕ್ತಿಸ್ಥಿರಾ
ಭೂಯತ್ತೇ ಭುವನೈಕನಾಥ ದಯಯಾ ಭೂಪಾಲಚೂಡಾಮಣೇ!||
ಧರ್ಮಾಧರ್ಮವಿಚಾರ ಕೌಶಲಮತೇ! ಶ್ರೀ ಕಾಮಗೇತ್ಯನ್ವಯೋ
ದ್ಧಾಮಾನಂದಸುಧಾಬ್ಧಿ ವರ್ಧನ ಕಳಾಸಂಪೂರ್ಣ ಸೋಮ! ಪ್ರಭೋ!||

ಈ ರಾಜಾಶೀರ್ವಾದವು ಸ್ವತಃ ಕವಿಯ ರಚನೆಯಾಗಿದ್ದರೂ ನಿದರ್ಶನಕ್ಕೆಂಬಂತೆ ಅಜ್ಞಾತ ಕವಿಯೊಬ್ಬರು ಇವರೀರ್ವರ ಗುರುಶಿಷ್ಯ ಸಂಬಂಧವನ್ನು ಅರುಹುವ ಪದ್ಯಗಳು ಈ ಕೆಳಗಿನಂತಿವೆ.

ದಕ್ಷಿಣ ಕೈಲಾಸವೆನಿಪ ಚಿಮ್ಮುಲಗಿರಿ
ಸುಕ್ಷೇತ್ರದಲ್ಲಿ ನೆಲಸಿ ಶರಣ
ರಕ್ಷ ಕಣ್ಣಪ್ಪನ ಕುಲದೀಪ ಜಂಗಮ
ಪಕ್ಷ ಶ್ರೀಬ್ರಹ್ಮ ಭೂಪಾಲ ಎಂದನಿಗೆ||
ಧರೆಯೊಳತ್ಯಧಿಕ ಚಿಮ್ಮುಲಗಿರಿದುರ್ಗದ
ದೊರೆಯಾದ ಬ್ರಹ್ಮ(ಬರಮ) ಭೂಪಾಲನಿಗೆ
ವರವನೀವುತ ಶಿವಲಿಂಗವಾಗಿಯೆನಿಂದೆ
ಪರಮ ಶ್ರೀಗುರು ಮುರಿಗೆಯ ಶಾಂತವೀರೇಶ|

ಹೀಗೆ ತಾರಾವಳಿಯು ಚಿತ್ರದುರ್ಗದ ಅರಸು ಬಿಚ್ಚುಗತ್ತಿ ಭರಮಪ್ಪ ನಾಯಕನಿಗೂ (ಕ್ರಿ.ಶ.೧೬೮೯-೧೭೨೦) ಶಾಂತವೀರರಿಗೂ ಇದ್ದ ಮಧುರ ಬಾಂಧವ್ಯದ ಬಗೆಗೆ, ಬೆಟ್ಟದ ಮೇಲಿನ ವಿಶಾಲಮಠ ಹಾಗೂ ಈಗಿನ ಬೃಹನ್ಮಠಗಳನ್ನು ಬರಮನಾಯಕ ಕಟ್ಟಿಸಿಕೊಟ್ಟ ವಿವರಗಳ ಮೇಲೆ ಬೆಳಕು ಚೆಲ್ಲುತ್ತದೆ. ಮುರಿಗಾಶಾಂತವೀರರು ಚಿತ್ರದುರ್ಗಕ್ಕೆ ಆಗಮಿಸುವ ಕಾಲಕ್ಕಾಗಲೇ ಮೈಯಚರ್ಮವೆಲ್ಲ ಸುಕ್ಕಲುಗಟ್ಟಿಕೊಂಡು ಶತಾಯುಶಿಗಳಾಗಿದ್ದರು ಹಾಗೂ ತಮ್ಮ ಉತ್ತರಾಧಿಕಾರಿಯನ್ನಾಗಿ ಇಮ್ಮಡಿ ಮುರಿಗಾಗುರುಸಿದ್ಧರನ್ನು ಮತ್ತು ಮರು ಉತ್ತರಾಧಿಕಾರಿಗಳನ್ನಾಗಿ ಸೋದೆಯ ಚನ್ನಬಸವ ದೇವರನ್ನು ನೇಮಿಸಿಕೊಂಡು

..ಸ್ವಾಭಾನು ಸಂವತ್ಸರದಧಿಕ ವಾ
ದನು ಪಮ ಶ್ರಾವಣ ಮಾಸದ ಬಿದಿಗೆ ಚಂ
ದ್ರನವಾರದುರೆ ಮೂರುವರೆ ತಾಸಿನಿರುಳೊಳ
ವನಶೀಲ ಶಿವಲಿಂಗ ದೋಳಗ್ನಿಯಗ್ನಿಯೊ
ಳನುನಯದಿಂ ಬೆರೆದಂತೆ ಬೆರೆಯೆ.....||ಪ.೨೫||

ಸ್ವಭಾನು ಸಂ|| ಅಧಿಕ ಶ್ರಾವಣ ಶು|| ದ್ವಿತಿಯಾ ಸೋಮವಾರದ ರಾತ್ರಿ ಮೂರುವರೆ ಗಂಟೆಯಲ್ಲಿ ಎಂದರೆ ತಾ.೫-೭-೧೭೦೩ ರಂದು ಲಿಂಗೈಕ್ಯರಾದುದು ಈ ತಾರಾವಳಿಯಿಂದ ತಿಳಿದುಬರುತ್ತದೆ. ಚಿತ್ರದುರ್ಗದ ಬೃಹನ್ಮಠ ಪೀಠ ಪರಂಪರೆಯ ಪ್ರಾಚೀನತೆಯ ಬಗೆಗೆ ನಿಖರವಾಗಿ ಮಾಹಿತಿಯು ತಾರಾವಳಿಯಿಂದ ದೊರೆಯುವುದಲ್ಲದೆ ಇದರಲ್ಲಿ ಪ್ರಸ್ತಾಪಿತವಾಗಿರುವ ಆ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ವಿವರಗಳು ಇತಿಹಾಸದ ಖಚಿತತೆಯ ದೃಷ್ಟಿಯಿಂದ ಅಮೂಲ್ಯವಾದ, ಪೂರಕ ಆಕರ ಸಾಮಾಗ್ರಿಗಳಾಗಿವೆ. ಹೀಗೆ ಈ ತಾರಾವಳಿಯಲ್ಲಿ ಶಾಂತವೀರರ ನೈಜ ಜೀವನದ ಘಟನೆಗಳು ಸರಳವಾಗಿ, ಶಕ್ತಿಯುತವಾಗಿ ಮೂಡಿಬಂದಿವೆ. ಇದನ್ನು ಚಾರಿತ್ರಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಗಮನಿಸಿದಾಗ ಕ್ರಿ.ಶ.೧೬೭೭ರಲ್ಲಿ ಮುರಿಗೆ ಶಾಂತವೀರರು ಸುಲೇಗಾವಿಯಿಂದ ಗದುಗಿಗೆ ಭಕ್ತರ ಸಮೇತ ಹೋಗುವಾಗ ಶಿವಾಜಿಯ ಭೇಟಿ ನಡೆದದ್ದು. ಆತನು ಕರ್ನಾಟಕದ ಮೇಲೆ ಮಾಡಿದ ಆಕ್ರಮಣಕ್ಕೆ ಹೊಸ ಆಕರ ಸಾಮಗ್ರಿಯಾಗಿ ನಿಲ್ಲುತ್ತದೆ. ಇಂತಹ ಐತಿಹಾಸಿಕ ಸತ್ಯ ಸಂಗತಿಗಳನ್ನು ವರದಿ ರೂಪದಲ್ಲಿ ಹೇಳುವ ಈ ಕೃತಿಯು ಚರಿತ್ರೆಯ ಪುನರ್ ನಿರ್ಮಾಣದಲ್ಲಿ ತನ್ನದೇ ಆದ ವಿಶಿಷ್ಟ ಪಾತ್ರವನ್ನು ನಿರ್ವಹಿಸುತ್ತದೆ. ಜೊತೆಗೆ ಶ್ರೀ ಶಾಂತವೀರರ ಲೋಕೋದ್ಧಾರ, ಭಕ್ತೋದ್ಧಾರದ ಕ್ರಮಗಳನ್ನೂ, ಕಾರುಣ್ಯಮಯೀಲೋಕಯಾತ್ರೆಯನ್ನು ಪರಿಚಯಿಸುವುದರ ಜೊತೆಗೆ ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ತೆರೆದಿಡುತ್ತದೆ.

ಸಾಹಿತ್ಯಿಕ ದೃಷ್ಟಿಯಿಂದ ಹಿತಮಿತವಾದ ವರ್ಣನೆ, ಕನ್ನಡ, ಉರ್ದು, ಸಂಸ್ಕೃತ ಭಾಷೆಗಳ ಮಿಶ್ರಣ, ಪ್ರಸಿದ್ಧ ಜಾಣ್ನುಡಿಗಳ ಬಳಕೆಯಿಂದ ಕೃತಿ ವೈಶಿಷ್ಟ್ಯ ಪೂರ್ಣವೆನಿಸಿದೆ. 'ಅಲ್ಲಾ ಖುದಾಜಿ ತುಮಾರೆ

ಬೇಟಾ ಕಾ ಬೇಟ, ಸಲ್ಲಾಮಾಲೀಕುಂ, ಮಾಯಯ್ಯ ಮೀ ಪಾದಸ' ಎಂಬಂತ ಉರ್ದುಭಾಷೆ, 'ಪಂಡಿತಾ ನೋ ವಚನಂ ಸಾವಧಾನೇನ ಮಂಡನಂ ಶ್ರೋತವ್ಯ ಮಧುನಾ ಸಮೀಚೀನ' ಎಂಬ ಸಂಸ್ಕೃತ ಭಾಷೆಯನ್ನು ಬಳಸಿದ್ದಾನೆ. 'ತಾಕಳ್ಳಿ ಹೆರರ ನಂಬುವಳಲ್ಲ', 'ಮೋಟ ಮರ ಗಾಳಿಮಿಂಡ' ಎಂಬ ಜಾಣ್ನುಡಿಗಳು, 'ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡಿದಂತೆ' ಎಂಬ ಉಪಮೆಗಳನ್ನು ಬಳಸುವುದರೊಂದಿಗೆ ಕೃತಿಯ ಸಾಹಿತ್ಯಿಕ ಉದ್ದೇಶವನ್ನು ಪೂರ್ಣಗೊಳಿಸಿದ್ದಾನೆ. ನಮಗೆ ಪ್ರಾಚೀನ ಕಾಲದಿಂದಲೂ ತಿಳಿದು ಬರುವಂತೆ ರಾಜಕೀಯ ಮತ್ತು ಧರ್ಮ ಈ ಎರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಒಂದನ್ನು ಬಿಟ್ಟು ಇನ್ನೊಂದು ಇರಲಾರದು ಎಂಬ ಮಾತು ತಾರಾವಳಿಯಿಂದಲೂ ಸ್ಪಷ್ಟಪಡುತ್ತದೆ. ಏಕೆಂದರೆ ಈ ಕೃತಿಯಲ್ಲಿ ಬರುವ ಅನೇಕ ರಾಜರುಗಳ ಉಲ್ಲೇಖ ಆಗಿನ ಕಾಲದ ರಾಜಕೀಯ ಪರಿಸ್ಥಿತಿಯ ಸ್ಥೂಲ ವಿವರಣೆಯ ಜೊತೆಗೆ ಅರಮನೆ-ಗುರುಮನೆಗಳ ಸಂಬಂಧವನ್ನು ಹೇಳುತ್ತವೆ. ಶಿಷ್ಯನ ಏಳ್ಗೆಗಾಗಿ ಗುರುವು ಶ್ರಮಿಸುವುದು, ಗುರುವಿನ ಕೃಪೆಗಾಗಿ ಶಿಷ್ಯ ತನು-ಮನ-ಧನಗಳನ್ನು ಅರ್ಪಿಸುವುದು ಈ ಕ್ರಿಯೆ ಕರ್ನಾಟಕ ಸಂಸ್ಕೃತಿಯುದ್ದಕ್ಕೂ ಅವಿರತವಾಗಿ ನಡೆದುಬಂದಿದೆ. ಅಂತೆಯೇ ಭರಮಭೂಪಾಲನು ೩೬೦ ಅಂಕಣಗಳ ಬೃಹತ್ ಮಠವನ್ನು ಚಿತ್ರದುರ್ಗದ ಗುಡ್ಡದ ಮೇಲೆ ನಿರ್ಮಿಸಿಕೊಡುತ್ತಾನೆ.

ಪ್ರಭಾವಶಾಲಿಗಳಾದ ತನ್ನ ಗುರುಗಳ ವ್ಯಕ್ತಿತ್ವ ನಿರೂಪಣೆ ಮಾಡುವಾಗ ಎಲ್ಲೂ ಜೋಕೆ ತೂಕ ತಪ್ಪಿಲ್ಲ. ಪವಾಡ ಇಲ್ಲವೆ ಮಹಿಮೆಗಳಿಂದ ಗುರುಗಳ ಹಿರಿಮೆಯನ್ನು ಸಾರಹೊರಟಿಲ್ಲ. ತನ್ನ ಗುರುಗಳೆಂಬ ಕಾರಣಕ್ಕಾಗಿ ಇಲ್ಲದ್ದನ್ನು ಹೇಳುವ ಪ್ರಯತ್ನವನ್ನು ನಡೆಸಿಲ್ಲ. ಹಿತ-ಮಿತ ಚಿತ್ರಣ ಉಚಿತಕ್ಕೆ ತಕ್ಕಷ್ಟು ವರ್ಣನೆ, ಔಚಿತ್ಯ ಮೀರದ ಉಪದೇಶ; ಸಂಸ್ಕೃತ ಭೂಯಿಷ್ಠವಲ್ಲದ ಶೈಲಿ, ಇವುಗಳಿಂದ ಮುರಿಗೆ ತಾರಾವಳಿ ನಮ್ಮನ್ನು ಹೆಚ್ಚು ಆಕರ್ಷಿಸುತ್ತದೆ.[೬]

'ಹಿತ-ಮಿತ-ಆಕರ್ಷಕ ಹಾಗೂ ಐತಿಹಾಸಿಕ ಮತ್ತು ಭಕ್ತಿ ಪ್ರಚೋದಕ ಧರ್ಮಪ್ರಚೋದಕರಾಗಿ ಸರಳ-ಸುಂದರ-ಗಾನಬದ್ಧರೂಪವಾದ ಹಾಡಿನಲ್ಲಿ, ಅರ್ಧ ಘಂಟೆಯ ಒಳಗೇ ಮುಗಿದು ಹೋಗುವಂತಹ ಈ 'ತಾರಾವಳಿ'ಯಲ್ಲಿ ಇಷ್ಟೆಲ್ಲಾ ಘಟನೆಗಳನ್ನು ಮುತ್ತು ಪೋಣಿಸಿದಂತೆ ಜೋಡಿಸಿ ಮಂಡಿಸಿರುವ ಸಾಹಸವು ಸಾಹಿತಿಗಳಿಗೊಂದು ಸವಾಲಿನಂತಿರುತ್ತದೆ. ವಾಚಕರಿಗೊಂದು ಅನುಗ್ರಹ ವೆನಿಸಿರುತ್ತದೆ. ಚರಿತ್ರೆ ನಿರೂಪಣೆಗೊಂದು ಮಾದರಿಯೆನಿಸಿರುತ್ತದೆ.[೭] ಒಟ್ಟಾರೆಯಾಗಿ ಇಷ್ಟು ಸಂಕ್ಷಿಪ್ತವಾಗಿ ಕಿರಿದರಲ್ಲಿ ಹಿರಿಮೆಯನ್ನು ಸಾರಲು ಹೊರಟಿರುವ ಈ ಕೃತಿಗೆ ಕನ್ನಡ ಚಾರಿತ್ರಿಕ ಕೃತಿಗಳಲ್ಲಿ ಒಂದು ವಿಶೇಷ ಸ್ಥಾನವಿದೆ. ಇಂತಹ ಚಾರಿತ್ರಿಕ ಕೃತಿಗಳು ರಚನೆಗೊಂಡಿರುವುದೇ ವಿರಳ. ಓರ್ವ ವ್ಯಕ್ತಿಯ ಜೀವನ ಚಿತ್ರಣವನ್ನು ಐತಿಹಾಸಿಕವಾಗಿ ರಂಜಕವಾಗಿ ಚಿತ್ರಿಸುವುದು ಸುಲಭದ ಮಾತೇನಲ್ಲ. ಎಂ.ಎಸ್.

ಬಸವರಾಜಯ್ಯನವರು ಹೇಳುವಂತೆ 'ಎಲ್ಲಾ ತಾರಾವಳೀಕಾರರ ಮಧ್ಯದಲ್ಲಿ ಅಶ್ವಿನ್ಯಾದಿ ತಾರೆಗಳಲ್ಲಿ ಮಧ್ಯ ತಾರೆಯಾದ ಚಿತ್ರಾ ನಕ್ಷತ್ರದಂತೆ ಚಿತ್ರ ತಮರಾಗಿ ಚೇತೋಹಾರಿಗಳಾಗಿ ತರಳ ತಾರಾವಳೀ ಮಧ್ಯಮ ಮಣಿಯೆನಿಸಿ ವಿರಾಜಿಸುತ್ತಿರುವವರು'. ಎಂದು ಕವಿಯ ಬಗ್ಗೆ ಹೇಳಿದ ಈ ಮಾತು ಅವರ ಕೃತಿಯನ್ನು ಅವಲೋಕಿಸಿದಾಗ ನಿಜವೆನಿಸುತ್ತದೆ. ಸಮಕಾಲೀನನೊಬ್ಬ ಅದರಲ್ಲಿ ಓರ್ವ ಶಿಷ್ಯ ತನ್ನ ಪ್ರಸಿದ್ಧ ಗುರುವಿನ ಬಗೆಗೆ ಬರೆದಿರುವುದು, ಜೊತೆಗೆ ಆ ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ವಿವರಗಳನ್ನೂ ತನ್ನ ಒಡಲಲ್ಲಿರಿಸಿಕೊಂಡಿರುವುದರಿಂದ ಈ ಕೃತಿಯು ಹೆಚ್ಚಿನ ಚಾರಿತ್ರಿಕ ಮಹತ್ವವನ್ನು ಪಡೆಯುತ್ತದೆ.

ಶಬ್ದರತ್ನಾಕರ

ನಿಘಂಟು ಪರಂಪರೆಯು ಕನ್ನಡ ಸಾಹಿತ್ಯದಲ್ಲಿ ಹತ್ತನೆಯ ಶತಮಾನದ ರನ್ನ ಮಹಾಕವಿಯ 'ರನ್ನಕಂದ' ಎಂಬ ಕೃತಿಯಿಂದ ಆರಂಭವಾಗುತ್ತದೆ. ಇದರಲ್ಲಿ ೪೫ ಪದ್ಯಗಳಿದ್ದು ನಾಲ್ಕು ಪಂಚಕ ಮಾಲಾ ವೃತ್ತಗಳು, ನಲವತ್ತೊಂದು ಕಂದಪದ್ಯಗಳು ಇವೆ. ಪ್ರತಿಯೊಂದು ಪದ್ಯವು 'ಕವಿರತ್ನಾ' ಎಂದು ಮುಕ್ತಾಯಗೊಳ್ಳುತ್ತದೆ. ಎರಡನೆಯದಾಗಿ ಕ್ರಿ.ಶ.೧೨೬೦ರಲ್ಲಿದ್ದ ಕೇಶಿರಾಜನು 'ಶಬ್ದಮಣಿದರ್ಪಣ' ಎಂಬ ವ್ಯಾಕರಣ ಗ್ರಂಥ ರಚಿಸಿ 'ರಳ' ಸಹಿತವಾದ ೧೪೧ ಶಬ್ದಗಳಿಗೆ ನಾನಾರ್ಥಗಳನ್ನು, ೯೪೫ ಧಾತುಗಳ ಅರ್ಥವನ್ನು, ೨೩೩ ಪ್ರಾಚೀನ ಕವಿಗಳು ಉಪಯೋಗಿಸಿರುವ ಅರ್ಥವನ್ನು ಹೀಗೆ ಒಟ್ಟು ೧೩೪೯ ಶಬ್ದಗಳಿಗೆ ಅರ್ಥಸೂಚಿಸಲಾಗಿದೆ. ಮೂರನೆಯದಾಗಿ ಕ್ರಿ.ಶ.೧೪೦೦ರಲ್ಲಿ ರಚಿತವಾದ ಕರ್ನಾಟಕ ನಿಘಂಟುವಿನ ಕರ್ತೃ ಯಾರೆಂದು ತಿಳಿದುಬಂದಿಲ್ಲ. ೯೪ ಪದ್ಯಗಳಲ್ಲಿ ವಿವಿಧ ಛಂದಸ್ಸಿನಲ್ಲಿ ಶಬ್ದಗಳ ಅರ್ಥವನ್ನು ಹೇಳಲಾಗಿದೆ. ಇದರಲ್ಲಿ ಮೊದಲ ಸಲ ಕನ್ನಡದಲ್ಲಿ 'ಕೋಶ' ಶಬ್ದಕ್ಕೆ ಬದಲಾಗಿ ನಿಘಂಟು ಎಂಬ ಶಬ್ಧವನ್ನು ಪ್ರಯೋಗಿಸಿದೆ. ಈ ನಿಘಂಟು ಪದ್ಯರೂಪದಲ್ಲಿದ್ದು ೧೪೧೬ ಶಬ್ದಗಳ ಅರ್ಥಗಳನ್ನು ಇಲ್ಲಿ ಪರಿಚಯಿಸಲಾಗಿದೆ.[೯]

ಬೊಮ್ಮರಸನ 'ಚತುರಾಸ್ಯ ನಿಘಂಟು' ಲಿಂಗಮಂತ್ರಿಯ 'ಕಬ್ಬಿಗರ ಕೈಪಿಡಿ' ವಿರಕ್ತ ತೋಂಟದಾರ್ಯನ 'ಕರ್ನಾಟಕ ಶಬ್ದಮಂಜರಿ', ಶೃಂಗಾರ ಕವಿಯ 'ಕರ್ಣಾಟಕ ಸಂಜೀವನಂ ಮತ್ತು ಭಾರತ ನಿಘಂಟು', ಸೂರ್ಯ ಕವಿಯ 'ಕವಿ ಕಂಠಹಾರ' ಎಂಬ ನಿಘಂಟುಗಳ ತರುವಾಯ ಇಮ್ಮಡಿ ಮುರಿಗಾಗುರುಸಿದ್ಧರ 'ಶಬ್ದರತ್ನಾಕರ'ವು ರಚನೆಗೊಂಡಿದೆ. ಶಬ್ದರತ್ನಾಕರ ಹೆಸರೇ ಸೂಚಿಸುವಂತೆ ಶಬ್ದವೆಂಬ ರತ್ನಗಳಿಗೆ ನಾನಾರ್ಥಗಳನ್ನು ಸೂಚಿಸುವ ಒಂದು ಸಾಗರ. ಸಂಸ್ಕೃತ ಶಬ್ದಗಳಿಗೆ ನಾನಾರ್ಥಗಳನ್ನು ಪದ್ಯರೂಪದಲ್ಲಿ ಹೇಳಿರುವ ಒಂದು ಲಘು ನಿಘಂಟು ಶಬ್ದರತ್ನಾಕರ. ಇಲ್ಲಿ ಒಟ್ಟು ೩೦ ಕಂದಪದ್ಯಗಳಿದ್ದು, ಸುಮಾರು

೧೬ ಶಬ್ದಗಳಿಗೆ ನಾನಾರ್ಥಗಳನ್ನು ಸೂಚಿಸಲಾಗಿದೆ. ಪ್ರತಿಪದ್ಯ 'ಶಬ್ದಾಗಮದೊಳ್' ಎಂದು ಮುಕ್ತಾಯವಾಗುತ್ತದೆ. ಒಂದೊಂದು ಶಬ್ದಕ್ಕೆ ವಿವಿಧಾರ್ಥ, ಪರ್ಯಾಯಾರ್ಥ, ನಾನಾರ್ಥಗಳನ್ನು ಸೂಚಿಸುವ ಉದ್ದೇಶ ಈ ಕೋಶದ್ದಾಗಿದೆ. ಒಂದೊಂದೇ ಶಬ್ದವನ್ನು ಎತ್ತಿಕೊಂಡು ಅದರ ನಾನಾರ್ಥಗಳ ಉಲ್ಲೇಖಗಳನ್ನು ಒಂದೆಡೆ ಒಗ್ಗೂಡಿಸಿರುವುದನ್ನು ಇಲ್ಲಿ ಕಾಣುತ್ತೇವೆ.

ಕಮಲಮೆನೆ ತುಂಬಿಯಕ್ಕುಂ
ಕಮಲಮೆನೆ ಬಿಳಿದಕ್ಕುಂ ಹಂಸೆ ಕಣ್ಣುಗಳಕ್ಕುಂ
ಕಮಲಮೆನೆ ಕದನಮಕ್ಕಂ
ಕಮಲಂ ಗಿರಿಯಕ್ಕು ನೋಡೆ ಶಬ್ದಾಗಮದೊಳ್ ||೨||

ಇಲ್ಲಿ ಕಮಲ ಎಂಬ ಒಂದೇ ಶಬ್ದಕ್ಕೆ ೧೭ ಅರ್ಥಗಳನ್ನು ಕೊಡಲಾಗಿದೆ. ಇವುಗಳಲ್ಲಿ ವಾಚ್ಯಾರ್ಥ, ಉಪಮಾರ್ಥ, ಬೆಡಗಿನಾರ್ಥ ಹಾಗೂ ಸಂದರ್ಭಾರ್ಥಗಳು ಸಮಾವೇಶವಾಗಿವೆ. ಹೀಗೆಯೇ ೧೬ ಪದಗಳಿಗೂ ವಿವಿಧಾರ್ಥಗಳನ್ನು ಕೊಡಲಾಗಿದೆ.

೧. ಕಮಲ - ಭುವನ, ಜಲ, ಸೂರ್ಯ, ಶಶಿ, ಕರಿ, ಹಯ, ಕುಮುದ, ತುಂಬಿ, ಬಿಳಿ, ಹಂಸಕಣ್ಣು, ಕದನ, ಗಿರಿ, ಕೂದಲು, ಕಾಂತಿ, ಕೀರ್ತಿ, ಕರ, ಧನ.

೨. ಕುಮುದ - ಸೂರ್ಯ, ಜಲ, ಶಶಿ, ಸಿಂಹ, ಕಣ್ಣು, ಕೊಳ, ವನಗಿರಿ, ಶುಭ್ರ, ಕೋಗಿಲೆ, ಸತಿ, ಪುರುಷ.

೩. ಕರಿ - ಕಣ್ಣು, ಗಿರಿ, ಕಾಂತಿ, ಹಯ, ಗಜ, ಕಪ್ಪು, ಕನ್ನಡಿ, ಕಮಲ, ಕಸ್ತೂರಿ, ಸರ್ಪ, ಕೀರ್ತಿ.

೪. ಕಂಕಣ - ಕಣ್ಣು, ಗಿರಿ, ಉದಕ, ಬಿಳಿ, ಕಾಂತಿ, ಮುಡಿ, ಕದನ, ಕಡಗ, ನವಿಲು, ಕಾರ್ಯ.

೫. ಅಮೃತ - ಕುಮುದ, ಉದಕ, ಚಂದ್ರಮ, ಕೂದಲು, ಮುನಿ, ಆನೆ, ಅದರ, ಸ್ತ್ರೀಯರ ಕುಚ, ಕೊಳ, ಅಧರಾಮೃತ

೬. ದಳ - ಧಾರುಣಿ, ಧಾನ್ಯ, ಪರಬಲ, ಹಯ, ಗಜ, ದೈನ್ಯ.

೭. ಸುರುಚಿರ - ಬಿದಿರು, ಜಲ, ಜಾರಿ, ನವಿಲು, ಸರ್ಪ, ನಂದನ, ಗುಹೆ, ಮೃಗಗಳು, ವಿಧಿ, ಕಾಂತಿ, ಬಹುಕಾನನ

೮. ಶ್ರೀಧರ - ಗಿರಿ, ಸಿಂಹ, ಬಲ, ವಿಷ್ಣು, ಕೊಳ, ಕೋಟೆ, ಜಲ, ಶಿವ

೯. ವನ - ವಾರಿಧಿ, ವನಿತೆ, ವಾರಿಜ, ಶಶಿ, ರವಿ, ಭುವನ, ಹಯ, ಗಜ, ನೃಪತಿ, ಮರುತ, ಪಶುಗಳು ವಾಸಿಸುವ ಸ್ಥಳ.

೧೦. ಭೀಮ - ಇಂದ್ರ, ಶಶಿ, ಬಲ, ಶಕ್ತಿ, ಅಗ್ನಿ, ಗದೆ.

೧೧. ಸೋಮ - ಕುಮುದ, ಮುತ್ತುಗೆ, ಮುನಿ, ಚಂದ್ರ, ಗಿರಿ, ಗುಹೆ, ಬಿದಿರು, ಚೈತ್ರ, ಸೂರ್ಯ, ಧನು.

೧೨. ಅಕ್ಷಯ - ಕಣ್ಣು, ಕಾರ್ಯ, ಕತ್ತಲೆ, ಮಾವ, ವಾರಿ, ವನ, ತೆಂಗು, ಹಲಸು, ಬಾಳೆ, ಅಮೃತ, ಗುಹೆ.

೧೩. ಬಾಣ - ಕೂದಲ, ಜಲಕರಗಳು, ಕಾಂತಿ, ಸಿಡಿಲು ಮಿಂಚು, ಸಂಗೀತ, ಕುಮುದ, ಗಜ, ಅಗ್ನಿ, ವಾಯು, ಮನೆ, ಕತ್ತಲೆ.

೧೪. ಮಂಡಿತ - ಪದ, ಕಪ್ಪೆ, ತುರಗ, ಗಮನ, ತೃಣ, ಶಶಿ, ಹಂಸೆ, ಗಿರಿ, ಅಧರ.

೧೫. ಆರಡಿ - ಮುಡಿ, ತುಂಬಿ, ತುರಗ, ಗಿರಿ, ಅನಲ.

೧೬. ಅಜನೆ - ವಾರಿಜ, ಆನೆ, ಅಂಬರ, ಶಶಿ ರವಿ, ಮುಕ್ತಿ.

ಹೀಗೆ ಮೂವತ್ತು ಕಂದ ಪದ್ಯಗಳಲ್ಲಿ ಹದಿನಾರು ಶಬ್ದಗಳ ವಿವಿಧಾರ್ಥಗಳನ್ನು ಹೇಳುತ್ತಾನೆ. ಶಬ್ದಗಳ ಆಯ್ಕೆ ಅಪರಿಮಿತವಾದದ್ದು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆದರೆ ಇಮ್ಮಡಿ ಮುರಿಗಾಗುರುಸಿದ್ಧರು ತನ್ನ ಕಾಲದಲ್ಲಿ ಹೆಚ್ಚು ಬಳಕೆಯಾಗುತ್ತಿದ್ದ ಶಬ್ದದಿಂದ ಪದ್ಯ ಆರಂಭಿಸಿ ಅದರ ನಾನಾರ್ಥಗಳನ್ನು ಅಲ್ಲಿಯೇ ಕಲೆಹಾಕುತ್ತಾನೆ. ಪದ್ಯಬಂಧದ ಬಿಗಿ, ನಿರೂಪಣೆಯ ರೀತಿಯಲ್ಲಿ ಏಕಸೂತ್ರತೆ, ಶಬ್ದಗಳ ಆಯ್ಕೆಯಲ್ಲಿ ಉಪಯುಕ್ತತೆಯ ದೃಷ್ಟಿ ಇವು ಗಮನಾರ್ಹವಾಗಿದೆ. ಇದರಿಂದ ಕವಿಯ ಶಬ್ದಪಾಂಡಿತ್ಯ, ಬಹುಶ್ರುತತ್ವಗಳು ವ್ಯಕ್ತವಾಗುತ್ತವೆ. ಈ ಹಿಂದೆ ಕನ್ನಡ ಸಾಹಿತ್ಯದಲ್ಲಿ ಬಂದ ನಿಘಂಟುಗಳಿಗಿಂತ ಸಂಕ್ಷಿಪ್ತವಾಗಿದ್ದರೂ ಭಿನ್ನವಾಗಿದೆ. ಹೀಗಾಗಿ ಈ ಕೃತಿಯು ಇಮ್ಮಡಿ ಮುರಿಗಾ ಗುರುಸಿದ್ಧರನ್ನು 'ನಿಘಂಟು' ರಚನಾಕಾರರ ಸಾಲಿನಲ್ಲಿ ಗುರುತಿಸುವಂತೆ ಮಾಡಿದೆ.

ಲಿಂಗಾಚಾರ ರಚನಾಗಮ ಟೀಕೆ : ಇದು ಇಮ್ಮಡಿ ಮುರಿಗಾಗುರುಸಿದ್ಧರ ಅಪ್ರಕಟಿತ ಟೀಕಾ ಕೃತಿ. ಇದರ ಪ್ರತಿಯು ಧರ್ಮಸ್ಥಳದ ಶ್ರೀಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನದಲ್ಲಿದೆ. 'ಕೃತಿಯ ಅರ್ಥ-ಭಾವ-ಉದ್ದೇಶಗಳನ್ನು ವಿವರಿಸಿ ಹೇಳುವುದಕ್ಕಾಗಿ ಸಂಸ್ಕೃತ ಸಾಹಿತ್ಯದಲ್ಲಿ ವ್ಯಾಖ್ಯಾನ, ಭಾಷ್ಯ, ವಾರ್ತಿಕ, ಅಧಿಕರಣ, ಕೃತಕ, ತಾತ್ಪರ್ಯ ನಿರ್ಣಯಗಳೆಂಬ ವಿವಿಧ ಪ್ರಕಾರಗಳಿರುವಂತೆ ಕನ್ನಡದಲ್ಲಿ ಟೀಕಾ ಸಾಹಿತ್ಯ ಪ್ರಕಾರವಿದೆ. ಇದನ್ನು ವ್ಯಾಖ್ಯಾನ, ಟಿಪ್ಪಣಿ, ಸಾರಾರ್ಥ, ಸಾರಾಮೃತ, ವಾಚ್ಯ, ವಚನಾರ್ಥ, ನುಡಿ ಮುಂತಾದ ಪದಗಳಿಂದ ಕರೆಯುತ್ತಾರೆ'[೧೦] ಕ್ಲಿಷ್ಟ ಭಾಷೆಯಲ್ಲಿ ರಚಿತವಾದ ಗ್ರಂಥಗಳು ಬರುಬರುತ್ತ ಜನಸಾಮಾನ್ಯರಿಗೆ ಎಟುಕದಿದ್ದಾಗ ಅವುಗಳಿಗೆ ಆಯಾ ಪ್ರಾಂತ ಭಾಷೆಗಳಲ್ಲಿ ಭಾಷ್ಯಗಳು, ವ್ಯಾಖ್ಯಾನಗಳು, ಟೀಕೆ-ಟಿಪ್ಪಣಿಗಳು ರಚಿತವಾಗ ತೊಡಗಿದವು. ಅಂತೆಯೇ ವಚನಕಾರರ

ಬೆಡಗಿನ ಸಾಹಿತ್ಯಕ್ಕೆ ಹರಿಹರ-ರಾಘವಾಂಕರು ಸಾಹಿತ್ಯಿಕ ವ್ಯಾಖ್ಯಾನವನ್ನು ನೀಡಿದರೆ, ಮರೆಯಾಗುತ್ತಿರುವ ಈ ಸಾಹಿತ್ಯಕ್ಕೆ ಹದಿನೈದು, ಹದಿನಾರನೇ ಶತಮಾನದಲ್ಲಿ ನೂರೊಂದು ಹಾಗೂ ಏಳುನೂರೊಂದು ವಿರಕ್ತರ ಸಮ್ಮುಖದಲ್ಲಿ ಇದನ್ನು ಸಂರಕ್ಷಿಸುವ, ಸಂಪಾದಿಸುವ, ಸಂಕಲಿಸುವ, ವ್ಯಾಖ್ಯಾನಿಸುವ, ಕ್ರಿಯೆ ನಡೆಯಿತು. ಇದು ಎಷ್ಟರ ಮಟ್ಟಿಗೆ ಎಂದರೆ ಸೃಜನ ಸಾಹಿತ್ಯವನ್ನು ಸೃಷ್ಟಿಸಿದಷ್ಟೇ ಮಹತ್ವವನ್ನು ಸಂಕಲನ-ಸಂಪಾದನೆಗಳಿಗೆ ನೀಡಲಾಯಿತು. ಇದರೊಂದಿಗೆ 'ಟೀಕಾ' ಸಾಹಿತ್ಯವೂ ಹುಲುಸಾಗಿ ಬೆಳೆದು ಬರಲು ಸಾಧ್ಯವಾಯಿತು. ಅದಕ್ಕಾಗಿಯೇ 'ಟೀಕಿನ ಮಠ' ಗಳು ಹುಟ್ಟಿಕೊಂಡು ಈ ಸಾಹಿತ್ಯದ ಬೆಳವಣಿಗೆಗೆ ಬೆಂಬಲವಾಗಿ, ಬೆಳಕಾಗಿ ನಿಂತವು.[೧]

ಈ ಟೀಕಾ ಪ್ರಕಾರವು ವೇದೋಪನಿಷತ್ತುಗಳು, ಶೈವಾಗಮಗಳು, ಧರ್ಮಗ್ರಂಥಗಳು, ಸ್ತೋತ್ರಗ್ರಂಥಗಳು, ಕಾವ್ಯಗಳು ಮುಂತಾದ ದಾರ್ಶನಿಕ ಹಾಗೂ ಸಾಹಿತ್ಯಿಕ ಗ್ರಂಥಗಳಿಗೆ ಜನಪ್ರಿಯತೆಯನ್ನುಂಟು ಮಾಡುವ ಸಲುವಾಗಿ ಮತ್ತು ಅವುಗಳ ತಾತ್ವಿಕ ಅರ್ಥಗಳನ್ನು ಜನಸಾಮಾನ್ಯರಲ್ಲಿ ಬಿಂಬಿಸುವ ಸಲುವಾಗಿ ಹುಟ್ಟಿಕೊಂಡಿದೆ. ಇದನ್ನು ಅನ್ಯಭಾಷಾ ಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ, ಕನ್ನಡ ಭಾಷೆ ಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ ಎಂದು ವರ್ಗೀಕರಿಸಬಹುದು. ಇಲ್ಲಿ ಒಬ್ಬ ಟೀಕಾಕಾರ ಅನೇಕ ಕೃತಿಗಳಿಗೆ ಟೀಕೆ ಬರೆದುದು ಒಂದು ರೀತಿಯಾದರೆ, ಒಂದು ಕೃತಿಗೆ ಅನೇಕ ಜನ ಟೀಕಾಕಾರರು ಟೀಕೆ ಬರೆಯುವುದು ಮತ್ತೊಂದು ರೀತಿ. ಪ್ರಸ್ತುತ ಕವಿಯ ಕೃತಿಯು ಸಂಸ್ಕೃತ ಶ್ಲೋಕಗಳಿಗೆ ಕನ್ನಡದ ಟೀಕೆಯನ್ನು ಒಳಗೊಂಡಿದೆ. 'ಶ್ರೀಮನ್ನಗಜಾವಾಮಾಂಗಾಯ ನಮಃ' ಎಂದು ಆರಂಭವಾಗುವ ಈ ಕೃತಿ ಎರಡು ಸಾಲುಗಳ ದ್ವಿಪದಿ ರೂಪವನ್ನು ಹೊಂದಿದೆ. ಆದಿಯಲ್ಲಿ

ವಿನಮ್ಯ ಮುರಿಗಾಶಾಂತವೀರೇಶಂ ಗುರುಮೀಶ್ವರಂ|
ಲಿಂಗಾಚಾರಸ್ಯ ರಚನಾಕ್ರಿಯತೇ ಬೋದ್ಧ ಸಿದ್ಧಯೇ||

ಎಂದು ತನ್ನ ಗುರುವಾದ ಮುರಿಗಾಶಾಂತವೀರೇಶನನ್ನು ಸ್ಮರಿಸಿದ್ದಾರೆ. ಇಲ್ಲಿ ಮುರಿಗಾ ಶಾಂತವೀರೇಶ ಎಂಬುದಕ್ಕೆ ಮುರಿ-ಚರಾಚರ ಜೀವಗಳು| ಗಾ-ತಿದಿರ್ದ ಚಿಚ್ಛಕ್ತಿಯೊಡನೆ ಕೂಡಿರ್ದಂಥ| ಶಾಂತ-ತಗ್ಗಿದ| ವೀರ-ಇಂದ್ರಿಯಂಗಳನುಳ್ಳ| ಈಶಂ - ಮಹದೈಶ್ವರ್ಯ ಸಂಪನ್ನನಾದ| ಎಂಬ ಟೀಕುವನ್ನು ಬರೆದಿದ್ದಾನೆ.

ಇದು ಮೂಲತಃ ಕವಿಯ ಸ್ವತಂತ್ರ ಕೃತಿಯೋ ಅಥವಾ ಬೇರೊಬ್ಬ ಕವಿಯ ಕೃತಿಗೆ ಇಮ್ಮಡಿ ಮುರಿಗಾಗುರುಸಿದ್ಧರು ಟೀಕೆಯನ್ನಷ್ಟೇ ಬರೆದಿದ್ದಾರೋ ಎಂಬ ಸಂಶಯವಿದೆ. ಏಕೆಂದರೆ ಕವಿಯು ಕೃತಿಯಲ್ಲಿ 'ಐಶ್ವರ್ಯೋಪಲಕ್ಷಿತವಾದ ವೀರಶೈವವೆಂಬ ಪ್ರಸಿದ್ಧ ಸಮಯವನು ಪ್ರತಿಪಾದಿಸುವಲ್ಲಿ ಎರಕವಾದ ವೀರಶೈವವೆಂಬ ಸಿದ್ಧಾಂತ, ಪುರಾಣ, ಆಗಮ, ವೇದಗಳು, ಉಪವಿಭಾಗಗಳನು ವಿಚಾರಿಸಿ, ಆ ಉಪವಿಭಾಗಗಳನು ಎಯ್ದಿರ್ದಂಥಾ ಶಿವಲಿಂಗದ ಧರ್ಮವೆ ಅಭಿಪ್ರಾಯವಾಗಿವುಳ್ಳ ಗ್ರಂಥಗಳನ್ನು ತೆಗೆದುಕೊಂಡು ಅಡಕದಿಂದೆ ನಾನು ರಂಜನೆಯನು ಮಾಡುತ್ತಿರ್ದಪೆನು. ವೀರಶೈವದಲ್ಲಿರ್ದಂಥಾ

ಭಕ್ತರಿಂದೆ ಈ 'ಲಿಂಗಾಚಾರ ರಚನಾಗಮ'ವು ಅಂಗೀಕರಿಸಲ್ಪಡಲಿ | ಸ್ವಕಪೋಲ ಕಲ್ಪಿತವಲ್ಲದೆ ಶಾಸ್ತ್ರ ಸಿದ್ಧಾಂತ ವನೆ ಪೇಳುವೆನದು ಕಾರಣ ವಿದನಂಗೀಕರಿಸಲ್ತಕ್ಕುದೆಂಬುದಭಿಪ್ರಾಯಂ|' ಎನ್ನುತ್ತಾನೆ. ಮೂಲಕವಿ ಅಥವಾ ಕೃತಿಯ ಬಗ್ಗೆ ಹೇಳಿಕೊಳ್ಳದೆ ವೀರಶೈವ ಸಿದ್ಧಾಂತ, ಪುರಾಣ, ಆಗಮ, ವೇದ ಮುಂತಾದವುಗಳನ್ನು ಅಭ್ಯಸಿಸಿ ಅದರಲ್ಲಿಯ ವಿಚಾರಗಳನ್ನು ಹೇಳುತ್ತಿದ್ದೇನೆಯೇ ಹೊರತು ಸ್ವ ಕಲ್ಪಿತವಾದ ವಿಚಾರಗಳನ್ನಲ್ಲ. ಆದುದರಿಂದ ಇದನ್ನು ಅಂಗೀಕರಿಸಬೇಕು ಎನ್ನುತ್ತಾನೆ. ಇದರಿಂದ ಈ ಕೃತಿಯು ಸ್ವತಂತ್ರವೂ ಅಲ್ಲದ, ಪರತಂತ್ರವೂ ಅಲ್ಲದ ಒಂದು ಸಂಪಾದನಾ ಕೃತಿಯಾಗಿ ಕಾಣಿಸಿಕೊಳ್ಳುತ್ತದೆ.

ಪ್ರಸ್ತುತ ಕೃತಿಯು ಹನ್ನೊಂದು ಪಟಲ, ೩೪೩ ಸಂಸ್ಕೃತ ಶ್ಲೋಕಗಳಿಗೆ ಟೀಕುವನ್ನು ಹೊಂದಿದೆ. ಹನ್ನೊಂದು ಪಟಲಗಳಲ್ಲಿ ಕ್ರಮವಾಗಿ ಶಬ್ದನಿರುಕ್ತಿವರ್ಣನ, ವೀರಶೈವ ವ್ರತತಾರತಮ್ಯ ವರ್ಣನ, ಲಿಂಗೈಕ್ಯ ವರ್ಣನ, ಲಿಂಗಸ್ಥೂಲ-ಸೂಕ್ಷ್ಮವಿವೇಕ, ಲಿಂಗಲಕ್ಷಣ, ಗೋಳಾತ್ಮಕಲಿಂಗ ಲಕ್ಷಣ, ನಾಳಾತ್ಮಕ ಲಿಂಗಲಕ್ಷಣ, ನಾಳಗೋಳಕ ಲಿಂಗಲಕ್ಷಣ, ಕರಸ್ಥಲಮಹಿಮೆ, ಸಮಾಧಿಕ್ರಿಯೆ ಎಂದು ಒಂದೊಂದು ಪಟಲದಲ್ಲಿ ಒಂದೊಂದು ವಿಷಯಗಳನ್ನು ವಿವರಿಸಿದ್ದಾನೆ. ಪ್ರತಿ ಪಟಲದ ಅಂತ್ಯದಲ್ಲಿ 'ಇತಿಶ್ರೀ ಲಿಂಗಾಚಾರ ರಚನಾಗಮೇ ಷಡ್ವಿಧಲಿಂಗ ಭೇಧೇ ಲಿಂಗಶಬ್ದ ವೀರಶೈವ ವೀರಮಾಹೇಶ್ವ ರೋಭಯ ಶಬ್ಧ ನಿರುಕ್ತಿ ವರ್ಣನಂ ನಾಮ ಪ್ರಥಮಃ ಪಟಲಃ ಶ್ರೀಶ್ರೀಶ್ರೀಶ್ರೀ ಶಿವಾಯನಮಃ' ಎಂದು ಆಯಾ ಪಟಲದ ವಿಷಯ ಸಮಾಪ್ತಿಯನ್ನು ಅರುಹುತ್ತಾನೆ. ನಮಸ್ಕಾರ ಮಂಗಳಾನಂತರದಲ್ಲಿ ಲಿಂಗವೆಂಬುದಕ್ಕೆ ನಿರ್ವಚನಮಂ ಪೇಳುತ್ತಿರ್ದಪಂ| ಎಂದು ಈ ಕೆಳಗಿನಂತೆ ವಿಷಯ ಪ್ರಸ್ತಾಪ ಮಾಡುತ್ತಾನೆ.

ಲಕಾರಂ ಶಕ್ತಿ ಜೀಜಂ ಸ್ಯಾದೇಕ ಮಾತ್ರ ಸಮನ್ವಿತಂ |
ಗಕಾರಂ ಶಿವಬೀಜ ಸ್ಯಾಲ್ಲಿಂಗ ಮಿತ್ಯಭಿಧೀಯತೇ ||೫||

ಎಂಬ ಶ್ಲೋಕಕ್ಕೆ ಟೀಕುವನ್ನು 'ಏಕಮಾತ್ರ ಸಮನ್ವಿತಂ ಏಕ=ಒಂದೇ|, ಮಾತ್ರಾ='ಇ'ಕಾರದಿಂದೆ|, ಸಮನ್ವಿತಃ = ಕೂಡಲ್ಪಟ್ಟ| ಲಕಾರಂ = ಲಯೆಂಬಕ್ಷರವು| ಶಕ್ತಿ-ಬೀಜಂ, ಶಕ್ತಿ=ಅಂಗ ತತ್ತ್ವಕ್ಕೆ| ಬೀಜಂ=ಕಾರಣವಾದಂಥದ್ದು| ಸ್ಯಾತ್ = ಅಹುದೂ| ಗಕಾರಂ = ಗಯೆಂಬ ಅಕ್ಷರವು| ಶಿವಬೀಜಂ-ಶಿವ = ಲಿಂಗತತ್ತ್ವಕ್ಕೆ| ಬೀಜಂ = ಕಾರಣವಾದಂಥದ್ದು| ಸ್ಯಾತ್ - ಅಹುದು| ಅನೇನ =ಇದು ಕಾರಣದಿಂದೆ| ಲಿಂಗ=ಲಿಂಗವು| ಇತಿ=ಹೀಗೆಂದು| ಅಭಿಧೀಯತೇ = ಪಸರಿಸಲ್ಪಡುತ್ತಿರ್ದಪುದು| 'ಲ'ಕಾರವೇ ನಾಳ| ಗ ಕಾರವೇ ಗೋಳಕ| ಲ ಕಾರ ಗ ಕಾರಂಗಳ ನಡುವಣ ಸೊನ್ನೆಯೆ ನಾಳಗೋಳಕಂಗಳ ಸಾಮರಸ್ಯವೆಂಬುದಭಿಪ್ರಾಯಂ| ಎಂದು ಹೇಳುತ್ತಾ, ಎಲೆ ಗಿರಿಜಾದೇವಿ ಅನಂತರದಲ್ಲಿ ಲಿಂಗದ

ಸ್ವರೂಪವು ಆರು ತೆರನಾದಂಥದ್ದು ಅದು ಉದ್ದೇಶ ಲಕ್ಷಣ ಪರೀಕ್ಷಣಗಳಿಂದ ಆರು ವಿಧವುಂಟು||೬|| ಎಲೆ ದೇವಿ ನಾನು ಆ ಲಿಂಗಂಗಳ ಕುರುಹನು ಪರಿವಿಡಿಯಿಂದೆ ಹೇಳಿಹೆನು ನೀನು ಕೇಳು ಶಿವಯೋಗೀಶ್ವರನು ಯಾವುದಾನೊಂದು ಷಟ್‌ವಿಧ ಲಿಂಗ ಸ್ವರೂಪವನು ತಿಳಿದು ಆ ಕ್ಷಣದಲ್ಲಿ ಮುಕ್ತನಾಗುತ್ತಿರ್ಪನು.

ಹೀಗೆ ಶಿವ ಪಾರ್ವತಿಯರ ಸಂಭಾಷಣಾ ರೂಪದಲ್ಲಿ ಮುಂದುವರಿಯುವ ಈ ಕೃತಿಯು ಸ್ಥಿರಲಿಂಗ, ಚರಲಿಂಗ ಎಂಬ ವಿಷಯವನ್ನು ಈ ರೀತಿ ನಿರೂಪಿಸುತ್ತದೆ.

ದೇವಾಲಯವೇ ಪಾಣಿ ಪೀಠೇ ಸಂವಿಧಾಯಾಷ್ಟ ಬಂಧನಂ|
ಪ್ರತಿಷ್ಠಿತಂ ಶಿಲಾಲಿಂಗಂ ಸ್ಥಿರಲಿಂಗಂ ತದುಚ್ಯತೇ ||೮||

||ಟೀ|| ದೇವಾಲಯದಲ್ಲಿ ಅಷ್ಟಬಂಧನ (ಎಂದೊಡೆ ತೈಲಗುಡಗೈರಿಕ ಗುರ್ಗುಳಸಿಕತಾ ಸಿಕ್ಥ ಸರ್ಜರಸ ಲಾಕ್ಷಾನ್ವಿತಮಷ್ಟ ಬಂಧನಂ| ತೈಲ=ಎಣ್ಣೆ, ಗುಡ=ಬೆಲ್ಲ, ಗೈರಿಕ=ಕಾವಿ, ಗುರ್ಗುಳ=ಗುಗ್ಗುಳವು, ಸಿಕತ=ಮಳಲು, ಸಿಕ್ಥ=ಮೇಣ, ಕುರುವಿಂದವೆಂದದೆ=ಕುರುಂಗವೆಂಬ ಕಲ್ಲು, ಸರ್ಜರಸ=ಸರ್ಜರಸವು, ಲಾಕ್ಷಾ=ಅರುಗಳಿಂದೆ, ಅನ್ವಿತಂ=ಕೂಡಲ್ಪಟ್ಟು, ಅಷ್ಟ=ಎಂಟು, ಬಂಧ=ಬಂಧನವನು ಹೀಗೆ ಶಿವಾಗಮೋಕ್ತಿಯಿಂದ ಮಾಡಿ, ಶಿಲೆಯಿಂದ ನಿರ್ಮಿಸಲ್ಪಟ್ಟ ಯಾವುದಾದರೂ ನುಡಿಗಳಲ್ಲಿ ಸ್ಥಾಪಿಸಲ್ಪಟ್ಟಿದ್ದರೆ ಅದು ಸ್ಥಿರಲಿಂಗವೆಂದು||೮||

ಅಥಯಚ್ಚರಮನ್ಯೇಷಾಂ ಅನಾತ್ಮಧೃತಲಿಂಗಿ ನಾಂ|
ಪಂಚಭಿಃ ಪೂಜ್ಯ ಮರ್ಕಾ ಭಾಗಣ ಪಾಚ್ಯುತ ಷಣ್ಮುಖೈ||೯||

ಅನಂತರದಲ್ಲಿ ಸೂರ್ಯನು, ಪಾರ್ವತಿಯು, ವಿಘ್ನೇಶ್ವರನು, ವಿಷ್ಣುವು, ಕುಮಾರಸ್ವಾಮಿಗಳೊಡನೆ ಕೂಡಿ ಐದು ಮೂರ್ತಿಗಳೊಡನೆ ಕೂಡಿ ಅರ್ಚಿಸುವ, ಆತ್ಮನಲ್ಲಿ ಧರಿಸಲ್ಪಡುವ ಲಿಂಗವೇ ಚರಲಿಂಗ, ಶಿವನೆ ದೊರೆಯು, ಪಾರ್ವತಿಯು ಪಟ್ಟದರಸಿಯು, ವಿನಾಯಕ-ಷಣ್ಮುಖರೇ ದೊರೆಯ ಮಕ್ಕಳು, ವಿಷ್ಣು ಹುಜೂರ ಪ್ರಧಾನಿ| ಸೂರ್ಯನೇ ರೋಚಿರ್ನಾಯಕನು ಈ ಭಾವನೆಯಿಂದ ಮಿಶ್ರ ವೀರಶೈವರು ಪೂಜಿಸುವ ಲಿಂಗವನ್ನು ಚರಲಿಂಗವೆಂದು ಕರೆಯುತ್ತಾನೆ. ಹೀಗೆ ಕೃತಿಯುದ್ದಕ್ಕೂ ಲಿಂಗದ ರಚನೆಯನ್ನು ಆಚಾರ ಸಮೇತವಾಗಿ, ನಿರ್ಮಿಸಿ ಕರಸ್ಥಲದಲ್ಲಿ ಧರಿಸಿಕೊಂಡು ಮುಕ್ತಿಯನ್ನು ಪಡೆಯುವ ಬಗೆಯನ್ನು ವಿವರಿಸುತ್ತಾನೆ. ಕೃತಿಯ ಕೊನೆಯಲ್ಲಿ "ಶ್ರೀಮನ್ಮಹಾವೀರ ಮಾಹೇಶ್ವರ ಶಿರೋವ್ರತಾತ್ಮಕ| ಲಿಂಗಾಧಾರಣಾಚಾರ ಪ್ರಸಿದ್ಧಾಂತ ಕರ್ತೃಂ ವೇದ ವೇದಾಂತ ಸ್ಮತೀತಿಹಾಸ ಸೂತ್ರ ಪುರಾಣಾಗಮಾಧಿ ಸಕಲಶಾಸ್ತ್ರ ಪ್ರಸಿದ್ಧ ಗ್ರಂಥ ಸಂತತಿ ಕೃತಸಾರ ಸಂಗ್ರಹಣ ಭೂತ ಲಿಂಗಾಚಾರ ರಚನಾಗ ಮೇನಾ ಮ್ಯೆಕಾದಶ ಪಟಲಃ| ಪರಿಸಮಾಪ್ತಂ. ಶಾಲಿವಾಹನ ಶಕ ೧೬೩೬ ಸಂದುದು ಖರಸಂವತ್ಸರದ ಚೈತ್ರ ಶು ಏಳು ಆದಿವಾರದಲ್ಲಿ ಶಿಮಗೆ ಕೋಟೆ ಠಾಣೆದಾರ ನಂಬ್ಯಣ್ಣನ ವೀರಪ್ಪನಾಯಕರ ಮನೆಯಲ್ಲಿ

ಮುಗಿದುದು| ಶ್ರೀಮುರಿಗಾ ದೇಶಿಕಾಯ ನಮಃ||" ಎಂದು ಕೃತಿಯು ಅಂತ್ಯವಾದ ಕಾಲ ಕ್ರಿ.ಶ.೧೭೧೪ಳ ಎಂಬುದೂ, ಸ್ಥಳ ಶಿಮಗೆ ಕೋಟೆಯ ನಂಬಿಯಣ್ಣನ ವೀರಪ್ಪ ನಾಯಕರ ಮನೆಯಲ್ಲಿ ಮುಕ್ತಾಯವಾದುದನ್ನು ಸ್ಪಷ್ಟವಾಗಿ ತಿಳಿಸುತ್ತಾನೆ.

ಒಟ್ಟಾರೆಯಾಗಿ ಲಿಂಗರಚನೆಯ ಶಾಸ್ತ್ರವನ್ನು ಅರುಹುವ ಈ ಕೃತಿಯು ಮನುಷ್ಯ ತನ್ನ ಅಜ್ಞಾನವನ್ನು ಕಳೆದುಕೊಂಡು ಲಿಂಗಾಂಗ ಸಾಮರಸ್ಯದ ಹಂತವನ್ನು ತಲುಪುವವರೆಗಿನ ಅವಸ್ಥೆಗಳಲ್ಲಿ ಪಾಲಿಸಬೇಕಾದ ವಿಧಿ-ವಿಧಾನಗಳನ್ನು ಹೇಳುತ್ತದೆ. ವೇದ ಉಪನಿಷತ್ತು, ಆಗಮಗಳನ್ನು ಅರಗಿಸಿಕೊಂಡಿದ್ದ ಇಮ್ಮಡಿ ಮುರಿಗಾಗುರುಸಿದ್ಧರು ಶಾಸ್ತ್ರಸಮ್ಮತವಾದ ಲಿಂಗದ ರಚನೆಯ ವಿವರಣೆಗಳನ್ನು ಶ್ಲೋಕಗಳಿಗೆ ಅರ್ಥ ಸಹಿತವಾಗಿ ಬರೆದು ಜನಸಾಮಾನ್ಯರಲ್ಲಿ ಧಾರ್ಮಿಕ ಜಾಗೃತಿಗೆ ಕಾರಣರಾಗಿದ್ದಾರೆ. ಶುದ್ಧವಾದ ತಾತ್ತ್ವಿಕ ಅಂಶಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ಸಾಹಿತ್ಯಿಕ ಹಾಗೂ ಸಾಮಾಜಿಕ ಅಂಶಗಳಿಗೆ ಸ್ಥಾನವೇ ಇಲ್ಲದಂತಾಗಿದೆ.

ಸ್ಕಂದಕಲ್ಯಾಣ

ಸ್ಕಂದ ಪುರಾಣವು ಹದಿನೆಂಟು ಪುರಾಣಗಳಲ್ಲಿಯೇ ಗಾತ್ರದಲ್ಲಿ ಬೃಹತ್ತಮ, ಗುಣದಲ್ಲಿ ಮಹತ್ತಮ, ಮಹಾಭಾರತಕ್ಕೆ ಶ್ಲೋಕಸಂಖ್ಯೆಯಲ್ಲಿ ಸರಿಸಮ. ಈ ಎಲ್ಲದರಿಂದ ಭಾಗವತಾ ನಂತರದಲ್ಲಿ ಇದೇ ಅತ್ಯುತ್ತಮ. ಇದರಲ್ಲಿ ಬಾರದ ವಿಷಯವಿಲ್ಲ. ನಿರೂಪಿಸದ ಪ್ರಮೇಯವಿಲ್ಲ, ಇದು ಶೈವ ಪುರಾಣವಾದರೂ ಇದರಲ್ಲಿ ವಿಷ್ಣುಪಾರಮ್ಯವನ್ನು ಬಹುರಮ್ಯವಾಗಿ ಖಂಡಾಂತರಗಳಲ್ಲಿ ಖಚಿತವಾಗಿ ನಿರೂಪಿಸಿದ್ದಾರೆ.[೧೨] ಎಂಬ ಮಾತು ಇಮ್ಮಡಿ ಮುರಿಗಾಗುರುಸಿದ್ಧರ ಅಪ್ರಕಟಿತ ಕೃತಿ 'ಸ್ಕಂದಕಲ್ಯಾಣ'ವು ಒಳಗೊಂಡಿರುವ ೧೨ ಸಂಧಿ ೧೦೩೬ ಪದ್ಯಗಳ ಬೃಹತ್ ಚೌಪದಿ ಕೃತಿಯೆಂಬುದನ್ನು ಕೇಳಿದಾಗ ನಿಜವೆನಿಸುತ್ತದೆ. ಪುರಾಣದಲ್ಲಿ ಪ್ರಸಿದ್ಧವಾದ ಕಥೆಗಳನ್ನು ಆಯ್ದುಕೊಂಡು ಲೀಲಾರೂಪದಲ್ಲಿ ವರ್ಣಿಸಿರುವ ಈ ಪೌರಾಣಿಕ ಚೌಪದಿಯ ಅಪೂರ್ಣ ಹಸ್ತಪ್ರತಿಯು ಮುರುಸಾವಿರ ಮಠದ ಹಸ್ತಪ್ರತಿ ಸಂಗ್ರಹದಲ್ಲಿ ಮತ್ತು ಎಂ.ಎಸ್. ಬಸವರಾಜಯ್ಯನವರ ಬಳಿ ಇರುವುದಾಗಿ ತಿಳಿದು ಬಂದಿದೆ.[೧೩] ಕೃತಿಯ ಮೊದಲ ಸಂಧಿಯಾದ 'ಚೌಪದಿವರ್ನದ ಶಿವಸ್ತೋತ್ರ'[೧೪], ವೃತ್ತಗಳಲ್ಲಿ ರಚಿತವಾದ 'ಸ್ಕಂದಕಲ್ಯಾಣದಲ್ಲಿನ ಶಿವಸ್ತೋತ್ರ'[೧೫] ಮತ್ತು ದ್ವಿಪದಿಯಲ್ಲಿ ರಚಿತವಾದ 'ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ'[೧೬] ಈ ಮೂರು ಬಿಡಿಭಾಗಗಳನ್ನು ಎಸ್. ಶಿವಣ್ಣನವರು ಪ್ರಕಟಿಸಿದ್ದಾರೆ.

ಉಪಲಬ್ದವಾಗಿರುವ ಭಾಗಗಳಿಂದ ಈ ಕೆಳಗಿನ ವಿಷಯಗಳನ್ನು ಸಂಗ್ರಹಿಸಲಾಗಿದೆ. ಚೌಪದಿವರ್ನದ ಶಿವಸ್ತೋತ್ರದಲ್ಲಿ ಮುವತ್ತಾರು ಚೌಪದಿಗಳಿವೆ. ಶಿವನ ಸ್ತುತಿಯೊಂದಿಗೆ ಕಾವ್ಯ ಆರಂಭವಾಗಿ

ನಂತರದಲ್ಲಿ ಪಾರ್ವತಿ, ಗಣಪತಿ, ನಂದಿ, ಭೃಂಗಿ, ಬಸವೇಶ್ವರ, ಚೆನ್ನಬಸವ, ಮಾಚಿದೇವ, ಸಿದ್ಧರಾಮ ಮೊದಲಾದ ಶರಣರನ್ನು ಸ್ತುತಿಸುವುದರೊಂದಿಗೆ 'ಸಸಿದಲೆಯನ ಸುತನ ಸಮರ ವ್ಯಾಣವನುಸಿರ್ವೆ ನಾನೀಗ ನೆರವಾಗುವದು' ಎಂದು ಬೇಡಿಕೊಳ್ಳುತ್ತಾನೆ.

ಶಿವಕವೀಶ್ವರರೆನ್ನನವಿರತ ಕೈವಿಡಿದು
ನವರಸ ಭಾವಾಲಂಕಾರಗಳ
ಸುವಿವೇಕಗಳನಿತ್ತು ಸಾಗಿಪ್ಪುದೀ ಕೃತಿಯ
ಭುವನದ ಸಜ್ಜನರರಿವಂತೆ ||೯||

ಇದು ವರ್ಣಕ ಕಾವ್ಯವಾದ ಕಾರಣ ಕಿವಿಗೆ ಸುಮಧುರವೆನಿಸುವಂತೆ ಮೃದುವಾದ ಶಬ್ದ, ಸಂಧಿ, ಸಮಾಸಗಳನಳವಡಿಸಿರುವೆ. ಗುರು ಕವಿಗಳ ಮಾರ್ಗದರ್ಶನದಲ್ಲಿಯೇ ಕೃತಿ ರಚಿಸಿದ ಕಾರಣವಾಗಿ ದುರ್ಜನರು ದುರುಳುತನದಿಂದ ಹೀಗಳೆದರೆ ಅದನ್ನು ನರಿಯ ಕೂಗಿನ ತೆರನೆಂದು ಭಾವಿಸುವೆ. ಇದು ಎಂತಹ ವಿಷಯ ಎಂಬುದಕ್ಕೆ

ಮಂಡಿತ ನಿಗಮ ಪುರಾಣಾಗಮಾದಿಗಳ
ತಂಡದೊಳಧಿಕವಾದವರಲ್ಲಿ
ದಂಡಿಯಾಗಲು ಪೇಳಿದ ಕೃತಿ ಇದರಲ್ಲಿ
ಬಂಡರು ಕೂಗಿದೊಡಳುಕೇನು ||೧೩||

ಭಂಡತನದಿಂದ ವಿಷಯದ ಬಗ್ಗೆ ಮಾತನಾಡಿದರೆ ಅಳುಕುವುದಿಲ್ಲ. ವೀರಶೈವಾಚಾರಸಾರನೆನಿಸಿದ ಮುರಿಗೆಯಶಾಂತವೀರೇಶನೇ ಕೃತಿಯನ್ನು ಮುನ್ನಡೆಸಿಕೊಂಡು ಹೋಗಬೇಕೆಂದು ಪ್ರಾರ್ಥಿಸುತ್ತ, ಸ್ಕಂದಕಲ್ಯಾಣವೆಂಬ ಒಲವಿನ ಹೆಸರನ್ನು ಬೆಸಗೊಂಡು ಬರೆದವನು ಹಂಚಿನ ಚೆನ್ನವೀರಾಖ್ಯ, ಇದನ್ನು ಹೇಳಿದವನು ಶ್ರೀಗುರುಮೂರ್ತಿ ||೧೫|| ಎಂದು ನಂತರದಲ್ಲಿ ಶಿವನ ಒಂದೊಂದು ಲೀಲೆಯನ್ನು ವಿವರಿಸಿದ್ದಾನೆ.

ಹರಿಹರಿ ಹರಿನೇತ್ರ ಹರಿಹರಿ ಹರಿಪತ್ರ
ಹರಿಹರಿ ಹರಿಜಾತ್ಮ ನತಚಿತ್ತ
ಹರಿಹರಿ ಹರಿಕೀರ್ತಿ ಹರಿಹರಿ ಹರಿಮೂರ್ತಿ
ಹರಿಹರಿಯ ನಿಯಮಗೆ ಶಿವಲಿಂಗ ||೨೦||

ಎಂದು ಶಬ್ದಗಳಲ್ಲಿ ಶಿವನನ್ನು ಕೊಂಡಾಡಿದ್ದಾನೆ. ವ್ಯಾಧರ ನಾಯಕನಿಗೆ ಪ್ರಮಥ ಪದವಿಯನಿತ್ತವನು, ಗಿರಿಜೆಯರಸು, ಶಂಕರನು, ಕರುಣಾಕರನು, ಮೈದುನನಣುಗನರುಹಿ ಲಕುಮಿಯ ಮನೆಯ ಭೇದಿಪನಾತ್ಮಕ ಭವನ ಚುರ್ಚಿ ಕಾದಲೆಯಯ್ಯನ ಜನ್ನವನಳಿದವನೆ, ಕರಿಮುಖ, ಷಣ್ಮುಖ, ವೀರಭದ್ರ, ಪಾರ್ವತಿಯ ಮಧ್ಯದಲಿ ಕೈಲಾಸದಲಿ ವಿರಾಜಿತನಾದಂತವ ಎಂದು ಕವಿನಾನಾ ವಿಧಗಳಲ್ಲಿ ಶಿವಸ್ತುತಿ ಕೈಗೊಂಡಿರುವನು. ಕೃತಿಯ ಅಂತ್ಯದಲ್ಲಿ ಫಲಶ್ರುತಿ ಎಂಬಂತೆ ಇದನ್ನು ಓದಿದವರು, ಬರೆಯುವವರು, ಅರ್ಥಹೇಳುವವರು, ಕೇಳುವವರು ಎಲ್ಲರೂ ಷಣ್ಮುಖನ ಕೃಪೆಯಿಂದ ಮೋಕ್ಷ ಪ್ರಾಪ್ತಿಗಳಾಗುವರು ಎಂದೆನ್ನುತ್ತಾನೆ.

'ಸ್ಕಂದಕಲ್ಯಾಣದಲ್ಲಿನ ಶಿವಸ್ತೋತ್ರ'ದಲ್ಲಿ ಹನ್ನೆರಡು ವೃತ್ತಗಳಿವೆ. ಹಾಲಾಸ್ಯ ಪುರಾಣದಂತ ಬೃಹತ್ ಗ್ರಂಥದಲ್ಲಿ ಸುಮಾರು ೧೬೫ಕ್ಕೂ ಹೆಚ್ಚು ಛಂದೋ ಪ್ರಯೋಗಗಳನ್ನು ಕೈಗೊಂಡು ಯಶಸ್ವಿಯಾದ ಕವಿ ಇಲ್ಲಿ ಶಿವಸ್ತೋತ್ರಕ್ಕೆ ವೃತ್ತಗಳನ್ನು ಬಳಿಸಿಕೊಂಡಿರುವನು. ಉತ್ಪಲಮಾಲೆ, ಚಂಪಕಮಾಲೆ, ಮತ್ತೇಭ ವಿಕ್ರೀಡಿತ, ಶಾರ್ದೂಲ ವಿಕ್ರೀಡಿತ, ಮಲ್ಲಿಕಾಮಾಲೆ ವೃತ್ತಗಳಲ್ಲಿ ಶಿವಸ್ತೋತ್ರ ಮಾಡಲಾಗಿದೆ. ಉದಾಹರಣೆಗಾಗಿ

ಸುರಗಿರಿಚಾಪಸೂನ್ನತ ಕಲಾಪ ಸುರಾಸುರಗರ್ವಲೋಪ ಶಂ
ಕರಕರುಣಾಕ್ಷ ಕಾಮಲವಿಪಕ್ಷಕನಜ್ವಲನಾಕ್ಷ ಘೋರನಿ
ರ್ಭಗರಬಾರಿ ಭಾಸ್ವರ ಮುರಾರಿ ಭವೇಭವಿದಾರಿ ಚಂದ್ರಶೇ
ಖರ ಶಿವಲಿಂಗ ದಾನಿಗಣಸಂಗ ವಿಭಂಗ ಪಾಲಿಸಸಾ||

ಈ ರೀತಿಯಾಗಿ ಪ್ರತಿವೃತ್ತದಲ್ಲಿಯೂ ಶಿವಸ್ತುತಿಯನ್ನು ಕಾಣಬಹುದು.

'ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರವು' ದ್ವಿಪದಿಯಾಗಿದ್ದರೂ ಇದು ನಾಲ್ಕು ಸಾಲುಗಳ ಒಂದೊಂದು ನುಡಿಗಳಲ್ಲಿದೆ. ಇದರಲ್ಲಿ ಹನ್ನೊಂದು ನುಡಿಗಳಿವೆ. ಯುದ್ಧದಲ್ಲಿ ಹೋರಾಡಿ ವೀರಮರಣವನ್ನಪ್ಪಿದ ಪತಿಯನ್ನು ಕುರಿತಾಗಿ ಆತನ ಪತ್ನಿಯರು ಶೋಕಿಸುವ ಒಂದು ದುಃಖ ಪ್ರಸಂಗದ ವಿವರಣೆಯನ್ನು ಇಲ್ಲಿ ನೀಡಲಾಗಿದೆ.

ದ್ವಿಪದಿ ಸ್ತೋತ್ರವಂ ಬರೆವುದಕ್ಕೆ ಶುಭಮಸ್ತು
ಬಾಳುಬಾಳು ಬಾಳು ಬಾಳು ರಕ್ಕಸರಾಯ
ಕಾಳಗದೊಳಗೆಯಸುಗಳೆದು ಸಗ್ಗದೊಳು
ಪಾಳೆಯ ಬಿಟ್ಟು ಸುಖಿಯಾಗಿ ||೧||

ಮಲ್ಲಿಕಾರ್ಜುನನ ಮಗನೊಡನೆ ಹೋರಾಡಿ ಮಡಿದ, ತಮ್ಮ ಗಂಡನನ್ನು ನೆನೆದು ದುಃಖಿಸುತ್ತಾ ಅತ್ತೆ-ಮಾವಂದಿರ ಪರಿಚಯವು ನಮಗಿಲ್ಲ, ನಂಟರನ್ನು ನಂಬಿ ಬದುಕುವವರು ನಾವಲ್ಲ, ತಂದೆ-ತಾಯಿಗಳ ಹಂಗು ನಮಗಿಲ್ಲ, ನಿಮ್ಮ ಕೈ ಹಿಡಿದ ದಿನದಿಂದಲೂ ನಿಮ್ಮನ್ನೇ ನಂಬಿಕೊಂಡು ಇರುವೆವು, ನಿಮ್ಮ ಜೊತೆಯಲ್ಲಿಯೇ ಇದ್ದೆವು. ಸೊಕ್ಕಿನ ದಿವಿಜರನ್ನು ರಣರಂಗದಲ್ಲಿ ಜಯಿಸುವುದರೊಂದಿಗೆ ಸ್ವರ್ಗವನ್ನು ಸೇರಿದ ನಿಮ್ಮನ್ನು ಕೂಡಿಯೇ ನಾವು ಸುಖವಾಗಿರುತ್ತೇವೆ ಎಂದು ಹೇಳುವುದರೊಂದಿಗೆ ತಮ್ಮ ಪತಿ ಪ್ರೇಮವನ್ನು ಎತ್ತಿ ತೋರಿಸಿರುವರು. ತಮ್ಮ ಗಂಡನ ರೂಪ ವರ್ಣನೆ ಮಾಡುತ್ತಾ

ತಿದ್ದಿದ ಮೀಸೆಯ ಮುದ್ದು ಮೊಗದ ಚತುರ
ಸುದ್ದಿಯ ಹೇಳದೆ ಸಗ್ಗಕ್ಕೆ
ಸುದ್ದಿಯ ಹೇಳದೆ ಸಗ್ಗಕ್ಕೆ ಹೋದರೆ
ಎದ್ದುಬಾರದೆ ನಿನ್ನ ಬಿಡುವೆನೆ ||೮||

ಎನ್ನುತ್ತಾ ಮುಂದುವರಿದು ತೊಂಬೆ ಗಡುಕಿನ ಕವಿ, ತಂಬುಲದ ಬಾಯಿ, ಬೇವಿನ ಕರುಳುಗಳ ನನನಲ್ಲ ಎಂದು ಸೊಗಸಾಗಿ ಹಾಡುತ್ತಾಳೆ. ಇನ್ನೊಂದು ಪದ್ಯದಲ್ಲಿ 'ಬಾಳು ಬಾಳೆಲೆ ಕತ್ತಿ ಬಾಳು ನಿಂಬೆಯ ಹಣ್ಣೆ ಬಾಳೆನ್ನಕೈಯ್ಯ ಪಿಡಿಯೆ ಮಾವನ ಮಗನೆ ಬಾಳು ಸಗ್ಗದಲಿ ಬರುತ್ತೆದೇನೆ ||೧೦|| ಎಂದು ಅರ್ಥಗರ್ಭಿತವಾಗಿ ಧ್ವನ್ಯಾರ್ಥವನ್ನು ಸೂಚಿಸುವ 'ಬಾಳು' ಎಂದರೆ ಜೀವನ ಮತ್ತು ಯದ್ಧ ಎಂಬೆರಡರ್ಥದಲ್ಲಿ ಸ್ವೀಕರಿಸುತ್ತಾಳೆ. 'ಗಂಡರ ಮೀರಿದ ತುಂಡು ತೊಂಡು ತೊತ್ತೇರ ಮೂಗ ಖಂಡಿಸಿ ಸಗ್ಗವನು ಪೊಕ್ಕು, ಖಂಡಿಸಿ ಸಗ್ಗವನು ಪೊಕ್ಕುವೆಮ್ಮಯ ಗಂಡರ ಕೂಡಿ ಸುಖಿಸುವೆವು'[೧೧] ಛಲದಿಂದ ನಾವೂ ಕೂಡ ಸ್ವರ್ಗಕ್ಕೆ ಬಂದೇ ತೀರುತ್ತೇವೆ, ಅಗಲಿದ ನಮ್ಮ ಗಂಡರನ್ನು ಕೂಡಿಕೊಂಡು ಸುಖವಾಗಿರುತ್ತೇವೆ ಎಂಬ ಧ್ಯೇಯವನ್ನು ವ್ಯಕ್ತಪಡಿಸುತ್ತಾರೆ.

ಒಟ್ಟಾರೆಯಾಗಿ ಇಲ್ಲಿ ಲೌಕಿಕವೆಂಬ ಸತಿಗೆ, ಅಲೌಕಿಕವೆಂಬ ಪತಿಯನ್ನು ಆರೋಪಿಸಿ ಹಾಡಿದ ಒಂದು ಚೌಪದವಾಗಿದೆ. ಭಕ್ತನಿಗೆ ಭಕ್ತಿಯೆಂಬುದು ಅಗಲಿದಾಗ ಉಂಟಾಗುವ ನೋವು ಅಷ್ಟಿಷ್ಟಲ್ಲ. ಮಲ್ಲಿಕಾರ್ಜುನನ ಮಗನೊಡನೆ ಅಂದರೆ ಷಣ್ಮುಖನೊಡನೆ ಹೋರಾಡಿ ಸತ್ತವನು ತನ್ನ ಪತಿ, ಅತ್ತೆ ಮಾವಂದಿರ ಗೊತ್ತನ್ನು ತಿಳಿಯದವಳು ಈ ಸತಿ. 'ಚಿತ್ತವಲ್ಲಭನು' ಎತ್ತಿಕೊಂಡು ಒಯ್ಯುವಂತೆ ಭಾವಾವೇಶದಿಂದ ಹಾಡುವಳು. ಇಲ್ಲಿಯ ಕಾವ್ಯಮಾಧುರ್ಯ, ಕೇಳುವವರಿಗೆ ರಸದೂಟವನ್ನುಣ ಬಡಿಸುತ್ತದೆ. ಹೀಗೆ ಚೌಪದದ ಉದ್ದೇಶವೇ ಕೇಳುವವರಿಗೆ ಆನಂದವನ್ನುಂಟುಮಾಡುವುದಾಗಿದೆ. ಇಂತಹ ೧೦೩೭ ಚೌಪದಿಗಳಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರು ಯಾವ ಯಾವ ಭಾವ, ಛಂದಸ್ಸು, ವಿಷಯ, ಘಟನೆಗಳನ್ನು ಕೃತಿಯಲ್ಲಿ ತುಂಬಿದ್ದಾರೆ ಎಂಬುದು ಸಮಗ್ರ ಕೃತಿಯ ಪ್ರಕಟಣೆಯಿಂದ ಹಾಗೂ ಅಧ್ಯಯನದಿಂದ ಅರಿಯಬೇಕಾಗಿದೆ.

ಯಕ್ಷಗಾನ ಕೃತಿಗಳು

ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಯಕ್ಷಗಾನವು ಕೇವಲ ಶ್ರವ್ಯ ಮಾಧ್ಯಮವಾಗಿರದೆ ದೃಶ್ಯ ಮಾಧ್ಯಮವೂ ಆಗಿದೆ. ಬೇರೆ ಬೇರೆ ಸಾಹಿತ್ಯಿಕ ಕೃತಿಗಳನ್ನು ಓದಲು ಅಕ್ಷರ ಜ್ಞಾನ ಬೇಕೇ ಬೇಕು ಅಂದಾಗ ಮಾತ್ರ ಅವುಗಳ ಸಾರ್ಥಕತೆ. ಆದರೆ ಜನಸಾಮಾನ್ಯರಲ್ಲಿ ಅಬಾಲವೃದ್ಧರಿಂದ ಹಿಡಿದು ವಯೋವೃದ್ಧರವರೆಗಿನ ಎಲ್ಲ ವಯಸ್ಸಿನವರು, ಅನಕ್ಷರಸ್ಥರು ಒಂದೇ ರೀತಿ ಅರ್ಥೈಸಿಕೊಳ್ಳ ಬಹುದಾದಂಥ ಸುಲಭವಾದ ಪ್ರಕಾರವೆಂದರೆ ಯಕ್ಷಗಾನ. ಈ ಕಲೆಗೆ ಪ್ರಾಚೀನತಮ ಇತಿಹಾಸವಿರಬೇಕೆಂಬ ಅನುಮಾನಗಳು ಹುಟ್ಟಿಕೊಂಡರೂ ಅದನ್ನು ಪ್ರತಿಪಾದಿಸಲು ಸಾಕಷ್ಟು ಆಧಾರಗಳಿಲ್ಲದ ಕಾರಣ ದೊರಕಿರುವ ಆಧಾರಗಳಿಂದ ೧೫-೧೬ನೆಯ ಶತಮಾನವೆಂದು ಹೇಳಬಹುದಾ ಗಿದೆ. 'ಕ್ಲಿಷ್ಟವಾದ ತತ್ತ್ವಗಳನ್ನು ಜನಸಾಮಾನ್ಯರಿಗೆ ಸರಳ ಸುಲಭ ರೀತಿಯಲ್ಲಿ ಬೋಧಿಸುವ ಒಂದು ಸಾಧನ ಮಾರ್ಗವೇ

ಯಕ್ಷಗಾನ ಪ್ರಸಂಗಗಳು'[೧೭]. ಇವುಗಳನ್ನು ವಸ್ತುವಿನ ದೃಷ್ಟಿಯಿಂದ, ರಾಮಾಯಣ, ಮಹಾಭಾರತ, ಶಿವಪುರಾಣ, ಜನಪದ ಕಥಾಮೂಲದ ಯಕ್ಷಗಾನಗಳೆಂದು ವಿಭಾಗಿಸುತ್ತಾರೆ. ಇವುಗಳು ರಂಗಮಂಟಪದ ಮೇಲೆ ಪ್ರದರ್ಶನಗೊಳ್ಳುವುದರಿಂದ ಪ್ರತಿಯೊಬ್ಬ ಯಕ್ಷಗಾನದ ಕರ್ತೃವು ಸ್ಥಳ, ಕಾಲ, ಕ್ರಿಯೆ ಎಂಬ ಮೂರು ಐಕ್ಯಗಳನ್ನು ಪಾಲಿಸಲೇಬೇಕಾಗುತ್ತದೆ.

ರಾಮಾಯಣದ ಯಕ್ಷಗಾನಗಳಲ್ಲಿ ಪಂಚವಟೀ, ರಾಮಾಶ್ವಮೇಧ, ಲವಕುಶಕಾಳಗ, ಸೀತಾಸ್ವಯಂವರ, ರಾಮಪಟ್ಟಾಭಿಷೇಕ, ಲಂಕಾದಹನ ಮುಂತಾದವುಗಳಿದ್ದರೆ ಮಹಾಭಾರತದ, ಯಕ್ಷಗಾನಗಳಲ್ಲಿ ಕೃಷ್ಣಾರ್ಜುನರ ಕಾಳಗ, ದ್ರೌಪದಿ ವಸ್ತ್ರಾಪಹರಣ, ಕೀಚಕನ ಕಥೆ, ಅಭಿಮನ್ಯು, ಕರ್ಣಪರ್ವ, ಇಂದ್ರಕೀಲ ಮುಂತಾದ ಪ್ರಸಂಗಗಳಿರುತ್ತವೆ. ಶಿವಪುರಾಣದ ಯಕ್ಷಗಾನಗಳಲ್ಲಿ ಗಿರಿಜಾಕಲ್ಯಾಣ, ದಕ್ಷಾಧ್ವರಕಥೆ, ಶಿವರಾತ್ರಿ ಯಕ್ಷಗಾನ, ದಕ್ಷಬ್ರಹ್ಮನಕಥೆ, ವಿಭೂತಿ ಮಹಿಮೆ, ಬಿಜ್ಜಮಹಾದೇವಿ ಚಾರಿತ್ರ, ಕೊರವಂಜಿಯಂತಹ ಪ್ರಸಂಗಗಳಿರುತ್ತವೆ. ಜನಪದದಲ್ಲಿ ಸಂಗ್ಯಾಬಾಳ್ಯ, ಕರಿಬಂಟನ ಕಥೆ, ಸಾರಂಗಧರನಕಥೆ, ಸೋಮಶೇಖರ ಚಿತ್ರಶೇಖರ, ಮಾರುತಿ ಲಿಂಗಧಾರಣ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಯಕ್ಷಗಾನಗಳಿರುತ್ತವೆ. ಇಮ್ಮಡಿ ಮುರಿಗಾಗುರುಸಿದ್ಧರು 'ಬಿಜ್ಜಮಹಾದೇವಿ ಚಾರಿತ್ಯ', 'ಜಲಂಧರ ಕಾಳಗ' ಎಂಬ ಎರಡು ಪ್ರಸಂಗಗಳನ್ನು ಬರೆದಿದ್ದಾರೆ. ಈ ಎರಡು ಯಕ್ಷಗಾನ ಕೃತಿಗಳು ಶಿವಪುರಾಣದ ಸಾಲಿಗೆ ಸೇರುತ್ತವೆ. ಇವು ಮುಖ್ಯವಾಗಿ ಶಿವಧರ್ಮದ ತತ್ವವಿವೇಚನೆ, ಶೀಲ ನೀತಿಗಳನ್ನು ವಿವರಿಸುವ ಉದ್ದೇಶ ಹೊಂದಿವೆ. ಆದರೆ ನಾವು ಶುದ್ಧವಾದ ಯಕ್ಷಾಗಾನ ಕೃತಿಗಳಿಗೆ ಹೋಲಿಸಿಕೊಂಡು ಪಾತ್ರಗಳ ಸೃಷ್ಟಿ, ಸನ್ನಿವೇಶ, ರಂಗಸಜ್ಜಿಕೆ, ಸ್ಥಳ-ಕಾಲ-ಕ್ರಿಯೆ ಇವುಗಳ ಜೋಡಣೆ ಮುಂತಾದ ಯಕ್ಷಗಾನದ ಲಕ್ಷಣಗಳಿಗೆ ತಳುಕು ಹಾಕಿ ಈ ಕೃತಿಗಳನ್ನು ನೋಡುವಂತಿಲ್ಲ. ಏಕೆಂದರೆ ಸಾಂದರ್ಭಿಕವಾಗಿ ಯಕ್ಷಗಾನ ಮಾದರಿಯಲ್ಲಿ ಹಾಡಿದರೆ ಅಲ್ಪಕಾಲದಲ್ಲಿಯೇ ಮುಗಿದು ಹೋಗುವ ಈ ಕೃತಿಗಳ ವಸ್ತು, ಸನ್ನಿವೇಶ, ಪಾತ್ರಸೃಷ್ಟಿ, ಸಂಗೀತ ಮೊದಲಾದ ವಿಷಯಗಳು ಪ್ರಯೋಗಕ್ಕೆ ಹೊಂದುವುದಿಲ್ಲ.

ಬಿಜ್ಜಮಹಾದೇವಿ ಚಾರಿತ್ರ : ಇದು ಇಮ್ಮಡಿ ಮುರಿಗಾಗುರುಸಿದ್ಧರ ಅಪ್ರಕಟಿತ ಕೃತಿ. ಬಿಜ್ಜಾವರದ ಕದಿರ ಕಾಯಕದವಳಾದ ಅಮ್ಮವ್ವೆಯ ಚರಿತ್ರೆ ಈ ಕೃತಿಯ ವಸ್ತು. ಅಮ್ಮವ್ವೆಯು ಶಿವನನ್ನೇ ಮಗನಾಗಿ ಪಡೆಯಲು ಬಯಸಿದಾಗ, ಅವಳ ಭಕ್ತಿಯನ್ನು ಪರೀಕ್ಷಿಸಲು ಶಿಶು ರೂಪಿ ಶಿವನು ಖಾಯಿಲೆಯಿಂದ ನರಳುವುದಕ್ಕೆ ಪ್ರಾರಂಭ ಮಾಡಿದನು. ಅಮ್ಮವ್ವೆ ದುಃಖದಿಂದ ಶಿವಲಿಂಗದ ಎದುರಿಗೆ ಹೋಗಿ ತನ್ನ ತಪ್ಪನ್ನು ತಿಳಿಸೆಂದು ಕತ್ತಿಯಿಂದ ಕೊರಳನ್ನು ಕತ್ತರಿಸಿಕೊಳ್ಳಲು ಹೊರಟಾಗ ಶಿವ ಪ್ರತ್ಯಕ್ಷನಾಗಿ ಅವಳನ್ನು ಕೈಲಾಸಕ್ಕೆ ಕರೆದೊಯ್ಯುವನು.[೧೮] ವಿಶೇಷವಾಗಿ ವೀರಶೈವ ತಾತ್ವಿಕ

ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಈ ಕವಿಯ ಕೃತಿಗಳೆಲ್ಲವೂ ಸಂಪೂರ್ಣವಾಗಿ ಧರ್ಮ, ತತ್ತ್ವ, ನೀತಿಗಳನ್ನು ಪ್ರತಿಪಾದಿಸುತ್ತವೆ. ಪ್ರಸ್ತುತ ಕೃತಿಯೂ ಕೂಡ ಕಾಯಕದ ಮಹತ್ವವನ್ನು ಅರಿತುಕೊಂಡು ದೃಢಭಕ್ತಿಯಿಂದ ಶಿವನನ್ನು ಒಲಿಸಿಕೊಂಡ ಬಿಜ್ಜಮಹಾದೇವಿಯ ಹಿರಿಮೆಯನ್ನು ಕೊಂಡಾಡುತ್ತದೆ.

ಜಲಂಧರ ಕಾಳಗ : ಇದು ಇಮ್ಮಡಿ ಮುರಿಗಾಗುರುಸಿದ್ಧರ ಅಪ್ರಕಟಿತ ಕೃತಿ. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನದ(೧೮೦ನೆಯ ಕ್ರಮಾಂಕ ತಾಳೆಪ್ರತಿ) ಹಸ್ತಪ್ರತಿ ಭಂಡಾರದಲ್ಲಿ ಇದರ ಒಂದು ಪ್ರತಿ ಉಪಲಬ್ಧವಿದೆ. ಈ ಕೃತಿಯ ಆದಿ ಅಂತ್ಯವನ್ನು ಕುರಿತಾಗಿ, ಗೌ.ಮ. ಉಮಾಪತಿ ಶಾಸ್ತ್ರಿಗಳು 'ಯಕ್ಷಗಾನ ಹಸ್ತಪ್ರತಿಗಳ ವಿವರಣ ಸೂಚಿ'ಯಲ್ಲಿ ಹೇಳಿದ್ದಾರೆ. ಆರಂಭದಲ್ಲಿ 'ಶ್ರೀಗುರು ಬಸವಲಿಂಗಾಯ ನಮಃ|| ಶ್ರೀ ಗುರು ಮುರಿಗೇಂದ್ರಾಯನಮಃ|| ಚನ್ನಬಸವೇಶ್ವರ ದೇವರ ಪೌರಾಣ ದೊಳಗಣ ಜಲಂಧರನ ಕಾಳಗದ ಯಕ್ಷಗಾನ ಬರವುದಕ್ಕೆ ಶುಭಮಸ್ತು|| ಎಂದಿದ್ದಾನೆ. ಕಂದ ಪದ್ಯದಲ್ಲಿ ಶಿವನನ್ನು ಅನೇಕ ವಿಶೇಷಣಗಳಿಂದ ಸ್ಮರಿಸುತ್ತ

ಪರಮ ಮಹಾವೃಷಭ ಪೌರಾಣದೊಳಗೆ
ಪ್ರರಹರ ಜಲಂಧರನ ಶಿರವರಿದು ಧರಿಗೆ||
ಯಿಳುಹಿದಾ ಕಥನವನು ಯಕ್ಷಗಾನದಲಿ|
ತಿಳಿದಂತೆ ವರ್ನ್ನಿಸುವೆನು ಭವನ ಕರುಣದಲಿ
ತರುಳ ತೊದಲ್ನುಡಿಯೆಂದು ಅವನಿಸುಜನರು|
ಅರಿತು ತಪ್ಪಿರೆ ತಿದ್ದಿ ಮೆರಸಿ ಬಲ್ಲವರು||

ಈ ಯಕ್ಷಗಾನಕ್ಕೆ ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ' ಆಕರವಾಗಿದೆಯೆಂದು ಕವಿಯೇ ಹೇಳಿಕೊಂಡಿದ್ದಾನೆ. 'ಚೆನ್ನಬಸವ ಪುರಾಣ'ದಲ್ಲಿಯ ಶಿವನ ಪಂಚವಿಶಂತಿ ಲೀಲೆಗಳ ವರ್ಣನೆಗೆ ಸಂಸ್ಕೃತದ ಶಿವಪುರಾಣವೇ ಮೂಲ. ಜಲಂಧರ ಸಂಹಾರ ಈ ಲೀಲೆಗಳಲ್ಲಿ ಒಂದು. ಶಿವಪುರಾಣದ ರುದ್ರಸಂಹಿತೆಯ ಯುದ್ಧಕಾಂಡದಲ್ಲಿ ಜಲಂಧರನ ಪ್ರಸ್ತಾಪ ಸವಿಸ್ತಾರವಾಗಿದೆ. ಉಭಯ ಭಾಷಾ ಕವಿಯಾದ ಈತನು ಎರಡನ್ನು ಮುಂದಿಟ್ಟುಕೊಂಡು ಈ ಕೃತಿಯನ್ನು ಸಾರತರವಾಗಿ ರಚಿಸಿದಂತಿದೆ.[೧೯] 'ಶಿವಲಿಂಗ' ಎಂಬ ಅಂಕಿತವನ್ನು ಎಲ್ಲಾ ಕೃತಿಗಳಲ್ಲಿ ಬಳಸಿರುವಂತೆ ಇಲ್ಲಿಯೂ ಬಳಸಿದ್ದಾನೆ. ಆದರೆ ಕವಿ ಇಲ್ಲಿ ವಿದ್ಯಾಗುರು ಚನ್ನಬಸವೇಶನನ್ನು, ಶಿಕ್ಷಾಗುರು ಸೋಮಶೇಖರ ಶಿವಯೋಗಿಗಳನ್ನು ಸ್ಮರಿಸಿರುವನು. ಉಳಿದ ಕೃತಿಗಳಲ್ಲಿ ತನಗೆ ಜಂಗಮ ದೀಕ್ಷೆಯನ್ನು ನೀಡಿದ ಗುರು ಮುರಿಗಾ ಶಾಂತವೀರೇಶನನ್ನು ತಪ್ಪದೇ ಸ್ಮರಿಸಿದಂತೆ ಇಲ್ಲಿ ಸ್ಮರಣೆ ಮಾಡಿಲ್ಲ. ಬಹುಶಃ ಈ ಕೃತಿಯು ಇಮ್ಮಡಿ ಮುರಿಗಾಗುರುಸಿದ್ಧರು ಚಿತ್ರದುರ್ಗದ ಶೂನ್ಯಪೀಠಕ್ಕೆ ಅಧಿಪತಿಯಾಗುವ ಮೊದಲೇ ರಚಿಸಿರಬೇಕು. ಏಕೆಂದರೆ ಆರಂಭದ ಪದ್ಯದಲ್ಲಿ 'ತರುಳನ ತೊದಲ್ನುಡಿಯೆಂದು ಅವನಿಸುಜನರು| ಅರಿತು ತಪ್ಪಿರೆ

ತಿದ್ದಿಮೆರಸಿ ಬಲ್ಲವರು|' ಎಂಬ ಮಾತನ್ನು ಗಮನಿಸಿದಾಗ ಕವಿಯ ಚೊಚ್ಚಲ ಕೃತಿ ಇರಬೇಕು ಎಂಬ ಸಂದೇಹ ವ್ಯಕ್ತವಾಗುತ್ತದೆ.

'ಜಲಂಧರನ ಕಾಳಗ' ಬಹಳ ಲೋಕಪ್ರಿಯವಾದ ಪೌರಾಣಿಕ ಆಖ್ಯಾನ, ಅದನ್ನು ಆಧರಿಸಿ ಅನೇಕ ಕವಿಗಳು ಯಕ್ಷಗಾನಗಳನ್ನು ಬರೆದಿರುವರು. ಅಳಿಯ ಲಿಂಗರಾಜ ಈ ಕಥೆಯು ಪದ್ಮರಾಜ ಪುರಾಣದೊಳಗಣದೆಂದು ಹೇಳಿರುವನು. ಪುರಾಣಗಳಲ್ಲಿ ಜಲಂಧರ ಕಾಮುಕನಾಗಿ, ನಾರದನ ಪ್ರೇರಣೆಯಂತೆ ಪಾರ್ವತಿಯನ್ನೇ ಬಯಸಿದಾಗ ಶಿವನು ಅವನನ್ನು ಸಂಹರಿಸಿದನೆಂದು ಹೇಳಿದೆ. ಆದರೆ ವಿರೂಪಾಕ್ಷ ಪಂಡಿತ ಮತ್ತು ಇಮ್ಮಡಿ ಗುರುಸಿದ್ಧದೇಶಿಕ ಇಬ್ಬರೂ ಜಲಂಧರನನ್ನು ಒಬ್ಬ ಪ್ರಚ್ಛನ್ನ ಶಿವಭಕ್ತನ ರೂಪದಲ್ಲಿ ಕಂಡು ಅವನ ವ್ಯಕ್ತಿತ್ವವನ್ನು ಉದಾತ್ತೀಕರಿಸಿರುವುದು ಆದರ್ಶಮಯ.[೨೦]

ಕಥಾವಸ್ತು : ಒಮ್ಮೆ ದೇವೇಂದ್ರ, ಕಾಳಗದಲ್ಲಿ ವೃತ್ರಾದಿ ರಕ್ಕಸರನ್ನು ಕೊಂದು ಗರ್ವಿಸಿದ. ತನ್ನ ಶೌರ್ಯಕ್ಕೆ ತಕ್ಕ ಎದುರಾಳಿಯನ್ನು ಹೋರಾಡಲು ಕೊಡಬೇಕೆಂದು ಶಿವನಲ್ಲಿ ಬೇಡಿದ. ಈ ಹಮ್ಮಿನ ಮಾತಿಗೆ ಶಿವ ಸಿಟ್ಟಿಗೆದ್ದು, ದೇವೇಂದ್ರನ ಗರ್ವ ಭಂಗಿಸಲು ಹಣೆಗಣ್ಣಿನಿಂದ ಕಿಡಿಯೊಂದನ್ನು ಉಗುಳಿದ, ಸುರಗುರು ಬೃಹಸ್ಪತಿಯ ಪ್ರಾರ್ಥನೆಯಂತೆ ಶಿವನು ದೇವೇಂದ್ರನನ್ನು ಸುಡದಿರಲೆಂದು ಅದನ್ನು ಗಂಗಾ ಸಮುದ್ರದ ಸಂಗಮಕ್ಕೆ ಒಗೆದು ಬಿಟ್ಟ. ಆ ಕಿಡಿಯಿಂದ ದಿವ್ಯ ಶಿಶುವೊಂದು ರೂಪುತಾಳಿ ಅಳುತ್ತಿರಲು, ಸಮುದ್ರರಾಜ ಅದನ್ನು ಎತ್ತಿಕೊಂಡು, ಇಂದ್ರನನ್ನು ಗೆಲ್ಲುವ ವೀರ ವರನನ್ನು ಪಡೆಯಲು ಮಾಡಿದ ತನ್ನ ತಪಸ್ಸು ಫಲಿಸಿತೆಂದು ಸಂತೋಷಗೊಳ್ಳುತ್ತಾನೆ. ಈ ಕೂಸು ಮೂರು ಲೋಕಕ್ಕೆ ಕೇಳುವಂತೆ ಅರಚಿತು. ಬ್ರಹ್ಮನು ಅದರ ಅಬ್ಬರ ಕೇಳಿ ಸಮುದ್ರರಾಜನಲ್ಲಿಗೆ ಬಂದು ಆ ಅಸಮಾನ್ಯ ಶಿಶುವಿಗೆ 'ಜಲಂಧರ'ನೆಂದು ಹೆಸರು ಕರೆದು ಅಜೇಯನಾಗುವಂತೆ ವರವಿತ್ತು ಮುದ್ದಾಡಿದ.

ಜಲಂಧರ ಬೆಳೆದು ದೊಡ್ಡವನಾದ ಮೇಲೆ ಅವನು ಇಂದ್ರನಿಂದ ಸೋತ ರಕ್ಕಸರ ಸೇನೆಯನ್ನು ಒಂದುಗೂಡಿಸಿ ಪ್ರಬಲನಾದ. ರಾಹು-ಕೇತುಗಳಿಂದ ದೇವೇಂದ್ರನು ತನ್ನ ಸಾಕು ತಂದೆ ಸಮುದ್ರರಾಜನನ್ನು ಕಡೆದು ಸಂಪತ್ತಿನ ಜೊತೆಗೆ ಅಮೃತವನ್ನು ಕದ್ದೊಯ್ದು ಸುದ್ದಿ ಕೇಳಿ, ಶುಂಭನೆಂಬ ಸೇನಾಪತಿಯ ಮುಂದಾಳು ತನದಲ್ಲಿ ದೇವೇಂದ್ರನ ಅಮರಾವತಿಗೆ ದಾಳಿಯಿಟ್ಟ. ಜಲಂಧರನನ್ನು ಗೆಲ್ಲುವ ಸಾಮರ್ಥ್ಯ ಶಿವನ ಹೊರತಾಗಿ ಮತ್ತೆ ಯಾವ ದೇವಾಧಿದೇವತೆಗಳಿಗೂ ಇರಲಿಲ್ಲ. ವೈಕುಂಠವೂ ಅವನ ದಾಳಿಗೆ ತುತ್ತಾಯಿತು. ಮೂರು ಲೋಕಗಳಲ್ಲಿ ಹಾಹಾಕಾರವೆದ್ದಿತು. ದೇವತೆಗಳೆಲ್ಲ ಸೋತು ಶಿವನನ್ನು ಮೊರೆಹೊಕ್ಕರು. ಮದಾಂಧನಾದ ಜಲಂಧರನು ಕೈಲಾಸಕ್ಕೂ ಲಗ್ಗೆ ಇಡಲು ಮುಂದಾದ. ತಾನು ಶಿವನ ಕರುಣೆಯ ಕಂದನೆಂಬುದನ್ನೇ ಮರೆತು ಹೋರಾಡಿ ವೀರಭದ್ರಾದಿ ಗಣರನ್ನೆಲ್ಲ ಸೋಲಿಸಿ ಶಿವನೊಡನೆ

ಕಾದಲು ನಿಂತ. ಅವನು ಬಿಟ್ಟ ಬಾಣಗಳನ್ನೆಲ್ಲ ಶಿವ ಕತ್ತರಿಸಿದ. ಆಗ ಜಲಂಧರನ ಧೈರ್ಯ ಉಡುಗಿ ಅಹಂಕಾರವಡಗಿತು. ಶಿವ ಅವನಿಗೆ ನಿಜರೂಪವನ್ನು ತೋರಿದ. ವಿವೇಕೋದಯವಾಗಿ ಜಲಂಧರ ತನ್ನ ಹೃದಯದಲ್ಲಿದ್ದ ಚಿನ್ಮಯವಾದ ಪರವಸ್ತುವನ್ನು ತನ್ನ ಎದುರಿಗೇ ಕಂಡು ಶಿರಬಾಗಿ ಪರಶಿವನಲ್ಲಿ ಒಂದುಗೂಡಿ ಮುಕ್ತಿಯನ್ನು ಪಡೆದು ಧನ್ಯನಾದ ಎಂಬಲ್ಲಿಗೆ ಯಕ್ಷಗಾನವು ಮುಕ್ತಾಯವಾಗುತ್ತದೆ.

||ಯಿ ಪ್ರಕಾರ ಜಲಂಧರ ಕಾಳಗವಂನ್ನು ಶ್ರೀಕೈಲಾಸದಲ್ಲಿ
ಆ ಪರಶಿವನು ಗಿರಿಜಾಸಮೇತನಾಗಿ ಸಿಂಹಾಸನದಲ್ಲಿ
ಮೂರ್ತಂಗೈದು ನಂದಿ ಭೃಂಗಿಗುಹ ಗಣಪರುದ್ರಗಣ
ಮುಂತಾದರೊಡ್ಡೋಲಗಂಗೊಟ್ಟಿರುವ ಸಮಯದಲ್ಲಿ|
ಷಣ್ಮುಖೇಶ್ವರನಾದಂಥಾ| ಚಂನ್ನಬಸವೇಶ್ವರ ದೇವರು|
ತಂಮ್ಮ ಶಿಷ್ಯ ಸಿದ್ಧರಾಮೇಶ್ವರಗೆ| ಯಿ ಕಥಾಸಾರವಂನ್ನು
ಸಾಂಗವಾಗಿ ಬೋಧಿಸಿದುದು ಆ ಪರಶಿವ ಮೂರ್ತಿಯು
ಕೇಳ್ಳು| ಅತ್ಯಂತ ಪ್ರೀತಿಯಿಂದ ಬಾಲಕನ ಮುದ್ದಿಸುತ್ತಾ
ಸುಖದಿಂದಿರಲು ಆ ಮಹಾಶಕ್ತಿಯರು ಆರತಿಯನೆತ್ತುತಿರ್ದ್ದರದೆಂತೆನೆ ||೧|

ಎಂದು ಮಂಗಳಾರತಿ ಪದವನ್ನು ಕೃತಿಯ ಕೊನೆಯಲ್ಲಿ ಹೇಳುತ್ತಾರೆ. ಈ ಕಥೆಯನ್ನು ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣ ತನ್ನ ಶಿಷ್ಯ ಸೊನ್ನಲಿಗೆಯ ಸಿದ್ಧರಾಮನಿಗೆ ಹೇಳಿದಂತೆ ಕವಿ ಕಲ್ಪಿಸಿಕೊಂಡು ಬರೆದಿದ್ದಾನೆ. 'ತರಳನ ತೊದಲುನುಡಿ' ಎಂಬ ಮಾತು ಹಾಗೂ ಈ ಕೃತಿಯಲ್ಲಿ ಮುರಿಗಾ ಶಾಂತವೀರರ ಸ್ಮರಣೆ ಮಾಡದಿರುವುದನ್ನು ಗಮನಿಸಿದರೆ ಬಹುಶಃ ಈ ಕೃತಿಯು ಇಮ್ಮಡಿ ಮುರಿಗಾ ಗುರುಸಿದ್ಧರ ಆದ್ಯ ಕೃತಿ ಎನಿಸುತ್ತದೆ.

ಕೊರವಂಜಿ ಕಟ್ಟಳೆ : ಇಮ್ಮಡಿ ಮುರಿಗಾಗುರುಸಿದ್ಧರು ದೇಶೀ ರೂಪದಲ್ಲಿ ಬರೆದ ಮತ್ತೊಂದು ಲಘುಕಾವ್ಯ 'ಕೊರವಂಜಿ ಕಟ್ಟಳೆ'. ಜೈನ್ ಸಾಹಿತ್ಯದಲ್ಲಿ ಪ್ರಾಣಿ-ಪಕ್ಷಿ ಕಥೆಗಳ ಮೂಲಕ ಧರ್ಮದ ತಿರುಳನ್ನು ಪ್ರತಿಪಾದಿಸುವಂತೆ ಕಣಿ, ಶಕುನ, ಇಲ್ಲವೆ ಭವಿಷ್ಯ ಹೇಳುವ ನೆಪದಲ್ಲಿ ಶ್ರೀಸಾಮಾನ್ಯನ ಮನಸ್ಸನ್ನು ವಶೀಕರಿಸಿಕೊಂಡು ತತ್ತ್ವ-ಸಿದ್ಧಾಂತಗಳನ್ನು ಅನಾಯಾಸವಾಗಿ ತಿಳಿಸಿಕೊಡುವ ಉದ್ದೇಶದಿಂದ ಕನ್ನಡ ವಾಙ್ಮಯದಲ್ಲಿ ಕೊರವಂಜಿ ಸಾಹಿತ್ಯ ಒಂದು ಮಾಧ್ಯಮವೆಂಬಂತೆ ಬಳಕೆಯಾಗಿದೆ. ಭಾರತೀಯ ಶಾಸ್ತ್ರ ಸಾಹಿತ್ಯದಲ್ಲಿ ಜ್ಯೋತಿಷ್ಯ ಶಾಸ್ತ್ರಕ್ಕೆ ತನ್ನದೇ ಆದ ಸ್ಥಾನವಿದೆ. ಗುರು, ಶುಕ್ರ, ಮಂಗಳ ಮುಂತಾದ ನಕ್ಷತ್ರ ಗ್ರಹಗಳಿಂದ ಮಾನವನ ಬದುಕಿನ ಆಗುಹೋಗುಗಳನ್ನು ಹೇಳುವ ಈ ಶಾಸ್ತ್ರಕ್ಕೆ ಖಗೋಳಶಾಸ್ತ್ರದ ಮಾನ್ಯತೆಯಿದೆ. ಜ್ಯೋತಿಷ್ಯಶಾಸ್ತ್ರಕ್ಕಿಂತ ಭಿನ್ನವಾದ ಲಕ್ಷಣವನ್ನೊಳಗೊಂಡಿರುವ ಕೊರವಂಜಿ ಸಾಹಿತ್ಯದಲ್ಲಿ ಹಲ್ಲಿಶಕುನ, ಗಾರ್ಧಬ ಶಕುನ(ಕತ್ತೆಯ ಚಲನೆ, ಕೂಗುಗಳ ಆಧಾರದಿಂದ ಹೇಳುವ ಭವಿಷ್ಯ) ಹಕ್ಕಿ ಶಕುನಗಳಂತೆ ಮನಸ್ಸಿನ ಭಾವನೆಗಳನ್ನು ಅಧ್ಯಯನ ಮಾಡಿ, ಇಲ್ಲವೇ ಅವರು ಕೇಳುವ ಪ್ರಶ್ನೆಗಳನ್ನು ಆಧರಿಸಿ ಹೇಳುವ ಶಕುನ ಸಾಹಿತ್ಯವಿದು. ಪದ್ಯ-ಗದ್ಯ ಶೈಲಿಯ

ಇದು ಗೀತ ಹಾಗೂ ವಚನ(ಮಾತು)ಗಳ ಸಂಗಮವಾಗಿದೆ. ಲೌಕಿಕ ಭಾಷೆಯ ಮೂಲಕ ಅಲೌಕಿಕ ಭಾವವನ್ನು ಪ್ರಕಟಿಸುವುದು ಈ ಸಾಹಿತ್ಯದ ವೈಶಿಷ್ಟ್ಯವಾಗಿದೆ.[೨೧]

ಬೆಡಗು-ಸಾಂಕೇತಿಕ ಅರ್ಥಗಳನ್ನು ಪ್ರಶ್ನೆ-ಉತ್ತರಗಳ ಮೂಲಕ ದೇವರ ಅಸ್ತಿತ್ವ, ಸ್ವರೂಪ, ಮಹತ್ವವನ್ನು ಬಿಡಿಬಿಡಿಯಾಗಿ ಬಿಚ್ಚಿತೋರಿಸುವ ಈ ಸಾಹಿತ್ಯಕ್ಕೆ ತನ್ನದೇ ಆದ ಪರಿಭಾಷೆಯಿದೆ. ಕಾವ್ಯಗಳು, ಉಪನಿಷತ್ತುಗಳು, ಪುರಾಣಗಳು ಸಾಧಿಸುವ ಗುರಿಯನ್ನು ಈ ಕೊರವಂಜಿ ಸಾಹಿತ್ಯವೊಂದೇ ಸಾಧಿಸಬಲ್ಲದು, ಸಾಂಸಾರಿಕ ದೃಶ್ಯಗಳನ್ನು ದೈವೀಸ್ವರೂಪಕ್ಕೆ ರೂಪಿಸುವ, ಜೀವಭಾವಗಳಲ್ಲಿ ಶಿವಭಾವವನ್ನು ತುಂಬುವ ಶಕ್ತಿ ಈ ಸಾಹಿತ್ಯಕ್ಕಿದೆ.[೨೨] ಈ ಸಾಹಿತ್ಯವನ್ನು ಸೃಷ್ಟಿಸಿದವರು ಶಿವಕವಿಗಳು, ಶಿವಾನುಭಾವಿಗಳು. ಶಿವನ ಒಲುಮೆಗಾಗಿ ಉಗ್ರ ತಪಸ್ಸು ಮಾಡುತ್ತಿರುವ ಗಿರಿಜೆಯನ್ನು ಪರೀಕ್ಷಿಸಲು ಶಿವನು ತಳೆದ ಹಲವಾರು ವೇಶಗಳಲ್ಲಿ ಕೊರವಂಜಿ ವೇಷವೂ ಒಂದು ಎಂಬ ಪ್ರತೀತಿಯಿದೆ. ತಪಸ್ಸಿಗೆ ಕುಳಿತ ಅರ್ಜುನನ ಪರೀಕ್ಷೆಗಾಗಿ ಕಿರಾತ ಕಿರಾತೆಯ ವೇಷದಲ್ಲಿ ಬರುವ ಶಿವ-ಪಾರ್ವತಿಯರಲ್ಲಿ ಕಿರಾತೆಯೆ ಕೊರವಿಯೆಂದು ಹೇಳುವ ಮತ್ತೊಂದು ಪ್ರತೀತಿಯಿದೆ. ಪುರಾಣದಲ್ಲಿ ನಾರದನಿದ್ದಂತೆ ಜನಪದ ಸಾಹಿತ್ಯದಲ್ಲಿ ಕೊರವಂಜಿ ಇರುತ್ತಾಳೆ. ಪ್ರಸ್ತುತ 'ಕೊರವಂಜಿ ಕಟ್ಟಳೆ' ವಿಶಿಷ್ಟ ರೂಪದ ಕೃತಿಯಾಗಿದ್ದು 'ಗದ್ಯ-ಪದ್ಯಗಳಿಂದ ದೇವ ಲೋಕದ ಕೊರವಂಜಿ ಕಣಿ ಹೇಳುವ ರೀತಿಯಲ್ಲಿ ವೀರಶೈವ ಧರ್ಮ-ತತ್ತ್ವಗಳನ್ನು ನಿರೂಪಿಸಲಾಗಿದೆ. ಕವಿ ಈ ಮೂಲಕ ಜನಪದ ಕಲಾ ಮಾಧ್ಯಮವನ್ನು ಬಳಸಿಕೊಂಡಿರುವುದು ಗಮನಾರ್ಹವೆನಿಸಿದೆ.[೨೩]

ಈ ಕೃತಿಯಲ್ಲಿ ಗುರುಶಾಂತೇಶ್ವರನೇ ಕೊರವಂಜಿ ವೇಷದಲ್ಲಿ ಕಲ್ಯಾಣಪುರಕ್ಕೆ ಬಂದು ಶರಣಸತಿಯರಿಗೆ ಕಣಿ ಹೇಳುವ ರೀತಿಯಲ್ಲಿ, ವೀರಶೈವ ಧರ್ಮ ತತ್ತ್ವಗಳನ್ನು ಹೇಳುವಂತೆ ಗದ್ಯ-ಪದ್ಯ, ರಾಗ-ತಾಳ ಸಮನ್ವಿತವಾಗಿ ನಿರೂಪಿಸಿದ್ದಾನೆ. ಆರಂಭದಲ್ಲಿ ಶಿವಲಿಂಗ ಸ್ತುತಿಯ ಜೊತೆಗೆ ಕೊರವಂಜಿಯ ಬಾಹ್ಯ ಲಕ್ಷಣಗಳಾದ ತುರುಬು, ಮಲ್ಲಿಗೆಯ ಮಾಲೆ, ಕಣ್ಣಲ್ಲಿ ಅಂಜನರೇಖೆ, ಹಣೆಯಲ್ಲಿ ವಿಭೂತಿ, ತಿಲಕ, ಕೈಯಲ್ಲಿ ರನ್ನದ ಕುಕ್ಕೆ, ನಾಗರಬೆತ್ತ ಹಿಡಿದು ಬರುವ ಅವರ ವೇಷವನ್ನು ಕುರಿತು ಹೇಳುವನು. ಆ ಕೊರವಂಜಿಯು ಬಂದೊಡನೆ.

> ಕೈಯ ನೋಡುವೆನಿಲ್ಲಿಬಾರೆ ನಿನ್ನ
> ಮೈಯೊಳಿರ್ದುದ ಪೇಳ್ವೆ ನೀರೆ

ಎಂಬ ಮಾತನ್ನು ಆಲಿಸಿದ 'ಮಾದೇವಿ'ಗೆ ಕಣಿ ಹೇಳಲು ಪ್ರಾರಂಭಿಸುತ್ತಾಳೆ. ಮೂಡಣ, ಪಡುವಣ, ತೆಂಕಣ, ಬಡಗಣ ದಿಕ್ಕುಗಳಲ್ಲಿರುವ ಮೂರು ದಾರಿಗಳಿಗೆ ಸೀಸರೂರು, ಇಂದುವಾಡಿ, ಬೆಂಕಿಪುರ ಎಂಬ ಹೆಸರನ್ನಿಟ್ಟು ಪ್ರತಿ ದಿಕ್ಕುಗಳಲ್ಲಿರುವ ದೇವಿಯರನ್ನು ಆರಾಧಿಸಬೇಕು. ಬೆಂಕಿಪುರದ ಕೇರಿಗಳೆನಿಸಿದ ಸೇಂದ್ರಪುರ, ಈಷಾಗ್ನಿಪುರ, ಶಾಂತಕಪುರ, ವಾಸುರಪುರ, ಲವಣಖಣಪುರ, ರತವಶನಪುರ,

ಕುಬೇರಪುರಗಳಲ್ಲಿರುವ ವಾಮೇಶ್ವರಿ, ಜೇಷ್ಠಾದೇವಿ, ರೌದ್ರಿ, ಕಾಳಿಕಾದೇವಿ, ಜಟಾದೇವಿ, ಜಲಪ್ರಮಥಿನಿ, ಮನೋನ್ಮನಿಯರೆಂಬ ದೇವಿಯರನ್ನು. ಇಂದುವಾಡಿಯ ಹೊರಭಾಗದ ಕೇರಿಯಲ್ಲಿರುವ ಉಮೇಶ್ವರ, ಚಂಡೇಶ್ವರ, ನಂದಿಕೇಶ್ವರ, ಮಹಾಕಾಶ, ಭಂಗೀರಿಟ, ಗಣೇಶ್ವರ, ವೃಷಭೇಶ್ವರ, ಷಣ್ಮುಖರೆಂಬ ಎಂಟು ಗಣೇಶ್ವರರನ್ನು. ಸೀಸನೂರಿನ ಹೊರಭಾಗದ ಕೇರಿಗಳಲ್ಲಿರುವ ಅನಂತಸೂಕ್ಷ್ಮ, ಶಿವೋತ್ತಮ, ಅನೇಕನೇತ್ರ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿಗಳೆಂಬ ಅಷ್ಟವಿದ್ಯೇಶ್ವರರನ್ನು. ಅಗ್ನಿ, ನಿರುತಿ, ವರುಣ, ವಾಯು, ಕುಬೇರ, ಈಶಾನ, ಧರ, ಧ್ರುವ, ಸೋಮ, ಧನಪ, ನೀಲ, ನಳ, ಪ್ರತ್ಯೇಕ ಮೊದಲಾದ ದಿಕ್ಪಾಲಕರನ್ನು. ಮೂಡಣ ಮೊದಲಾಗಿ ಈಶಾನ್ಯ ಕಡೆಯಾದ ನಾಲ್ಕು ದೇಗುಲಗಳ ದೇವರುಗಳನ್ನು ಸೀಸರೂರಿನ ಇಪ್ಪತ್ತನಾಲ್ಕು ಕೇರಿಗಳಲ್ಲಿರುವ ನಾಲವತ್ತೆಂಟು ದೇವರನ್ನು ಪೂಜಿಸಬೇಕು.

ಈ ರೀತಿಯಾಗಿರುವ ಸೀಸರೂರು, ಇಂದುವಾಡಿ, ಬೆಂಕಿಪುರಗಳಿಗೆ ಶ್ರೀಶಾಂತೇಶ್ವರನ ಶ್ರೀರಕ್ಷೆಯಿದೆ. ಈ ಮೂರು ಊರುಗಳನ್ನು ಒಂದು ಮಾಡುವುದಕ್ಕಾಗಿ ಆತ ಪ್ರಥಮದಲ್ಲಿ ಚಿಣೆಯೆಂದು ದನಿದೋರುವನು, ಘಂಟೆಯಂತೆನಾದ ಮಾಡುವನು, ಶಂಖದಂತೆ ಬೊಂಬಾಳಿಸುವನು, ತಂತಿಯಂತೆ ಮೊರೆವನು, ತಾಳದಂತೆ ತೈ ತೈ ತತ್ತತೈ ಎಂದು ಕುಣಿವನು, ಭೇರಿಯ ರಭಸದಂತೆ ಮದ್ದಳೆ ನುಡಿಸುವನು, ಮೋಡದಂತೆ ಗುಡುಗುಡೆಂದು ಗುಡುಗುಟ್ಟುವನು ಹೀಗೆ ಹಲವು ಬಗೆಯ ವೇಷಧಾರಿಗಳಾದ ಈ ದೇವರುಗಳೆಲ್ಲರೂ ಶ್ರೀ ಶಾಂತೇಶ್ವರನ ಪ್ರತಿ ಸ್ವರೂಪದವರು. ಅವರ ಬಿಟ್ಟು ಶಿವನಿಲ್ಲ, ಶಿವನೇ ಅವರು ಎಂದು ತದ್ರೂಪವನ್ನು ಅರುಹುತ್ತಾನೆ. ಪ್ರತಿ ಕೇರಿಯಲ್ಲಿರುವ ಚಂದ್ರವೀಧಿ, ದಿನೇಂದ್ರಿವೀಧಿ, ರಸಪುರದಲ್ಲಿರುವ ಶಿವನ ನೆಲೆಗಳನ್ನು, ಸೋಮವೀಧಿ. ಸೂರ್ಯವೀಧಿ, ಕಿಚ್ಚುವಾಡಿಯ ಅಮರರೆನಿಸಿದ ವಾಙ್ಮಯ ಜಯೆ ಸುಮುಖಿ ನಿರುಪಮೇಶ್ವರಿ, ರೇವತಿ, ಮಾಧವಿ, ಮೊದಲಾದ ಸದೇವಿಯರನ್ನು ಪೂಜಿಸಬೇಕು. ಈ ರೀತಿಯಾಗಿರುವ ಆರು ಊರುಗಳು ಕೂಡಿ ಮೂರಾಗಿವೆ. ಮೂರು ಊರುಗಳು ಕೂಡಿ ಎರಡಾಗಿವೆ. ಈ ಎರಡು ಊರುಗಳು ಕೂಡಿ ಒಂದೇಯಾಗಿದ್ದು ಇದರಲ್ಲಿ ಗೋಪ್ಯವಾಗಿ ಕಂಗೊಳಿಸುತ್ತಿರುವುದೇ ಶಿವಲಿಂಗವು ಎಂದು ಹೇಳುವುದರೊಂದಿಗೆ ಕೊರವಂಜಿ ತನ್ನ ನಿಜಸ್ವರೂಪನ್ನು ತೋರಿಸುವಳು.

ಹೀಗೆ ಕೃತಿಯಲ್ಲಿ ವೀರಶೈವ ಷಟ್‌ಸ್ಥಲ ತತ್ವಗಳನ್ನು ಹೇಳಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಕೊರವಂಜಿಯು ಕಲ್ಯಾಣದ ಶರಣ ಸತಿಯರಿಗೆ ಎಲೆ ಕೆಳದಿ, ಎಲೆಯವ್ವ, ಚೆನ್ನೆ, ಸಂಪನ್ನೆ, ಕೆಂಚಿ, ಕೆಂಪಿ ಎಂದೆಲ್ಲಾ ಸಂಬೋಧಿಸುತ್ತಾ ಪ್ರಶ್ನೋತ್ತರಗಳ ರೂಪದಲ್ಲಿ ವಿಷಯವನ್ನು ಅರುಹುತ್ತಾ ಹೋಗಿರುವುದು ಗಮನಾರ್ಹ ಸಂಗತಿಯಾಗಿದೆ. ಇದರ ಪರಿಣಾಮದಿಂದ ಮಾನಸಿಕ ತೊಳಲಾಟದಲ್ಲಿ ಬಳಲುವ ಜೀವಿಗಳಿಗೆ ಶಿವಸಾನಿಧ್ಯವನ್ನು ಹೊಂದುವ ಪರಿಯನ್ನು ಕೊರವಂಜಿ ಸಾಹಿತ್ಯವು ಸಮರ್ಥವಾಗಿ

ಪೂರೈಸುತ್ತದೆ. ಹೀಗೆ ತತ್ವದ ತಳಹದಿಯ ಮೇಲೆ ಬದುಕಿನ ಹಲವು ರೀತಿ ನೀತಿಗಳನ್ನು ರೂಪಿಸುವುದು ಈ ಸಾಹಿತ್ಯದ ಪ್ರಮುಖ ಉದ್ದೇಶವಾಗಿದೆ.

ಅಡಿಟಿಪ್ಪಣಿಗಳು

೧. ಎಲ್. ಬಸವರಾಜು (ಸಂ), ಶಿವದಾಸ ಗೀತಾಂಜಲಿ, ಪೀಠಿಕೆ, ಪು.೨೩

೨. ವೀರಣ್ಣ ರಾಜೂರ(ಲೇ) ತಾರಾವಳಿ ಸಾಹಿತ್ಯ, ಗೌರವ, ಪು.೪೨೫

೩. ಅದೇ, ಪು.೪೨೬

೪. ಅದೇ, ಪು.೪೨೮

೫. ವಿವರಗಳಿಗೆ ನೋಡಿ ಇಮ್ಮಡಿ ಗುರುಸಿದ್ಧರ ಜೀವನ

೬. ಎಸ್. ವಿದ್ಯಾಶಂಕರ(ಸಂ), ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಗಳ ಕೃತಿಗಳು, ಪೀಠಿಕೆ, ಪು.xi

೭. ಎಂ.ಎಸ್. ಬಸವರಾಜಯ್ಯ(ಸಂ), ಮುರಿಗೆ ತಾರಾವಳಿ, ಪೀಠಿಕೆ ಪು.೯

೮. ಅದೇ, ಪೀಠಿಕೆ ಪು.೧೩

೯. ಜಿ. ವೆಂಕಟಸುಬ್ಬಯ್ಯ, ಕನ್ನಡನಿಘಂಟುಗಳ ಕಿರುಚರಿತ್ರೆ, ಪು.೬೯-೭೦

೧೦. ಬಿ.ಆರ್. ಹಿರೇಮಠ(ಲೇ) ಕನ್ನಡಗ್ರಂಥಗಳಿಗೆ ಬರೆದ ಕನ್ನಡಟೀಕಾಸಾಹಿತ್ಯ, ಗೌರವ, ಪು.೫೬೦

೧೧. ಅದೇ, ಪು.೫೬೧

೧೨. ಪಂಢರೀನಾಥಾಚಾರ್ಯಗಲಗಲಿ(ಸಂ), ಸ್ಕಂದಮಹಾಪುರಾಣ, ಪೀಠಿಕೆ, ಪು.೧

೧೩. ಎಸ್.ಶಿವಣ್ಣ(ಸಂ), ವೀರಶೈವ ಅಪ್ರಕಟಿತ ಕೃತಿಗಳು, ಪು.೪೫

೧೪. ಎಸ್. ಶಿವಣ್ಣ(ಸಂ), ಸ್ಕಂದಕಲ್ಯಾಣದೊಳಗಣ ಚೌಪದಿವರ್ಣದ ಶಿವಸ್ತೋತ್ರ, ಚಿನ್ಮೂಲಾದ್ರಿ ಚೇತನ, ಸ್ಮರಣ ಸಂಚಿಕೆ ಪು.೬೩-೬೪

೧೫. ಎಸ್. ಶಿವಣ್ಣ(ಸಂ), ಸ್ಕಂದಕಲ್ಯಾಣದಲ್ಲಿನ ಶಿವಸ್ತೋತ್ರ, ಬಸವಪಥ ಸಂಪುಟ-೧೧, ಸಂಚಿಕೆ-೧೨, ಮಾರ್ಚ್, ೧೯೯೦

೧೬. ಎಸ್. ಶಿವಣ್ಣ(ಸಂ), ಕಗ್ಗದ ವೀರಮಾಸ್ತೇರದ್ವಿಪದಿ ಸ್ತೋತ್ರ, ಸಾಧನೆ, ಸಂಪುಟ-೧೮, ಸಂಚಿಕೆ-೧೨, ೧೯೮೯

೧೭. ಅಂಬಳಿಕೆ ಹಿರಿಯಣ್ಣಯ್ಯ(ಲೇ), ಯಕ್ಷಗಾನ ಸಾಹಿತ್ಯ, ಗೌರವ, ಪು.೪೯೮

೧೮. ಎಸ್. ವಿದ್ಯಾಂಶಕರ(ಸಂ), ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಗಳ ಕೃತಿಗಳು, ಪ್ರಸ್ತಾವನೆ, ಪು.೨೯

೧೯. ಗೌ.ಮ.ಉಮಾಪತಿಶಾಸ್ತ್ರಿಗಳು, 'ಯಕ್ಷಗಾನ ಹಸ್ತಪ್ರತಿಗಳ ವಿವರಣ ಸೂಚಿ', ಪು.೮೩

೨೦. ಅದೇ, ಪು.೮೭

೨೧. ಕೆ. ರವೀಂದ್ರನಾಥ(ಸಂ), ಬಸವಯುಗದ ವಚನೇತರ ಸಾಹಿತ್ಯ, ಪ್ರಸ್ತಾವನೆ, ಪು.೩೦

೨೨. ಜ.ಚ.ನಿ. ಕೊರವಂಜಿ ಸಾಹಿತ್ಯ, ಪು.೭

೨೩. ಬಿ.ಆರ್. ಹಿರೇಮಠ(ಸಂ), ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಗಳ ಐದು ಕೃತಿಗಳು ಪ್ರಸ್ತಾವನೆ, ಪು.೪

ಸಂಸ್ಕೃತ ಕೃತಿಗಳು

೧. ಪ್ರಭುಲೀಲೆ

೨. ಚಾಮರ ವೃತ್ತ

೩. ನಂದೀಶ್ವರ ಜಯದಂಡಕಂ

ಸಂಸ್ಕೃತ ಭಾಷೆಯ ಪಂಡಿತರಾಗಿದ್ದ ಇಮ್ಮಡಿ ಮುರಿಗಾಗುರುಸಿದ್ಧರು 'ಪ್ರಭುಲೀಲೆ', 'ಚಾಮರ ವೃತ್ತ', 'ನಂದೀಶ್ವರ ಜಯದಂಡಕಂ' ಎಂಬ ಮೂರು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಚಾಮರವೃತ್ತ, ನಂದೀಶ್ವರ ಜಯದಂಡಕಂ ಕೃತಿಗಳು ಅನುಪಲಬ್ಧವಾಗಿವೆ. ಪ್ರಭುಲೀಲೆಯನ್ನು ಡಾ.ಜಿ. ಮರುಳಸಿದ್ಧಯ್ಯನವರು ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯು ಚಾಮರಸನ 'ಪ್ರಭುಲಿಂಗಲೀಲೆ' ಮತ್ತು ವ್ಯಾಸಕೃತ ಭವಿಷ್ಯ ಪುರಾಣಾಂತರ್ಗತ 'ಪ್ರಭುಲಿಂಗ ಲೀಲೆ'ಗಳನ್ನು ಆಧರಿಸಿ ರಚಿತವಾಗಿದೆ. ಕೃತಿಯ ಆರಂಭದಲ್ಲಿ ಶಿವ, ಪಾರ್ವತಿ, ವಿಘ್ನೇಶ್ವರ, ಷಣ್ಮುಖಸ್ವಾಮಿ, ವೀರಭದ್ರಸ್ವಾಮಿ, ನಂದೀಶ್ವರ, ಭೃಂಗೀಶ್ವರರನ್ನು ಮಾತ್ರ ಸ್ತುತಿಸುತ್ತಾನೆ ಹೊರತು ತನ್ನ ಕನ್ನಡ ಕಾವ್ಯಗಳಲ್ಲಿ ಬಸವಾದಿ ಶರಣರನ್ನು, ತೋಂಟದ ಸಿದ್ಧಲಿಂಗಯತಿಗಳನ್ನು ನೆನದಿರುವಂತೆ ಈ ಕಾವ್ಯದಲ್ಲಿ ನೆನೆಯುವುದಿಲ್ಲ.

ಪ್ರಾಚೋಽದ್ಯ ವರ್ತಿನ ಶ್ಯಂಭು ಸದ್ಭಕ್ತಾನ್ಭಾವಿನಶ್ಶಿವಾನ್
ಸಂಭಾವ್ಯಸ್ವಾಂತಃ ಪದ್ಮೇಽಹಂ ರಚಯಾಮ್ಯುತ್ತಮಾಂ ಕೃತಿಮ್॥

ಭೂತ-ಭವಿಷ್ಯತ್ -ವರ್ತಮಾನ ಕಾಲದಲ್ಲಿಯೂ ಇರುವ, ಶಿವಸ್ವರೂಪನಾದ ಶಿವನ ಸಂಬಂಧವಾದ, ಶ್ರೇಷ್ಠ ಭಕ್ತರುಗಳನು ಒಳಗೊಂಡಂತಹ ವ್ಯಕ್ತಿಯನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು ಶ್ರೇಷ್ಠವಾದ,

ಉತ್ಕೃಷ್ಟವಾದ ಕಾವ್ಯವನ್ನು ನಾನು ಬರೆಯುತ್ತೇನೆ ಎಂದು ಹೇಳುತ್ತಾನೆ. ಲೋಕದಲ್ಲಿ ಈ ಸತ್-ಕಾವ್ಯವನ್ನು ಹೊಗಳುವ ಸಜ್ಜನರ ಜೊತೆಗೆ, ದೂಷಿಸುವ ದುರ್ಜನರೂ ಇರುತ್ತಾರೆ. ಅಂಥವರು ಎರಡು ಕಾಲಿನ ನಾಯಿಗಳು ಇದ್ದಂತೆ ಎನ್ನುತ್ತ ದೇವತೆಗಳರ್ಥ, ದುರ್ಜನಾರ್ಥ, ಸತ್ಪುರುಷಾರ್ಥ, ಎಂಬುವುಗಳಿಗೆ ಒಂದೊಂದು ವೃತ್ತದಲ್ಲಿ ವಿವರಣೆ ನೀಡುತ್ತಾನೆ.

ಹಲವಾರು ಕನ್ನಡ ಕೃತಿಗಳನ್ನು ರಚಿಸಿದ ಇವರು 'ಹಾಲಾಸ್ಯ ಪುರಾಣ' ಹೊರತುಪಡಿಸಿ ಉಳಿದ ಯಾವ ಕಾವ್ಯಗಳಲ್ಲೂ ತಮ್ಮ ಆತ್ಮಕಥವನ್ನು ಹೇಳಿಕೊಳ್ಳಲಾರದ ಇವರು 'ಪ್ರಭುಲೀಲೆ'ಯ ಪ್ರಥಮಸರ್ಗದ ೨೯ನೇ ಶ್ಲೋಕದಿಂದ ೩೯ನೇ ಶ್ಲೋಕಗಳವರೆಗೆ ಜೀವನ ವೃಂತ್ತಾಂತವನ್ನು ಹೇಳಿಕೊಂಡಿದ್ದಾರೆ. ಇದರ ಪ್ರಕಾರ ಧನುಗೂರು(ಧನುಃಪುರಿ) ಶ್ರೀಮನ್ಮಹಾನಿರಂಜನ ಪೀಠಾಧಿಪತಿಯಾಗಿ, ಮಹಾ ಉಪದೇಶಕನಾದ, ದಕ್ಷಿಣಾ ಮೂರ್ತಿಯಂತೆ ಕಂಗೊಳಿಸುತ್ತಿದ್ದ ಗುರು ಉದ್ಧಾನಮೂರ್ತಿ (ಗಗನದಾರ್ಯ) ಈ ಉದ್ಧಾನಮೂರ್ತಿಯ ವಂಶೋದ್ಭವ ಇಮ್ಮಡಿ ಮುರಿಗಾಗುರುಸಿದ್ಧದೇಶಿಕನು. ಈತನು ಸೋಮಶೇಖರಸದ್ಗುರು ಕರಸಂಜಾತನೆಂದೂ, ಶ್ರೀಬಸವಲಿಂಗ ಸ್ವಾಮಿಗಳಿಂದ ಶಿಕ್ಷಣ ಪಡೆದವನು, ಮುರಿಗಾ ಶಾಂತವೀರರ ಅನುಗ್ರಹಕ್ಕೆ ಪಾತ್ರನಾಗಿ ಷಟ್ ಸ್ಥಲಜ್ಞಾನ ಪಡೆದು ಗುರುರೂಪ ಪಡೆದವನು ಎಂದು ಹೇಳಿಕೊಳ್ಳುತ್ತಾನೆ. ಈ ವಿವರಗಳು ಆತನ ಜೀವನ ಚರಿತ್ರೆ ತಿಳಿಯುವಲ್ಲಿ ತುಂಬಾ ಮಹತ್ವದ ಪಾತ್ರ ನಿರ್ವಹಿಸುತ್ತವೆ.

ಎಂಟು ಸರ್ಗಗಳು, ೬೮೩ ವೃತ್ತಗಳನ್ನು ಒಳಗೊಂಡ ಈ ಕೃತಿಯಲ್ಲಿ ಮಲ್ಲಿಕಾಮಾಲೆ, ತರಳ, ಶಾಲಿನಿ, ವಸಂತತಿಲಕ ವೃತ್ತಗಳನ್ನು ಬಳಸಿದ್ದಾನೆ. ಮೊದಲನೆಯ ಸರ್ಗದಲ್ಲಿ ಸ್ತುತಿ ಪದ್ಯಗಳ ಜೊತೆಗೆ ಆತ್ಮಕಥವನ್ನು ಹೇಳಿಕೊಂಡಿದ್ದಾರೆ. ಎರಡನೆಯ ಸರ್ಗವು ಸ್ತುತಿಪದ್ಯಗಳ ಜೊತೆಗೆ ಆತ್ಮಕಥವನ್ನು ಹೇಳಿಕೊಂಡಿದ್ದಾರೆ. ಎರಡನೆಯ ಸರ್ಗವು ನಿಂದ್ಯವಲ್ಲದ ಶ್ರೇಷ್ಠವಾದ ವಿದ್ಯೆ, ಅನುಪಮವಾದ ಧರ್ಮದಿಂದ ಸತ್ಯಸ್ವರೂಪನಾದ ಈಶ್ವರನೂ ಆಗಿರುವ, ಲಿಂಗಸ್ವರೂಪಿಯಾದ ಅಲ್ಲಮನು ಭೂಮಿಯಲ್ಲಿ ಅವತರಿಸುವ ರೀತಿಯನ್ನೂ ಹಾಗೂ ಬ್ರಹ್ಮೈಕ ಜ್ಞಾನವನ್ನು ಅನುಗ್ರಹಿಸುವವನು, ಮುಕ್ತಿ ಮಾರ್ಗವನ್ನು ತೋರುವ ಶಕ್ತಿಯುಳ್ಳವನು ಎಂದು ಅಲ್ಲಮ ಶಬ್ದದ ನಿರ್ವಚನ ಮಾಡುತ್ತಾನೆ. ಅಲ್ಲಮನ ಜನನ, ಬಾಲ್ಯದ ವರ್ಣನೆ ಇಲ್ಲಿ ಬರುತ್ತದೆ. ಮೂರನೇ ಸರ್ಗದಲ್ಲಿ ಮಾಯೆಯ ಜನನ, ರಾಜಕೀರ್ತಿ ವರ್ಣನೆ. ತಪೋದೇಶ ವರ್ಣನೆ, ಅಲ್ಲಮನ ಪುರಪ್ರವೇಶ ಮೊದಲಾದ ವಿಷಯಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ವೀರಶೈವರಲ್ಲಿ ವೈರಾಗ್ಯ ಮೂರ್ತಿಯೆಂದು ಹೆಸರು ಪಡೆದ, ಶೂನ್ಯಸಿಂಹಾಸನದ ಆದ್ಯಗುರುವಾದ ಅಲ್ಲಮ ಪ್ರಭುವಿನ ಜೀವನ ಚರಿತ್ರೆಯ ವಿಷಯ ಈ ಕೆಳಗಿನಂತೆ ಮೂಡಿಬಂದಿದೆ.

ಕಥಾವಸ್ತು : ಕೈಲಾಸದ ಶಿವನ ಒಡ್ಡೋಲಗದಲ್ಲಿ ಒಂದು ದಿನ ಶಿವನನ್ನು ಕುರಿತು ಪಾರ್ವತಿಯು ದೇವಾ, ನಿನ್ನ ಒಡ್ಡೋಲಗದಲ್ಲಿದ್ದ ಘನ ಮಹಿಮರೆಲ್ಲರು ಭವಕೆ ಬಾರದೆ ನಿತ್ಯ ಸುಖದಿಂದಿರುವರೋ ಇಲ್ಲವೇ ಅವರಿಗೆ ನೆಲೆಯೇ ಇಲ್ಲವೋ! ಎಂದು ಕೇಳಲು, ಶಂಕರನು-ನಾಮರೂಪಕ್ರಿಯೆಗಳನ್ನು ಗೆಲ್ಲಬಲ್ಲವರ ಹೊರತು ಉಳಿದವರಾರಿಗೂ ನಿತ್ಯಸುಖವು ದೊರೆಯಲಾರದು. ಕಾರಣ ಭೂಮಿಯಲ್ಲಿ ಮಾನವ ಶರೀರದಿಂದ ಜನಿಸಿ ಸಾಧನೆ ಮಾಡಿ ನಿಜವನರಿಯಬೇಕಾಗುವುದು ಎಂದು ಹೇಳಿದನು. ಪಾರ್ವತಿಯು ಭೂಲೋಕದಲ್ಲಿ ನಿಜವನ್ನು ಬೋಧಿಸುವ ಗುರು ಯಾರು? ಎಂದು ಕೇಳಲು, ಸುಜ್ಞಾನಿ ನಿರಹಂಕಾರರೆಂಬುವರಿಗೆ ಮಗನಾದ ಅಲ್ಲಮನು ಎಂದು ಉತ್ತರಿಸುತ್ತಾನೆ. ಆಗ ಪಾರ್ವತಿಯು ಅಲ್ಲಮನು ತನಗೆ ಗೊತ್ತಿದ್ದವನೆ ಅದ್ದುದರಿಂದ ಅವನನ್ನು ಸುಲಭವಾಗಿ ಒಲಿಸಿಕೊಂಡು ನಿಜವನ್ನು ತಿಳಿಯವೆನೆಂದು ಪಣತೊಟ್ಟು, ತನ್ನ ತಾಮಸಕಳೆಯ ಮೂರುತಿಯಾದ ಮಾಯೆಯನ್ನು ಸೃಷ್ಟಿಸಿ ಭೂಮಿಗೆ ಕಳಿಸುವಳು. ಮಾಯೆಯ ಜನನದಿಂದ ಕೈಲಾಸದಲ್ಲಿ ಶುರುವಾದ ಕಥೆ ಭೂಲೋಕಕ್ಕಿಳಿಯುತ್ತದೆ.

ಸಂಕಲ್ಪದಂತೆ ಮಾಯೆ ಬನವಸೆ ನಾಡಿನ ಅಧಿಪತಿಯಾದ 'ಮಮಕಾರಭೂಪಾಲ'ನ ಸತಿ 'ಮೋಹಿನೀದೇವಿ'ಯ ಗರ್ಭದಲ್ಲಿ ಹುಟ್ಟುತ್ತಾಳೆ. ವಿವಿಧ ವಿಲಾಸ ವೃತ್ತಿಯಲ್ಲಿ ಬೆಳೆಯುತ್ತಾಳೆ. ಆಕೆಗೆ ಯೌವನ ಪ್ರಾಪ್ತವಾಗುತ್ತಿದ್ದಂತೆ ಮನೋವಲ್ಲಭನ ಬಯಕೆ ಹೆಚ್ಚುತ್ತದೆ. ಆ ಬಯಕೆ ಕೈಗೂಡಲೆಂಬ ಇಚ್ಛೆಯಿಂದ ಮಾಯೆ ಆ ಪಟ್ಟಣದ ಮಧುಕನಾಥನನ್ನು ಅರ್ಚಿಸತೊಡಗುತ್ತಾಳೆ. ಮಾಯೆಯ ಸಕಾಮಭಕ್ತಿಯ ವಿಷಯ ತಿಳಿದ ಮಹಿಮಾ ಸ್ವರೂಪನಾದ ಅಲ್ಲಮನು ವಿಕೃತ ವೇಷದಿಂದ ಮದ್ದಳೆಯ ಅಲ್ಲಮನಾಗಿ ಬಂದು ಮಧುಕನಾಥ ದೇವಾಲಯದ ಹೊರಗಿನ ಆವರಣದಲ್ಲಿ ನಿಂತು ಮದ್ದಳೆ ಬಾರಿಸುವನು. ಮದ್ದಳೆಯ ಧ್ವನಿಗೆ ಮನಸೋತ ಮಾಯೆ ಪ್ರಭುದೇವನನ್ನು ಗುಡಿಯ ಒಳಗೆ ಕರೆಸುವಳು. ಆತನನ್ನು ನೋಡಿದ ಕೂಡಲೇ ಅವಳು ಮೋಹ ಪರವಶಳಾದುದ್ದನ್ನು ಕಂಡು ಆಕೆಯ ಸಖಿಯರು ಅಲ್ಲಮನ ಪೂರ್ವಾಪರ ವಿಚಾರ ತಿಳಿದುಕೊಂಡು, ಅರಸನ ಅಪ್ಪಣೆ ಪಡೆದು ಅರಮನೆಯ 'ನಾಟ್ಯಾಚಾರ್ಯ'ರನ್ನಾಗಿಕ ನೇಮಿಸಿಕೊಂಡು, ಮಾಯೆ ತನ್ನ ಮನದಿಂಗಿತವನ್ನು ವ್ಯಕ್ತಪಡಿಸುತ್ತಾ ಕಾಮ ವಿಕಾರದಲ್ಲಿ ಮುಳುಗಿ ವಿರಹ ವೇದನೆಯಲ್ಲಿ ಕಾಲ ಕಳೆಯುತ್ತಿರುತ್ತಾಳೆ. ಇದನ್ನು ಅರಿತ ಪಾರ್ವತಿಯು ತನ್ನ ಕಾರ್ಯವನ್ನು ಮಾಡಲಿಕ್ಕೆ ಮಾಯೆಯು ತಡಮಾಡಿದಳೆಂದು ಬಗೆದು ಅವಳನ್ನು ಎಚ್ಚರಿಸುವುದಕ್ಕಾಗಿ ಮಿಮಳೆಯನ್ನು ಕಳುಹಿ ಮಾಯೆಯನ್ನು ಎಚ್ಚರಿಸುತ್ತಾಳೆ.

ತನ್ನ ಸ್ವರೂಪವನ್ನೇ ಮರೆತಿದ್ದ ಮಾಯೆಗೆ ಪ್ರಭುವಿನ ಜನನ, ವೈರಾಗ್ಯದ ಪರಿಯನ್ನು ತಿಳುಹಿ, ಪ್ರಭುದೇವರನ್ನು ಒಲಿಸಿಕೊಳ್ಳಬೇಕಾದರೆ 'ನೀ ನಿನ್ನ ವಿಷಯದ ವಿಕಳತನವನು ಬಿಟ್ಟು ಸಾತ್ವಿಕದ ಬುದ್ಧಿಯಲೀಕ್ಷಿಸೆಂದು' ಬುದ್ಧಿ ಹೇಳುತ್ತಾಳೆ. ಅಲ್ಲಮನ ರಹಸ್ಯವನ್ನು ತಿಳಿದು ಕೊಳ್ಳುವುದಕ್ಕೆಂದು

ಇಬ್ಬರೂ ಕೂಡಿ ಮಧುಕನಾಥನ ದೇವಾಲಯಕ್ಕೆ ಬರುವರು. ಅಲ್ಲಿ ಮದ್ದಳೆಯನ್ನು ಬಿಸುಟು ಅಲ್ಲಿಂದ ಹೊರಡುವನು. ಮಾಯಾದೇವಿಯು ವಿಮಳೆಯ ಸಂಗಡ ಅಲ್ಲಮನನ್ನು ಅರಸುತ್ತ ಹಿಂದೆಯೇ ಹೋಗುವಳು. ಸಖಿಯರನೇಕರು ಅವಳನ್ನು ಹಿಂಬಾಲಿಸುವರು. ಅರಣ್ಯದಲ್ಲಿ ಕಲ್ಲು ಮುಳ್ಳುಗಳಿಂದ ಕೂಡಿದ ಹಾದಿಯಲ್ಲಿ ನಡೆದು ಬಳಸುತ್ತಿದ್ದ ಮಾಯೆಯನ್ನು ನೋಡಿ, ಕನಿಕರದಿಂದ ಅಲ್ಲಮನು ಅವಳಿಗೆ ಕಾಣಿಸಿಕೊಂಡು 'ಕಾಮ ತತ್ವದಿಂದ ಪರತತ್ವ ಸಾಧಿಸದೆಂದು' ಬೋಧಿಸಿ ಬಯಲಾಗುತ್ತಾನೆ. ಪ್ರಭುದೇವರನ್ನು ಸೋಲಿಸಲೆಂದು ಹಟ ತೊಟ್ಟು ಬಂದ ಮಾಯೆ ಸೋತು ಮತ್ತೆ ಕೈಲಾಸ ಸೇರುತ್ತಾಳೆ.

ತನ್ನ ಮಾತು ವ್ಯರ್ಥವಾದುದಕ್ಕೆ ಪಾರ್ವತಿಯು ಚಿಂತಿಸುತ್ತಿರಲು ಶಿವನು "ಪರಿಣಾಮವನ್ನು ನಾನು ಮೊದಲೆ ಹೇಳಿದ್ದೆನು, ಆಗಲಿ, ನಿನ್ನ ಸಾತ್ವಿಕಾಂಶವನ್ನು ಭೂಮಿಗೆ ಕಳುಹು, ಅಲ್ಲಮನ ಅನುಗ್ರಹವುಂಟಾಗಿ ಶಿವತತ್ವದ ತಿಳಿವಳಿಕೆಯಾಗುವುದು" ಎನ್ನುವನು. ಆಗ ಪಾರ್ವತಿಯ ಸಾತ್ವಿಕಾಂಶವೆ ಉಡುತಡಿಯಲ್ಲಿ ಸುಮತಿ-ನಿರ್ಮಳರೆಂಬವರಿಗೆ ಮಗುವಾಗಿ ಮಹದೇವಿಯಕ್ಕ ಎಂಬ ಹೆಸರು ಧರಿಸುವಳು ನಿಷ್ಕಾಮ ಭಕ್ತಿಯನ್ನು ಚರಿಸುವಳು. ಶಿವನ ಆಜ್ಞಾನುಸಾರ ಪರಮ ಶಿವತತ್ತ್ವವನ್ನು ಅಲ್ಲಮನಿಂದ ಅರಿತುಕೊಳ್ಳಲು ಬಸವಾದಿ ಶರಣರು ಉದಯಿಸುತ್ತಾರೆ.

ಕಲ್ಯಾಣದಲ್ಲಿ ಶರಣರು ಸೇರಿದ ಸುದ್ದಿಯನ್ನು ತಿಳಿದು, ವೈರಾಗ್ಯ ಮೂರ್ತಿಯಾಗಿ ಸಂಚರಿಸುತ್ತ, ತತ್ವೋಪದೇಶ ಮಾಡುತ್ತ ಕಲ್ಯಾಣದ ಕಡೆಗೆ ಬಂದು ಅಕ್ಕಮಹಾದೇವಿಗೆ ವಿರಕ್ತಿಯನ್ನು, ಗೊಗ್ಗಯ್ಯನಿಗೆ ಪ್ರಾಣಲಿಂಗಾನು ಸಂಧಾನವನ್ನೂ, ಮುಕ್ತಾಯಕ್ಕನಿಗೆ ನಿತ್ಯ ಮುಕ್ತ ಸ್ಥಿತಿಯನ್ನು, ಸಿದ್ಧರಾಮನಿಗೆ ಲಿಂಗಪದವನ್ನು, ಮರುಳಶಂಕರ ದೇವನಿಗೆ ನಿಜಪದವಿಯನ್ನು, ಬಸವರಾಜನಿಗೆ ಇಷ್ಟಲಿಂಗಭಕ್ತಿಯನ್ನು, ಗೋರಕ್ಷಕನಿಗೆ ಕಾಯ ಬಲಿಯದ ಸಿದ್ಧ ಪದವಿಯನ್ನು ಬೋಧಿಸಿ, ಬಸವಾದಿ ಪ್ರಮಥರೆಲ್ಲರೂ ಬೆರಗಾಗುವಂತೆ ಅನುಭವ ಮಂಟಪದ ಅಧಿಪತಿ ಸ್ಥಾನ 'ಶೂನ್ಯಸಿಂಹಾಸನ'ವನ್ನು ಆರೋಗಣೆ ಮಾಡಿ ಗುರುವಾಗಿ ಮೆರೆಯುವನು. ಕೊನೆಯಲ್ಲಿ ಪರಶಿವನು ಗಿರಿಜೆಗೆ ಅಲ್ಲಮನ ಸ್ವರೂಪವೇ ತನ್ನ ಸ್ವರೂಪವೆಂದು ಲೋಕ ಹಿತಾರ್ಥವಾಗಿ ಮಹಾಘನ ಲಿಂಗವೇ, ಜಂಗಮಲಿಂಗವಾಗಿ, ಪ್ರಭುವಿನ ರೂಪದಲ್ಲಿ ಲೀಲೆದೋರುವುದಾಗಿ ಹೇಳುವುದರ ಮುಖಾಂತರ ಕಾವ್ಯವನ್ನು ಮುಕ್ತಾಯಗೊಳಿಸುತ್ತಾನೆ.

ಸುದೀರ್ಘವಾದ ಕಥಾನಕವನ್ನು ವೃತ್ತಗಳಲ್ಲಿ ಹೇಳಿಕೊಂಡು ಬರುವುದು ಕಷ್ಟದಾಯಕವೆನಿಸಿದರೂ ಕವಿಯು ಅನವಶ್ಯಕ ವರ್ಣನೆಗಳನ್ನು ಕೈಬಿಟ್ಟು, ನೇರವಾಗಿ ಕಥೆಯನ್ನಷ್ಟೇ ಹೇಳುತ್ತಾನೆ. ಹೆಣ್ಣನ್ನು ಮರುಳುಗೊಳಿಸುವ ಗಂಡೂ, ಗಂಡನ್ನು ಮರುಳುಗೊಳಿಸುವ ಹೆಣ್ಣು ಮಾಯೆಯಾಗಿ ವ್ಯಕ್ತಿಯ ಕರ್ತವ್ಯಚ್ಯುತಿ ಎಸಗುವಂತೆ ಮಾಡುವವು. ಮಾಯೆಯ ವಿಚಾರವನ್ನು ತಿಳಿಸುವ ಈ ಕೃತಿಯು ಮಾಯೆಯ ವಿವಿಧ ರೂಪಗಳನ್ನೂ, ಅಲ್ಲಮ ಪ್ರಭುವಿನ ವ್ಯಕ್ತಿತ್ವವನ್ನು ತಿಳಿಸುವ ಕೃತಿಯಾಗಿದೆ.

ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದ ಈ ಕವಿಯು ಕನ್ನಡದ ಜನಪ್ರಿಯ ಕಥಾವಸ್ತುವಾದ ಅಲ್ಲಮ ಪ್ರಭುವಿನ ಜೀವನ ಚರಿತ್ರೆಯನ್ನು ತಿಳಿಸುವ ಈ ಕೃತಿಯನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿರುವುದು ಸೋಜಿಗದ ಸಂಗತಿಯಾಗಿದೆ. ಏಕೆಂದರೆ ಭಾಷಿಕವಾಗಿ ಕನ್ನಡವು ಹೊಸಗನ್ನಡದ ರೂಪ ಪಡೆಯುತ್ತ, ಛಂದಸ್ಸಿನ ದೃಷ್ಟಿಯಿಂದ ಅತ್ಯಂತ ಕ್ಲಿಷ್ಟತೆಯ ಕಡೆಯಿಂದ ಸರಳತೆ(ದೇಶೀ)ಯ ಕಡೆಗೆ ಧಾವಿಸಿಕೊಂಡು ಬಂದು ಜನಸಾಮಾನ್ಯರಿಗೆ ಬಹಳ ಹತ್ತಿರವಾಗಿ, ಜನಪ್ರಿಯವಾಗಿ, ಸಹೃದಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದ ಕವಿ-ಕೃತಿಗಳ ಈ ಕಾಲದಲ್ಲಿ, ಮತ್ತೆ ಕ್ಲಿಷ್ಟತೆಯ ಹಾದಿ ತುಳಿದು, ಜನಸಾಮಾನ್ಯರಿಂದ ದೂರಸರಿಯುವ ಕವಿಯ ಈ ಪ್ರವೃತ್ತಿ ವಿಚಿತ್ರವೆನಿಸುತ್ತದೆ. ಕಥಾವಸ್ತು ಹನ್ನೆರಡನೆಯ ಶತಮಾನದ್ದಾಗಿದ್ದರೂ, ಅದನ್ನು ಸರಳವಾಗಿ ಅನೇಕ ಕವಿಗಳು ಕೃತಿಗಳ ಮೂಲಕ, ಪ್ರವಚನ-ಪುರಾಣಗಳ ಮೂಲಕ ಹೀಗಾಗಲೇ ಜನಸಾಮಾನ್ಯರ ಮನೆ-ಮನಗಳನ್ನು ತಟ್ಟುವ ರೀತಿಯಲ್ಲಿ ಮಠಮಾನ್ಯಗಳು ಪ್ರಚಾರ ಮಾಡಿದ್ದವು. ಆದರೂ ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಪಾಂಡಿತ್ಯ ಪ್ರದರ್ಶನ ಹಾಗೂ ಸ್ವ-ಪ್ರತಿಷ್ಠೆಗಾಗಿ ಕ್ಲಿಷ್ಟವಾದ, ಭಾಷೆ, ಪ್ರೌಢವಾದ ವೃತ್ತ ಛಂದಸ್ಸುಗಳನ್ನು ಆಯ್ದುಕೊಂಡು ಕೃತಿ ರಚಿಸಿದ್ದಾನೆ.

ಅಧ್ಯಾಯ ೬

ಸಮಾರೋಪ

ಕನ್ನಡ ನಾಡಿನಲ್ಲಿ ಅನೇಕ ಜನ ಸಂತರು, ಕವಿಗಳು, ರಾಜಮಹಾರಾಜರು, ಸಾಧಕರು, ಕಲಾವಿದರು, ವೀರರು, ವೀರಾಗ್ರಣಿಯರು ಕಂಡುಬರುತ್ತಾರೆ. ಇವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅತ್ಯಂತ ನಿಷ್ಠೆಯಿಂದ ದುಡಿದು ನಾಡಿಗಾಗಿ ತಮ್ಮನ್ನೇ ಅರ್ಪಿಸಿಕೊಂಡವರಾಗಿದ್ದಾರೆ. ಅಂಥವರಲ್ಲಿ ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲಬಲ್ಲ ಶರಣ ಕವಿ ಇಮ್ಮಡಿ ಮುರಿಗಾಗುರುಸಿದ್ಧರೂ ಒಬ್ಬರು. ಈ ಕವಿಯ ಜೀವನ-ಕೃತಿಗಳ ಕುರಿತಾಗಿ ಪ್ರಸ್ತುತ ಪ್ರಬಂಧದಲ್ಲಿ ಸಮಗ್ರವಾದ ಅಧ್ಯಯನ ಕೈಗೊಳ್ಳಲಾಗಿದೆ. ಈ ಅಧ್ಯಯನದ ಫಲಶ್ರುತಿಯನ್ನು ಕವಿ ಕಾವ್ಯ ವೈಶಿಷ್ಟ್ಯಗಳ ಮೂಲಕ ಗುರುತಿಸಿ, ಕನ್ನಡದ ಪ್ರಮುಖ ಕವಿಗಳ ಸಾಲಿನಲ್ಲಿ ನಿಲ್ಲಬಲ್ಲ ವ್ಯಕ್ತಿತ್ವ ಹೊಂದಿರುವ, ಧಾರ್ಮಿಕ, ಸಾಹಿತ್ಯಿಕ ರಂಗದಲ್ಲಿ ಗಮನಾರ್ಹ ಸಾಧನೆ ಗೈದು ಎಲೆಮರೆಯ ಕಾಯಿಯಂತೆ ಬೆಳಕಿಗೆ ಬರದ ಇವರ ಕವಿತಾ ಸಾಮರ್ಥ್ಯವನ್ನು ಸ್ಥೂಲವಾಗಿ ಪರಿಶೀಲಿಸಿ ಕವಿಯ ಸ್ಥಾನ ನಿರ್ದೇಶನ ಮಾಡುವುದು ಇಲ್ಲಿ ಅವಶ್ಯವಾಗಿದೆ.

ಹಳಗನ್ನಡ ಹಾಗೂ ನಡುಗನ್ನಡದ ಮಧ್ಯದ ಪರ್ವಕಾಲದಲ್ಲಿ ಸಾಹಿತ್ಯ ಸೃಷ್ಟಿ ಮಾಡಿದ ಇಮ್ಮಡಿ ಮುರಿಗಾಗುರುಸಿದ್ಧರು ಅನೇಕ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಬೇಕಾದ ಅನಿವಾರ್ಯತೆ ಇತ್ತು. ಒಂದೆಡೆ ವೈಯಕ್ತಿಕ ವಿರೋಧಗಳಿದ್ದರೆ, ಮತ್ತೊಂದೆಡೆ ಸಾಮಾಜಿಕ, ಧಾರ್ಮಿಕ, ರಾಜಕೀಯ

ವಿಪ್ಲವತೆಗಳು ಯಾವುದೇ ಬೆಳವಣಿಗೆಗೆ ಅಡ್ಡಿ ಆತಂಕಗಳನ್ನು ಸೃಷ್ಟಿಸುತ್ತಿದ್ದವು. ಇಂತಹ ಸಂಕ್ರಮಣ ಪರಿಸರದಲ್ಲಿ ಸ್ವ-ಮತೀಯರಲ್ಲೇ ಗುರು-ವಿರಕ್ತ ಭೇದಗಳು, ಅನ್ಯಮತೀಯರಾದ ಜೈನ, ವೈಷ್ಣವರೊಡನೆ ನಡೆಯುತ್ತಿದ್ದ ಸಂಘರ್ಷಗಳು, ಕ್ರೈಸ್ತ, ಮುಸ್ಲಿಂ ಧರ್ಮಗಳ ಮತಾಂತರ ಪ್ರಕ್ರಿಯೆಗಳು ಹೀಗೆ ಧಾರ್ಮಿಕ ಪರಿಸರವು ಆತಂಕದ ಕ್ಷಣಗಳನ್ನು ಎದುರಿಸುತ್ತಿದ್ದರೆ, ರಾಜಕೀಯವಾಗಿ ರಾಷ್ಟ್ರಮಟ್ಟದಲ್ಲಿ ಔರಂಗಜೇಬ್ ಹಾಗೂ ಶಿವಾಜಿ ಮಹಾರಾಜರು ಕರ್ನಾಟಕದ ಮೇಲೆ ದಾಳಿ ಮಾಡಿ ಕೆಲ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಮೈಸೂರು, ಕೆಳದಿ, ಚಿತ್ರದುರ್ಗ, ಹರಪನಹಳ್ಳಿ, ಹಾಗಲವಾಡಿ ಮುಂತಾದ ಅರಸರ, ಪಾಳೆಯಗಾರರ ಅಂತಃಕಲಹಗಳು, ಸ್ವಹಿತಾಸಕ್ತಿಯ ಸಾಮ್ರಾಜ್ಯ ವಿಸ್ತರಣೆಯ ಅಭೀಪ್ಸೆಗಳು ರಾಜಕೀಯ ಕ್ಷೇತ್ರದ ಶಾಂತಿ ನೆಮ್ಮದಿಗಳನ್ನು ನುಂಗಿ ಹಾಕಿದ್ದವು. ಇದರ ಪರಿಣಾಮವಾಗಿ ಸಾಹಿತ್ಯ ಕ್ಷೇತ್ರವು ಅಲ್ಪಮಟ್ಟಿನ ಹಿಂಜರಿತವನ್ನು ಕಾಣಬೇಕಾಯಿತು. ಆದರೂ ಇಮ್ಮಡಿ ಮುರಿಗಾ ಗುರುಸಿದ್ಧರಂತಹ ಕೆಲವು ಕವಿಗಳು ಸ್ವತಂತ್ರವಾಗಿ ಜೀವಿಸಿ, ಮಠಮಾನ್ಯಗಳ ಧರ್ಮಾಧಿಕಾರಿಗಳಾಗಿ, ಸಿಂಹಾಸನಗಳಲ್ಲಿ ರಾಜರಾಗಿ, ಆಸ್ಥಾನಗಳಲ್ಲಿ ರಾಜ ಪೋಷಿತರಾಗಿ ಸಾಹಿತ್ಯ ಸೃಷ್ಟಿಯ ಕೆಲಸ ಮಾಡಿದ್ದಾರೆ. ಹೀಗೆ ರಾಜಕೀಯವಾಗಿ ಅಸ್ಥಿರತೆ, ಧಾರ್ಮಿಕವಾಗಿ ನಿಷ್ಕ್ರಿಯತೆ, ಸಾಹಿತ್ಯಿಕವಾಗಿ ಉದಾಸೀನತೆ ಮನೋಭಾವದಿಂದ ಕೂಡಿದ ವಾತಾವರಣದಲ್ಲಿ ಮೌಲಿಕವಾದ ಸಾಹಿತ್ಯ ರಚನೆ ಮಾಡಿದ ಇಮ್ಮಡಿ ಮುರಿಗಾಗುರುಸಿದ್ಧರು ವಿಶಿಷ್ಟ ವ್ಯಕ್ತಿ ಎನಿಸಿಕೊಳ್ಳುತ್ತಾರೆ.

ಚಿತ್ರದುರ್ಗದ ಮುರುಗಾ ಮಠಕ್ಕೆ ಬಹು ಪುರಾತನವಾದ ಚಾರಿತ್ರಿಕ ಹಿನ್ನೆಲೆಯಿದೆ. ಹನ್ನೆರಡನೆಯ ಶತಮಾನದಲ್ಲಿ ರೂಪ ತಳೆದ ಅನುಭವಮಂಟಪದ ಶೂನ್ಯಪೀಠ ಪರಂಪರೆಯು ಅನೇಕ ಸ್ಥಿತ್ಯಂತರಗಳಿಗೆ ಒಳಪಟ್ಟು ಚರಪೀಠವಾಗಿ ಸ್ಥಾನ ಬದಲಿಸುತ್ತ, ಹದಿನೈದನೆಯ ಶತಮಾನದಲ್ಲಿ ಎಡೆಯೂರು ಭಾಗದಲ್ಲಿ ಶ್ರೀ ತೋಂಟದ ಸಿದ್ಧಲಿಂಗಯತಿಗಳಿಂದ ಹೊಸ ಬೆಳಕನ್ನು ಕಂಡುಕೊಂಡಿತು. ತದನಂತರ ಹದಿನೇಳನೆಯ ಶತಮಾನದಲ್ಲಿ ಶ್ರೀ ಮುರಿಗಾ ಶಾಂತವೀರರ ಧಾರ್ಮಿಕ ಕ್ರಿಯಾಶಕ್ತಿ, ಭರಮಣ್ಣನಾಯಕನ ರಾಜಕೀಯ ಇಚ್ಛಾಶಕ್ತಿಗಳೊಂದಿಗೆ ಚಿತ್ರದುರ್ಗದಲ್ಲಿ ಸ್ಥಿರ ಪೀಠವಾಗಿ ನೆಲೆ ನಿಲ್ಲುತ್ತದೆ. ಈ ಪೀಠ ಪರಂಪರೆಯಲ್ಲಿ ಬಂದ ಕೆಲವರು ಶೂನ್ಯಪೀಠದ ಅಧಿಕಾರಿಗಳಾಗಿ ತಮ್ಮ ಪೂಜೆ, ಅನುಷ್ಠಾನ, ತಪಸಿದ್ಧಿ, ಧರ್ಮ, ತತ್ತ್ವ ಬೋಧೆಯ ಮೂಲಕ ಸುತ್ತಲ ಪರಿಸರವನ್ನು ಸಂಸ್ಕಾರಗೊಳಿಸಿ ನಾಡಿನಲ್ಲಿ ಸಮೃದ್ಧಿಯನ್ನುಂಟು ಮಾಡಲು ಪ್ರಯತ್ನಿಸಿದರೆ ಮತ್ತೆ ಕೆಲವರು ಪ್ರತಿಭೆ, ಪಾಂಡಿತ್ಯ, ಅನುಭಾವ, ದರ್ಶನ, ಸೃಜನಶೀಲತೆಯ ಮೂಲಕ ಸಾಹಿತ್ಯ ಸೃಷ್ಟಿಗೈದು(ನೋಡಿ: ಅನುಬಂಧ ಸಂಖ್ಯೆ ೪) ತನ್ಮೂಲಕ ಸಂಸ್ಕೃತಿ ಪ್ರಸಾರ ಮಾಡಲು ಮುಂದಾಗಿದ್ದಾರೆ. ಈ ಅಧ್ಯಯನದಲ್ಲಿ ಶೂನ್ಯಪೀಠದ ಪ್ರಾಚೀನತೆಯನ್ನು ಮೂರು ಘಟ್ಟಗಳಾಗಿ ವಿಂಗಡಿಸಿಕೊಂಡು ಕಾವ್ಯಾಧಾರಗಳ ಮೂಲಕ ಹನ್ನೆರಡನೆಯ

ಶತಮಾನದಿಂದ ಹದಿನೇಳನೆಯ ಶತಮಾನದವರೆಗಿನ ಈ ಸುದೀರ್ಘ ಪರಂಪರೆಯು ಬೆಳೆದು ಬಂದ ಬಗೆಯನ್ನು ಬದಲಿಸಿದ ಸ್ಥಾನಗಳನ್ನು, ವಹಿಸಿಕೊಂಡ ಅಧಿಪತ್ಯವನ್ನು ಗುರುತಿಸಲಾಗಿದೆ. ಹದಿನೇಳನೆಯ ಶತಮಾನದ ತರುವಾಯ ಈ ಪೀಠ ಪರಂಪರೆಯಲ್ಲಿ ಉಂಟಾದ ಚೀಲಾಳ ಸಮಯ, ಮುರುಗಾ ಸಮಯ, ಸಂಪಾದನಾ ಸಮಯ, ಕೆಂಪಿನ ಸಮಯ ಮುಂತಾದ ಹದಿನಾರು ಸಮಯ ಭೇದಗಳಾಗಿ ಆಯಾ ಸಮಯಗಳಿಗೆ ಅನ್ವಯಿಸಿ ಕರ್ನಾಟಕದಾದ್ಯಂತ ಅನೇಕ ಶಾಖಾ ಮಠಗಳು ಹುಟ್ಟಿಕೊಂಡವು. ಇಮ್ಮಡಿ ಮುರಿಗಾಗುರುಸಿದ್ಧರ ಕಾಲದಲ್ಲಿ ಉಂಟಾದ ಈ ಕವಲುಗಳಿಗೆ ಮುಖ್ಯ ಕಾರಣ ಒಬ್ಬರ ಅಧಿಪತ್ಯವನ್ನು, ಆಚರಣೆಗಳನ್ನು ಮತ್ತೊಬ್ಬರು ಒಪ್ಪದೇ ಪ್ರತಿಭಟಿಸಿ ದೂರ ಸರಿದು ಸ್ವತಂತ್ರರಾಗಿ ತಮ್ಮದೇ ಆದ ಮಠಗಳನ್ನು ಕಟ್ಟಿಕೊಂಡದ್ದು. ಈ ಗುಂಪುಗಳ ವಿಭಜನೆಗೆ ಯಾವುದೇ ತಾತ್ತ್ವಿಕವಾದ ನೆಲೆಗಟ್ಟುಗಳು ಕಾರಣವಾಗಿರದೆ ವೈಯಕ್ತಿಕವಾಗಿ ಮಾಡಿಕೊಂಡ ಭೇದಗಳಾಗಿವೆ. ಏಕೆಂದರೆ ಇಂದಿಗೂ ಸಮಾಜದಲ್ಲಿ ಈ ಎಲ್ಲಾ ಮಠಗಳು ಸಮಾನ ಗೌರವಕ್ಕೆ ಮಾನ ಮನ್ನಣೆಗೆ ಪಾತ್ರವಾಗಿವೆ.

ಶೂನ್ಯಪೀಠದ ೨೬ನೆಯ ಜಗದ್ಗುರುಗಳು, ಮುರಿಗಾ ಸಂಪ್ರದಾಯದ ದ್ವಿತೀಯ ವ್ಯಕ್ತಿಗಳೂ ಆದ ಇಮ್ಮಡಿ ಮುರಿಗಾ ಗುರುಸಿದ್ಧರು, ಶಾಂತವೀರರ ಶಿಷ್ಯರಾಗಿ ಅವರ ಮಾರ್ಗದಲ್ಲಿಯೇ ನಡೆದು ಗುರುವನ್ನು ಮೀರಿಸುವ ರೀತಿಯಲ್ಲಿ ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ಇವರ ಜೀವನ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ಸಂಗತಿಗಳು 'ಪ್ರಭುಲೀಲೆ', 'ಹಾಲಾಸ್ಯ ಪುರಾಣ' ಎಂಬ ಕವಿಯ ಸ್ವ-ಕೃತಿಗಳಲ್ಲಿ, ಮಹದೇವನ 'ಮಹಾಲಿಂಗೇಂದ್ರ ವಿಜಯ' ಎಂಬ ಕಾವ್ಯದಲ್ಲಿ, ಆನಂದಪುರದ ಮುರುಘಾಮಠದಲ್ಲಿ ದೊರೆತ ಕೆಳದಿಯ ಸೋಮಶೇಖರನಾಯಕ ಬರೆಸಿದ ತಾಮ್ರಶಾಸನದಲ್ಲಿ ದೊರೆತಿವೆ. ಅವುಗಳ ಪ್ರಕಾರ ಇಮ್ಮಡಿ ಮುರುಗಾಗುರುಸಿದ್ಧರ ಜನ್ಮಸ್ಥಳ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಧನುಗೂರು. ಇವರ ತಂದೆ ಶಿವಬಸಪ್ಪ ತಾಯಿ ದ್ರಾಕ್ಷಾಯಿಣಿ, ಕಾಲ ಕ್ರಿ.ಶ.೧೬೪೪ ರಿಂದ ೧೭೨೫ರವರೆಗೆ. ಧನೂಗೂರಿನ ನಿರಂಜನ ಪೀಠಾಧಿಪತಿ ಗುರು ಉದ್ದಾನಮೂರ್ತಿಯ ವಂಶಜನಾದ ಸೋಮಶೇಖರ ಶಿವಯೋಗಿ ಇವರ ದೀಕ್ಷಾಗುರು. ಕುಂಭಪಲ್ಲಿಯ ಬಸವಲಿಂಗಸ್ವಾಮಿ ಶಿಕ್ಷಾಗುರು. ಚಿಕ್ಕವೀರದೇಶಿಕೇಂದ್ರರು ವಿದ್ಯಾಗುರು, ಶಾಂತವೀರರು ಷಟ್‌ಸ್ಥಲ ಮಾರ್ಗ ಬೋಧಿಸಿದ ಆಧ್ಯಾತ್ಮ ಗುರು. ಇಂತಹ ಗುರುಗಳ ಬಲದಿಂದ ಚಿತ್ರದುರ್ಗದ ಶೂನ್ಯ ಪೀಠದ ಅಧಿಕಾರಿಗಳಾಗುತ್ತಾರೆ. ಇವರು ಇದಕ್ಕೂ ಮುಂಚೆ ಹುಲ್ಲಹಳ್ಳಿಯ ಗುರುಮಠದಲ್ಲಿ ಚಿಕ್ಕವೀರ ದೇಶಿಕೇಂದ್ರರಿಂದ ಶಿಕ್ಷಣ ಕಲಿತು ಅಲ್ಲಿಯ ಮಠದಲ್ಲಿಯೇ ಅಧಿಕಾರಿಗಳಾಗಿರುತ್ತಾರೆ. ಅದೇ ಸಂದರ್ಭದಲ್ಲಿ ಷಡಕ್ಷರ ದೇವನು ಧನುಗೂರಿನ ಮಠಾಧಿಪತಿಯಾಗಿರುತ್ತಾನೆ. 'ಶಿವಲಿಂಗ ಚಾರಿತ್ರ್ಯ' ಗ್ರಂಥದ ಉಲ್ಲೇಖದ ಪ್ರಕಾರ ಮುರಿಗಾಶಾಂತವೀರರು ಸಹ ಮೊದಲು ಹುಲ್ಲಹಳ್ಳಿಯ

ಮಠಾಧಿಪತಿಗಳಾಗಿದ್ದು, ತದನಂತರ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳ ಅಪ್ಪಣೆಯ ಮೇರೆಗೆ ಸಂಚಾರ ಕೈಗೊಂಡು ಶೂನ್ಯಪೀಠದ ಅಧಿಪತಿಗಳಾಗುತ್ತಾರೆ. ಬರಮಣ್ಣನಾಯಕನ ವಿನಂತಿಯ ಮೇರೆಗೆ ಚಿತ್ರದುರ್ಗದಲ್ಲಿಯೇ ನೆಲೆ ನಿಲ್ಲುತ್ತಾರೆ. ತರುವಾಯ ಅದೇ ಪರಿಸರದಲ್ಲಿ ಬೆಳೆದ, ಹುಲ್ಲಹಳ್ಳಿಯ ಮಠಾಧೀಶನಾಗಿದ್ದ ಗುರುಸಿದ್ಧರನ್ನು ಶೂನ್ಯಪೀಠಕ್ಕೆ ಅಧಿಕಾರಿಗಳಾಗಿ ನೇಮಿಸಿ 'ಇಮ್ಮಡಿ' ಎಂಬ ಅಭಿದಾನದೊಂದಿಗೆ 'ಮುರಿಗಾ' ಎಂಬ ವಿಶೇಷಣವನ್ನು ಸೇರಿಸಿ ಇಮ್ಮಡಿ ಮುರಿಗಾಗುರುಸಿದ್ಧರೆಂದು ಕರೆದಿದ್ದಾರೆ. ಈ ಮೇಲಿನ ಹಿನ್ನೆಲೆಗಳನ್ನು ಗಮನಿಸಿದಾಗ ಇವರಿಗೆ ಸಾಹಿತ್ಯ ಮತ್ತು ಧರ್ಮ ಶ್ರದ್ಧೆಗಳು ಆನುವಂಶಿಕವಾಗಿ ಬಂದ ಬಳುವಳಿಗಳಾಗಿವೆ ಎಂಬುದು ತಿಳಿದುಬರುತ್ತದೆ.

ಶಾಂತವೀರರನ್ನು ಬರಮಣ್ಣನಾಯಕನು ಚಿತ್ರದುರ್ಗಕ್ಕೆ ಆಹ್ವಾನಿಸಿ ಪೂಜ್ಯ ಭಾವನೆಯಿಂದ ಬೆಟ್ಟದ ಮೇಲೆ ಶ್ರೀ ಸಂಪಿಗೆ ಸಿದ್ದೇಶ್ವರ ದೇವಾಲಯದ ಪಕ್ಕದಲ್ಲಿ ೩೬೦ ಅಂಕಣಗಳ ವಿಸ್ತಾರವುಳ್ಳ ಬೃಹತ್ ಮಠವೊಂದನ್ನು ಕಟ್ಟಿಸಿಕೊಡುತ್ತಾನೆ. ಅವರ ಪೂಜಾ ಕಾರ್ಯಗಳಿಗೆ ವ್ಯವಸ್ಥೆ ಮಾಡಿ ವರ್ಷದ ೩೬೫ ದಿನಗಳಲ್ಲಿ ಶಿವಯೋಗಿಗಳು ಒಂದೊಂದು ಅಂಕಣದಲ್ಲಿ ಪೂಜೆ ಮಾಡಿದರೂ, ವರ್ಷದ ೩೬೦ ದಿನಗಳ ಕಾಲವೂ ಇದೇ ಮಠದಲ್ಲಿ ಇರಬೇಕು ಎಂಬ ಬಯಕೆ ಅರಸನದಾಗಿದ್ದತ್ತು. ಅದರಂತೆ ಬೆಟ್ಟದ ಕೆಲಗೆ ಸಹ ೩೬೦ ಅಂಕಣಗಳ (ಈಗಿರುವ ಕೆಳಗಿನ ಮಠ) ಇನ್ನೊಂದು ಮಠ ನಿರ್ಮಿಸಿ, ತನ್ನ ಏಳು ಮಕ್ಕಳ ಪೈಕಿ ಒಬ್ಬನನ್ನು ಗುರುಗಳ ಸೇವೆಗೆ ನೇಮಿಸಿದನೆಂಬ ವಿಚಾರವು ಅಪಾರವಾದ ಗುರುಭಕ್ತಿಯನ್ನು ಸೂಚಿಸುತ್ತದೆ. ಅದೇ ರೀತಿ ಶಾಂತವೀರರ ತರುವಾಯ ಪೀಠಾಧಿಕಾರಿಗಳಾಗಿ ಬಂದ ಇಮ್ಮಡಿ ಮುರಿಗಾಗುರುಸಿದ್ಧರ ಮೇಲೂ ಬರಮಣ್ಣನಾಯಕ ಭಕ್ತಿ ವಿಶ್ವಾಸಗಳಿಂದ ಇದ್ದನೆಂಬುದನ್ನು ಮಠದಲ್ಲಿರುವ ಗಂಟೆ ಶಾಸನವು ತಿಳಿಸುತ್ತದೆ. 'ಸ್ವಸ್ತಿಶ್ರೀ ವಿಜೆಯದ್ಬುಯ ಶಾಲಿವಾಹನ ಶಖಾವರುಷ ೧೬೩೪ ನಂದನ ಸಂವತ್ಸರದ ಕಾರ್‍ತ್ತಿಕ ಬಹುಳ ೮ ಸೋಮವಾರದಲೂ ಮುರ‍್ರಿಗೆ ಸಿಧೆಶ್ವರ ದೇವರ‍್ರಿಗೆ ಕಾಮಗೆತ್ತಿ ಕಸ್ತೂರ‍್ರಿ ಮೆದಕೆರ‍್ರಿನಾಯಕರ ಬರಮಂಣನಾಯಕರು ಮಾಡಿಸಿದ ಸೇವೆ'. ಈ ಗಂಟೆಯನ್ನು ಕ್ರಿ.ಶ.೧೭೧೨ರಲ್ಲಿ ಬರಮಣ್ಣನಾಯಕನು ಮುರುಗಾ ಮಠಕ್ಕೆ ನೀಡಿರುತ್ತಾನೆ. ಅಲ್ಲದೆ ಕ್ರಿ.ಶ.೧೭೧೭-೧೮ರಲ್ಲಿ ಕೆಳದಿಯ ಸೋಮಶೇಖರನಾಯಕನು ಚಿತ್ರದುರ್ಗದ ಭಾಗವಾದ ಸಂತೆಬೆನ್ನೂರನ್ನು ಮುತ್ತಿಗೆ ಹಾಕಿದಾಗ ಸಂಧಾನ ಕಾರ್ಯಕ್ಕೆ ಬರಮಣ್ಣನಾಯಕನು ಇಮ್ಮಡಿ ಮರಿಗಾಗುರುಸಿದ್ಧರನ್ನು ಕಳುಹಿಸಿದ ಉಲ್ಲೇಖ 'ಕೆಳದಿ ನೃಪವಿಜಯ'ದಲ್ಲಿ ಕಂಡುಬರುತ್ತದೆ. ಇಂತಹ ರಾಜಕೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾಗವಹಿಸಿ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ ಅವರ ವ್ಯಕ್ತಿತ್ವಕೊಂದು ಗರಿ ಮೂಡಿಸುತ್ತದೆ. ಗುರುಸಿದ್ಧರು ಶೂನ್ಯಪೀಠದ ಅಧಿಕಾರಿಗಳಾದಾಗ, ಮುರಿಗಾಶಾಂತವೀರರ ಶಿಷ್ಯ ಕುಮಾರ ಜಂಗಮನೆಂಬುವನು ಅದನ್ನು ಒಪ್ಪದೇ ವಿರೋಧಿಸಿದನು. ಆತನು ಸೋದೆಯ ಸದಾಶಿವರಾಯನ

ಸ್ನೇಹ ಬೆಳೆಸಿ, ಗುರುಸಿದ್ಧರ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡುವಂತೆ ಚಾಡಿ ಮಾತುಗಳನ್ನು ಹೇಳಿರುತ್ತಾನೆ. ಕಾರಣ ಒಮ್ಮೆ ಗುರುಸಿದ್ಧರು ಆ ಭಾಗದಲ್ಲಿ ಸಂಚಾರ ಹೊರಟಾಗ ಸದಾಶಿವರಾಯನು ಸರಿಯಾದ ಗೌರವಾದರಗಳನ್ನು ನೀಡದೆ ತಾತ್ಸಾರ ಮನೋಭಾವದಿಂದ ನಡೆದುಕೊಳ್ಳುತ್ತಾನೆ. ಆಗ ಶ್ರೀಗಳು ರಾಜನಿಗೆ ನಡೆದ ಘಟನೆಗಳ ನಿಜಸ್ಥಿತಿಯನ್ನು ತಿಳಿಸುವ ಮೂಲಕ ಅರಸನ ಮನಃ ಪರಿವರ್ತನೆ ಗೊಳಿಸುತ್ತಾನೆ. ಚೀಲಾಳನೆಂಬುವ ಮತ್ತೋರ್ವ ಶಿಷ್ಯನು ಹರಪನಹಳ್ಳಿಯ ಬಸವಂತ ಭೂಪಾಲನೊಂದಿಗೆ ಕೂಡಿ ಗುರುಸಿದ್ಧರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೋರಿಸುತ್ತಾರೆ. ಆದರೆ ಇದಾವುದಕ್ಕೂ ಜಗ್ಗದ ಇವರು ಅವುಗಳನ್ನು ಸುಳ್ಳು ಎಂದು ಸಾಬೀತುಪಡಿಸಿ ಬಸವಂತ ಭೂಪಾಲನಿಂದ ಮಾನ ಮನ್ನಣೆಗೆ ಪಾತ್ರರಾಗುತ್ತಾರೆ.

ಸ್ವ-ಮತೀಯರಲ್ಲಿದ್ದ ಗುರು-ವಿರಕ್ತರ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು, ಸಮಯ ಭೇದಗಳನ್ನು ನಿಭಾಯಿಸಿಕೊಂಡು ಬರುವುದು. ೫೦,೯೦೦ಜನ ಸೇರಿದ ಬೃಹತ್ ಸಭೆಯಲ್ಲಿ ಹಳೇಬೀಡಿನ 'ಪಂಚದ್ರೋಹ'ದ ನ್ಯಾಯ ನಿರ್ಣಯ ಕೈಗೊಂಡದ್ದು. ಹೀಗೆ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸುತ್ತ, ಧಾರ್ಮಿಕ ವಿಚಾರಗಳನ್ನು ಪ್ರಸಾರಮಾಡುತ್ತ, ಅರಮನೆ-ಗುರುಮನೆಗಳ ಸಂಬಂಧವನ್ನು ಗಾಢವಾಗಿ ಬೆಸೆಯುತ್ತ, ಚಿತ್ರದುರ್ಗ, ಮತ್ತೋಡು, ಹಾಗಲವಾಡಿ, ಸೋದೆ, ಕೊಡಗು, ಹರಪನಹಳ್ಳಿ ಮುಂತಾದ ಪಾಳೆಯಪಟ್ಟುಗಳ ಜೊತೆಗೂ ಒಳ್ಳೆಯ ಸಾಮಾಜಿಕ-ಧಾರ್ಮಿಕ-ರಾಜಕೀಯ ಸಂಬಂಧವನ್ನು ಬೆಳೆಸಿಕೊಂಡಿದ್ದರು.

ಇಂತಹ ಪರಿಸರದಲ್ಲಿ ಜೀವಿಸಿದ್ದ ಇಮ್ಮಡಿ ಮುರಿಗಾಗುರುಸಿದ್ಧರು ಧರ್ಮೋಪದೇಶ, ತತ್ವಪ್ರಚಾರ ಕಾರ್ಯದಲ್ಲಿ ತೊಡಗಿ, ದೇಶ ಸಂಚಾರ ಕೈಗೊಂಡು ಸಾಹಿತ್ಯ ಸೃಷ್ಟಿಗೈದಿದ್ದಾರೆ. ಇವರ ಮುಖ್ಯವಾದ ಉದ್ದೇಶ ಸಾಹಿತ್ಯ ರಚನೆಯಲ್ಲದಿದ್ದರೂ ತಾವು ನಂಬಿದ ಧಾರ್ಮಿಕ ಮೌಲ್ಯಗಳನ್ನು ಬಿತ್ತರಿಸುವ, ಆತ್ಮ ನಿವೇದನೆಯನ್ನು ಅರುಹುವ ಅಗತ್ಯತೆಗಳು ಇವರ ಸಾಹಿತ್ಯ ಸೃಷ್ಟಿಗೆ ಪ್ರೇರಣೆ ಒದಗಿಸಿವೆ. ಅಂತೆಯೇ ಸುಮಾರು ಇಪ್ಪತ್ತೈದು ಕೃತಿಗಳನ್ನು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿಸಿದ ಇವರು ಧರ್ಮವನ್ನೇ ತಮ್ಮ ಕಾವ್ಯಗಳ ಪ್ರಮುಖ ವಸ್ತುವಾಗಿ ಆಯ್ದುಕೊಂಡಿದ್ದಾರೆ. ಮಾನವನ ಅಭಿವೃದ್ಧಿ ಸಾಧ್ಯವಾಗುವುದು ಅಧರ್ಮ, ಅನೀತಿ ಮತ್ತು ಅಜ್ಞಾನದಿಂದಲ್ಲ ಎಂಬುದನ್ನು ಸಾಬೀತುಪಡಿಸಲೆಂದೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಧರ್ಮ, ನೀತಿ, ತತ್ತ್ವಗಳನ್ನು ಪ್ರತಿಪಾದಿಸುವ, ಜನಸಾಮಾನ್ಯರಲ್ಲಿ ಭಕ್ತಿ, ಶ್ರದ್ಧೆಗಳನ್ನು ಉಂಟು ಮಾಡುವ ಪವಾಡ, ಅವತಾರ, ಲೀಲೆಗಳನ್ನು ಒಳಗೊಂಡ ಅನೇಕ ಮಹಾಕಾವ್ಯಗಳು ರಚನೆಗೊಂಡಿವೆ. ಇವುಗಳಲ್ಲಿ ಜೀವನ ಮೌಲ್ಯ ಪರವಾದ ವಿಚಾರಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರತಿಬಿಂಬಿಸಲ್ಪಟ್ಟಿರುತ್ತವೆ. ಲೀಲೆಗಳು ಸತ್ಯವೋ, ಅಸತ್ಯವೋ ಆದರೆ

ಇಮ್ಮಡಿ ಮುರಿಗಾಗುರುಸಿದ್ಧರು ಮಧುರೆಯ ಸುಂದರೇಶ್ವರನ ಚತುಷಷ್ಟಿ ಲೀಲೆಗಳನ್ನು ಕ್ರೋಢೀಕರಿಸಿ 'ಹಾಲಾಸ್ಯ ಮಹಾತ್ಮೆ' ಎಂಬ ಕೃತಿಯನ್ನು ಚಂಪೂ ಶೈಲಿಯಲ್ಲಿ ರಚಿಸಿ ಸಂಪ್ರದಾಯದ ಮುನ್ನಡೆಗೆ ಕಾರಣರಾಗಿದ್ದಾರೆ.

ಸೋದೆಯ ಸದಾಶಿವರಾಯನು 'ವರ್ಣಕ'ದಲ್ಲಿ ಬರೆದ ಕಾವ್ಯವನ್ನು ಇಮ್ಮಡಿ ಮುರಿಗಾ ಗುರುಸಿದ್ಧರು 'ಚಂಪೂ' ಶೈಲಿಯಲ್ಲಿ 'ವಸ್ತುಕ' ರೂಪದಲ್ಲಿ ರಚಿಸಿ ಪ್ರೌಢಿಮೆಯನ್ನು ಮೆರೆದಿದ್ದಾರೆ. ಸ್ಕಂದ ಪುರಾಣದ ಅಗಸ್ತ್ಯ ಸಂಹಿತೆಯಲ್ಲಿರುವ 'ಹಾಲಾಸ್ಯ ಮಹಾತ್ಮೆ' ಎಂಬ ಕಥಾ ಭಾಗ ಈ ಕಾವ್ಯದ ಮೂಲ ಆಕರವಾಗಿದೆ. ಈ ಕೃತಿಯು ಹದಿನೆಂಟನೆಯ ಶತಮಾನದ ಮೊಟ್ಟ ಮೊದಲ ಕೃತಿ ಎಂಬ ಅಗ್ಗಳಿಕೆಗೆ ಪಾತ್ರವಾದುದು, ಅಲ್ಲದೆ ಚಂಪೂ ಸಾಹಿತ್ಯಕ್ಕೆ ಪಂಪನೇ ಆದಿಯಾದರೆ, ಸೀಮಾ ಪುರುಷ ಷಡಕ್ಷರ ದೇವನೇ ಅಂತ್ಯ ಎಂಬ ಸಾಹಿತ್ಯ ಚರಿತ್ರೆಕಾರರ ಮಾತನ್ನು ಸುಳ್ಳಾಗಿಸಿ, ಇಮ್ಮಡಿ ಮುರಿಗಾ ಗುರುಸಿದ್ಧರೇ ಅಂತ್ಯರೆಂಬ ಹೊಸ ಬೆಳವಣಿಗೆಗೆ ಕಾರಣರಾಗಿದ್ದಾರೆ. ಚಂಪೂ ಸಾಹಿತ್ಯಕ್ಕೆ ಆದ್ಯರೆನಿಸಿದ ಜೈನರು ಜನತೆಯ ಅಭ್ಯಾಸ, ಅಭಿರುಚಿಗಳನ್ನು ಅರಿತುಕೊಂಡು, ತಮ್ಮ ಕಾವ್ಯಗಳ ಜನಪ್ರಿಯತೆಯನ್ನು ಹೆಚ್ಚಿಸಲು ವಾತಾವರಣಕ್ಕೆ ಸರಿಯಾಗಿ ಹೊಂದಿಕೊಂಡು ದೇಶೀ ಶೈಲಿಯ ಕೃತಿಗಳನ್ನು ರಚಿಸಿದರೆ, ದೇಶೀ ಶೈಲಿಯ ಆದ್ಯರೆನಿಸಿದ ವೀರಶೈವ ಕವಿಗಳು (ಷಡಕ್ಷರದೇವ, ಇಮ್ಮಡಿ ಮುರಿಗಾಗುರುಸಿದ್ಧ) ಹೊಸಗನ್ನಡದ ಆರಂಭ ಕಾಲದಲ್ಲಿ ಚಂಪೂ ಶೈಲಿಯ ಕಡೆಗೆ ಧಾವಿಸಿದ ರೀತಿ ಒಂದು ಕಡೆ ಸಾಹಸ ಯಾತ್ರೆ ಎನಿಸಿಕೊಂಡರೂ, ಮತ್ತೊಂದು ಕಡೆ ಅವರ ಪ್ರಯೋಗ ಪ್ರಿಯತೆಯ ಪಾಂಡಿತ್ಯ ಪ್ರದರ್ಶನವಾಗಿದೆ. ಚೆನ್ನವೀರೇಶ್ವರ, ಕರಿಬಸವ, ಮುಚ್ಚೆನ್ನಬಸವ ಇವರುಗಳ ಅಪೇಕ್ಷೆಯ ಮೇರೆಗೆ ಗ್ರಂಥ ಬರೆದ ಇಮ್ಮಡಿ ಮುರಿಗಾಗುರುಸಿದ್ಧರು ಕಾವ್ಯಾರಂಭದಲ್ಲಿ ಬಸವೇಶ್ವರ, ಮಡಿವಾಳ ಮಾಚಯ್ಯ ಮುಂತಾದ ಶಿವಶರಣರನ್ನು ಸ್ತುತಿಸುವುದರ ಜೊತೆಗೆ ವಿರಕ್ತ ಪೀಠದ ಶಿವಯೋಗಿಯಾಗಿ, ಆಚಾರ್ಯ ಪೀಠದ ರೇಣುಕರನ್ನು ಹೊಗಳಿರುವುದು ಈ ಶತಮಾನದ ಗುರು- ವಿರಕ್ತರ ಮಧುರ ಬಾಂಧವ್ಯವನ್ನು ತೋರಿಸುತ್ತದೆ.

ಹಾಲಾಸ್ಯ ಕ್ಷೇತ್ರದ ಮಹಿಮೆಯನ್ನು, ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗ ಈ ನಾಲ್ಕು ಯುಗಗಳಲ್ಲಿಯೂ ಮೆರೆದ ಅರವತ್ತುನಾಲ್ಕು ಶಿವನ ಲೀಲೆಗಳನ್ನು ಹೇಳುವುದರ ಮುಖಾಂತರ ಕನ್ನಡ ಕಥಾ ಪ್ರಪಂಚಕ್ಕೆ ಹಿರಿದಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಶಿವನ ಮಹಿಮೆ, ಲೀಲೆ, ಅವತಾರ, ಪವಾಡಗಳನ್ನು ಮೆರೆಯುವ ಇಲ್ಲಿಯ ಕಥಾನಕಗಳು ಓತಪ್ರೋತವಾಗಿ ಹೊಮ್ಮಿಬಂದಿವೆ. ಕಥಾ ನಿರೂಪಣೆಯ ಮಧ್ಯೆ ಶೈವ ಪುರಾತನರ, ಸಂಘಕವಿಗಳ, ಪಾಂಡ್ಯವಂಶದ ರಾಜರ ಕಥೆಗಳು ದೃಷ್ಟಾಂತ ರೂಪದ ಉಪಕಥೆಗಳಾಗಿ ಬಳಕೆಯಾಗಿರುವುದರಿಂದ ಈ ಕಾವ್ಯಕ್ಕೆ

ಚಾರಿತ್ರಿಕ ಮಹತ್ವ ಪ್ರಾಪ್ತವಾಗಿದೆ. ಕಾವ್ಯ ಸಂಪ್ರದಾಯದಂತೆ ಸಮುದ್ರ ವರ್ಣನೆಯಿಂದ ಆರಂಭವಾದರೂ, ಮುಂದೆ ಪೌರಾಣಿಕ ಚೌಕಟ್ಟಿನಲ್ಲಿ ಸಾಗುವ ಇಲ್ಲಿಯ ಕಥೆಗಳನ್ನು ಒಂದೊಂದು 'ತತ್ವ', 'ನೀತಿ'ಗಳ ತಳಹದಿಯ ಮೇಲೆ ಜೋಡಿಸಿ, ವಿಂಗಡಿಸಿ, ನಿರೂಪಿಸಿರುವುದು ಇಮ್ಮಡಿ ಮುರಿಗಾಗುರುಸಿದ್ಧರ ವಿಶೇಷತೆಯಾಗಿದೆ. ನಿರರ್ಗಳವಾದ ವಿಷಯ ನಿರೂಪಣೆ, ಉಚಿತಕ್ಕೆ ತಕ್ಕಂತೆ ವರ್ಣನೆಗಳು, ಪ್ರಬುದ್ಧವಾದ ಭಾಷಾ ಶೈಲಿ, ೧೬೦ಕ್ಕೂ ಹೆಚ್ಚು ಛಂದಸ್ಸುಗಳ ಪ್ರಯೋಗ ಇವುಗಳು ಕವಿಯ ವಿಷಯ ಸಂಗ್ರಹಶಕ್ತಿ, ಔಚಿತ್ಯ ಪ್ರಜ್ಞೆ, ಬಹುಶ್ರುತ್ವ, ಭಾಷಾ ಪ್ರಭುತ್ವ, ಛಂದೋಪರಿಣತಿಯನ್ನು ತಿಳಿಸುತ್ತವೆ. ಜನಸಾಮಾನ್ಯರಲ್ಲಿ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ಉದ್ದೇಶದಿಂದ ರಚಿಸಿದ ಹಾಲಾಸ್ಯ ಪುರಾಣವು ಗುಣ ಹಾಗೂ ಗಾತ್ರದಲ್ಲಿಯೂ ಮೌಲ್ಯವುಳ್ಳದ್ದಾಗಿದೆ. ಅತಿಯಾದ ವರ್ಣಗಳಿಲ್ಲದೆ ನೇರವಾಗಿ ಕಥೆಯನ್ನು ಹೇಳುತ್ತಾ ಹೋಗುವುದರಿಂದ ಇದೊಂದು ಬೃಹತ್ ಕಥಾಸರಿತ್ ಸಾಗರವಾಗಿದೆ. ಈ ಕಾವ್ಯವನ್ನು ಯಾವುದೇ ದೃಷ್ಟಿಕೋನದಿಂದ ನೋಡಿದರೂ ಇಮ್ಮಡಿ ಮುರಿಗಾಗುರುಸಿದ್ಧರು ಮಹಾಕವಿಯಾಗಿ, ಹಾಲಾಸ್ಯ ಪುರಾಣವು ಮಹಾಕಾವ್ಯವಾಗಿ ನಿಲ್ಲುತ್ತದೆ.

ವಚನ ಪ್ರಕಾರದಲ್ಲಿ 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ', 'ಶೂನ್ಯ ಮಂತ್ರಗೋಪ್ಯ', 'ಪಾದಸ್ತೋತ್ರ' ಎಂಬ ಕೃತಿಗಳನ್ನು, ೨೧೧ ಸ್ವತಂತ್ರ ಸ್ವರವಚನಗಳನ್ನು ರಚಿಸಿದ್ದಾರೆ. ಇವರ ಸ್ವರವಚನಗಳ ಮೇಲೆ ಹನ್ನೆರಡನೆಯ ಶತಮಾನದ ವಚನಕಾರರ ದಟ್ಟ ಪ್ರಭಾವವಿರುವುದು ಕಂಡುಬರುತ್ತದೆ. ಸತಿ-ಪತಿ ಭಾವದಲ್ಲಿ ಜೀವಾತ್ಮ, ಪರಮಾತ್ಮರ ಅನುಸಂಧಾನವನ್ನು, ಲೌಕಿಕ ಜಗತ್ತಿನ ಹೆಣ್ಣು ಗಂಡುಗಳ ಸಾಮರಸ್ಯ ಪೂರ್ಣ ಪ್ರೇಮಾನು ಸಂಧಾನದೊಂದಿಗೆ ಹೋಲಿಸಲಾಗಿದೆ. ಸ್ವರವಚನಗಳಲ್ಲಿ ಕಾಣುವ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಮತ್ತು ಮಧುರವೆಂಬ ಐದು ಭಾವಗಳ ಅಭಿವ್ಯಕ್ತಿಯಲ್ಲಿ, ಹರಿದಾಸರ ಕೀರ್ತನೆ, ಉಗಾಭೋಗಗಳ ಅನುಕರಣೆ ಮಾಡಿದ್ದಾರೆ. ಏಕೆಂದರೆ ವಚನಕಾರರು ಸಾಮಾಜಿಕ ಸಮಸ್ಯೆಗಳ ಚಿತ್ರಣಕ್ಕೆ ಬಿಗುವಿನಿಂದ ಕೂಡಿದ, ನೇರವಾಗಿ ಮನೆ-ಮನಗಳನ್ನು ತಲುಪುವ, ಚಾಟಿ ಏಟಿನಂತೆ ಬಿಸಿ ಮುಟ್ಟಿಸುವ ಶಬ್ದಗಳನ್ನು ವಚನಗಳಲ್ಲಿ ಬಳಸಿದರೆ, ಇಮ್ಮಡಿ ಮುರಿಗಾಗುರುಸಿದ್ಧರು ಕೀರ್ತನೆಗಳ ಭಾವಾಭಿವ್ಯಕ್ತಿಯನ್ನು ಪ್ರಚುರಪಡಿಸುವ ಮೃದು ಭಾಷೆಯನ್ನು ಬಳಸಿದ್ದಾರೆ. ದಾಸರು ತಮ್ಮ ಆರಾಧ್ಯ ದೈವವನ್ನು ಗಂಡ, ಹೆಂಡತಿ, ತಂದೆ, ಮಗು, ಪ್ರೇಯಸಿ ಸ್ಥಾನದಲ್ಲಿ ಕಲ್ಪಿಸಿಕೊಂಡು ತಮ್ಮ ಮನ ಬಯಕೆಯನ್ನು ವ್ಯಕ್ತಪಡಿಸುವ ಮಾದರಿಯಲ್ಲಿಯೇ, ಅದೇ ಭಾವಗಳನ್ನು ಶಿವನಲ್ಲಿ ಕಾಣುವ ಪ್ರಯತ್ನ ಮಾಡಿದ್ದಾರೆ. ಇಲ್ಲಿಯ ಬಹುತೇಕ ಸ್ವರವಚನಗಳು ಶಿವ-ಶಕ್ತಿಯ ಅನುಪಮವಾದ ಲೀಲಾ ವಿಲಾಸಗಳನ್ನು ಕೊಂಡಾಡುತ್ತವೆ. ಕೆಲವು ವೀರಶೈವ ಧರ್ಮ ಸಂಬಂಧವಾದ ಅಷ್ಟಾವರಣ, ಪಂಚಾಚಾರ, ಶಿವಯೋಗ, ಮಿಶ್ರಾರ್ಪಣದ ವಿಚಾರಗಳನ್ನು ಬೋಧಿಸಿದರೆ,

ಮತ್ತೆ ಕೆಲವು ಷಡಕ್ಷರದೇವ, ತೋಂಟದ ಸಿದ್ಧಲಿಂಗ, ಮುರಿಗಾಶಾಂತವೀರ, ಕಟ್ಟಿಗೆಹಳ್ಳಿ ಸಿದ್ಧಲಿಂಗ ಇವರುಗಳನ್ನು ಸ್ತುತಿರೂಪದಲ್ಲಿ ಹೊಗಳುತ್ತವೆ. ಒಟ್ಟಾರೆಯಾಗಿ ಇವರ ಸ್ವರವಚನಗಳು ಸಾಹಿತ್ಯಗುಣದಿಂದ ಸೊರಗಿದರೂ ಸಂಗೀತ ಗುಣದಿಂದ ಅತ್ಯಂತ ಪ್ರಭಾವಿತವಾಗಿವೆ. ಇವುಗಳಲ್ಲಿ ಅಳವಟ್ಟ ವಿಷಯ ವೈವಿಧ್ಯ, ರೂಪ ವೈವಿಧ್ಯ, ರಚನಾ ಬಂಧುರತೆ, ಭಾವದ ಉತ್ಕಟತೆ, ಗೇಯತೆ, ನಿರರ್ಗಳತೆ ಹಾಗೂ ಶೈಲಿಯ ನಿರಾಡಂಬರತೆಗಳು ಇವರೊಬ್ಬ ಮೇಲ್ಮಟ್ಟದ ಅನುಭಾವಿಕ ಕವಿ ಎಂಬುದನ್ನು ಎತ್ತಿ ತೋರಿಸುತ್ತವೆ.

'ಏಕೋತ್ತರ ಶತಸ್ಥಲ' ಗ್ರಂಥಗಳ ಪರಂಪರೆಯಲ್ಲಿ ಸ್ವತಂತ್ರ ಕೃತಿಗಳು, ಸಂಕಲನ ಕೃತಿಗಳೆಂದು ಎರಡು ರೀತಿಯಾಗಿವೆ. ಶಿರೋನಾಮೆಯಿಂದ ಹಿಡಿದು, ಸ್ಥಲಕಲ್ಪನೆ, ಜೋಡಣೆ, ವಿವರಣೆಯಲ್ಲೂ ನವೀನ ಪ್ರಯೋಗಗಳಿಂದ ಕೂಡಿರುವ ಇಮ್ಮಡಿ ಮುರಿಗಾಗುರುಸಿದ್ಧರ ಕೃತಿ 'ಕೈವಲ್ಯನಾಮೈಕೋತ್ತರ ಶತಸ್ಥಲ'ವು ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಇಲ್ಲಿ 'ಕೈವಲ್ಯ' ಎಂಬುದಕ್ಕೆ 'ಮೋಕ್ಷ' ಎಂದೂ, ಸೋಪಾನಕ್ಕೆ ಮೆಟ್ಟಿಲುಗಳು ಎಂದೂ ಅರ್ಥೈಸಿ ಮೋಕ್ಷದ ಮೆಟ್ಟಿಲುಗಳನ್ನು ಹತ್ತಬೇಕಾದ ೧೦೧ ಸೋಪಾನಗಳೇ ಇಲ್ಲಿಯ ಸ್ಥಲಗಳು. ಕೃತಿಯ ಆರಂಭದಲ್ಲಿ 'ಸಕೀಲ ಸಂಬಂಧ ಸ್ಥಲ' ವೆಂಬ ಭಾಗದಲ್ಲಿ ನೂರೊಂದು ಸ್ಥಲಗಳನ್ನು ಅರಿತು ಆಚರಿಸುವ ಪೂರ್ವದಲ್ಲಿ ಮೂಲಭೂತವಾಗಿ ತಿಳಿದುಕೊಂಡಿರಬೇಕಾದ ದೀಕ್ಷೆ, ಪಾದೋದಕ, ಪ್ರಸಾದ, ಮಂತ್ರ, ಅರ್ಪಣ, ಶಿವನ ಸ್ವರೂಪ, ಅಂಗ-ಲಿಂಗ ಸಂಬಂಧ, ಸಮಾಧಿಯ ಸ್ವರೂಪ ಈ ವಿಷಯಗಳನ್ನು ನಿರೂಪಿಸುತ್ತಾನೆ. ಕೃತಿಯ ಒಳಗಡೆ ಷಟ್‌ಸ್ಥಲಾಂತರ್ಗತವಾದ ಲಿಂಗಾಗ ಸ್ಥಲಗಳ ಸ್ವರೂಪ, ಲಿಂಗದತ್ತ ನಡೆದಿರುವ ಅಂಗದ, ಅಂಗದತ್ತ ನಡೆದು ಬರುತ್ತಿರುವ ಲಿಂಗದ ನೂರೊಂದು ಘಟ್ಟದ ಘಟನೆಗಳನ್ನು, ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿಯಾಗಿ ಆಚರಿಸಬೇಕೆಂಬುದರ ವಿವರಣೆ ಇದ್ದರೆ, ಲಿಂಗಸ್ಥಲಗಳಲ್ಲಿ ಈ ಆಚರಣೆಗಳಿಂದ ಯಾವ ವಿಧದ ಪರಿಣಾಮಗಳು ಮನುಷ್ಯನ ಮೇಲೆ ಉಂಟಾಗುತ್ತವೆ ಎಂಬುದರ ವಿವರಣೆಯಿದೆ. 'ಇದಪದಮಲ ಹೃದಯ ವಿದಿತ ವೀರಮಹೇಶ್ವರರಾಂಗೀಕೃತ ಕೈವಲ್ಯಸೋಪಾನ ನಾಮೈಕೋತ್ತರ ಶತಸ್ಥಲ' ಎಂಬುದು ಇಲ್ಲಿಯ ವಿಷಯಗಳು ವೀರಮಾಹೇಶ್ವರರಿಂದ ಅಂಗೀಕರಿಸಲ್ಪಟ್ಟಿರುವವು ಹಾಗೂ ಉತ್ತರ ವಾತುಲಾಗಮದಿಂದ ತೆಗೆದುಕೊಂಡವುಗಳು ಎಂಬುದನ್ನು ಪ್ರತಿ ಸ್ಥಲದ ಅಂತ್ಯದಲ್ಲಿ ಸ್ಪಷ್ಟಪಡಿಸುತ್ತಾರೆ. ಹೀಗಾಗಿ ಸಂಸ್ಕೃತ ಭಾಷಾ ನಿಪುಣರಾದ ಇವರು ಆಗಮಗಳ ಕುರಿತಾಗಿ ಆಳವಾದ ಜ್ಞಾನ ಸಂಪಾದಿಸಿಕೊಂಡಿದ್ದರು.

ಇಮ್ಮಡಿ ಮುರಿಗಾಗುರುಸಿದ್ಧರು ರಚಿಸಿರುವ 'ಶೂನ್ಯಮಂತ್ರಗೋಪ್ಯ' ಕೃತಿಯ ಹೆಸರಿಗೂ, ಕೃತಿಯಲ್ಲಿರುವ ವಸ್ತುವಿಗೂ ಪರಸ್ಪರ ಸಂಬಂಧವಿಲ್ಲ. ಏಕೆಂದರೆ ಹಾಡುಗಬ್ಬದ ರಚನೆಯಾಗಿರುವ

ಈ ಪ್ರಕಾರದಲ್ಲಿ ಗುರುವು ಷಡಕ್ಷರ ಮಂತ್ರವನ್ನು ಶಿಷ್ಯನಿಗೆ ಕರ್ಣದಲ್ಲಿ ಗೌಪ್ಯವಾಗಿ ಬೋಧಿಸಿ, ಶಿಷ್ಯನ ಮಾಂಸಪಿಂಡವನ್ನು, ಮಂತ್ರಪಿಂಡವನ್ನಾಗಿ ಪರಿವರ್ತಿಸುವ ಕ್ರಿಯೆಯನ್ನು ರಹಸ್ಯವಾಗಿ ಆಚರಿಸುವುದೇ 'ಮಂತ್ರಗೋಪ್ಯ' ಎನಿಸಿಕೊಳ್ಳುತ್ತದೆ. ಹೊರನೋಟಕ್ಕೆ 'ಶೂನ್ಯಮಂತ್ರಗೋಪ್ಯ' ವೆಂದಾಗ ಸಾಮಾನ್ಯವಾಗಿ ಈ ಅರ್ಥ ಭಾವಿಸಿಕೊಳ್ಳುವುದು ಸಹಜ. ಆದರೆ ವಾಸ್ತವವಾಗಿ ಈ ಕೃತಿಯ ಆಶಯವೇ ಬೇರೆಯಾಗಿದೆ. ಲಿಂಗಾಂಗ ಸಾಮರಸ್ಯ, ಭಕ್ತಿ-ಶಕ್ತಿ, ಶಿವ-ಜೀವ, ಕಾರಣ-ಸೂಕ್ಷ್ಮ-ಸ್ಥೂಲ ಷಡಂಗಗಳು, ಏಕಾದಶ ಸಕೀಲಗಳು, ದಳಚಕ್ರನ್ಯಾಸ, ಪಂಚಬ್ರಹ್ಮಗಳು, ಪಂಚಮಂತ್ರಗಳು, ಸ್ವರಾಕ್ಷರ ಮೂರ್ತಿಗಳೆನಿಸಿದ ಐವತ್ತು ವರ್ಣಗಳಿಗೆ, ಐವತ್ತು ಜನ ರುದ್ರ, ಶಕ್ತಿಯರ ವಿವರಣೆ ಇದೆ. ಹೀಗೆ ಇಡೀ ವೀರಶೈವ ಸಿದ್ಧಾಂತವನ್ನೇ 'ಶೂನ್ಯಮಂತ್ರ' ವೆಂದು ಭಾವಿಸಿದ್ದಾನೆ. 'ವೀರಶೈವ ತತ್ವರತ್ನಕೋಶ' ದಂತಿರುವ ಈ ಕೃತಿಯು ಕವಿಯ 'ಶಾಸ್ತ್ರಜ್ಞಾನ'ಕ್ಕೆ ಹಿಡಿದ ಕನ್ನಡಿಯಾಗಿದೆ.

ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ, ಶಿವಲಿಂಗ ಷಟ್ಪದಿ, ಶಿವಲಿಂಗ ನಾಂದ್ಯ, ಶಿವರಹಸ್ಯ ಎಂಬ ಕೃತಿಗಳನ್ನು ಇಮ್ಮಡಿ ಮುರಿಗಾಗುರುಸಿದ್ಧರು ವಾರ್ಧಕ ಮತ್ತು ಭಾಮಿನಿ ಷಟ್ಪದಿಗಳಲ್ಲಿ ರಚಿಸುವುದರ ಮೂಲಕ ದೇಶೀ ಶೈಲಿಯ ಕಾವ್ಯ ರಚನೆಯಲ್ಲಿಯೂ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ನಿರರ್ಗಳವಾಗಿ ತಿಳಿಗನ್ನಡದಲ್ಲಿ ಷಟ್ಪದಿ ಛಂದಸ್ಸನ್ನು ಸಿದ್ಧಾಂತ ಪ್ರತಿಪಾದನೆಗಳಂತಹ ಕ್ಲಿಷ್ಟ ವಿಷಯಗಳಿಗೆ ದುಡಿಸಿಕೊಂಡ ಮಾನ್ಯರಾಗಿದ್ದಾರೆ. ವೀರಶೈವರಲ್ಲಿ ಆಯತ, ಸ್ವಾಯತ, ಸನ್ನಿಹಿತ ಎಂಬ ಮೂರು ಸಿದ್ಧಾಂತಗಳಿಗೆ ಅನುಗುಣವಾಗಿ, ತಾತ್ವಿಕ ವಿಷಯಗಳನ್ನು ತಿಳಿಸುವ ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ ಎಂಬ ಕೃತಿಗಳನ್ನು ರಚಿಸಿದ್ದಾನೆ. ವಿರೂಪಾಕ್ಷಪಾದನ 'ವಿರೂಪಾಕ್ಷ ಪಂಚಾಶಿಕೆ' ಮತ್ತು ವಿದ್ಯಾಚಕ್ರವರ್ತಿಯ 'ವಿರೂಪಾಕ್ಷ ಪಂಚಾಶಿಕಾ ವಿವೃತ್ತಿ' ಎಂಬ ಸಂಸ್ಕೃತ ಕೃತಿಗಳ ಆಧಾರದಿಂದ ರಚಿಸಲಾದ ಪಂಚಾಶಿಕೆಯು ವೀರಶೈವ ಧರ್ಮದಲ್ಲೇ ಅತ್ಯಂತ ವೈಶಿಷ್ಟ್ಯಪೂರ್ಣ ಕೃತಿ ಎನಿಸುತ್ತದೆ. ಏಕೆಂದರೆ ಪಂಚೀಕರಣ, ಕರಣಹಸಿಗೆ, ಮಂತ್ರಗೋಪ್ಯ, ಮಿಶ್ರಾರ್ಪಣ, ಸೃಷ್ಟಿಯ ವಚನಗಳು, ಸಕೀಲ ಸಾಹಿತ್ಯಗಳಂಥ ಯಾವೊಂದು ಪ್ರಕಾರಕ್ಕೂ ಹೋಲಿಕೆಯಾಗದೆ, ನಿರ್ದಿಷ್ಟವಾದ ವಿಷಯದ ವ್ಯಾಪ್ತಿಗೆ ಒಳಪಡದೆ, ಈ ಎಲ್ಲಾ ಪ್ರಕಾರಗಳ ಹಾಗೂ ವಿಷಯಗಳ ಮಿಶ್ರಣದೊಂದಿಗೆ ಸೃಷ್ಟಿಯಾದ ಈ ಕೃತಿಯಲ್ಲಿ ಪ್ರಕೃತಿಯ ಸೃಷ್ಟಿ, ಸೃಷ್ಟಿಯಲ್ಲಿರುವ ಜೀವ, ಜೀವನಿಗೆ ಜಗತ್ತಿನ ಸಂಬಂಧ, ದೇಹ-ಆತ್ಮ, ಶಿವ-ಶಕ್ತಿ, ಜೀವ-ಬ್ರಹ್ಮ, ವಿಮರ್ಶನಶಕ್ತಿ, ವಿಭೂತಿ ವೈಭವ, ಮುಕ್ತಿ ಬೋಧೆ ಮುಂತಾದ ತಾತ್ವಿಕ ಅಂಶಗಳನ್ನು ಸಮಾಲೋಚನೆ ಮಾಡುವ ಪ್ರಧಾನವಾದ ಉದ್ದೇಶದೊಂದಿಗೆ 'ಶಿವನೇ ಜಗವು, ಜಗವೇ ಶಿವನು'ಎಂಬ ಬೀಜವೃಕ್ಷ ನ್ಯಾಯ ದಂತಿರುವ ಈ ಸತ್ಯವನ್ನು ೪ ಸ್ಕಂದ, ೧೩ ಸಂಧಿ, ೭೮೮ ಭಾಮಿನಿ ಷಟ್ಪದಿಗಳಲ್ಲಿ ತಾನು

ಅರಿತುಕೊಂಡಿರುವ ತಾತ್ತ್ವಿಕ ವಿಷಯಗಳ ಆಳವಾದ ಪಾಂಡಿತ್ಯವನ್ನು ಈ ಕೃತಿಯ ಮೂಲಕ ದರ್ಶನ ಮಾಡಿಸುತ್ತಾನೆ.

ಪದಾರ್ಥವನ್ನು ಪ್ರಸಾದವಾಗಿಸುವ ಅರ್ಪಣ ವಿಧಾನಕ್ಕೆ ಷಟ್‌ಸ್ಥಲ ಸಿದ್ಧಾಂತದಲ್ಲಿ ಮಹತ್ವದ ಸ್ಥಾನವಿದೆ. ಲಿಂಗಾರ್ಪಣದ ರಹಸ್ಯವನ್ನು ಹೇಳುವ ಶಾಸ್ತ್ರ ಕೃತಿಯೇ 'ಮಿಶ್ರಾರ್ಪಣ'. ಅತ್ಯಂತ ಚಿಕ್ಕದಾದ ಐದು ವಾರ್ಧಕ ಷಟ್ಪದಿಗಳನ್ನು ಒಳಗೊಂಡ ಈ ಕೃತಿಯಲ್ಲಿ ಕಾಯಾರ್ಪಣ, ಭಾವಾರ್ಪಣ, ಕ್ರಿಯಾರ್ಪಣದ ಸ್ವರೂಪವನ್ನು ವಿವರಿಸಲಾಗಿದೆ. ಇದು ವೀರಶೈವರ ಸ್ವಾಯತ ತತ್ತ್ವದ ಕುರುಹಾಗಿದೆ. ಸನ್ನಿಹಿತ ತತ್ತ್ವದ ಕುರುಹಾದ ಯೋಗ ಕಲಾಪ ಸಾರವು ಐದು ಪಟಲ, ೧೨೮ ಭಾಮಿನಿ ಷಟ್ಪದಿಗಳನ್ನು ಒಳಗೊಂಡಿದೆ. ಒಂದನೇ ಪಟಲದಲ್ಲಿ ಶಿವಯೋಗದ ಸ್ವರೂಪ, ಮಹತ್ವ, ಆಚರಣೆಯ ವಿಧಾನಗಳನ್ನು ಹೇಳಿದರೆ, ಎರಡನೇ ಪಟಲದಲ್ಲಿ ಮಂತ್ರ, ಲಿಂಗರೂಪ, ನಾದ, ಆತ್ಮ ಹಾಗೂ ವಾಚ್ಯ ಗುಣಗಳನ್ನು ವಿವರಿಸಲಾಗಿದೆ. ಮೂರನೇ ಪಟಲದಲ್ಲಿ ಅಕರಗಳು ಅವುಗಳ ನೆಲೆಗಳು ಹಾಗೂ ಸ್ವರೂಪವನ್ನು, ನಾಲ್ಕನೇ ಪಟಲದಲ್ಲಿ ಷಟ್‌ಚಕ್ರಗಳಲ್ಲಿರುವ ಶಕ್ತಿಯರ ಸ್ಥಾನಗಳನ್ನು, ಐದನೇ ಪಟಲದಲ್ಲಿ ಯೋಗಿಯ ಧ್ಯಾನ ಸ್ಥಿತಿಗಳನ್ನು ನಿರೂಪಿಸಲಾಗಿದೆ. ಇಲ್ಲಿ ಬಾಹ್ಯ ಶರೀರದ ಶುದ್ಧಿಗಾಗಿ ಸ್ನಾನ ಇತ್ಯಾದಿ ಕ್ರಿಯೆಗಳನ್ನು ಮಾಡಿದಂತೆ, ಆಂತರಿಕ ಶರೀರದ ಶುದ್ಧಿಗಾಗಿ ಯಮ, ನಿಯ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಸಮಾಧಿಗಳೆಂಬ ಯೋಗಗಳನ್ನು ಮಾಡುವ ಮೂಲಕ ಮತ್ತು ಶಾರೀರಿಕ ಹಾಗೂ ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಳ್ಳುವ ಮಾರ್ಗಗಳನ್ನು ತಿಳಿಸುತ್ತಾನೆ. ಇನ್ನುಳಿದ ಷಟ್ಪದಿ ಕೃತಿಗಳಾದ ಶಿವಲಿಂಗ ಷಟ್ಪದಿ, ಶಿವಲಿಂಗ ನಾಂದ್ಯ, ಶಿವರಹಸ್ಯಗಳು ಶಿವನ ಲೀಲಾ ವಿಲಾಸಗಳನ್ನು ಕೊಂಡಾಡುವ ಉದ್ದೇಶದಿಂದ ರಚಿಸಿದವುಗಳಾಗಿವೆ.

ಲಘು ಸಾಹಿತ್ಯ ಕೃತಿಗಳಲ್ಲಿ ನಿಘಂಟು ಮಾದರಿಯ 'ಶಬ್ದರತ್ನಾಕರ', ಟೀಕು ಪ್ರಕಾರದ 'ಲಿಂಗರಚನಾಗಮ ಟೀಕು', ಯಕ್ಷಗಾನ ಶೈಲಿಯ 'ಬಿಜ್ಜಮಹಾದೇವಿಚಾರಿತ್ರ' ಮತ್ತು 'ಜಲಂಧರ ಕಾಳಗ', ಚೌಪದಿ ಛಂದಸ್ಸಿನ 'ಸ್ಕಂದ ಕಲ್ಯಾಣ', ತಾರಾವಳಿ ಪ್ರಕಾರದ 'ಮುರಿಗೆ ತಾರಾವಳಿ' ಹಾಗೂ ಕೊರವಂಜಿ ಕಟ್ಟಳೆಗಳನ್ನು ಹೆಸರಿಸಬಹುದಾಗಿದೆ. ಕರಸ್ಥಲನಾಗಿದೇವನ 'ಮಡಿವಾಳಯ್ಯ ತಾರಾವಳಿಯ' ಪ್ರೇರಣೆಯಿಂದ ರಚಿಸಿದ 'ಮುರಿಗಾ ತಾರಾವಳಿ'ಯಲ್ಲಿ ಮುರಿಗಾ ಸಂಪ್ರದಾಯದ ಮೂಲ ಪುರುಷರೂ, ಕವಿಗಳೂ, ಅನುಭಾವಿ ಗುರುಗಳೆನಿಸಿದ ಮುರಿಗಾ ಶಾಂತವೀರರ ಉಜ್ವಲ ಜೀವನ ಚರಿತ್ರೆಯನ್ನು ನಿರೂಪಿಸಲಾಗಿದೆ. ಅವರ ವಿದ್ವತ್ತು, ಪಾಂಡಿತ್ಯ, ಜ್ಞಾನಾನುಭವ, ಆಧ್ಯಾತ್ಮದ ಔನ್ನತ್ಯಗಳಿಂದ ಅನೇಕ ವಾದಿಗಳನ್ನು ಸ್ಪರ್ಧೆಯಲ್ಲಿ ಜಯಿಸಿ, ಸಿದ್ಧ ಪುರುಷರೆನಿಸಿದ ಮುರಿಗಾಶಾಂತವೀರರ ಕುರಿತಾದ ವಿಷಯಗಳು ಇಲ್ಲಿ ಸಹಜವಾಗಿ ಮೂಡಿಬಂದಿವೆ. ಕವಿಯ ಗುರುಭಕ್ತಿ ಈ ಕೃತಿಯಲ್ಲಿ

ಗರಿಗೆದರಿ ನಿಂತಿದೆ. ಈ ತಾರಾವಳಿ ಸಾಹಿತ್ಯಿಕ ಹಾಗೂ ಚಾರಿತ್ರಿಕ ದೃಷ್ಟಿಯಿಂದಲೂ ವಿಶಿಷ್ಟವೆನಿಸಿದೆ. ಶಾಂತವೀರರ ಜೀವನ ಚರಿತ್ರೆಗೆ ಹೊಂದಿಕೊಂಡು ಬರುವ ಗೋಲಕೊಂಡದ ಕುತುಬ್‌ಬಾದ ಷಾ, ಹರಪನಹಳ್ಳಿಯ ಬಸವ ಭೂಪಾಲ, ಸೋದೆಯ ಸದಾಶಿವರಾಯ, ಗೊತ್ತಳಪುರದ ಹನುಮರಾಯ, ಫಣಿಪುರದ ಪ್ರವರಭೂಪಾಲ, ಲಕ್ಷ್ಮೇಶ್ವರದ ಕಾನಭೂಮೀಶನ ಪುತ್ರ ಕೆಂಚಣಗೌಡ, ಮೆದಕೆರೆ ಕಸ್ತೂರಿ ಬರಮಭೂಪಾಲ ಮೊದಲಾದ ಅರಸರ ಉಲ್ಲೇಖಗಳು, ಚರಿತ್ರೆಯ ಪೂರ್ಣಪ್ರಮಾಣದ ವಿವರಗಳನ್ನು ನೀಡದೇ ಹೋದರೂ ಕಳಚಿ ಹೋದ ಚರಿತ್ರೆಯ ವಾಸ್ತವಾಂಶಗಳನ್ನು ಗುರುತಿಸಲು ಸಹಕಾರಿಯಾಗುತ್ತವೆ. ಇದರಿಂದಾಗಿ ಇದೊಂದು ಚಾರಿತ್ರಿಕ ವಿಶ್ವಾಸಾರ್ಹ ಕೃತಿಯಾಗಿದೆ. ಶಾಂತವೀರರ ವಯೋಮಾನ, ಚಿತ್ರದುರ್ಗಕ್ಕೆ ಅವರು ಬಂದ ಕಾಲಮಾನ, ಅವರು ಅಲ್ಲಿಯೇ ನೆಲೆಸಲು ನಿರ್ಧರಿಸಿದುದಕ್ಕೆ ಒದಗಿಬಂದ ಸಂದರ್ಭ, ಬೆಟ್ಟದ ಮೇಲಿನ ೩೬೦ ಕಂಬಗಳ ಬೃಹತ್ ಮಠದ ನಿರ್ಮಾಣ, ಶಾಂತವೀರರ ಅಂತ್ಯಕಾಲ ಮುಂತಾದ ಸಮಕಾಲೀನ, ಸಮೀಪಕಾಲೀನ ವಿಷಯಗಳು ಸ್ಪಷ್ಟವಾಗಿ ಮೂಡಿಬಂದಿವೆ. ಹೀಗೆ ಸರಳವೂ, ದೀರ್ಘವಲ್ಲದುದೂ ಆದ ಲಘು ಕೃತಿಯ ಮೂಲಕ ಜೀವನ ಚರಿತ್ರೆ ಬರೆದು ಕೃತ ಕೃತ್ಯನಾಗಿದ್ದಾನೆ.

ದ್ವಿ-ಭಾಷಾ ಪಾಂಡಿತ್ಯವನ್ನು ಗಳಿಸಿಕೊಂಡಿದ್ದ ಇಮ್ಮಡಿ ಮುರಿಗಾಗುರುಸಿದ್ಧರು, ಕನ್ನಡದ ಷಟ್ಪದಿ ಛಂದಸ್ಸಿನಲ್ಲಿರುವ ಚಾಮರಸನ 'ಪ್ರಭುಲಿಂಗ ಲೀಲೆ'ಯನ್ನು ಸಂಸ್ಕೃತದ ವೃತ್ತಗಳಲ್ಲಿ ರಚಿಸಿ ಮಾರ್ಗಶೈಲಿಯ ಪುನರುತ್ಥಾನಕ್ಕೆ ಕಾರಣರಾಗಿದ್ದಾರೆ. ಎಂಟು ಸರ್ಗಗಳಲ್ಲಿ ೬೮೩ ವೃತ್ತಗಳಲ್ಲಿ ಪ್ರಭುವಿನ ಬಾಲ್ಯ ಜೀವನ ವರ್ಣನೆಯಿಂದ ಹಿಡಿದು ಎಲ್ಲಾ ವೃತ್ತಾಂತಗಳನ್ನು ಸಂಕ್ಷಿಪ್ತವಾಗಿ, ನೇರವಾಗಿ ನಿರೂಪಿಸಿದ್ದಾರೆ. ಒಟ್ಟಾರೆ ಇಮ್ಮಡಿ ಮುರಿಗಾಗುರುಸಿದ್ಧರ ಸಾಹಿತ್ಯದ ವೈಶಿಷ್ಟ್ಯಗಳನ್ನು ಈ ಕೆಳಗಿನಂತೆ ಸಂಗ್ರಹಿಸಲಾಗಿದೆ.

೧. ಚಂಪು, ವಚನ, ಷಟ್ಪದಿ, ಚೌಪದಿ, ವೃತ್ತ, ಯಕ್ಷಗಾನ, ತಾರಾವಳಿ, ಟೀಕು, ನಾಂದ್ಯ ಹೀಗೆ ವಿವಿಧ ಛಂದೋಬಂಧಗಳಲ್ಲಿ ಸಾಹಿತ್ಯ ಸೃಷ್ಟಿಸಿರುವುದು.

೨. ಉಭಯ ಭಾಷಾ ಪಂಡಿತರಾದ ಇವರು ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಕೃತಿ ರಚಿಸಿರುವುದು.

೩. ಸ್ವರವಚನಗಳಲ್ಲಿ ದಾಸರ ಸುಳಾದಿ, ಉಗಾಭೋಗಗಳಲ್ಲಿರುವಂತೆ ಸತಿ-ಪತಿ ಭಾವವನ್ನು, ಕೈವಲ್ಯ ಸಾಮ್ಯೆಕೋತ್ತರ ಶತಸ್ಥಲ ಹಾಗೂ ಶೂನ್ಯಮಂತ್ರಗೋಪ್ಯ ಕೃತಿಗಳಲ್ಲಿ ಶಿರೋನಾಮೆಯ ವೈಶಿಷ್ಟ್ಯತೆಯನ್ನು ಗುರುತಿಸಬಹುದು.

೪. ಹಾಲಾಸ್ಯ ಪುರಾಣ, ಶಿವರಹಸ್ಯದಂಥ ದೀರ್ಘಕಾವ್ಯಗಳ ಜೊತೆಗೆ ಮುರಿಗಾ ತಾರಾವಳಿ, ಕೊರವಂಜಿ ಕಟ್ಟಳೆ, ಯಕ್ಷಗಾನಗಳಂಥ ಲಘು ಕೃತಿಗಳನ್ನು ರಚಿಸಿರುವುದು.

೫. ಮಾರ್ಗ- ದೇಶಿ ಶೈಲಿಯ ಮಿಶ್ರಣದಿಂದ ಸಮನ್ವಯತೆಯನ್ನು ಸಾಧಿಸಿಸಿರುವುದು.

೬. 'ಶಿವಲಿಂಗ'ವೆಂಬ ಅಂಕಿತವನ್ನು ಎಲ್ಲಾ ಕಾವ್ಯಗಳಲ್ಲಿ ಬಳಸಿರುವುದು.

೭. ಕೃತಿಯ ಆರಂಭದಲ್ಲಿ ರೇಣುಕರನ್ನು, ಬಸವಾದಿ ಶರಣರನ್ನು ಸ್ತುತಿಸಿರುವುದರಿಂದ ಗುರು-ವಿರಕ್ತರ ಸಮನ್ವಯತೆಯನ್ನು ಸಾರಿರುವುದು.

೮. ಸ್ಥಲ ತತ್ತ್ವ ವಿಂಗಡಣೆಯಲ್ಲಿ ಆಗಮಗಳ, ಸ್ವರವಚನಗಳಲ್ಲಿ ಶಿವಶರಣರ, ವೀರಶೈವ ತಾತ್ತ್ವಿಕ ಚಿಂತನೆಯಲ್ಲಿ ಆಚಾರ್ಯ ಪರಂಪರೆಯ ಪ್ರೇರಣೆಯನ್ನು ಪಡೆದಿದ್ದಾರೆ.

೯. ಮುರಿಗಾ ತಾರಾವಳಿ, ಹಾಲಾಸ್ಯಪುರಾಣ ಸ್ವರವಚನಗಳಲ್ಲಿ ಮಾತ್ರ ಸಮಕಾಲೀನ ಅರಸರ ಹಾಗೂ ಸಾಮಾಜಿಕ ಸಂಗತಿಗಳ ಉಲ್ಲೇಖಗಳು ಎಡೆಪಡೆದು ಇತಿಹಾಸದ ಪುನರ್ ನಿರ್ಮಾಣಕ್ಕೆ ಆಕರ ಕೃತಿಗಳೆನಿಸಿವೆ.

೧೦. ಕೃತಿ ರಚನೆಯಲ್ಲಿ ಕರಸ್ಥಲನಾಗಿದೇವ, ಚಾಮರಸ, ಸೋದೆಯ ಸದಾಶಿವ, ವಿರುಪಾಕ್ಷಪಾದ, ಷಡಕ್ಷರ ಕವಿ, ಮುರಿಗಾ ಶಾಂತವೀರ ಇವರಿಂದ ಪ್ರೇರಣೆ ಪಡೆದು ಅವರ ಮಾರ್ಗದಲ್ಲಿಯೇ ನಡೆದು ರಚಿಸಿದ ಅವರ ಕೃತಿಗಳು ಗುಣ-ಗಾತ್ರದ ದೃಷ್ಟಿಯಿಂದ ಗಮನಾರ್ಹವಾಗಿವೆ.

ಇಮ್ಮಡಿ ಮುರಿಗಾಗುರುಸಿದ್ಧರನ್ನು ಕುರಿತ ಸಂಶೋಧನಾತ್ಮಕ ಅಧ್ಯಯನದ ಕೊನೆಯ ಘಟ್ಟದಲ್ಲಿ ನಿಂತು ಸಿಂಹಾವಲೋಕನ ದೃಷ್ಟಿಯನ್ನು ಹರಿಸಿದರೆ ಷಡಕ್ಷರ ಕವಿಯ ಪರಿಸರದಲ್ಲಿ ಬೆಳೆದು, ಶೂನ್ಯ ಪೀಠದ ಅಧಿಪತಿಯಾದ ಇವರು ಹದಿನೆಂಟನೆಯ ಶತಮಾನದ ಉಜ್ವಲ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಶಿವಭಕ್ತಿ ಸಾಹಿತ್ಯವನ್ನು ನಿರ್ಮಿಸಿದ ಇವರು ಬಹುಭಾಷಾ ವಿಶಾರದ, ಸಾಹಿತ್ಯ ಕೋವಿದ, ಸಂಗೀತಜ್ಞ, ದಾರ್ಶನಿಕ, ಚಾರಿತ್ರ್ಯಿಕ ಸಂಗತಿಗಳ ನಿರೂಪಕ, ವೀರಶೈವ ಸಂಸ್ಕೃತಿಯ ಪ್ರಸಾರಕ, ಮಾನವೀಯ ಮೌಲ್ಯಗಳ ಪ್ರತಿಪಾದಕ, ಸಮಾಜ ಸುಧಾರಕ, ಧರ್ಮರಕ್ಷಕ, ಶಿವಶರಣನೂ ಆಗಿ ಕಂಡುಬರುತ್ತಾನೆ. ಉದಾತ್ತ ಜೀವಿಯಾದ ಇಮ್ಮಡಿ ಮುರಿಗಾಗುರುಸಿದ್ಧರದು ಆತ್ಮ ಕಲ್ಯಾಣ ಜೊತೆಗೆ ಲೋಕಕಲ್ಯಾಣಗಳ ಸಂದೇಶ ಸಾರುವುದು ಆಗಿತ್ತು. ಹೀಗಾಗಿ ಈ ಮೂಲಕ ಜೀವನ ಧೋರಣೆ, ಸಾಹಿತ್ಯ ಧೋರಣೆ ಎರಡನ್ನು ಅನುಷ್ಠಾನಗೊಳಿಸುವುದರಲ್ಲಿ ಯಶಸ್ವಿಯಾದರು. ಇದರಿಂದಾಗಿ ಇವರೊಬ್ಬ ಸಮರ್ಥ ಅನುಭಾವಿ ಕವಿಯಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಂಡುಬರುತ್ತಾರೆ.

ಅನುಬಂಧಗಳು

೧. ಶೂನ್ಯಪೀಠದ ಗುರುಪರಂಪರೆ

೨. ನಿರಂಜನ ಪೀಠ ಪರಂಪರೆ

೩. ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಪರಂಪರೆ

೪. ಮುರಿಗಾ ಸಮಯ ಪರಂಪರೆಯ ಕವಿ ಕೃತಿಗಳ ಪಟ್ಟಿ

೫. ಷಟಸ್ಥಲ ಸಕೀಲಗಳ ಪಟ್ಟಿ

೬. ಹಾಲಾಸ್ಯ ಪುರಾಣಕ್ಕೆ ಸಂಬಂಧಿಸಿದಂತೆ

ಅ. ಪಾಂಡ್ಯವಂಶಾವಳಿ

ಆ. ಸಂಘಸಾಹಿತ್ಯ ಕವಿಗಳ ಪಟ್ಟಿ

೧. ಶೂನ್ಯಪೀಠದ ಗುರುಪರಂಪರೆ (ನಿರಂಜನ ವಂಶರತ್ನಾಕರ ಕೃತಿಯ ಪ್ರಕಾರ)

೦೧. ಅಲ್ಲಮಪ್ರಭು - ಶ್ರೀಶೈಲದ ಕದಳೀ ಮಠದಲ್ಲಿ ಐಕ್ಯ.

೦೨. ಚೆನ್ನಬಸವೇಶ್ವರರು - ಉಳುಮೆಯ ಮಹಾಮನೆಯಲ್ಲಿ ಐಕ್ಯ.

೦೩. ಸಿದ್ಧರಾಮೇಶ್ವರರು - ಸೊನ್ನಾಲಾಪುರದಲ್ಲಿ ಐಕ್ಯ.

೦೪. ಅನಾದಿಗಣನಾಥ - ಕೊಂಕಣದ ಕಡಲತಡಿಯ ಕಲ್ಮಠದಲ್ಲಿ ಐಕ್ಯ.

೦೫. ಆದಿಗಣೇಶ್ವರ (ಪ್ರಭುಸ್ವಾಮಿ) - ಕೊಳ್ಳೇಗಾಲ (ತಾ) ಕುಂತೂರು ಪ್ರಭುಸ್ವಾಮಿ ಬೆಟ್ಟದ ಬಳಿಯ ಮಠದಲ್ಲಿ ಐಕ್ಯ.

೦೬. ನಿರ್ಮಾಯಗಣೇಶ್ವರರು(ಮಹದೇಶ್ವರಸ್ವಾಮಿ) - ಕೊಳ್ಳೇಗಾಲ (ತಾ) ಮಹದೇಶ್ವರ ಬೆಟ್ಟದಲ್ಲಿ ನಿರ್ವಯಲು

೦೭. ನಿರಂಜನ ಸ್ವಾಮಿಗಳು - ಕಲ್ಯಾಣದ ತ್ರಿಪುರಾಂತಕ ಕೆರೆಯ ತಟದ ರುದ್ರಮುನಿ ಸ್ವಾಮಿಗಳ ಮಠದಲ್ಲಿ ಐಕ್ಯ.

೦೮. ಜ್ಞಾನಾನಂದ ಸ್ವಾಮಿಗಳು - ಕಲ್ಯಾಣದಿಂದ ಬಂದು ಶ್ರೀಶೈಲದ ಪ್ರಭುದೇವರ ಮಠದಲ್ಲಿ ಬಯಲಾದರು.

೦೯. ಆತ್ಮಗಣವರರು - ಶ್ರೀಶೈಲದ ಕದಳಿ(ಗುಹೆ)ಯ ಬನದಲ್ಲಿ ನಿರ್ವಯಲಾದರು.

೧೦. ಆಧ್ಯಾತ್ಮಗಣನಾಥರು - ತಿರುವಣ್ಣಾಮಲೆಯ 'ಕೆಂಗನಮಃಶಿವಾಯ ಗವಿ'ಯಲ್ಲಿ ಐಕ್ಯ

೧೧. ರುದ್ರಮುನಿಸ್ವಾಮಿಗಳು - ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯಲ್ಲಿ ಸಮಾಧಿ.

೧೨. ಬಸವ ಪ್ರಭುಸ್ವಾಮಿಗಳು - ಜಮಖಂಡಿ(ತಾ) ತೇರದಾಳದಲ್ಲಿ ತೋರಗದ್ದುಗೆಯಿದೆ.

೧೩. ಆದಿಲಿಂಗದೇವರು - ಸವದತ್ತಿ(ತಾ) ಸುಗೋಲಾಶ್ರಮವಾದ ಸೊಗಲ ಕ್ಷೇತ್ರದ ಕಲ್ಲೂರು ಗುಡ್ಡದಲ್ಲಿ

೧೪. ಚೆನ್ನವೀರಸ್ವಾಮಿಗಳು - ಸವದತ್ತಿ(ತಾ) ಅಗಸ್ತ್ಯಾಶ್ರಮವಾದ ವಲನಿಪಲ್ಲಿ(ಮುನವಳ್ಳಿ) ಪಂಚಲಿಂಗೇಶ್ವರ ದೇವಾಲಯದಲ್ಲಿ

೧೫. ಹರದನಹಳ್ಳಿ ಗೋಸಲದೇವರು - ತುಮಕೂರು ಸಮೀಪದ ಸಿದ್ಧಗಂಗೆ ಬೆಟ್ಟದ ಗವಿಯಲ್ಲಿ ಶಿವಯೋಗ ಸಮಾಧಿ.

೧೬. ಶಂಕರದೇವರು - ತುಮಕೂರು(ಜಿ) ಕೊರಟಗೆರೆ ಸಮೀಪದ ಬೆಟ್ಟದಲ್ಲಿ ಇವರ ಐಕ್ಯ.

೧೭. ದಿವ್ಯಲಿಂಗದೇವರು - ಚಾಮರಾಜನಗರ(ತಾ) ಹರದನಹಳ್ಳಿ ಅಣಿಲೇಶ್ವರ ದೇವಾಲಯದಲ್ಲಿ ಇವರ ಶಿವಯೋಗ ಸಮಾಧಿಯಿದೆ.

೧೮. ಗೋಸಲ ಚೆನ್ನಬಸವೇಶ್ವರರು - ತುಮಕೂರು(ಜಿ) ಗುಬ್ಬಿ ಮಠದಲ್ಲಿ ಇವರ ತೋರ ಗದ್ದುಗೆಯಿದೆ.

೧೯. ತೋಂಟದ ಸಿದ್ಧಲಿಂಗದೇವರು - ಕುಣಿಗಲ್ಲು(ತಾ) ಎಡೆಯೂರಿನ ಮಠದಲ್ಲಿ ತೋರಗದ್ದುಗೆಯಿದೆ.

ದ್ವಿತೀಯ ಘಟ್ಟ : ತೋಂಟದ ಸಿದ್ಧಲಿಂಗರ ತರುವಾಯ

೨೦. ಬೋಳ ಬಸವಸ್ವಾಮಿ

೨೧. ಗೂಳೂರು ಸಿದ್ಧಲಿಂಗ(೧೫೫೦-೧೫೭೦) - ಗುಮ್ಮಳಾಪುರ

೨೨. ಗುಮ್ಮಳಾಪುರದ ಸಿದ್ಧವೀರಸ್ವಾಮಿ(೧೫೬೦-೧೫೯೦) - ಗುಮ್ಮಳಾಪುರ

೨೩. ಗಗನದ ಸ್ವಾಮಿಗಳು(೧೫೯೦-೧೬೨೦) - ಭೈರವನ ದುರ್ಗ

೨೪. ಕಟ್ಟಿಗೆಹಳ್ಳಿ ಸ್ವಾಮಿಗಳು(೧೬೨೦-೧೬೪೦) - ತಿಳುವಳ್ಳಿ

ಮುರಿಗಾ ಸಮಯದ ಶೂನ್ಯಪೀಠ ಪರಂಪರೆ (ಪಟ್ಟವಲ್ಲರಿಯ ಪ್ರಕಾರ)

೨೫. ಮುರುಗಾ ಶಾಂತವೀರೇಶ್ವರರು(ಕ್ರಿ.ಶ.೧೬೪೦-೧೭೧೦) - ಬೃಹನ್ಮಠ ಚಿತ್ರದುರ್ಗದಲ್ಲಿ ಐಕ್ಯ.

೨೬. ಇಮ್ಮಡಿ ಮುರಿಗಾಗುರುಸಿದ್ಧರು(ಕ್ರಿ.ಶ.೧೭೧೦-೧೭೨೫) - ಶಿವಮೊಗ್ಗ(ಜಿ) ಆನಂದಪುರದ ಐಕ್ಯ.

೨೭. ಸ್ವಾದಿ ಚನ್ನಬಸವ ಸ್ವಾಮಿಗಳು(ಕ್ರಿ.ಶ.೧೭೨೫-೧೭೩೦) - ಹೀರೆಮಾಗಡಿ

೨೮. ಸಿರಹಟ್ಟಿಯ ಸಿದ್ಧಲಿಂಗದೇಶಿಕರು(೧೭೩೦-೧೭೫೦) - ಚಂಗಡಹಳ್ಳಿ

೨೯. ಗುರುಪಾದದೇಶಿಕರು(೧೭೫೦-೧೭೬೦) - ಗುರುಮಠಕಲ್ಲು

೩೦. ಮೂರು ಸಾವಿರದ ಗುರುಪಾದದೇಶಿಕರು(೧೭೬೦-೧೭೭೯) - ಚಿತ್ರದುರ್ಗ

೩೧. ಮೂರುಸಾವಿರದ ಸಿದ್ಧಲಿಂಗಸ್ವಾಮಿಗಳು(೧೭೭೯-೧೭೯೦) - ಹಿರೇಮಾಗಡಿ

೩೨. ಒಪ್ಪತ್ತಿನ ಚನ್ನವೀರಸ್ವಾಮಿಗಳು (೧೭೯೦) - ತಿಳವಳ್ಳಿ

೩೩. ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು(೧೭೯೦-೧೮೦೦) - ಹಿರೇಮಾಗಡಿ

೩೪. ನೈಘಂಟಿನ ಸಿದ್ಧಬಸವಸ್ವಾಮಿಗಳು(೧೮೦೦-೧೮೨೦) - ಹಾವೇರಿ

೩೫. ಸಣ್ಣಬರಹದ ರಾಚವಟ್ಟಿಸ್ವಾಮಿಗಳು (೧೮೨೦-೧೮೩೦) - ಚಿತ್ರದುರ್ಗ

೩೬. ಸಾವಳಿಗೆ ಗುರುಶಾಂತಸ್ವಾಮಿಗಳು (೧೮೩೩-೧೮೪೦) - ಚಿತ್ರದುರ್ಗ

೩೭. ಸಣ್ಣಪಾದದ ಚನ್ನವೀರಸ್ವಾಮಿಗಳು (೧೮೪೦-೧೮೬೦) - ಚಿತ್ರದುರ್ಗ

೩೮. ಮಹಾಲಿಂಗಸ್ವಾಮಿಗಳು (೧೮೬೩-೧೮೭೦) - ಶಿರಸಂಗಿ

೩೯. ಹೆಬ್ಬಾಳು ರುದ್ರಸ್ವಾಮಿಗಳು (೧೮೭೦-೧೮೮೧) - ಚಿತ್ರದುರ್ಗ


೪೦. ಬ್ಯಾಡಗಿ ಮುಪ್ಪಿನೇಂದ್ರ ಸ್ವಾಮಿಗಳು (೧೮೮೧-೧೯೦೩) - ಬ್ಯಾಡಗಿ

೪೧. ಜಯದೇವಸ್ವಾಮಿಗಳು (೧೯೦೩-೧೯೫೬) - ದಾವಣಗೆರೆ


೪೨. ಜಯವಿಭವಸ್ವಾಮಿಗಳು (೧೯೪೯-೧೯೬೪) - ಚಿತ್ರದುರ್ಗ

೪೩. ಮಲ್ಲಿಕಾರ್ಜುನಸ್ವಾಮಿಗಳು (೧೯೬೪-) - ಹೊಳಲ್ಕೆರೆ

೪೪. ಶಿವಮೂರ್ತಿ ಮಹಾಸ್ವಾಮಿಗಳು


೨. ನಿರಂಜನ ಪೀಠ ಪರಂಪರೆ
ತೋಂಟದ ಸಿದ್ಧಲಿಂಗ
ಬೋಳಬಸವೇಶ್ವರ
ಗೂಳೂರು ಸಿದ್ಧಲಿಂಗಯ್ಯ
ಗುಮ್ಮಳಾಪುರದ ಸಿದ್ಧವೀರಯ್ಯ
ಗಗನದಾರ್ಯ
ಚೀಲಾಳ ಸಮಯ
ಹರಿಹರಸ್ವಾಮಿ
ಭಿಕ್ಷುಕದ ಬಸವಲಿಂಗಾರ್ಯ
ಕಟ್ಟಿಗೆಹಳ್ಳಿ ರಾಚೋಟಿಸ್ವಾಮಿ
ಅಣ್ಣಿಗೆರೆ ಕೌದಿ ಮಹಾಂತಸ್ವಾಮಿ
ಅರ್ಧನಾರೀಶ್ವರಸ್ವಾಮಿ
ಈಸೂರ ನಂದೀಶ್ವರಸ್ವಾಮಿ
ಸದಾಶಿವಸ್ವಾಮಿ
ಮಹಾಂತಸ್ವಾಮಿ
ವೃದ್ಧತೋಂಟದಾರ್ಯ
ಮೃತ್ಯುಂಜಯಸ್ವಾಮಿ
ಸಿದ್ಧೇಶ್ವರಸ್ವಾಮಿ
ಗುರುಬಸವಸ್ವಾಮಿ
ಶಿವಕುಮಾರಸ್ವಾಮಿ
ತೋಂಟದ ಸಿದ್ಧಲಿಂಗಸ್ವಾಮಿ
ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
(ಮುರಿಗಾ ಸಮಯ)
ಮುರಿಗೆ ಶಾಂತವೀರ
(ಕುಮಾರ ಸಮಯ)
ನೋಡ ಸಿದ್ಧಲಿಂಗ
ಕುಮಾರ ದೇಸಿಕೇಂದ್ರ
ಇಮ್ಮಡಿ ಮುರಿಗಾಗುರುಸಿದ್ಧರು
ಸಿದ್ಧಬಸವಸ್ವಾಮಿ
ಹುಬ್ಬಳ್ಳಿ ಸಂಗನಬಸವ ದೇಶಿಕ
ಶಾಂತವೀರದೇಶಿಕ
ಕುಮಾರದೇಶಿಕ
ಶಿವಪೂಜಾ ಬಸವಲಿಂಗದೇಶಿಕ
ಇಮ್ಮಡಿ ಬಸವಲಿಂಗದೇಶಿಕ
ಸಿದ್ಧಬಸವಲಿಂಗದೇಶಿಕ
ಬಸವಲಿಂಗದೇಶಿಕ

೩. ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯ ಪ್ರಶಿಷ್ಯ ಪರಂಪರೆಯಲ್ಲಿ ಉಂಟಾದ ಕವಲುಗಳು



೪. ಮುರಿಗಾ ಸಮಯ ಪರಂಪರೆಯಲ್ಲಿ ಕಂಡುಬರುವ ಕವಿ, ಕೃತಿಗಳು

೧. **ಮುರಿಗೆ ಶಾಂತವೀರರು** : ಹಮ್ಮೀರಕಾವ್ಯ, ಪ್ರಭುಲಿಂಗದ ಕಂದ, ನೀಲಾಂಬಿಕಾ ಲಲಿತ ಪಂಚವಿಂಶತಿ, ವೈರಾಗ್ಯಷಟ್ಪದಿ, ಮನುರಾಜೇಂದ್ರ ತಾರಾವಳಿ, ಕಟ್ಟಿಗೆಯ ತಾರಾವಳಿ, ನಾಂದ್ಯ, ಏಕೋನವಿಂಶತಿ ಪದ, ಷಡ್ವಕ್ತ್ರ ಸ್ತೋತ್ರ(ಸಂಸ್ಕೃತ), ಪಾರಿಜಾತ, ಸಮಾಧಿಕ್ರಿಯೆ, ಲಿಂಗಸಾವಧಾನ ಪ್ರಣವ ಸಂಬಂಧಿ ಕ್ರಿಯೆದ ಉದ್ಧರಣೆ, ಲಿಂಗಮಹಿಮೆ, ಏರ್ದೆಗೊಂತ ಪುರಾಣ.

೨. **ಇಮ್ಮಡಿ ಮುರಿಗಾಗುರುಸಿದ್ಧರು** : ಹಾಲಾಸ್ಯಪುರಾಣ, ಸ್ವರವಚನಗಳು, ಕೈವಲ್ಯನಾಮ್ಮೈಕೋತ್ತ ಶತಸ್ಥಲ, ಶೂನ್ಯಮಂತ್ರಗೋಪ್ಯ, ಪಾದಸ್ತೋತ್ರ, ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ, ಶಿವಲಿಂಗ ಮಹಿಮಾ ಷಟ್ಪದಿ, ನಾಂದ್ಯ, ಶಿವಲಿಂಗ ನಾಂದ್ಯ, ಶಿವರಹಸ್ಯ, ಮುರಿಗೆ ತಾರಾವಳಿ, ಶಬ್ದರತ್ನಾಕರ, ಲಿಂಗರಚನಾಗಮ ಟೀಕೆ, ಸ್ಕಂದಕಲ್ಯಾಣ, ಜಲಂಧರಕಾಳಗ, ಕೊರವಂಜಿ ಕಟ್ಟಳೆ, ಬಿಜ್ಜಮಹಾದೇವಿ ಚಾರಿತ್ಯ ಸಂಸ್ಕೃತ ಕೃತಿಗಳು; ಪ್ರಭುಲೀಲಾ, ನಂದೀಶ್ವರ ಜಯದಂಡಕ, ಚಾಮರವೃತ್ತ.

೩. **ಜ್ವಲಂಕಂಠ ಮಹಾಂತಸ್ವಾಮಿ** : ಮಹಾಂತಸ್ವಾಮಿಗಳು ನಿರೂಪಿಸಿದ ನಾಂದ್ಯ, ಶಿವಗಣ ಸಹಸ್ರ ತಾರಾವಳಿ. ಕಲಿಗಣನಾಥ ಸ್ತೋತ್ರ, ಶಿವದೀಕ್ಷಾ ವಿವೇಕಸಿಂಧು ಚಿಂತಾಮಣಿ, ತುರಂಗದಾಟಿ, ಛಂದಸ್ಸಿನ ಗಣನೆಯ ವಾರ್ಧಿಕ ಷಟ್ಪದಿ.

೪. **ಕಂಪಿನಂಜಯ್ಯ** : ಕಂಪಿನಂಜಯ್ಯನ ನಾಂದ್ಯ, ಚೈತನ್ಯೇಶ್ವರವಿಜಯ, ಚೇರಮಕಾವ್ಯದ ನಾಂದ್ಯದ ನುಡಿ, ದೇವೀನಾಂದ್ಯದ ನುಡಿ.

೫. **ಹಾಗಲವಾಡಿ ಮುದ್ವೀರಸ್ವಾಮಿ** : ಮುದ್ದೀರಸ್ವಾಮಿ ಸ್ವರವಚನಗಳು, ಶಿತತತ್ವಸುಜ್ಞಾನ ಪ್ರದೀಪಿಕೆ.

೬. **ಮಹಾದೇವ** : ಮಹಲಿಂಗೇಂದ್ರ ವಿಜಯ

೭. **ಶಿವಪೂಜಾ ಶಿವಲಿಂಗದೇಶಿಕರು** : ಮೋಕ್ಷಾಧಿಕಾರ, ಷಡಕ್ಷರ ಸ್ತೋತ್ರ ವ್ಯಾಖ್ಯಾ, ಶೃತಿ-ಸಾರಭಾಷ್ಯ.

೮. **ಪಾದಪೂಜಾಶಿವಬಸವಲಿಂಗ ದೇಶಿಕರು** : ವೀರಶೈವ ವಿಲಾಸ

೯. ಚನ್ನಬಸವ ಮುರುಘದೇವರ ಸ್ವರವಚನಗಳು

ಒಟ್ಟಾರೆಯಾಗಿ ಈ ಪರಂಪರೆಯಲ್ಲಿ ಬರುವ ಕವಿಗಳ ಅಂಕಿತಗಳನ್ನು ಈ ರೀತಿ ಕ್ರೋಢೀಕರಿಸ ಬಹುದಾಗಿದೆ. ಇಮ್ಮಡಿ ಮುರಿಗೆಯ ಪರಮ ಗುರುಸಿದ್ದೇಶ, ಮುರಿಗೆ ಗುರುಸಿದ್ಧ, ಮುರಿಗಾಗುರು, ಮುರಿಗಾಸ್ವಾಮಿ, ಮುರಿಗೆ ಕರಿಬಸವರಾಜೇಂದ್ರ, ಮುರಿಗೆ ಕರಿಬಸವೇಶ, ಮುರಿಗೆದೇವ, ಮುರಿಗೆಯ ಮಹಾತ್ಮ, ಮುರಿಗೆಯ ರುದ್ರ, ಮುರಿಗೆಯ ಶಾಂತವೀರ, ಮುರಿಗೆಯ ಸ್ವಾಮಿ, ಮುರಿಗೆ ಶಾಂತವೀರೇಶ, ಮುರಿಗೇಶ, ಮುರಿಗೆಮೂರ್ತಿ ಹೀಗೆ ಈ ಸಂಪ್ರದಾಯಕ್ಕೆ ಸೇರಬಹುದಾದ ಕೆಲವು ಕವಿ ಕೃತಿಗಳನ್ನು ಗಮನಿಸಬಹುದು.

ಷಟ್‌ಸ್ಥಲ ಸಕೀಲಗಳು

ಪರಶಿವ ತತ್ವ

೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮	೧೯	೨೦	೨೧	೨೨	೨೩	೨೪
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೧) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೨) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೩) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೪) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೫) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೬) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
												[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
				ಮೂರು ಸ್ಥಲ ಸಕೀಲ																			
೭) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೮) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
೯) [illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]												

೬. ಹಾಲಾಸ್ಯಪುರಾಣಕ್ಕೆ ಸಂಬಂಧಿಸಿದಂತೆ

ಅ. ರಾಬರ್ಟ್‌ಸಿವೆಲ್‌ರ ಪಾಂಡ್ಯವಂಶಾವಳಿ

೧. ನೆಡುಂಜೆಳಿಯನ್ ಪಾಂಡ್ಯ I

'ನೆಡುಂಜಡೈಯನ್', 'ಉಗ್ರಪಾಂಡ್ಯ', 'ಉಗ್ರಪೆರುವಳುಡಿ', ಸು.ಕ್ರಿ.ಪೂ.೧೫೦ ಚೇರದೊರೆ ಎರಡನೆಯ ಅದನ್ (Adan)ನ ಸಮಕಾಲೀನ. ದಖನಿನಲ್ಲಿ ಒಂದು ಆರ್ಯಸೇನೆಯನ್ನು ಸೋಲಿಸಿದನು.

೨. ವೆರ್ರಿವೇರ್ ಶೆಳಿಯನ್

ಸು.ಕ್ರಿ.ಪೂ ೧೯೦ 'ಇಲಾಜ್ಜತಳಿಯನ್' ರಾಜಕುಮಾರನಾದ ಇವನು 'ಕೊರಖೈ' ಎಂಬಲ್ಲಿಗೆ ವೈಸರಾಯ್ ಆಗಿದ್ದನು.

೩. ನೆಡುಂಜೆಳಿಯನ್ II

ಸು.ಕ್ರಿ.ಪೂ.೨೦೦ ಚೋಳದೊರೆ 'ನೆಡುಮುಡಿಕಿಳ್ಳಿ' ಸಮಕಾಲೀನ. ಇವನ ಕಾಲದಲ್ಲಿ 'ತಲೈ ಆಲಂಗಾನಮ್' ಎಂಬಲ್ಲಿ ಯುದ್ಧ ನಡೆಯಿತು. ಚೇರ ದೊರೆ 'ಶೇಯ್ ' ಅನ್ನು ಇವನು ಬಂಧಿಯಾಗಿ ಹಿಡಿದನು.

------(ಸಂಬಂಧ ತಿಳಿದು ಬಂದಿಲ್ಲ)

೪. ಉಗ್ರ ಪೆರುವಳುಡಿ

-------(ಸಂಬಂಧ ತಿಳಿದು ಬಂದಿಲ್ಲ)

೫. ನನ್ ಮಾರನ್

-------(ಸಂಬಂಧ ತಿಳಿದುಬಂದಿಲ್ಲ)

೬. ಕಡುಂಗೋನ್ ಸು.ಕ್ರಿ.ಪೂ.೫೭೫

೭. ಮಾರವರ್ಮನ್

'ಅವನಿಶೂಲಮಣಿ' ಸು.೬೦೦

೮. ಜಟಾವರ್ಮನ್

'ಶೆಳಿಯನ್ ಶೇನ್ದಾನ್ ' ಸು.೬೨೫

೯. ಮಾರವರ್ಮನ ಅರಿಕೇಸರಿ

'ಅಸಮುಸಮನ್', 'ನೆಡುಮಾರನ್', 'ಪರಾಂಕುಶನ್', 'ಅಕಾಳಕಾಲನ್', 'ಅಲಂಘ್ಯವಿಕ್ರಮ' ಸು.೬೫೦ ಪಾಳಿ, ಶೆನ್ನಿಲಮ್ ಮತ್ತು ನೆಲ್ವೇಲಿಗಳಲ್ಲಿ ಜಯ ಪಡೆದನು. ಚೋಳನಗರ ಉರೈಯೂರ್ ಅನ್ನು ಹಿಡಿದುಕೊಂಡನು.

೧೦. ಕೋಚ್ಚಡೈಯನ್

'ಶಡೈಯನ್', 'ರಣಧೀರ', 'ನೆಡುಂಜಡೈಯನ್' ಸು.೭೫ ಮರುದೂರಿನ ಯುದ್ಧದಲ್ಲಿ ಜಯಗಳಿಸಿದನು. ಆಯ್ ವೇಳ್ ಮತ್ತು ರಟ್ಟರನ್ನು ಸೋಲಿಸಿದನು.

೧೧. ಅರಿಕೇಸರಿ ಪರಾಂತಕ

'ರಾಜಸಿಂಹ I' 'ಮಾರವರ್ಮನ್', 'ಮಾರನ್ಜ ಡೈಯನ್', 'ತೇರ್ ಮಾರನ್', 'ನೆಡುಮಾರನ್', 'ಪರಾಂಕುಶನ್ ' ಸು.೭೦೦ ಅಥವಾ ಅನಂತರ ಶಂಕರ ಮಂಗೈ, ಕುಳುಂಬೂರ್ ನೆಡುವಯಲ್ ಮತ್ತು ಮಣ್ಣೈಕುಡಿ ಅಥವಾ ಕುಡಿ ಅಥವಾ ಕುರಿಚಿಗಳಲ್ಲಿ ಯುದ್ಧಮಾಡಿದನು. ಸುಂದರೀ ಎನ್ನುವವಳನ್ನು ಮದುವೆಯಾದನು.

೧೨. ಜಟಿಲ ಪರಾಂತಕ

'ಶ್ರೀವರ', 'ನೆಡುನ್ಜಡೈಯನ್' 'ತೆನ್ನನ್ ವಾನವನ್', 'ಮೇಲ್ಪಿಕುಡಿ' ಕುಡಿ ದತ್ತಿಯನ್ನು ೭೬೯-೭೦ರಲ್ಲಿ ಬಿಟ್ಟದಾನಿ. ಪೆಣ್ಣಾಗಡಮ್ ಎಂಬಲ್ಲಿ ಪಲ್ಲವರನ್ನು ಸೋಲಿಸಿದನು ಮತ್ತು ಇತರ ಜಯಗಳನ್ನು ಪಡೆದನು.

೧೩. ರಾಜಸಿಂಹ II

|

೧೪. ವರಗುಣ I

'ಜಯಂತವರ್ಮ' ಸು.೮೨೫

೧೫. ಶ್ರೀಮಾರ

'ಏಕವೀರ', 'ಶ್ರೀವಲ್ಲಭ', 'ಪರಚಕ್ರ ಕೋಲಾಹಲ', 'ಪಲ್ಲವ ಭಂಜನ', 'ಅವನಿಪಶೇಖರ', ಸು.೮೩೦ ಅನೇಕ ಜಯಗಳನ್ನು ಪಡೆದನು.



೧೬. ವರಗುಣ II

ಮಾರಂಜಡೈಯನ್, ಸಿಂಹಾಸನಾರೋಹಣ ಕ್ರಿ.ಶ.೮೬೨ ಇಡವೈ ಮತ್ತು ವೇಂಬಿಲ್‌ಗಳಲ್ಲಿ ಚೋಳರು ಮತ್ತು ಗಂಗರ ಮೇಲೆ ವಿಜಯ. ಅರೈಶೂರ್‌ಗೆ ನುಗ್ಗಿದನು. ತಿರುಪ್ಪು ರಂಬಿಯಮ್ ಅಥವಾ ಶ್ರೀಪುರಂ ಬಿಯಮ್‌ನಲ್ಲಿ ಗಂಗರಿಂದ ಸೋತನು. ಅವರ ರಾಜ ಪೃಥ್ವೀಪತಿIನ ಕೊಲೆ ೮೭೭-೮(?)

೧೭. ಪರಾಂತರ ವೀರನಾರಾಯಣ 'ಸಡೈಯನ್' 'ಜಟಿಲನೆಡುಂಜಡೈಯನ್' ಪೆಣ್ಣಾಗಡಂ ಅನ್ನುನಾಶ ಮಾಡಿದನು. ಬಾಣರ ರಾಜಕುಮಾರಿಯನ್ನು ಮದುವೆ ಯಾದನು.

೧೮. ರಾಜಸಿಂಹ III

'ಮಂದರ ಗೌರವ', 'ಮಾರವರ್ಮನ್', 'ಅಭಿಮಾನ ಮೇರು', 'ರಾಜಶಿಖಾಮಣಿ', ೯೦೭ ಮತ್ತು ೯೧೬ರಲ್ಲಿ ಪರಾಂತಕ ಚೋಳ I ನಿಂದ ಸಂಪೂರ್ಣವಾಗಿ ಸೋಲಿಸಲ್ಪಟ್ಟನು.

ಆ. ಸಂಘ ಸಾಹಿತ್ಯ ಚರಿತ್ರೆ

ಸಂಘಸಂಖ್ಯೆ	ಸಂಘವಿದ್ದ ಊರು	ಭಾಗವಹಿಸಿದ್ದ ರಾಜರ ಸಂಖ್ಯೆ	ಹಾಡಿದ ರಾಜರು	ಇವರು ಇದ್ದ ವರುಷ	ಸಂಘದ ಕವಿಗಳು	ಹಾಡಿದ ಕವಿತೆಗಳು	ಸಂಘಕ್ಕೆ ಸಮ ರ್ಪಿಸಿದ ಗ್ರಂಥ	ಅಲ್ಲಿ ಹಾಡಿದ ಕೆಲವು ಗ್ರಂಥಗಳ ಹೆಸರು	ಆ ಕಾಲದ ಕೆಲವು ಕವಿಗಳು
೧ನೆಯ ಸಂಘ	ಸಮುದ್ರ ನುಂಗಿದ ಮಧುರೆ	೮೯ ಜನ ರಾಜರು ಕಾಯಿಚಿವಳುದಿ ಯಿಂದ ಕಡುಂ ಗೋನ್‌ವರೆಗೆ	೭	೪೪೪೦ (೪೪೪೯)	೫೪೯	೪೪೯೯	ಅಗತ್ತಿಯಂ	ಪಿರುಂಪತಿ ಪಾರಿಡಲ್ ಮುದುನಾರೈ, ಮುದುಕುರುಕ ಕಳರಿಯಾವಿರೈ,	ಅಗತ್ತೀಯರ್ ಇರೈಯನಾರ್ ಮುರಗವೇಳ, ಮುರಿಂಜಿಯರ್ ಮುಡಿನಾಗರ್, ನದಿಯಿನ್‌ಕೆಳವರ್
೨ನೆಯ ಸಂಘ	ಕಪಾಟಪುರ	೫೯ಜನ ರಾಜರು ವೆಂಡೇರ್‌ಚ್ಚೆಳಿ ಯಿನ್ ಯಿಂದ ಮುಡತ್ತಿರು ಮಾರನ್‌ವರೆಗೆ	೫	೩೭೦೦	೫೯	೩೭೦೦	ಅಗತ್ತಿಯಂ, ತೊಲ್ ಕಾಪ್ಪಿಯಂ(ಇದೇ ಈಗ ದೊರೆತಿರುವ ಅತಿ ಪ್ರಾಚೀನ ಪುಸ್ತಕ) ಮಾ ಪುರಾಣಂ ಇಶೈ ನುಣುಕ್ಕಂ ಭೂತ ಪುರಾಣಂ	ಪೆರುಂಗಲಿ ಕುರುಗು ವೆಂಡಾಳಿ ವ್ಯಾಳಿಮಾಲ್ಯೆ	ಅಗತ್ತಿಯರ್ ತೊಲ್ಕಾಪ್ಪಿಯರ್ ಇರುಂದೈಯಾರ್ ಕೋಳಿಕ್ಕಿಳಾರ್, ಮೋಸಿ ವೆಳ್ಳೂರ್ ಕಾಪ್ಪಿಯನಾರ್, ಶಿರುಪಾಂಡುರಂಗನ್ ತಿರೈಯನ್‌ಮಾರನ್, ತುವರೈಕ್ಕೋನ್ ಕೀರಂದೈ

೩ನೆಯ ಸಂಘ	ಇಂದಿನ ಮಧುರೆ	೪೯ಜನ ರಾಜರು ಮುಡಿತ್ತಿರು ಮಾರನ್‌ನಿಂದ ಹಿಡಿದು ಉಗ್ರ ಪೆರುವಳುದಿ ವರಗೆ	೩	೧೮೫೦ (೧೯೫೦)	೪೯	೪೪೯	ಅಗತ್ತಿಯಂ ಮತ್ತು ತೊಲ್ಕಾಪ್ಪಿಯಂ	ನಿಡುಂದೊಗ್ಯೆ ನಾನೂರು, ಕುರುಂದೊಗ್ಯೆ ನಾನೂರು, ನರೆನ್ಯೆನಾನೂರು ಪುರನಾನೂರು, ಐಂಗರುನಾನುರು ಪದಿರುಪತ್ತು ನೂರ್‌ಯೆಂಬುದು ಕಲಿ ಎಳುಪದು ಪರಿಪಾಡಲ್ ಕೂತ್ತುವರಿ ಕುರಿಶ್ಯೆ ಪೇರಿಶ್ಯೆ ಮುತ್ತೊಳ್ಳಾಯಿರಂ ಇತ್ಯಾದಿ ಉಳಿದವು	ಶಿರುಮೇದಾವಿಯರ್ ಸೇಂದಂಪೂದನಾರ್ ಅರಿಮಡ್ಯೆಯರನಾರ್ ಪೆರುಗುನೂರರ್ ಕಿಳಾರ್, ಇಳಂದಿರು ಮಾರನ್ ಮದುರ್ಯೆ ಆಸಿರಿಯರ್ ನಲ್ಲಂದುವನಾರ್, ಮರುದನಿಳ್ ನಾಗನಾರ್ ನಕ್ಕೀರನಾರ್

ಛಾಯಾ ಚಿತ್ರಗಳು



ಬರವಣ್ಣನಾಯಕ ಬೆಟ್ಟದ ಮೇಲೆ ಕಟ್ಟಿಸಿದ ೩೬೦ ಕಂಬಗಳ
ಬೃಹನ್ಮಠ, ಚಿತ್ರದುರ್ಗ




ಬೆಟ್ಟದ ಮೇಲಿನ ಬೃಹನ್ಮಠದ ಒಳಾವರಣ ನೋಟ



ಬೆಟ್ಟದ ಕೆಳಗಿನ ಬೃಹನ್ಮಠ, ಚಿತ್ರದುರ್ಗ



ಶ್ರೀ ಶಾಂತವೀರಸ್ವಾಮಿಗಳು ಹಾಗೂ ಬರಮಣ್ಣನಾಯಕರ
ಸಂಬಂಧವನ್ನು ಸೂಚಿಸುವ ಭಾವಚಿತ್ರ, ಚಿತ್ರದುರ್ಗ



ಶ್ರೀ ಶಾಂತವೀರಸ್ವಾಮಿಗಳ ಶಿವಯೋಗ ಸಮಾಧಿ, ಚಿತ್ರದುರ್ಗ



ಇಮ್ಮಡಿ ಮುರಿಗಾಗುರುಸಿದ್ಧರ ಶಿವಯೋಗ ಸಮಾಧಿ, ಆನಂದಪುರಂ,
ಶಿವಮೊಗ್ಗ ಜಿಲ್ಲೆ

ಪರಾಮರ್ಶನ ಗ್ರಂಥಗಳು

ಅರ್ಚನ, ಎಚ್.ಪಿ.ಮಲ್ಲೇದೇವರು(ಸಂ), ಸುತ್ತೂರು ಮಠ, ಮೈಸೂರು, ೧೯೯೩.

ಅನುಭವ ಮಂಟಪದ ಐತಿಹಾಸಿಕತೆ, ಚನ್ನಪ್ಪ ಉತ್ತಂಗಿ, ಕಲಾಮಂದಿರ ಧಾರವಾಡ, ೧೯೫೧.

ಅಭಿದಾನರತ್ನಮಾಲಾ, ಟಿ.ವಿ.ವೆಂಕಟಾರಾವ್ ಹಾಗೂ ಶೇಷಯ್ಯಂಗಾರ್(ಸಂ), ಮದ್ರಾಸ್ ವಿಶ್ವವಿದ್ಯಾಲಯ, ೧೯೪೦.

ಅಭಿಜ್ಞಾನ, ಟಿ.ವಿ.ವೆಂಕಟಾಚಲಶಾಸ್ತ್ರಿ, ಕೆ.ಅನಂತರಾಮು(ಸಂ), ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೯೫.

ಅಲ್ಲಮನ ವಚನಚಂದ್ರಿಕೆ, ಎಲ್.ಬಸವರಾಜು(ಸಂ), ನಳಿನೀ ಶಂಕರ ಪ್ರಕಾಶನ, ಮೈಸೂರು ೧೯೬೦.

ಅಲ್ಲಮ ಪ್ರಭುದೇವ, ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೭.

ಅಶ್ವಶಾಸ್ತ್ರ, ಜಿ.ಜಿ.ಮಂಜುನಾಥನ್(ಸಂ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ೧೯೮೭.

ಆನಂದವನ, ತ.ಸು.ಶಾಮರಾಯ, ಸಿ.ಎಸ್. ಕುಲಕರ್ಣಿ(ಸಂ), ಸದ್ಬೋಧ ಚಂದ್ರಿಕೆಯ ಕಾರ್ಯಾಲಯ ಆನಂದವನ, ೧೯೯೪.

ಆಸ್ವಾದ, ಶ್ರೀವತ್ಸ(ಸಂ), ಉದಯಭಾನು ಕಲಾಸಂಘ, ಬೆಂಗಳೂರು ೫೪೦ ೦೧೯.

ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಯ ಕೃತಿಗಳು, ಎಸ್. ವಿದ್ಯಾಶಂಕರ(ಸಂ), ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ ೧೯೭೮.

ಇಮ್ಮಡಿ ಮುರಿಗಾಗುರುಸಿದ್ಧ ಶಿವಯೋಗಿಯ ಐದು ಕೃತಿಗಳು, ಬಿ.ಆರ್.ಹಿರೇಮಠ(ಸಂ), ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ ಆನಂದಪುರ, ಶಿವಮೊಗ್ಗ, ೧೯೮೮.

ಇಮ್ಮಡಿ ಮುರಿಗಾಗುರುಸಿದ್ಧ ಸ್ವಾಮಿಗಳ ಸ್ವರವಚನಗಳು, ಎಸ್.ಶಿವಣ್ಣ(ಸಂ), ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ಶಿವಮೊಗ್ಗ, ೧೯೯೫.

ಇಮ್ಮಡಿ ಮುರಿಗಾ ಗುರುಸಿದ್ಧ: ಜೀವನ - ಸಾಹಿತ್ಯ, ಪುಷ್ಪಬಸವನಗೌಡ, ಅಪ್ರಕಟಿತ ಎಂ.ಫಿಲ್.ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ೧೯೯೪.

ಉಪನ್ಯಾಸ ಸಂಚಯ, ಟಿ.ಆರ್. ಮಹದೇವಯ್ಯ(ಸಂ), ಸರ್ಪಭೂಷಣಮಠ, ಬೆಂಗಳೂರು, ೧೯೯೧.

ಐತಿಹಾಸಿಕ, ಎಂ.ಎಂ.ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧.

ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ರಾಮೇಗೌಡ, ಚಿತ್ರಕೂಟ, ೧೪೪, ಕಾಳಿದಾಸ ರಸ್ತೆ, ಮೈಸೂರು, ೧೯೯೨.

ಕನ್ನಡ ಕಾವ್ಯ ಪ್ರಕಾಶ, ಕೆ.ವಿ.ಕೃಷ್ಣಮೂರ್ತಿ(ಸಂ), ಡಿ.ವಿ.ಕೆ.ಪ್ರಕಾಶನ, ೧೯೭೩.

ಕನ್ನಡ ವೀರಶೈವಾನಂದ ಚಂದ್ರಿಕೆ, ಗುರುಶಾಂತಶಾಸ್ತ್ರಿಗಳು, ಬೇಲಿಮಠ, ಬೆಂಗಳೂರು, ೧೯೮೨.

ಕರ್ನಾಟಕದಲ್ಲಿ ವೀರಶೈವ ಮಠಗಳು, ಚಂದ್ರಶೇಖರ ನಾರಣಾಪುರ, ಸಂಪುಟ ೧, ಗೆಳೆಯ ಪ್ರಕಾಶನ ಬೇಲೂರು ರಸ್ತೆ, ಚಿಕ್ಕಮಂಗಳೂರು, ೧೯೯೪.

ಕರ್ನಾಟಕದ ಇತಿಹಾಸದರ್ಶನ, ಎಂ.ಬಿ.ಕೃಷ್ಣರಾವ್, ಎಂ.ಕೇಶವಭಟ್ಟ(ಸಂ) ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦.

ಕಪೋತವಾಕ್ಯ, ಹುಲ್ಲೂರು ಶ್ರೀನಿವಾಸ ಜೋಯಿಸರು(ಸಂ), ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು, ೧೯೭೦.

ಕಲ್ಯಾಣ, ಬಿ.ಶಿವಮೂರ್ತಿಶಾಸ್ತ್ರಿ(ಸಂ), ಬಿ.ಡಿ.ಜತ್ತಿ ಷಷ್ಟ್ಯಬ್ದಿ ಸನ್ಮಾನಸಮಿತಿ, ಬೆಂಗಳೂರು, ೧೯೭೩.

ಕವಿ ಕರ್ಣರಸಾಯನ, ಎಂ.ಎಸ್. ಬಸವರಾಜಯ್ಯ(ಸಂ), ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು, ೧೯೭೫.

ಕಳಲೆ ಮನೆತನದ ವೀರಶೈವ ದಳವಾಯಿಗಳು, ಎಸ್. ಶಿವಣ್ಣ(ಸಂ), ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೪.

ಕಾಯಕ ಪರಿಣಾಮಿ, ಶಾಂತರಸ, ಚೆನ್ನಬಸಪ್ಪ ಬೆಟ್ಟದೂರು(ಸಂ) ಚೆನ್ನಬಸವ ಪಟ್ಟದ್ದೇವರ ಶತಮಾತೋತ್ಸವ ಸಮಿತಿ, ಭಾಲ್ಕಿ, ೧೯೯೧.

ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಎಫ್.ಟಿ. ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೧೯೯೬.

ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ, ಸಾ.ಶಿ.ಮರುಳಯ್ಯ(ಸಂ), ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೧೯೮೦.

ಕೆಳದಿ ಐತಿಹಾಸಿಕ ನಿಬಂಧಗಳು, ಜಿ.ಎಸ್.ದೀಕ್ಷಿತ್(ಸಂ), ಇತಿಹಾಸ ಸಂಶೋಧನ ಸಂಸ್ಥೆ, ಕೆಳದಿ, ೧೯೮೯.

ಕೆಳದಿನೃಪ ವಿಜಯ, ಆರ್. ಶಾಮಾಶಾಸ್ತ್ರಿ(ಸಂ), ಕ್ಯುರೇಟರ್ ಓರಿಯಂಟಲ್ ಲಾಯಬ್ರರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೨೧.

ಕೆಳದಿ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಕೆ.ಜಿ.ವೆಂಕಟೇಶ ಜೋಯಿಸ್(ಸಂ), ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೯೬.

ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ, ಎಂ.ಎಂ.ಕಲಬುರ್ಗಿ ಮತ್ತು ಬಿ.ಎಸ್.ರಾಮಭಟ್ಟ(ಸಂ), ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ೧೯೯೪.

ಕೈವಲ್ಯ, ಸಿದ್ಧಲಿಂಗಯ್ಯ ಜಿ.ಎಸ್.(ಸಂ), ಸರ್ಪಭೂಷಣ ಶಿವಯೋಗಿಗಳ ಮಠದ ಟ್ರಸ್ಟ್, ಬೆಂಗಳೂರು, ೧೯೯೫.

ಕೈವಲ್ಯ ಸೋಪಾನ ಸಾಮ್ಯೆಕೋತ್ತರ ಶತಸ್ಥಲ, ಜೆ.ಎ.ಶಿವಲಿಂಗಯ್ಯ(ಸಂ), ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ಶಿವಮೊಗ್ಗ, ೧೯೮೯.

ಗವಿದೀಪ್ತಿ, ಎಸ್.ಎಮ್.ವೃಷಬೇಂದ್ರಸ್ವಾಮಿ (ಸಂ), ಗವಿಸಿದ್ದೇಶ್ವರ ಕೃಪಾಪೋಷಿತ ವಿದ್ಯಾರ್ಥಿ ಬಳಗ ಕೊಪ್ಪಳ, ೧೯೭೬.

ಗುಮ್ಮಳಾಪುರ ಸಿದ್ಧಲಿಂಗದೇವರ ಶೂನ್ಯ ಸಂಪಾದನೆ, ಆರ್.ಸಿ.ಹಿರೇಮಠ(ಸಂ), ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೨.

ಗೌರವ, ಬಿ.ವಿ.ಶಿರೂರು(ಸಂ), ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ, ೧೯೮೬

ಚಂದ್ರವಳ್ಳಿ, ಎಂ.ವಿ.ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ(ಸಂ), ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೬.

ಚನ್ನಪ್ಪ ಕವಿಕೃತ ಶರಣ ಲೀಲಾಮೃತ, ಶ್ರೀ ಶಿವಬಸವಸ್ವಾಮಿಗಳು, ಶಿವಶರಣ ವಾಙ್ಮಯ ಪ್ರಕಾಶನ, ಮೈಸೂರು, ೧೯೫೫.

ಚನ್ನಬಸವಣ್ಣನವರು, ಶ್ರೀಮತಿ ಜಗದಂಬಾ ಮಲ್ಲೇದೇವರು(ಸಂ), ಜಗದ್ಗುರು ಶ್ರೀಶಿವರಾತ್ರೀಶ್ವರ ವಿದ್ಯಾಪೀಠ, ಮೈಸೂರು, ೧೯೯೧.

ಚನ್ನಬಸವಣ್ಣನವರ ಷಟ್‌ಸ್ಥಲ ವಚನ, ಎಂ.ಎಂ.ಕಲಬುರ್ಗಿ(ಸಂ), ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೦.

ಚಿನ್ಮೂಲಾದ್ರಿ ಸ್ಮರಣ ಸಂಚಿಕೆ, ಜಿ.ಶಿವಕುಮಾರ್(ಸಂ), ರಜತ ಮಹೋತ್ಸವ ಸಮಿತಿ ಬೃಹನ್ಮಠ ಚಿತ್ರದುರ್ಗ-೧೯೮೯

ಚಿತ್ರಕಲ್ಲು ಮದಕರಿ, ಕ.ರಾ.ಕೃಷ್ಣಸ್ವಾಮಿ(ಸಂ), ಜನಪದ ಅಕಾಡೆಮಿ, ಬೆಂಗಳೂರು, ೧೯೯೫.

ಚಿತ್ರದುರ್ಗ ಜಿಲ್ಲಾದರ್ಶಿನಿ, ಟಿ.ಗಿರಿಜಾ(ಲೇ), ರೇಖಾ ಪ್ರಕಾಶನ ದಾವಣಗೆರೆ, ೧೯೯೧.

ಚಿತ್ರದುರ್ಗ ಜಿಲ್ಲೆಯ ಜನಪದ ಕಥೆಗಳು, ಹಾ.ಮಾ.ನಾಯಕ(ಸಂ), ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ೧೯೮೩.

ಚಿತ್ರದುರ್ಗದ ಸುತ್ತಿನ ಜನಪದ ಕಾವ್ಯಗಳು, ಮೈಲಹಳ್ಳಿ ರೇವಣ್ಣ(ಸಂ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪.

ಚಿತ್ರದುರ್ಗದ ಜಿಲ್ಲೆಯ ವ್ಯವಸಾಯ ಜಾನಪದ, ಎಂ.ಜಿ.ಈಶ್ವರಪ್ಪ(ಸಂ), ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೯೫.

ಚೀಲಾಳ ಸಮಯ, ಎಸ್.ವಿ. ಮನಗುಂಡಿ, ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪.

ಜಂಗಮ ಜ್ಯೋತಿ(ಸ್ಮರಣ ಸಂಚಿಕೆ), ಜಿ.ಎಸ್. ಸಿದ್ಧಲಿಂಗಯ್ಯ(ಸಂ), ಬೃಹನ್ಮಠ ಸಂಸ್ಥಾನ ಶತಮಾನೋತ್ಸವ ಸಮಿತಿ, ಚಿತ್ರದುರ್ಗ, ೧೯೭೫.

ತರೀಕೆರೆಯ ಪಾಳೆಯಗಾರರು, ಪಿ.ಅಬ್ದುಲ್ ಸತ್ತಾರ್, ಲೋಕಪಾವನಿ ಪ್ರಕಾಶನ ಪಾಂಡವಪುರ, ಮಂಡ್ಯ, ೧೯೯೭

ತಾರಾವಳೀ ಸಂಪುಟ ೧, ಎಂ.ಎಸ್. ಬಸವರಾಜಯ್ಯ(ಸಂ), ಶಿವಧರ್ಮಗ್ರಂಥ ಮಾಲಾ, ಮೈಸೂರು, ೧೯೮೭.

ತಿಂಥಿಣಿ ಮೋನಪ್ಪಯ್ಯ : ಒಂದು ಅಧ್ಯಯನ, ಎಂ.ಎಂ. ಪಡಶೆಟ್ಟಿ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀಶೈಲ ಜಗದ್ಗುರು, ನಿಡುಮಾಮಿಡಿ ಗ್ರಂಥ ಭಂಡಾರ, ಬೆಂಗಳೂರು, ೧೯೬೬.

ದಾಸೋಹ ಸಿರಿ, ಚನ್ನಪ್ಪ ಎರೆಸೀಮೆ(ಸಂ), ಹಳೆಯ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾಕ್ಷೇತ್ರ, ತುಮಕೂರು, ೧೯೯೭.

ದೇಗುಲ ಜ್ಯೋತಿ, ಎನ್. ಮಹಾದೇವಪ್ಪ, ಬಿ. ನಂಜುಂಡಪ್ಪ(ಸಂ) ದೇಗುಲಮಠ, ಕನಕಪುರ, ಬೆಂಗಳೂರು, ೧೯೭೬.

ದೇವಚಂದ್ರನ ರಾಜಾವಳಿ ಕಥಾಸಾರ, ದೇವಚಂದ್ರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೭೭೦.

ಧರ್ಮ(ವಿಶ್ವಕೋಶ), ರಹಮತ್ ತರಿಕೇರಿ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಧನಗೂರು ಮಠದ ಗುರುಪರಂಪರೆ, ಮ.ಮಲ್ಲಪ್ಪ, ಜ್ಞಾನಕಿರಣ ಕಾರ್ಯಾಲಯ, ಕೋಡಿಹಳ್ಳಿ, ೧೯೬೬

ಧನ್ಯಜೀವಿ, ತ.ಸು.ಶಾಮರಾಯ, ಹಂಪ ನಾಗರಾಜಯ್ಯ(ಸಂ), ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಮಲ್ಲಾಡಿಹಳ್ಳಿ, ಹೊಳಲ್ಕೆರೆ, ೧೯೯೧.

ನಿರಂಜನ ವಂಶರತ್ನಾಕರ ಭಾಗ ೧, ಹಳಕಟ್ಟಿ ಫ.ಗು.(ಸಂ), ಶಿವಾನುಭವ ಗ್ರಂಥಮಾಲೆ, ವಿಜಾಪುರ, ೧೯೩೨.

ನಿರಂಜನ ವಂಶರತ್ನಾಕರ ಭಾಗ ೨, ಚನ್ನಮಲ್ಲಿಕಾರ್ಜುನ(ಸಂ), ಸದ್ಧರ್ಮದೀಪಿಕೆ, ಹಾವೇರಿ, ೧೯೩೮.

ನಿರಂಜನ ಜಂಗಮ ವಂಶದರ್ಪಣ, ಕೋಟಬಸವಪ್ಪಾ ವೀರಪ್ಪ(ಸಂ), ಸತ್ಯಪ್ರಕಾಶನ ಛಾಪಖಾನೆ, ಗದಗ.

ನೆಲದ ಮರೆಯ ನಿಧಾನ, ಎಸ್. ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೭.

ನೈವೇದ್ಯ, ಚೆನ್ನವೀರ ಕಣವಿ, ಡಿ.ಎಸ್.ಕರ್ಕಿ, ಎಸ್.ಜಿ.ಸಾಲಿ(ಸಂ), ಶ್ರೀಮುರುಘಾ ಮಠ, ಧಾರವಾಡ, ೧೯೬೧.

ಪಟ್ಟಾಭಿಷೇಕ, ಎಸ್.ಬಿ. ರಂಗನಾಥ(ಸಂ), ಪಟ್ಟಾಭಿಷೇಕ ಮಹೋತ್ಸವ ಸಮಿತಿ ತರಳಬಾಳು, ಸಿರಿಗೆರೆ, ೧೯೭೯.

ಪರ್ವತ ಮಹಾತ್ಮ್ಯ, ಎಸ್.ಉಮಾಪತಿ(ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬.

ಪುರಾಣನಾಮ ಚೂಡಾಮಣಿ, ಬಿ.ಎಂ.ಶ್ರೀಕಂಠಯ್ಯ(ಸಂ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೭.

ಪುಷ್ಪಲೇಖ, ಸಿ.ಪಿ.ಕೆ(ಸಂ), ಚೇತನಬುಕ್ ಹೌಸ್, ಮೈಸೂರು, ೧೯೯೯.

ಪ್ರಸಾದ, ತಿಪ್ಪೇರುದ್ರಸ್ವಾಮಿ(ಲೇ), ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೬೪.

ಪ್ರಭುಲೀಲೆ, ಬಿ.ವಿ.ಮಲ್ಲಾಪುರ(ಸಂ), ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಮಠ, ಗದಗ, ೧೯೯೯.

ಪ್ರಭುಲೀಲಾ, ಜಿ.ಮರುಳಸಿದ್ಧಯ್ಯ(ಸಂ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೬.

ಪ್ರಭುಲಿಂಗಲೀಲೆ, ಎಂ.ಎಸ್. ಸುಂಕಾಪುರ(ಸಂ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

ಪ್ರಭುಲಿಂಗಲೀಲೆಯ ಸಂಗ್ರಹ, ಎಂ.ಎಸ್. ಬಸವಲಿಂಗಯ್ಯ, ಎಂ.ಆರ್.ಶ್ರೀನಿವಾಸಮೂರ್ತಿ(ಸಂ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೫.

ಪಾತಳಿ, ಮಲ್ಲೇಪುರಂ, ಜಿ.ವೆಂಕಟೇಶ(ಸಂ), ಶಂಬಾವೇದಿಕೆ, ಬೆಂಗಳೂರು, ೧೯೯೪.

ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಶಿವಾನಂದ ವಿರಕ್ತಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

ಬಸವಯುಗದ ವಚನೇತರ ಸಾಹಿತ್ಯ, ಕೆ. ರವೀಂದ್ರನಾಥ(ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦.

ಬಿದನೂರಿನ ಕೆಳದಿ ನಾಯಕರು, ಕೆಳದಿ ಗುಂಡಾ ಜೋಯಿಸ್(ಲೇ), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦.

ಬೀಳಗಿ ಅರಸುಮನೆತನ, ಎಚ್.ಆರ್. ರಘುನಾಥಭಟ್, ಎಂ.ಎಂ.ಕಲಬುರ್ಗಿ(ಸಂ) ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೫.

ಭಿಕ್ಷಾಟನ ಚರಿತೆ, ಬಿ.ವ್ಹಿ.ಶಿರೂರು(ಸಂ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

ಭೂಷಣ, ಎಂ.ಚಿದಾನಂದಮೂರ್ತಿ, ಸಿ.ಯು.ಮಂಜುನಾಥ(ಸಂ), ಸರ್ಪಭೂಷಣ ಶಿವಯೋಗೀಶ್ವರ ಮಠ, ಬೆಂಗಳೂರು, ೧೯೯೯.

ಮಹದೇವ ಬಣಕಾರರ ಕೃತಿಗಳು, ನೀಲಮ್ಮ ಕತ್ನಳ್ಳಿ(ಲೇ), ರೇಣುಕಾ ಪ್ರಕಾಶನ, ಶಹಬಾದ, ೧೯೯೯.

ಮಹಾಂತ, ಬಿ.ಎಂ.ತೆಳಗಡಿ, ವಿ.ವಿ.ಅಲೇಗಾವಿ(ಸಂ), ದ್ವಾದಶ ವಾರ್ಷಿಕೋತ್ಸವ ಸಮಿತಿ, ಇಲಕಲ್ಲು, ೧೯೮೬.

ಮಹಾಂತಜ್ಯೋತಿ, ವೀರಣ್ಣರಾಜೂರ(ಸಂ), ರಜತಮಹೋತ್ಸವ ಸಮಿತಿ ಕುದರಿಮತಿ, ರಾಯಚೂರು, ೧೯೯೩.

ಮಹಾಂತದೇಶಿಕರ ಶಿವಶರಣವಿಲಾಸ, ಬಿ.ನಂಜುಂಡಪ್ಪ(ಸಂ), ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೯.

ಮಹಾಲಿಂಗೇಂದ್ರ ವಿಜಯ, ಎಲ್. ಬಸವರಾಜು(ಸಂ), ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೭೧.

ಮಾರ್ಗ ಸಂಪುಟ ೧-೨, ಎಂ.ಎಂ.ಕಲಬುರ್ಗಿ, ನರೇಶ್ ಆ್ಯಂಡ್ ಕಂಪನಿ ಹನುಮಂತನಗರ, ಬೆಂಗಳೂರು, ೧೯೮೮.

ಮುರಿಗೇಂದ್ರ ವಿಜಯಕಾವ್ಯ, ಶಿ.ಮೂ.ಶಿದ್ಧಲಿಂಗಾರ್ಯ(ಸಂ), ಸಾಲೀಮಠ ರೋಣ, ೧೯೦೬.

ಮುರಿಗಾ ಶಾಂತವೀರ ಸ್ವಾಮಿಗಳ ಸ್ತೋತ್ರ ಕರಂಡ, ಎಸ್.ಶಿವಣ್ಣ(ಸಂ) ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೪.

ಮುರಿಗಾ ಶಾಂತವೀರ ಸ್ವಾಮಿಗಳ ಕೃತಿಗಳು, ಎಸ್. ಶಿವಣ್ಣ(ಸಂ), ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೪.

ಮುರಿಗೆ ತಾರಾವಳಿ, ಎಂ.ಎಸ್.ಬಸವರಾಜಯ್ಯ(ಸಂ), ಶಿವಧರ್ಮ ಗ್ರಂಥಮಾಲಾ, ಮೈಸೂರು, ೧೯೭೬.

ಮೂರುಸಿದ್ಧಾಂತ-ಆರು ಉಪಾಸನೆ, ಹೆಚ್.ಜೆ.ರಾಮಯ್ಯಂಗಾರ್, ರಾಮಯ್ಯಂಗಾರ್ ಪ್ರಕಾಶನ, ಬೆಂಗಳೂರು, ೧೯೯೧.

ಮೂರನೇ ಮಂಗರಸ ಮತ್ತು ಅವನ ಕೃತಿಗಳು, ಸುಧಾ ವೆಂಕಟರಾವ್ ಮನಸೂರ, ಯಶಸ್ವಿನಿ ಪ್ರಕಾಶನ, ಬೆಂಗಳೂರು, ೧೯೯೮.

ಯೋಗಸಿದ್ಧಾಂತ, ಶ್ರೀ ಚೆನ್ನವೀರ ಶಿವಯೋಗಿಗಳು, ಯೋಗಾಶ್ರಮ ವಿಶ್ವಸ್ಥಮಂಡಳಿ, ಮಹಾಲಿಂಗಪುರ, ಬಿಜಾಪುರ, ೧೯೯೨.

ಯಕ್ಷಗಾನ-ಹಸ್ತಪ್ರತಿಗಳ ವಿವರಣಸೂಚಿ, ಗೌ.ಮ.ಉಮಾಪತಿಶಾಸ್ತ್ರಿ(ಸಂ), ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ, ದಕ್ಷಿಣ ಕನ್ನಡ ಜಿಲ್ಲೆ, ೧೯೯೩.

ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಕೆಳದಿ ಗುಂಡಾ ಜೋಯಿಸ(ಅನು) , ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬.

ಲಿಂಗಸಕೀಲಗಳು, ಎಲಿವೀರಪ್ಪಾಮುರಿಗೆಪ್ಪಾ, ಮುರುಗಾಮಠ, ಧಾರವಾಡ, ೧೯೬೩.

ಲೀಲಾವತಿ-ಪದ್ಮಾವತಿ, ಕೃಷ್ಣಮೂರ್ತಿಹನೂರು(ಸಂ), ಜಿಲ್ಲಾ ಜನಪದ ಸಾಹಿತ್ಯ ಸಮಿತಿ, ಚಿತ್ರದುರ್ಗ, ೧೯೭೮

ವಚನ ತತ್ತ್ವಾನುಭವ, ಶ್ರೀ ಸಿದ್ಧರಾಮೇಶ್ವರ ಶರಣರು ಬೆಲ್ದಾಳ್(ಸಂ), ಮಹಾಮನೆ ಪ್ರಕಾಶನ, ಕೌರ, ಬೀದರ್, ೧೯೯೬.

ವಚನಧರ್ಮಸಾರ, ಎಂ.ಆರ್.ಶ್ರೀನಿವಾಸಮೂರ್ತಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೬.

ವಚನ ಪಾರಿಭಾಷಾ ಪದಕೋಶ, ಎಸ್.ವಿದ್ಯಾಶಂಕರ್(ಸಂ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

ವಚನಗಳಲ್ಲಿ ವೀರಶೈವಧರ್ಮ, ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೬೯.

ವಚನ ಸಂಕಲನ ಸಂಪುಟ-೫, ವೈ.ಸಿ.ಭಾನುಮತಿ(ಸಂ), ವೀರಶೈವ ಅಧ್ಯಯನದ ಸಂಸ್ಥೆ, ಗದಗ, ೧೯೯೨.

ವಚನಸಾಹಿತ್ಯ-ದ್ವಿತೀಯ ಘಟ್ಟ, ಎಸ್. ವಿದ್ಯಾಶಂಕರ(ಸಂ), ಸರ್ಪಭೂಷಣ ಶಿವಯೋಗೀಶ್ವರ ಮಠ, ಬೆಂಗಳೂರು, ೧೯೯೯.

ವಿರತಿಯ ಅಂಕುರ, ಗೌ.ಮ.ಉಮಾಪತಿಶಾಸ್ತ್ರಿ(ಸಂ), ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ೧೯೮೦.

ವೀರಶೈವ ಅಪ್ರಕಟಿತ ಗ್ರಂಥಸೂಚಿ, ಎಸ್.ಶಿವಣ್ಣ, ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ೧೯೮೨

ವೀರಶೈವ ಧರ್ಮದ ಕೈಪಿಡಿ, ಎಸ್.ಸಿ.ನಂದೀಮಠ(ಲೇ), ಪ್ರೇಮಾದೇವಿ ಮಳಿಮಠ(ಅನು), ಕನ್ನಡ ಅಧ್ಯಯನ ಪೀಠ, ಧಾರವಾಡ, ೧೯೯೦.

ವೀರಶೈವ ತತ್ತ್ವ ಪ್ರಕಾಶ, ಶಿ.ಶಿ.ಬಸವನಾಳ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೭೫.

ವೀರಶೈವ ತತ್ತ್ವಾರ್ಥ ವಿವೇಚನೆ, ಬಿ.ವಿ.ಮಲ್ಲಾಪುರ, ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ, ಮೂರುಸಾವಿರ ಮಠ, ಹುಬ್ಬಳ್ಳಿ, ೧೯೮೭.

ವೀರಶೈವ ವಿಚಾರ ಸಂಕಿರಣ, ಸಾ.ಶಿ.ಮರುಳಯ್ಯ(ಸಂ), ನಾಗನೂರು ಶ್ರೀ ಶಿವಬಸವಸ್ವಾಮಿಗಳ ಕಲ್ಯಾಣ ಕೇಂದ್ರ, ಬೆಂಗಳೂರು, ೧೯೮೬.

ವೃಷಭಗೀತೆ, ಎಂ.ಎಸ್.ಸುಂಕಾಪುರ, ಪಂ.ನಾಗಭೂಷಣಶಾಸ್ತ್ರಿಗಳು(ಸಂ), ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ೧೯೮೩.

ಷಟ್‌ಸ್ಥಲಜ್ಞಾನ ಸಾರಾಮೃತ, ಆರ್.ಸಿ.ಹಿರೇಮಠ(ಸಂ), ಶ್ರೀ ಮುರುಘಾ ಮಠ, ಧಾರವಾಡ, ೧೯೬೪.

ಷಟ್‌ಸ್ಥಲ ಜ್ಞಾನಸಾರಾಮೃತ ಟೀಕೆ, ಎಸ್.ವಿದ್ಯಾಶಂಕರ(ಸಂ), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೮೭.

ಷಟ್‌ಸ್ಥಲ ಪ್ರಭೆ, ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬.

ಷಟ್‌ಸ್ಥಲ ಶಿವಾಯಣ, ಎಂ.ಎಂ.ಕಲಬುರ್ಗಿ(ಸಂ), ತೋಂಟದಾರ್ಯ ಮಠ, ಗದಗ, ೧೯೯೯

ಶರಣಚರಿತಾಮೃತ, ಸಿದ್ಧಯ್ಯಪುರಾಣಿಕ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೭೭.

ಶರಣಸೌರಭ, ಬಿ.ಕೆ.ಮಲ್ಲೇಶಯ್ಯ(ಸಂ), ಬಿ.ಹೆಚ್.ಇ.ಎಲ್. ಬಸವಕಲ್ಯಾಣ ಸಮಿತಿ, ಬೆಂಗಳೂರು, ೧೯೯೫.

ಶಾಸನಗಳಲ್ಲಿ ಶಿವಶರಣರು, ಎಂ.ಎಂ.ಕಲಬುರ್ಗಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೮.

ಶಿವಕವಿ ಷಡಕ್ಷರಿ(ಸ್ಮರಣಸಂಪುಟ) ಷಡಕ್ಷರ ಸ್ಮಾರಕ ಸಮಿತಿ, ಯಳಂದೂರು, ೧೯೭೫.

ಶಿವದಾಸ ಗೀತಾಂಜಲಿ, ಎಲ್.ಬಸವರಾಜು(ಸಂ), ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು, ೧೯೬೩.

ಶಿವತತ್ತ್ವ ಚಿಂತಾಮಣಿ, ಪಂಡಿತ ಎಸ್.ಬಸಪ್ಪ(ಸಂ), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೬.

ಶಿವಯೋಗ ಪ್ರದೀಪಿಕೆ, ವೀರಣ್ಣರಾಜೂರ(ಸಂ), ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೧.

ಶಿವಶರಣರ ಕಥಾರತ್ನಕೋಶ, ತ.ಸು.ಶಾಮರಾಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೩.

ಶಿವಲಿಂಗ ಚಾರಿತ್ರ್ಯ, ಎಂ.ಜಿ.ನಂಜುಂಡಾರಾಧ್ಯ(ಸಂ), ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥ ಬಂಡಾರ, ಬೆಂಗಳೂರು, ೧೯೬೬.

ಶೂನ್ಯತತ್ತ್ವ ವಿಕಾಸ ಮತ್ತು ಶೂನ್ಯಸಂಪಾದನೆ, ಎಚ್. ತಿಪ್ಪೇರುದ್ರಸ್ವಾಮಿ, ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೬೩.

ಶಿವಚಿಂತನ, ಮಳಲಿ ವಸಂತಕುಮಾರ(ಸಂ), ಶ್ರೀ ಜಗದ್ಗುರು ಸಾರಂಗಧರೇಶ್ವರ ಪ್ರಕಾಶನ, ಶ್ರೀಶೈಲ, ೧೯೮೮.

ಶೂನ್ಯಸಂಪಾದನೆ ಮತ್ತು ಆಧುನಿಕ ಮೌಲ್ಯಗಳು, ಎಚ್.ತಿಪ್ಪೇರುದ್ರಸ್ವಾಮಿ, ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ, ಇಲಕಲ್ಲು, ೧೯೮೫.

ಶೂನ್ಯಸಂಪಾದನೆ ಒಂದು ಅಧ್ಯಯನ, ಸಾ.ಶಿ.ಮರುಳಯ್ಯ(ಸಂ), ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಹುಬ್ಬಳ್ಳಿ, ೧೯೮೯.

ಶ್ರೀ ಶಿವರಹಸ್ಯ ೩.೨ ಸಂಪುಟಗಳು, ವಿದ್ವಾನ್ ಎಚ್. ಗಂಗಾಧರ ಶಾಸ್ತ್ರಿಗಳು(ಅನು), ಶ್ರೀ ಜಯಚಾಮ ರಾಜೇಂದ್ರ ಗ್ರಂಥರತ್ನ ಮಾಲಾ, ಮೈಸೂರು, ೧೯೪೮.

ಸಂಪಾದನಾ ಸಮಯ, ವಿಜಯಶ್ರೀ ಹಿರೇಮಠ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರು, ೧೯೯೯.

ಸಂಶೋಧನ, ಲಕ್ಷ್ಮಣ್ ತೆಲಗಾವಿ(ಸಂ) ಚಿದಾನಂದಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು.

ಸಂಶೋಧನ ಸಂಪುಟ, ಎಚ್. ದೇವೀರಪ್ಪ(ಸಂ), ಶಿವಕುಮಾರ ಪ್ರಕಾಶನ, ಬೆಂಗಳೂರು, ೧೯೮೪.

ಸಂಶೋಧನೆಯ ಸಿರಿ, ಡಿ.ವಿ.ಪರಶಿವಮೂರ್ತಿ, ಗುಣನಿಧಿ ಪ್ರಕಾಶನ, ಬೆಂಗಳೂರು, ೧೯೯೬.

ಸಂಸ್ಕೃತ ಸಾಹಿತ್ಯಕ್ಕೆ ಮಹಾಕವಿ ಷಡಕ್ಷರಿ ದೇವನ ಕೊಡುಗೆ, ಡಿ.ಶೀಲಾಕುಮಾರಿ(ಲೇ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

ಸುಗಟೂರು ವೀರಶೈವ ಅರಸುಮನೆತನ, ಪಿ.ವಿ.ಕೃಷ್ಣಮೂರ್ತಿ, ಕನ್ನಡ ಅಧ್ಯಯನ ಪೀಠ, ಧಾರವಾಡ, ೧೯೯೪.

ಸಾಮಾಜಿಕ ಆಲೋಚನೆ, ಮಹೇಶ ತಿಪ್ಪಶೆಟ್ಟಿ, ದಾಳಿಂಬ ಪ್ರಕಾಶನ, ಹುನಗುಂದ, ೧೯೯೫.

ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ, ಕಾಳೇಗೌಡ ನಾಗವಾರ(ಲೇ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

ಸಾರಂಗ ಶ್ರೀ, ಎಂ.ಎಂ.ಕಲಬುರ್ಗಿ(ಸಂ), ಶ್ರೀ ಚೆನ್ನವೀರಸ್ವಾಮಿಜೀ ಪ್ರತಿಷ್ಠಾನ ಸಾರಂಗಮಠ, ಸಿಂದಗಿ, ೧೯೯೪.

ಸಾಹಿತ್ಯ ಸಂಗಮ, ಸ.ಸ.ಮಾಳವಾಡ, ಜಯಪ್ರಕಾಶನ, ಧಾರವಾಡ, ೧೯೭೦.

ಸಾಹಿತ್ಯ ಮತ್ತು ಸಮಕಾಲೀನ ವಾಸ್ತವತೆ, ಎಚ್.ತಿಪ್ಪೇರುದ್ರಸ್ವಾಮಿ, ಚಾಮುಂಡಿ ಎಂಟರ್‌ಪ್ರೈಸ್, ಮೈಸೂರು, ೧೯೭೯.

ಸಿದ್ಧಗಂಗಾ ಶ್ರೀ, ಚನ್ನಪ್ಪ ಎರೆಸೀಮೆ, ಟಿ.ಆರ್.ಮಹದೇವಯ್ಯ(ಸಂ), ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು, ೧೯೮೧.

ಸಿದ್ಧರಾಮ ಸಂಪದ, ಬಿ.ವ್ಹಿ.ಶಿರೂರ(ಸಂ), ಶ್ರೀಸಿದ್ಧರಾಮೇಶ್ವರ ಪ್ರಕಾಶನ, ಯಲಬುರ್ಗಿ, ೧೯೯೫.

ಸಿದ್ಧಲಿಂಗೇಶ್ವರ ಏಕೋತ್ತರ ಶತಸ್ಥಲ, ಫ.ಗು.ಹಳಕಟ್ಟಿ(ಸಂ), ಶಿವಾನುಭವ ಗ್ರಂಥಮಾಲೆ, ವಿಜಾಪುರ, ೧೯೨೮.

ಸಿದ್ಧಾಂತ ಶಿಖಾಮಣಿ, ಶ್ರೀ ಸಿದ್ಧೇಶ್ವರಸ್ವಾಮಿಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೯.

ಸಿದ್ಧಾಂತ ಶಿಖಾಮಣಿ, ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳು(ಸಂ), ಶ್ರೀ ಶಿವಾನಂದ ಮಠ, ಗದಗ, ೧೯೭೯.

ಸೀಮಾಪುರುಷ ಷಡಕ್ಷರದೇವ, ವಿ.ಶಿವಾನಂದ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

ಸುಧಾರ್ಣವ, ಬಿ.ವಿ.ಮಲ್ಲಾಪುರ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ೧೯೯೮.

ಸೋದೆಯ ಸದಾಶಿವರಾಯನ ಕೃತಿಗಳು, ಬಿ.ಆರ್.ಹಿರೇಮಠ(ಸಂ), ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಮಠ, ಗದಗ, ೧೯೯೫.

ಸ್ವರವಚನವಾಹಿನಿ, ಎಸ್. ಉಮಾಪತಿ(ಸಂ), ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೪.

ಸ್ವಾದಿ ಅರಸು ಮನೆತನ, ಎಂ.ಎಂ.ಕಲಬುರ್ಗಿ, ಅ.ಸುಂದರ(ಸಂ) ವೀರಶೈವ ಅಧ್ಯಯನ ಸಂಸ್ಥೆ ತೋಂಟದಾರ್ಯ ಮಠ, ಗದಗ, ೧೯೯೫.

ಹಮ್ಮೀರ ಕಾವ್ಯ ಸಂಗ್ರಹ, ಎಮ್.ಎಸ್. ಸುಂಕಾಪುರ(ಸಂ), ರೇಣುಕಾ ಪ್ರಕಾಶನ, ಧಾರವಾಡ, ೧೯೬೯

ಹರಪನ ಹಳ್ಳಿ ಪಾಳೆಯಗಾರರು, ಕು.ಬಾ.ಸದಾಶಿವಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೭

ಹರಿತಿಸಿರಿ, ಲಕ್ಷ್ಮಣ್ ತೆಲಗಾವಿ(ಸಂ), ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ಚಿತ್ರದುರ್ಗ, ೧೯೮೭

ಹಾಗಲವಾಡಿ ನಾಯಕರು, ಡಿ.ಎನ್.ಯೋಗೀಶ್ವರಪ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಹಾಲಾಸ್ಯ ಪುರಾಣಂ, ಜಿ.ಜಿ.ಮಂಜುನಾಥ(ಸಂ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೫

ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಲಕ್ಷ್ಮಣ್ ತೆಲಗಾವಿ(ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೯೫.

ಸಾಹಿತ್ಯ ಚರಿತ್ರೆ ಗ್ರಂಥಗಳು

ಕನ್ನಡ ಸಾಂಗತ್ಯ ಸಾಹಿತ್ಯ : ವೀರಣ್ಣ ರಾಜೂರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ. ಮುಗಳಿ
ಗೀತಾ ಬುಕ್‌ಹೌಸ್, ಮೈಸೂರು, ೧೯೯೯

ಕನ್ನಡ ಸಾಹಿತ್ಯ ಚರಿತ್ರೆ (ಜನಪ್ರಿಯ ಆವೃತ್ತಿ) : ತ.ಸು.ಶಾಮರಾವ್, ಮೇ.ರಾಜೇಶ್ವರಯ್ಯ
ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೯

ಕರ್ನಾಟಕ ಕವಿ ಚರಿತೆ ಸಂ.೨-೩ : ಆರ್. ನರಸಿಂಹಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕನ್ನಡ ಸಾಹಿತ್ಯ ಚರಿತ್ರೆ ಸಂ.೪ : ಹಾ.ಮಾ.ನಾಯಕ(ಸಂ) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೫.

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೫ : ಜಿ.ಎಸ್.ಶಿವರುದ್ರಪ್ಪ(ಸಂ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೮.

ವೀರಶೈವ ಸಾಹಿತ್ಯ ಸಮೀಕ್ಷೆ : ಸದಾನಂದ ಕನವಳ್ಳಿ, ಸಿ.ವಿ.ಕೆರಿಮನಿ (ಸಂ) ಮಹಾಕವಿ ಪಂಪ ಪ್ರಕಾಶನ, ಲಕ್ಷ್ಮೇಶ್ವರ, ೧೯೭೯.

ಗೆಜೆಟಿಯರ್ ಕೋಶಗಳು

ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್ : ಬಿ.ಎನ್.ಶ್ರೀ ಸತ್ಯಯಾನ್, ಬೆಂಗಳೂರು, ೧೯೬೭

ಅಚ್ಚಗನ್ನಡ ನುಡಿಕೋಶ : ಕೊಳಂಬೆ ಪುಟ್ಟಣ್ಣಗೌಡರು, ಪುಸ್ತಕ ಪ್ರಕಾಶನ, ಮೈಸೂರು, ೧೯೯೩

ಅಮರಕೋಶ : ಬಿ.ಎಲ್.ರೈಸ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೩೦.

ಕನ್ನಡ ನಿಘಂಟು ಸಂ.೨ : ಎನ್.ಬಸವರಾಧ್ಯ (ಸಂ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩.

ಸಂಕ್ಷಿಪ್ತಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭.

ಶ್ರೀವತ್ಸ ನಿಘಂಟು : ಟಿ.ವಿ.ವೆಂಕಟಾಚಲಶಾಸ್ತ್ರಿ, ಶಾರದ ಮಂದಿರ, ಮೈಸೂರು, ೧೯೭೧.

ಶಿವಶರಣ ಕಥಾ ರತ್ನಕೋಶ : ತ.ಸು.ಶಾಮರಾಯ, ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೭.

ಶಿವಾನುಭವ ಶಬ್ದಕೋಶ : ಫ.ಗು.ಹಳಕಟ್ಟಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೨.

ಸಚಿತ್ರ ಕನ್ನಡ-ಕನ್ನಡ ಕಸ್ತೂರಿ ಕೋಶ : ಪಂಡಿತ ಚೆ.ಎ.ಕವಲಿ, ರಾಮಾಶ್ರಯ ಬುಕ್ ಡಿಪೋ, ಧಾರವಾಡ, ೧೯೯೪

ಶಾಸನ ಸಂಪುಟಗಳು ಮತ್ತು ಹಸ್ತಪ್ರತಿಗಳು


ಎಪಿಗ್ರಾಫಿಯಾ ಕರ್ನಾಟಕ Vol-ii ಚಿತ್ರದುರ್ಗ : ಬಿ.ಎಲ್.ರೈಸ್(ಸಂ) ಓರಿಯಂಟಲ್ ರಿಸರ್ಚ್ ಇನ್ಸ್‌ಟ್ಯೂಟ್ ಆಫ್ ಮೈಸೂರು, ೧೯೦೨.

ಎಪಿಗ್ರಾಫಿಯಾ ಕರ್ನಾಟಕ Vol-xiv ಚಿತ್ರದುರ್ಗ: ಬಿ.ಎಲ್.ರೈಸ್(ಸಂ) ಓರಿಯಂಟಲ್ ರಿಸರ್ಚ್ ಇನ್ಸ್‌ಟ್ಯೂಟ್ ಆಫ್ ಮೈಸೂರು, ೧೯೪೨.
ಜಲಂಧರ ಕಾಳಗ ತಾ.ಪ್ರ. ೧೮೦ : ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನ ಧರ್ಮಸ್ಥಳ.
ಶಿವಲಿಂಗ ಚಾರಿತ್ರ್ಯ ಕೆ.ಬಿ.೨೬೨ : ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು.
ಬಿಜ್ಜಾಂಬ ಚರಿತೆ : ಎಂ.ಎಸ್.ಬಸವರಾಜಯ್ಯ, ತಿಪಟೂರು.
ಲಿಂಗಾಚಾರ ರಚನಾಗಮ ಟೀಕು : ಗೌ.ಮ.ಉಮಾಪತಿಶಾಸ್ತ್ರಿಗಳು, ಧರ್ಮಸ್ಥಳ.
ಸ್ಕಂದ ಕಲ್ಯಾಣ : ಎಂ.ಎಸ್.ಬಸವರಾಜಯ್ಯ, ತಿಪಟೂರು.
ಶಿವರಹಸ್ಯ ಪುರಾಣಂ : ಎಸ್.ಶಿವಣ್ಣನವರು, ಬೆಂಗಳೂರು.

ನಿಯತಕಾಲಿಕೆಗಳು

ಕರ್ನಾಟಕ ಭಾರತಿ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : ಸಾಹಿತ್ಯ ಪರಿಷತ್, ಬೆಂಗಳೂರು
ಗುರುಕುಲ : ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ.
ಪ್ರಬುದ್ಧ ಕರ್ನಾಟಕ : ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಬಸವಪಥ : ಬಸವಭವನ, ಬೆಂಗಳೂರು.
ಮಾನವಿಕ ಭಾರತಿ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ವಿದ್ಯಾರ್ಥಿ ಭಾರತಿ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಸದ್ಧರ್ಮದೀಪಿಕೆ : ಶಿವರಾತ್ರೀಶ್ವರ ಮಠ, ಮೈಸೂರು.
ಸತ್ಯಶುದ್ಧ ಕಾಯಕ : ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ.
ಸಾಧನೆ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
ಹೇಮಕೂಟ : ಕೊಟ್ಟೂರುಸ್ವಾಮಿ ಮಠ, ಹೊಸಪೇಟೆ

AKSHARA GRANTHALAYA



ACC.NO. 045601

